
ಪಂಜೆಯವರ ಕೃತಿಗಳ

ಣ್ಣ ಕಥೆಗಳು ಮತ್ತು ಸಣ್ಣ ಕಾದಂಬರಿಗಳ

ಸಂಪುಟ



ಪಂಜೆಯವರ ಕೃತಿಗಳು



ಪಂಜೆಯವರ ಕೃತಿಗಳು

ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಾಶಿತ

ಸಂಪುಟ ೩

ಸಣ್ಣ ಕಥೆಗಳು ಮತ್ತು ಕಾದಂಬರಿಗಳು

ಸಂಪಾದಕ :

ಪಂಜೆ ರಾಮರಾಯ

ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್

ಮುಂಬಯಿ ಕಲ್ಕತ್ತ ಬೆಂಗಳೂರು ಮದರಾಸ್ ನವದೆಹಲಿ

ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್

ರೆಜಿಸ್ಟರ್ಡ್ ಆಫೀಸು : 3/5 ಆಸಫ್ ಅಲಿ ರಸ್ತೆ, ನವದೆಹಲಿ 110 001

ಪ್ರಾದೇಶಿಕ ಆಫೀಸುಗಳು : ನಿಕೊಲ್ ರೋಡ್, ಬಾಲ್ಲರ್ಡ್ ಎಸ್ಟೇಟ್, ಮುಂಬಯಿ 400 001
17, ಚಿತ್ತರಂಜನ್ ಅವೆನ್ಯೂ, ಕಲ್ಕತ್ತ 700 013
36-A, ಅನ್ನಸಾಲೈ, ಮೌಂಟ್ ರೋಡ್, ಮದರಾಸು 600 002
B-3/7, ಆಸಫ್ ಅಲಿ ರಸ್ತೆ, ನವದೆಹಲಿ 110 001

ಕಛೇರಿಗಳು : 80/1, ಮಹಾತ್ಮಗಾಂಧಿ ರಸ್ತೆ ಬೆಂಗಳೂರು 560 001
3-5-820, ಹೈದರ್‌ಗುಡ, ಹೈದರಾಬಾದು 500 001

ಮೊದಲನೆಯ ಮುದ್ರಣ 1973

Panje Mangesh Rao's, Works, Volume Three, Short Stories and Novels

ಬೆಲೆ ರೂ. 10=00

ಮುದ್ರಕರು : ಡಬ್ಲ್ಯು. ಕ್ಯೂ. ಜಡ್ಜ್ ಪ್ರೆಸ್, ಬೆಂಗಳೂರು 560 025

ಪ್ರಕಾಶಕರು : ವಿ. ಅಬ್ದುಲ್ಲಾ, ಡಿವಿಜನಲ್ ಡೈರೆಕ್ಟರ್, ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್
36-A, ಅಣ್ಣಾಸಾಲೈ ಮೌಂಟ್ ರೋಡ್ ಮದರಾಸು-600 002

ಮುನ್ನುಡಿ

ಪಂಜೆ ಮಂಗೇಶರಾಯರ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಬೇಕೆಂದು ಹಿಂದಿನ ವನಪರ್ತಿ ಸಂಸ್ಥಾನದ ರಾಜರಾದ ಶ್ರೀ ಜೆ. ರಾಮೇಶ್ವರರಾವ್ ಅವರು ತಾವು ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್ ಪ್ರಕಾಶನ ಸಂಸ್ಥೆಯ ಅಧ್ಯಕ್ಷರಾದಂದಿನಿಂದ, ಅಂದರೆ 1966 ರಿಂದ, ನನ್ನನ್ನು ಒತ್ತಾಯಪಡಿಸುತ್ತಿದ್ದರು. ಕಾರಣಾಂತರದಿಂದ 1971 ರವರೆಗೂ ಈ ಕೆಲಸವನ್ನು ಕೈಗೊಳ್ಳಲು ನನಗೆ ಸಾಧ್ಯವಾಗಲಿಲ್ಲ. ವಿಲಂಬವಾದರೂ ಪಂಜೆಯವರ ಜನ್ಮಶತಾಬ್ದಿಯ ವೇಳೆಗೆ ಸರಿಯಾಗಿ ಈ ಸಂಗ್ರಹವು ಹೊರಬರುತ್ತಿದೆ ಎಂಬ ಸಮಾಧಾನ.

ಪಂಜೆಯವರು ತಮ್ಮ ವಿವಿಧ ಕೃತಿಗಳನ್ನು ಕನ್ನಡನಾಡಿನ ಸಾಮಾನ್ಯ ಜನರಿಗಾಗಿಯೂ, ಮಕ್ಕಳಿಗಾಗಿಯೂ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗಾಗಿಯೂ ಬರೆದರು. ಆ ಕಾರಣ, ಅವು ಆದಷ್ಟು ಮಟ್ಟಿಗೆ ಆಯಾ ವಾಚಕರಿಗೆ ಪ್ರತ್ಯೇಕವಾಗಿ ಸಿಗುವ ಹಾಗಿರಬೇಕೆಂದು ನನಗೆ ತೋರಿತು. ಈ ಉದ್ದೇಶದಿಂದ ಪಂಜೆಯವರ ಕೃತಿಗಳು ಸಂಖ್ಯೆಯಲ್ಲೂ ಗಾತ್ರದಲ್ಲೂ ದೊಡ್ಡವಿರದಿದ್ದರೂ, ಅದನ್ನು ನಾಲ್ಕು ಪುಸ್ತಕಗಳಲ್ಲಿ ವಿಂಗಡಿಸಿದ್ದೇನೆ. ಮೊದಲನೆಯ ಪುಸ್ತಕದಲ್ಲಿ ಅವರ ಕವಿತೆಗಳು ಸೇರಿವೆ. ಎರಡನೆಯ ಪುಸ್ತಕವು ಅವರು ಬರೆದ ಮಕ್ಕಳ ಕಥೆಗಳ ಸಂಗ್ರಹ. ಇವೆರಡರಲ್ಲಿ ವಿಷಯ ಮತ್ತು ಭಾವೀ ವಾಚಕರನ್ನು ಗಮನಿಸಿ, ರೇಖಾಚಿತ್ರಗಳನ್ನು ಕೂಡಿಸಿಕೊಂಡಿದ್ದೇನೆ. ಪಂಜೆಯವರ ಸಣ್ಣ ಕಥೆಗಳೂ ಐತಿಹಾಸಿಕ ಕಥೆಗಳೂ 'ಕೋಟಿ-ಚೆನ್ನಯ' ಎಂಬ ಅವರ ಪ್ರಸಿದ್ಧ (ಐತಿಹಾಸಿಕ) ಕಿರುಕಾದಂಬರಿಯೂ ಮೂರನೆಯ ಪುಸ್ತಕದಲ್ಲಿವೆ. ಕನ್ನಡ ಶಬ್ದಮೂಲಗಳನ್ನು ಕುರಿತು ಅವರು ಬರೆದ ತರ್ಕಗಳೂ ಶಿಲಾಶಾಸನಗಳ ಮೇಲೆ ನಡೆಯಿಸಿರುವ ಸಂಶೋಧನೆಗಳೂ ಪ್ರಾಥಮಿಕ ವಿದ್ಯಾಭ್ಯಾಸ, ಕನ್ನಡ ಸಾಹಿತ್ಯ, ಕನ್ನಡ ಭಾಷೆಯ ಸುಧಾರಣೆ ಇತ್ಯಾದಿ ವಿಷಯಗಳನ್ನೆತ್ತಿ ರಚಿಸಿದ ಉಪನ್ಯಾಸಗಳೂ ನಾಲ್ಕನೆಯ ಪುಸ್ತಕದಲ್ಲಿ ಸಂಗ್ರಹವಾಗಿವೆ.

1926 ರ ಮೊದಲು ಪಂಜೆಯವರು ತಮ್ಮ ಕೃತಿಗಳನ್ನು ತಮ್ಮ ಹೆಸರಿನಲ್ಲಿ ಪ್ರಕಟಿಸುತ್ತಿದ್ದಿಲ್ಲ. ಕೃತಿಗಳಿಗಾಗಿ ಮೂರು–ನಾಲ್ಕು ಕೃತಕನಾಮಗಳನ್ನು ಇಟ್ಟುಕೊಂಡು, ಕರ್ತೃತ್ವದ ಗೌರವವನ್ನು ಆದಷ್ಟು ಮಟ್ಟಿಗೆ ತನ್ನಿಂದ ದೂರವಲ್ಲಿಡುತ್ತಿದ್ದರು. ಈ ತೆರನಾಗಿ ಸ್ವನಾಮವನ್ನು ಮರೆಮಾಚಿದುದಕ್ಕೆ ಅವರ ಸಹಜ ದೈನ್ಯಭಾವವೇ ಕಾರಣ. 1939 ಅನಂತರ "ಕವಿಶಿಷ್ಯ" ಎಂಬ ಕಾವ್ಯನಾಮವನ್ನು ಕವಿತೆಗಳಿಗಾಗಿ ಉಪಯೋಗಿಸುತ್ತಿದ್ದರೆಂಬುದು ಈಗ ಎಲ್ಲರಿಗೂ ತಿಳಿದ ವಿಷಯ. ತಮ್ಮ ಸ್ವಂತ ಸಂಪಾದಕತ್ವದ ಪದ್ಯ ಪುಸ್ತಕಗಳಲ್ಲಿ "ಕವಿಶಿಷ್ಯ"ನಿಗೆ ನಿಷ್ಕಾರಣವಾಗಿ ಪ್ರಾಮುಖ್ಯ ಕೊಟ್ಟಹಾಗಾದೀತೆಂಬ ಭೀತಿಯಿಂದ, ಕೆಲವು ಕವಿತೆಗಳ ಬುಡದಲ್ಲಿ ಈ ಕಾವ್ಯನಾಮವನ್ನೂ ಕೊಡದೆ, "ಸ್ವದೇಶಾಭಿಮಾನಿಯಿಂದ". "ಆನಂದದಿಂದ", "ಹಳೆಯ ಹಾಡು" ಎಂಬಿತ್ಯಾದಿ ನಿಷ್ಪ್ರಯೋಜಕ ಮೂಲಗಳನ್ನು ಸೂಚಿಸಿ, ತಮ್ಮ ಕರ್ತೃತ್ವವನ್ನು ಮರೆ ಮಾಚಿದ್ದಾರೆ. ಆ ಪದ್ಯಗಳು ತನ್ನವೆಂದು ಅವರು ತಮ್ಮ ಮಿತ್ರರಿಗಾಗಲಿ ನಮಗಾಗಲಿ ಹೇಳಿದ್ದಿಲ್ಲ. ಅವುಗಳ

ಕರ್ತೃತ್ವದ ಸುಳಿವು ನಮಗೆ ಇದ್ದುದರಿಂದಲೇ ಪಂಜೆಯುವರ ಕೃತಿಗಳಿಂದು ಅವು ಪ್ರಕಟವಾಗುವುದು ಸಾಧ್ಯವಾಗಿದೆ.

ಪಂಜೆಯವರ ಮೂರು ಪದ್ಯ (ಸಂಗ್ರಹ) ಪುಸ್ತಕಗಳನ್ನು ಮಂಗಳೂರಲ್ಲಿ ಕಳೆದ ಶತಮಾನದ ಮಧ್ಯಕಾಲದಿಂದ ಸುಮಾರು 70 ವರ್ಷಗಳವರೆಗೆ ವಿದ್ಯಾಭಿವೃದ್ಧಿಯ ಅನುಕೂಲತೆಗಳನ್ನು ಒದಗಿಸುತ್ತಿದ್ದ ಬಾಸೆಲ್ ಮಿಶನ್ ಪ್ರೆಸ್ ಅಂಡ್ ಬುಕ್ ಡಿಪೊ ಅವರು ಪ್ರಕಟಿಸಿದ್ದರು. ಬಾಸೆಲ್ ಮಿಶನ್ನಿನವರ ಮುಖ್ಯ ಉದ್ದೇಶವು ಕ್ರೈಸ್ತಮತದ ಪ್ರಸಾರವಾಗಿದ್ದರೂ ಆ ಕೆಲಸದಲ್ಲಿ ಪಂಜೆಯವರು ಅವರಿಗೆ ಯಾವ ತರದ ನೆರವನ್ನೂ ಕೊಡದಿದ್ದರೂ ಪಂಜೆಯವರಿಗೆ ಅವರ ಕನ್ನಡ ಹೊಸ ಸಾಹಿತ್ಯದ ನಿರ್ಮಾಣ ಕಾರ್ಯದಲ್ಲಿ ಅಸಾಧಾರಣ ಪ್ರೋತ್ಸಾಹವನ್ನು ಅವರು ಕೊಟ್ಟಿದ್ದರು. ಇದಕ್ಕಾಗಿ ಅವರನ್ನು ಈ ಶುಭ ಸಂದರ್ಭದಲ್ಲಿ ಪ್ರಸ್ತುತ ಸಂಪಾದಕನು ಹೃತ್ಪೂರ್ವಕವಾಗಿ ನೆನೆಯುತ್ತಾನೆ: ಮಾತ್ರವಲ್ಲದೆ, ಅವರು ಹಕ್ಕುಕಾದಿಟ್ಟ ಪದ್ಯಗಳನ್ನು ಪುನಃ ಪ್ರಕಟಿಸಲು ಪ್ರಕಾಶಕರಿಗೆ ಸ್ವಿಟ್ಸರ್ಲೆಂಡಿನಿಂದ ಮರುಟಪ್ಪಾಲಿನಲ್ಲೇ ಅನುಮತಿ ನೀಡಿದುದಕ್ಕಾಗಿ ಅತ್ಯಂತ ಕೃತಜ್ಞನಾಗಿದ್ದಾನೆ.

ಪಂಜೆ ಸ್ಮಾರಕ ಸಮಿತಿಯವರು 1952 ರಲ್ಲಿ ಹೊರತಂದ "ಪಂಜೆಯವರ ನೆನಪಿಗಾಗಿ" ಎಂಬ ಪ್ರಕಾಶನದಲ್ಲಿ, ಆಗಲೇ ದುರ್ಲಭವಾಗಿ ಹೋದ ಕೃತಿಗಳನ್ನು ಹಲವಾರು ಆಕರಗಳಿಂದ ಶೇಖರಿಸಿ ಪುನರ್ಮುದ್ರಿಸಿದುದರಿಂದ ಪ್ರಸ್ತುತ ಸಂಪಾದಕನ ಕೆಲಸವು ಸುಲಭವಾಯಿತು. ಆಗ ಅವರು ಮಾಡಿದ ಮಹತ್ಕಾರ್ಯಕ್ಕಾಗಿ, ಸಂಪಾದಕನು ಸ್ಮಾರಕ ಸಮಿತಿಗೆ, ವಿಶೇಷವಾಗಿ ಡಾ॥ ಶಿವರಾಮ ಕಾರಂತರಿಗೆ, ತನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾನೆ.

ಈ ಪುಸ್ತಕಗಳ ಹೊದಿಕೆಯು ಶ್ರೀಮತಿ ಪಡುಕೋಣೆ ವೃಂದಾದೇವಿ ಅವರು ನಿರ್ಮಿಸಿದ, ದಕ್ಷಿಣ ಕನ್ನಡದ ಒಂದು ಸಂಕ್ಷಿಪ್ತ ನೋಟವನ್ನು ಬಿಂಬಿಸುವ ತೈಲಚಿತ್ರದಿಂದ ಏಕವರ್ಣಕ್ಕೆ ಮಾರ್ಪಡಿಸಿ ರಚಿಸಲಾಯಿತು. ಚಿತ್ರವನ್ನು ಈ ಉಪಯೋಗಕ್ಕೆ ದಯವಿಟ್ಟು ಒದಗಿಸಿದುದಕ್ಕಾಗಿ ಶ್ರೀಮತಿಯವರಿಗೆ ಪ್ರಕಾಶಕರೂ ಸಂಪಾದಕನೂ ಆಭಾರಿಯಾಗಿದ್ದಾರೆ.

ಈ ಪ್ರಕಾಶನದ ಕೆಲಸದಲ್ಲಿ ಆಸಕ್ತಿತೋರಿ ಕಾರ್ಯವನ್ನು ಮುಂದುವರಿಸಲು ನೆರವಾದ ನನ್ನ ಮಗಳಾದ ಶ್ರೀಮತಿ ಉಷಾ ಆರೂರ ಅವಳಿಗೂ ಓರಿಯಂಟ್ ಲಾಂಗ್‌ಮನ್‌ರ ಇತರ ಉದ್ಯೋಗಿಗಳಿಗೂ ನನ್ನ ಧನ್ಯವಾದಗಳು. ಓರಿಯಂಟ್ ಲಾಂಗ್‌ಮನ್ ಸಂಸ್ಥೆಯ ಅಧ್ಯಕ್ಷರಿಗೆ ನಾನು ಎಷ್ಟು ಉಪಕೃತನಾಗಿದ್ದೇನೆಂದು ಹೇಳುವುದು ಅವಶ್ಯವಿಲ್ಲ.

ಕೃತಿಗಳನ್ನು ಸಂಪಾದಿಸುವ ಕಾರ್ಯವನ್ನು ವಹಿಸಿಕೊಳ್ಳುವುದಕ್ಕೆ ಸಾಹಿತ್ಯ ದೃಷ್ಟಿಯಿಂದ ನನ್ನಲ್ಲಿ ಅರ್ಹತೆ ಇಲ್ಲವೆಂದು ನಾನು ಪ್ರತ್ಯೇಕ ಬರೆದು ಕೊಡಬೇಕಾಗಿಲ್ಲ. ನನ್ನ ಈ ಪೋಲು ಪರಾಕ್ರಮಕ್ಕೆ ಕಾರಣಗಳು ಎರಡು: ಒಂದನೆಯದು, ನಾನು ಪಂಜೆ ಮಂಗೇಶರಾಯರ ಮಗನಾಗಿ ಹುಟ್ಟಿ ಅವರನ್ನು ಕೊಂಚಮಟ್ಟಿಗೆ ಸಮೀಪದಿಂದ ಅರಿತದ್ದು. ಸಾಧಾರಣವಾಗಿ, ಅವರ ಕೃತಿಗಳನ್ನು ಯಾವ ರೀತಿಯಲ್ಲಿ ಪ್ರಕಟಿಸಿದರೆ ಅವರಿಗೆ ಯುಕ್ತವೆಂದೆನಿಸುತ್ತಿದ್ದಿರಬಹುದು ಎಂಬುದರ ಕಲ್ಪನೆ ನನಗೆ ಸ್ವಲ್ಪಮಟ್ಟಿಗೆ ಇದೆ. ಆ ರೀತಿಯ ಪ್ರಕಟಣೆಯ ಕೆಲಸವನ್ನು ಇತರರಿಗೆ ಒಪ್ಪಿಸಿ, ಅನಂತರ ಅವರ ಮೇಲೆ ನನ್ನ ವಿಚಾರ–ಒತ್ತಡಗಳನ್ನು ಹೇರು

ವುದರ ಬದಲಾಗಿ ಈ ಕೆಲಸವನ್ನು ನಾನೇ ಕೈಗೊಳ್ಳುವುದು ಒಳಿತೆಂದು ತೋರಿತು. ಎರಡನೆಯ ಕಾರಣ, ಸಂಪಾದನ ಕಾರ್ಯದ ನೆಪದಿಂದ ಪಂಜೆಯವರ ಕೃತಿಗಳನ್ನು ತಿರುವಿಹಾಕುವ ಅವರನ್ನು ಪದೇ ಪದೇ ಜ್ಞಾಪಿಸಿಕೊಳ್ಳುವ ಮತ್ತು ಅವರ ಒಂದು ಚಿಕ್ಕ ಸೇವೆಯನ್ನು ಮಾಡುವ ಸುಯೋಗವು ನನಗೇ ಇರಲಿ ಎಂಬ ಲೋಭ. ಈ ಸ್ವಾರ್ಥಕ್ಕಾಗಿ ಕನ್ನಡಿಗರು ನನ್ನನ್ನು ಕ್ಷಮಿಸುವರೆಂದು ನಂಬುತ್ತೇನೆ. ಈಗ ಪ್ರಕಟವಾಗುತ್ತಿರುವ ಸಂಗ್ರಹಗಳಿಗೆ ಸಂಬಂಧಿಸಿ ನಾನು ಅನಾಮಧೇಯನಾಗಿರಬೇಕೆಂದಿದ್ದೆ. ಆದರೆ ಸಂಪಾದಕತ್ವದ ಜವಾಬ್ದಾರಿಯನ್ನು ಹೆಸರಿನ ಮೂಲಕ ವಹಿಸಿಕೊಳ್ಳಬೇಕೆಂದು ಪ್ರಕಾಶಕರು ಅಭಿಪ್ರಾಯಪಟ್ಟುದರಿಂದ, ಅಂತ್ಯದಲ್ಲಿ ತಂದೆಯವರು ಕಲಿಸಿದ ನಮ್ರತೆಯನ್ನು ಬಿಟ್ಟುಬಿಟ್ಟು, ನನ್ನ ಹಸ್ತಾಕ್ಷರವನ್ನು ಇಲ್ಲಿ ಕೂಡಿಸಬೇಕಾಯಿತು. ತಿರುಗಿ ಕ್ಷಮೆ ಬೇಡುತ್ತೇನೆ.

ಇತಿ

ಪಂಜೆ ರಾಮರಾಯ

ಸಮೀರವಾಡಿ
ಬಿಜಾಪುರ ಜಿಲ್ಲೆ
1ನೇಯ ಅಕ್ಟೋಬರ್ 1973

ಆಭಾರ ಮನ್ನಣೆ

ದಿವಂಗತ ಪಂಜೆ ಮಂಗೇಶರಾಯರ ನೀಳ್ಗತೆಗಳೂ 'ಕೋಟಿ–ಚೆನ್ನಯ' ಕಿರುಕಾದಂಬರಿಯೂ ಈ ಸಂಪುಟದಲ್ಲಿ ಪ್ರಕಟವಾಗಿವೆ. ಆರಂಭದಲ್ಲಿ ಈ ಕೃತಿಗಳನ್ನು ಪ್ರಕಟಿಸಿದ ವಿವಿಧ ನಿಯತಕಾಲಿಕಗಳಿಗೆ ನಾವು ಕೃತಜ್ಞರು.

ಕನ್ನಡದ ಹಿರಿಯ ಸಾಹಿತಿ ಪ್ರೊ॥ ವಿ. ಸೀತಾರಾಮಯ್ಯ ಅವರು ಪಂಜೆ ಮಂಗೇಶರಾಯರನ್ನು ಕುರಿತು ಬರೆದಿರುವ ವ್ಯಕ್ತಿಚಿತ್ರಣ ಪಂಜೆ ಕೃತಿಗಳ ಎಲ್ಲ ಸಂಪುಟಗಳಲ್ಲೂ ಪ್ರಕಟವಾಗುತ್ತಿವೆ. ಅದನ್ನು ಬರೆದುಕೊಟ್ಟ ಪ್ರೊ॥ ಸೀತಾರಾಮಯ್ಯನವರಿಗೆ ಆಭಾರಿಗಳಾಗಿದ್ದೇವೆ.

ಈ ಸಂಪುಟಗಳ ಯೋಜನೆ—ಪ್ರಕಟಣೆಗಳಿಗೆ ಸಂಬಂಧಿಸಿ ಸಲಹೆ ನೀಡಿದ ಶ್ರೀ ನಿರಂಜನ ಅವರಿಗೆ ಉಪಕೃತರಾಗಿದ್ದೇವೆ.

ಸಂಪುಟಗಳ ಪ್ರಕಟಣೆಗೆ ಸಂಬಂಧಿಸಿ ಆಸಕ್ತಿವಹಿಸಿದ ಪಂಜೆ ಶತಮಾನೋತ್ಸವ ಸಮಿತಿಗೆ ನಾವು ಋಣಿಗಳು.

ಬೆಂಗಳೂರು ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್

ಶ್ರದ್ಧಾಂಜಲಿ

ದಿವಂಗತ ಪಂಜೆ ಮಂಗೇಶರಾಯರ ಸುಪುತ್ರ ಶ್ರೀ ಪಂಜೆ ರಾಮರಾಯರು ಈ ಸಂಕಲನದ ಸಂಪಾದಕರಾಗಿ ಅತ್ಯಂತ ದಕ್ಷತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಿಕೊಟ್ಟರು. ಆದರೆ, ಇದು ಪ್ರಕಟವಾಗುತ್ತಿರುವ ವೇಳೆಯಲ್ಲಿ ಅವರಿಲ್ಲ. ಅವರ ಅಕಾಲ ಮರಣದಿಂದ ನಾವು ಅತ್ಯಂತ ದುಃಖಿಗಳಾಗಿದ್ದೇವೆ. ಅವರದು ಪರಿಚಿತರ—ಗೆಳೆಯರ ನೆನಪಿನಿಂದ ಎಂದೂ ಮಾಸದ ವ್ಯಕ್ತಿತ್ವ. ಪಂಜೆ ಕೃತಿಗಳ ಈ ಸಂಗ್ರಹಗಳೆಲ್ಲ ಅವರ ದಣಿವರಿಯದ ದುಡಿಮೆಯ ಫಲಗಳು.

ಈ ಸಂದರ್ಭದಲ್ಲಿ ಓರಿಯಂಟ್ ಲಾಂಗ್‌ಮನ್ ಸಂಸ್ಥೆ ದಿವಂಗತರಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ

1 ನೆಯ ನವೆಂಬರ್ 1973 ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್

ಅ ನು ಕ್ರ ಮ ಣಿ ಕೆ

ಹಳೆಯ ಸಬ್ ಎಸಿಸ್ಟಾಂಟನ ಸುಳ್ಳು ಡೈರಿಯಿಂದ

ನಾನು ಸರಕಾರಿ ನೌಕರಿಯನ್ನು ಮೊದಲು ಕೈಕೊಂಡದ್ದು ಉಪಾಧ್ಯಾಯನಾಗಿ, ಕಡೆಗೆ ಕೆಳಗಿಟ್ಟದ್ದಂ ಉಪಾಧ್ಯಾಯನಾಗಿ; ಇವೆರಡರ ನಡುವೆ ಮಾತ್ರ ಚಿಕ್ಕದೊಂದು ಅವಧಿಯು ಕಡುಬಿನೊಳಗಣ ಹೂರಣದಂತೆ ಮಧ್ಯಸ್ಥವಾಗಿತ್ತು. ಈ ಕಾಲಾವಧಿಯ ಹದಿನಾಲ್ಕು ವರ್ಷಗಳಲ್ಲಿ ನಾನು ನಮ್ಮ ಜಿಲ್ಲೆಯ ಗ್ರಾಮಗಳನ್ನು ಸುತ್ತಾಡಿ ಹಳ್ಳಿಯ ಶಾಲೆಗಳನ್ನು ನೋಡಿದ ವೇಳೆ ನನ್ನ ಲಕ್ಷ್ಯಕ್ಕೆ ಬಂದಿದ್ದ ಹಳ್ಳಿಯವರ ರೀತಿ, ಅಯ್ಯಗಳರ ಚರ್ಯೆ, ಮಕ್ಕಳ ಮಾತು, ಇವನ್ನು ನನ್ನ ಮನಸ್ಸು ಈಗಲೂ ನೆನವರಿಸಿ, – ಮುಪ್ಪಿನ ಮೇಬಳ್ಳಿಗೆ ಸಿಲುಕಿ ಬಿದ್ದಲ್ಲೇ ಬಿದ್ದುಕೊಂಡಿದ್ದರೂ, – ಆ ನೆನಹುಗಳನ್ನು ಮತ್ತು ಮತ್ತು ಈಚೆಗೆ ತಂದು ಮೆಲುಕಾಡುವುದಕ್ಕೆ ಬಯಸುತ್ತಿದೆ.

ನನ್ನ ಸರ್ವಿಸ್ ಜಾತಕದ ಮೇರೆಗೆ ನನಗೆ ಮಂಗಳೂರು ಗವರ್ನಮೆಂಟ್ ಕೊಲೇಜಿನಲ್ಲಿ ಹನ್ನೊಂದು ವರ್ಷಗಳ ತನಕ ಹಿಡಿದಿದ್ದ ಅಧ್ಯಾಪಕನ ಸ್ಥಿರಗತಿ ತಪ್ಪಿ, 1906 ರಲ್ಲಿ ಗ್ರಾಮಸಂಚಾರದ ಗ್ರಹಗತಿ ಪ್ರಾಪ್ತ ವಾಯಿತು. ಅದೇ ವರ್ಷ ಗ್ರಾಮ ಶಾಲೆಗಳ ವಿಚಾರವೇದಿಕೆಗೆ ಇದ್ದ 'ಡೆಪ್ಯುಟಿ ಇನ್ಸ್‌ಪೆಕ್ಟರ್' ಎಂಬ ಹಳೆಯ ಹೆಸರು ಹೋಗಿ, 'ಸಬ್ ಎಸಿಸ್ಟಾಂಟ್' ಎಂದು ಹೊಸ ನಾಮಕರಣವಾಯಿತು. ಇದರಿಂದ ಆ ಪದವಿಯ ಮಾನಮನ್ನಣೆಗೆ ಬಹುಶಃ ಯಾವ ಕೊರತೆಯೂ ಬಂದಿರಲಿಲ್ಲ. ಮನ್ನಣೆ ಕಡಮೆಯಾದದ್ದು ಇದ್ದರೆ, ಅದು ಜಾಗದ ಹೆಸರಿನ ಬದಲಾವಣೆಯಿಂದಲ್ಲ; ಅದರ ಕಾರಣವೇ ಬೇರೆ. ಹಿಂದಕ್ಕೆ ಗುತ್ತಿನ ಪಟೇಲಿಕೆ, ಗ್ರಾಮದ ಶ್ಯಾನುಭೋಗಿಕೆ, ತಾಲ್ಲೂಕು ಗುಮಾಸ್ತಿಕೆ, ಪೋಲೀಸ್ ಕೈದುಗಾರಿಕೆ ಹೀಗೆ ಜುಜಿಬಿ ಸರಕಾರ ಕೆಲಸಕ್ಕೆ ಪ್ರಾಯ್ಮೆರಿ ಪರೀಕ್ಷೆಯ ಪಾಸುಪಡಿಯಲೇ ಬೇಕಾಗಿತ್ತು. 1904 ರಲ್ಲಿ 'ಇಂದಿನಿಂದ ಈ ಪ್ರಾಯ್ಮೆರಿ ಪರೀಕ್ಷೆ ವಜಾ ಆಗಿದೆ, ಪಾಸಿನ ಪ್ರಸಾದದಿಂದ ಫಲವಿಲ್ಲ' ಎಂದು ಸರಕಾರದ ನುಡಿಕಟ್ಟಾಯಿತು; ಇದರಿಂದ ಸರ್ಟಿಫಿಕೇಟಿನ ಪ್ರಭಾವವು ನಿಂತುಹೋಗಿ, ಶಾಲಾ ಇಲಾಖೆಯವರು ಹಳ್ಳಿಯ ಮಕ್ಕಳಿಗೆ ಹಂಚುತ್ತಲಿದ್ದ ಶ್ರೀಮುಡಿ ಗಂಧಪ್ರಸಾದದ ಮೇಲೆ ಹಳ್ಳಿಯವರಿಗಿದ್ದ ಪೂರ್ವದ ಭಕ್ತಿವಿಶ್ವಾಸಗಳು ಕಡಮೆಯಾದುವು.

ನಾನು 'ಸಬ್ ಎಸಿಸ್ಟಾಂಟನ' ಸ್ಥಳದಲ್ಲಿ ಕಾಲಿಟ್ಟಾಗ ಹಳ್ಳಿಯ ಉಪಾಧ್ಯಾಯರ ಹಿಂದಿನ ಹಲವು ಸಂಪ್ರದಾಯಗಳು ಉದುರಿಹೋಗಿ, ಹೂವಿನ ಎಡೆಯಲ್ಲಿ ಒಣಎಲೆ ಮಾತ್ರವೇ ಉಳಿದಿತ್ತು. ಮರ್ಯಾದೆಯಲ್ಲಿ ಹಿಂದಿನಷ್ಟು ವಿಜೃಂಭಣೆ ಇಲ್ಲ. ಮುಂಚೆ ಕೊಂಬು, ಕಹಳೆ ಇರುವಲ್ಲಿ ಈಗ ಕೈಮುಗಿತ, ನಜರು ಕಾಣಿಕೆ ಕೊಡುವಲ್ಲಿ ಎಳನೀರು, 'ಸ್ವಾಮಿ! ದೇವ್ರು!' ಎಂದು ಸಂಬೋಧಿಸುವಲ್ಲಿ 'ಹೌದು ಸೆರ್, ಇಲ್ಲ ಸಾರ್' – ಇಷ್ಟಕ್ಕೆ ಇಳಿದಿತ್ತು. 'ಈಗ ಶಾಲೆಯವರಿಗೆ ಹಳ್ಳಿಯಲ್ಲಿ ಮುಂಚಿನ ಭರಮು ಇಲ್ಲ, ಸೆರ್! ಪ್ರಾಯ್ಮರಿ ಇದ್ದಾಗ ಕೈತುಂಬಾ ಗ್ರೇಂಟ್ ಹಣ ಹಂಚುತ್ತಿದ್ದರು; ಮರ್ಯಾದೆಯೂ ಬರುತ್ತಿತ್ತು. ಈಗ ಹೆಸರು ಮಾತ್ರ

ದೊಡ್ಡದು – ಸಬ್ ಅಸಿಸ್ಟಾಂಟ್ ಇನ್ಸಪೇಟರ್! ಯಾರು ಮೂಸುತ್ತಾರೆ, ಶೆರ್?' ಈ ರೀತಿಯ ಉಪಾಧ್ಯಾಯರ ಅಭಿಪ್ರಾಯವನ್ನೇ ಹಳ್ಳಿಯ ದೊಡ್ಡ ಮನುಷ್ಯರೊಬ್ಬರು ನನ್ನ ಮುಂದೆ ಕಾರ್ಯರೂಪವಾಗಿ ಮಾಡಿ ತೋರಿಸಿದ ಸಂಗತಿ ನನ್ನ ನೆನಪಿನಲ್ಲಿದೆ.

ನಾನು ಒಂದು ದಿನ ಮಧ್ಯಾಹ್ನ ಗುಡ್ಡದ ಪದವಿನಿಂದ ಕೆಳಗಿನ ಬಯಲಿಗೆ ಇಳಿಯುತ್ತಿದ್ದುದನ್ನು ಆ ದೊಡ್ಡಮನುಷ್ಯರು ಕಂಡು, ತಮ್ಮ ಕೈಯಲ್ಲಿದ್ದ ಕೊಡೆಯನ್ನು ಮುಚ್ಚಿ, ಕೆಲಸಾರಿ ಕೆರಕಳಚಿ ಕೈಮುಗಿದು, ತಾವಾಗಿ ನನ್ನ ಹಿಂದೆಯೇ ಬರುವಂಥವರಾದರು. ನಾವು ಹತ್ತುಮಾರು ಮುಂದೆ ಹೋಗುವಷ್ಟರಲ್ಲಿ ಶಾಲೆಮನೆ ಎದುರಾಗಲು; ಉಪಾಧ್ಯಾಯರು ಹೊರಬಂದು **ನನಗೆ** ನಮಸ್ಕಾರ ಮಾಡಿದರು. ಇದನ್ನು ಕಂಡರೊ ಇಲ್ಲವೊ, ನನ್ನ ಪಕ್ಕದಲ್ಲಿ ಬಂದವರು ಬೆಬ್ಬಳಿಸಿ ಹೋಗಿ 'ಉಳಿೊ ಅಪ್ಪಾ! ಒಯ್!' ಎಂದು ಬಾಯಿಬಿಟ್ಟರು; ಮತ್ತು ಅದೇ ಬಾಯಿಂದ ಅವರು ನನ್ನನ್ನು ಕುರಿತು ಉಪಾಧ್ಯಾಯರ ಹತ್ತಿರ 'ಒಯ್! ಉಂಟೆ ಇದು? ನಾನು ಇದು ಪೋಲೀಸ್ ಇನ್ಸಪೇಟರ್ ಎಂದು ಗ್ರಹಿಸಿ ಸುಮ್ಮನೆ ನಡೆದುಬಂದದ್ದು! ಈಗ ನೋಡಿದರೆ ಇದೂ ಪೋಲೀಸ್ ಅಲ್ಲ, ಇದು ಪೋಲಿ ಇನ್ಸಪೆಕ್ಟೆ! ಪೋಲಿ ಮಕ್ಕಳನ್ನು ನೋಡಬರುವ ಇದಕ್ಕೆ ನಾನು ಕೈಯೆತ್ತುವುದುಂಟೆ? ಕಾಸಿನ ಪ್ರಯೋಜನವಿಲ್ಲದೆ ಕಾಲು ದಣಿಸಿಬಂದದ್ದು ನಾನು! ಒಯ್! ಉಂಟೆ ಇದು? ಥೂ!' ಎಂದರು.

ನಮ್ಮ ಹಳ್ಳಿಯ ಪಟೇಲರ ಭ್ರಮೆಗೆ ಕಾರಣವಿತ್ತು. ಕೆಲವು ದಿನಗಳ ಹಿಂದೆ ಅದೇ ಹಳ್ಳಿಯಲ್ಲಿ ನಡೆದ ಒಂದು ಖೂನಿಯ ತನಖಿಗಾಗಿ ಹೊಸ ಪೋಲೀಸ್ ಇನ್ಸಪೆಕ್ಟರವರ ನೇಮಕವಾಗಿದ್ದು, ಅವರ ಬರೋಣವನ್ನು ಪಟೇಲರು ಎದುರು ನೋಡುತ್ತಿದ್ದರು. ಹೀಗೆ ಅವರ ಸವಾರಿಯ ದಾರಿ ಕಾಯುತ್ತಿದ್ದ ಪಟೇಲರ ಕಣ್ಣಿಗೂ ಶಾಲೆ ಎಲ್ಲಿ ಎಂದು ಯೋಚಿಸುತ್ತಿದ್ದ ನನ್ನ ತಲೆಗೂ ಗುಡ್ಡದ ಹೊಡೆಯ ಮೇಲೆ ಅಕಸ್ಮಾತ್ತಾಗಿ ಭೇಟಿಯಾಯಿತು. ಹಿಂದೆ ನನ್ನದೊಂದು ಸಂಪ್ರದಾಯವಿತ್ತು; ನಾನು ತಲೆಬಿಟ್ಟು ಸರಕಾರ ಕೆಲಸದ ಮೇಲೆ ಹೋಗುತಿರಲಿಲ್ಲ. ಏಕೆಂದರೆ ಒಳತಲೆ ಬತ್ತಲೆ ಇದ್ದರೂ ಭರತಿ ತಲೆ ಎಂದು ತೋರಬೇಕಾದರೆ ಅದರ ಮೇಲೊಂದು ಮುಂಡಾಸು ಏರಿಸಬೇಕಷ್ಟೆ. ನನಗೆ ಕೆಲಸ ಕಾಯಮ್ ಆಗುವ ತನಕ ನನ್ನ ತಲೆಗೊಂದು ಅಗಲ ಸರಿಗೆಯ ಕೆಂಪು ಪೇಟಾ ಇರುತ್ತಿತ್ತು. ಕೆಂಪು ಪಗಡಿಯ ಮೇಲೆ ಪಟೇಲರಿಗಿದ್ದ ಭೀತಿಯಿಂದ ಹುಟ್ಟಿದ ಅವರದೊಂದು ನಮಸ್ಕಾರವು ವೆಚ್ಚವಾಯಿತು. ಕೈಮುಗಿತವು ನಮ್ಮ ಮುಂದಿನ ಪ್ರಯೋಜನಕ್ಕಾಗಿ ಹೆರರಿಗೆ ಕೊಡುವ ಕೈಸಾಲ – ಹೀಗೆ ಪಟೇಲರು ಯೋಚಿಸಿರಬೇಕು.

ವಾಸ್ತವಿಕವಾಗಿ ನಾವು ಹಾಗೆ ತಿಳಿಯುವುದಿಲ್ಲ. ನಮಸ್ಕಾರವೆಂಬುದು ಸಭ್ಯಜನರ ಮಾತುಕಥೆಯ ಮುನ್ನುಡಿ ಎಂದು ನಮ್ಮ ಅಭಿಪ್ರಾಯ. ಆದರೆ ಹಳ್ಳಿಯವರ ಗ್ರಹಿಕೆ ಬೇರೆ. ಕೈಮುಗಿಯುವುದು ಅಂದರೆ ಕೆಳಜಾತಿಯವರು ಮೇಲಿನವರಿಗೆ ಕೊಡಲೇಬೇಕಾದ ಮರ್ಯಾದೆ ಎಂದು ಅವರು ಭಾವಿಸುತ್ತಾರೆ; ನಮಸ್ಕಾರ ಅಂದರೆ ಅಧಿಕಾರಕ್ಕೆ ಸಲತಕ್ಕ ಪುರುಸ್ಕಾರ ಎಂಬುದಾಗಿಯೂ ಅವರ ತಿಳಿವಳಿಕೆ ಇದೆ. ಆದುದರಿಂದಲೇ ಅವರು ಕೈಮುಗಿಯುವ ಈ ಬಗೆಯ ಹಸ್ತಚೇಷ್ಟೆಯಲ್ಲಿ ವೈವಿಧ್ಯ ಬಂದಿದೆ. ಹುದ್ದೆದಾರನ ಮೈಬಣ್ಣ, ಉಡುಪಿನ ತಳಕು, ಸಂಬಳದ ಮಹತ್ವ, ಇಲಾಖೆಯ ಹಿರಿಮೆ, ಜಾತಿಯ ಅಂತಸ್ತು, ಮುಖ್ಯವಾಗಿ ಅಧಿಕಾರಿಯ ಉಪದ್ರಕಾರಕ ಶಕ್ತಿಯನ್ನು ಹೊಂದಿಕೊಂಡು ನಮಸ್ಕಾರವಿಧಿಯು ಮಾರ್ಪಡುತ್ತದೆ. ಹಳ್ಳಿಯವರಿಗೆ ಸರಕಾರ ಉದ್ಯೋಗಸ್ಥರ ಮೇಲೆ ಸರ್ವಸಾಧಾರಣವಾಗಿ ಅಳುಕು ಇದೆ, ಅಂಜಿಕೆ ಇದೆ, ಅಪಾಯ ಭೀತಿ ಇದೆ; ಆದರೆ ಅಕ್ಕರೆ ಕಡಿಮೆ. ಅಕ್ಕರೆ ಇದ್ದಲ್ಲಿ ಅವರಿಗೆ ನಿಜವಾದ ಅಭಿಮಾನವಿದೆ. ಅದು ಇಲ್ಲದ್ದಲ್ಲಿ

ಅವರ ಮನಸ್ಸಿನೊಳಗಣ ನಂಬುಗೆ ಹೀಗಿದೆ – 'ಮುಕ್ಕಾಲು ಮೂರುವೀಸ ಅಧಿಕಾರಿಗಳು ಸರೀಸೃಪಗಳಂತೆ ಉದರಗಾಮಿಗಳು, ಈ ರೂಪಕವನ್ನು ನನಗೆ ಮಂದಟ್ಟಾಗುವಂತೆ ಹೇಳಿದ ಒಬ್ಬ ಉಪಾಧ್ಯಾಯರ ಮಾತುಗಳು ಇಲ್ಲಿವೆ.

'ಸರಕಾರದವರಲ್ಲಿ ಸಿವಿಲಿನವರು ಹೆಬ್ಬಾವುಗಳು, ಸಾರ್; ಪೋಲೀಸಿನವರು ನಾಗರಹಾವುಗಳು, ಅಬ್ಕಾರಿ ಜಂಗ್ಲಿಯವರು ಮಂಡಲಿಗಳು.'

'ಟಪ್ಪಾಲಿನವರೋ?'

'ಟಪ್ಪಾಲ್ ಇನ್ಸಪೇಟರ್ ಹಸುರುಹಾವು ಸೆರ್!'

'ಹಾಗಾದರೆ ಕೇರೆಹಾವು ಯಾರು?'

'ರೆವಿನ್ಯು ಇನ್ಸಪೇಟರ್, ಸಾರ್!'

'ನಾವು ಶಾಲಾ ಇಲಾಖೆಯವರು ಯಾವ ವರ್ಗದಲ್ಲಿ?'

'ತಾವು ಸೆರ್? ತಮ್ಮ ವರ್ಗ ವೊಳ್ಳೆಯದು, ಬುದ್ಧಿ!'

ಮಾಸ್ತರರ ಕಡೆಯ ಮಾತಿನಲ್ಲಿ ನೀರ್ವೊಳ್ಳೆಯ ಅರ್ಥದ ಮರ್ಮ ನೋಡಿ!

ಹೀಗೆ ಬಾಯಿಬಿಟ್ಟು ಉಪಾಧ್ಯಾಯರು ಉದ್ಯೋಗಸ್ಥರೊಂದಿಗೆ ಮಾತಾಡುವುದಿಲ್ಲವೆಂದಿಲ್ಲ. ಸಲುಗೆ ಇದ್ದರೆ ಸರಿಯಾಗಿ ಮಾತಾಡುತ್ತಾರೆ. ಅಧಿಕಾರಿಯು ರಾವಣೇಶ್ವರನೋ ಬೆಂಕಿ ನವಾಬನೋ ಆಗಿದ್ದರೆ ಹಳ್ಳಿಯವರ ಬಾಯಿಂದ ಸತ್ಯಸ್ಥಿತಿಯು ಹೊರಬರುವುದಕ್ಕೆ ಸಂಕೋಚಪಡುತ್ತದೆ. 'ಹಿರಿದೆನಿಸಿ ಅವ ಕ್ರೂರನಾದಡೆ, ನರರಳುಕಿ ಹೋಹರು, ವಸಂತದ ಖರಕಿರಣನಂತರ್ನಿವರ್ತನವಾಗಬೇಕೆಂದಾ!' ಹೀಗಿದ್ದರೂ ತಾಬೇದಾರರನ್ನು ಆಫಿಸರರ ಹತ್ತಿರ ಬರಲೀಸದ ಒಂದು ಮಾಯಾವರಣವಿದೆ. ಇದಕ್ಕೆ ದೌಲತ್ತು ಎಂದು ಹಳ್ಳಿಯವನ ಹೆಸರು. ದೌಲತ್ತು ಕಾಲಿನ ಎಕ್ಕಡ ಕಾಲಡಿಯಲ್ಲಿಯೇ ಇರಬೇಕೆಂದು ಹೇಳುವುದು. ಮುದ್ದುಮಾಡಿದ ಮನೇ ನಾಯಿ ಮಡಿಪಾತ್ರೆ ನೆಕ್ಕುವುದೆಂಬ ಸಂಶಯದಿಂದ ನಟಿಸಿದ್ದ ತಾಟಸ್ಥ್ಯವು ದೌಲತ್ತು ಅಲ್ಲ. ಮೇಲಿನ ಅಧಿಕಾರಿಯ ಅಸತ್ಯವನ್ನೂ, ಅಸಮರ್ಥತೆಯನ್ನೂ ಪಾಪದವರ ಕಣ್ಣಿನಿಂದ ಮರೆಯಿಸುವ ಒಂದು ಅಂತರ್ಪಟವಿದೆ, ಅದೇ ದೌಲತ್ತು. ನನ್ನ ಸಮಕಾಲೀನರಾದ ಇಲಾಖಾ ಆಫಿಸರರು ಏನಿದ್ದರೂ ದೌಲತ್ತುದಾರರಾಗಿರಲಿಲ್ಲ. ಅವರಿಗೂ ಅವರ ಕೆಳಗಿನ ಉಪಾಧ್ಯಾಯರಿಗೂ ನಡುವೆ ಒಂದು ಬಗೆಯ ಅಡ್ಡಗೋಡೆ ಇರಲಿಲ್ಲ. ಅವರು ಉಪಾಧ್ಯಾಯರೊಂದಿಗೆ ಕಲೆತು ಅವರಿಂದ ಕಲಿತು ಅನ್ಯೋನ್ಯವಾಗಿದ್ದರು. ಸವೂರ ರಾಘವೇಂದ್ರರಾಯರು, ಕೊಡ್ಲು ವಿಶ್ವೇಶ್ವರರಾಯರು, ನಾರಾವಿ ಕೃಷ್ಣರಾಯರು, ಉಳ್ಳಾಲ ಮಂಗೇಶರಾಯರು, ಇಂಥವರ ಹೆಸರುಗಳು ಉಪಾಧ್ಯಾಯರ ನಾಲಗೆಗಳಲ್ಲಿ ಈಗಲೂ ನಿಂತಿವೆ. 'ಆ ರಾಯರು ನಮ್ಮನ್ನು ಕಾಯಿದೆ ಬಿಡದೆ ಕಾಯುತ್ತಿದ್ದರು, ಕಾಯಿಸುತ್ತಿರಲಿಲ್ಲ.' 'ಈ ರಾಯರು ಬೆನ್ನಿಗೆ ಬಡಿಯುತ್ತಿದ್ದರು, ಆದರೆ ಹೊಟ್ಟೆಗೆ ಹೊಡೆಯುತ್ತಿರಲಿಲ್ಲ.' 'ಅವರು ಇದ್ದ ಕಾಲಕ್ಕೆ ಬೆಲ್ಲಕೊಟ್ಟರು, ಇಲ್ಲದ ಕಾಲಕ್ಕೆ ಬೆಲ್ಲದಂಥ ಮಾತು ಕೊಟ್ಟರು.' 'ಇವರು ಉಪಾಧ್ಯಾಯ ಕುಟುಂಬಿ, ಸರ್! ಇವರಿಗೆ ಹೆಂಡತಿಮಕ್ಕಳ ಚಿಂತೆಗಿಂತ ಶಾಲೆಮಾಸ್ತರರ ಚಿಂತೆ ಹೆಚ್ಚು.'

ನಾನು ಹೊಸಂಗಡಿ ಶಾಲೆಯನ್ನು ಪ್ರಥಮತಃ ಸಂದರ್ಶಿಸಿದ್ದು ಆಶ್ವೀಜ ಬಹುಳ ಅಮಾವಾಸ್ಯೆ ದಿನ. ಆ ಶಾಲೆ ನೀರಮೇಲಿನಗುಳ್ಳೆ ಶಾಲೆ, ತೋರಿ ಅಡಗುತ್ತದೆ, ಆದ್ದರಿಂದ ಅದನ್ನು ಗುಟ್ಟಾಗಿ ಹೋಗಿ ನೋಡಬೇಕೆಂದು ನನಗೆ ಅಪ್ಪಣೆ ಇತ್ತು. ಆದರೆ ನಾನು ಹಳ್ಳಿಗೆ ಬರುವ ಸಂಗತಿ ನಮ್ಮ ಉಪಾಧ್ಯಾಯರಿಗೆ ಗಾಳಿ ಸಮಾಚಾರದಿಂದ ಮೊದಲೇ ಗೊತ್ತಾಗಿತ್ತು. ಉಪಾಧ್ಯಾಯರ ಶಾಲೆಯು ವರ್ಷಾವಧಿ ಪರೀಕ್ಷೆಗೆ ಸಿದ್ಧವೇ ಇತ್ತು. ನಾನು ಉಪಾಧ್ಯಾಯರನ್ನು ಕಂಡು, 'ನಮಸ್ಕಾರ! ಹ್ಯಾಗಿದ್ದೀರಿ, ಮಾಸ್ತರ್ರೇ?' ಎಂದು ಕೇಳಿದೆ.

ಉತ್ತರ:– 'ಪ್ರಾಕಿನವರು ನಡಿಸಿದ ಹಾಗೆ ಇದ್ದೇನೆ, ಸ್ವಾಮಿ?'

ಪ್ರಶ್ನೆ:– 'ಪ್ರಾಕಿನವರು ಎಂದರೆ ಯಾರು?'

ಉತ್ತರ:– 'ಪ್ರಾಕಿನವರು ಎಂದರೆ ರಾಘವೇಂದ್ರರಾಯರು. ಅವರು ನಮ್ಮ ತಂದೆ; ಈ ಶಾಲೆ ಮಂಜೂರುಮಾಡಿ ರಿಕೊಗ್ನಿಶನ್ ಹುಕುಂ ಕೊಟ್ಟವರು ಅವರು'!

ಪ್ರಶ್ನೆ:– 'ವಿಶ್ವೇಶ್ವರರಾಯರು?'

ಉತ್ತರ:– 'ಅವರು ದೊಡ್ಡತಂದೆ; ಅವರು ನಮ್ಮ ಶಾಲೆಗೆ ಗ್ರೇಂಟ್‌ಹಣ ಕೊಡಿಸಿದವರು.'

ಪ್ರಶ್ನೆ:– 'ನಾರಾವಿಯವರನ್ನು ಬಲ್ಲಿರೊ?'

ಉತ್ತರ:– 'ಕೃಷ್ಣರಾಯರನ್ನೊ? ಅವರು ನಮ್ಮ ತಾಯಿ, ಸ್ವಾಮಿ! ಈ ಶಾಲೆಯನ್ನು ಸಾಕಿ ಬೆಳಿಸಿದವರು ಅವರೇ ತಾನೆ!'

ಮುಂದುವರಿದರೆ ನನ್ನ ಹೆಸರು ಉಪಾಧ್ಯಾಯನ ಮಗನ ಸ್ಥಾನದಲ್ಲಿ ನಿಂತೀತೆಂಬ ಅನುಮಾನದಿಂದ ಸಂಭಾಷಣೆಯನ್ನು ಇನ್ನೊಂದು ದಾರಿಗೆ ತಿರುಗಿಸಿದೆನು.

ನಾನು:– 'ಪರೀಕ್ಷೆಯಾಗಲಿಕ್ಕೆ ಅಡ್ಡಿ ಇದೆಯೇ?'

ಮಾಸ್ತರ್:– 'ತಮ್ಮ ಶಾಲೆ, ತಮ್ಮ ಹುಡುಗರನ್ನು ತಾವು ಪರೀಕ್ಷೆ ಮಾಡಲಿಕ್ಕೆ ತಮಗೆ ಯಾರದು ಅಡ್ಡಿ, ಸ್ವಾಮಿ?'

ನಾನು:– 'ಈ ಹೊತ್ತು ರಜೆಯಲ್ಲವೆ, ಆದ್ದರಿಂದ ಕೇಳಿದೆ.'

ಮಾಸ್ತರ್:– 'ತಾವು ಬರುತ್ತೀರೆಂದು ಕೇಳಿ, ರಜೆಯಾದ್ದರಿಂದಲೇ ನಾನು ಮನೆಮನೆಗೆ ಓಡಿ, ಮಕ್ಕಳನ್ನು ಜಮಾಯಿಸಿಬಿಟ್ಟಿದ್ದೇನೆ. ನಾಳೆ ಎಲ್ಲಿ ಸಿಕ್ಕುತ್ತಾರೆ ಅವರು.?'

ನಾನು:– 'ನಾಳೆ ನನಗೆ ಇಲ್ಲೀದ ವೇಣೂರಿಗೆ ಹೋಗಬೇಕು.'

ಮಾಸ್ತರ್:– 'ನನಗೆ ಈ ರಾತ್ರಿಯೇ ಇಲ್ಲಿಂದ ಎದ್ದುಹೋಗದೆ ನಿರ್ವಾಹವಿಲ್ಲ.'

ನಾನು:– 'ಅದೇನಯ್ಯಾ ಹಾಗೆ?'

ಮಾಸ್ತರ್:– 'ಅದು ಹಾಗೆಯೇ! ಊರೆಲ್ಲಾ ಸಾಲವಾದರೆ ಆಶ್ವೀಜ ಬಹುಳ ಅಮಾವಾಸ್ಯೆಯ ನಂತರ ಹಳ್ಳಿಯಲ್ಲಿ ಯಾರು ನಿಲ್ಲುತ್ತಾರೆ, ಸ್ವಾಮಿ?'

ನಾನು:– 'ಸಾಲ? ಸಾಲ ಹೇಗಾಯಿತು?'

ಮಾಸ್ತರ್:– 'ಸಾಅಅಲವೊ? ಹಿಂದಿನ ಪ್ರಾಯ್ಮರಿ ವಜಾಮಾಡಿದರು. ಗ್ರೇಂಟ್ ಹಣ ಕೊಯ್ದು ಬಿಟ್ಟರು. ವೇಣೂರಲ್ಲಿ ಬೋರ್ಡು ಶಾಲೆ ಹಾಕಿದರು. ನನ್ನ ಖಾಸಗಿ ಶಾಲೆಗೆ ನೀರಿಟ್ಟರು. ಹಿಂದೆ ವರ್ಷಾವಧಿ ನಾನ್ನೂರು ರೂಪಾಯಿ ಗ್ರೇಂಟ್ ಬರುವಲ್ಲಿ ಈಗ ನಾಲ್ವತ್ತು ರೂಪಾಯಿ ಪ್ರಾಪ್ತಿ ಇಲ್ಲದಿದ್ದರೆ, ನಾಲ್ಕುಜನರ ಹೊಟ್ಟೆಯ ಪಾಡು ಸಾಲಮಾಡದೆ ಹ್ಯಾಗೆ ಸಾಗಬೇಕು? ಅಪ್ಪಣೆಯಾಗಲಿ!

ನಾನು:– 'ಅಡ್ಡ ಕಸಬು ಇಲ್ಲವೇ?'

ಮಾಸ್ತರ್:– 'ಕಳೆದ ವರ್ಷ ಮಗನಿಗೆ ಒಂದು ಅಂಗಡಿ ಮಾಡಿಕೊಡಬೇಕೆಂದು ಯೋಚಿಸಿ, ಜೈನ ಪೇಟೆಯಿಂದ ಸಾಲತಂದು, ಅಂಗಡಿ ಪೂಜೆಯ ದಿನ ಮುಹೂರ್ತ ನೋಡಿ ಹುಡುಗನನ್ನು ಮಂಡದ ಮೇಲೆ ಕೂರಿಸಿದೆ. ಒಂದು ತಿಂಗಳು ಹೋಗಲಿಲ್ಲ. ಗುಮ್ಮಟ ಪಾದೆಕಲ್ಲಿನ ಹಾಗೆ ಗಟ್ಟಿಯಿದ್ದ ಹುಡುಗ ಎರಡು ದಿವಸದ ಜ್ವರದಿಂದ ನನ್ನ ಕಣ್ಣಿನ ಮುಂದೆ ದೇವರಿಗೆ ಸಂದ. ಅವನ ಹನ್ನೆರಡನೆಯ ದಿನ ಕಳೆಯಲಿಲ್ಲ. ಅಷ್ಟರಲ್ಲಿ ಅವನ ತಾಯಿ ನೀರಿಗೆ ಹೋದವಳು ಕಾಲುಜಾರಿ ಬಾವಿಗೆ ಬಿದ್ದು ಗಂಗಾಮ್ಮನ ಪಾದ ಸೇರಿ ಕೊಂಡಳು. ಇನ್ನು ಏಳು ವರ್ಷದ ಒಂದು ಕೂಸು ಇದೆ. ಅದನ್ನು ಕಟ್ಟಿಕೊಂಡು ಈ ಹಳ್ಳಿಯಲ್ಲಿ ನಾನೇನು ಮಾಡಲಿ?'

ನಾನು:– 'ಮಗುವನ್ನು ಏನು ಮಾಡುತ್ತೀರಿ? ಇಲ್ಲೇ ಇದೆಯೆ?'

ಮಾಸ್ತರ್:– 'ಇಲ್ಲೇ ಇದೆ. ಅದನ್ನು ಅಜ್ಜಿಯ ಮನೆಯಲ್ಲಿ ಸಧ್ಯಕ್ಕೆ ಬಿಡುತ್ತೇನೆ. ಯಾವುದಕ್ಕೂ ಶಾಲೆ ಪರೀಕ್ಷೆಯೊಂದು ತೀರದೆ ಇಲ್ಲಿಂದ ಏಳುವುದಕ್ಕೆ ನನಗೆ ಆಗುವುದಿಲ್ಲವಷ್ಟೆ!'

ನಾನು:– 'ಮುಂದೆ ಶಾಲೆ ನೋಡುವುದು ಯಾರು?'

ಮಾಸ್ತರ್:– 'ನೋಡುವುದೇನು? ಅದನ್ನು ನಾಳೆಯಿಂದ ಮುಚ್ಚಿಬಿಡುತ್ತೇನೆ.'

ನಾನು:– 'ತೆರೆಯುವುದು ಯಾವಾಗ?'

ಮಾಸ್ತರ್:– 'ಮಾರ್ಚಿ ತಿಂಗಳ ಗ್ರೇಂಟಿನ ಹಣದ ಬೀಲು ಬಂದರೆ ಸಿಕ್ಕಿದಷ್ಟು ಹಣದಿಂದ ಸಾಲ ಸಂದಾಯಮಾಡಿ, ಆಮೇಲೆ ಶಾಲೆ ತೆರೆಯುತ್ತೇನೆ.'

ಇದು ಸಂಸಾರ ಕಷ್ಟದಿಂದ ಬೆಂದ ಉಪಾಧ್ಯಾಯನ ಮನಸ್ಸಿನ ಮೊರೆ. ಈ ಮೊರೆಯಲ್ಲಿ ಮಾತಿನ ಮೆರಗು ಇಲ್ಲ, ನಿಜ. ಆದರೆ ಸಲುಗೆಯ ಭರವಸೆಯಿಂದ ಹೊರಟ ಆ ಸೊಲ್ಲಿನಲ್ಲಿ ಸುಳ್ಳಿನ ಸುಳಿವೂ ಇಲ್ಲ. ನಾವು ಸುಳ್ಳು ಶಾಲೆಯೆಂದು ಸಂದೇಹಪಟ್ಟು ಹಳ್ಳಿಯ ಮಾಸ್ತರನ ಶಾಲೆಯ ಹಣೆಬರಹದ ಮೇಲೆ ಕೆಂಪು ಗೀಟು ಎಳೆಯುವ ಮುಂಚೆ ಆತನ ಬಡತನದ ಬಾಳಿನ ಸಾಲಸೋಲಗಳನ್ನು ವಿಚಾರಿಸಿ ಕೊಳ್ಳತಕ್ಕದ್ದೆಂಬ ಮೂಲಪಾಠವನ್ನು ನಾನು ಮೊತ್ತಮೊದಲು ಕಲಿತುಕೊಂಡದ್ದು ಈ ಹೊಸಂಗಡಿ ಉಪಾಧ್ಯಾಯರಿಂದ! ಬಡತನದಿಂದ ಆತನ ಸಾಲ ಹುಟ್ಟಿತೋ ಇಲ್ಲವೆ ಸಾಲದಿಂದ ಆತನ ಬಡತನ ಹುಟ್ಟಿತೋ, ಇದನ್ನು ನಾನು ನಿಷ್ಕರ್ಷಿಸಿ ಹೇಳಲಾರೆ. ಆದರೆ ಸಾಲ, ಬಡತನಗಳಿಂದ ಹಳ್ಳಿಯ ಮಾಸ್ತರನು ಹುಟ್ಟಿದನೆಂಬುದು ನನಗೆ ಗೊತ್ತು.

ಬಡ ಉಪಾಧ್ಯಾಯರಲ್ಲಿ ತಪ್ಪುಗಳು ಇವೆ. ಹುಡುಕುವವರಿಗೆ ಅವು ಸಿಕ್ಕುವುದಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅವು ತಿಳಿವಳಿಕೆ ಇಲ್ಲದ ಜುಜಿಬಿ ತಪ್ಪುಗಳು; ಹೆರವರ ಮನೆ ತೆಗೆಯುವ, ತಲೆಹೊಡೆ

ಯುವ, ಆಸ್ತಿ ಅಪಹರಿಸುವ ಅಪರಾಧಗಳಲ್ಲ. ಶಾಲೆಯ ಏರ್ಪಾಟು, ಶಿಸ್ತು, ಶಿಕ್ಷಣ, ರಿಜಿಸ್ಟ್ರಿಗಳ ಸಂಬಂಧ ವಾಗಿ ಆಗಾಗ ಇಲಾಖೆಯವರು ಮಾಡುತ್ತಲಿರುವ ಹೊಸ ಹೊಸ ತಿದ್ದುಪಾಟುಗಳನ್ನು ಅನುಸರಿಸುವಾಗ ಹಳೆಯ ಪದ್ಧತಿಯ ಉಪಾಧ್ಯಾಯರು ಎಡವಿಬೀಳುತ್ತಾರೆ. ಹಳ್ಳಿಶಾಲೆ ಸುಳ್ಳುಹಾಜರಿ ಶಾಲೆ – ಈ ಅಪವಾದ ವನ್ನು ನಾನೂ ಕೇಳಿದ್ದೆ. ಒಮ್ಮೆ ಕೊಂಬಾರು ಶಾಲೆಯ ಹಾಜರು ಪಟ್ಟಿಯನ್ನು ಪರಾಮರ್ಶಿಸಿ 'ಏನಯ್ಯಾ ಇದು? ಹಾಜರಿ ಬರೆಯುವುದಕ್ಕೆ ಕಲಿಸಿದ್ದು ಯಾರಯ್ಯಾ ನಿಮಗೆ?' ಎಂದು ನಾನು ಪ್ರಶ್ನೆಮಾಡಿದೆ.

'ಸುಪರ್‌ವಾಯ್ಸರು, ಸಾರ್!' ಎಂದು ಉತ್ತರ ಬಂತು.

'ಸುಮ್ಮನೆ ಹೇಳಬೇಡಿ! ನವೆಂಬರ್ ತಿಂಗಳು ಇನ್ನೂ ಕಳೆದಿಲ್ಲ, ನೀವು ಡಿಸೆಂಬರ್ ತಿಂಗಳ ಹಾಜರಿ ಯನ್ನೂ ತುಂಬಿಸಿಬಿಟ್ಟಿದ್ದೀರಿ!'

'ಇಲ್ಲ ಸೆರ್, ಸುಪರ್‌ವಾಯ್ಸರು ಪರೀಕ್ಷೆಯ ಮೊದಲೇ 1909–10 ರ ಸಂಪೂರ್ಣ ಹಾಜರಿಯ ಲೆಕ್ಕಮಾಡಿ ಇಡಬೇಕೆಂದು ಅಪ್ಪಣೆಮಾಡಿ ಹೋಗಿದ್ದರು. ಈ ಇಡೀವರ್ಷದ ಹಾಜರಿಯನ್ನು ಹೇಳಿದ ಹೊತ್ತಿಗೆ ಭರಾಯಿಸಿ ಇಟ್ಟಿದ್ದೇನೆ.' 1909–10 ನೆಯ ವರ್ಷವೆಂದರೆ 1910 ನೇ ಮಾರ್ಚಿಗೆ ಅಂತ್ಯವಾಗುವ ಹನ್ನೆರಡು ತಿಂಗಳು ಬಿಟ್ಟು 1910 ಡಿಸೆಂಬರ್ ಕೊನೆಗೆ ಮುಗಿಯುವ ವರ್ಷವೆಂದು ಉಪಾಧ್ಯಾಯರು ತಿಳಿಯದೆ ಮಾಡಿದ್ದೇ ಸುಳ್ಳು ಹಾಜರಿಯ ನಿಜವಾದ ಕಾರಣವಾಗಿತ್ತು.

ಸಲುಗೆ ಇದ್ದರೆ ಉಪಾಧ್ಯಾಯರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ಆದರೆ ಹಾಗೆ ಒಪ್ಪಿಕೊಳ್ಳುವಾಗ ಬಾಯ್ದೆರೆ ಮಾತಿನ ಬದಲು ಬರಹದ ಮಾತಿನಲ್ಲಿ ಒಪ್ಪಿಕೊಂಡರೆ, ಅದರಿಂದ ಮುಂದೆ ಒಂದಲ್ಲ ಒಂದು ಕಾಲದಲ್ಲಿ ತಮಗೆ ಅಪಾಯ ಬರಬಹುದೆಂಬ ಅವರ ಮನಸ್ಸಿನ ಸಂದೇಹವನ್ನು ಅವರ ರಿಪೋರ್ಟುಗಳ ಒಕ್ಕಣೆಯು ತೋರಿಸುತ್ತದೆ. ಒಂದು ಸರ್ತಿ ಮಾಸ್ತರರೆಲ್ಲ ತಮ್ಮ ತಮ್ಮ ಉಪಾ ಧ್ಯಾಯ ಸರ್ಟಿಫಕೇಟುಗಳನ್ನು ನನ್ನ ಆಫೀಸಿಗೆ ರವಾನಿಸಬೇಕೆಂಬ ಹುಕುಮಿಗೆ ವಿಧೇಯವಾಗಿ ಗುರುಪುರದ ಮಾಸ್ತರರೊಬ್ಬರು ವಿನಂತಿ ಮಾಡಿಕೊಂಡ ಕ್ರಮವೆಂತೆಂದರೆ –

'ನನ್ನಲ್ಲಿ ಬೇರೆ ಯಾವುದೊಂದು ಸರ್ಟಿಫಕೇಟು ಇಲ್ಲ. ಮೆಹರ್ಬಾನ್ ಮದ್ರಾಸ್ ಗವರ್ನರ್ ಸಾಹೇಬರ ವರು ತಮ್ಮ ಹೆಸರು ಮೊಹರು ನಿಶಿ 1911 ರಲ್ಲಿ ನನಗೆ ದಯಪಾಲಿಸಿರುವ ಕೆಂಪುಬರಹದ ಅರ್ಧ ಹಾಳೆಯ ದೊಡ್ಡ ಸರ್ಟಿಫಕೇಟು ಮಾತ್ರ ನನ್ನಲ್ಲಿದೆ. ಅದನ್ನು ತಮ್ಮ ಆಫೀಸಿಗೆ ಟಪ್ಪಾಲ ದ್ವಾರಾ ಕಳುಹಿಸುವಾಗ ನನ್ನ ದುರದೃಷ್ಟದಿಂದ ಅದು ಗೈರ್‌ವಿಲೆಯಾಗಿ ಹೋಗಬಹುದಷ್ಟೆ. ಹಾಗೆ ಹೋದ್ದಲ್ಲಿ ನನಗೆ ಹೊಸ ಗವರ್ನರ್ ಸಾಹೇಬರವರ ಹೆಸರು ಮೊಹರು ನಿಶಿ ಸರ್ಟಿಫಕೇಟು ಸಿಕ್ಕಲಾರದ್ದರಿಂದ, ಅಸಲನ್ನು ನಾನು ಇಟ್ಟುಕೊಂಡಿದ್ದೇನೆ. ಅದರ ತಾಜಾ ನಕಲನ್ನು ಕಳುಹಿಸಬೇಕೆಂದು ಹುಕುಂ ಆದ್ದಲ್ಲಿ ತ್ವರ್ಯದಲ್ಲಿ ಕಳುಹಿ ಸುತ್ತೇನೆ.'

ಇದನ್ನು ನೋಡಿದೊಡನೆ ಗವರ್ನರ್ ಸಾಹೇಬರಿಂದ ಸರ್ಟಿಫಿಕೇಟು ಪಡೆದ ಈ ದೊಡ್ಡ ವ್ಯಕ್ತಿ ಯನ್ನು ಸಂದರ್ಶಿಸಲು ನಾನೇ ಗುರುಪುರಕ್ಕೆ ಕೂಡಲೇ ಹೊರಟುಹೋದೆ. ಸರ್ಟಿಫಿಕೇಟು ಹೌದು; ಆದರೆ ಶಾಲೆಗೂ ಅದಕ್ಕೂ ಏನೂ ಸಂಬಂಧವಿರಲಿಲ್ಲ. 1910 ರ ಖಾನೇಶುಮಾರಿಯಲ್ಲಿ ಎನ್ಯುಮರೇಶನ್ ಕೆಲಸ ಮಾಡಿದವರಿಗೆಲ್ಲಾ ಸಾಮಾನ್ಯವಾಗಿ ಕೊಡೋಣಾಗುವ ಸರ್ಟಿಫಿಕೇಟು!

ಉಪಾಧ್ಯಾಯ ಸರ್ಟಿಫಿಕೇಟು ತನ್ನಲ್ಲಿಲ್ಲವೆಂದು ಬರಹ ಮೂಲಕ ಒಪ್ಪಿಕೊಂಡರೆ ಆ ಒಪ್ಪಿಗೆ ತನ್ನ ಕೊರಳಿಗೆ ಸುತ್ತಿಕೊಂಡೀತೆಂದು ಗುರುಪುರ ಮಾಸ್ತರರು ಭೀತರಾದರಂತೆ – ಶಾಲೆಯ ಮಕ್ಕಳಿಂದ ಅಕ್ಕಿಯ ಸರಬರಾಯಿಯನ್ನು ಗುಟ್ಟಾಗಿ ಮಾಡಿಸಿಕೊಳ್ಳುತ್ತಿದ್ದ ಮತ್ತೊಬ್ಬ ಉಪಾಧ್ಯಾಯರು ತಮ್ಮ ತಪ್ಪನ್ನು ಒಪ್ಪಿಕೊಂಡ ಉದಾಹರಣೆಯ ಕ್ರಮವೂ ಓದತಕ್ಕದಾಗಿದೆ:–

'ಶಾಲೆಯ ಮಕ್ಕಳ ಸಂಬಳದ ಹಣವನ್ನು ಹೆತ್ತವರು ಸತ್ತರೂ ಕೊಡುವುದಿಲ್ಲ. ತಿಂಗಳು ತಿಂಗಳ ಸಂಬಳವನ್ನು ಬೋರ್ಡಿನ ಲೆಕ್ಕಕ್ಕೆ ನಾನೇ ಕೈಯಿಂದ ಕಟ್ಟಿ ನನಗೆ ಸಾಕು ಸಾಕಾಗುತ್ತದೆ. ಪಾಸುಮಾಡಲು ಪರೀಕ್ಷೆಯವರು ಬರುವ ಕಾಲದಲ್ಲಿ ಸರಬರಾಯಿ ಬೇಕೆಂದು ಕೇಳಿದರೆ, ಆಗ ಮಾತ್ರ ಮಕ್ಕಳ ಮನೆಯವರು ಬತ್ತ ಬಿಚ್ಚುತ್ತಾರೆ. ಆಫೀಸರರಿಗೆ ಸರಬರಾಯಿ ಎಂದು ನಂಬಿಸಿ ನಾನು ಅಕ್ಕಿ ತರಿಸಿಕೊಂಡದ್ದಿಲ್ಲ. ಆದರೆ ಮಕ್ಕಳು ತಾವಾಗಿ ತಂದ ಭತ್ತವನ್ನು ಅವರ ಸಂಬಳಕ್ಕಾಗಿ ವಾಡಿಕೆಯಂತೆ ನಾನು ಭರತಿ ಮಾಡಿಕೊಂಡಿದ್ದೇನೆ. ನಾನು ಬತ್ತ ತಿನ್ನುತ್ತೇನೆಂದು ಹೇಳುವುದು ನನ್ನ ಹಗೆಯವರ ಚಾಡಿ ಮಾತು.'

ಹೀಗೆಯೇ ಬೆಳ್ತಂಗಡಿಯವರೊಬ್ಬರು ಬತ್ತವನ್ನಲ್ಲ, ಮಕ್ಕಳಿಂದ ಹಣ್ಣುಕಾಯಿ, ತರಕಾರಿ, ಎಲೆ, ಅಡಕೆ ಸೆಳೆದುಕೊಳ್ಳುತ್ತಿದ್ದರೆಂದು ಪುಕಾರು ಬಂದಿತ್ತು. ಇದಕ್ಕೆ ಅವರ ಹೇಳಿಕೆ ನನ್ನ ಆಫೀಸಿನ ಹುಕುಮಿಗೆ ಒಳಪಟ್ಟೇ ಇತ್ತು, ಹೇಗೆಂದರೆ:–

'ಚಿತ್ರಲೇಖನವನ್ನು ಕಲಿಸುವಲ್ಲಿ ಉಪಾಧ್ಯಾಯರು ಮಕ್ಕಳಿಂದಲೇ ಎಲೆ, ಹೂ ಹಣ್ಣು—ಮೊದಲಾದ್ದನ್ನು ತರಿಸಿಕೊಂಡು, ಚಿತ್ರಗಳನ್ನು ತೆಗೆಯಿಸಬೇಕೆಂದು ತಮ್ಮ ಆಫೀಸ್ ನಂಬ್ರ......ನೇ ಹುಕುಮನ್ನು ಶಿರಸಾವಹಿಸಿ, ಚಿತ್ರಲೇಖನದ ಪಾಠಕ್ಕಾಗಿ ವೀಳ್ಯದ ಎಲೆ, ಬಾಳೆ ಎಲೆ, ತೆಂಗಿನಕಾಯಿ, ಬದನೆಕಾಯಿ, ಮಾವಿನಹಣ್ಣು, ಇಷ್ಟನ್ನು ಮಾತ್ರ ಮಕ್ಕಳಿಂದ ನಾನು ತರಿಸಿದ್ದುಂಟು. ಪಾಠ ಮುಗಿದ ನಂತರ ಆ ವಸ್ತುಗಳನ್ನು ಏನು ಮಾಡ ಬೇಕೆಂದು ಖಾವಂದರ ಹುಕುಮಿನಲ್ಲಿ ಹೇಳದೆ ಇದ್ದ ಪ್ರಯುಕ್ತ ಅವನ್ನು ಶಾಲೆಯ ಪಕ್ಕದ ನನ್ನ ಮನೆಯಲ್ಲಿ ಇಟ್ಟಿರುತ್ತೇನೆ. ಅವುಗಳ ದುರ್ವ್ಯಯವಾಗಲಿಲ್ಲ.'

ಇಂಥ ಹಲವು ತಪ್ಪುಗಳನ್ನು ಚಾಡಿಯ ಮಾತಿನ ಬದಲು ಮಕ್ಕಳ ಬಾಯಿಯೇ ಬಯಲಿಗೆ ತರುತ್ತಿತ್ತು. ಒಮ್ಮೆ ಬಡಗು ಬೆಟ್ಟಿನ ಶಾಲೆಯ ಮಕ್ಕಳಿಗೆ ಓದುಗಾರಿಕೆಯಲ್ಲಿ ನಾನು ಪರೀಕ್ಷೆ ಮಾಡುವ ಸಂದರ್ಭದಲ್ಲಿ 'ಹಳೆಯ ಮರವನ್ನು ಕಡಿದುಹಾಕಬೇಡ' ಎಂಬ ಪಾಠವನ್ನು ಓದು ಎಂದು ಪ್ರಶ್ನೆ ಮಾಡಿದೆ. ಅದಕ್ಕೆ ಹುಡುಗರು ಓದದೆ, ಮಾಸ್ತರರ ಮುಖವನ್ನು ಮಿಟಮಿಟನೆ ನೋಡುತ್ತಾ ನಿಂತರು. ಓದಲಿಕ್ಕೆ ಬರುವುದಿಲ್ಲವೇ ಎಂದು ನಾನು ಒತ್ತಿ ಕೇಳಿದೆನು. 'ಆ ಪಾಠ ಎಂದರೆ ಮಾಸ್ತರರಿಗೆ ಸಿಟ್ಟು' ಎಂಬುದಾಗಿ ಚಿಕ್ಕ ಹುಡುಗನೊಬ್ಬನು ಉಸುರಿ 'ಅದನ್ನು ಯಾರೂ ಓದಬಾರದೆಂದು ಹೇಳುತ್ತಾರೆ' ಎಂದು ಮುಂದೆ ಬಂದು ಹೆದರದೆ ಪಾಠವನ್ನು ಓದಿ ಒಪ್ಪಿಸಿಬಿಟ್ಟನು. ಈ ಸಂಗತಿಯನ್ನು ಕುರಿತು ಮತ್ತೆ ವಿಚಾರಿಸಿದ್ದಲ್ಲಿ ಒಂದು ಹಳೆಯ ಮರ ಕಡಿದು ಹಾಕಿದ ನಂಬ್ರದಲ್ಲಿ ಉಪಾಧ್ಯಾಯರು ಜಂಗ್ಲಿಯವರಿಗೆ 10 ರೂಪಾಯಿ ಜುರುಮಾನೆ ಕೊಡಬೇಕಾಯಿತೆಂಬುದು ನನಗೆ ಗೊತ್ತಾಯಿತು.

ಇದರಂತೆ ಮರ್ಕಂಜೆ ಶಾಲೆಯಲ್ಲಿ ಗುಬ್ಬಿಯ ಕಥೆ ಹೇಳು ಎಂದು ನಾನು ಕೊಟ್ಟ ಪ್ರಶ್ನೆಯನ್ನು ಕೇಳಿ' ಕ್ಲಾಸಿನ ಮಕ್ಕಳು ನಗುವಿನಿಂದ ತಾರಾಮಾರೂ ಮಾಡಿದರೆಂಬುದಾಗಿಯೂ ಅಂದು ಶಾಲೆಗೆ ಬಂದಿದ್ದ ಹಳ್ಳಿಯ ಮುಖಂಡ ಮನುಷ್ಯರಿಬ್ಬರೂ ಹೊಟ್ಟೆ ತುಂಬ ನಗಲು ಹೊರಕ್ಕೆ ಹೋದರೆಂಬುದಾಗಿಯೂ ನನ್ನ ನೆನಪು.

ಪ್ರಶ್ನೆಯಿಂದ ಮಾಸ್ತರರು ಮನಸ್ಸಿನಲ್ಲಿ ನೊಂದಂತೆ ನಿಂತುಕೊಂಡರು. ನಾನು ಗುಬ್ಬಿಯ ಕಥೆ ಬಿಟ್ಟು ಮತ್ತೊಂದು ಕಥೆ ಕೇಳಿ ಪರೀಕ್ಷೆಯನ್ನು ಮುಂದುವರಿಸಿದೆ. ಇದರ ಆರು ತಿಂಗಳ ಹಿಂದೆ ಶಾಲೆಯ ಬಳಿಯ ಗುಬ್ಬಿ ಹೆಂಗಸಿನ ಸಂಭ್ರದಲ್ಲಿ ಯಾರೋ ಯಾರೋ ಸೇರಿದ್ದರೆಂಬ ಪೂರ್ವ ಕಥೆಯೊಂದನ್ನು ಮಾಸ್ತರರು ನನ್ನ ಕಿವಿಗೆ ಮತ್ತೆ ಹಾಕಿದರು.

ಪೇಜಾವರ ದಾವಿದ ಮತ್ತು ಜನ್ನಪ್ಪ ಮಾಸ್ತರರ ಸಂಗತಿಯೊಂದು ಅಪೂರ್ವ ರೀತಿಯಿಂದ ಹೊರ ಬಿದ್ದದ್ದು ಹುಡುಗರ ಬಾಯಿಪಾಠದ ಪರೀಕ್ಷೆಯಲ್ಲಿ.

ಆ ಶಾಲೆಯಲ್ಲಿ ಅವರಿಬ್ಬರಲ್ಲದೆ ರಾಘವನೆಂಬ ಮೂರನೆಯ ಮಾಸ್ತರರು ಇದ್ದರು. ದಾವಿದ ಮತ್ತು ಜನ್ನಪ್ಪ ಇವರ ನಡತೆಯ ವಿಷಯವಾಗಿ ಮೊದಲು ನನಗೊಂದೂ ಗೊತ್ತಿರಲಿಲ್ಲ. ಆದರೆ ರಾಘವ ಮಾತ್ರ ಇವರಿಬ್ಬರ ಮಧ್ಯಸ್ಥನಾಗಿದ್ದು ಶಾಲೆಯ ಮರ್ಯಾದೆಯನ್ನು ಕಾಪಾಡುತ್ತಿದ್ದನು. ನಾನು ಬಂದ ದಿನ ಬಾಯಿಪಾಠದಲ್ಲಿ ಪರೀಕ್ಷೆ. ಹುಡುಗರು ನಳಚರಿತ್ರೆಯ ಒಂದೊಂದೇ ಪದ್ಯವನ್ನು ಒಬ್ಬೊಬ್ಬರೇ ಕ್ರಮವಾಗಿ ಹಾಡುತ್ತಾ ಬಂದರು. ಸುಮಾರು ಐದು ಪದ್ಯಗಳು ಮುಗಿಯುತ್ತಲೇ ಜನ್ನಪ್ಪ ಮಾಸ್ತರರು 'ಮುಂದೆ ಮಕ್ಕಳಿಗೆ ಗೊತ್ತಿಲ್ಲ, ಸೆರ್!' ಎಂದರು. ಆಗ ಒಬ್ಬ ಹುಡುಗನು ಮುಂದೆ ಬಂದು 'ನನಗೆ ಗೊತ್ತಿದೆ, ನಾನು ಹೇಳುತ್ತೇನೆ ಸಾರ್' ಎಂದು ಹೇಳಿ ಹೀಗೆ ಮುಗಿಸಿದನು.

'ಜನಪನಾ ದಾವಿದನ ಮರು ಜೂ
'ಜಿನಲಿ ಗೆಲ್ದನು ಧರೆಯನಾಳ್ದನು
'ಜನಪ ಸರಿಮುಗಿಲೆನಿಸಿ ರಾಘವ ಕೇಳು ಪೂರ್ವದಲಿ॥

ಶಾಲೆಯ ಮೂಡುಕಡೆ ಒಂದು ಅಂಗಡಿಯಲ್ಲಿ ಜನಪ ದಾವಿದರು ಯಾವಾಗಲೂ ಜುಗಾರಾಡುತ್ತಿದ್ದರೆಂದೂ ಇತ್ತಲಾಗೆ ಜನಪ ಮಾಸ್ತರನು ಸರಿಮುಗಿಲು ಆಡಿ ದಾವಿದನನ್ನು ಸೋಲಿಸಿದನೆಂದೂ ರಾಘವ ಮಾಸ್ತರರು ಕೇಳಿದ್ದ ಸಂಗತಿಯು ಮಕ್ಕಳು ಉರುಹಾಕಿದ್ದ ಪದ್ಯದಿಂದ ನನಗೂ ತಿಳಿದು ಬಂತು.

ಹೀಗೆ ಮಕ್ಕಳು ಮಾಸ್ತರರ ಗುಟ್ಟನ್ನು ತಿಳಿಯದೆ ಬಯಲಿಗೆ ತರುವ ಹಾಗೆ ನಮ್ಮ ವಿಷಯವಾಗಿಯೂ ಹೇಳಬಾರದ ಸಂಗತಿಗಳನ್ನು ಹೊರಗೆಡವಿದ್ದು ಉಂಟು. ಸಿವಿಕ್ಸ್ ಎಂಬ ಹೊಸ ಪಾಠವು ಮಕ್ಕಳ ತಲೆಮೀರಿದ ವಿಷಯ; ಆದರೂ ಮಕ್ಕಳು ಆ ವಿಷಯದಲ್ಲಿ ಕೊಟ್ಟ ಉತ್ತರಗಳು ನನಗಂತೂ ಸಮರ್ಪಕವಾಗಿ ತೋರುತ್ತಿದ್ದವು.

ಬಿಳಿಯೂರ ಶಾಲೆ ಗುಡ್ಡದ ಮೇಲೆ, ಅಲ್ಲಿ ಬಿಸಿಲಿಗೆ ಏರಿ ಹೋದರೆ ಬಾಯಾರಿ ಹೊಟ್ಟೆ ಹಸಿದು ದಣಿವಾಗುತ್ತದೆಂಬುದನ್ನು ಲಕ್ಷ್ಯದಲ್ಲಿಟ್ಟು ಕೆಳಗಿನ ಮಾತುಗಳನ್ನು ಓದಬೇಕು.

ಪ್ರಶ್ನೆ:—'ಸುಪರ್‌ವಾಯ್ಸರ ಕೆಲಸಗಳೇನು?'

ಉತ್ತರ:—'ಮಧ್ಯಾಹ್ನ ಬಂದರೆ ನಿದ್ದೆಮಾಡುವುದು, ಬೆಳಗ್ಗೆ ಬಂದರೆ ಅಡಿಗೆ ನೋಡುವುದು.'

ಪ್ರಶ್ನೆ:—'ಸಬ್ ಎಸಿಸ್ಟಾಂಟರ ಕೆಲಸವೇನು?'

ಉತ್ತರ:—'ಶಾಲೆಗೆ ಬಂದ ಕೂಡಲೇ ಎಳನೀರು ಕುಡಿಯುವುದು, ಬೋರ್ಡ್ ಉಜ್ಜುವುದು; ಸಂಜೆ ಸಿಗರೇಟ್ ಸೇದುವುದು.'

ಬೋರ್ಡ್ ಎಂದ ಕೂಡಲೇ ನಮ್ಮ ಸ್ನೇಹಿತ ತಿಮ್ಮಪ್ಪ ಮಾಸ್ತರರ ಹೆಸರು ನನ್ನ ನೆನಪಿಗೆ ಬರುತ್ತದೆ. ತಿಮ್ಮಪ್ಪ ಮಾಸ್ತರರ ಶಾಲೆ ಪುತ್ತೂರಲ್ಲಿ, ಮನೆ ಬಾಯಾರಲ್ಲಿ; ಹಾಜರಿ ಶಾಲೆಯಲ್ಲಿ, ಕೆಲಸ ಎಲ್ಲರ ಮನೆಗಳಲ್ಲಿ. ಅವರು ಶಾಲೆಯ ಕೆಲಸ ಒಂದು ಹೊರತು ಮಿಕ್ಕ ಎಲ್ಲಾ ಕೆಲಸವನ್ನೂ ಸರಿಯಾಗಿ ಚೆನ್ನಾಗಿ ಮಾಡುತ್ತಿದ್ದರು. ಚಿಪ್ಪಾರು ಅರಮನೆ ಸಂಕಯ್ಯ ಹೆಗ್ಗಡೆಗೆ ಬೆನ್ನುಪಣಿಯಾದರೆ ಹರೆಕಳ ಬೈದ್ಯರನ್ನು ಕರಕೊಂಡು ಬರಲಿಕ್ಕೆ ಓಡಬೇಕು ತಿಮ್ಮಪ್ಪ ಮಾಸ್ತರರು. ಕುಲಗುಂದ ಸಂತೆಯ ಕೋಣನ ಜೋಡಿ ಬಿದರೆ ಕಂಬಳಕ್ಕೆ ತರಬೇಕಾದರೆ ಹಲ್ಲನ್ನೆಣಿಸಿ ಪ್ರಾಯ ಪರೀಕ್ಷೆ ಮಾಡಬೇಕು—ತಿಮ್ಮಪ್ಪ ಮಾಸ್ತರರು. ಮರ್ದಾಳು ಬೀಡಿನ ಅನಂತಮತಿಗೆ ಮದುವೆಯಾದರೆ ಬಂದವರಿಗೆ ಎಳನೀರು ಅವಲಕ್ಕಿ ಕೊಡಲಿಕ್ಕೆ ತಿಮ್ಮಪ್ಪ ಮಾಸ್ತರರು. ಕಾರಂಜೆ ಜಾತ್ರೆಯಲ್ಲಿ ಪಾದೆಕಲ್ಲಿನ ನೆತ್ತಿಯಮೇಲೆ ನಿಂತುಕೊಂಡು 'ಓ ಕೋಟಿ ಓ ದೂಮ!' ಎಂದು ಇರುಳೆಲ್ಲ ಕೂಗಿ ಕರೆಯಲಿಕ್ಕೆ ತಿಮ್ಮಪ್ಪ ಮಾಸ್ತರು. ಉಮ್ಮಬ್ಬ ಬ್ಯಾರಿಗೆ ಚೊಕ್ಕಾಡಿ ಭಟ್ಟರ ಅಡಿಕೆ ತೋಟವನ್ನು ದಸ್ತೇವಜು ಇಲ್ಲದೆ ವಾಯಿದೆ ಗೇಣಿಗೆ ಬಾಯ್ದೆರೆ ಮಾತಿನಿಂದ ಕೊಡಿಸಲಿಕ್ಕೆ ತಿಮ್ಮಪ್ಪ ಮಾಸ್ತರು. ಪೇರಾರು ಗುತ್ತಿನ ಯಜಮಾನರ ಮೇಲೆ ಕತ್ತಿ ಕಟ್ಟಿದ ಅಳಿಯಂದಿರನ್ನು ಬೆನ್ನು ತಟ್ಟಿ ಒಡಂಬಡಿಸಲಿಕ್ಕೆ ತಿಮ್ಮಪ್ಪ ಮಾಸ್ತರು. ದಾಸಣ್ಣ ಭಾಗವತರ ಕುಂಬಳೆ ಸೀಮೆಯ ತಾಳಮದ್ದಳೆಯ ಗದ್ದಲದಲ್ಲಿ ಆಫೀಸ್ ಜನರು ಸೈಸೈಯೆಂದು ಮೆಚ್ಚುವ ಹಾಗೆ ಗುಂಡನ ಎದುರು ಕರ್ಣನ ಅರ್ಥವಿಸ್ತರಣೆಗೆ ಕೂತುಕೊಳ್ಳಬೇಕು ತಿಮ್ಮಪ್ಪ ಮಾಸ್ತರು. ಹೀಗೆ ತಿಮ್ಮಪ್ಪ ಮಾಸ್ತರನ್ನು ಮನೆಗೆ ಹುಡುಕಿಕೊಂಡು ಬರುವ ಜನರಿಂದ ಅವರಿಗೆ ಶಾಲೆಯಲ್ಲಿ ಕೂತುಕೊಳ್ಳುವುದಕ್ಕೆ ಪುರುಸತ್ತೇ ಇರಲಿಲ್ಲ. ಆದರೂ ಇವರ ಮೇಲೆ ಪುಕಾರು ಇಲ್ಲ, ಫಿರ್ಯಾದು ಇಲ್ಲ. ಇವರು ತರಬೇತಾಗದ ಉಪಾಧ್ಯಾಯರು, ಕಲಿಸುವುದು ಕಡಮೆ, ಕ್ರಮ ತಪ್ಪು ಎಂದು ಕಂಡಾಬಟ್ಟೆ ಯಾರೂ ಹೇಳಿದ್ದಿಲ್ಲ. ಮಕ್ಕಳು ಕಲಿಯುವ ವಿಷಯಗಳು, ಎಂದರೆ ಓದುಬರೆಹ, ಲೆಕ್ಕ, ಇವಿಷ್ಟು ಅವರಿಗೆ ಚೆನ್ನಾಗಿ ಬರುತ್ತಿತ್ತು.

ಒಂದು ದಿನ ಈ ಶಾಲೆಯಲ್ಲಿ ನಾನು ಪರೀಕ್ಷೆಯ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಲಿಕ್ಕೆಂದು 'ಮಾಸ್ತರೇ! ಬೋರ್ಡು ಇದೆಯೇ' ಎಂದು ವಿಚಾರಿಸಿದೆ.

ಮಾಸ್ತರ್:—'ಇದೆ ಸ್ವಾಮಿ! ತಮ್ಮ ಬೆನ್ನ ಹಿಂದೆ—'

ನಾನು ಹಲಗೆಯ ಹತ್ತಿರ ನಿಂತು ಹುಡುಕುತ್ತಾ 'ಬರೆಯಲಿಕ್ಕೆ ಚಾಕು ತುಂಡು ಎಲ್ಲಿ?' ಎಂದು ಕೇಳಿದೆ.

ಮಾಸ್ತರ್:—'ಚಾಕ್ ತುಂಡು ಇಡಲಿಲ್ಲ ಬುದ್ಧಿ!'

ನಾನು:—'ಚಾಕ್ ಇಲ್ಲದೆ ಬೋರ್ಡ್ ಯಾಕಯ್ಯಾ? ನಿಮ್ಮ ಶಾಲೆ ಹ್ಯಾಗೆ 'ರೆಕಗ್‌ನ್ಯಾಸ್' ಆಯಿತು?'

ಮಾಸ್ತರ್:—'ಶಾಲೆ ರಿಕೊಗ್‌ಶನ್ ಆಗಬೇಕಾದರೆ ಬೋರ್ಡು ಇಟ್ಟಿರಬೇಕೆಂದು ಅಪ್ಪಣೆಯಿತ್ತು. ಅಪ್ಪಣೆ ಮೇರೆಗೆ ಬೋರ್ಡು ಮಾಡಿಸಿ ಶಾಲೆ ರೆಕೊಗ್‌ಶನ್ ಆಯಿತು. ಚಾಕ್ ಇಟ್ಟಿರಬೇಕೆಂದು ಹುಕುಂ ಇರಲಿಲ್ಲ.'

ಹೀಗೆ ಹೇಳಿ ಮಾಸ್ತರರು ಶಾಲೆಯಲ್ಲಿ ನಿಲ್ಲದೆ ಕೆಳಗಿನ ಮನೆಗೆ ಓಡಿಹೋಗಿ, ಒಂದು ಜೇಡಿ ಹೆಟ್ಟೆ ಹಿಡಿದುಕೊಂಡು ಬಂದರು. ಈ ಮರಳು ಜೇಡಿಯಿಂದ ನಾನು ಹೇಗೋ ಮಾಡಿ ನಾಲ್ಕು ಪಂಕ್ತಿ ಸವಾಲನ್ನು ಬೋರ್ಡಿನ ಮೇಲೆ ಕೆರೆದುಬಿಟ್ಟೆ. ಅದು ಅವಲ್‌ತರದ ಜೇಡಿಯೆಂದು ನನ್ನ ಊಹೆ. ಏಕೆಂದರೆ, ಮರುವರ್ಷ ನಾನು ಅದೇ ಶಾಲೆಗೆ ಹೋಗಿದ್ದಾಗ ಬೋರ್ಡಿನ ಸವಾಲು ಬೋರ್ಡಿನ ಮೇಲೆಯೇ ಉಳಿದಿತ್ತು. ಆದರೆ ಈ ಅವಧಿಯಲ್ಲಿ ಮಾಸ್ತರರ ಎಡಗಣ್ಣೊಂದು ಮಾತ್ರ ಕುರುಡಾಗಿತ್ತು. ಅದರ ಸಂಗತಿ ಅವರ ಮಾತಿನಲ್ಲಿ ಹೇಳೋಣ!

'ಸ್ವಾಮಿ, ಒಂದು ದಿನ ಸುಪರ್‌ವಾಯ್ಸರು ಶಾಲೆಗೆ ಬಂದು, ಮಕ್ಕಳಿಗೆ ಒಂದು ಪಾಠ ಮಾಡಿ ಎಂದು ನನಗೆ ಅಪ್ಪಣೆ ಮಾಡಿದರು. 'ಡೊಂಬರ ಚೆನ್ನೆಯ ಪಾಠ'—ಅದು ತಮ್ಮ ಕವನವಂತೆ; ಆ ಪಾಠ ಕಲಿಸುವಾಗ 'ಬೇಗ ತಿರ್‍ರನೆ ತಿರುಗಿ ಸರ್‍ರನೆ ಲಾಗ ಹಾಕಿದ ಡೊಂಬನು' ಎಂಬ ಚರಣ ಬಂತು. ಅದರ ಅರ್ಥ ಮಕ್ಕಳಿಗೆ ಹತ್ತಲಿಲ್ಲ. ಆಗ ನಾನೇ ಡೊಂಬನಾದೆ, ಲಾಗ ಹಾಕಿ ತೋರಿಸಿದೆ. ಹೊಡೆದ ಲಾಗಕ್ಕೆ ಕೈ ತಪ್ಪಿ ನಾನು ನೆಲದ ಮೇಲಾದೆ; ನನ್ನ ಕಾಲು ತಾಗಿ, ಬೋರ್ಡು ಜಾರಿ ನನ್ನ ಮುಖಕ್ಕೆ ಬಂದು ಬಡಿಯಿತು. ಬೋರ್ಡಿನ ಅಂಚಿನ ಮೊನೆಯು ಪೆಟ್ಟು ಕಣ್ಣಿಗೇ ಬಿತ್ತು. ಮದ್ದು ಮಾಡಿದೆ, ಲೇಪ ಹಚ್ಚಿದೆ; ಏನು ಮಾಡಿದರೂ ಕಣ್ಣೊಂದು ಇಂಗಿ ಹೋಯಿತು!'

ಈ ವ್ಯಸನಕರವಾದ ಸ್ಥಿತಿ ನೋಡಿ ನನ್ನಲ್ಲಿ ಕನಿಕರವಾದರೂ ಮಾಸ್ತರರ ಮಾತುಗಳಲ್ಲಿ ಕೊರಗು ಇರಲಿಲ್ಲ. 'ದೇವರ ದಯೆಯಿಂದ ಒಂದು ಕಣ್ಣಾದರೂ ಉಳಿಯಿತಷ್ಟೆ. ಸ್ವಾಮಿ! ಹೋದ ವರ್ಷ,—ತಮ್ಮ ಕಣ್ಣು ಶಾಲೆ ಬೋರ್ಡಿನ ಮೇಲೆ ಬಿತ್ತು. ಈ ವರ್ಷ, ಶಾಲೆ ಬೋರ್ಡು ನನ್ನ ಕಣ್ಣ ಮೇಲೆ ಬಿತ್ತು'—ಎಂಬುದಾಗಿ ನಗುನುಡಿಯಿಂದ ಕಥೆ ಮುಗಿಸಿದರು. ತರಬೇತ್ ಆಗದ ಮಾಸ್ತರು ಖರೆ! ಆದರೆ ಅವರ ಹಸನ್ಮುಖ, ಮೃದು ನುಡಿ. ವಿಶಾಲ ಹೃದಯ, ಉದಾರ ಬುದ್ಧಿ, ಪರೋಪಕಾರ, ಶಾಂತ ಜೀವನ-ಇವನ್ನು ನಾನು ಮರೆಯುವಹಾಗಿಲ್ಲ.

ಒಂದು ವರ್ಷ ತಿಮ್ಮಪ್ಪ ಮಾಸ್ತರರ ಶಾಲೆಗೆ ಗ್ರೇಂಟ್ ಹಣವು ಸ್ವಲ್ಪ ಹೆಚ್ಚಾಗಿ ದೊರೆಯಿತು. ಆ ಕುರಿತು ಬೇರೆ ಉಪಾಧ್ಯಾಯರು ಅನೇಕರು ಬಹು ಕಾಲದ ವರೆಗೆ ತಮ್ಮೊಳಗೆ ಆಡಿಕೊಳ್ಳುತ್ತಿದ್ದ ಗೇಲಿ ಮಾತು ಗಳು ನನ್ನ ಜ್ಞಾಪಕದಲ್ಲಿವೆ. ಒಬ್ಬಿಬ್ಬರು ಆ ಸಂಗತಿಯನ್ನು ಪ್ರಾಸಬದ್ಧಗದ್ಯನಾಗಿ ಕಟ್ಟಿದ್ದು ಇಲ್ಲಿದೆ:—

'ತಿಮ್ಮನ ಶಾಲೆಯ ಸ್ಟೇಟಮೆಂಟು
'ಸುಳ್ಳೇ ಸುಳ್ಳೆಂದು ಕೇಳಿದ್ದುಂಟು!
'ಆದರೆ ಅವನಿಗೆ ಆಫಿಸ್ ನಂಟು
'ಇದ್ದುದರಿಂದ ತುಂಬಾ ಗ್ರೇಂಟು
'ಸಿಕ್ಕಿದೆ—ಐನೂರಹದಿನೆಂಟು
'ರೂಪಾಯಿ ಹಣದ ಒಂದೇ ಗಂಟು!'

ತಿಮ್ಮಪ್ಪ ಮಾಸ್ತರರ ಶಾಲೆಯು ನಿಜವಾಗಿಯೂ ಸಾಧಾರಣ ತರದ್ದು; ಇನ್ನೂರು ರೂಪಾಯಿ ಗ್ರೇಂಟ್ ಪಡೆಯುವಷ್ಟು ಅರ್ಹತೆಯುಳ್ಳದ್ದಲ್ಲ. ಮೂವರು ಮಾಸ್ತರರು ಇದ್ದು ಐವತ್ತು ಮಂದಿ ಮಕ್ಕಳುಳ್ಳ ಈ ಬಡಶಾಲೆಗೆ 518 ರೂಪಾಯಿ ಹಣವು ಯಾವ ನಿಬಂಧನೆ ಪ್ರಕಾರವಾದರೂ ದೊರೆಯತಕ್ಕದ್ದಲ್ಲ. ಮೂರು ಮಂದಿ ಉಪಾಧ್ಯಾಯರಿಗೆ 3×36 ಅಂದರೆ 108 ರೂಪಾಯಿ, ಮತ್ತು 50 ಮಂದಿ ಹುಡುಗರಿಗೆ ತಲಾ ಒಂದರಂತೆ 50 ರೂಪಾಯಿ, ಹೀಗೆ ಜುಮ್ಲಾ 158 ರೂಪಾಯಿ ಎಂದು ಸರಕಾರಿ ಲೆಕ್ಕ. ಈ 158 ಎಂಬ ಸಂಖ್ಯೆಯು 518 ಆದ ಅಂಕಪಲ್ಲಟಕ್ಕೋ ಆಗಮಾದೇಶಗಳಿಗೋ ವಿಧಿ ಯಾವುದು? ಗಾಣದ ಎತ್ತಿನಂತೆ ಶಾಲೆಯ ಕೆಲಸದಲ್ಲೇ ಸುತ್ತುತ್ತಿರುವ ಇತರ ಹಳ್ಳಿಯ ಉಪಾಧ್ಯಾಯರಿಗೆ ಎಟುಕದ ಸಹಸ್ರಾರ್ಧ ರೂಪಾಯಿ ಹಣದ ಗಂಟು ಬಿಟ್ಟೀಬಸವಯ್ಯನಂತೆ ಬರಿಯ ಗ್ರಾಮಸೇವೆಯನ್ನೇ ಮಾಡುತ್ತಿದ್ದ ತಿಮ್ಮಪ್ಪ ಮಾಸ್ತರನ ಕೈಗೆ ಕೇಳದೆ ಬಂದು ಬೀಳುವುದಕ್ಕೆ ಕಾರಣವೇನು? ಇದು ಆಫೀಸಿನ ಗುಮಾಸ್ತರು ತಿಳಿದು ಮಾಡಿದ ಕೈತಪ್ಪಿನ ಪ್ರಸಾದವೋ? ಸಬ್ ಎಸಿಸ್ಟಾಂಟರು ತಿಮ್ಮಪ್ಪನ ಮುಖ ನೋಡಿ ಮಾಡಿದ ಸುಳ್ಳು ಶಿಫಾರಸ್ಸಿನ ಪ್ರಯೋಜನವೋ? ಇಲ್ಲವೆ ಮೇಲಿನ ಆಫೀಸಿನಲ್ಲಿ ಗುಟ್ಟಾಗಿ ಮಾಡಿದ ಕೂರ್ಮಾಟದ ಫಲವೋ? ಇದು

ಯಾವುದೊಂದೂ ಕಾರಣವಲ್ಲ; ಏಕೆಂದರೆ ದೊಡ್ಡ ದೊರೆಗಳೇ ಸ್ವತಃ ಶಾಲೆಯನ್ನು ಸಂದರ್ಶಿಸಿ, 518 ರೂಪಾಯಿ ಗ್ರೇಂಟ್ ಕೊಡಲಾದೀತೆಂದು ಸ್ವಹಸ್ತಾಕ್ಷರದ ಪ್ರತ್ಯೇಕ ಹುಕುಮನ್ನು ಕೊಟ್ಟಿದ್ದರು ಹೆಚ್ಚಿನ ಹಣವು ದೊರಕಿದ ರಹಸ್ಯವು ಇತರ ಉಪಾಧ್ಯಾಯರಂತೆ ನನಗೂ ಕೆಲವು ತಿಂಗಳುಗಳ ವರೆಗೆ ಬಗೆಹರಿಯದಾಯಿತು.

ಹೀಗಿರಲು ಒಂದು ವರ್ಷದ ತರುವಾಯ ದೊಡ್ಡ ದೊರೆಗಳು ನಮ್ಮಲ್ಲಿ ಚಿತ್ತಯಿಸಿದಾಗ, ಹಳ್ಳಿಯ ಶಾಲೆಗಳ ಮಾತುಕಥೆಯಲ್ಲಿ ಈ ಶಾಲೆಯ ಗ್ರೇಂಟಿನ ಹಣದ ಸಂಗತಿ ಹೊರಕ್ಕೆ ಬಿತ್ತು; ದೊರೆಗಳಿಗೆ ತಿಮ್ಮಪ್ಪ ಮಾಸ್ತರರ ಮೇಲೆ ವಾತ್ಸಲ್ಯವಿತ್ತೆಂಬುದೂ ಗೊತ್ತಾಯಿತು. ಅವರು ತಿಮಪ್ ಎಂದು ಹೇಳದೆ ದಿ. ಮಫ್ (ಮಫ್ ಎಂದರೆ ಇಂಗ್ಲೀಷಿನಲ್ಲಿ ದಡ್ಡ, ಹುಂಬ ಎಂದರ್ಥ) ಎಂಬ ಸಲುಗೆ ಹೆಸರನ್ನು ಇಟ್ಟಿದ್ದರು. ಅವರು ಅಂದು ಇಂಗ್ಲೀಷಿನಲ್ಲಿ ಹೇಳಿದ ನಾಲ್ಕು ವಾಕ್ಯಗಳ ಕನ್ನಡ ಅನುವಾದವು ಇಲ್ಲಿ ಕೊಟ್ಟಿದೆ:

'ತಿ. ಮಫ್ ಇವರು ಕನ್ನಡ ಜಿಲ್ಲೆಯ ಹಳ್ಳಿಗೆ ಸೇರಿದ ಉಪಾಧ್ಯಾಯರು. ಇವರು ಉದಾರ ಮನಸ್ಕರು. ತಾನು ಬ್ರಾಹ್ಮಣನೆಂಬುದನ್ನು ಲಕ್ಷಿಸದೆ, ವಿದ್ಯೆಯಲ್ಲಿ ಹಿಂದುಳಿದ ತನ್ನ ಗ್ರಾಮದ ಕಪ್ಪು ಜನರನ್ನು (ಹೊಲೆಯರನ್ನು) ಮುಂದಕ್ಕೆ ತರಲು ಪ್ರಯತ್ನ ಮಾಡುವವರು. ಇವರ ಸಹಾಯಕ ಉಪಾಧ್ಯಾಯರಿಬ್ಬರೂ ಕಪ್ಪು, ಶಾಲೆಯ ಮಕ್ಕಳಲ್ಲಿ ಹಲವರು ಕಪ್ಪು. ಇದನ್ನೆಲ್ಲಾ ನಾನು ಸ್ವತಃ ಕಂಡಿರುವುದರಿಂದ ಈ ಶಾಲೆಯ ಗ್ರೇಂಟ್ ಹಣವನ್ನು ಈ ಮೂಲಕ ಹೆಚ್ಚಿಸಿರುತ್ತೇನೆ.'

ಇದನ್ನು ಕೇಳಿ ನಾನು ದೊರೆಗಳ ಹತ್ತಿರ 'ತಾವು ಸಂದರ್ಶಿಸಿದಾಗ ಶಾಲೆಯಲ್ಲಿ ಸಹಾಯಕ ಉಪಾಧ್ಯಾಯರು ಇದ್ದರೆ?' ಎಂದು ವಿನಯಪೂರ್ವಕವಾಗಿ ಕೇಳಿದೆ.

ದೊರೆ:—"ಹೌದು, ಇಬ್ಬರು ಕಪ್ಪು; ಒಬ್ಬ ಕುಕ್ಕಪ್ಪು; ಮತ್ತೊಬ್ಬ ಚಿಕ್ಕಪ್ಪು."

ನಾನು:—"ಪಂಚಮ ಹುಡುಗರು ಆ ಶಾಲೆಯಲ್ಲಿ ಇದ್ದರೇ?"

ದೊರೆ:—"ಸಂಕಪ್ಪು, ಲಕ್ಕಪ್ಪು, ಎಂಕಪ್ಪು, ಲೋಕಪ್ಪು, ವಿನಾಯಕಪ್ಪು, ಈ ಹುಡುಗರೆಲ್ಲ ಕಪು . ಹೊಲೆಯರ ಕಪ್ಪು ಹುಡುಗರನ್ನು ಸೇರಿಸಿಕೊಂಡ ಮೊದಲನೇ ಶಾಲೆ ಇದು; ಆದ್ದರಿಂದ ನಾನೇ ಗ್ರೇಂಟ್ ಹಣವನು ಹೆಚ್ಚಿಸಿರುತ್ತೇನೆ."

ನಾನು "ಅಲ್ಪವಿದ್ಯಾ ಮಹಾದಾನಿ! ತಿಮ್ಮಪ್ಪ ಬಹು ಪುಣ್ಯವಾನ್!" ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ.

ಈ ಮಾಸ್ತರರು ಮಾತ್ರ ಈ ಹೆಚ್ಚಿನ ಹಣದಿಂದ ತಮ್ಮ ಶಾಲೆಯ ಮುರುಕು ಕಟ್ಟಡವನ್ನು ದುರಸ್ತು ಮಾಡಿಸಲಿಲ್ಲ; ಬೇಕಾದ ಸಾಹಿತ್ಯ ಸಾಮುಗ್ರಿಗಳನ್ನು ಶಾಲೆಗಾಗಿ ಒದಗಿಸಿಕೊಳ್ಳಲಿಲ್ಲ; ಹಣವನ್ನು ತನ್ನ ಸಹಾಯಕ ಉಪಾಧ್ಯಾಯರಿಗೆ ಹಂಚಿ ಕೊಡಲೂ ಇಲ್ಲ. 'ಹತ್ತು ಜನರಿಗೆ ಬೇಕಾಗುವ ಹಳ್ಳಿಯಲ್ಲಿ ಹಾಳು ಬಿದ್ದಿರುವ ಕೆರೆಗೆ ಕಲ್ಲು ಕಟ್ಟಿಸುವುದಕ್ಕೆ ನೀವು ಏಕೆ ಹಣ ಖರ್ಚು ಮಾಡಿದಿರಿ?' ಎಂದು ಉಪಾಧ್ಯಾಯರೊಬ್ಬರು ತಿಮ್ಮಪ್ಪನವರಿಗೆ ಹಾಕಿದ ಪ್ರಶ್ನೆಗೆ, 'ಕೆರೆಯ ನೀರನು ಕೆರೆಗೆ ಚೆಲ್ಲಿರೊ' ಎಂಬ ಪಲ್ಲವಿಯ ಹಾಡೇ ತಿಮ್ಮಪ್ಪ ಮಾಸ್ತರರ ಉತ್ತರವಾಗಿತ್ತಂತೆ!

ತಿಮ್ಮಪ್ಪ ಮಾಸ್ತರರಿಗೆ ನಮ್ಮ ದೊರೆಗಳು ತಿ. ಮಫ್ ಎಂದಿಟ್ಟ ಸಲುಗೆಯ ಹೆಸರು ನಮ್ಮ ಬಾಯೊಳಗೆ ಮಾತ್ರವೇ ಹೊರತು ನಮ್ಮ ಹೊರಗೆ ಪ್ರಚಾರವಾಗಲಿಲ್ಲ. ತಿಮ್ಮಪ್ಪ ಮಾಸ್ತರರ ಹಾಗೆಯೇ ಇನ್ನಿಬ್ಬರು

ಉಪಾಧ್ಯಾಯರು ಇದ್ದರು; ಒಬ್ಬರು ನೆಟ್ಟ ಶಾಲೆಯಲ್ಲಿ, ಇನ್ನೊಬ್ಬರು ವಿಟ್ಲ ಶಾಲೆಯಲ್ಲಿ. ಒಬ್ಬರ ಎಡಗಣ್ಣು ಹೊಟ್ಟು. ಮತ್ತೊಬ್ಬರ ಬಲಗಣ್ಣು ಕುರುಡು. ಇವರಿಬ್ಬರನ್ನು ಅಡ್ಡ ಹೆಸರುಗಳಿಂದಲೇ ಕರೆಯುವುದು ಏಕಕ್ಕೋ ಪಾಡಿಕೆಯಾಗಿತ್ತು. ಶುಕ್ರಾಚಾರಿ ಎಂದರೆ ನೆಟ್ಲದವರಂತೆ, ಡೆಸಿಮಲ್ ಒಂದು (.1) ಎಂದರೆ ವಿಟ್ಲದವರಂತೆ; ಆದರೆ ತಿಮ್ಮಪ್ಪ ಮಾಸ್ತರರು, ಮಾತ್ರ ಹೀಗೆ 'ಬಿರುದಂಕಿತರಾಗಿ' ಇರಲಿಲ್ಲ. 'ಬಿರುದಂಕಿತಗಳು' ಅಡ್ಡ ಹೆಸರುಗಳೆಂದೂ ದೊಡ್ಡ ಹೆಸರುಗಳೆಂದೂ ಎರಡು ತೆರನಾಗಿವೆ. ರಾಯ ಬಹದ್ದೂರ್ ಮೊದಲಾದುವು ದೊಡ್ಡ ಹೆಸರುಗಳು, ತಿಮೂರ್, ಲಂಗಡ ಮೊದಲಾದುವು ಅಡ್ಡ ಹೆಸರುಗಳು. ದೊಡ್ಡ ಹೆಸರುಗಳು ನಮ್ಮ ನಮ್ಮ ಲೋಕೋತ್ತರವಾದ ಕಾರ್ಯಗಳ ಇಲ್ಲವೆ ಜ್ಞಾನವಿಜ್ಞಾನ ಶೋಧಗಳ ಮಹತ್ವವನ್ನು ಸರಕಾರವು ಲಕ್ಷಿಸಿ, ನಮಗೆ ದಯಪಾಲಿಸುವ ಮೆಚ್ಚುಗೆಯ ಬಿರುದುಗಳು. ಅಡ್ಡ ಹೆಸರುಗಳು ನಮ್ಮ ನಮ್ಮ ಅಂಗವೈಕಲ್ಯವನ್ನೋ, ಕಾರ್ಯಸ್ಖಾಲಿತ್ಯವನ್ನೋ ಕಂಡು, ಸಾಮಾನ್ಯ ಜನರು ವಿನೋದಾತ್ಮಕವಾಗಿ ಅಲಂಕಾರ ರೂಪದಲ್ಲಿ ಹೇಳಿದ ಉಪಮಾನಗಳು. ದೊಡ್ಡ ಹೆಸರುಗಳು ಮಕ್ಕಳ ಬರಹ ಪುಸ್ತಕದ ಮೇಲ್ಪಂತಿಯಂತೆ ಒಂದೇ ತೆರ; ಅಡ್ಡ ಹೆಸರುಗಳು ಮಕ್ಕಳು ಕೇಳುವ ಪ್ರಶ್ನೆಗಳಂತೆ ವಿವಿಧವಾಗಿವೆ. ದಂತವಕ್ರ ಸೆಟ್ಟಿ, ಲಂಬೋದರ ರಾಯರು, ಘಂಟೆ ಹನುಮಂತಯ್ಯ ಮಾಸ್ತರರು, ಇತ್ಯಾದಿ ಅಡ್ಡ ಹೆಸರುಗಳನ್ನು ಕಲ್ಪಿಸಿದವರಲ್ಲಿ ಕಾವ್ಯದೃಷ್ಟಿ ಇದೆ. ದೊಡ್ಡ ಹೆಸರುಗಳು ಸೀಮೆ ಬಟ್ಟೆಯ ಕೆಂಬಣ್ಣದಂತೆ ಅವನ್ನು ಧರಿಸಿಕೊಂಡವರ ಜೀವಮಾನ ಪರ್ಯಂತರ ಮಾತ್ರ ಶೋಭಿಸಿದ್ದು, ಜೀರ್ಣ ವಸನಸ್ಥಿತಿಯಲ್ಲಿ ಬಿಟ್ಟು ಹೋಗುತ್ತವೆ. ಅಡ್ಡ ಹೆಸರು ಹಾಗಲ್ಲ; ಒಂದು ಸಲ ಒಬ್ಬನ ಬೆನ್ನು ಹಿಡಿಯಿತೆಂದರೆ, ಬ್ರಹ್ಮಕಪಾಲದಂತೆ ಬಿಟ್ಟು ಹೋಗುವುದು ಸ್ವಲ್ಪ ಕಷ್ಟ. ಇದಕ್ಕೆ ನಮ್ಮ ಕದನೆಬಾಯಿಯ ಹಳ್ಳಿಶಾಲೆಯ ಮಾಸ್ತರರೇ ಸಾಕ್ಷಿ.

ಕದನೆಬಾಯಿ ಶಾಲೆಯ ಮಾಸ್ತರರ ಹೆಸರು ಕೂಡ ತಿಮ್ಮಪ್ಪ, ಆದರೆ ಅವರನ್ನು ಆ ಹೆಸರಿಂದ ಕರೆಯುವುದು ತೀರ ಅಪರೂಪವಾಗಿತ್ತು. ಅವರ ವಿಷಯವಾಗಿ ಮಾತಾಡುವಾಗ ಅವರ ಅಡ್ಡ ಹೆಸರೇ ಎಲ್ಲರ ಬಾಯಿಂದ ಬರುತ್ತಿತ್ತು. ಆ ಅಡ್ಡ ಹೆಸರು ಅವರಿಗೆ ಪ್ರಾಪ್ತವಾದ ಸಂಗತಿಯು ಹೇಳತಕ್ಕದ್ದಾಗಿದೆ.

ಕದನೆಬಾಯಿ ಶಾಲೆ ಬೋರ್ಡು ಶಾಲೆ; ತಿಮ್ಮಪ್ಪ ಒಬ್ಬರೇ ಅಲ್ಲಿಯ ಉಪಾಧ್ಯಾಯರು. ನಾನು ಡಿಕ್ಟೇಶನ್ ಪಾಠದಲ್ಲಿ ಪಠ್ಯಪುಸ್ತಕದೊಳಗಣ ವಾಕ್ಯಗಳನ್ನು ಮಕ್ಕಳಿಂದ ಹೇಳಿ ಬರೆಯಿಸುತ್ತಿರಲಿಲ್ಲ. ಮಕ್ಕಳು ತಮ್ಮ ಜತೆಯವರ ಹೆಸರುಗಳನ್ನಾಗಲೀ ಹಿರಿಯವರ ಹೆಸರುಗಳನ್ನಾಗಲೀ ತಪ್ಪಿಲ್ಲದೆ ಅಂದವಾಗಿ ಬರೆದರೆ, ನನ್ನ ಡಿಕ್ಟೇಶನ್ ಪರೀಕ್ಷೆಗೆ ಸಾಕಾಗುತ್ತಿತ್ತು. ಈ ಶಾಲೆಯ ವರ್ಷಾವಧಿ ಪರೀಕ್ಷೆಯ ದಿನ ಮಕ್ಕಳಿಗೆ "ನಿಮ್ಮ ಮಾಸ್ತರರ ಹೆಸರನ್ನು ಸ್ಲೇಟಿನ ಮೇಲೆ ಬರೆಯಿರಿ" ಎಂದು ನಾನು ಹೇಳಿದೆ. ಹನ್ನೆರಡು ಮಂದಿ ಹುಡುಗರಲ್ಲಿ ಒಬ್ಬನು ಮಾತ್ರ ಕದನೆಬಾಯಿ ತಿಮ್ಮಪ್ಪ ಎಂದು ಸ್ಲೇಟಿನ ಮೇಲೆ ಗೀಚಿದ್ದನು. ಮಿಕ್ಕವರೆಲ್ಲ ಒಂದೇ ರೀತಿಯಾಗಿ ಹೇಳಿಕೊಟ್ಟಂತೆ ಸರಿಯಾಗಿ ಬರೆದಿದ್ದರು. 'ಬದನೆಕಾಯಿ ತಿನ್ನಪ್ಪ' 'ಬದನೆಕಾಯಿ ತಿನ್ನಪ್ಪ' 'ಬದನೆಕಾಯಿ ತಿನ್ನಪ್ಪ'—ಹೀಗೆ ಹನ್ನೊಂದು ಸ್ಲೇಟುಗಳಲ್ಲಿ ಒಂದೇ ಹೆಸರು ಅಂಕಿತವಾಗಿತ್ತು. ಹುಡುಗರು ಮೊದಲೇ ಕಿವಿಯಿಂದ ಕೇಳಿ ಕಲಿತದ್ದನ್ನೇ ಹೀಗೆ ಬರೆದು ಹಾಕಿದರೋ. ಇಲ್ಲವೆ ಹಠಾತ್ತಾಗಿ ಆ ದಿನ ತಾವೇ ಕಲ್ಪಿಸಿಕೊಂಡು ಬರೆದರೋ, ನನಗೆ ಗೊತ್ತಾಗಲಿಲ್ಲ; ಆ ವಿಚಾರಕ್ಕೆ ನಾನು ಹೋಗಲೂ ಇಲ್ಲ. ಆದರೆ ಅಂದಿನಿಂದ ಆ ಮಾಸ್ತರರ ಹೆಸರು ಮಾತ್ರ ಅಸ್ತವ್ಯಸ್ತವಾಗಿ ನಿಂತುಬಿಟ್ಟಿತು. ಈ ಅಡ್ಡ ಹೆಸರಿನ ದೆಸೆಯಿಂದ ಆ ಮಾಸ್ತರರಿಗೆ ಹೋದ ಹೋದಲ್ಲಿ ಬದನೆಕಾಯಿ ಮಾತು ಬಂದು ಮಕ್ಕಳ ನಗುಬಾಯನ್ನು ಮುಚ್ಚುವುದೂ ಕ್ಲಾಸ್ ನಡಿಸುವುದೂ ಬಹಳ ದುಸ್ತರವಾಯಿತು.

ಹಳ್ಳಿಯ ಮಾಸ್ತರರಿಗೆ ಅಡ್ಡ ಹೆಸರುಗಳು ಇದ್ದಂತೆಯೇ ಶಾಲಾ ಇಲಾಖಾ ಆಫೀಸರರನ್ನು ಕುರಿತು ಕೆಲವು ಗೂಢನಾಮಗಳು ಉಪಾಧ್ಯಾಯರ ವ್ಯವಹಾರದಲ್ಲಿ ವಾಡಿಕೆಯಾಗಿದ್ದುವು. ಉಪಾಧ್ಯಾಯರು ಜಿಲ್ಲೆಯ ಶಾಲಾ ಇಲಾಖಾ ಆಫೀಸರರನ್ನೆಲ್ಲಾ ಪಂಚಭೂತಗಳಲ್ಲಿ ಗಣಿಸಿದ್ದರು. ಈ ಭೂತಗಳಲ್ಲಿ ಗುಳಿಗ ಎಂಬುದು ಇನ್ಸ್‌ಪೆಕ್ಟರ್ ದೊರೆಗೆ ಇಟ್ಟ ಸಂಕೇತ. ಮುಂಡತ್ತಾಯ, ಕೊಡಮಣ್ತಾಯ, ಮಲ್ರಾಯ, ಜಾರಂತಾಯ, ಈ ಹೆಸರುಗಳಲ್ಲಿ ಯಾವುದಾದರೂ ಸರಿಯೆ—ಎಸಿಸ್ಟಾಂಟ್ ಇನ್ಸ್‌ಪೆಕ್ಟರನನ್ನು ನಿರ್ದೇಶಿಸುತ್ತಿತ್ತು; ಈ ಆಫೀಸರನು ಕ್ರೈಸ್ತನಾದರೆ, ಪೊಸಭೂತ ಎಂಬುದೇ ಅದರ ಸೂಚನೆ. ಜುಮಾದಿ, ತೋಡಕನ್ನಾಯ, ಕೋಟಿಚೆನ್ನಯರು, ಎಂದರೆ ಸಬ್ ಎಸಿಸ್ಟಾಂಟ್ ಎಂದರ್ಥ. ಮುಸಲ್ಮಾನ ಶಾಲೆಗಳ ವಿಚಾರ ಕರ್ತನೇ ಅಲಿಭೂತ! ಇನ್ನೂ ಬೊಬ್ಬಿಡುವ ಅಧಿಕಾರಿಯನ್ನು ಬೊಬ್ಬರ್ಯ ಎಂದೂ, ಲಂಚ ತಿನ್ನುವವನನ್ನು ಕಲ್ಲುರ್ಟಿ ಎಂದೂ, ಕುಡುಕನನ್ನು ಕಲ್ಕುಡ ಎಂದೂ, ಸುಪರ್‌ವಾಯ್ಸರರಿಗೆ 'ಕನ್ನಿಮಾನಿಗಳು' ಎಂದೂ ಗುಟ್ಟಿನ ಹೆಸರುಗಳು. 'ಪತ್ತೆನಾಜಿತ್‌ಮಲೆರಾಯನ ವರಾಸರಿ' ಎಂದರೆ 16ನೇ ತಾರೀಕಿಗೆ ಎಸಿಸ್ಟಾಂಟ್ ಇನ್ಸ್‌ಪೆಕ್ಟರರ ಸವಾರಿ ಬರುತ್ತದೆಂದು ಅಭಿಪ್ರಾಯ. ನನ್ನ ಕಾಲದಲ್ಲಿದ್ದ ಪ್ರತಿಯೊಬ್ಬ ಶಾಲಾ ಆಫೀಸರನನ್ನು ಸೂಚಿಸತಕ್ಕ ಒಂದೊಂದು ಭೂತದ ಹೆಸರು ಈ ನಾಮಾವಳಿಯಲ್ಲಿದೆ. ಆಫೀಸರನ ಸರ್ಕಿಟು ಒಪ್ಪೊತ್ತಾದರೆ 'ತಂಬಿಲು,' ಮೂರು ದಿನಗಳದ್ದಾದರೆ, 'ನೇಮ'—ಹೀಗೆಲ್ಲಾ ನನ್ನ ಸಮಕ್ಷದಲ್ಲಿ ನಮ್ಮ ವಿಷಯವಾಗಿ ಉಪಾಧ್ಯಾಯರು ತಮ್ಮೊಳಗೆ ಆಡಿಕೊಳ್ಳುತ್ತಿದ್ದ ಮಾತುಗಳನ್ನು ನೆನೆಸುವಾಗ, ಅಂಥ ಉಪಾಧ್ಯಾಯರು ಈಗ ಇರುತ್ತಿದ್ದರೆ ಅವರೊಂದಿಗೆ ನಾನು ಅಜ್ಞಾನಪೂರ್ವಕವಾಗಿ ಮಾಡಿರಬಹುದಾದ ತಪ್ಪುಗಳಿದ್ದಲ್ಲಿ ಅವನ್ನು ಕ್ಷಮಿಸಬೇಕೆಂದು ನಾನು ಕೇಳದೆ ಬಿಡುತ್ತಿರಲಿಲ್ಲ.

ನನ್ನ ಒಡನಾಡಿಗಳಾಗಿದ್ದು ನನ್ನೊಂದಿಗೆ ಕೆಲಸ ಮಾಡಿದ ಹಳ್ಳಿಯ ಉಪಾಧ್ಯಾಯರು ಹಲವರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿ ಹೋಗಿಬಿಟ್ಟರು! ಅವರು ತಮ್ಮ ಹಿಂದಿನವರಿಂದ ತಮ್ಮ ಕೈಗೆ ದೊರೆತ ಕೆಲಸಗಳನ್ನು ಕೈಲಾದ ಮಟ್ಟಿಗೆ ಮಾಡಿ ಕೃತಕೃತ್ಯರಾದರು. ಅವರು ಕಲಿತದ್ದು ಕಡಿಮೆಯಾದರೂ ಅವರ ಕಷ್ಟಗಳು ಹೆಚ್ಚು, ಅವರ ಬಾಳು ಬಡಬಾಳು. ಅವರು ಒಂದು ವಿಷಯವನ್ನು ಮಾತ್ರ ಅಂದಿನ ಮಕ್ಕಳಿಗೆ ಚೆನ್ನಾಗಿ ಕಲಿಸುತ್ತಿದ್ದರು. ಅವರು ನಿರಂತರ ತಾವು ಹಾಡುತ್ತಿದ್ದ ಮತ್ತು ಮಕ್ಕಳಿಂದ ಹಾಡಿಸುತ್ತಿದ್ದ ಆ ಪಾಠವು ಇಲ್ಲಿದೆ:–

"ಏನುಕಲಿತಡದೇನು? ಯತ್ನದ
ಲೇನು ಮಾಡಿದಡೇನು? ಸರ್ವವು
ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹುದು ॥

ತಾನು ದೇವರ ಭಯವ ಕಲಿಯದೆ,
ಮಾನವನು ಬದುಕಿದಡದೇನೈ?
ಶ್ವಾನಸೂಕರದಂತೆ ಹೊಟ್ಟೆಯ ಹೊರೆದುಕೊಂಡಿಹನು." ॥

ದೇವರ ಭಯವನ್ನು ಮಕ್ಕಳಿಗೆ ಬಿಡದೆ ಕಲಿಸುತ್ತಿದ್ದ ಈ ಉಪಾಧ್ಯಾಯರ ಶಾಲೆಗಳೆಲ್ಲಾ ಈಗ ಗುರುತು ಸಿಕ್ಕಲಾರದಷ್ಟು ರೂಪಾಂತರಗೊಂಡಿರಬಹುದು. ಈ ಅಧ್ಯಾಪಕರು ವಾಸವಾಗಿದ್ದ ಹುಲ್ಲು ಗುಡಿಸಲುಗಳು ಹಳ್ಳಿಯಲ್ಲಿ ಈಗ ಪಾಳುಬಿದ್ದಿರಬಹುದು. ಈ ಮೇಸ್ತರರ ಹೆಸರುಗಳನ್ನು ಕೂಡ ಹಳ್ಳಿಯವರು ಮರೆತಿರಬಹುದು. ಇಷ್ಟರಿಂದ ಇವರು ಮಾಡಿದ ಸತ್ಕಾರ್ಯಗಳೆಲ್ಲ ಇವರ ಹಿಂದೆಯೇ ನಶಿಸಿ ಹೋದುವೆಂದು

ಭಾವಿಸಲಾಗದು. ನಮ್ಮ ಜಿಲ್ಲೆಯ ಗುಡ್ಡಗುಡ್ಡಗಳ ಬುಡದಲ್ಲಿ ಒಂದರ ಮೇಲೆ ಒಂದಾಗಿ ಅಟ್ಟಳಿಗೆಯಂತೆ ಎಬ್ಬಿಸಿದ ಹೊಲಗದ್ದೆಗಳಲ್ಲಿ ಹಚ್ಚಗೆ ಕಂಗೊಳಿಸುತ್ತಿರುವ ಕಳಮಶ್ರೀಯನ್ನು ನಾವು ಕಂಡು ಅಲ್ಲಲ್ಲಿಯ ಗುತ್ತಿನ ಮನೆಯ ವರ್ಗದಾರರ ಕೃಷಿಕಾರ್ಯವನ್ನು ಕೊಂಡಾಡುವಾಗ, ಬಹುಕಾಲದ ಹಿಂದಿನಿಂದ ಮಳೆಯೆನ್ನದೆ ಬಿಸಿಲೆನ್ನದೆ ಪೆಟ್ಟಿನ ಮೇಲೆ ಪೆಟ್ಟು ಬಡೆದು ಬೆಟ್ಟವನ್ನು ಬಯಲನ್ನಾಗಿ ಮಾಡಿದ ಬಡ ಕೂಲಿಯವರ ಕಾಯಕಷ್ಟವು ನಮ್ಮ ಮನಸ್ಸಿಗೆ ಹೊಳೆಯುವುದಿಲ್ಲ. ನಾವು ಮಂಗಳೂರು ಸೇತುವೆಯ ಮೇಲೆ ನಿಂತುಕೊಂಡು ಸಮುದ್ರದೊಡನೆ ಸಂಗಮವಾಗುವ ನದಿಯ ದಿವ್ಯರೂಪವನ್ನು ದರ್ಶಿಸಿ ಮುಗ್ಧರಾಗಿ ಹೋಗುತ್ತೇವೆ; ಆದರೆ ಅದೇ ಕಾಲದಲ್ಲಿ ಆ ನೇತ್ರಾವತಿ ನದಿಯ ವಿಸ್ತಾರ ಪ್ರಯೋಜನ ಸೌಂದರ್ಯಾದಿಗಳನ್ನು ನಮ್ಮ ಕಣ್ಮುಂದೆ ಒದಗಿಸಿ ತಂದುಕೊಡಲು ಹಳ್ಳಿಹಳ್ಳಿಯಿಂದ ಎಷ್ಟು ಹಳ್ಳಗಳು ಹರಿದೋಡಿ ಬಂದುವು, ಎಷ್ಟು ತೋಡುಗಳು ಮುಂದೋಡಲಾರದೆ ಬತ್ತಿ ಹೋದುವು, ಎಷ್ಟು ತೊರೆಗಳು ತಮ್ಮ ಜೀವನವನ್ನೇ ಮುಗಿಸಿಬಿಟ್ಟುವು ಎಂಬುದನ್ನು ಲಕ್ಷಿಸುವುದಿಲ್ಲ. ನಮ್ಮ ಜಿಲ್ಲೆಯಿಂದ ಐ.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ಅನೇಕರ ಕೀರ್ತಿ, ಹಾಯ್‌ಕೋರ್ಟಿನಲ್ಲಿ ಧರ್ಮಾವತಾರರೆನ್ನಿಸಿಕೊಂಡವರ ಮಹತ್ವ, ನ್ಯಾಯವಿಧಾಯಕ ಸಭೆಗಳಲ್ಲಿ ಸಭಾಸದರಾದವರ ಪ್ರಶಸ್ತಿ, ಶಸ್ತ್ರಕ್ರಿಯೆಯಲ್ಲಿ ಪಾರಂಗತರಾದವರ ಹೆಸರುವಾಸಿ, ದೊಡ್ಡ ವರ್ತಕರೆನ್ನಿಸಿದವರ ಪ್ರಸಿದ್ಧಿ, ಸಮಾಜ ಸಂಸ್ಕರಣ ವಿದ್ಯಾಪ್ರಸಾರ ಹರಿಜನೋದ್ಧಾರ ಇತ್ಯಾದಿ ದೇಶಸೇವೆಯಲ್ಲಿ ದೀಕ್ಷಾಬದ್ಧರಾದ ರಾಷ್ಟ್ರಭಕ್ತರ ಲೋಕೋತ್ತರವಾದ ಯಶಸ್ಸು—ಇಷ್ಟೆಲ್ಲಾ ಮಹಾ ವಟವೃಕ್ಷದಂತೆ ಹಬ್ಬಿದುದನ್ನು, ಇನ್ನೂ ಹಬ್ಬುವುದನ್ನು ನೋಡುವಾಗ, 'ಇದೆಲ್ಲಾ ಬಹುಮಟ್ಟಿಗೆ ಅರೆಯುಣ್ಣುವ ಮಕ್ಕಳೊಂದಿಗನಾದ ಹಳ್ಳಿಯ ಮಾಸ್ತರನು ಹರಡಿದ ಬೀಜದ ಫಲ' ಎಂಬುದೊಂದು ಸೊಲ್ಲು ನನ್ನ ಅಂತರಂಗದಲ್ಲಿ ಜಿನುಗುತ್ತಿದೆ. ಇನ್ನು ತಾಳಮದ್ದಳೆಯವರ ಅರ್ಥ, ಬೈಲಾಟದ ವೇಷಧಾರಿಗಳ ಮಾತು, ಕನ್ನಡ ವಿದ್ವಾನ್ ಪಂಡಿತರ ಪಾಂಡಿತ್ಯ, ವಾರ್ತಾಪತ್ರಿಕೆಗಳಲ್ಲಿಯ ಲೇಖ, ದಸರಾ ಹಬ್ಬದಲ್ಲಿಯ ಕನ್ನಡ ಸಾಹಿತ್ಯ, ಮುದ್ದಣ ಕವಿಯ ಸ್ಮಾರಕೋತ್ಸವ ಸಮಾರಂಭ—ಹೀಗೆ ಬಹುಮುಖವಾಗಿ ಇಂದು ಕನ್ನಡ ಭಾಷಾಭಿವೃದ್ಧಿಯೂ ದೇಶಸೇವೆಯೂ ನಮ್ಮ ಜಿಲ್ಲೆಯಲ್ಲಿ ಆಗುತ್ತಲಿದ್ದರೆ, ಅದರ ಪುಣ್ಯದಲ್ಲಿ ಒಂದು ಗುಲಗುಂಜಿ ತೂಕದಷ್ಟಾದರೂ ಪಾಲು, ಈ ಬಡ ಹಳ್ಳಿಯ ಉಪಾಧ್ಯಾಯರಿಗೆ ಸಲತಕ್ಕದ್ದೆಂಬುದನ್ನು ಮರೆಯಲಾಗದು.

(ಕಂಠೀರವ 1935)

ಭಾರತ ಶ್ರವಣ

ವರ್ಷಕಾಲವಾಗಿತ್ತು. ಹಗಲಿರುಳು ಬಿಡದೆ ಸುರಿವ ಮಳೆಯಿಂದ ವೀರಪುರವು ಚಳಿಕಟ್ಟಿ ಹೋಗಿತ್ತು. ಜನರ ಕ್ರಿಯಾಕಲಾಪಗಳು ಉಡುಗಿ ಹೋಗಿದ್ದವು. ಗಟ್ಟದ ಸೀಮೆಯಿಂದ ಜಿನಸಿನ ಗಾಡಿಗಳು ಬರುವುದು ನಿಂತುಹೋದುದರಿಂದ, ವ್ಯಾಪಾರವೆಲ್ಲಾ ಸ್ತಬ್ಧವಾಗಿತ್ತು. ವ್ಯಾಪಾರಕ್ಕೆ ಹೆದ್ದಾರಿಯಾದ ನೇತ್ರಾವತೀ ನದಿಯು ನೆರೆತುಂಬಿ ಸಾಗರೋಪಮಾನವಾಗಿ ಪ್ರವಹಿಸಿ, ವೀರಪುರವನ್ನು ದ್ವೀಪದಂತೆ ಆವರಿಸಿಕೊಂಡಿತ್ತು. ವೀರಪುರದ ವರ್ತಕರೆಲ್ಲರು ಬೇಸಿಗೆಯಲ್ಲಿ ಗಟ್ಟದ ಗೌಡರಿಂದ ದುಡಿದುದನ್ನು ಮಳೆಗಾಲದಲ್ಲಿ ಉಣ್ಣುತ್ತಿದ್ದರು. ಹಾಗೂ ಬೇಸಿಗೆಯಲ್ಲಿ ಮಾಡಿದ ವ್ಯಾಪಾರದ ಮರೆಮೋಸದ ಪ್ರಾಯಶ್ಚಿತ್ತಕ್ಕಾಗಿ ಇನ್ನೇನೂ ಕೃತ್ಯವಿಲ್ಲದುದರಿಂದ, ಪುರಾಣಶ್ರವಣವನ್ನು ಮಾಡುತ್ತಲಿದ್ದರು. ಈ ವರ್ಷ ಅಕ್ಕಿಯ ಧಾರಣೆ ಏರಿದುದರಿಂದ, ವೀರಪುರದ ವರ್ತಕರೂ ವ್ಯವಸಾಯಗಾರರೂ ಪುರಾಣಶ್ರವಣವನ್ನು ಮಹಾಸಂಭ್ರಮದಿಂದ ಮಾಡಬೇಕೆಂದು ಇದ್ದರು. ಜ್ಯೇಷ್ಠ ಶುದ್ಧ ಪಂಚಮಿಯ ದಿನ ಊರುಗರು ಸಭೆಕೂಡಿದರು. ಸಭೆಯಲ್ಲಿ ಧನಿಕರೂ ದರಿದ್ರರೂ ನೆರೆದಿದ್ದರು. ಶುಭಕಾರ್ಯಕ್ಕೋಸ್ಕರ ಸಭಿಕರು ತಂತಮ್ಮ ಯೋಗ್ಯತಾನುಸಾರವಾಗಿ ವಂತಿಗೆಯನ್ನು ಎಂದಿನಂತೆ ಕೊಡಲು ಉದ್ಯುಕ್ತರಾದರು. ಚಿಕ್ಕಪೇಟೆ ಹಿರಿಯಣ್ಣನವರು, 25 ವರಹಗಳನ್ನು ಹರಿವಾಣದಲ್ಲಿ ಸುರಿದುಬಿಟ್ಟರು. ಮೇಲೂರು ಲಕ್ಕಣ್ಣಾಜ್ಲರು 70 ರೂಪಾಯಿ, ನಾಗರಾಜರು 50 ರೂಪಾಯಿ ಕೊಟ್ಟರು. ಉಳಿದವರಲ್ಲಿ ಕೆಲವರು "ಶಕ್ತ್ಯಾನುಸಾರವಾಗಿ ಕೊಡುವೆವು" ಎಂದು ವಾಗ್ದಾನ ಮಾಡಿದರು. ಗದ್ದೆ ಮನೆ ನರಸಪಾಂಡಿ ಉಡಿಯಲ್ಲಿದ್ದ ಎರಡು ರೂಪಾಯಿಗಳನ್ನು ಹರಿವಾಣದ ಬಳಿಯಲ್ಲಿಟ್ಟು ನಮಸ್ಕಾರ ಮಾಡಿದನು. ಮಳಲು ಬೆಟ್ಟು ಭೂಪಸೆಟ್ಟಿ ತಲೆಬಟ್ಟೆಯ ಕೊನೆಗೆ ಸುತ್ತಿದ್ದ ಏಳುಚಕ್ರಗಳನ್ನು ಬಿಚ್ಚಿ, ಭಕ್ತಿಪೂರ್ವಕವಾಗಿ ಸಮರ್ಪಿಸಿ, ಪ್ರಸಾದವನ್ನು ಕೈಯಲ್ಲಿ ಕೊಂಡನು. ವಂತಿಗೆಯ ಹಣವು ಸುಮಾರು 400 ರೂಪಾಯಿ ಎಂದು ನಿರ್ಣಯ ವಾದ ಮೇಲೆ ಯಾವ ಗ್ರಂಥವನ್ನು ಓದಬೇಕೆಂಬ ಚರ್ಚೆ ನಡೆಯಿತು. ಕೊನೆಗೆ ಕನ್ನಡ ಮಹಾಭಾರತವನ್ನೇ ಓದಿಸಬೇಕೆಂದು ನಿಷ್ಕರ್ಷೆಯಾಯಿತು. ಗ್ರಂಥವನ್ನು ಓದುವುದಕ್ಕೂ ಅರ್ಥವನ್ನು ವಿಸ್ತರಿಸುವುದಕ್ಕೂ ಸಮರ್ಥರನ್ನು ಕರೆತರುವ ವಿಷಯದಲ್ಲಿ ಕೊಂಚ ಮಾತುಗಳು ನಡೆದುವು. ಕೆಲವರು ಶಿವಳ್ಳಿ ಬ್ರಾಹ್ಮಣರನ್ನು ಆಮಂತ್ರಿಸಬೇಕೆಂದೂ, ಕೆಲವರು ಗೋಮಾಂತಕ ಬ್ರಾಹ್ಮಣರನ್ನು ಕರೇ ಕಳುಹಿಸಬೇಕೆಂದೂ ವಿವಾದಿಸಿದರು. ಕೊನೆಗೆ ಕಮಲಪುರದ ರಾಮಕೃಷ್ಣ ಭಾಗವತರನ್ನು ಅರ್ಥ ವಿಸ್ತರಣೆಗೂ, ಹೊಲಸೂರು ಜನಾರ್ದನಯ್ಯ ನವರನ್ನು 'ವಾಚಕಕ್ಕೂ' ತರಬೇಕೆಂದು ಆಳನ್ನು ಅಟ್ಟಿದರು.

ಜ್ಯೇಷ್ಠ ಶುದ್ಧ ಪೂರ್ಣಿಮಿ ಬುಧವಾರ. ವೀರಪುರದ ವೆಂಕಟರಮಣಸ್ವಾಮಿಯ ದೇವಸ್ಥಾನವು ಜನಸ್ತೋಮದಿಂದ ಬಾಯ್ಕಟ್ಟಿ ಹೋಗಿತ್ತು. ದೇವಸ್ಥಾನದ ಗೋಪುರದ ಸುತ್ತಲೂ ಹಸುರೆಲೆ ತೋರಣಗಳು ಗಾಳಿಯಲ್ಲಿ ತೂಗುತ್ತಿದ್ದವು. ಹೆಬ್ಬಾಗಿಲ ಮುಂದಿರಿಸಿದ ಬಾಳೆಯ ಕಂಬಗಳು ಗಂಭೀರವಾಗಿ ನಿಂತಿದ್ದುವು. ಇವುಗಳ ತಲೆಯಲ್ಲಿ ಅಲ್ಲಾಡುವ ಪರ್ಣಗುಚ್ಛವು ಜನರನ್ನು ಕರೆವಂತೆ ವಾಯುವಿನಲ್ಲಿ ಕೈಸನ್ನೆ ಮಾಡುತ್ತಿತ್ತು. ಒಳಕ್ಕೆ ಕಾಲಿಡುತ್ತಲೇ ಎರಡೂ ಭಾಗಗಳಲ್ಲಿ ಸರ್ವಜನ ಪರಿಪೂರಿತವಾದ ಪ್ರಸ್ತರ ನಿರ್ಮಿತವಾದ ಚಂದ್ರ ಶಾಲೆಗಳು ವಿರಾಜಮಾನವಾಗಿದ್ದುವು. ಪುರಾಣ ಶ್ರವಣಾರ್ಥಿಗಳು ನಡುವಿನಲ್ಲಿ ಸ್ಥಳವನ್ನು ಬಿಟ್ಟು ಸಾಲ್ಗೊಂಡು

ಮಂಡಿಸಿದ್ದರು. ಸ್ಥಳವನ್ನು ಬಿಟ್ಟುದರಿಂದ, ಪುರಾಣವನ್ನು ಓದುವ 'ವಾಚಕರ' ಮುಖವು ಎರಡೂ ಚಂದ್ರಶಾಲೆಗಳಲ್ಲಿ ಕುಳಿತಿದ್ದ ಜನರಿಗೆ ಸ್ಪಷ್ಟವಾಗಿ ಕಂಡುಬರುತ್ತಿತ್ತು. 'ವಾಚಕರ' ಮುಂದೆ ವ್ಯಾಸಪೀಠದ ಮೇಲೆ ಭಾರತದ ಓಲೆಯ ಪ್ರತಿಯು ಅಲಂಕೃತವಾಗಿತ್ತು. ಈ ವ್ಯಾಸಪೀಠದ ಸಮೀಪದಲ್ಲಿ ಎರಡು ಕಂಚಿನ ಕಾಲ್ದೀಪಗಳು ಬೆಳಗುತ್ತಿದ್ದವು, ಮಧ್ಯಾಹ್ನಕಾಲವಾದುದರಿಂದ ಇವು ಹಚ್ಚಿರಲಿಲ್ಲ. ಇದರ ಬದಲಾಗಿ ಮತ್ತೊಂದು ಸಣ್ಣ ದೀಪವು ಅಲ್ಲಿಯೇ ಬೆಳಗುತ್ತಿತ್ತು. ಗಂಧ, ದಶಾಂಗ, ಧೂಪ ಮೊದಲಾದುವುಗಳ ಸುವಾಸಿತವಾದ ಧೂಮ್ರವು ದೇವಸ್ಥಾನದ ಸರ್ವಭಾಗಗಳಲ್ಲಿಯೂ ಪರಿಮಳಿಸುತ್ತಿತ್ತು. 'ವಾಚಕರು' ಪದ್ಯವನ್ನು ಓದುವ ಗಂಭೀರವಾದ ನಿಸ್ವನವು ಚಂದ್ರಶಾಲೆಯಲ್ಲಿ ಪ್ರತಿಧ್ವನಿಸಿ, ಸಭಾಸದರ ಕರ್ಣಕುಹರವನ್ನು ಪ್ರವೇಶಿಸಿ, ಹೊರಗಿನ ವಾಯುಮಂಡಲದಲ್ಲಿ ವಿಲೀನವಾಗಿ ಹೋಗುತ್ತಲಿತ್ತು. ಕೂಡಲೇ ನೆರೆದಿದ್ದ ಜನರು ತಮ್ಮ ಎತ್ತಿದ ಕೊರಲುಗಳನ್ನು ಕೊಂಕಿಸಿ, ರಾಮಕೃಷ್ಣಭಾಗವತರ ಮುಖವನ್ನು ದೃಷ್ಟಿಸುತ್ತ, ಅವರು ಅಭಿನಯ ಯುಕ್ತವಾಗಿಯೂ, ವರ್ಣಯುಕ್ತವಾಗಿಯೂ ಹೇಳುವ ವಿಸ್ತಾರವಾದ ಅರ್ಥವನ್ನು ಕಿವಿಗಳಿಂದ ಕುಡಿದು ಸಂತುಷ್ಟರಾಗುತ್ತಿದ್ದರು. ಆಗಾಗ ಚಿಕ್ಕಪೇಟೆ ಹಿರಿಯಣ್ಣನವರು ಕೈಯಲ್ಲಿ ನಶ್ಯವನ್ನು ಇಟ್ಟು ಭಾಗವತರಿಗೆ ಅರ್ಪಿಸುತ್ತಿದ್ದರು. ಇವರ ಸಮ್ಮುಖದಲ್ಲಿಯೇ ಲಕ್ಕಣಾಜ್ಜರು ವಜ್ರದುಂಗುರದ ಬೆರಳಿಂದ ಹಣೆಯನ್ನು ಪದೇ ಪದೇ ಸವರುತ್ತಿದ್ದರು. ಆಜ್ಜರ ಎಡದಲ್ಲಿ ನಾಗರಾಜರು ಗೋಡೆಗೆ ಒರಗಿ ತಲೆದೂಗುತ್ತಿದ್ದರು. ಚಂದ್ರಶಾಲೆಯ ಮಿಕ್ಕಸ್ಥಳವನ್ನು ಭಾಗವತರ ಸ್ವಜಾತಿಯವರೂ ಸ್ನೇಹಿತರೂ ಆಕ್ರಮಿಸಿದ್ದರು. ಹೀಗಾದುದರಿಂದ ವಂತಿಗೆ ಕೊಟ್ಟ ನರಸಪಾಂಡಿ, ಅಣ್ಣಪ್ಪ ಆಳ್ವ, ಭೂಪಸೆಟ್ಟಿ ಮೊದಲಾದವರು ಮತ್ತೊಂದು ಚಂದ್ರಶಾಲೆಯಲ್ಲಿ ಕುಳಿತುಕೊಳ್ಳಬೇಕಾಯಿತು. ಯಾರೊಬ್ಬರೂ ತುಟಿ ಅಲ್ಲಾಡಿಸುತ್ತಿದ್ದಿಲ್ಲ; ಎಲ್ಲರೂ ಏಕಾಗ್ರಚಿತ್ತದಿಂದ ಶ್ರವಣ ಮಾಡುತ್ತಿದ್ದರು. ಆದಿಪರ್ವದಲ್ಲಿ ಅನೇಕ ಸಂಧಿಗಳನ್ನು ನಾಲ್ಕು ದಿನಗಳ ಹಿಂದೆಯೇ ಓದಿ ಮುಗಿಸಿದ್ದರು. ಈ ದಿನ ಹತ್ತನೆಯ ಸಂಧಿ.

ರಾತ್ರಿ ಏಳು ಗಂಟೆಯಾಯಿತು. ಸಂಧಿಯು ಸಮಾಪ್ತವಾಗಲು ಬಂತು. ಆಗ ಜನಾರ್ಧನಯ್ಯನವರು ಈ ಶ್ಲೋಕಾರ್ಧವನ್ನು ಓದಿದರು:—

ಬಳಿಕ ಹರಿಯನು ಮನದಿ ವಂದಿಸಿ
ಕಳುಹಿ ನೃಪರನು ಸಂತಸದಿ ತಾಂ
ನಿಳಯವನು ಸೇರಿದನು ಧರ್ಮಜ ಭೂಪ ಕೇಳೆಂದಾ ॥

ಈ ಪದ್ಯಾರ್ಥವನ್ನು 'ವಾಚಕರು' ಹಾಡುತ್ತಲೇ, ಅವರ ಕಡೆಯ ಮಾತುಗಳು ಮುಕ್ತಾಯದ ರಾಗತರಂಗಗಳು ಚಂದ್ರಶಾಲೆಯಲ್ಲಿ ತೇಲುತ್ತ ಝೇಂಕರಿಸುವಂತಿದ್ದುವು. ತಟ್ಟನೆ ಎಲ್ಲವೂ ನಿಶ್ಯಬ್ದವಾಯಿತು. ಒಡನೆಯೇ ಆ ಝೇಂಕೃತಿಯ ಪ್ರತಿಧ್ವನಿಯೆಂಬಂತೆ ಮತ್ತೊಂದು ಚಂದ್ರಶಾಲೆಯಿಂದ ಓ! ಓ! ಎಂಬ ಸ್ವರವು ಸ್ಪಷ್ಟವಾಗಿ ಕೇಳಿಸಿತು. ಕೂಡಲೇ ಶ್ರವಣ ಮಾಡಲು ಬಂದ ಪ್ರಭೃತಿಗಳ ದೃಷ್ಟಿಗಳು ಆ ಕಡೆಗೆ ಹಾರಿದುವು; ಪುನಃ ಆಶ್ಚರ್ಯದಿಂದ 'ವಾಚಕರ' ಕಡೆಗೂ ಭಾಗವತರ ಕಡೆಗೂ ಚಲಿಸಿದುವು. ಹಿರಿಯಣ್ಣ ಮೊದಲಾದವರು ಸ್ವಲ್ಪ ಸಂಭ್ರಾಂತರಾದಂತೆ ತೋರಿದರು. ಜನಾರ್ಧನಯ್ಯನವರು ಗ್ರಂಥ ಓದುವುದನ್ನು ನಿಲ್ಲಿಸಿ, ಪತ್ರಗಳನ್ನು ಸರಿಗೊಳಿಸಿ, ಪುಸ್ತಕವನ್ನು ಕಟ್ಟಿ, ಕರ್ಪೂರದ ಆರತಿಯನ್ನು ಎತ್ತಿದರು. ಆರತಿಯನ್ನು ಸ್ವೀಕರಿಸುವುದಕ್ಕೆ ಯಾರೂ ಮುಂದೆ ಬರಲಿಲ್ಲ. ಆರತಿಯು ತಾನಾಗಿ ನಂದಿಹೋಯಿತು. ಕಡೆಗೆ ಭಾಗವತರೂ 'ವಾಚಕ'ರೂ ಮನೆಗೆ ಅಭಿಮುಖರಾಗಿ ಹೊರಟರು. ಮಿಕ್ಕವರು ಮನಸ್ಸಿನಲ್ಲಿ ನೊಂದಂತೆ, ಅವರ ಹಿಂದೆಯೇ ಮೆಲ್ಲಮೆಲ್ಲನೆ ಕಾಲ್ತೆಗೆದರು.

ಮಾರನೆಯ ದಿನ ಎಂದಿನಂತೆ ಎಲ್ಲರೂ ನೆರೆದಿದ್ದರು. ಆದರೆ ಪೂರ್ವದ ಉತ್ಸಾಹವೆಲ್ಲಾ ಆರಿಹೋಗಿತ್ತು. ಯಾವ ಕಾರಣದಿಂದ ಉತ್ಸಾಹವು ಕಡಿಮೆಯಾಗಿ ಹೋಗಿತ್ತೋ ಅದು ತಿಳಿಯಲಿಲ್ಲ. ನಾಗರಾಜರ ಮುಖದಲ್ಲಿ ಮುಖ್ಮುಗಂಟು: ಲಕ್ಕಣಾಜ್ಜರ ಮೋರೆಯಲ್ಲಿ ಉದಾಸೀನ ಭಾವ; ಹಿರಿಯಣ್ಣರು ಕಂದು ಮೊಗ. ಆದರೂ ಅವರೆಲ್ಲರೂ ತಮ್ಮೊಳಗೇನೇನೋ ಗುಜುಗುಟ್ಟುತ್ತಿದ್ದರು. ಜನಾರ್ಧನಯ್ಯನವರು ಗ್ರಂಥವನ್ನು ತೆರೆದು ಓದ ತೊಡಗಿದರು. ಸಭೆಯ ನಿರುತ್ಸಾಹವೇನೋ ಹೋಗಲಿಲ್ಲ. ಸಭಿಕರ ಮನಸ್ಸನ್ನು ರಂಜಿಸುವಂತೆ ಭಾಗವತರು ಕಾವ್ಯಾರ್ಥವನ್ನು ಸರಸವಾಗಿಯೂ, ವಿಸ್ತಾರವಾಗಿಯೂ ವಿಶದೀಕರಿಸಿದರು. ಸ್ತ್ರೀವರ್ಣನೆಯಾದುದರಿಂದ ಭಾಗವತರ ಅರ್ಥಶಕ್ತಿಯು ಇನ್ನೂ ಚಿವಟಿದಂತಾಯಿತು. ಆದರೂ ಆ ಅವಿರಳವಾದ, ಅನರ್ಗಳವಾದ, ಶೃಂಗಾರಮಯವಾದ ಸ್ತ್ರೀ ವರ್ಣನೆಯು ಶ್ರಾವಕರ ಉದಾಸೀನ ಹೃದಯಗಳಮೇಲೆ ನಿರರ್ಥಕವಾಗಿ ಹೋಯಿತು. ಅಷ್ಟರಲ್ಲಿ ನಾಗರಾಜರು ತಮಗೆ ಮನೆಯಲ್ಲಿ ವಿಶೇಷವಾದ ಕೆಲಸವುಂಟೆಂದು ಹೇಳಿ ಎದ್ದು ನಿಂತರು. ಲಕ್ಕಣಾಜ್ಜರು ಅವರನ್ನು ಬಲಾತ್ಕಾರಪಡಿಸಿ ಅಲ್ಲಿಯೇ ತಡೆಯಿಸಿದರು. ಆದಿಪರ್ವದಲ್ಲಿ ಆ ದಿನ ಓದಲು ಹಿಡಿದ ಅಧ್ಯಾಯವು 100 ಪದ್ಯಗಳಿಗಿಂತ ಮೀರದೆ ಇದ್ದುದರಿಂದಲೂ, ಸಭಾಸದರ ಶ್ರವಣೋತ್ಸಾಹವು ಕ್ಷೀಣವಾದುದರಿಂದಲೂ, ಭಾಗವತರು ಆ ದಿನದ 'ವಾಚಕ'ವನ್ನು ಮುಗಿಸಬೇಕೆಂದು ಜನಾರ್ಧನಯ್ಯನವರಿಗೆ ಸೂಚಿಸಿದರು. ಜನಾರ್ಧನಯ್ಯನವರು ಕೆಳಗಿನ ಭಾಮಿನಿ ಶ್ಲೋಕವನ್ನು ಕಂಠಾಗ್ರಸ್ವರದಿಂದ ಪೂರೈಸಿದರು:-

ಇಂದುಮುಖಿಯನು ಸಂತವಿಡುತ ಮು
ಕುಂದ ರಥವೇರಿದನು ಪರಮಾ
ನಂದದಲಿ ದ್ವಾರಕೆಯ ಸಾರಿದನರಸ ಕೇಳೆಂದಾ॥

ಕೂಡಲೇ ಬಡವರು ಕುಳಿತಿದ್ದ ಚಂದ್ರಶಾಲೆಯಿಂದ ಓ! ಓ! ಎಂಬ ಸ್ವರವು ಪ್ರತಿಧ್ವನಿಸಿತು. ಈ ಸ್ವರವನ್ನು ಕೇಳಿದರೋ, ಇಲ್ಲವೋ, ನಾಗರಾಜರು ಎದ್ದು ಹೊರಕ್ಕೆ ನಡೆದುಬಿಟ್ಟರು. ಲಕ್ಕಣಾಜ್ಜರು ವಜ್ರದುಂಗುರವನ್ನು ಸರಿಗೊಳಿಸುತ್ತ ಅವರನ್ನು ಹಿಂಬಾಲಿಸಿದರು. ಹಿರಿಯಣ್ಣನವರು ಏನೋ ಅವಮಾನಗೊಂಡಂತೆ ಮುಖವನ್ನು ತಗ್ಗಿಸಿಬಿಟ್ಟರು. ಅವರ ಬಳಿಗೆ ಗ್ರಂಥಕ್ಕೆ ಎತ್ತಿದ ಆರತಿಯನ್ನು ತಂದರು. ಆದರೆ ಅದರ ಮೇಲೆ ಅವರ ಕೈ ಸುಳಿಯಲಿಲ್ಲ. ನರಸ ಪಾಂಡಿ ಮಾತ್ರ ಸಂತೋಷಗೊಂಡಂತೆ ಭಾಗವತರ ಬಳಿಯಲ್ಲಿ ಕೈಕಟ್ಟಿ ನಿಂತು, ಕೊನೆಗೆ ವ್ಯಾಸಪೀಠಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ, ಮನೆಗೆ ಹಿಂತೆರಳಿದನು. ಅಣ್ಣಪ್ಪ ಆಳ್ವ ಮತ್ತು ಭೂಪಸೆಟ್ಟಿ ಎಂದಿನಂತೆ ಪ್ರಸಾದ ಸ್ವೀಕರಿಸಿ ಮನೆಗೆ ನಡೆದುಬಿಟ್ಟರು. ಕೊಂಚ ಹೊತ್ತಿನಲ್ಲಿ ರಾಮಕೃಷ್ಣ ಭಾಗವತರೂ ಜನಾರ್ಧನಯ್ಯನವರೂ ಶ್ರಾವಕರ ಅಂದಿನ ಔದಾಸೀನ್ಯವನ್ನು ಕುರಿತು ಚಿಂತಿಸುತ್ತ, ಅದರ ಕಾರಣವನ್ನು ತಮ್ಮೊಳಗೆ ವಿಚಾರಿಸುತ್ತ, ಮನೆಗೆ ಅಭಿಮುಖರಾದರು.

ಶುಕ್ರವಾರ ಮಧ್ಯಾಹ್ನ ಒಂದು ಗಂಟೆಗೆ ನಾಗರಾಜರೂ ಲಕ್ಕಣಾಜ್ಜರೂ ಎಲ್ಲರಿಗಿಂತಲೂ ಮೊದಲೇ ದೇವಸ್ಥಾನದಲ್ಲಿ ಬಂದು ಕೂಡಿದರು. ಒಡನೆ ಹಿರಿಯಣ್ಣನವರು ಬಂದು ಸೇರಿದರು. ಮಿಕ್ಕವರು ಒಬ್ಬೊಬ್ಬರಾಗಿ ಬಂದು ಸೇರಿದರು. 'ವಾಚಕ' ನಡೆಯುವ ಚಂದ್ರಶಾಲೆಯಲ್ಲಿ ಏನೋ ಮಾತುಕಥೆ ನಡೆಯುತ್ತಲಿತ್ತು. "ಈ ಹಾಳು ಮಕ್ಕಳನ್ನು ನಾಬಲ್ಲೆ" ಎಂದು ನಾಗರಾಜರು ಹೇಳುವಷ್ಟರಲ್ಲಿ ಭಾಗವತರೂ 'ವಾಚಕರೂ' ಚಂದ್ರಶಾಲೆಯ ಮೇಲೆ ಕಾಲಿಟ್ಟರು. ಅವರನ್ನು ನಮಸ್ಕರಿಸುವುದಕ್ಕೆ ದೊಡ್ಡವರು ಯಾರೂ ಏಳಲಿಲ್ಲ. ಇಬ್ಬರು ತಮ್ಮ ತಮ್ಮ ಆಸನಗಳನ್ನು ಅಲಂಕರಿಸಿದರು. ಯಾರೂ ಇದ್ದೆಡೆಯಿಂದ ಅಲ್ಲಾಡಲಿಲ್ಲ. ದೀಪವನ್ನು ಯಾರೂ

ಹಚ್ಚದೆ ಇದ್ದುದನ್ನು ನೋಡಿ ಜನಾರ್ಧನಯ್ಯನವರು ತಾವಾಗಿ ಅದನ್ನು ಹಚ್ಚಿದರು. ಬಳಿಕ ಗ್ರಂಥ ಪುಸ್ತಕಕ್ಕೆ ಕೈ ಮುಗಿದು, ಅಧ್ಯಾಯವನ್ನು ತೆರೆಯುವುದಕ್ಕೆ ತೊಡಗಿದರು. ಅಷ್ಟರಲ್ಲಿ ನಾಗರಾಜರು ಗುಲ್ಲಿಡುವುದನ್ನು ನೋಡಿ, 'ವಾಚಕಕ್ಕೆ' ಸಿದ್ಧವಾಯಿತೆಂದು ಜನಾರ್ಧನಯ್ಯನವರು ಮೆಲ್ಲನೆ ಸೂಚಿಸಿದರು.

"ಬೇಡಯ್ಯ ನಿಮ್ಮ ವಾಚಕ! ಕಟ್ಟಿಡಿ!" ಎಂದು ನಾಗರಾಜರು ಒದರಿದರು.

"ಸಂಗತಿ ಏನು?" ಎಂದು ಭಾಗವತರು ಕೇಳಿದರು.

ಜನಾರ್ಧನಯ್ಯನವರು ಗ್ರಂಥವನ್ನು ತೆರೆದರು.

"ಬ್ರಾಡಾ! ಕಟ್ಟಿ! ಕಟ್ಟಿ!" ಎಂದು ಪುನಃ ನಾಗರಾಜರು ಒತ್ತಿ ಹೇಳಿದರು.

"ಬಿಡಿ! ಬೇಡಯ್ಯ! ಕಟ್ಟಿ! ನಮಗೆಲ್ಲ ಗೊತ್ತಿದೆ! ಕಟ್ಟಿ! ಪುಸ್ತಕ ಕಟ್ಟಿ!" ಎಂದು ಲಕ್ಕಣಾಜ್ಜರು ಉಂಗುರದ ಬೆರಳನ್ನು ತೋರಿಸುತ್ತ ಗರ್ಜಿಸಿದರು.

ಭಾಗವತರೂ 'ವಾಚಕರೂ' ನಮ್ರಭಾವದಿಂದ ಸಿಟ್ಟೇಕೆಂದು ಬೇಡಿದರು.

"......ಮಗ! ಹಣಕ್ಕೋಸ್ಕರ...... ಮಾರಿ ಬಿಡುವರು" ಎಂದು ಯಾರೋ ಬೈದುಬಿಟ್ಟರು.

ರಾಮಕೃಷ್ಣ ಭಾಗವತರೂ, ಜನಾರ್ಧನಯ್ಯನವರೂ ಬಾಯಲ್ಲಿ ಮಾತಿಲ್ಲದವರಾಗಿ, "ಸ್ವಾಮೀ! ಸಿಟ್ಟೇಕೆ! ನಮ್ಮ ಅರ್ಥದಲ್ಲಾಗಲೀ, ವಾಚಕದಲ್ಲಾಗಲೀ, ಏನೊಂದು ದೋಷವಿತ್ತೇ? ಮನ್ನಿಸಬೇಕು ದೇವ್ರು! ನಾವು ಏನು ತಪ್ಪು ಮಾಡಿದೆವು?" ಎಂದರು.

"ನಾವು? ನಾವೆಂದು ಹೇಳಲಿಕ್ಕೆ ನೀನು ದೊಡ್ಡ ಗೌಡ ತಾನೇ? ಕಳ್ಳ! ಇನ್ನೊಬ್ಬರಾದ್ರೆ ಈ ಅವಮಾನಕ್ಕೆ ಮೆಟ್ಟು ತೆಗೆಯುತ್ತಿದ್ರು" ಎಂದು ನಾಗರಾಜರು ತಪ್ಪಿ ಮಾತನಾಡಲು ಹತ್ತಿದರು. ಪುನಃ "ಲಕ್ಕಣಾ! ನನಗೆ ಗೊತ್ತುಂಟು. ನಾಮಾ ಹಾಕುವ ಬ್ರಾಹ್ಮರಿವರು. ಹೆತ್ತ...... ಗುರ್ತಿಲ್ಲ ಇವ್ರಿಗೆ" ಎಂದು ಪೂರೈಸಿದರು.

ಒಡನೆ ಜನಾರ್ಧನಯ್ಯನವರು ಹಿರಿಯಣ್ಣನವರ ಬಳಿಗೆ ಬಂದು, "ಸ್ವಾಮಿ! ತಪ್ಪು ಯಾರ ಕೈಯಿಂದಲೂ ನಡೆಯುತ್ತದೆ. ನನ್ನ ಪಾಡೇನು? ನೀವು ವರ್ಗದಾರರು, ನಾವು ಒಕ್ಕಲುಗಳು. ತಾವು ನಡಿಸಿದರೆ ಸರಿ. ನನ್ನಿಂದ ಏನ್ ತಪ್ಪಾಯಿತೆಂದು ಹೇಳಿದ್ರೇ, ಸಭೆಗೆ ಸೆರೆಗೊಡ್ಡಿ ಬೇಡುತ್ತೇನೆ" ಎಂದರು.

ಹಿರಿಯಣ್ಣ:—"ಸರಿಯಾದ ಮಾತು! ಏನ್ ನಾಗರಾಜಾ? ಇಕ್ಕೊಳ್ಳಿ ಭಾಗವತರೇ ಇಲ್ಲಿ ಕೇಳಿ!"

ಇಬ್ಬರೂ ವಂತಿಗೆ ಕೊಟ್ಟವರ ಬಳಿಗೆ ಬಂದರು.

ಹಿರಿಯಣ್ಣ:—"ಈ ವಾಚಕಕ್ಕೆ' ಯಾರು ಹೆಚ್ಚು ವಂತಿಗೆಯನ್ನು ಕೊಟ್ಟರೆಂದು ಬಲ್ರೊ?"

ಭಾಗವತರು:—"ನೀವೆಲ್ಲರು ಸ್ವಾಮಿ!"

ಹಿರಿಯಣ್ಣ:—ಓ! ನಾನು ನೂರು ರೂಪಾಯಿ ಕೊಟ್ಟಿದ್ದೇನೆ. ಲಕ್ಕಣಾಜ್ಜರು ಎಪ್ಪತ್ತು, ನಾಗರಾಜರು ಐವತ್ತು. ಹೀಗಿರುವಾಗ ಗ್ರಂಥವನ್ನು ನೀವು ನಮ್ಮ ಹೆಸರೆತ್ತಿ ಹೇಳದೆ ವರ್ಗದಾರರಾದ ನಮಗೆ ಈ ಪರಿ ಅವಮಾನ ಮಾಡಿದ್ದು ನ್ಯಾಯವೇ?"

ಭಾಗವತ:—"ಎಂಥಾ ಅವಮಾನ ದೇವ್ರೆ?"

ನಾಗರಾಜ:—"ಅವಮಾನ? ಏನೆಂದೆ?"

ಹಿರಿಯಣ್ಣ:—"ತಡಿ, ನಾಗರಾಜಾ, ಇಲ್ಲಿ ನೋಡಿ, ಭಾಗವತರೇ! ಮನೆತನದವರು, 'ಗುತ್ತೇದಾರರು', ನಾವಿರುವಾಗ "ಭೂಪಕೇಳೆಂದಾ" ಎಂದು ಭೂಪಸೆಟ್ಟಿಗೆ ಮಾತ್ರ ಅರ್ಥ ಹೇಳಿದ್ದು ನಮಗೆ ಅವಮಾನ ಹೌದೋ, ಅಲ್ಲವೋ, ನೀವೇ ಹೇಳಿ!"

ಇದನ್ನು ಕೇಳುತ್ತಲೇ ಭಾಗವತರಿಗೆ ಗ್ರಾಮಮುಖಂಡರ ಅಸಮಾಧಾನತೆಯ ಕಾರಣವು ಹೊಳೆಯಿತು. ಅವರು ತಮಗೆ ಬಂದ ಮುಗುಳ್ನಗೆಯನ್ನು ತಡೆದುಕೊಂಡರು. ಆದರೆ ಜನಾರ್ಧನಯ್ಯನವರು "ಇದರ ಅರ್ಥ ತಿಳಿಯಲಿಲ್ಲವಲ್ಲಾ!" ಎಂದರು.

ನಾಗರಾಜ:—"ಅರ್ಥ ತಿಳಿಯಲಿಲ್ಲವೇ? ಯಾಕೆ ತಿಳಿಯಲಿಲ್ಲ? ನಿನ್ನೆ 'ಸಾರಿದ ನರಸ ಕೇಳೆಂದಾ' ಎಂದು ಹೇಳಿ ನರಸ ಪಾಂಡಿಗೆ ಭಾರ್ತವನ್ನು ಹೇಳಲಿಲ್ಲವೇ? ಆ ಪರ್ದೇಶಿ ನರಸಪಾಂಡಿ ಕೊಟ್ಟದ್ದು ಎರಡು ರೂಪಾಯಿ. ಬಡ್ಡಿಮಗ, ಭೂಪ! ನನ್ನ ಒಕ್ಕಲು! —ಅವ ಕೊಟ್ಟದ್ದು ಏಳು ಚಕ್ರ. ನಮ್ಮ ಎದುರಿಗೆ ಅವರ ಹೆಸರನ್ನು ಎತ್ತಿ ಹೇಳಿದೆಯಲ್ಲಾ?"

ನಾಗರಾಜರ ಆರೋಪದ ವಿವರಣೆ ಮುಗಿಯುವುದರೊಳಗಾಗಿ ಭಾಗವತರು ಒಂದು ಉಪಾಯದ ಮಾತನ್ನು ಯೋಚಿಸಿಕೊಂಡರು.

"ಚಿತ್ತೈಸಬೇಕು ದೇವರೇ! ಬೇಡಿಕೊಳ್ಳುತ್ತೇನೆ. ಭಾರತ ಗ್ರಂಥ ವಾಚನದಲ್ಲಿ, ದಿನಕ್ಕೆ ಒಬ್ಬೊಬ್ಬರ ಹೆಸರನ್ನು ಹೇಳುವುದು ನಮ್ಮ ಪದ್ಧತಿ. ವಂತಿಗೆಯಲ್ಲಿ ಅಲ್ಪಸಂಖ್ಯೆಯನ್ನು ಕೊಟ್ಟವರ ನಾಮವನ್ನು ನಾವು ಪ್ರಥಮದಲ್ಲಿ ಹೇಳುತ್ತೇವೆ. ಹೀಗೆ. ಮೊನ್ನೆ ಭೂಪನನ್ನೂ, ನಿನ್ನೆ ನರಸ ಪಾಂಡಿಯನ್ನೂ ಹೊಗಳಿದೆವು. ಕ್ರಮಪ್ರಕಾರವಾಗಿ ನಿಮ್ಮೆಲ್ಲರ ಹೆಸರುಗಳೂ ಭಾರತದಲ್ಲಿ ಬರೋದುಂಟು. ಕೋಪಿಸಿಕೊಳ್ಳಬಾರದು—" ಎಂದರು.

ಹಿರಿಯಣ್ಣನವರೂ ನಾಗರಾಜರೂ ಮರುಮಾತೆತ್ತದೆ ಒಬ್ಬರನ್ನೊಬ್ಬರು ಕ್ಷಣ ಮಾತ್ರ ನೋಡಿದರು. ಸಿಟ್ಟು ಕೆಳಗಿಳಿಯತೊಡಗಿತು. ನಾಗರಾಜರು ಭಾಗವತರ ಕಡೆ ತಿರುಗಿ, ಹುಬ್ಬು ಏರಿಸಿ, "ಹಾಆಗೋ?" ಎಂದರು. ಹಿರಿಯಣ್ಣನವರು, "ಓ, ಇದು ನಮಗೆ ಗೊತ್ತಿರ್ಲಿಲ್ಲ. ಆದರೆ ನಿಜವಾಗಿ ಹೇಳುತ್ತೀರೋ, ಅಲ್ಲವೇ—?" ಎಂದು ಕೇಳಿದರು.

"ಆಹ್ಹಾ! ಸುಳ್ಳು ಯಾಕೆ ಹೇಳಬೇಕು, ಸ್ವಾಮಿಾ, ನಿಮ್ಮತ್ರ? ಇದೇ ನಮ್ಮ ಸಂಪ್ರದಾಯ" ಎಂದು ಜನಾರ್ಧನಯ್ಯನವರು ತಮ್ಮ ಪರವಾಗಿ ಕೂಡಿಸಿ, ಭಾಗವತರ ಮಾತನ್ನು ಸಮರ್ಥಿಸಿದರು.

"ಸರಿ ಸರಿ, ಹಾಗಾದರೆ ಚಿಂತೆಯಿಲ್ಲ. ಸ್ವಲ್ಪ ಮೋಸ ಆಯಿತು" ಎಂದು ನಾಗರಾಜರು ಅನ್ನುತ್ತಲೇ, ಮಿಕ್ಕವರಿಂದ "ಕೂತುಕೊಳ್ಳಿ, ಎಲ್ಲರೂ ಕೂತುಕೊಳ್ಳಿ!" ಎಂಬ ಮಾತುಗಳು ಹೊರಟವು.

ಎಲ್ಲರೂ ತಂತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಉತ್ಸಾಹವು ಮುಂಚಿನಂತೆಯೇ ತುಂಬಲಾರಂಭಿಸಿತು. 'ವಾಚಕವು' ಎಂದಿನಂತೆ ಸಾಂಗವಾಗಿ ನಡೆಯಿತು. ಆದರೆ ದಿನಂಪ್ರತಿ ಸಮಾಪ್ತಕಾಲದಲ್ಲಿ 'ಗದುಗಿನ ವೀರ ನಾರಾಯಣ' ಎಂದು ಹೇಳುವ ಬದಲಾಗಿ ಜನಾರ್ಧನಯ್ಯನವರು ಬೇರೆ ಪಾಠಾಂತರಗಳನ್ನು ಅಲ್ಲಲ್ಲಿ ಸೇರಿಸಿದರು.

"ಮನದಿ ಕೃಷ್ಣನ ಧ್ಯಾನ ಗೈಯುತ **ನಾಗರಾಜ** ಕೇಳೆಂದಾ"
"ಪಾಂಡುಕುವರನು ಹೊಕ್ಕನರಮನೆ **ಲಕ್ಕಣ್ಣಜ್ಜ** ಕೇಳೆಂದಾ"
"ಅಕುಟಲನು ಸಾರಿದನು ಬಳಿಕೀ। ವಿಕಟ ದುರ್ಯೋಧನನು ನಿಗಮ
ಪ್ರಕರ ಮೌಳಿಯ ಮೌಳಿಯತ್ತಲು ಸಾರ್ದು ಮಂಡಿಸಿದ **ಹಿರಿಯಣ್ಣ** ಕೇಳೆಂದಾ"

ದಿನಕ್ಕೆ ಒಂದೊಂದಾಗಿ ಹೆಸರು ಬರುತ್ತಲೇ, ಕ್ರಮಪ್ರಕಾರವಾಗಿ ಒಬ್ಬೊಬ್ಬರು "ಓ! ಓ!" ಎಂದು ಉತ್ತರ ಕೊಟ್ಟು, ಮನಸ್ಸಿನಲ್ಲಿ ಹಿಡಿಯಲಾರದಷ್ಟು ಆನಂದದಿಂದ ಉಬ್ಬಿದರು.

ಮೇಲೆ ಕೊಟ್ಟವುಗಳು ಯಾವ ಷಟ್ಪದಿಯ ಚರಣಗಳೆಂದು ನನಗೆ ತಿಳಿಯಲಿಲ್ಲ. ಇದನ್ನು ಕುರಿತು ಜನಾರ್ಧನಯ್ಯನವರೊಡನೆ ನಾಲ್ಕು ತಿಂಗಳುಗಳ ಬಳಿಕ ವಿಚಾರಿಸಿದಾಗ, ಅವರು ಛಂದಸ್ಸಿನ ವಿವರ ಹೇಳಲಿಲ್ಲ. ಅದರ ಬದಲಾಗಿ "ಈ ಚರಣಗಳ ಬೆಲೆ 150 ರೂಪಾಯಿ. ಇವುಗಳ ಅರ್ಥವನ್ನು ವಿವರಿಸಿದುದಕ್ಕೆ 200 ರೂಪಾಯಿ" ಎಂದು ಮೌಲ್ಯ ಪಾರಿತೋಷಕಗಳನ್ನು ಮಾತ್ರ ತಿಳಿಸಿದರು.

(ಸುವಾಸಿನಿ 1900–3)

ಕಮಲಪುರದ ಹೊಟ್ಲಿನಲ್ಲಿ

ಕಮಲಪುರದ ಬಂದರ್ ಸ್ಥಳವು ವಸಂತ ಋತುವಿನ ಸಂಧ್ಯಾತಪದಿಂದ ಸುಖ ಹೊಂದುತ್ತಲಿತ್ತು. ವೀರಪುರದಿಂದ ಬಂದು ದಂಡೆಯಲ್ಲಿ ನಿಂತಿದ್ದ ಒಂದೆರಡು ದೋಣಿಗಳು ನೀರಿನ ಸಣ್ಣ ಅಲೆಗಳ ಮೇಲೆ ಕುಣಿಯುತ್ತಲಿದ್ದವು. ದೋಣಿಗಾರನು ಈಳಿಗೆಯನ್ನು ಕಾಲಿಂದ ಒತ್ತಿ ಹಿಡಿದು, ಕೈಯಲ್ಲಿದ್ದ ಮೀನನ್ನು ತರಿದು, ಬಳಿಯು ನೀರು ತುಂಬಿದ ಮಣ್ಣಿನ ಪಾತ್ರೆಗೆ ಒಟ್ಟುತ್ತಿದ್ದನು. ಆಗಾಗ ಹಾರಿ ಬರುವ ಕಾಗೆಗಳನ್ನು ಅಟ್ಟುತ್ತಿದ್ದನು. ಸ್ವಲ್ಪ ದೂರದಲ್ಲಿ ಅಂಬಿಗರ ಹೆಂಗಸರು ಸೊಂಟಕ್ಕೆ ಮುಟ್ಟುವಷ್ಟು ನೀರಿಗೆ ಇಳಿದು ಥಕ್ಕನೆ ಮುಳುಗು ಹಾಗಿ ಕೆಸರಿನಲ್ಲಿದ್ದ ಚಿಪ್ಪು ಮೀನುಗಳನ್ನು ಕೈತುಂಬಾ ಆಯ್ದುಕೊಂಡು ತಮ್ಮ ಮೈ ಬಟ್ಟೆಯ ಪದರಿನ ಚೀಲವನ್ನು ತುಂಬಿಸುತ್ತಿದ್ದರು. ದಡದ ಮೇಲಿದ್ದ 'ಮಾಪಿಳ್ಳೆ' ಯುವಕನು ಕೃಷ್ಣಕಾಯರಾದ ಈ ಯೋಜನಗಂಧಿಯರನ್ನು ಕದ್ದು ನೋಡುತ್ತಾ ಏನು ಏನೋ ಯೋಚಿಸುತ್ತಲಿದ್ದನು. ಎಲ್ಲಿ ನೋಡಿದರೂ ಜನಗಳ ಗಲಭೆ, ಬಂಡಿಗಳ ಚೀತ್ಕಾರ, ಹೊರೆಯಾಳುಗಳ ಕಲರವ. ಈ ಕಡೆಯಲ್ಲಿ ಗಟ್ಟದಿಂದ ಇಳಿದ ಕಾಫಿಯ ಮೂಟೆಗಳನ್ನು ಸಮುದ್ರದಲ್ಲಿನ ಹಡಗುಗಳಿಗೆ ಸಾಗಿಸುತ್ತಿರುವರು. ಇದೋ, ಇಲ್ಲಿ ರಾಶಿ ಹಾಕಿದ ಅಕ್ಕಿ ಹೊರೆಗಳನ್ನು ಎಣಿಸಿ ಎಣಿಸಿ ವರ್ತಕನು ಆಳುಗಳನ್ನು ಕೂಗಿ ಕರೆಯುತ್ತಿರುವನು. ಅಲ್ಲಿ ಬೊಂಬೈಯಿಂದ ಬಂದ ಜೀನಸುಗಳನ್ನು ದಡದ ಮೇಲೆ ಇಳಿಸುತ್ತಿರುವರು. ಇಲ್ಲಿ 'ಮಾನಿಫೆಸ್ತ್' ಬರೆಯುವ ಗುಮಾಸ್ತ ಮುದುಕನು ಕನ್ನಡಕದ ಕಣ್ಣುಗಳನ್ನು ಎತ್ತಿ ಹಿಡಿದು ಕಿವಿಯ ಮೇಲಿನ ಲೇಖನಿಯನ್ನು ಆಗಾಗ ಸೆಳೆಯುತ್ತಾ ಪಾರುಪತ್ಯವನ್ನು ನಡೆಸುತ್ತಲಿರುವನು. ಬಿಳೀ ಸರದಾರನೊಬ್ಬನು ಬಿಳೀದೋಣಿಯ ಚುಕ್ಕಾಣಿಯನ್ನು ಕೈಯಿಂದ ಹಿಡಿದು ಕಡಲ ತಡಿಗೆ ಹೋಗುತ್ತಿರುವನು. ದೋಣಿಯಲ್ಲಿ ಅವನ ಪೇದೆಯು ಕೋವಿಯನ್ನು ಹಿಡಿದು ನಿಂತಿರುವನು. ಇತ್ತ ಕೆಲವು ಮಂದಿ ಗೃಹಸ್ಥರು ವಾಯುಸೇವನೆಗೆ 'ಕಮಿಟೀ' ಮಾಡಿಕೊಂಡು ತಮ್ಮ ಭೂಷಣೆಯನ್ನೇ ಸಾರುತ್ತಿರುವರು. ಸರಕಾರದ ಆಫೀಸುಗಳ ಗುಮಾಸ್ತರೆಲ್ಲಾ ಸಾಯಂಕಾಲದ ವಿಹಾರಕ್ಕೆ ಬರುವುದಕ್ಕೆ ಇನ್ನೂ ಹೊತ್ತಾಗಿರಲಿಲ್ಲ. ಬಂದಿದ್ದವರಲ್ಲಿ ಒಬ್ಬಿಬ್ಬರು ಮೂರು ಪೈಸೆ 'ಹೊಟ್ಲಿ' ನ ಕಡೆ ಹೋಗುತ್ತಿದ್ದರು. ಹೊಟ್ಲಿನಲ್ಲಿ ನೈವೇದ್ಯವನ್ನು ತೀರಿಸಿದವರಲ್ಲಿ ಕೆಲವರು ಮೀಸೆಗೆ ವಸ್ತ್ರಪೂಜೆಯನ್ನು ಮಾಡುತ್ತಿದ್ದರು. ಕೆಲವರು ಚುಟ್ಟಾವಿನ ಹೊಗೆಯಿಂದ ಧೂಪವನ್ನು ಹಾಕುತ್ತಿದ್ದರು. ಮತ್ತೂ ಕೆಲವರು ಬೀಡಿ ಸೇದುವುದಕ್ಕೆ ಬೆಂಕಿ ಹಚ್ಚಿ ದೀಪಾರಾಧನೆಯನ್ನು ಮಾಡುತ್ತಿದ್ದರು. ಎಲ್ಲರೂ ಹಣಕ್ಕೆ ಮೊದಲೇ ಅರ್ಘ್ಯವನ್ನು ಕೊಟ್ಟಿದ್ದರು.

'ಹೊಟ್ಲಿ' ನ ಯಜಮಾನರು ಪೂರ್ಣಸಾಮಿ ಅಯ್ಯಂಗಾರರು. ಈ ಹೆಸರನ್ನು ಕೆಲವರು ಪೊನ್ನುಸ್ವಾಮಿ ಎಂದು ಸಂಕ್ಷೇಪಿಸಿರುವರು. ಕೆಲವರು ಪೆಣ್ಣುಸ್ವಾಮಿ ಎಂದೂ ಪೊಣ್ಸಾಮಿ ಎಂದೂ ಸಕಾರಣವಾಗಿ ಕರೆಯುವುದುಂಟು. ಏಕೆಂದರೆ, 20 ವರ್ಷಗಳ ಕೆಳಗೆ ಅಯ್ಯಂಗಾರರು ಒಂದು ಪೆಣ್ಣಿಗೋಸ್ಕರ ಊರುಬಿಟ್ಟು ಹೋಗಿದ್ದರು. ಬಳಿಕ ಶ್ರೀರಂಗ, ತಿರುಪತಿ, ಜಗನ್ನಾಥ, ರಾಮೇಶ್ವರ, ಮೊದಲಾದ ಪುಣ್ಯಸ್ಥಳಗಳಿಗೆ ಯಾತ್ರೆ ಮಾಡಿ, ಅಂತು ಸ್ವಲ್ಪ ಹಣವನ್ನು ಹೇಗೋ ಕಟ್ಟಿಕೊಂಡು, ಮರಳಿ ಕಮಲಪುರಕ್ಕೆ ಬಂದು, ಈ 'ಹೊಟ್ಲ' ನ್ನು ಪರೋಪಕಾರಾರ್ಥವಾಗಿಯೇ ಇಲ್ಲಿ ಸ್ಥಾಪಿಸಿದರು. ಯಾತ್ರೆಗಳಿಂದ ಲಾಭವುಂಟೆಂದು ಹೇಳುವರು. ನಮ್ಮ ಅಯ್ಯಂಗಾರ

ರಾದರೊ. ದೇಶವಿದೇಶದ ಮಿಠಾಯಿಯ ಕ್ರಮವನ್ನೂ, ನಾನಾ ಭಾಷೆಗಳು ಅಲ್ಪಸ್ವಲ್ಪ ಪರಿಚಯವನ್ನೂ, ಆಶ್ಚರ್ಯಕರವಾದ ಸಮಾಚಾರ ಸಂಗ್ರಹವನ್ನೂ ಮಾಡಿಕೊಂಡಿದ್ದರು. ಅವರಿಗೆ ಮಕ್ಕಳು ಮರಿ ಇರಲಿಲ್ಲ. ಆದರೂ ನಲ್ಲೂರು ನೀಲಾಂಬೆಯ ಕಿರಿಯ ಮಗನು ಮಾತ್ರ ಇವರನ್ನು "ಅಪ್ಪಾ! ಅಪ್ಪಯ್ಯ!" ಎಂದು ಕೂಗಿ ಕರೆಯುತ್ತ ದಿನಕ್ಕೆ ಎರಡು ಬಾರಿ ಕಾಸು, ಕೊಂಡು ಹೋಗುತ್ತಿದ್ದನು. ಸ್ವತಂತ್ರವಾದ ಜೀವನವನ್ನು ಕಲ್ಪಿಸ ಬೇಕೆಂಬ ಉದ್ದೇಶದಿಂದ 'ಹೊಟ್ಲ' ನ್ನು ತಾನು ಮಾಡಿರುವೆನಲ್ಲದೆ, ಅದರಿಂದ ಪ್ರಯೋಜನಾಂಶವೇನೂ ಇಲ್ಲವೆಂದು ಅವರು ಯಾವ ಕಾರಣದಿಂದಲೋ ಗೊಣಗುಟ್ಟುತ್ತಿದ್ದರು. ಆದರೂ ಗ್ರಾಹಕರ ಸಂಖ್ಯೆ ದಿನೇದಿನೇ ಏರಿಹೋಗುತ್ತಲಿತ್ತು. ಒಂದು ಪೈಸೆಯ ಕಾಫಿ ಕುಡಿಯುವುದಕ್ಕೆ ಬಂದವನು ಸಹ ಅಯ್ಯಂಗಾರರ ಯಾತ್ರಾ ಸಮಾಚಾರವನ್ನು ಕೇಳುತ್ತ ಕೇಳುತ್ತ, ತಿಂದ ತಿಂಡಿಯನ್ನು ತಿಳಿಯದೆ, ಉಡಿಯಲ್ಲಿದ್ದ ಹಣವನ್ನೆಲ್ಲಾ ಸಮರ್ಪಿಸಿ ಹೋಗುತ್ತಿದ್ದನು. ಒಬ್ಬಿಬ್ಬರು, ಅಯ್ಯಂಗಾರರು ತಮ್ಮ ಸಮಾಚಾರಗಳ 'ಮೂಟೆಯನ್ನು ಬಿಚ್ಚುವಂತೆ' ಮಾಡಿ, ಅವರು ಅದರ ಆನಂದದಲ್ಲಿ ಮಗ್ನರಾಗಿದ್ದ ಸಮಯ ನೋಡಿ, ಮೆಲ್ಲನೆ ಮಾಯವಾಗುತ್ತಿದ್ದರು. ತತ್ಕ್ಷಣ ದಲ್ಲಿಯೇ ಅಯ್ಯಂಗಾರರು ಬೆಚ್ಚಿಬಿದ್ದಂತಾಗಿ, ಅವರ ಬೆನ್ನುಹಿಡಿದು, ಹಣವನ್ನು 'ವಸೂಲ್' ಮಾಡುತ್ತಿದ್ದರು.

ಮೊದಲು ಮೊದಲು ಪೂರ್ಣ ಸ್ವಾಮಿಯವರಿಗೆ ಕಮಲಪುರದ ಯುವಕರನ್ನು ಕುರಿತು ಒಳ್ಳೆಯ ಅಭಿಪ್ರಾಯವಿತ್ತು. ಇತ್ತಲಾಗೆ ಆ ಅಭಿಪ್ರಾಯವು ಬೇರೆಯಾಗಿ ಹೋಯಿತು. ಅನೇಕ ಗ್ರಾಹಕರು ಲಡ್ಡು ತಿನ್ನುವ ಬದಲಾಗಿ ದುಡ್ಡು ತಿನ್ನಲು ಪ್ರಾರಂಭಿಸಿದರು. ಈ ರೋಗವನ್ನು ನಿವಾರಿಸುವುದಕ್ಕೆ ಅಯ್ಯಂಗಾರರು ನಾನಾ ಉಪಾಯ ಮಾಡಿದರು. ಬರತಕ್ಕ ಹಣವನ್ನು ಲೆಕ್ಕದ ಪುಸ್ತಕದಲ್ಲಿ ಮುಂದೆ ಸಾಗಿಸುತ್ತ ಹೋದರು. ಕಾರಣಾಂತರಗಳಿಂದ ದೂರ ದೇಶಗಳಿಗೆ ಹೋಗಿದ್ದ ಪ್ರಿಯ ಗ್ರಾಹಕರಿಗೆ ತನ್ನ ಕ್ಷೇಮವಾರ್ತೆಯನ್ನು ಕುರಿತು ಕಾಗದಗಳನ್ನು ಬರೆದು ನೋಡಿದರು. 'ಬಡವನ ಬಿನ್ನಹ' ಎಂದು ಹಲಗೆಯಲ್ಲಿ ಸಾಲಗಾರನ ಹೆಸರು ಬರೆದು 'ಹೊಟ್ಲ' ನ ಗೋಡೆಗೆ ತೂಗಾಡಿಸಿದರು. ಕೊನೆಗೆ ಲೆಕ್ಕವನ್ನು ಹೇಗೂ ಸರಿ ಮಾಡದೆ ಬಿಡಲಿಲ್ಲ; ಆರು ವರ್ಷ ಗಳಿಂದ ಸಾಗಿಸಿತಂದ ಸಾಲಗಾರರ ಹೆಸರನ್ನೆಲ್ಲಾ ಲೆಕ್ಕದ ಪುಸ್ತಕದಲ್ಲಿ ಕೆಂಪು ಶಾಯಿಯ ಗೆರೆಗಳಿಂದ ಅಡಗಿಸಿಬಿಟ್ಟರು.

ಈ ದಿನ ಸಾಯಂಕಾಲದಲ್ಲಿ 'ಹೊಟ್ಲ'ನೊಳಕ್ಕೆ ಅನೇಕರು ಕೂಡಿದ್ದರು. ಕರಿಯೂರು ಶ್ಯಾಮರಾಯರು ಗೋಧಿಯ ರೊಟ್ಟಿಯನ್ನು ಕಾಫಿ ತುಂಬಿದ ಪಾತ್ರೆಯಲ್ಲಿ ನೆನೆ ಹಾಕುತ್ತಿದ್ದರು. ಮಲೆನಾಡು ಕುಪ್ಪಣ್ಣನವರು 'ಟೀ ಗ್ಲಾಸನ್ನು' ಮುಂದಿರಿಸಿ, ತುಟಿಯಿಂದ ಮೆಲ್ಲಮೆಲ್ಲನೆ ಚೀಪುತ್ತಿದ್ದರು. ಇವರಿಬ್ಬರ ಮೇಲೆ ಅಯ್ಯಂಗಾರರು ವಕ್ರವಾಗಿದ್ದರು. ಅಯ್ಯಂಗಾರರಿಗೆ ಸಿಟ್ಟು ಬರುವುದೆಂದೇ ಇವರಿಬ್ಬರೂ ಕುಚೇಷ್ಟೆಯನ್ನು ಆರಂಭಿಸುತ್ತಿದ್ದರು. ಎರಡು ದಿನಗಳ ಹಿಂದೆ ಈ ಪುಣ್ಯಾತ್ಮರು 'ಹೊಟ್ಲ'ನಲ್ಲಿ ಹೊಟ್ಟೆತುಂಬಾ ತಿಂದು, ಕುಡಿದು, ಅಯ್ಯಂಗಾರರನ್ನು ಕೆರಳಿಸಿ ಹೋಗಿಬಿಟ್ಟಿದ್ದರು. ಅಯ್ಯಂಗಾರರು "ಸ್ವಂತ ಅನುಭವ" ವನ್ನು ಕುರಿತು ಕೆಲವು ಮಾತುಗಳನ್ನು ಬಂದವರೊಡನೆ ಮನೋರಂಜನೆಗಾಗಿ ಹೇಳುತ್ತಿದ್ದಾಗ, ಅಯ್ಯಂಗಾರರು ಹೇಳುವುದೆಲ್ಲಾ ಸುಳ್ಳೆಂದೂ, ಗ್ರಾಹಕರು ತನ್ನೊಡನೆ ತಿಳಿದೂ ತಿಳಿಯದೆ ಹೆಚ್ಚು ವ್ಯಾಪಾರ ಮಾಡುವುದಕ್ಕೋಸ್ಕರ ಅತಿಶಯೋಕ್ತಿಯನ್ನು ಹೇಳುವ ಉಪಾಯ ಮಾಡಿರುವರೆಂದೂ ಈ ಮುಟ್ಠಾಳರು ಜಗಳವಾಡಿದರು. ಅಯ್ಯಂಗಾರರು ತಾನೆಂದ ಸಮಾಚಾರ ಸುದ್ದಿಯೆಲ್ಲಾ ಸುಳ್ಳಲ್ಲವೆಂದು ಈ ಅಧಮರಿಗೆ ಮನಗಾಣಿಸುವ ಉಪಾಯವನ್ನು ನಿಶ್ಚಯಿಸಿದರು. ಈ ದಿನ ಕುಪ್ಪಣ್ಣನವರು ಕಲಹಕ್ಕೆ ನಾಂದಿಯಾಗಿ "ರಾಯರೇ! ಅಯ್ಯಂಗಾರರು ರಾಮೇಶ್ವರ ಸಮುದ್ರವನ್ನು ಈಸಿಹೋದ ಸಂಗತಿಯನ್ನು ಬಲ್ರೇ?" ಎಂದು ಕೇಳಿದರು.

ಪೂರ್ಣಸ್ವಾಮಿ ಅಯ್ಯಂಗಾರರು ಎಂದಿನಂತೆ ಹುಬ್ಬು ಗಂಟಿಕ್ಕದೆ, ಮನಸ್ಸಿನೊಳಗೆ ಆನಂದದಿಂದ ಉಕ್ಕುತ್ತಲಿದ್ದರು.

ಶ್ಯಾಮರಾಯ:—"ಅಂದು ನಿಮ್ಮೊಡನೆ ಯಾರಿದ್ದರು ಅಯ್ಯಂಗಾರ್ರೆ? ಈ ಆಪತ್ತಿನಿಂದಲೂ ನಿಮ್ಮನ್ನು ಪಾರು ಮಾಡಿಸಿದವರು ಆ ಗುಂಡಾಚಾರ್ರೆ?"

ಕುಪ್ಪಣ್ಣ:—"ಹಾಗಾಗಿರಬೇಕು. ಇಲ್ಲವಾದರೆ ನಮ್ಮ ಅಯ್ಯಂಗಾರ್ರು ಅಂಡಮಾನ್ ದ್ವೀಪಗಳಿಗೆ ಹೋಗುತ್ತಿದ್ದರೋ ಏನೋ? "

ಅಯ್ಯಂಗಾರರು ಮೌನವ್ರತವನ್ನು ಅವಲಂಬಿಸಿದ್ದುದನ್ನು ನೋಡಿ, ಶ್ಯಾಮರಾಯರು "ನಿಮ್ಮ ಗುಂಡಾಚಾರ್ರು ಈಗ ತಾನೇ ಎಲ್ಲಿರುವರು? " ಎಂದು ಕೇಳಿದರು.

ಇಷ್ಟರಲ್ಲಿ ಯಾರೋ ಒಬ್ಬರು 'ಹೊಟ್ಲಿ'ನ ಒಳಕ್ಕೆ ಕಾಲಿಟ್ಟರು. ಅಯ್ಯಂಗಾರರು ಕಾರ್ಯಾಂತರದಿಂದ ಒಳಕ್ಕೆ ಹೋಗಿದ್ದರಿಂದಲೂ, ಉಳಿದವರ ಪರಿಚಯವು ವ್ಯಕ್ತಿಗೆ ಇಲ್ಲದಿದ್ದುದರಿಂದಲೂ, ಬಂದವನು ಒಂದು ನಿಮಿಷ ಅಲ್ಲಿಯೇ ನಿಂತುಬಿಟ್ಟನು. ಅಯ್ಯಂಗಾರರು ಹೊರಕ್ಕೆ ಬರುತ್ತಲೇ ವ್ಯಕ್ತಿಯನ್ನು ನೋಡಿ ಉಬ್ಬಿದರು. ಬಂದವನು ಪ್ರತಿಯಾಗಿ ನಗುವನ್ನು ತೋರಿಸುತ್ತ "ಏನ್ ಅಯ್ಯಂಗಾರರೇ? ಕ್ಷೇಮವೇ?" ಎಂದು ಕೇಳಿದನು.

ಅಯ್ಯಂಗಾರರು ಬಂದವನನ್ನು ಯಥೋಚಿತವಾಗಿ ಮನ್ನಿಸಿ "ಎಂದು ಬಂದ್ರಿ ಗುಂಡಾಚಾರ್ರೆ? " ಎಂದು ಕೇಳಿದರು.

ಉಳಿದವರು ಸ್ತಬ್ಧರಾಗಿ ಬಂದವನನ್ನು ಕಣ್ಣಿಟ್ಟು ನೋಡುತ್ತ ಕುಳಿತರು.

ವ್ಯಕ್ತಿಯು "ಅಯ್ಯಂಗಾರರೇ! ಏನು ಹೇಳಲಿ! ನಿಮ್ಮನ್ನು 10 ವರ್ಷಗಳಿಂದ ನಾವು ಹುಡುಕುತ್ತಿದ್ದೇವೆ. ಈ ಹೊತ್ತು ನಿಮ್ಮ ದರ್ಶನವಾಯಿತು." ಎಂದು ಹೇಳಿ ದಣುವನ್ನು ಆರಿಸುತ್ತಿದ್ದನು. ಅಯ್ಯಂಗಾರರು ಸ್ವಲ್ಪ ಆಲೋಚಿಸಿದಂತೆ ಮಾಡಿ, "ಆ ಬಳಿಕ ನಮಗೂ ತಮಗೂ ಭೇಟಿ ಸಿಗಲಿಲ್ಲ ಅಲ್ಲವೇ?" ಎಂದು ಕೇಳಿ ನಗುತ್ತ, ಕುಪ್ಪಣ್ಣನವರನ್ನು ನೋಡಿದರು.

ಕುಪ್ಪಣ್ಣ:—'ಯಾರ ಭೇಟಿ?'

ಅಯ್ಯಂಗಾರರು ಅಲಕ್ಷ್ಯದಿಂದ "ನಮಗೂ ತಮಗೂ ಆಮೇಲೆ ದರ್ಶನವಾಗಿಲ್ಲ. ನಾನು ರಾಮೇಶ್ವರ ಸಮುದ್ರ ದಾಟಿ, ಮುಣುಗಿದ ಹಡಗನ್ನು ಬೆನ್ನುಕೊಟ್ಟು ತೇಲಿಸಿ ಕುಮಾರಿಯ ಭೂಶಿರವನ್ನು ಮುಟ್ಟಿದ ಮೇಲೆ ತಮ್ಮನ್ನು ನೋಡಲಿಲ್ಲ. ನಿಜ" ಎಂದು ಹೇಳಿ ಶ್ಯಾಮರಾಯರ ಮೋರೆಯನ್ನೇ ದೃಷ್ಟಿಸಿದರು.

ವ್ಯಕ್ತಿಯು "ಸರಿ ಸರಿ. ಆ ದಿನಗಳೆಲ್ಲಾ ಹೋಯ್ತು. ಈಗ ನಮ್ಮ ಮಾತುಗಳನ್ನು ಕೂಡಾ ನಂಬುವವರು ಯಾರೂ ಇಲ್ಲ" ಎಂದು ಹೇಳಿ ತನ್ನನ್ನೇ ನೋಡುತ್ತಿದ್ದ ಕುಪ್ಪಣ್ಣನವರನ್ನು ಕುರಿತು ಅಯ್ಯಂಗಾರರೊಡನೆ "ಇವರು ಯಾರು?" ಎಂದು ಕೇಳಿದನು.

ಕುಪ್ಪಣ್ಣನವರು ಈ ಸಂದರ್ಭವನ್ನು ಹಿಡಿದು ಮಾತನಾಡುವಂತೆ ಮುಂದೆ ಬಂದು "ಆಚಾರ್ರೆ?! ನಿಮ್ಮ ಹೆಸ್ರನ್ನು ನಾವು ಅಯ್ಯಂಗಾರರ ಬಾಯಿಂದ ದಿನೇ ದಿನೇ ಕೇಳಿ ಗೊತ್ತುಂಟು. ನಮ್ಮ ಪೂರ್ಣಸ್ವಾಮಿ ಅಯ್ಯಂಗಾರರು ಕಾವೇರಿ ಸ್ನಾನದಲ್ಲಿ......"

ವ್ಯಕ್ತಿಯು "ಹೌದು! ಹೌದು"! ಎಂದು ತಲೆದೂಗಿ "ಅವರನ್ನು ರಕ್ಷಿಸಿದ ಗುಂಡಾಚಾರ್ರು ನಾವು. ನಾವು ಇಲ್ಲದಿದ್ರೆ ನಮ್ಮ ಅಯ್ಯಂಗಾರರು ಅಂದು ಮೊಸಳೆಗೆ ಆಹುತಿಯಾಗುತ್ತಿದ್ದರು. ಏನ್ ಅಯ್ಯಂಗಾರರೇ? 50 ಅಡಿ ಉದ್ದ ಮೊಸಳೆ ಎಲ್ಲಿ? ನಮ್ಮ ಚಿಕ್ಕದೊಂದು ಪವಿತ್ರದರ್ಭೆ ಎಲ್ಲಿ? ಇವರು ಯಾರು!" ಎಂದು ಅಯ್ಯಂಗಾರರೊಡನೆ ಕೇಳಿದನು.

ಅಯ್ಯಂಗಾರರು ಅಲಕ್ಷ್ಯದಿಂದ "ಅವರು ದಲಾಲ್ ಕುಪ್ಪಣ್ಣ. ನಾವೆನ್ನುವುದೆಲ್ಲಾ ಸುಳ್ಳೆಂದು ಹೇಳುವ ಗೃಹಸ್ಥರು. ನಮಗೆ ಅವರ ಗೊಡವೆ ಯಾಕೆ? ಈವೂರಲ್ಲಿ ಯಾರು ಅವನ್ನು ಬಲ್ಲರು?" ಎಂದು ಹೇಳಿದರು.

ಶ್ಯಾಮರಾಯ:—"ಇವರೇ ಏನ್ ಗುಂಡಾಚಾರ್ರು?"

ಗುಂಡಾಚಾರ್ಯ:—ಕಾವೇರಿ ಸ್ನಾನದಲ್ಲಿ ಮೊಸಳೆ ಬಾಯಿಂದ ಅಯ್ಯಂಗಾರರನ್ನು ಬಿಡಿಸಿ ಕಾಯ್ದ ಗುಂಡಾಚಾರ್ಯರು ನಾವೇ! ಮಲೆಯಾಳ ಸೀಮೆಯಲ್ಲಿ ಅಯ್ಯಂಗಾರರು ರೋಗದಿಂದ ಹಾಸಿಗೆ ಹಿಡಿದು ಮಲಗಿದ್ದಾಗ, ಅವರ ಆರೈಕೆಯನ್ನು ನೋಡಿ ಅವರನ್ನು ಬದುಕಿಸಿದ ಗುಂಡಾಚಾರ್ಯರೂ ನಾವೇ! 'ನಿನ್ನನ್ನು ಎಂದೂ ಮರೆಯಲಾರೆ! ನಿನ್ನನ್ನು ಎಂದೂ ಬಿಟ್ಟು ಹಾಕಲಾರೆ' ಎಂದು ಅಯ್ಯಂಗಾರರು ನನಗೆ ಮಾತು ಕೊಟ್ಟಿದ್ದರು. ನಾನು ಒಬ್ಬಂಟಿಗನಾಗಿ ತಿರುಗಾಡುತ್ತಿದ್ದಾಗ, ಎಷ್ಟೋ ಸಲ ಅಯ್ಯಂಗಾರರನ್ನು ನೆನೆದೆ. ಒಂದು ಸಲ ಅಯ್ಯಂಗಾರರನ್ನು ನೋಡಿದರೆ, ನನ್ನ ಕಷ್ಟಗಳೆಲ್ಲಾ ಪರಿಹಾರವಾಗುವುವು ಎಂದು ತಿಳಿದುಕೊಂಡೆ. ಶ್ರೀಕೃಷ್ಣನ ದಯೆಯಿಂದ ಈ ಹೊತ್ತು ಅವರನ್ನು ನೋಡಿ ಧನ್ಯನಾದೆ. "ಅಯ್ಯಂಗಾರ್ರೇ! ಎಲ್ಲಾ ಮರೆತಿರುವಿರೇ?"

ಅಯ್ಯಂಗಾರ:—"ಇಲ್ಲ! ಸ್ವಾಮಿ! ನನ್ನ ಪ್ರಾಣ ಉಳಿದದ್ದು ತಮ್ಮಿಂದ. ತಮ್ಮ ಉಪಕಾರವನ್ನು ಆಜನ್ಮ ಮರೆಯಲಾರೆ. ಪ್ರತ್ಯುಪಕಾರ ಮಾಡಲು ಸಾಮರ್ಥ್ಯವಿದ್ದರೆ ನಾನು ಸಿದ್ಧನಾಗಿದ್ದೇನೆ."

ಕುಪ್ಪಣ್ಣ:—"ಅವರು ಸಾಯುವ ಹಾಗಿದ್ದರೆ, ನೀವು ಸಹಾಯ ಮಾಡುವುದೇ ಪ್ರತ್ಯುಪಕಾರ."

ಅಷ್ಟರಲ್ಲಿ ಅಯ್ಯಂಗಾರರ ಮಾತಿನ ಪ್ರಕಾರ ನೌಕರನು ಕಾಫಿ ತುಂಬಿದ ಪಾತ್ರೆಗಳನ್ನೂ ತಿಂಡಿಯ ದೊನ್ನೆಗಳನ್ನೂ ತಂದಿಟ್ಟನು. ಗುಂಡಾಚಾರ್ಯರು ಒಂದು ಕಣ್ಣನ್ನು ಭಕ್ಷ್ಯದ ಕಡೆಗೂ ಒಂದು ಕಣ್ಣನ್ನು ಕುಳಿತವರ ಕಡೆಗೂ ಇಟ್ಟು, "ಅದಕ್ಕಿಂತಲೂ ಸಿಂಹಲ ದ್ವೀಪದಲ್ಲಿ ಇವರನ್ನು ಮೂರು ಕಾಡಾನೆಗಳು ಅಟ್ಟಿಕೊಂಡು ಬಂದಾಗ ನಾವು......" ಎಂದು ಅರೆನುಡಿಯಲ್ಲಿ ತಿಂಡಿಯನ್ನು ನೋಡುತ್ತ ಕುಳಿತರು.

ತಮ್ಮ 'ಟಿಫಿನ್' ತೀರಿಸಿ ಕುಳಿತ ಕುಪ್ಪಣ್ಣ, ಶ್ಯಾಮರಾಯರು ಇವರ ಸಮಾಚಾರಕ್ಕೆ ಆಸೆಗೊಂಡು, ಗುಂಡಾಚಾರ್ಯರ ಹತ್ತಿರಕ್ಕೆ ಬಂದರು. ಅಯ್ಯಂಗಾರರು "ತಿನ್ನಿ! ತಿನ್ನಿ!" ಎಂದು ಹೇಳಿದಾಗ ಈ ಮಾತನ್ನು ತನ್ನನ್ನು ಉದ್ದೇಶಿಸಿ ಹೇಳಿದ್ದೆಂದು ತಿಳಿದು, ಕುಪ್ಪಣ್ಣನವರು ದೊನ್ನೆಯೊಳಗೆ ಬೆರಳು ಮುಳುಗಿಸಿ, ಎಡಗೈಯಿಂದ ಕಾಫಿಯ ಪಂಚಪಾತ್ರೆಯನ್ನು ಹಿಡಿದುಕೊಂಡರು. ಶ್ಯಾಮರಾಯರ ಕೈಗಳೂ ಹಾಗೆಯೇ ಮಾಡತೊಡಗಿದುವು. ಅಯ್ಯಂಗಾರರು ಚೇಳು ಕಚ್ಚಿದ ಮೋರೆ ಮಾಡಿದರು.

ನಿಮಿಷ ಮಾತ್ರದಲ್ಲಿ ಭಕ್ಷ್ಯವೆಲ್ಲಾ ಮಾಯವಾಯಿತು. ಗುಂಡಾಚಾರ್ಯರು "ಇನ್ನೂ ದಣುವು ಆರಲಿಲ್ಲ" ಎಂದು ಬೇಸರದಿಂದ ಹೇಳಿದರು. ಅಯ್ಯಂಗಾರರು ಉಳಿದ ಇಬ್ಬರನ್ನು ವಕ್ರದೃಷ್ಟಿಯಿಂದ ನೋಡುತ್ತ,

ಮನಸ್ಸಿಲ್ಲದ ಮನಸ್ಸಿನಿಂದ ಮತ್ತಷ್ಟನ್ನು ಗುಂಡಾಚಾರ್ಯರ ಕೈಬಳಿಯಲ್ಲಿಯೇ ತಂದಿಟ್ಟು, "ಮಹಾರಾಯ್ರೇ! ನಾನು ಮುಂಚೆ ಹೇಳಿದ ಸಂಗತಿಗಳೆಲ್ಲಾ ಪೂರ್ಣಸತ್ಯವೆಂದು ಈಗ ನಂಬುಗೆಯಾಯ್ತೇ?" ಎಂದು ಕೇಳಿದರು.

ಕುಪ್ಪಣ್ಣ:—"ಈ ಹೊತ್ತಿನ ಫಲಾಹಾರದಲ್ಲಿ ಮೊಸಳೆಯ ಸಂಗತಿಯೊಂದು ನಿಶ್ಚಯವೆಂದು ಕಂಡು ಬಂತು—ಗುಂಡಾಚಾರ್ರೇ! ಇಲ್ಲಿ ಎಷ್ಟು ದಿನವಿರುವಿರಿ?"

ಗುಂಡಾಚಾರ್ಯ:—"ನಮ್ಮ ಋಣಾನುಬಂಧ ಇದ್ದಷ್ಟು ದಿನಾ ಇಲ್ಲಿ ಇರುವೆವು."

ಅಯ್ಯಂಗಾರರಿಗೆ ಈ ಮಾತು ತಾನೇ ರುಚಿಸಲಿಲ್ಲ. ಗುಂಡಾಚಾರ್ಯರು ಕೈತೊಳೆದು ನಶ್ಯವನ್ನು ಕೇಳಿದರು. ಅಯ್ಯಂಗಾರರು ನಶ್ಯದ ಡಬ್ಬಿಯನ್ನು ಕೊಟ್ಟರು. ಗುಂಡಾಚಾರ್ಯರು ನಶ್ಯವನ್ನು ಕೈಯಲ್ಲಿ ಸುರಿದು, ಡಬ್ಬಿಯನ್ನು ಶ್ಯಾಮರಾಯರ ಕೈಗಿತ್ತರು. ಇವರು ಎರಡು ಮೂರು ಸಲ ಕೈಯಲ್ಲಿ ಕೊಂಡರೂ ಚಿವಟಿಯು ಸರಿಬಾರದೆ ಇದ್ದುದರಿಂದ, ಅರ್ಧ ತೊಲೆ ನಶ್ಯವನ್ನು ಮೂಗಿಗೆ ಸೇರಿಸುವ ಬದಲು ತಮ್ಮ ಡಬ್ಬಿಗೆ ಸೇರಿಸಿಬಿಟ್ಟರು. ಅಯ್ಯಂಗಾರರು ಹಲ್ಲು ಕಿತ್ತ ಹಾವಿನಂತೆ ತಳಮಳಗೊಂಡರು. ಕೊನೆಗೆ ಶ್ಯಾಮ ರಾಯರೂ ಕುಪ್ಪಣ್ಣನವರೂ ಮರುದಿನ ಬರುವೆವು ಎಂದು ಇಬ್ಬರಿಗೂ ಅಭಯಕೊಟ್ಟು ನಡೆದುಬಿಟ್ಟರು.

ಗ್ರಾಹಕರೆಲ್ಲರೂ 'ಹೊಟ್ಲಿಂದ' ಹೋದ ಬಳಿಕ ಗುಂಡಾಚಾರ್ಯರು ಮೀಸೆ ತಿರುವುತ್ತ "ಅಯ್ಯಂಗಾರರೇ! ನಾನು ಮಾಡಿದ್ದು ಹ್ಯಾಗಾಯಿತು? ಆ ಪಾಪಿಗಳು ನಿಮ್ಮನ್ನು ನಂಬುವ ಹಾಗೆ ಮಾಡಿದೆನೋ ಇಲ್ಲವೋ ಹೇಳಿ" ಎಂದರು.

ಅಯ್ಯಂಗಾರ:—ಸ್ವಲ್ಪ ತಾನೇ ಮೀರಿ ಹೋಯ್ತು. ನಾನು ಹೇಳಿದಷ್ಟೇ ಆಡಿದ್ದರೆ ಚೆನ್ನಾಗಿತ್ತು. ನೀನು ಸುಳ್ಳು ಹೆಚ್ಚು ಬೆರಿಸಿಬಿಟ್ಟೆ."

ಗುಂಡಾಚಾರ್ಯ:—"ಹಾಗೆ ಮಾಡಿದ್ರಿಂದ ಆ ಪಾಪಿಗಳು ನಂಬಿದ್ರು. ನಾನು ಬಣ್ಣ ಹಾಕಿದ್ರೂ ನನ್ನ ಮಾತುಗಳನ್ನು ಯಾರೂ ಸುಳ್ಳೆಂದು ಹೇಳಲಾರ್ರು."

ಅಯ್ಯಂಗಾರ:—"ನನ್ನ ನಶ್ಯವನ್ನೆಲ್ಲಾ ಹಂಚಿಬಿಟ್ಟು ಖಾಲಿ ಡಬ್ಬಿಯನ್ನು ಇಟ್ಟೆದ್ದಿ."

ಗುಂಡಾಚಾರ್ಯ:—"ನಾನು ಮಾತನಾಡುತ್ತಾ ಸ್ವಲ್ಪ ಆವೇಶಗೊಂಡಂತಾದೆ, ನೀವು ಹೇಳಿದ್ದನ್ನೆಲ್ಲಾ ಮರೆತುಬಿಟ್ಟೆ."

ಅಯ್ಯಂಗಾರ:—"ಹೌದು, ನೀನು ನಾಡದು ಆಗಬೋಟ ಹತ್ತಿ ಹೊನ್ನೂರಿಗೆ ಹೋಗುತ್ತೇನೆಂದು ಅವರೊಡನೆ ಹೇಳದೆ ಹೋದೆ."

ಗುಂಡಾಚಾರ್ಯ:—"ನಾಳೆ ಹೇಳಿದರೆ ಸರಿಯಷ್ಟೆ. ಅದು ಹೋಗಲಿ! ನಾವು ಮಾಡಿದ ಆಟ ಆ ಮುಟ್ಠಾಳರ ಕಣ್ಣು ಕಟ್ಟಿತು."

ಅಯ್ಯಂಗಾರ:—"ನಾಳೆ ಬೆಳಗಿನಿಂದಲೇ ನೀನು ಹೋಗುವೆನೆಂದು ಮೆಲ್ಲನೆ ಹೇಳುತ್ತಿರು. ಅಳಿಯನ ಮನೆಗೆ ಹೋಗುವೆನೆಂದು ಹೇಳು. ನಾಡದು ಹೋಗೋದಾದ್ರೆ, ನಮ್ಮ ಕರಾರ್ ಪ್ರಕಾರ ಒಂದು ವರಹಾ ಕೊಡುತ್ತೇನೆ."

ಗುಂಡಾಚಾರ್ಯರು ನಗುವನ್ನು ಅಡಗಿಸಿ ಮಾತೆತ್ತುವಷ್ಟರಲ್ಲಿ, ಯಾರೋ ಒಬ್ಬರು ಹೊಟ್ಲಿನ ಬಾಗಿಲ ಹಿಡಿದು ಕರೆದರು. ಅಯ್ಯಂಗಾರರು ಧ್ವನಿಯಿಂದ ಕುಪ್ಪಣ್ಣನವರಾಗಿರಬೇಕು ಎಂದು ತಿಳಿದು, "ಇಷ್ಟು ಹೊತ್ತಿಗೆ ಇಲ್ಲಿ ಕಾಫಿ ಸಿಕ್ಕಲಾರದಯ್ಯಾ!" ಎಂದು ಹೇಳಿ ಒಳಕ್ಕೆ ನಡೆದುಬಿಟ್ಟರು. ಗುಂಡಾಚಾರ್ಯರು ಹೊಟ್ಟೆಗೆ ಹಸಿವಿಲ್ಲದುದರಿಂದ ಅಯ್ಯಂಗಾರರ ಹಾಸಿಗೆಯನ್ನು ಹಾಸಿ ಮಲಗಿಬಿಟ್ಟರು. ಅಯ್ಯಂಗಾರರು ಊಟ ತೀರಿಸಿ ಶಯ್ಯಾಸೀನರಾದ ಗುಂಡಾಚಾರ್ಯರನ್ನು ನೋಡಿ, ಮನದೊಳಗೆ ಕುದಿಯುತ್ತ, ಹಲ್ಲು ಮಸೆಯುತ್ತ, ಒಳಕ್ಕೆ ಹೋದರು.

ಭಾನುವಾರ ಆಗಬೋಟು ಕಮಲಪುರಕ್ಕೆ ಮುಟ್ಟಿತು. ಅಯ್ಯಂಗಾರರು ಆಗಬೋಟು ಬಂದಿದೆ ಎಂದು ಎರಡು ಮೂರು ಸಲ ಗುಂಡಾಚಾರ್ಯರಿಗೆ ತಿಳಿಸಿದರು. ಗುಂಡಾಚಾರ್ಯರು ಈ ಮಾತನ್ನೇ ಕಿವಿಗೆ ಹಾಕಿಕೊಳ್ಳಲಿಲ್ಲ. 'ಹೊಟ್ಲಿನಲ್ಲಿ' ಬಂದವರೆಲ್ಲರೂ "ಗುಂಡಾಚಾರ್ಯರು ಈ ದಿನ ಹೋಗುವರು" ಎಂಬುದನ್ನು ತಿಳಿದಿದ್ದರು. ಆದರೆ ಗುಂಡಾಚಾರ್ಯರು ಬಂದವರೊಡನೆ ಮಾತುಕಥೆ ನಡೆಯಿಸುತ್ತಿರುವಾಗ, ತನ್ನ ಪ್ರಸ್ಥಾನವನ್ನು ಕುರಿತ ಒಂದು ಸೂಚನೆಯನ್ನಾದರೂ ಹಾಕಲಿಲ್ಲ. ಅಯ್ಯಂಗಾರರು ಅವರ ಮಾತುಗಳ ಪ್ರಸ್ತಾಪವನ್ನು ಆಗಾಗ ತಿರುಗಿಸಲು ಪ್ರಯತ್ನಿಸಿದರು. ಆದರೆ, ಅಯ್ಯಂಗಾರರು ಹೊನ್ನೂರ ರಥೋತ್ಸವವನ್ನು ಪ್ರಸ್ತಾಪಿಸಿ ಹುಬ್ಬುಗಳನ್ನು ಮಿಟುಕುವಾಗ ಗುಂಡಾಚಾರ್ಯರು ಪ್ಲೇಗ್ ಔಷಧವನ್ನು ಕುರಿತು ಮಾತನಾಡುತ್ತಿದ್ದರು. ಅಯ್ಯಂಗಾರರು ಇದನ್ನೆಲ್ಲ ಬಹಳ ತಾಳ್ಮೆಯಿಂದ ಸಹಿಸಿದರು. ಗಿರಾಕಿಗಳೆಲ್ಲರೂ ಕತ್ತಲಾದ ಬಳಿಕ ತಂತಮ್ಮ ಮನೆಗೆ ಹೋದರು.

ಅಯ್ಯಂಗಾರರು ಸಿಟ್ಟಿನಿಂದ ಕಿಡಿಕಿಡಿಯಾಗಿ, "ಇದರ ಅರ್ಥವೇನು?" ಎಂದು ಒದರಿದರು.

ಗುಂಡಾಚಾರ್ಯರು ಸಮಾಧಾನದಿಂದ "ಯಾವುದರ ಅರ್ಥ? ಪೊನ್ನಾಮಿ?" ಎಂದರು.

"ನನ್ನನ್ನು ಪೊನ್ನುಸ್ವಾಮಿ ಎಂದು ಕರೀಬೇಡ. ನಾಳೆ ಬೆಳಗ್ಗೆ ನೀನು ಇಲ್ಲಿಂದ ಹೊರಡಬೇಕು, ನೋಡು!" ಎಂದು ಅಯ್ಯಂಗಾರರು ಗರ್ಜಿಸಿದರು.

ಗುಂಡಾಚಾರ್ಯ:—"ಹೋಗಬೇಕು? ಎಲ್ಲಿ ಹೋಗಬೇಕು?"

ಅಯ್ಯಂಗಾರ:—"ಬೇಕಾದಲ್ಲಿ ಹೋಗು! ನೀನು ಇಲ್ಲಿಂದ ಹೋದ್ರೆ ಸರಿ."

ಗುಂಡಾಚಾರ್ಯ:—"ಅಯ್ಯಂಗಾರ್ರೇ! ಏನೋ ಏನೋ ಮಾತನಾಡುತ್ತಿರುವಿರಿ. ನಿನ್ನೆ ರಾತ್ರಿ ನಿದ್ದೆ ಹತ್ತಲಿಲ್ಲವೇನು?"

ಅಯ್ಯಂಗಾರ:—"ನಾಳೆ ಬೆಳಗ್ಗೆ ನೀನು ಹೋದ್ರೆ ಸರಿ! ಇಲ್ಲಾದ್ರೆ, ನಾನೇ ಕುತ್ತಿಗೆಗೆ ಕೈಯಿಕ್ಕುತ್ತೇನೆ. ನಾನು ಮಾಡಿದ ಕರಾರ್ ಗೊತ್ತುಂಟಲ್ಲವೇ?"

ಗುಂಡಾಚಾರ್ಯ:—"ಯಾವ ಕರಾರ್? ಕರಾರೋ, ಹುಣಸೆ ಪಚ್ಚಿಯೋ! ನಾಳೆ ತಲೆಗೆ ಎಣ್ಣೆ ಬಳಿದುಕೊಂಡು ಸ್ನಾನ ಮಾಡಬೇಕೆಂದಿರುವೆ..."

ಅಯ್ಯಂಗಾರರು ಸಿಟ್ಟನ್ನು ತಡೆಯಲಾರದೆ, "ನೀನು ಹೋಗುವಿಯೋ, ಇಲ್ಲವೋ ನಾಳೆ? ಆ ಅಧಮರಿಗೆ ನಾನು ಹೇಳಿದ್ದೆಲ್ಲಾ ಸರಿಯೆಂದು ತೋರಿಸಲಿಕ್ಕೆ ನಿನ್ನನ್ನು ಒಂದು ಸರಸ ಚೇಷ್ಟೆಗೆ ಇಲ್ಲಿ ಕರೆತಂದೆ. ಇಲ್ಲೇ ಅಂಟಿದೆ ನೀನು."

ಗುಂಡಾ:—"ಅಂದು ಮಾಡಿದ ಉಪಕಾರವೆಲ್ಲಾ ಮರೆತು ಹೋಯಿತೇ? ಮೊಸಳೆ ಕಚ್ಚಿದಾಗ ನಾನೊಬ್ಬನೇ ನನ್ನ ಪವಿತ್ರ ದರ್ಭೆಯಿಂದ......"

ಅಯ್ಯಂಗಾರ:—"ಸುಮ್ಮನೆ ತೊಂದರೆ ಕೊಡಬೇಡ. ನನ್ನನ್ನು ಮೊಸಳೆ ಹಿಡಿದದ್ದೂ ಇಲ್ಲ; ಗುಂಡಾ ಚಾರ್ಯ ಬಿಡಿಸಿದ್ದೂ ಇಲ್ಲ."

ಗುಂಡಾ:—"ಕೃತಘ್ನತೆಗೆ ಮದ್ದಿಲ್ಲ. ನಾನು ನಿನ್ನ ಜೀವ ಉಳಿಸಿದ್ದನ್ನು ಮರೆತೆಯಾ?"

ಹೀಗೆಂದು ಹೇಳಿ ಗುಂಡಾಚಾರ್ಯರು ಕಣ್ಣೀರು ಒರಸಿದಂತೆ ತನ್ನ ಕೈಬೆರಳುಗಳಿಂದ ಕಣ್ಣನ್ನು ಸವರುತ್ತಿದ್ದರು. ಹೊರಕ್ಕೆ ಯಾರೋ ಮಾತನಾಡುವಂತೆ ಕೇಳಿಸಿತು.

ಅಯ್ಯಂಗಾರ:—"ಹಾ! 15 ರೂಪ್ಾಯ ಕೊಡುವೆ. ನೀನು ಸುಮ್ಮನೆ ಹೋಗುವೆಯಾ?"

ಗುಂಡಾಚಾರ್ಯ:—"ಅಯ್ಯಂಗಾರರೇ! ನೀವು ಈಗ ನಿದ್ದೆ ಹೋಗಿ ನಾಳೆ ಮಾತಾಡಬಹುದು. ನಿದ್ದೆ ಇಲ್ಲದಿದ್ದರೆ ಬುದ್ಧಿ ಹೋಗುತ್ತೆ."

ಅಯ್ಯಂಗಾರರಿಗೂ ಗುಂಡಾಚಾರ್ಯರಿಗೂ ಜಗಳವಾಗಿತ್ತು ಎಂಬ ಸುದ್ದಿಯು ಊರಲ್ಲಿ ಹಬ್ಬಿತು. ಕುಪ್ಪಣ್ಣನವರೂ ಶ್ಯಾಮರಾಯರೂ ಇದನ್ನು ಕುರಿತು ಅಯ್ಯಂಗಾರರೊಡನೆ ಕೇಳಬೇಕೆಂದಿದ್ದರು. ಆದರೆ ಇತ್ತಲಾಗೆ ಅಯ್ಯಂಗಾರರು ಕಡ ಕೊಡುವ ಸಾಂಪ್ರದಾಯವನ್ನು ತೆಗೆದು ಹಾಕಿದ್ದರಿಂದ, ಇವರಿಬ್ಬರಿಗೂ ಅಲ್ಲಿ ಹೋಗಲು ಅಷ್ಟು ಧೈರ್ಯವಿರಲಿಲ್ಲ. ರವಿವಾರ ದಿನದ ಆಗಬೋಟು ಹತ್ತಿ ಹೋಗದಿದ್ದರೆ, ಗುಂಡಾಚಾರ್ಯರು ಇನ್ನೂ ಮೂರು ನಾಲ್ಕು ದಿನಗಳಲ್ಲಿ ತನ್ನ 'ಹೊಟ್ಲನ್ನು' ಹೀರಿಬಿಡುವರೆಂದು ಹೆದರಿ, ಅಯ್ಯಂಗಾರರು "ಎಲೋ! ಗುಂಡಾ! ನೀನು ನಾಳೆ ಹೋದ್ರೆ ಸರಿ! ಇಲ್ಲಾದ್ರೆ ನಾನೇ ಅವರಿಗೆಲ್ಲಾ ನಾಳೆ ಬಾಯ್ಬಿಟ್ಟು ಹೇಳಿ, ನಿನ್ನನ್ನು ಇಲ್ಲಿಂದ ದೊಬ್ಬಿ ಬಿಡುವೆ" ಎಂದರು.

ಗುಂಡ:—"ನಾನು ಬರುವ ಚಂದ್ರವಾರ ಹೋಗ್ತೇನೆ ಆಗದೋ? ಕೈಯಲ್ಲಿ ಕಾಸಿಲ್ಲ. ನೀನು ಕೊಡುವ 15 ರೂಪಾಯಿ ದಾರಿಯ ಖರ್ಚಿಗೆ ಸಾಕಾಗದು. ನಿನಗೋಸ್ಕರ ಇದೆಲ್ಲಾ ಸುಳ್ಳು ಹೇಳಿ ನಾನು ಹಾಳಾದೆ."

ಅಯ್ಯಂಗಾರ:—"ಇಕೋ! ನೀನು ಹೋದ್ರೆ ಸರಿ" ಎಂದು ಹೇಳಿ, ಅವನ ಕೈಗೆ 16 ರೂಪ್ಾಯ ಸುರಿದರು.

ಸೋಮವಾರ 10 ಗಂಟೆಗೆ ಗುಂಡಾಚಾರ್ಯರು ಹೋಗುವರೆಂದು ಊರಲ್ಲಿ ಸುದ್ದಿ ಹಬ್ಬಲು, ಕುಪ್ಪಣ್ಣನವರು ಮತ್ತು ಶ್ಯಾಮರಾಯರು ಹೊಟ್ಲಿಗೆ ಬಂದರು. ಗುಂಡಾಚಾರ್ಯರು ತೆರಳುವುದಕ್ಕೆ ಸಿದ್ಧರಾಗಿದ್ದರು.

ಗುಂಡಾಚಾರ್ಯರು ಇವರನ್ನೆಲ್ಲಾ ನೋಡುತ್ತಲೇ "ನಾನು ಎಷ್ಟೋ ಊರು ನೋಡಿದೆ. ಎಷ್ಟೋ ಜನಗಳನ್ನು ನೋಡಿದೆ. ಆದರೆ ಇದಕ್ಕಿಂತ ಒಳ್ಳೇದನ್ನೂ ನಿಮಗಿಂತಲೂ ಯೋಗ್ಯರನ್ನೂ ನಾನು ಎಲ್ಲಿಯೂ ನೋಡಿಲ್ಲ."

ಕುಪ್ಪಣ್ಣನವರು ಗುಂಡಾಚಾರ್ಯರೊಡನೆ "ನಮ್ಮನ್ನು ಮರೆಯಬಾರದು" ಎಂದು ಬೇಡಿದರು.

ಗುಂಡಾಚಾರ್ಯ:—"ಈ ವೃದ್ಧಾಪ್ಯದಲ್ಲಿ ನಾನು ದಿಕ್ಕಿಲ್ಲದೆ ಊರೂರು ಸುತ್ತುತ್ತಿರುವಾಗ ನಿಮ್ಮ ನೆನಪು ಎಂದೂ ಆಗದೆ ಇರಲಿಕ್ಕಿಲ್ಲ. ಹೊಟ್ಟೆಗೋಸ್ಕರ ನಾನು ಕಷ್ಟ, ಪಡುವಾಗ ಈ 'ಹೊಟ್ಲಿನ' ಜ್ಞಾಪಕವು ......"

ಶ್ಯಾಮರಾಯ:—"ನೀವು ಮಗಳ ಮಾವನ ಮನೆಗೆ ಹೊನ್ನೂರಿಗೆ ಹೋಗುವಿರಲ್ಲವೇ?"

ಗುಂಡಾಚಾರ್ಯರು ಮೆಲ್ಲನೆ ನಗುತ್ತ ತಲೆಯಲ್ಲಾಡಿಸಿ "ನನಗೆ ಮಗಳೂ ಇಲ್ಲ, ಬೀಗನೂ ಇಲ್ಲ. ಈ ಲೋಕದಲ್ಲಿ ನಾನು ಒಬ್ಬನೇ. ನನ್ನಿಂದ ಉಪಕಾರ ಹೊಂದಿದವರು ಹಲವರಿದ್ದಾರೆ" ಎಂದರು.

ಈ ಮಾತುಗಳನ್ನು ಕೇಳುತ್ತಲೇ ಎಲ್ಲರೂ ಕನಿಕರಗೊಂಡಂತೆ ಅಯ್ಯಂಗಾರರ ಮುಖವನ್ನು ನೋಡಿದರು.

ಕುಪ್ಪಣ್ಣ:—"ನೀವು ಮಗಳ ಮನೆಗೆ ಹೋಗುವಿರೆಂದು ಅಯ್ಯಂಗಾರರೇ ನಮ್ಮೊಡನೆ ಹೇಳಿದರಲ್ಲಾ!"

ಅಯ್ಯಂಗಾರರು ಸಿಟ್ಟಿನಿಂದ ಎದ್ದುನಿಂತು ವಕ್ರಮುಖವನ್ನು ಮಾಡಿದರು.

ಶ್ಯಾಮರಾಯ:—"ಅಯ್ಯಂಗಾರರು ನಿಮ್ಮನ್ನು ಒತ್ತಾಯ ಮಾಡಿದರೂ ನೀವು ಹೊರಡಲಿಕ್ಕೆ ಹಟ ಹಿಡಿದಿರುವಿರೆಂದು ನಮ್ಮೊಡನೆ ಹೇಳಿದರು."

ಗುಂಡಾಚಾರ್ಯ:—"ಶುದ್ಧ ಸುಳ್ಳು! ಅವರು ಒಂದು ಮಾತು ಹೇಳಿದ್ದರೆ ನಾನು ಇಲ್ಲಿಯೇ ಉಳುಕೊಳ್ಳುತ್ತಿದ್ದೆ. ನಾನು ಇಲ್ಲಿರೋದು ಅವರಿಗೆ ಮನಸ್ಸಿಲ್ಲ. ನನಗೆ ಒಪ್ಪೊತ್ತು ಕೊಡುವ ಊಟ ಅವರ ಕಣ್ಣಿಗೆ ಹೆಚ್ಚಾಗಿ ತೋರುತ್ತೆ. ನಾನು ಹೊನ್ನೂರಿಗೆ ಹೋಗುವೆನೆಂದು ಅವರೇ ಸುದ್ದಿ ಹುಟ್ಟಿಸಿದರು. ಅವರು ಸುಳ್ಳಾಡೋದು ನನಗೆ ಮನಸ್ಸಿರಲಿಲ್ಲ. ಸಟೆಯಿಂದಲೇ ಸಟೆಯನ್ನು ಬಿಗಿ ಮಾಡಬೇಕೆಂದು ಹೇಳಿದ್ರು. ಕಡೆಗೆ ನಾನು ಎಲ್ಲಾದರೂ ಹೋಗಿಬಿಡುವೆನೆಂದು ನಿಶ್ಚಯ ಮಾಡಿದೆ. ಆದರೆ ಹೋಗುವಾಗ ನಿಮ್ಮೊಡನೆ ಸುಳ್ಳಾಡಿ ಹೋಗಬೇಕು ಯಾಕೆ?"

ಈ ಮಾತನ್ನು ಕೇಳಿ ಎಲ್ಲರೂ ಸ್ತಬ್ಧರಾದರು.

ಗುಂಡಾಚಾರ್ಯ:—"ನನಗೆ ಮಕ್ಕಳು ಮರಿ ಇಲ್ಲ. ನನ್ನನ್ನು ಹೊರಕ್ಕೆ ಅಟ್ಟಿಬಿಡುವೆನೆಂದು ಅಯ್ಯಂಗಾರರು ಗದರಿಸಿದ್ದರಿಂದ ನಾನು ಹೋಗುವೆ. ಅವರು ಒಂದು ಮಾತು ಹೇಳಿದ್ರೆ ಇಲ್ಲೇ ಉಳುಕೊಳ್ಳುತ್ತಿದ್ದೆ."

ಗುಂಡಾಚಾರ್ಯರು ಹೀಗೆ ಹೇಳಿ ನಗುಗಣ್ಣುಗಳಿಂದ ಅಯ್ಯಂಗಾರರನ್ನು ನೋಡುತ್ತಾ ಹೊರಕ್ಕೆ ನಡೆದುಬಿಟ್ಟರು. ಅವರು ಎಲ್ಲಿ ಹೋದರೋ ಇದುವರೆಗೆ ತಿಳಿಯಲಿಲ್ಲ. ಕುಪ್ಪಣ್ಣನವರೂ ಶ್ಯಾಮರಾಯರೂ ಇವರು ಹೋದ ಮೇಲೆ ಇವರ ಜಾತಕವನ್ನು ಸ್ಫುಟ ಮಾಡಿದ್ದಲ್ಲಿ, ಇವರು ನಲ್ಲೂರು ನೀಲಾಂಬೆಯ ತಮ್ಮನಾಗಿದ್ದನೆಂದು ತಿಳಿದು ಬಂದಿತು. ಈಗಲೂ ಕೆಲವರು ಅಯ್ಯಂಗಾರರ ಜೀವನ ಚರಿತ್ರೆಯನ್ನು ಅವರ ಇದಿರಿಗೇನೇ ವ್ಯಾಖ್ಯಾನ ಮಾಡುತ್ತಿರುವಾಗ, ಗುಂಡಾಚಾರ್ಯರ ಆಗಮನದ ಕೆಲವು ಸಂಗತಿಗಳನ್ನು ಟಿಪ್ಪಣಿಯಾಗಿ ಕೊಡುವುದುಂಟು.

(ಸುವಾಸಿನಿ 1900-3)

———————

ವೈದ್ಯರ ಒಗ್ಗರಣೆ

ವಲ್ಲಭಾಚಾರ್ಯರು 1862ರಲ್ಲಿ ಕಮಲಪುರದ ಅಮಲ್ದಾರರಾಗಿದ್ದರು. ಆ ಕಾಲದಲ್ಲಿ ಜನಗಳಿಗೆ ಕುಂಪಣಿ ಸರಕಾರದಲ್ಲಿ ಹುದ್ದೆ ದೊರಕುವುದಕ್ಕೆ ಅಷ್ಟೊಂದು ತೊಂದರೆ ಇರಲಿಲ್ಲ. ಜನಗಳಲ್ಲಿ ಸಾಕಷ್ಟು ಅನುಕೂಲತೆ ಇದ್ದಿತ್ತು: ಹೊಟ್ಟೆ ತುಂಬಾ ಉಂಡು ಕೂತುಕೊಳ್ಳಬಹುದಾದಷ್ಟು ಇದ್ದಿತ್ತು. ಸರಕಾರಿ ಹುದ್ದೆಗಳಿಗೋಸ್ಕರ ಮೇಲಾಟ ಇರಲಿಲ್ಲ. ಪೇಚಾಟ ಇರಲಿಲ್ಲ. ಇಂದಿನಂತೆ ಅನೇಕ ಪರೀಕ್ಷೆಗಳೂ ಇರಲಿಲ್ಲ. ಒಂದು ಬಹಿರಂಗ ಪರೀಕ್ಷೆ: ಒಂದು ಅಂತರಂಗ ಪರೀಕ್ಷೆ—ಇಷ್ಟೆ. ವಲ್ಲಭಾಚಾರ್ಯರು ಬಹಿರಂಗ ಪರೀಕ್ಷೆಯನ್ನು ತೇಲಿದ್ದರು. ಕಲೆಕ್ಟರ್ ರೋರಿಂಗ್ ದೊರೆಗಳು ಇವರ ಅಂಗವನ್ನು ತಾನೇ ಸ್ವತಃ ನೋಡಿದ್ದರು. ಇವರ ಸ್ಥೂಲದೇಹ; ಗೋಷ್ಪದ ಕೇಶ, ದೀರ್ಘ ನಾಮ, ಕರ್ಣತುಳಸಿ, ಗಂಧಲೇಪನ, ಲಂಬೋದರ—ಇವೇ ಅಮಲ್ದಾರ್ ಹುದ್ದೆಯ ಮುಖ್ಯ ಲಕ್ಷಣಗಳಾಗಿದ್ದುವು. ರೋರಿಂಗ್ ದೊರೆಗಳು ಸಂಸ್ಕೃತ ಭಾಷಾಪ್ರಿಯರು, ದೇಶೀಯರ ಪ್ರಸನ್ನರು. ವಲ್ಲಭಾಚಾರ್ಯರು ಸಂಸ್ಕೃತ ಭಾಷಾಭಿಜ್ಞರೆಂದು ಕಲೆಕ್ಟರ್ ದೊರೆಗಳ ತಿಳುವಳಿಕೆಗೆ ಹೇಗೋ ಬಂದಿತ್ತು. ಆಚಾರ್ಯರು ಚತುರ್ವೇದಗಳ ಸಂಗ್ರಹ ಮಾಡಿ ಇಟ್ಟಿದ್ದರು. ಭಾರತರಾಮಾಯಣಗಳ ಕಥಾಭಾಗವನ್ನು ಬಾಲ್ಯದಲ್ಲಿಯೇ ಕೇಳಿದ್ದರು. ಹಾಗೂ ಸಂಸ್ಕೃತ ಸಂಧ್ಯಾವಂದನೆಯ ಪುಸ್ತಕ ಪಾಠವು ಅವರಿಗೆ ನಿರಂತರವೂ ಇದ್ದಿತ್ತು. ಕಮಲಪುರದ ಅಮಲ್ದಾರರಲ್ಲಿ ಇವರಷ್ಟು ಮಹಾಕೀರ್ತಿಯನ್ನು ಯಾರೂ ಪಡೆದಿರಲಿಲ್ಲ. ಅವರಿಗೆ ಇಂಗ್ಲೀಸು ಭಾಷಾ ಜ್ಞಾನವೂ ಇತ್ತೋ ಇಲ್ಲವೋ ನಾವು ಅರಿಯೆವು. ಇಂಗ್ಲೀಸು ಮಾತನಾಡಲು ತಿಳಿದಿತ್ತೆಂದು ನಮ್ಮ ಮನೆ ಅಜ್ಜಿಯೊಂದು ಈಗಲೂ ಹೇಳುತ್ತಿರುವಳು. ಇವರ 'ಜಜ್‌ಮೆಂಟು' ಗಳು ಬಹಳ ನೂತನವಾಗಿದ್ದುವೆಂದು ಬಾಜಾರಿನಲ್ಲಿ ಈಗಲೂ ವರ್ತಮಾನವಿದೆ.ವಲ್ಲಭಾಚಾರ್ಯರು 'ಪೀನಲ್ ಕೋಡನ್ನು' ಅಷ್ಟು ಚೆನ್ನಾಗಿ ಮನ್ನಿಸುತ್ತಿರಲಿಲ್ಲ. ಆ ಕೋಡು ಬಿಳೀ ಜನರ ತಲೆಯ ಮೇಲೆ ಚೆನ್ನಾಗಿ ತೋರುವುದಲ್ಲದೆ, ನಾವು ಅದನ್ನು ಧರಿಸುವುದಕ್ಕೆ ಎತ್ತುಗಳಲ್ಲವೆಂದು ಅವರ ಅಭಿಪ್ರಾಯವಿತ್ತು. 'ಜಜ್‌ಮೆಂಟು'ಗಳಲ್ಲಿ ಭಾರತರಾಮಾಯಣದಿಂದಲೇ ಬೇಕಾದಷ್ಟು ಆಧಾರಗಳನ್ನು ಕೊಟ್ಟು 'ಕೇಸುಗಳನ್ನು' (Cases) ತೀರಿಸುತ್ತಿದ್ದರು. ಅವರು ನಿರಪರಾಧಿಗಳಿಗೆ ಆಧಾರರಾಗಿದ್ದರು. ದಂಪತಿಗಳ ವಾದವಿವಾದಗಳು ಕಚೇರಿಗೆ ಬಂದರೆ, ಅವರ ಮನಸ್ಸು ಇಂದಿನ ಸಮಾಜ ಸುಧಾರಕರ ಮನಸ್ಸಿನಂತೆ ಹೆಂಗಸಿನ ಪಕ್ಷವಾಗಿ ವಾಲುತ್ತಿರುವುದು. ಹೆಂಗಸರು ಸಾಕ್ಷಿಗಾರರಾಗಿದ್ದರೆ ಅವರನ್ನು ದಯಾದೃಷ್ಟಿಯಿಂದ ನೋಡಿ, ಅದರ ಆಧಾರದಿಂದಲೇ ಕಕ್ಷಿಗಳಿಗೆ ಗುಣ ಮಾಡುತ್ತಿದ್ದರು. ಅಮಲ್ದಾರರಿಗೆ ತಿಂಗಳಿಗೆ ಒಂದು ಬಾರಿ 'ಸರ್ಕಿಟ್' ತಿರುಗುವ ಸಂಪ್ರದಾಯವಿತ್ತು. ಈ 'ಸರ್ಕಿಟ್' ಸುಖಭೋಗದಲ್ಲಿ ಅಮಲ್ದಾರರ 'ಹೆಡ್ ಮುನಿಶಿ' ವೈಕುಂಠ ವ್ಯಾಸಾಚಾರ್ಯರಿಗೂ ಪಾಲಿತ್ತು. 'ಸರ್ಕಿಟಿಗೆ' ಸರಕಾರಿ ಉದ್ಯೋಗಸ್ಥರೂ ಅವರ ಆಪ್ತ ಮಿತ್ರರೂ—ಯಮನ ಮದುವೆಯ ದಿಬ್ಬಣದಂತೆ—ಏಕತ್ರವಾಗಿ ಹೋಗುತ್ತಿದ್ದರು. ಅಂದು ಸರಕಾರದ ಉದ್ಯೋಗಸ್ಥರಿಗೆ ಸಂಬಳ ಕಡಿಮೆ; 'ಸರ್ಕಿಟ್ ಹೆಚ್ಚು'. ಅದು ಕಾರಣದಿಂದ, ಉದರ ನಿರ್ವಾಹವು ಒಟ್ಟಾರೆ ಸರಿಹೋಗುತ್ತಲಿತ್ತು. ಗುಮಾಸ್ತ ಶ್ರೀರಂಗ ಸೂರಿಯವರು ಮಗಳ ಮದುವೆಯನ್ನು ನಿಶ್ಚಯಿಸಿ, ಅಮಲ್ದಾರರೊಡನೆ 'ಜಮಾಬಂದಿ' ಯ ಸರ್ಕಿಟಿಗೆ ಹೋಗಬೇಕೆಂದಿದ್ದರು. 'ಮುನಿಶಿ' ಹಯವದನರ ತಂದೆಯವರು ಬಿದ್ದುಹೋದ ದೇವಸ್ಥಾನದ ಜೀರ್ಣೋದ್ಧಾರ ಮಾಡಲು

ಆಲೋಚಿಸಿ, ಈ ವರ್ಷ ಸಪ್ತಗ್ರಾಮದಲ್ಲಿ ನಡೆಯುವ 'ಜಮಾಬಂದಿಯ' ಮಹೋತ್ಸವಕ್ಕೆ ಮಗನೊಡನೆ ಹೊರಡಲಿದ್ದರು. ಆದರೆ ಈ ವರ್ಷ ಅಮಲ್ದಾರರು ಯಾರನ್ನು ಬರಲೀಸದೆ ತನ್ನ 'ಹೆಡ್ ಮುನಿಶಿ' ವೈಕುಂಠ ವ್ಯಾಸಾಚಾರ್ಯರ ಸಮೇತರಾಗಿ 'ಸರ್ಕಿಟಿಗೆ' ತೆರಳಿದರು. ಸಪ್ತಗ್ರಾಮವು ಕಮಲಪುರದಿಂದ 40 ಮೈಲು ದೂರ. ಈಗ ಸಪ್ತಗ್ರಾಮಕ್ಕೆ ಹೋಗಲು ರಾಜಮಾರ್ಗವಿದೆ. 30 ವರ್ಷಗಳ ಹಿಂದೆ ಸಪ್ತಗ್ರಾಮಕ್ಕೆ ಹೋಗುವವರು ಮೊದಲು ದೋಣಿ ಹತ್ತಿ, ವೀರಪುರದಲ್ಲಿ ಇಳಿಯಬೇಕಿತ್ತು. ರೋರಿಂಗ್ ದೊರೆಗಳು ಕುದುರೆಯನ್ನು ಏರಿ ವೀರಪುರಕ್ಕೆ ಹೋದರು. ವೀರಪುರದವರು ದೊರೆಗಳನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕಳುಹಿಸಿದರು. ದೊರೆಗಳು ಮಹಾ ವಾದ್ಯ ಘೋಷದೊಡನೆ ಸಪ್ತಗ್ರಾಮಕ್ಕೆ ಬಂದರು. ಊರಲ್ಲೆಲ್ಲಾ ತೋರಣಗಳ ಶೃಂಗಾರ; ಜೈನರ ಬಸ್ತಿಗಳಲ್ಲೆಲ್ಲಾ ಧ್ವಜಗಳ ಅಲಂಕಾರ. 'ಜಮಾ ಬಂದಿ' ಗೆ ಬಂದಿದ್ದ ಕಲೆಕ್ಟರ್ ದೊರೆಗಳು ನೋಡಬೇಕಾದ ಶಿಲ್ಪ ಚಿತ್ರಗಳನ್ನೆಲ್ಲಾ ನೋಡಿದರು; ಅವಶ್ಯವಿದ್ದ ಶಾಸನಗಳ ಪ್ರತಿಗಳನ್ನು ಸಂಪಾದಿಸಿದರು. ಬಸ್ತಿಯ ಭಂಡಾರದಲ್ಲಿದ್ದ ಪುಸ್ತಕಗಳನ್ನು ಕುರಿತು ಪ್ರಸ್ತಾಪ ಬಂತು. ಜೈನರ ಮುದಿ ಗುರುಗಳು ಅವನ್ನು ಹೊರ ಕೊಡುವುದಕ್ಕೆ ಒಪ್ಪಲಿಲ್ಲ. ದೊರೆಗಳು ಪುಸ್ತಕಗಳ ಆಶೆಯನ್ನು ಬಿಟ್ಟು 'ಜಮಾ ಬಂದಿ'ಯನ್ನು ಮುಗಿಸಿದರು.

'ಜಮಾಬಂದ್' ಎಂಬುದು ಹಿಂದುಸ್ಥಾನಿ ಭಾಷೆಯ ಪದವು. ಸರಕಾರಕ್ಕೆ ವರ್ಷಂಪ್ರತಿ ಬರುವ ಭೂಮಿಯ ತೀರ್ವೆಯ ಜಮೆಯನ್ನು 'ಬಂದ್' ಮಾಡುವುದು (ಮುಗಿಸುವುದು) ಎಂಬ ಅರ್ಥವನ್ನು ಕೆಲವರು ಕಲ್ಪಿಸಿರುವರು. ಇದು ಶುದ್ಧ ತಪ್ಪು. 'ಜಬಾನ್ ಬಂದ್' ಎಂದರೆ ನಾಲಗೆಯನ್ನು ಕಟ್ಟುವುದು; ಇದುವೆ ಅಪಭ್ರಂಶವಾಗಿ 'ಜಮಾಬಂದ್' ಎಂದಾಯಿತು, ಜನಗಳ 'ಹಾಲ್‌ಹವಾಲೆಯನ್ನು' ಹೇಳುವ ನಾಲಗೆಯನ್ನು ಕಟ್ಟುವುದು ಎಂಬ ಅರ್ಥ. ಈ ಅರ್ಥಕ್ಕೆ ಸರಿಯಾಗಿ ಮುಂಚಿನವರು ಕುಳುವಾರುಗಳ ಸ್ಥಿತಿಗತಿಗಳನ್ನು ಮೊರೆ, ಗೋಳನ್ನೂ ಕೇಳಿ, ದವಸ ತುಟ್ಟಿಯಾದ ಕಾಲದಲ್ಲಿ ತೀರ್ವೆಯಲ್ಲಿ ಬೇಕಾದಷ್ಟನ್ನು ಮುಜುರೆ ಕೊಟ್ಟು, ಅವರ ಬಾಯನ್ನೂ ಕೂಗನ್ನೂ ತಡೆಸುತ್ತಿದ್ದರು.

ಅಮಲ್ದಾರರು ಸರ್ಕಿಟಿಗೆ ಬರುವ ಹಾಗಿದ್ದರೆ, ಅವರಿಗೋಸ್ಕರ ಅಡಿಗೆಯವರನ್ನು ಒದಗಿಸುವುದು ಪಟೇಲನ ಕಷ್ಟತರದ ಕೆಲಸವಾಗಿತ್ತು. ವಲ್ಲಭಾಚಾರ್ಯರು ಸ್ತ್ರೀಪಾಕ ನಿಯಮಿಷ್ಟರು; ಅವರಿಗೆ ಹೆಂಗಸರ ಅಡಿಗೆ ಮೆಚ್ಚುತ್ತಿತ್ತಲ್ಲದೆ, ಗಂಡಸರ ಅಡಿಗೆಯು ರುಚಿಸುತ್ತಿರಲಿಲ್ಲ. ಅದು ಕಾರಣದಿಂದ ಆಚಾರ್ಯರು ಹೋಗುವ ಸ್ಥಳಗಳಲ್ಲಿ ಅವರ ಬಗ್ಗೆ ಅಡಿಗೆಯ ಹೆಂಗಸರನ್ನು ಪಟೇಲರು ಗೊತ್ತುಹಚ್ಚುತ್ತಿದ್ದರು. ಆದರೆ ಒಂದೆರಡು ದಿನಗಳ 'ಚಾಕ್ರಿಗೆ' ಹೆಂಗಸರು ನಿಲ್ಲುವುದಕ್ಕೆ ಈಚೀಚೆಗೆ ಒಪ್ಪುತ್ತಿರಲಿಲ್ಲ. ಒಂದೊಂದು ಪ್ರಸಂಗದಲ್ಲಿ—ವಲ್ಲಭಾಚಾರ್ಯರಿಗೆ ಅಡಿಗೆಮಾಡಲು ಹೋದ ಹೆಂಗಸನ್ನು ಗಂಡನು ವಿನಾಕಾರಣವಾಗಿ ಬಿಟ್ಟುಬಿಡುತ್ತಿದ್ದನು. ಒಂದೊಂದು ಪ್ರಸಕ್ತಿಯಲ್ಲಿ ಅಂಥಾ ಹೆಂಗಸನ್ನು ಬಹಿಷ್ಕಾರ ಪ್ರಕರಣಕ್ಕೆ ಜಾತಿಗೃಹಸ್ಥರು ಒಳಗಾಗಿಸುತ್ತಿದ್ದರು. ಅದೂ ಅಲ್ಲದೆ ಸಪ್ತ ಗ್ರಾಮದಲ್ಲಿ ಬ್ರಾಹ್ಮಣರು ಕಡಿಮೆ. ಪಟೇಲನು ಎಷ್ಟು ಪ್ರಯತ್ನ ಮಾಡಿದರೂ ಅಡಿಗೆಯವಳು ಒಬ್ಬಳಾದರೂ ಸಿಕ್ಕದೆ ಹೋದಳು. ಹೊತ್ತು ಏರಿ ಬಂದಿತು. ಅಮಲ್ದಾರರು ಕಚೇರಿಯಲ್ಲಿ ಹಾಡು ಹಾಡಲು ತೊಡಗಿದರು. ಅಮಲ್ದಾರರು ಕಚೇರಿಯಿಂದ ಕೆಲಸ ಮುಗಿಸಿ ಬರುವ ಮೊದಲು, ಸಂತೋಷಚಿತ್ತರಾಗಿ ಹಾಡುವ ಅಭ್ಯಾಸವಿತ್ತು. ಹೊರಗಿದ್ದ ಪಟೇಲನಿಗೆ ಹಾಡು ಕೇಳಿಸುತ್ತಿತ್ತು—

ತರಬೇಕು ತರುಣಿಯಳ—ಕಾಮನ ಮುಂಗೈ
ಅರಗಿಣಿಯಂತಿಹಳ ॥

ಸ್ಮರನ ಸಿಂಗಾಡಿ ಪುರ್ಬಿನ, ನೀರೆ, ಮಲ್ಲಿಗೆ
ಪರಿಮಳಿಸುವ ಮೈಯ್ಯ ವರ ಕರಿಗಮನೆಯ ॥

ಹೀಗೆ ಹಾಡುತ್ತ ಕಟ್ಟಿಟ್ಟ ದಪ್ತರದ ಮೇಲೆ ಕೈ ಬಡಿದು ತಾಳ ಹಾಕುತ್ತಲಿದ್ದರು.

ಅಮಲ್ದಾರರು ಮನೆಗೆ ಬರುವ ಹೊತ್ತಾಯಿತೆಂದು ಪಟೇಲನು ಅರಿತನು. ಆದರೆ ಅಡಿಗೆಯು ಏನೂ ಸಿದ್ಧವಾಗಲಿಲ್ಲ. ಪಟೇಲನು ಜಾತಿಯಲ್ಲಿ ಜೈನ, ತಾನೇ ಅಡಿಗೆ ಮಾಡುವುದಕ್ಕೆ ಉಪಾಯವಿಲ್ಲ. ಅಮಲ್ದಾರರು ಮಾರ್ಗಕ್ಕೆ ಇಳಿದರು. ಪಟೇಲನು ಎರಡೂ ಕೈಗಳನ್ನು ಸರಿಯಾಗಿ ಜೋಡಿಸಿ ದೊಡ್ಡ ನಮಸ್ಕಾರ ಮಾಡಿದನು. ನಮಸ್ಕಾರ ಮಾಡಿದಷ್ಟಕ್ಕೆ ಅಮಲ್ದಾರರ ಸಿಟ್ಟು ಇಳಿಯುವುದೆಂದು ಪಟೇಲನು ತಿಳಿದಿದ್ದನು. ಅಮಲ್ದಾರರು ಪಟೇಲನನ್ನು ನೋಡಿ "ಪದ್ಮರಾಜಾ! ಈವತ್ತು ಅಡಿಗೆಗೆ ಯಾರು?" ಎಂದು ಕೇಳಿದರು.

ಪಟೇಲನು ಮತ್ತೊಂದು ನಮಸ್ಕಾರವನ್ನು ಸಮರ್ಪಿಸಿ, "ಬುದ್ಧಿ! ಇಂದು ಎಲ್ಲೆಲ್ಲಿ ಹುಡುಕಿದ್ರೂ ಯಾರೂ ಸಿಕ್ಲಿಲ್ಲಾ" ಎಂದು ಹೇಳಿ ಪುನಃ ಕೈಮುಗಿದನು.

ಅಮಲ್ದಾರ:—"ಅದೇನು ಸಂಗ್ತಿ? ಈಗ ಹೊತ್ತೇರಿತು. ಅನ್ನವಿಲ್ಲದೆ ಉಪವಾಸ ಬೀಳೋದೇನು?"

ಪಟೇಲನು:—"ಅಪ್ಪಣೆಯಾದಂತೆ ನಡಕೊಳ್ಳುತ್ತೇನೆ. ಇಲ್ಲಿ ಬ್ರಾಹ್ಮರು ಯಾರೂ ಇಲ್ಲ ಬುದ್ಧಿ! ಎಲ್ಲರೂ ಶ್ರೀಕಾಂತ ಜಾತ್ರೆಗೆ ನಡೆದುಬಿಟ್ಟಿದ್ದಾರೆ ಬುದ್ಧಿ!" ಎಂದು ಹೇಳಿ, ಕೈಜೋಡಿಸಿ, ಮತ್ತೆ ತನ್ನ ಮಣಿ ಗಂಟನ್ನು ಸವರುತ್ತಾ ನಿಂತಿದ್ದನು.

ಅಮಲ್ದಾರ:—"ಈಗ ಯಾರನ್ನಾದ್ರೂ ಹಿಡಿಯದಿದ್ರೆ ಉಪಾಯವಿಲ್ಲವಷ್ಟೆ. ಯಾರನ್ನಾದ್ರೂ ಬಿಟ್ಟಿಗೆ ಹಿಡಿದ್ರೆ ಸರಿ."

ಪಟೇಲ:—"ಹಣ ಕೊಟ್ರೆ ಆಳು ಸಿಕ್ಕೋಲ್ಲ. ಇಲ್ಲಿ ಬಿಟ್ಟಿಗೆ ಯಾರು ಬರ್ತಾರೆ?"

ಪಟೇಲನು ಈ ಸಲ ನಮಸ್ಕಾರ ಮಾಡಲಿಲ್ಲ. ಅಮಲ್ದಾರರು ಸಿಟ್ಟಿಗೆದ್ದರು. ಪಟೇಲನ ಮಾತುಗಳಲ್ಲಿ 'ಬುದ್ಧಿ; ಖಾವಂದ್ರೆ' ಎಂಬ ನುಡಿಗಳೂ ಇರಲಿಲ್ಲ. ಅಮಲ್ದಾರರು—"ಎಲಾ! ಯಾರಿಗಾದ್ರೂ ಬಿಟ್ಟಿಗೆ ಹಿಡಿದು ತಂದ್ರೆ ಸರಿ! ಇಲ್ಲಾದ್ರೆ ನಿನ್ನ ಕೆಲ್ಸಕ್ಕೆ ರಾಜೀನಾಮೆ ಕೊಡು, ನಡಿ!" ಎಂದು ಗದರಿಸಿದರು.

ಅಮಲ್ದಾರರಿಗೂ ಪಟೇಲನಿಗೂ ಈ ರೀತಿ ಮಾತು ನಡೆಯುತ್ತಲಿರುವುದನ್ನು ದಾರಿಗನೊಬ್ಬನು ನೋಡಿ, ಅಲ್ಲಿಯೇ ತಳುವಿದನು. ಅವನು ಶ್ರೀಕಾಂತ ಜಾತ್ರೆಗೆ ಹೋಗುವವನು. ಅವನ ವಿಷಯವಾಗಿ ಸವಿಸ್ತಾರವಾಗಿ ಮತ್ತೆ ಹೇಳುವೆವು. ಅವನು ಅಮಲ್ದಾರರನ್ನು ನೋಡಿದನು. ನೋಡಿ ಕೈ ಮುಗಿಯದೆ ಏನೋ ಕಾರಣದಿಂದ ನಗುತ್ತ ಹೋಗುತ್ತಿದ್ದನು. ಅವನ ನಗುವಿನಿಂದ ಅಮಲ್ದಾರರ ಹಸಿದ ಹೊಟ್ಟೆಗೆ ಬಿಸಿ ಕೆಂಡವಿಟ್ಟಂ ತಾಯಿತು. ಅಮಲ್ದಾರರು ಪಟೇಲನೊಡನೆ "ಇಕೋ! ಪದ್ಮರಾಜಾ! ಅತ್ತ ಹೋಗುವವನನ್ನು ಬಿಟ್ಟಿಗೆ ಹಿಡಿ!" ಎಂದು ಕಟ್ಟಾಜ್ಞೆ ಮಾಡಿದನು.

ಆ ಕಾಲದಲ್ಲಿ ಪಟೇಲನಿಗೆ ಸರಕಾರದಿಂದ ಪೇದೆ ಸಿಕ್ಕುತ್ತಿರಲಿಲ್ಲ. 'ಪೇದೆಯ ಚಾಕ್ರಿಯನ್ನು' ಪಟೇಲನೇ ಮಾಡಬೇಕಾಗಿತ್ತು. ಪ್ರತಿಯಾಗಿ ವರ್ಷಕ್ಕೆ ಒಂದು ವರಹ ಸಂಬಳ ಹೆಚ್ಚು ಸಿಕ್ಕುತ್ತಿತ್ತು. ಪಟೇಲನು ದಾರಿಗನನ್ನು ಮುಂದರಿಸಲೀಸದೆ ತಡೆದನು.

ದಾರಿಗ:—"ಇದೇನಯ್ಯಾ? ನನ್ನನ್ನು ಹೋಗಬಿಡೋದಿಲ್ಲ?"

ಪಟೇಲ:—"ಹೆಚ್ಚು ಮಾತು ಬೇಡ! ಹೇಳಿದ ಹಾಗೆ ಕೇಳಿದ್ರೆ ಸರಿ!"

ದಾರಿಗ:—"ಯಾರು ಹೇಳಿದ ಹಾಗೆ ಕೇಳಬೇಕು? ಹಾಗೆ ಕೇಳಲಿಕ್ಕೆ ನಾನು ನಿಮ್ಮ ಅಡಿಗೆ ಭಟ್ಟನೇ?"

ಪಟೇಲ:—"ಯಾರಾದ್ರೆ ನಮಗೇನು? ಈಗ ನೀನು ಅಡಿಗೆ ಭಟ್ಟನಾಗಲೇ ಬೇಕು."

ದಾರಿಗ:—"ನಾನು ಅಡಿಗೆಯವನಲ್ಲಯ್ಯಾ! ನಾನು ವೈದ್ಯ. ನಾನು ಮದ್ದು ಕೊಡುವೆ; ಅಡಿಗೆ ಮಾಡಲಾರೆ! ನನ್ನನ್ನು ಬಿಡಿ, ಅಯ್ಯಾ! ನನಗೆ ಶ್ರೀಕಾಂತ ಜಾತ್ರೆಗೆ ಇಂದು ಹೋಗದೆ ನಿರ್ವಾಹವಿಲ್ಲ."

ಪಟೇಲ:—"ನಿರ್ವಾಹವಿಲ್ಲ! ಬಾಯ್ಮುಚ್ಚು! ಕಳ್ಳ! ವೈದ್ಯ ನೀನು ಎಂಥಾ ವೈದ್ಯ? ಸುಮ್ಮನೆ ನನ್ನ ಹಿಂದೆ ಬಂದ್ರೆ ಸರಿ. ಇಲ್ಲಾದ್ರೆ ಕೈಗೆ ಕೋಳಾ ಹಾಕಿಸುವೆ."

ವೈದ್ಯರು ಸುಮ್ಮನಾದರು; ಗುದ್ದು ಕೊಟ್ಟರೆ ಮದ್ದು ಇಲ್ಲವೆಂದು ಸುಮ್ಮನಾದರು. ಸರಕಾರದ ಹುದ್ದೆದಾರರೊಡನೆ ದಂಡೋಪಾಯ ನಡೆಸಿದರೆ ಪ್ರಯೋಜನವಿಲ್ಲವೆಂದು ತಿಳಿದು, ವೈದ್ಯರು ಪಟೇಲನ ಆಜ್ಞೆಗೆ ಒಳಗಾದರು. ವೈದ್ಯರು ಅಮಲ್ದಾರರಿಗೆ ಅಡಿಗೆ ಮಾಡಲು ಒದಗಿಸಿದ ಮನೆಗೆ ಉಸಿರೆತ್ತದೆ ನಡೆದರು.

ವೈದ್ಯರ ಹೆಸರು ಕೃಷ್ಣ. ಕೃಷ್ಣವೈದ್ಯ ಎಂದು ವಾಡಿಕೆಗೆ ಕರೆಯುತ್ತಿದ್ದರು. ಕೃಷ್ಣವೈದ್ಯರು ಸ್ವತಃ ಆಯುರ್ವೇದವನ್ನು ಓದಿರಲಿಲ್ಲ. ಇವನ ಮುತ್ತಜ್ಜನು ಮಾತ್ರ ಹಾವಿನ ವಿಷಕ್ಕೆ ಔಷಧ ಬಲ್ಲವನೆಂದು ಖ್ಯಾತಿಗೊಂಡಿದ್ದನು. ಅದು ಕಾರಣದಿಂದಲೇ ಜನಗಳಿಗೆ ಕೃಷ್ಣವೈದ್ಯರ ಮೇಲೆ ಸ್ವಲ್ಪ ಅಭಿಮಾನವಿದ್ದಿತು. ಅದಲ್ಲದೆ ಕೃಷ್ಣವೈದ್ಯರು ಬಾಲ್ಯದಲ್ಲಿ ಕಮಲಪುರದ ಅನಂತವೈದ್ಯರ ಕಾಲಬುಡದಲ್ಲಿ ಕೆಲವು ಕಾಲ ಶಿಕ್ಷಣವನ್ನು ಹೊಂದಿದ್ದರು. ವೈದ್ಯಶಾಸ್ತ್ರವನ್ನು ಕಲಿಯುವ ಮೊದಲು ಸೂಪಶಾಸ್ತ್ರದ ಅನುಭವವು ಅಗತ್ಯವೆಂದು ಗುರುಗಳು ಹೇಳಿದುದರಿಂದ, ಕೃಷ್ಣವೈದ್ಯರು ಸುಮಾರು 5 ವರ್ಷಗಳ ವರೆಗೆ ಅನಂತವೈದ್ಯರ ಮನೆಯಲ್ಲಿ ಸ್ವಯಂಪಾಕ ವಿಧಿ ವಿಧಾನಗಳನ್ನು ಕಲಿಯಬೇಕಾಯಿತು. ಅಷ್ಟು ಶೀಘ್ರಕಾಲದಲ್ಲಿಯೇ ವೈದ್ಯರು ಸೂಪಶಾಸ್ತ್ರವನ್ನೂ ವೈದ್ಯಶಾಸ್ತ್ರವನ್ನೂ ಕರತಲಾಮಲಕವಾಗಿ ಮಾಡಿದರು. ಪ್ರಕೃತದಲ್ಲಿ ವೈದ್ಯರು ಅನೇಕರಿಗೆ ಪ್ರಯೋಜನಕ್ಕೆ ಬೀಳುತ್ತಿದ್ದರು. ಮದುವೆಯಾಗದವರು, ಗಂಡಸತ್ತವರು, ಧನಿಕರು, ಮಠಾಧೀಶರು ಮೊದಲಾದವರಲ್ಲಿ ಕೆಲವರ ಆಶ್ರಯದಿಂದ ವೈದ್ಯರ ಉದರ ನಿರ್ವಾಹವು ನಡೆಯುತ್ತಲಿತ್ತು. ಕ್ಷೇತ್ರದ ಲಿಂಗರಾಜ ಹೆಗ್ಗಡೆಯವರು ಕೃಷ್ಣವೈದ್ಯರನ್ನು ಚಿರಕಾಲ ತನ್ನ ಬಳಿಯಲ್ಲಿರಿಸಿದರು. ಹೆಗ್ಗಡೆಯವರಿಗೆ ಗುಣಾಂಶ ಸಿಕ್ಕಿತೋ ಇಲ್ಲವೋ ನಾವು ಅರಿಯೆವು. "ಇನ್ನೂ ತನಗೆ ವೈದ್ಯರ ಹಂಗೇನು?" ಎನ್ನುತ್ತಿದ್ದರು ಹೆಗ್ಗಡೆಯವರು. ಸಾಧಾರಣ ಜನಗಳ ಅನುಭವಕ್ಕೆ ನೋಡಸಿಕ್ಕದ ರೋಗಗಳಿಗೆ ಕೃಷ್ಣವೈದ್ಯರು ಚಿಕಿತ್ಸೆಯನ್ನು ಮಾಡಬಲ್ಲರೆಂದು ಸಮಾಚಾರವಿದ್ದುದರಿಂದ, ಶ್ರೀಕಾಂತ ದೇವಸ್ಥಾನದ ಪಾರುಪತ್ಯಗಾರರು ಇವರನ್ನು ಬರಮಾಡಿದ್ದರು.

"ಕೃಷ್ಣವೈದ್ಯರನ್ನು ಬಲಾತ್ಕಾರದಿಂದ ಅಡಿಗೆ ಮಾಡುವುದಕ್ಕೆ ಹಿಡಿದುದು ನಮ್ಮ ತಪ್ಪಾಗಬಹುದೇ"? ಎಂದು 'ಹೆಡ್ ಮುನಿಶಿ' ವೈಕುಂಠ ವ್ಯಾಸಾಚಾರ್ಯರು ಅಮಲ್ದಾರರೊಡನೆ ಚರ್ಚಿಸಿದರು. ಅದು ತಪ್ಪಲ್ಲವೆಂದು ಅಮಲ್ದಾರರು ಆಧಾರ ಕೊಟ್ಟು ಹೇಳಿದರು. "ವಿರಾಟರಾಯನು ಭೀಮಸೇನನನ್ನು ಅಡಿಗೆಗೆ ನಿಲ್ಲಿಸಿರಲಿಲ್ಲವೇ? ನಳ ಚಕ್ರವರ್ತಿ ಸ್ವಯಂಪಾಕ ಮಾಡಲಿಲ್ಲವೇ? ಶ್ರೀಕೃಷ್ಣದೇವರು ಮೋಹಿನಿ ರೂಪದಿಂದ ದೇವಾಸುರರಿಗೆ ಅಮೃತವನ್ನು ಬಡಿಸಿರಲಿಲ್ಲವೇ?' ಎಂದು ಅಮಲ್ದಾರರು ತಮ್ಮ 'ಪೀನಲ್ ಕೋಡಿ'ನಿಂದ

ಆಧಾರಗಳನ್ನು ಕೊಟ್ಟು, ತಮ್ಮ ಕಾರ್ಯವನ್ನು ಭದ್ರಪಡಿಸಿದರು. ಇತ್ತ ಕೃಷ್ಣವೈದ್ಯರು ಉಪಾಯವಿಲ್ಲದೆ ಅಡಿಗೆ ಮಾಡತೊಡಗಿದರು. ಜಾತ್ರೆ ಹೋಗಿ, ಪಾತ್ರೆ ಎತ್ತಬೇಕಾಯಿತು. ಹೇಗೂ ಹೊತ್ತು ಮುಗಿಯುವುದ ರೊಳಗೆ ಅಡಿಗೆ ಸಿದ್ಧವಾಗದೆ ಹೋಗಲಿಲ್ಲ. ಅಮಲ್ದಾರರು ಸ್ನಾನಮಾಡಿ ಊಟಕ್ಕೆ ಕೂತುಕೊಳ್ಳುವುದಕ್ಕೆ ಬಂದರು. ಊಟಕ್ಕೆ ಬರುವ ಮೊದಲು ಉಲ್ಲಾಸದಿಂದ—

"ಮಡದಿ ತಾ ಚೆಲುವಾಗಿ ಅಡಿಗೆಮಾಡುವಳು"

ಎಂದು ನಿತ್ಯವೂ ದಾಸರ ಪದದ ಸೊಲ್ಲು ಹಾಡುವ ಅಭ್ಯಾಸ. ಅದರಂತೆ ಈ ಹೊತ್ತೂ ಅದನ್ನೇ ಹಾಡಿದರು. ಒಡನೆ ಅಡಿಗೆಯವನ ಮುಖವನ್ನು ನೋಡಿ, ತನ್ನ ಹಾಡು ಈ ಹೊತ್ತು ಅನುಚಿತವಾಯಿತೆಂದು ವ್ಯಸನ ರಾದರು.

ಎರಡು ದಿನಗಳು ನಿಲ್ಲದೆಯೇ ಕಳೆದುವು. ವಲ್ಲಭಾಚಾರ್ಯರ 'ಜಮಾಬಂದಿಯ' ಕೆಲಸವೇನೂ ಮುಗಿ ಯಲಿಲ್ಲ. ಪಟೇಲ ಪದ್ಮರಾಜನಿಗೆ ಮತ್ತೊಬ್ಬ ಅಡಿಗೆಯವನು ಇನ್ನೂ ಸಿಕ್ಕಲಿಲ್ಲ. ಅದು ಕಾರಣದಿಂದ ಹುದ್ದೇ ದಾರರು ಇದ್ದಷ್ಟು ದಿನ ವೈದ್ಯರು ಒಲೆಯ ಬಳಿ ಹೆಂಗಸಿನಂತೆ ಬೇಯಬೇಕಾಯಿತು. ಮೂರನೆಯ ದಿನ ಮಧ್ಯಾಹ್ನದಲ್ಲಿ ಕೃಷ್ಣವೈದ್ಯರು ಯಾವುದನ್ನೋ ನೆನೆಸುತ್ತ ಕುಳಿತಿದ್ದರು. ಅಮಲ್ದಾರು ಮನೆಯ ಇನ್ನೊಂದು ಕೊಟಡಿಯಲ್ಲಿ ಇದ್ದರು. ವೈದ್ಯರು ತುಟಿಯೊಳಗೆ ನಗುತ್ತಿದ್ದರು. ಬಲೆಯನ್ನು ಬೀಸಿ ಮೀನನ್ನು ಎದುರು ನೋಡುತ್ತಿದ್ದ ಅಂಬಿಗನ ಮೋರೆಯಲ್ಲಿ ತೋರುವ ನಗುವು ವೈದ್ಯರ ಮುಖದಲ್ಲಿ ಮೊನೆಯೂರಿತ್ತು. ವೈದ್ಯರು ಏನೋ ಉಪಾಯವನ್ನು ಕಂಡು ಹಿಡಿದು ಜಾತ್ರೆಗೆ ತೆರಳಬೇಕೆಂದು ಉಕ್ಕುತ್ತಿದ್ದರು. ಹಗೆಯವನು ವೈದ್ಯ ನೊಡನೆ ಮದ್ದು ಕೇಳಲು ಬಂದರೆ, ವೈದ್ಯನು ಮನಸ್ಸಿನಲ್ಲಿ ಯಾವ ಪ್ರಕಾರ ಉಲ್ಲಾಸಗೊಳ್ಳುವನೋ, ಆ ಪ್ರಕಾರದಲ್ಲಿ ಕೃಷ್ಣವೈದ್ಯರು ಮನಸ್ಸಿನಲ್ಲಿ ತುಳುಕುತ್ತಿದ್ದರು.

ಅಷ್ಟರಲ್ಲಿ ಯಾರೋ ಒಬ್ಬನು ಬಂದು "ಎಲಾ! ಬಾ! ಬಾ, ಬಾ! ಏಳೇಳು!" ಎಂದು ಗಾಬರಿಗೊಳ್ಳು ವಂತೆ ಹೇಳಿದನು. ಕೃಷ್ಣವೈದ್ಯರು ಸಾವಧಾನ ಚಿತ್ತರಾಗಿ, "ಏನು ಸಂಗ್ತಿ? ಅವಸರ ಮಾಡ್ತಿ ಯಾಕೆ?" ಎಂದು ಪ್ರಶ್ನೆ ಮಾಡಿದರು.

ಬಂದವ:—"ಅಯ್ಯೋ! ಬೇಗ ಏಳು! ಅಮಲ್ದಾರರು! ಅಯ್ಯೋ! ಅಮಲ್ದಾರರು..."

ವೈದ್ಯ:—"ಏನು ಸತ್ತರೇ?"

ಬಂದವ:—"ಪ್ರಾಣಾಂತಿಕ, ನೀನು ಬಾರದೆ ಆಗದು."

ವೈದ್ಯರು ಸ್ವಲ್ಪ ಅಸಮಾಧಾನಗೊಂಡು, "ನಾನು ಕಾಯಂ ಅಡಿಗೆಯ ಭಟ್ಟ. ನಾನು ಹೆಣ ಹೊರಲಾರೆ" ಎಂದು ಹೇಳಿಬಿಟ್ಟರು.

ಬಂದವ:—"ಏನು ಹರಟುವೆ ನೀನು? ಅಮಲ್ದಾರರು ನಿನ್ನನ್ನು ಕರಕೊಂಡು ಬರಬೇಕೆಂದು ಹೇಳಿದ್ದಾರೆ. ಬಾ! ಬಾ!"

ಬಂದವನ ಆಶೆಯ ಪ್ರಕಾರ ಕೃಷ್ಣವೈದ್ಯರು ಕೊಟಡಿಗೆ ಹೋದರು. ವಲ್ಲಭಾಚಾರ್ಯರು ನೆಲದ ಮೇಲೆ ಹೊರಳಾಡುತ್ತಿದ್ದರು. ಮೋರೆಯು ನೋವಿನಿಂದ ತಿರುಪಿದಂತಿತ್ತು. ಅಮಲ್ದಾರರು ವೈದ್ಯರನ್ನು ನೋಡಿ "ಅಯ್ಯೋ! ಸತ್ತೇ! ಏದೇವ್ರೆ! ಸತ್ತೇ!" ಎಂದು ಗೋಳಿಡುತ್ತಿದ್ದರು.

ವೈದ್ಯರು:—"ರಾಯ್ರೇ! ಏನ್ ಬೇಕು? ಬೆಳಗಿನ ಕೇಶಾರನ್ನ ಇಷ್ಟು ತರಲೇ?" ಎಂದು ಕೈಮುಗಿದು ಬಿನ್ನವಿಸಿದರು.

ಅಮಲ್ದಾರರು:—"ಕೇಶರಾನ್ನ? ಕೇಶರಾನ್ನ ಸುಡು! ನನಗೆ ಒಂದು ಔಷಧ ಕೊಡು, ಮಹಾರಾಯ!" ಎಂದು ಹೇಳುತ್ತ, "ಹೊಟ್ಟೆನೋವು—ಅಯ್ಯೊಯ್ಯೋ! ಉದರ ಶೂಲೆ—ಏನೂ ತಾಳಲಾರೆ" ಎಂದು ತನ್ನ ಅವಸ್ಥೆಯನ್ನು ಒಪ್ಪಿಸಿದರು.

ವೈದ್ಯ:—ನಾನು ವೈದ್ಯನಲ್ಲ, ಮಹಾಸ್ವಾಮಿ! ನಾನು ಅಡಿಗೆಯವ, ಖಾವಂದರಿಗೆ ವೇದ್ಯವಾಗಿದೆ."

ಅಮಲ್ದಾರರು ಹೊರಳುತ್ತ ತೆವಳುತ್ತ "ನೀನು ಮದ್ದು ಕೊಡದಿದ್ರೆ, ಈಗ ಕೋಳಾ ಹಾಕಿಸುವೆ."

ವೈದ್ಯರು ತಲೆಯಲ್ಲಾಡಿಸಿದರು. "ನನ್ನನ್ನು ಅಡಿಗೆಯವನೆಂದು ಇಲ್ಲಿ ಹಿಡಿದಿದ್ದಾರೆ!" ಎಂದು ಮೆಲ್ಲನೆ ಹೇಳಿದರು.

"ಅಯ್ಯಯ್ಯೋ! ನಾನು ಸಾಯ್ತೇನೆ! ಏನಾದ್ರೂ ಮದ್ದು ಕೊಡು! ಒಂದು ಔಷಧ ಕೊಡು" ಎಂದು ಅಮಲ್ದಾರರು ಹೊರಳಾಡಿದರು.

ವೈದ್ಯ:—"ನನ್ನ ಬಳಿ ಒಂದು ಮದ್ದುಂಟು. ಖರ್ಚು ಹೆಚ್ಚು ಬೀಳುತ್ತೆ. ಹಣ ಕೊಡದೆ ಮಾತ್ರ ಸಿಕ್ಕಲಾರದು?"

ಅಮಲ್ದಾರ:—"ಇಕೊ! 25 ರೂಪ್ಯಾ ಕೊಡ್ತೇನೆ. ಬೇಗ ಮದ್ದು ಕೊಡು. ಅಯ್ಯಯ್ಯೋ! ಓ! ವೈಕುಂಠವಾಸ! ವೈಕುಂಠವಾಸ!"

ಕೃಷ್ಣವೈದ್ಯರು ಸಮೀಪಕ್ಕೆ ಬಂದು "ಮದ್ದು ಪ್ರಾರಂಭಿಸುವ ವೇಳೆಯಲ್ಲಿ ರೋಗಿಗಳು ವೈಕುಂಠವಾಸದ ನೆನಪನ್ನು ಮಾಡಬಾರದು" ಎಂದು ಮೆಲ್ಲನೆ ಸೂಚಿಸಿದರು

ಅಮಲ್ದಾರರು ವೈಕುಂಠವ್ಯಾಸಾಚಾರ್ಯರನ್ನು ಕೂಗಿ ಕರೆದಿದ್ದರು. ವ್ಯಾಸಾಚಾರ್ಯರು ಸಮೀಪದಲ್ಲಿ ಇದ್ದಿರಲಿಲ್ಲ.

ವೈದ್ಯ:—"ರಾಯರೇ! ನನ್ನ ಔಷಧ ಕಹಿ ಎಂದು ಬೇಸರ ಮಾಡಬಾರದು. ಈ ಒಂದು ಮಾತ್ರೆ ಕೊಟ್ಟು ನಾಳೆಗೆನೇ ಶ್ರೀಕಾಂತ ಜಾತ್ರೆಗೆ ಹೋಗುವ ಹಾಗೆ ಮಾಡುವೆ —ಬಲ್ರೋ?"

ಅಮಲ್ದಾರರಿಗೆ ಈ ಮಾತು ತಾನೇ ರುಚಿಸಲಿಲ್ಲ.

ವೈದ್ಯರು ತಮ್ಮ ಕಂತೆಯೊಳಗಿಂದ ಔಷಧವನ್ನು ತೆಗೆದು ರೋಗಿಯ ನಾಡಿಯನ್ನು ಹಿಡಿದು "ಈ ರೋಗವು ಮೇಹೋದರ ಶೂಲೆ" ಎಂದರು.

ಅಮಲ್ದಾರರು ನಿರಾಶೆಯಿಂದ "ಮೇಹೋದರವೋ? ಮಹೋದರವೋ? ಇದರಲ್ಲಿ ಜನಗಳು ಬದುಕುತ್ತಾರೋ?" ಎಂದು ಕೇಳಿದರು.

ವೈದ್ಯ:—ಅಪಾಯವುಂಟು. ಶೇಕಡಾ ಒಂದ್ರಂತೆ ಬದುಕುತ್ತಾರೆ. ಇದು ಮೇಹೋದರವೇ."

ಅಮಲ್ದಾರ:—"ವೈದ್ಯರೇ! ಇದು ಯಾವದ್ರಿಂದ ಉಂಟಾಯಿತು?"

ವೈದ್ಯ:—"ಕಾಯಿ ಕಜಡಿ ತಿಂದ್ರೆ ಉಂಟಾಗುತ್ತೆ. ದುಡ್ಡು ತಿಂದ್ರೆ ಜೀರ್ಣಕ್ಕೆ ಬಾರದೆ ಉಂಟಾಗುತ್ತೆ" ಎಂದು ತನ್ನೊಳಗೇನೆ ಹೇಳಿದರು.

ಅಮಲ್ದಾರರು ಈ ವಿಧವಾಗಿ ಅವಸ್ಥೆ ಪಡುತ್ತಿರುವಾಗ ಪಟೇಲನು ಬಂದು "ಬೇಗ ಬನ್ನಿ! ಏಳಿ! ಏಳಿ! ವೈಕುಂಠ ವ್ಯಾಸಾಚಾರ್ಯರಿಗೆ ಕಾಹಿಲೆ; ಪ್ರಾಣಾಂತಿಕ ಕಾಹಿಲೆ" ಎಂದು ಅವಸರಗೊಂಡನು.

ಕೃಷ್ಣವೈದ್ಯರು ವ್ಯಾಸಾಚಾರ್ಯರ ಹತ್ತಿರಕ್ಕೆ ಬಂದು "ಏನಯ್ಯಾ! ನಮಗೆ ಯಾಕೆ ತೊಂದರೆ ಕೊಡುತ್ತೀರಿ?" ಎಂದರು.

ವ್ಯಾಸಾಚಾರ್ಯರು ಚಾಪೆಯ ಮೇಲೆ ಹೊರಳಾಡುತ್ತಿದ್ದರು. ಅವರು ವೈದ್ಯರನ್ನು ನೋಡಿ "ಒಂದಿಷ್ಟು ಮದ್ದು ಕೊಡಿ! ಸಾಯ್ತೇನೆ" ಎಂದರು.

ವೈದ್ಯ:—"ಹಾಗಾದ್ರೆ ಔಷಧ ಯಾಕೆ? ಕೆಡುವ ಕಾಲಕ್ಕೆ ಬುದ್ಧಿ ಇಲ್ಲ. ಮರಣ ಕಾಲಕ್ಕೆ ಮದ್ದು ಇಲ್ಲ— ಎಂದು ಗೊತ್ತಿಲ್ಲವೆ?"

ವ್ಯಾಸಾಚಾರ್ಯ:–"ಅಕಟಾ! ನಿಮ್ಮ ಮಾತು ಬೇಡ! ಒಂದು ಔಷಧ ಕೊಡಿ."

ವೈದ್ಯ:—"ಇದ್ದದ್ದು ಹೋಯಿತು ಮದ್ದಿನ ಗುಣ ಎಂದಾದೀತು. ನಿಮಗೆ ಮಗ್ಗಿ ಬರುವುದೇ?"

ವ್ಯಾಸಾಚಾರ್ಯ:—"ಇಲ್ಲಪ್ಪಾ ಇಲ್ಲಾ!"

ವೈದ್ಯ:—"ಮಗ್ಗಿ ಬಾರದವನಿಗೆ ನುಗ್ಗೇಕಾಯಿ ಮದ್ದೇ? ಎಂಬ ಗಾದೆಯುಂಟು. ನುಗ್ಗೇಕಾಯಿ ಆಗೋದಿಲ್ಲ. ನಿಮ್ಮ ನಾಡಿ ನೋಡ್ತೇನೆ. ನಾಡಿ ನೋಡದೆ ಮದ್ದು ಕೊಟ್ಟರೆ, ಕಾಡು ರೋಗ ಬರುವುದೆಂದು ಗಾದೆ ಇದೆ."

ವ್ಯಾಸಾಚಾರ್ಯ:—"ನಿಮ್ಮ ಗಾದೆ ಸಾಕುಮಾಡಿ!"

ವೈದ್ಯರು "ಮದ್ದು ಕೊಟ್ಟರೆ ಎದ್ದು ನಿಲ್ಲಬೇಕು" ಎಂದು ಹೇಳಿ ಕಂತೆಯಿಂದ ಔಷಧ ಕೊಟ್ಟರು.

ಎರಡು ದಿನಗಳ ವರೆಗೆ ಅಮಲ್ದಾರರೂ ವ್ಯಾಸಾಚಾರ್ಯರೂ ಕಾಹಿಲೆಯಿಂದ ಬಹಳ ಬೇಸತ್ತರು. ವೈದ್ಯರ ಕಹಿಮದ್ದಿನಿಂದಲೂ ಗಂಜಿನೀರಿನಿಂದಲೂ ಇಬ್ಬರ ನಾಲಿಗೆಯೂ ರುಚಿ ಕೆಟ್ಟುಹೋಯಿತು. ನಡುನಡುವೆ ವೈದ್ಯರು ಇಬ್ಬರ ಹಾಸಿಗೆಯ ಬಳಿಗೆ ಬಂದು, "ಜನಗಳನ್ನು ಬಿಟ್ಟಿಗೆ ಹಿಡಿದರೆ ಉಂಟಾಗುವ ಫಲವನ್ನು ಕುರಿತು' ಸಣ್ಣ ಕತೆಗಳನ್ನು ಹೇಳಿ ಉಲ್ಲಾಸಗೊಳಿಸುತ್ತಿದ್ದರು. ನಾಲ್ಕನೆಯ ದಿನ ಇಬ್ಬರೂ ಪೂರ್ಣ ಗುಣ ಹೊಂದಿದರು.

ಕೃಷ್ಣವೈದ್ಯರು ಇಬ್ಬರ ಅಪ್ಪಣೆಯನ್ನು ಹೊಂದಿ ಶ್ರೀಕಾಂತ ಜಾತ್ರೆಗೆ ಹೊರಟರು. ಹಾದಿಯಲ್ಲಿ ಪಟೇಲ ಪದ್ಮರಾಜನು ಅವರ ಬಳಿಗೆ ಬಂದು "ಹುದ್ದೇದಾರರಿಗೆ ಈ ಅವಸ್ಥೆ ಆಗಲಿಕ್ಕೆ ಕಾರಣವೇನು?" ಎಂದು ಕೇಳಿದನು.

ವೈದ್ಯ:—"ಔಷಧಕಾರರನ್ನು ಅಡಿಗೆಗೆ ಹಿಡಿದಿದ್ದರಿಂದ."

ಪಟೇಲ:—"ಅದು ಹ್ಯಾಗೆ?"

ವೈದ್ಯ:—"ನನಗೆ ಅಡಿಗೆಯ ಅನುಭವ ಅಷ್ಟಿಲ್ಲ. ಹಿಂಗಿನ ಒಗ್ಗರಣೆ ಹಾಕಲಿಕ್ಕೆ ಮರೆತು, ಮಣಿಮಂತ ಚೂರ್ಣವನ್ನು ಬೆರೆಸಿಬಿಟ್ಟೆ." ಹೀಗೆಂದು ಹೇಳಿ ಕೃಷ್ಣವೈದ್ಯರು ಶ್ರೀಕಾಂತ ಜಾತ್ರೆಯ ಹಾದಿ ಹಿಡಿದರು.

ಹಮ್ ನಹಿಂ ಗದ್ಧಾ!*

(ಸುವಾಸಿನಿ 1902)

ಕೆಲವು ವರ್ಷಗಳ ಹಿಂದೆ ಲಕ್ಷಣಾವತಿಯಲ್ಲಿ (Lucknow) 17ನೆಯ ವರ್ಗದ ದೇಶೀಯ ಸಿಪಾಯರ ದಂಡು ಇದ್ದಿತು. ಸಿಪಾಯರ ಮನೆಗಳು 'ಮೈದಾನಿನಲ್ಲಿ' ಕಟ್ಟಿದ್ದುವು; ಹಾಗೂ ಸೈನ್ಯದ ಅಧಿಕಾರಿಗಳ 'ಬಂಗ್ಲೆಗಳು' ಗುಡ್ಡದ ಮೇಲೆ ನಿಂತಿದ್ದುವು. 'ಜನರಲ್' ಸಾಹೇಬರ ಮತ್ತು 'ಕರ್ನೆಲ್' ಸಾಹೇಬರ 'ಬಂಗ್ಲೆಗಳು' 'ಲೆಫ್ಟೆನೆಂಟ್' ಸಾಹೇಬರ 'ಬಂಗ್ಲೆಗಿಂತಲೂ' ಎತ್ತರದಲ್ಲಿ ಇದ್ದುವು. ಈ ಮೂವರು 'ಆಫೀಸರರ' ಬಟ್ಟೆಗಳನ್ನೆಲ್ಲಾ ಒಗೆಯುವ ಅಗಸನು ಒಬ್ಬನೇ. ಜನರಲ್ ಸಾಹೇಬರ ಮತ್ತು ಕರ್ನೆಲ್ ಸಾಹೇಬರ 'ಬಂಗ್ಲೆಗಳು' ಎತ್ತರದಲ್ಲಿ ಕಟ್ಟಿ ಇದ್ದುದರಿಂದ, ಅಗಸನು ಅವರ ವಸ್ತ್ರಗಳನ್ನು ಒಯ್ಯುವುದಕ್ಕೆ ಕತ್ತೆಯನ್ನು ಇಟ್ಟುಕೊಳ್ಳಬೇಕಾಯಿತು. ಆದರೆ ಲೆಫ್ಟೆನೆಂಟ್ ಸಾಹೇಬರ ಬಟ್ಟೆಗಳಿಗೆ ತನ್ನ ಬೆನ್ನನ್ನೇ ವಾಹನವಾಗಿ ಕೊಡುತ್ತಿದ್ದನು. ಇದರಲ್ಲಿ ನೂತನವೇನೂ ಇರಲಿಲ್ಲವೆಂದು ತಾನಾಗಿಯೇ ತೋರುವುದು. ಆದರೆ ಅಗಸನ ಈ ನಡತೆಯನ್ನು ನೋಡಿ ಲೆಫ್ಟೆನೆಂಟ್ ಸಾಹೇಬರು ರೇಗಿ ಬಿದ್ದರು. ಜನರಲ್ ಮತ್ತು ಕರ್ನೆಲ್ ಸಾಹೇಬರುಗಳ ವಸ್ತ್ರಗಳನ್ನು ಕತ್ತೆಯ ಮೇಲೂ, ತನ್ನ ವಸ್ತ್ರಗಳನ್ನು ಮಾತ್ರ ಬೆನ್ನ ಮೇಲೂ ಏಕೆ ಕೊಂಡುಹೋಗುತ್ತಿದ್ದನು ಎಂದು ಸಾಹೇಬರ ಬುದ್ಧಿಗೆ ತಿಳಿಯಲಿಲ್ಲ. ತನಗೆ ಇದೊಂದು ಬಗೆಯ ಅವಮಾನವೆಂದು ತಿಳಿದು, ಸಾಹೇಬರು ಆ ಬಡ ಪಾಪಿಗೆ ಬುದ್ಧಿ ಕಲಿಸಬೇಕೆಂದು ನಿಶ್ಚಯ ಮಾಡಿದರು.

ಸಾಹೇಬರು ಕಾರಣಾಂತರದಿಂದ ಅನೇಕ ಮಂದಿ ಸ್ನೇಹಿತರನ್ನು ಮನೆಗೆ ಒಂದು ದಿನ ಸಾಯಂಕಾಲ ಆಮಂತ್ರಿಸಿದ್ದರು. ಅತಿಥಿಗಳೆಲ್ಲಾ ಮನೆಯೊಳಗೆ ಕೂಡುತ್ತಲೇ ಸಾಹೇಬರ ಬಟ್ಟೆಗಳನ್ನು ಎಂದಿನಂತೆ ಬೆನ್ನ ಮೇಲೆ ಹೊತ್ತುಕೊಂಡು 'ಡೋಭಿಯು' ಒಳಕ್ಕೆ ಬಂದನು. ಅತಿಥಿಗಳ ಸಮಕ್ಷಮದಲ್ಲಿ ಅಗಸನು ತನಗೆ ತೋರಿಸಿದ ಈ ಅತ್ಯಾಚಾರವನ್ನು ನೋಡಿ, ಸಾಹೇಬರು ಉರಿದು ಬಿದ್ದರು. ಅದಲ್ಲದೆ ತಾನು ದೇಶಭಾಷೆಯಲ್ಲಿ ಎಷ್ಟರ ಮಟ್ಟಿಗೆ ಅಭ್ಯಾಸ ಮಾಡಿರುವೆನೆಂದು ತನ್ನ ಮಿತ್ರಮಂಡಳಿಗೆ ತೋರಿಸುವುದಕ್ಕೆ ಸಾಹೇಬರು ಕಾಂಕ್ಷಿತರಾಗಿ, ಅಗಸನಿಗೆ "ಕಂ ಹಿಯರ್ ಯು ನಿಗ್ಗರ್" ಎಂದು ಒದರಿದರು.

ಬಡ ಅಗಸನು ನಡುನಡುಗಿ ಮುಂದುಹೋಗಿ ದೊಡ್ಡ ಸಲಾಂ ಮಾಡಿದನು.

"ವ್ಹ್ಯಾಜನರಲ್ ಸಾಹೇಬ್ ಎಂಡ್ ಕರ್ನೆಲ್ ಸಾಹೆಬ್ ತುಂ ಗಿವ್ ಗದ್ಧಾ ಎಂಡ್ ಹಂ ನಹಿ?" ಎಂದು ಸಾಹೇಬರು ಕುಪಿತಸ್ವರದಿಂದ ಹೇಳಿದರು.

ಅಗಸನ ಬುದ್ಧಿ ಅಡಿಮೇಲಾಯಿತು; ಅವನಿಗೆ ಈ ಸಿಟ್ಟುಮಾತಿನ ಅರ್ಥವೇನೆಂದು ತಿಳಿದು ಬರಲಿಲ್ಲ. ಅವನು ಮೌನದಿಂದ ಇರುವುದೇ ಲೇಸೆಂದು ತಿಳಿದು ನಿರುತ್ತರನಾದನು. ಆದರೆ ಅವನ ನಿರುತ್ತರದಿಂದ

*'Indian Ladies Magazine' ಎಂಬ ಪತ್ರಿಕಾ ಕರ್ತರು ಆ ಪತ್ರದ ಒಕ್ಟೊಬರ್ ಸಂಚಿಕೆಯಿಂದ ಇದನ್ನು ಕನ್ನಡಿಸುವುದಕ್ಕೆ ಕೊಟ್ಟ ಅನುಮತಿಯನ್ನು ಆಭಾರಪೂರ್ವಕವಾಗಿ ಸ್ಮರಿಸುತ್ತೇವೆ.

ಸಾಹೇಬರು ಇನ್ನೂ ಕೆರಳಿದ್ದಂತಾಗಿ "ಡೇಯರ್ ಯೂ ಡಿನ್ಯಾ ಇಟ್, ಆ್ಯಲ್ ಬ್ರೇಕ್ ಎವೆರಿ ಬೋನ್ ಫೊರ್ ಯೂ—ಮಾಲುಂ? " ಎಂದರು.

"ಖುದಾವಂದ್! ಆಪ್ ಕ್ಯಾ ಕಹತೇ ಹೈ ಮೈ ಸಮಜ್ತಾ ನಹಿಂ?" ಎಂದು 'ಧೋಬಿ' ಯು ಉತ್ತರಿಸಿದನು.

"ಸಮಜ್ತೆ ನೈ? ಒಲ್ ರ್‍ಯಾಟ್, ಆ್ಯ ವಿಲ್ ಎಕ್ಸ್‌ಪ್ಲೈನ್ ಟು ಯೂ, ದೇಕ್ಹೊ."

"ಜೀ ಹುಜೂರ್."

"ದೇಕ್ಹೋ! ಕರ್ನೆಲ್ ಸಾಹೆಬ್ ಗದ್ಧಾ, ಜನರಲ್ ಸಾಹೆಬ್ ಗದ್ಧಾ; ಹಂ ಗದ್ಧಾ ನಹಿ?"

ಇದಕ್ಕೆ ಅಗಸನು ಸುಮ್ಮನಿರಲಾರದೆ "ನಹಿ ಸಾಹೆಬ್, ಆಪ್ ಕೈಸಾ ಗದ್ಧಾ? ಆಪ್ ಗದ್ಧಾ ನಹಿ" ಎಂದನು.

ಇದನ್ನು ಕೇಳುತ್ತಲೇ ಸಾಹೇಬರು ಕ್ರೋಧದಿಂದ "ಯೂ ಸ್ಟುಪಿಡ್ ಎಅಸ್, ಯು ಡೆಯರ್ ಡಿನ್ಯಾ ಮಿ ಯುವರ್ ಡೊಂಕಿ? ವೊಟ್ ಡು ಯು ಮೀನ್? ಹಂ ಗದ್ಧಾ, ಒಫ್ ಕೋರ್ಸ್, ಹಂ ಗದ್ಧಾ."
ಸಾಹೇಬರ ಮನಸ್ಸು ನೆಟ್ಟಗಾದ ಸ್ಥಿತಿಯಲ್ಲಿ ಇರಲಾರದೆಂದು ಸಾಹೇಬರ ಈ ಮಾತುಗಳಿಂದ ಬಡ ಅಗಸನು ನಿಶ್ಚಯಿಸಿದನು; ತಾನು ಕತ್ತೆ ಎಂದು ಹೇಳಿಸಿಕೊಳ್ಳುವ ಹಟವನ್ನು ಸಾಹೇಬರು ಏಕೆ ಹಿಡಿದಿರುವರು ಎಂದು ಅವನಿಗೆ ತಿಳಿಯಲಿಲ್ಲ. ಅಲ್ಲಿ ನೆರೆದಿದ್ದ ಅತಿಥಿಗಳೆಲ್ಲರೂ ಸಾಹೇಬರ ನುಡಿಗಳಿಂದ ವಿನೋದಗೊಂಡರು. ಆದರೆ ಅಗಸನು ತನ್ನನ್ನು ಅಪಮಾನಗೊಳಿಸಿದನೆಂದು ಸಾಹೇಬರು ತಿಳಿದು, ತನ್ನ ಮುಷ್ಟಿಯಿಂದ ಎರಡು ಮೂರು ಪ್ರಹಾರಗಳನ್ನು ಕೊಟ್ಟು ಹೇಳಿದ್ದೇನೆಂದರೆ, "ಸೇ, ಯು ಇನ್‌ಫರ್‌ನಲ್ ಎಯಸ್!—ಸೇ, ಲೆಫ್ಟೆನೆಂಟ್ ಸಾಹೆಬ್ ಗದ್ಧಾ, ಅಲ್‌ಬತ್ ಗದ್ಧಾ, ಒಲ್‌ವೆಸ್ ಗದ್ಧಾ" "ಬೊಲೊ, ಹಂ ಗದ್ಧಾ ಹೈ, ಅದರ್ ವಾಯಸ್ ಆ್ಯ ವಿಲ್ ಕಿಲ್ ಯು."

ಲೆಫ್ಟೆನೆಂಟ್ ಸಾಹೇಬರೊಡನೆ ಚರ್ಚಿಸುವುದು ವ್ಯರ್ಥವೆಂದು ತಿಳಿದು ಅಗಸನು "ಆಪ್ ಖುದಾವಂದ್ ಜಬ್ಸೊ ಜೈಸಿ, ಆಪ್ ಕೀ ಮರ್ಜಿ. ಆಪ್ ಬಹುತ್ ಬಡಾ ಗದ್ಧಾ " ಎಂದನು.

ಈ ಸಂಗತಿಯನ್ನು ಸಾಹೇಬರು ತನ್ನ ಹಿಂದೂಸ್ಥಾನೀ ಮುನ್ಶಿಗೆ ಹೇಳಿದರು. ಮುನ್ಶಿಯು ಇದರ ಯಥಾರ್ಥ ಸ್ಥಿತಿಯನ್ನು ತಿಳಿಸುತ್ತಲೇ ಸಾಹೇಬರಿಗೆ ಆದ ನಾಚಿಕೆಯನ್ನು ವಾಚಿಸುವುದಕ್ಕಿಂತಲೂ ನೀವು ಯೋಚಿಸುವುದೇ ಲೇಸು. ಹೇಗೂ ಅದು ಮುನ್ಶಿಯ ಸಂಬಳವನ್ನು ಹೆಚ್ಚಿಸುವಂತೆ ಪರಿಣಮಿಸಿತು. ದೇಶ ಭಾಷೆಯ ಅಭ್ಯಾಸಕ್ಕೆ ಸ್ವಲ್ಪ ಹೆಚ್ಚು ಗಮನವನ್ನು ಕೊಡುವುದಕ್ಕೆ ಸಾಹೇಬರು ತೊಡಗಿದರು; ಮತ್ತು ತಾನು ಚೆನ್ನಾಗಿ ದೇಶ ಭಾಷೆಯನ್ನು ತಿಳಿದ ಹೊರತು ಅದರಿಂದ ಒಂದೇ ಒಂದು ಅಕ್ಷರವನ್ನು ಉಚ್ಚರಿಸಲಾರೆನೆಂದು ನಿಶ್ಚೈಸಿದರು.

(ಸುವಾಸಿನಿ—1902)

ನನ್ನ ಚಿಕ್ಕ ತಾಯಿ

ನನ್ನ ತಂದೆಗೆ ನಾನೊಬ್ಬನೇ ಮಗನು. ನನ್ನ ತಂದೆ ತಾಯಿಗಳು ನನ್ನನ್ನು ಮದುವೆ ಮಾಡದೆ ತೀರಿ ಹೋದರು. ಆ ದಿನ ಮೊದಲ್ಗೊಂಡು ನಾನು ನನ್ನ ಚಿಕ್ಕಪ್ಪನ ಮನೆಯಲ್ಲಿದ್ದೆನು. ನನ್ನ ಚಿಕ್ಕತಾಯಿಯನ್ನು ನೋಡಿದರೆ, ನನಗೆ ಮೈಯೆಲ್ಲ ಉರಿಯುತ್ತಿತ್ತು. ಆದರೆ ಅದನ್ನು ತಪ್ಪಿಸಲಿಕ್ಕೆ ಉಪಾಯವಿಲ್ಲ; ನನಗೆ ಉಪ್ಪನ್ನ ಕೊಡುವವರು ಬೇರೆ ಯಾರೂ ಇಲ್ಲ. ಇಷ್ಟರೊಳಗೆ ನನಗೆ ಮದುವೆಯಾಗಿ ಮೊಮ್ಮಗನ ಮೋರೆ ನೋಡು ತ್ತಿದ್ದೆನು. ಈ ಮುದಿ ಗೂಗೆ—ಆದರೆ ಈಗ ಸಿಟ್ಟಿನಿಂದು ಬೈದು ಏನು ತಾನೇ ಪ್ರಯೋಜನ? ಆದುದೆಲ್ಲ ಆಗಿ ಹೋಯಿತು; ಜನ್ಮದ ಫಲ ತಿಂದು ಆಯಿತು. ಈಗ ಯಾಕೆ ತಾನೆ ಬೈಯುವುದು? ಕೆಲವು ತಿಂಗಳ ಹಿಂದೆ ನನ್ನ ಜಾತಕವನ್ನು ಹೊಸಪೇಟೆ ರಾಜಣ್ಣನವರು ಕೊಂಡು ಹೋಗಿ, ಅವರ ಚೊಚ್ಚಲ ಮಗಳ ಜಾತಕಕ್ಕೆ ಅದು ಕೂಡಿ ಬರುತ್ತದೆ ಎಂದು ಸಂಬಂಧದ ಪ್ರಸ್ತಾಪವನ್ನು ನಮ್ಮವರೊಡನೆ ಮಾಡುತ್ತಿದ್ದರಂತೆ. ಆದರೆ ಈ ಹಾಳು ಮೂಳಿಯ ಕೆಲಸದಿಂದ—ಬೈಯಬಾರದು; ಎಷ್ಟಾದರೂ ಚಿಕ್ಕತಾಯಿ. ನನಗೆ ಅನ್ನಕೊಟ್ಟು ಸಾಕಿದಂಥವಳು; ಮುಂದೆ ತನ್ನ ಚಿನ್ನಬಿಟ್ಟು ಸಾಯುವಂಥವಳು.

ನನ್ನ ಚಿಕ್ಕತಾಯಿಯು 60 ವರ್ಷದ ಯುವತಿ. ಹಣೆಯಲ್ಲಿ ಕುಂಕುಮ, ಗಂಡನು ಮದುವೆಯಾ ದೊಡನೆಯೇ ಊರುಬಿಟ್ಟು ಹೋದುದರಿಂದ ಯಾವಾಗಲೂ ಮುತ್ತೈದೆ. ತಲೆಯಲ್ಲಿ ತುಂಬಾ ಕೂದಲು, ಒಂದೆರಡು ಕಪ್ಪೂ ಇದ್ದಾವೆ. ದೇಹ ಸ್ವಲ್ಪ—ಮೊನ್ನೆ ಮುಕ್ತಪುರದಿಂದ ಹಿಂತಿರುಗಿ ಬರುತ್ತಿದ್ದಾಗ ದೋಣಿ ಯಿಂದ ಇಳಿಯುವ ಸಂದರ್ಭದಲ್ಲಿ ಏನೋ ವಿಪರೀತವಾಯಿತು. ಪ್ರತಿನಿತ್ಯವೂ ಮೈಯ ಆಲಸ್ಯವನ್ನು ಕುರಿತು ಗುಣಗುಟ್ಟುವಳು. ಆದರೆ ಹಗಲಿನ ಆಲಸ್ಯವು ರಾತ್ರಿಯ ಆಹಾರವನ್ನು ಕಡಿಮೆ ಮಾಡುತ್ತಿದ್ದಿಲ್ಲ. ರಾತ್ರಿ ಅನ್ನವನ್ನು ಊಟ ಮಾಡುತ್ತಿದ್ದಿಲ್ಲ. ಅವಳು ತಿನ್ನುವುದರಲ್ಲಿ ನನಗೂ ಆಗಾಗ್ಗೆ ಒಂದಿಷ್ಟು ಸಿಕ್ಕುತ್ತಿತ್ತು. "ಅಪ್ಪಾ! ಒಂದು ಸಲ ದೇವಸ್ಥಾನದ ವರೆಗೆ ನನ್ನ ಸಂಗಡ ಬಾರೆಯಾ?" ಎಂದು ಹೇಳಿ ಪ್ರತಿ ಶುಕ್ರವಾರ ರಾತ್ರಿಯಲ್ಲಿ ಒಂದು ಚಿಗಳಿಯನ್ನು ನನ್ನ ಕೈಗೆ ಹಾಕುತ್ತಿದ್ದಳು. ಹಾದಿಯಲ್ಲಿ ಹೋಗುತ್ತಿದ್ದಾಗ ತನ್ನ ಹಣವನ್ನೂ ಚಿನ್ನವನ್ನೂ ನನ್ನ ಹೆಸರಿಗೆ ಮಾಡುತ್ತೇನೆಂತಲೂ ತಾನು ಇನ್ನು ಹೆಚ್ಚುಕಾಲ ಬದುಕಲಾರೆ ನೆಂತಲೂ ನನ್ನೊಡನೆ ತತ್ವಜ್ಞಾನ ಎತ್ತುತ್ತಿದ್ದಳು.

ಅವಳು ಹೇಳುವಂತೆ ಅವಳ ಬಳಿಯಲ್ಲಿ ಒಂದೆರಡು ಚಿನ್ನದ ವಸ್ತುಗಳಿದ್ದುವು. ಒಂದು ದೊಡ್ಡದಾದ ಓಲೆಜೋಡು ಕಿವಿಯಲ್ಲಿ ಸಣ್ಣದಾಗಿ ತೋರುತ್ತಿತ್ತು; ಕೈಗೆ ಎರಡು ಹಿಂಬಳೆಗಳಿದ್ದುವು. ಉಳಿದವುಗಳೆಲ್ಲ ವಿಶೇಷ ಬೆಲೆಯುಳ್ಳದಾಗಿದ್ದಿಲ್ಲ. ಆದರೂ ಅವುಗಳಲ್ಲಿ ಒಂದು ಆನೆಜಮೆಸರವನ್ನು ಅಧಿಕವಾಗಿ ಎಣಿಸುತ್ತಿದ್ದಳು. ಚಿನ್ನದಿಂದ ಬಿಗಿದ ಆನೆಯ ಕೂದಲುಗಳು ಮಕ್ಕಳಿಲ್ಲದ ಹೆಂಗಸರು ಇಟ್ಟುಕೊಳ್ಳುವುದು ಅಪರೂಪ. ಆದರೆ ಈ ನಗವನ್ನು ನಮ್ಮ ಚಿಕ್ಕತಾಯಿಗೆ ಯಾರೋ ಪ್ರಸಿದ್ಧ ಪೌರಾಣಿಕರು ಕೊಟ್ಟಿದ್ದರೆಂದು ಅವಳು ಹೇಳು ತ್ತಿದ್ದಳು. ಈ ನಗವನ್ನು ಕೈಯಲ್ಲಿ ಹಿಡಿದು ಜಪಮಾಡಿದರೆ ಊರು ಬಿಟ್ಟು ಹೋದ ಗಂಡನು ಮರಳಿ

ಬರುವನು ಎಂದು ನಂಬಿಸಿ ಕೊಟ್ಟುದರಿಂದ ಅದರ ವಿಷಯದಲ್ಲಿ ಹೆಚ್ಚಿನ ಎಚ್ಚರಿಕೆ. ಆಭರಣಗಳನ್ನೆಲ್ಲ ಅರಿವೆಯಲ್ಲಿ ಗಂಟು ಕಟ್ಟಿ ಅವುಗಳನ್ನು ಮೈಯಲ್ಲಿ ಎಲ್ಲಿಯೋ ಅಡಗಿಸುತ್ತಿದ್ದಳು. ಹಗಲು ಅವುಗಳ ಮೇಲೆ ಮನಸ್ಸು; ಇರುಳು ಅವುಗಳನ್ನು ಕುರಿತು ಕನಸು.

ಮುಕ್ತಪುರದಲ್ಲಿ ಯಾರೋ ಪೌರಾಣಿಕರು ಎರಡು ತಿಂಗಳ ಹಿಂದೆ ಬಂದಿದ್ದರು. ಪೌರಾಣಿಕರ ಜಪತಪವನ್ನೂ ಸ್ನಾನಸಮಾಧಿಯನ್ನೂ ನೋಡಲಿಕ್ಕೆ ಊರೂರಿಂದ ಜನರು ಓಡುತ್ತಿದ್ದರು. ನನ್ನ ಚಿಕ್ಕತಾಯಿಗೆ ಓಡುವುದಕ್ಕೆ ದೇಹ ಬಿಡುವುದಿಲ್ಲ. ಬಂಡಿಯನ್ನು ಒದಗಿಸಬೇಕೆಂದು ನನ್ನೊಡನೆ ಎಂದಳು. ಅವಳನ್ನು ಕೊಂಡು ಹೋಗಲಿಕ್ಕೆ ಬಂಡಿಯಾಳಲ್ಲಿ ಯಾರೊಬ್ಬನೂ ಕ್ಲುಪ್ತವಾದ ಬಾಡಿಗೆಗೆ ಒಪ್ಪಲಿಲ್ಲ. ಕಡೆಗೆ ಅವಳನ್ನು ಹೇಗಾದರೂ ದೋಣಿಯಲ್ಲಿ ಕೂತುಕೊಳ್ಳಿಸಿ, ಬಳಿಕ ದೋಣಿಯ ಚಪ್ಪರವನ್ನು ಅಲ್ಲಲ್ಲಿ ಸಿಕ್ಕಿಸಿ, ಮುಕ್ತಪುರಕ್ಕೆ ನಾನು ಅವಳನ್ನು ಕಳುಹಿಸಿದೆನು. ಒಂದು ವಾರವು ಕಳೆದ ಮೇಲೆ ಅವಳು ಹಿಂತಿರುಗಿ ಬಂದಳು. ಪ್ರಯಾಣದ ಆಯಾಸವು ಅವಳಲ್ಲಿ ಕಂಡು ಬರಲಿಲ್ಲ. ಯಾಕೆಂದರೆ, ಮನೆಗೆ ಬಂದಕೂಡಲೇ ಅರಿವೆಗಳನ್ನು ಬಿಚ್ಚಲಿಕ್ಕೂ ವಸ್ತ್ರಗಳನ್ನು ನೋಡಲಿಕ್ಕೂ ಕುಳಿತಳು. ಗಂಟಿಗೆ ಸುತ್ತಿದ ಒಂದು ಅರಿವೆಯನ್ನು ಬಿಚ್ಚಿದಳು; ಆಮೇಲೆ ಮತ್ತೊಂದನ್ನು ತೆಗೆದಳು; ಬಳಿಕ ಇನ್ನೊಂದನ್ನು ತೆಗೆದಳು. ಪುನಃ ಮತ್ತೊಂದು, ಮತ್ತೊಂದು, ಮತ್ತೊಂದು —ದ್ರೌಪದಿಯ ವಸ್ತ್ರಹರಣವು ಸ್ಮರಣೆಗೆ ಬರುವಂತೆ ಮಾಡಿದಳು.

ಎಲ್ಲವನ್ನು ಈಚೆಗೆ ತೆಗೆದ ಸ್ವಲ್ಪ ಹೊತ್ತಿನ ಮೇಲೆ "ಹೋಯ್ತು! ಅಪ್ಪಾ! ನನ್ನ ಸರ್ವಸ್ವ ಹೋಯ್ತು" ಎಂಬ ಗೋಳು ಕೇಳಿಸಿತು. ಜಗುಲಿಯಲ್ಲಿದ್ದ ನಾನು ಒಳಗೆ ಓಡಿದೆನು. ಅವಳ ಮುಖವು ಸಿಡಿಲು ಬಡಿದ ತೆರದಲ್ಲಿತ್ತು. ಅರಿವೆ ಚಿಂದಿಗಳಿಂದ ಹಣೆ ಚಚ್ಚಿಕೊಳ್ಳುವುದನ್ನು ಕಂಡು ದುಃಖದ ಕಾರಣವನ್ನು ಊಹಿಸಿದೆನು. ಒಡವೆಗಳ ಗಂಟು ಅರಿವೆಯೊಳಗೆ ಇದ್ದಿಲ್ಲ. ಮುದುಕಿಗೆ ತಕ್ಕದಾದ ಶಾಸ್ತಿಯಾಯಿತೆಂದು ನಾನು ಒಂದು ನಿಮಿಷ ಹಿಗ್ಗಿದೆನು. ಆದರೆ ಮುದುಕಿಯ ರೋದನದಲ್ಲಿ ನನ್ನ ಮನಸ್ಸು ಕರಗುತ್ತಾ ಬಂತು. ಅವಳ ದುಃಖ ಧ್ವನಿಯಲ್ಲಿಯೂ ಅವಳ ದುಃಖಾಶ್ರುಗಳಲ್ಲಿಯೂ ಅವಳ ನಿಷ್ಕಾಪಟ್ಯವೂ, ಅವಳ ಸ್ಥೂಲಬುದ್ಧಿಯೂ, ಅವಳ ವಾತ್ಸಲ್ಯವೂ ಸ್ಫುಟವಾದುವು. "ಅಪ್ಪಾ!" ತಲೆಯನ್ನು ಚಚ್ಚಿಕೊಳ್ಳುತ್ತಾ "ಅಪ್ಪಾ! ನನ್ನ ಸರ್ವಸ್ವಕ್ಕೆ ಯಾರೋ ಕೈಹಾಕಿದರು. ಹೊಟ್ಟೆಕಟ್ಟಿ ಕೂಡಿಸಿದ ಮೂರುಕಾಸುಗಳನ್ನು ನಿನಗೆ ಕೊಡಬೇಕೆಂದಿದ್ದೆನು. ಒಂದು ಕಾಸು ಕೂಡಾ ಉಳಿಯಲಿಲ್ಲ. ನಗಗಳ ಚಿಂತೆಯನ್ನು ನಾನು ಕಟ್ಟಿಕೊಳ್ಳಲಿಲ್ಲ. ಆ ಆನೆಜಮೆಸರ ಹೋಯಿತಲ್ಲ! ಇನ್ನು ನಿನ್ನ ಚಿಕ್ಕತಂದೆಯವರನ್ನು ನೋಡುವೆನೆಂಬ ಆಸೆಯು ಇಂದಿಗೆ ಆಯಿತು. ಎಲ್ಲವಾದರೂ ಹೋಗಬಹುದಿತ್ತು. ಈ ನಗವು ಉಳಿಯಬಹುದಿತ್ತು. ಬೆಳಗ್ಗೆ ನಾನು ಯಾರ ಮೋರೆಯನ್ನು ಕಂಡೆನೋ?" ಎಂದು ತಡವೆತಡವೆಗೆ ಮಕ್ಕಳಂತೆ ಹಂಬಲಿಸಿ ಅಳುತ್ತಿದ್ದಳು.

ಅವಳು ಅಳುವುದನ್ನು ನೋಡಿ ನನ್ನ ಕಣ್ಣುಗಳಲ್ಲಿಯೂ ಒಂದೆರಡು ತಟುಕು ನೀರು ಒಸರಿತು. ಮುಂದೆ ನನಗೆ ಸಿಕ್ಕುವ ಗಂಟನ್ನು ಯಾರೋ ಎತ್ತಿದರೆಂದು, ಒಂದು ನಿಮಿಷದ ಮೇಲೆ, "ನನ್ನ ಒಡವೆಗಳನ್ನು ಯಾರು ತೆಗೆದಿರಬಹುದು? ದೋಣಿಯಾಳು ತೆಗೆದಿರಲಾರನು; ಅವನು ನನ್ನ ಹತ್ತಿರವೇ ಮಲಗಿದ್ದನು. ಅಯ್ಯೋ! ನನ್ನ ಜಪಸರವು ಹೋಯಿತಲ್ಲ! ಅವರ ಮುಖವನ್ನು ಈ ಜನ್ಮದಲ್ಲಿ ಇನ್ನೊಂದು ಸಲ ನೋಡುವೆನೆಂಬ ಆಸೆಯು ತೀರಿತಲ್ಲ!" ಎಂದು ಪುನಃ ಪ್ರಲಾಪಿಸಿದಳು. ಸ್ವಲ್ಪ ಹೊತ್ತಿನ ಮೇಲೆ ತಾನೇ ಸಮಾಧಾನವನ್ನು ಹೊಂದಿ "ಅಪ್ಪಾ! ನೀನಾದರೂ ಪ್ರಯತ್ನಮಾಡು; ನೀನು ಸೊಂಟ ಕಟ್ಟಿದರೆ ಅವುಗಳೆಲ್ಲವು ಸಿಕ್ಕದೆ

ಇರಲಾರವು. ಸಿಕ್ಕಿದರೆ ನನ್ನ ಬೊಟ್ಟಿನ ಕುಂಕುಮ ಉಳಿಸಿದ ಪುಣ್ಯ ನಿನಗೆ," ಎಂದು ಹೇಳಿದಳು. ಕಳವನ್ನು ಕುರಿತು ಪೊಲೀಸನವರಿಗೆ ವರ್ತಮಾನ ಮುಟ್ಟಿಸಿದ್ದಾಯಿತು.

ನನಗೆ ಯಾರ ಮೇಲೆಯೂ ಸಂಶಯುವಿದ್ದಿಲ್ಲ; ಸಂಶಯುವಿದ್ದರೂ ನನ್ನ ಸಂಶಯುವು ಫಲಿಸದಿದ್ದರೆ ವಿನಾಕಾರಣವಾಗಿ ವಿರೋಧ; ವಿರೋಧವಾದರೂ ಅವಚಿಯು ನನ್ನನ್ನು ಇನ್ನೂ ಹೆಚ್ಚಾಗಿ ಪ್ರೀತಿಸಳು. ಆದರೆ ಕಳ್ಳನನ್ನು ಹುಡುಕುವುದು ಹೇಗೆ? ಅನೇಕರಾದರೊ, ಅರಿವೆ ವಾಸನೆಯಿಂದ ಹೆಜ್ಜೆ ಕುರುಹುಗಳಿಂದ, ಕೆಮ್ಮಿನ ಸ್ವರದಿಂದ. ಎಂಜಲ ರುಚಿಯಿಂದ ಪಾತಾಳದಲ್ಲಿ ಅಡಗಿದ್ದ ಕಳ್ಳನನ್ನು ಎತ್ತಿ ತಂದಿರುವರಂತೆ. ಪಂಚೇಂದ್ರಿಯಗಳ ಇಂತಹ ಗುಣವಿಶೇಷವು ನನ್ನಲ್ಲಿಲ್ಲ. ಆದರೂ ಸಾಧಿಸಬೇಕೆಂದು ದೃಢಮಾಡಿದೆನು. ಮೊದಲು ಹೆಜ್ಜೆಗಳ ಗುರುತುಂಗಳನ್ನು ಹಿಡಿದು ಹುಡುಕಿದೆನು. ಜಗುಲಿಯ ಮೇಲೆ ಕೆಲವು ಕುರುಹುಗಳಿದ್ದವು; ಅಂಗಳಕ್ಕೆ ಇಳಿಯುತ್ತಲೇ ಆ ಗುರುತುಗಳು ಒಂದನ್ನೊಂದು ಅಳಿಸಿಕೊಂಡು ಹೋದುವು. ಮನೆಯ ಕೊಟ್ಟಡಿಯಿಂದ ಹಿತ್ತಿಲಿನವರೆಗೆ ಎಲ್ಲವನ್ನೂ ಹುಡುಕಿದೆನು. ಹಿಂತಿರುಗಿ ಬರುತ್ತಿದ್ದಾಗ ಒಂದು ನಸೆಡಬ್ಬಿಯ ಬಿರುಡೆ ಹಾದಿಯಲ್ಲಿ ತೋರಿತು. ಕಳ್ಳ ಸಿಕ್ಕಿದನೆಂದು ಭಾವಿಸಿದೆನು. ಮನಸ್ಸಿನಲ್ಲಿ ಔತ್ಸುಕ್ಯವು ಕುದಿದು ಉಕ್ಕಿಬಂತು. ಅವಚಿಗೆ ತಿಳಿಸಲಿಕ್ಕೆ ಬೇಗನೆ ಓಡಿದೆನು. ಓಡುತ್ತಿದ್ದಾಗ ನನ್ನ ಉಡಿಯಿಂದ ಏನೋ ಕೆಳಗೆ ಬಿತ್ತು. ಸ್ವಲ್ಪ ಅಲ್ಲಿಯೆ ತಡೆದೆನು. ಬಿದ್ದ ಪದಾರ್ಥವನ್ನು ಕೈಯಲ್ಲಿ ಹಿಡಿದು ನೋಡಿದೆನು. ಒಳಗೆಲ್ಲ ಬರಿದಾಗಿತ್ತು. ಬಿರುಡೆ ಜಾರಿದುದರಿಂದ ನಸೆಯೆಲ್ಲ ಸುರಿದುಹೋಗಿ ಬರಿದಾದ ನನ್ನ ನಸೆಡಬ್ಬಿ. ನನ್ನ ಕೈಯಲ್ಲಿದ್ದ ಬಿರುಡೆಯುನ್ನು ಅದಕ್ಕೆ ಜೋಡಿಸಿದೆನು; ಸರಿಯಾಗಿತ್ತು. ಒಂದು ತಡವೆಗೆ ನನ್ನ ಉತ್ಸಾಹದ ಮೇಲೆ ತಣ್ಣೀರು ಎರಚಿದಂತಾಯಿತು. ಒಂದು ತಡವೆಗೆ ಕಳ್ಳನು ಸಿಕ್ಕುವನೆಂಬ ನಂಬಿಕೆಯು ಮನಸ್ಸಿನಿಂದ ಕಿತ್ತುಹೋಯಿತು.

ಪ್ರಾತಃಕಾಲದಲ್ಲಿ ನಾನು ಮನೆಯಿಂದ ಹೊರಟೆನು. ಎಷ್ಟೋ ಸ್ಥಳಗಳಲ್ಲಿ ಮಾತಸಾಡುತ್ತಾ ಕುಳಿತೆನು: ಒಂದೆರಡು ಮನೆಗಳಲ್ಲಿ 'ಕಾಫಿ' ಕುಡಿದಾಯಿತು. ಮಧ್ಯಾಹ್ನಕ್ಕೆ ಮನೆಗೆ ಹಿಂತಿರುಗಿದೆನು. ಹಾದಿಯಲ್ಲಿ ಒಬ್ಬ ಹೆಂಗಸನ್ನು ನೋಡಿದೆನು; ನೋಡುತ್ತಲೇ ಹೋದ ಒಡವೆ ಗಂಟು ಸ್ಮರಣೆಗೆ ಬಂತು. ಒಡವೆ ಗಂಟಿನಲ್ಲಿ ಚಿನ್ನದಿಂದ ಬಿಗಿದ ಆನೆಜಮೆ ಇತ್ತು; ಈ ಸ್ತ್ರೀಯ ಮಸ್ತಕದಲ್ಲಿ ಅಷ್ಟೇ ಬಿರುಸಾದ ಕೇಶಪಾಶಗಳು ಜಡೆ ಕಟ್ಟಿದ್ದುವು. ನನ್ನ ದೃಷ್ಟಿಯು ಅವಳ ಕೂದಲುಗಳಲ್ಲಿ ಸಿಕ್ಕಿಕೊಳ್ಳುತ್ತಲೇ ಅವಳು ತನ್ನ ಎಡಗೈಯಿಂದ ತುರುಬನ್ನು ಸವರಿದಳು. ನಾನು ನನ್ನಲ್ಲಿಯೇ ನಾಚಿಕೊಂಡು ಮುಂದರಿಸಿದೆನು. ಸ್ವಲ್ಪದೂರಕ್ಕೆ ಹೋದ ಮೇಲೆ ನಾನು ಮುಖ ತಿರುಗಿಸಿ ನೋಡಿದರೂ ಅವಳ ತುರುಬು ಚೆನ್ನಾಗಿ ನೋಡಲಿಕ್ಕೆ ಸಿಕ್ಕಲಿಲ್ಲ. ಅವಳು ನನ್ನಂತೆಯೇ ಮುಖ ತಿರುಗಿಸಿ ಯಾವುದನ್ನೋ ನೋಡುತ್ತಿದ್ದಳು. ನಾನು ಮನೆಯುನ್ನು ಸೇರಿದೆನು. ಆದರೆ ಅವಚಿಯ ಇದಿರು ಹೋಗಲಿಕ್ಕೆ ನನಗೆ ಮೋರೆ ಇಲ್ಲ. ಅವಳಾದರೋ? ನಾನು ಕೈಯಲ್ಲಿ ಕಳ್ಳನನ್ನು ಹಿಡಿದು ತಾರದೆ ಬಿಡೆನೆಂದು ದೃಢವಾಗಿ ನಂಬಿದ್ದಳು. ಕಳ್ಳನ ಶಿಕ್ಷೆಯ ಮೇಲೆ ಅವಳ ಮನಸ್ಸು ನಿಲ್ಲಲಿಲ್ಲ; ಅವಳ ಜೀವವು ಹೋದೊಡವೆಗಳ ಮೇಲಿತ್ತು. ನಾನು ಬರುತ್ತಲೆ ಗಂಟನ್ನು ಕುರಿತು ನನ್ನನ್ನು ಕೇಳಿದಳು. ನಾನು ಇಲ್ಲದ ವೇಳೆಯಲ್ಲಿ ಪೊಲೀಸನವನು ಬಂದು ಒಂದು ರೂಪಾಯಿಯುನ್ನು ಇಸುಕೊಂಡು ಹೋದನೆಂದು ಅವಳಿಂದ ತಿಳಿದೆನು. ನಾನು ಹಗಲು ಇರುಳು ಹುಡುಕುವುದರಲ್ಲಿಯೇ ಇದ್ದೆನೆಂದು ಹೇಳಿದೆನು. ಹೀಗೆ ಸುಳ್ಳು ಹೇಳುತ್ತಾ ಮೂರು ದಿವಸಗಳನ್ನು ಕಳೆದೆನು. ಆ ದಿನ ಮೊದಲ್ಗೊಂಡು ಸುಳ್ಳೆಂದರೇನು ಸತ್ಯವೆಂದರೇನು ಎಂಬ ಭೇದವು ನನ್ನ ಮನಸ್ಸಿಗೇ ಬರುತ್ತಿದ್ದಿಲ್ಲ.

ಅನಿವಾರ್ಯವೆಂದು ತೋರುವ ಅಪಾಯಗಳನ್ನು ಪರಿಹರಿಸುವ ಉಪಾಯಗಳು ಮೂಢರ ಮನಸ್ಸಿನಲ್ಲಿಯೂ ಹೊಳೆಯುವುದುಂಟು. ಈ ಮಾತು ನನ್ನ ವಿಷಯದಲ್ಲಿ ಸಿದ್ಧವಾಗಿ ದೃಷ್ಟಾಂತಕ್ಕೆ ಬಂತು. ಆನೆ ಜಮೆಸರವನ್ನು ಹೇಗೂ ಶೋಧಿಸದಿದ್ದರೆ ಚಿಕ್ಕತಾಯಿಯ ಮನಸ್ಸು ಎಂದೂ ಸ್ವಸ್ಥವಾಗಿರದು; ಅವಳು ತನ್ನ ಮನೆಮಾರನ್ನು ನನ್ನ ಹೆಸರಿಗೆ ಮಾಡುವಳು ಎಂಬುದೊಂದು ಆಶೆಯು ಇನ್ನೂ ಉಳಿಯದು. ನನ್ನ ಚಿಕ್ಕತಾಯಿಗೆ ದೇವರ ಮೇಲೆ ಭಕ್ತಿಯೂ, ಪೌರಾಣಿಕರ ಮೇಲೆ ಪ್ರೀತಿಯೂ ಅಧಿಕವಾದುದರಿಂದ, ಅವಳ ಸರ್ವಸ್ವವು ಅವಳ ಮರಣವನ್ನು ನಿರಂತರ ಎದುರ್ನೋಡುತ್ತಿರುವ ಪೌರಾಣಿಕರ ಹಸ್ತಗತವಾಗುವುದಲ್ಲದೆ ಅದರಲ್ಲಿ ಒಂದು ಕಾಸು ನನ್ನ ಪಾಲಿಗೆ ಬರುವುದರಲ್ಲಿ ಬಹಳ ಸಂದೇಹವಿತ್ತು. ಆದರೆ ನಗವನ್ನು ನಾನು ಹುಡುಕಿ ತಂದರೆ ಅವಳ ವಾತ್ಸಲ್ಯವನ್ನು ನನ್ನ ಕಡೆಗೆ ತಿರುಗಿಸಿ, ಅವಳಿಗೆ ನಾನೇ ಉತ್ತರಾಧಿಕಾರಿಯಾಗುವ ಹಾಗೆ ಮಾಡಿಸಿದರೆ ನನ್ನ ಅದೃಷ್ಟವು ಮುಂದೆ ಅಷ್ಟೊಂದು ಹಾಳಾಗದು. ಈ ಕಾರಣಗಳಿಂದ ಆಭರಣಗಳನ್ನು ಹೇಗಾದರೂ ಹುಡುಕಿ ತರುವುದಕ್ಕೆ ಮನಸ್ಸನ್ನು ನಿರ್ಧರಿಸಿದೆನು. ಆದರೆ ಆಭರಣಗಳೇನೋ ಅಕ್ಕಸಾಲಿಗನ ಅಗ್ಗಿಷ್ಟಿಕೆಯನ್ನು ಸೇರಿದುವು; ಅವುಗಳು ಇನ್ನು ಚಿಕ್ಕತಾಯಿಯ ಕಣ್ಣಿಗೆ ಬೀಳುವ ಹಾಗಿಲ್ಲ. ಅದು ಸಿಕ್ಕದಿದ್ದರೆ ಅದರಂತೆ ಇನ್ನೊಂದನ್ನು ಒದಗಿಸಿಕೊಳ್ಳುವುದು ಕಷ್ಟಸಾಧ್ಯವೇ? ಹೀಗೆ ಒದಗಿಸಿದ ನಗದಿಂದ ಮುದಿಕಣ್ಣುಗಳನ್ನು ಮೋಸಗೊಳಿಸುವುದು ದೊಡ್ಡದೇ? ಈ ದುರಾಲೋಚನೆಗಳು ನನ್ನ ಮನಸ್ಸಿನಲ್ಲಿ ಪುನಃ ಪುನಃ ತಿರುಗಿದುವು. ಮರುದಿನ ಪ್ರಾತಃಕಾಲ ಎದ್ದು, “ಅವಚೀ! ಅವಸರಪಟ್ಟರೆ ಕಾರ್ಯವು ಭಂಗವಾಗುವುದು. ಇನ್ನೊಂದು ವಾರದೊಳಗೆ ನಾನು ಕಳ್ಳನನ್ನು ಹಿಡಿಯದೆ ಬಿಡೆನು. ನನ್ನ ಮನಸ್ಸಿಗೆ ಕೆಲವು ಉಪಾಯಗಳು ನಿನ್ನೆ ರಾತ್ರಿ ಕಂಡು ಬಂದುವು. ಇಂದು ಕಳ್ಳನ ಹೆಜ್ಜೆಯಲ್ಲಿಯೇ ನಾನು ನಡೆಯುತ್ತಿದ್ದೇನೆ. ನಾನು ನಗವನ್ನು ತಾರದಿದ್ದರೆ ನನ್ನ ಹೆಸರು ರಾ......ಅಲ್ಲ” ಎಂದು ಹೇಳಿ ನನ್ನ ಉಪಾಯಗಳನ್ನು ಕಾರ್ಯಗಳಲ್ಲಿ ಸಿದ್ಧಪಡಿಸಲಿಕ್ಕೆ ಹೊರಟೆನು.

ಆನೆಜಮೆಯನ್ನು ಒದಗಿಸುವುದು ಕಷ್ಟಸಾಧ್ಯವೆಂದು ನಾನು ಎಣಿಸಲಿಲ್ಲ. ಎರಡು ದಿನಗಳ ಹಿಂದೆ ಸಂಜೆಯಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ ಅಂತಹ ಕೂದಲುಗಳು ಸ್ತ್ರೀ ಮಸ್ತಕದಲ್ಲಿ ನೋಡಿದುದು ಸ್ಮರಣೆಯಲ್ಲಿತ್ತು. ಅವುಗಳಲ್ಲಿ ಒಂದೆರಡು ಕೂದಲುಗಳು ಬೆಲೆಗೆ ಸಿಕ್ಕಿದರೂ ನನ್ನ ಕಾರ್ಯವು ನೆರವೇರುವುದು. ಸ್ತ್ರೀಯರಲ್ಲಿ ಕೆಲವರು ತಮ್ಮ ಪುರುಷರ ಜುಟ್ಟನ್ನು ಹಿಡಿದು, ತಮಗೆ ವಿಧೇಯರಾಗಿ ಅವರನ್ನು ಇರಿಸುವರಂತೆ; ನಾನು ಅವರಂತೆಯೇ ಪ್ರೀತಿಯನ್ನು ನಟಿಸಿದರೆ ಒಬ್ಬ ಹೆಂಗಸಿನ ಕೂದಲನ್ನಾದರೂ ಹಿಡಿಯಲಾರೆನೆ? ಅದಲ್ಲದೆ ನನಗೆ ಬೇಕಾದ ಕೂದಲುಗಳಿರುವ ಹೆಂಗಸು ಸಾಮಾನ್ಯೆಯಾಗಿರುವಳು; ರಾಜಣ್ಣನವರ ನೆರೆಮನೆಯಲ್ಲಿ ಕೆಲಸ ಮಾಡಿ ಕಾಲಕ್ಷೇಪ ಮಾಡುವಂತಹಳು ಕಾಸುಕೊಟ್ಟರೆ ಕೂದಲು ಕೊಡಲಾರಳೇ? ಹೀಗೆ ಮನಸ್ಸಿನಲ್ಲಿ ಯೋಚಿಸುತ್ತಾ ಹಾದಿ ನಡೆದುದರಿಂದ ಗೋವಿಂದರಾಯರ ಮನೆ ದೂರದಲ್ಲಿದ್ದುದನ್ನು ತಿಳಿಯಲೇ ಇಲ್ಲ. ಕೆಲವು ಹೆಜ್ಜೆ ನಡೆಯುತ್ತಲೇ ಮನೆಯು ಸಮೀಪಿಸಿತು; ಅಂಗಳದಲ್ಲಿ ಅವಳು ಏನೋ ಕೆಲಸ ಮಾಡುವುದನ್ನು ಮಾರ್ಗದ ಮೇಲೆ ನಿಂತು ನೋಡಿದೆನು. ಮನೆಯ ಯಜಮಾನರನ್ನು ನೋಡಲಿಕ್ಕೆ ಬಂದೆನೆಂಬ ನೆಪಮಾಡಿ ಮನೆಯನ್ನು ಹೊಕ್ಕೆನು. ಅಂಗಳದಲ್ಲಿ ಅವಳನ್ನು ನೋಡುತ್ತಲೇ ನನ್ನ ಮನಸ್ಸು ಸ್ವಲ್ಪ ಹಿಂಜರಿಯಿತು. ಆ ರಮಣಿಯು 30ಕ್ಕೆ ಮೀರಿರಲಿಲ್ಲ. ದೇಹಕಾಂತಿಯು ಕೃಷ್ಣವರ್ಣದಿಂದ ಮಂಜುಳವಾಗಿತ್ತು; ಆ ಸಂಕುಚಿತ ಚಕ್ಷುಗಳನ್ನು ಆವರಿಸಿದ ಭ್ರೂಯುಗ್ಮವು ಲಲಾಟ ಪ್ರದೇಶದಲ್ಲಿ ಕಲಭಕೇಶದಂತಿದ್ದ ಅವಳ ಅಲಕಾವಳಿಯನ್ನು ತಡವೆ ತಡವೆಗೆ ಚುಂಬಿಸುತ್ತಿತ್ತು. ತಾಂಬೂಲದಿಂದಾರಕ್ತವಾದ ದಂತಗಳು ಅಧರನಿರೋಧವನ್ನು ಅತಿಕ್ರಮಿಸಿ

ಮುಖದ ಮೇಲೆ ಅಲಂಕೃತವಾದ ಕೆಂಪು ಚಿಬ್ಬುಗಳನ್ನು ನೋಡುವಂತೆ ವಿರಾಜಿಸುತ್ತಿದ್ದವು. ಕಂಚುಕವು ಸ್ಕಂದಾಗ್ರದಲ್ಲಿಯೇ ಪೂರೈಸಿದುದರಿಂದ ಉಳಿದ ಹಸ್ತಭಾಗದಲ್ಲಿ ಗಾಜಿನ ಹಿಂಬಳೆಗಳಲ್ಲದೆ ಮತ್ತೊಂದಲಂಕಾರ ವಿರಲಿಲ್ಲ. ಜಗುಲಿಯ ಮೇಲೆ ಯಾರೂ ಇಲ್ಲದುದನ್ನು ನೋಡಿ, ಅವಳೊಡನೆ ಮಾತು ಹೇಗೆ ಎತ್ತುವುದು ಎಂದು ಒಂದು ನಿಮಿಷ ಯೋಚಿಸಿ ಅಲ್ಲಿಯೇ ತಡೆದೆನು. ಏನು ಮಾಡಿದರೂ ಹೃದಯವು ದಡದಡಿಸುವುದಲ್ಲದೆ ಮಾತು ಬಾರದು. ಕಡೆಗೆ ಪ್ರಯತ್ನಪೂರ್ವಕವಾಗಿ "ಮ್ ಮ್ ಮನೆ ಯಜಮಾನರಿರುವರೇ?" ಎಂದು ವಿಚಾರಿಸಿದೆನು, ಅಂದು ಮಾತನಾಡಿದುದು ಪೂರ್ಣ ಸ್ಮರಣೆಯಲ್ಲಿಲ್ಲ. ಆದರೆ ಅವಳು ನನ್ನ ಮಾತಿಗೆ ಪ್ರತ್ಯುತ್ತರ ಕೊಡಲಿಲ್ಲ. ಕಸಗುಡಿಸುವ ಸಪ್ಪುಳದಲ್ಲಿ ನನ್ನ ಮಾತು ಅವಳಿಗೆ ಕೇಳಿಸಲಿಲ್ಲವೆಂದು ನಾನು ಪುನಃ ವಿಚಾರಿಸಿದೆನು. ಅದಕ್ಕೆ ಅವಳು ಇಲ್ಲವೆಂದು ಉತ್ತರ ಕೊಟ್ಟಳು. ನಾನು ಧೈರ್ಯಗೊಂಡೆನು. ಆ ಮಾತು ನನಗೆ ಕೇಳಿಸಲಿಲ್ಲವೆಂದು ಹೇಳಿ ಅವಳ ಬಳಿಗೆ ಹೋದೆನು. ಹತ್ತಿರ ಬರುತ್ತಲೇ ನನ್ನ ಮೂಗಿನಲ್ಲಿ ವಿಜಾತೀಯವಾದ ಗಾಳಿಯು ಬೀಸಿದಂತಾಯಿತು. "ಯಜಮಾನರು ಮನೆಯಲ್ಲಿ ಇರುವರೇ?" ಎಂದೂ ಮತ್ತೆ ಕೇಳಿದೆನು. "ಇಲ್ಲ; ಅವರು ಬೆಳಗ್ಗೆ ಎದ್ದು ಹೋಗಿರುವರು" ಎಂದಳು. ಆ ಬಳಿಕ ಅವಳು ಸುಮ್ಮನಾದುದನ್ನು ನೋಡಿ, ನಾನು ಮನಸ್ಸಿನಲ್ಲಿಯೇ ಏನೋ ಹೇಳಿ ಹಿಂತಿರುಗಿದೆನು. ಆಗಲೇ ಒಬ್ಬ ಹೆಂಗಸು ಅಂಗಳದಿಂದ ಜಗುಲಿಯನ್ನು ಹತ್ತಿದಳು. ಅವಳು ಯಾರೆಂದು ತಿಳಿಕೊಳ್ಳುವ ಶ್ರಮವನ್ನು ತೆಗೆದುಕೊಳ್ಳದೆ, ನನ್ನ ಕೃತ್ಯಕ್ಕೆ ನಾನೇ ಹೆದರಿ ಬೀದಿಗೆ ಇಳಿದೆನು. ನನ್ನ ಸತ್ಕಾರ್ಯದ ಪ್ರಸ್ತಾವನೆಯು ಇಲ್ಲಿ ಮುಗಿದುದು.

ಕಾರ್ಯಸಾಧನೆಯಲ್ಲಿ ವಿಘ್ನಗಳು ಪ್ರತಿಭಟಿಸಿದರೂ ಬುದ್ಧಿವಂತರು ಸ್ಥಿರಪ್ರಯತ್ನರಾಗಿ ಅವುಗಳನ್ನು ಕೊನೆಗಾಣಿಸಬೇಕೆಂಬುದೊಂದು ಹಿರಿಯರ ಮಾತು ಇರುವುದು. ಇದಕ್ಕನುಸಾರವಾಗಿ ನಡೆಯಬೇಕೆಂದು ನಾನು ನಿಶ್ಚಯಿಸಿದೆನು. ಚಿಕ್ಕತಾಯಿಯನ್ನು ಮೋಸಗೊಳಿಸಲಿಕ್ಕೆ ಈ ಸ್ತ್ರೀಯ ಪರಿಚಯವು, ಅದೂ ಸಾಲ ದಿದ್ದರೆ ಅವಳೊಡನೆ ಅನೃತ ಪ್ರಣಯವು ಅವಶ್ಯವೆಂದು ನನ್ನ ಮನಸ್ಸಿಗೆ ಖಚಿತವಾಯಿತು. ಕಳವಾದ ಆನೆ ಜಮೆಸರದಂತೆ ಮತ್ತೊಂದನ್ನು ಇವಳ ಕೂದಲುಗಳಿಂದಲ್ಲದೆ ಇನ್ನು ಯಾವ ಸಾಮಗ್ರಿಯಿಂದಲೂ ಒದಗಿಸ ಲಿಕ್ಕೂ ಸಾಧ್ಯವಿಲ್ಲವೆಂದು ನನ್ನ ಮನಸ್ಸಿಗೆ ಬಲವಾಗಿ ಕಂಡುಬಂತು. ಆದರೆ ನವೀನ ಈ ಸ್ತ್ರೀಯು ತನ್ನ ತಲೆಯನ್ನು ನನ್ನ ಕೈಯಲ್ಲಿ ಕೊಡುವುದು ಬಹಳ ಸಂದೇಹಾಸ್ಪದವಾಗಿತ್ತು. ಏಕೆಂದರೆ, ಅವಳ ತಲೆ ಮಾತ್ರವಲ್ಲ, ಸಂಪೂರ್ಣ ದೇಹವು ಬೇರೆಯವರ ವಶವಾಗಿರುವ ಸಂಗತಿಯಲ್ಲಿ ಅಂತಹ ಕೇಶಸಾಧನೆಯಲ್ಲಿ ನನ್ನ ಕೂದಲು ಮಾತ್ರವಲ್ಲ, ತಲೆ ಹೋದೀತೆಂಬ ಹೆದರಿಕೆಯು ನನಗಿತ್ತು. ಅದಲ್ಲದೆ ಕೋಳಿಗೆ ತನ್ನ ಚೂಡದ ಮೇಲೆ ಎಷ್ಟು ಪ್ರೇಮವೋ ಅದಕ್ಕಿಂತಲೂ ದಶಾಂಶವಾಗಿ ಅವಳಿಗೆ ತನ್ನ ವೇಣಿಯ ಮೇಲೆ ಪ್ರೇಮವಿತ್ತು. ಆದರೆ ನ್ಯಾಯಾಧೀಶನ ಸತ್ಯಸಂಧತೆಯನ್ನೂ ನಾರಿಯರ ಸತೀತ್ವವನ್ನೂ ಸೂರೆಗೊಳ್ಳುವ ಹಣವು ಒಬ್ಬ ಕ್ಷುದ್ರ ಸ್ತ್ರೀಯ ಒಂದೆರಡು ಕೂದಲುಗಳನ್ನು ಕೊಂಡುಕೊಳ್ಳಲಾರದೇ? ಒಂದು ಹಿಡಿ ಅಕ್ಕಿಗೋಸುಗ ದಿನವೆಲ್ಲ ಕಷ್ಟ ಮಾಡುವವಳು ಒಂದೆರಡು ರೂಪಾಯಿಗೆ ಕೆಲವು ಕೂದಲುಗಳನ್ನು ಕೊಡಲಾರಳೇ? ಈ ವಿಧವಾದ ತರ್ಕವಿತರ್ಕಗಳನ್ನು ನನ್ನಲ್ಲಿಯೇ ಮಥಿಸುತ್ತಾ ನಾನು ಪುನಃ ಮನೆಯನ್ನು ಸೇರಿದೆನು.

ಮೂರು ದಿವಸಗಳು ನಿಲ್ಲದೆ ಕಳೆದುವು. ನಾಲ್ಕನೆಯ ದಿನ ರಾಯರ ಮನೆಗೆ ಹೋದೆನು. ಹೋದವನು ಕಾಲು ತೊಳೆಯುವುದಕ್ಕೆ ನೆಟ್ಟನೆ ಬಚ್ಚಲಿಗೆ ಹೋದೆನು. ಕೂದಲಿನವಳು ಒಲೆಗೆ ಕಟ್ಟಿಗೆಯನ್ನೊಟ್ಟಿ, ಬೆಂಕಿ ಯನ್ನುರಿಸುತ್ತಿದ್ದಳು. ನನ್ನನ್ನು ಮೆಲ್ಲಗೆ ನೋಡುತ್ತಲೇ—"ಹಾಳು ಕಟ್ಟಿಗೆ! ಊದಿ ಊದಿ ಕಣ್ಣು ಹೋಯಿತು.

ಇನ್ನೂ ಉರಿಯುವುದಿಲ್ಲ." ಎಂದು ತನ್ನಲ್ಲಿಯೇ ಗುಣಗುಟ್ಟುತ್ತಿದ್ದಳು. "ಕಾಲು ತೊಳೆಯುವುದಕ್ಕೆ ಒಂದು ತಪ್ಪಲೆ ನೀರು ಈಚೆಗೆ......" ಎಂದು ದೃಢಮನಸ್ಕನಾಗಿ ಕೇಳಿದೆನು. ಅವಳು ಎದ್ದು ನಿಂತಳು. ಆದರೆ ನಿಂತವಳು ಕೈಯಲ್ಲಿ ತಪ್ಪಲೆಯನ್ನು ಕೊಳ್ಳದೆ, ಬೆಳ್ಳಿ ಬಿಗಿದ ನಸೆಡಬ್ಬಿಯನ್ನು ಕುಪ್ಪಸದಿಂದೀಚೆಗೆ ತೆಗೆದಳು. ನಸೆ ಉಂಟೋ ಇಲ್ಲವೋ ಎಂದು ನೋಡುವಂತೆ ಡಬ್ಬಿಯನ್ನು ತನ್ನ ಕಣ್ಣೆದಿರಿಗೆ (ಆದುದರಿಂದ ನನ್ನ ಕಣ್ಣೆದಿರಿಗೂ) ಹಿಡಿದು ಅಲ್ಲಿಯೇ ತಡೆದಳು. ನಾನೇನೋ ಧೈರ್ಯಗೊಂಡು, ಕಾಲು ತೊಳೆಯುವುದನ್ನು ಮರೆತು— "ಚೆಲೋ ನಸೆಡಬ್ಬಿ! ನಸೆ ಇಲ್ಲವೆ?" ಎಂದು ಕೇಳಿದೆನು. ಅವಳು ಡಬ್ಬಿಯನ್ನು ನನ್ನ ನೀಡಿದ ಕೈಗೆ ಕೊಡುವುದಕ್ಕೆ ಲಜ್ಜಿತಳಾಗಿ ನನ್ನ ಕಣ್ಣು ಮುಂದಿಟ್ಟು, ತಪ್ಪಲೆಯನ್ನು ಹಿಡಿದು, ಗುಡಾಣದಲ್ಲಿ ಮುಳುಗಿಸುತ್ತಿದ್ದಳು. ಆಗ ಏನು ಕಾರಣವೋ ನನಗೆ ಮುಗುಳು ನಗೆ ಬಂತು; ನಾನು ನಗುವುದನ್ನು ಅವಳು ಓರೆ ನೋಟದಿಂದ ನೋಡದೆ ಹೋಗಲಿಲ್ಲ. ತಪ್ಪಲೆಯನ್ನು ನೀರು ತುಂಬಿ ನನ್ನ ಕೈಗೆ ಕೊಡುತ್ತಿದ್ದಾಗ ಅವಳೂ ನಗಾಡುತ್ತಿದ್ದಳು. ಆ ಸಮಯದಲ್ಲಿ ಯಾರೋ ಬರುವ ಸಪ್ಪುಳಾದುದರಿಂದ ನಾನು ಈಚೆಗೆ ಸರಿದೆನು. ಬಂದವಳು ನಮ್ಮಿಬ್ಬರನ್ನು ದೃಷ್ಟಿಸಿ, ಮನೆಯೊಳಗೆ ಸೇರಿದಳು. ನಾನು ದುರದೃಷ್ಟನೆಂದೆಣಿಸಿ ಅಲ್ಲಿಂದ ಕಾಲು ತೆಗೆದೆನು.

ಈ ವಿಧವಾಗಿ ಎರಡು ಚಿಕುರಗಳಿಗೋಸುಗ ನಾನು ನಿದ್ರಾಹಾರಾದಿಗಳನ್ನು ಬಿಟ್ಟು ಒದ್ದಾಡಿದೆನು. ನಾನು ಪಟ್ಟ ಕಷ್ಟಗಳೆಲ್ಲವನ್ನು ಕೇಳಿದರೆ (ಮದುವೆಯಾಗಿದ್ದರೆ) ನನ್ನ ಹೆಂಡತಿಯು ಜೀವದಿಂದುಳಿಯುತ್ತಿದ್ದಿಲ್ಲ. ಹಗಲೆನ್ನದೆ ಇರುಳೆನ್ನದೆ ಕೇರಿಯಿಂದ ಕೇರಿಗೆ ಓಡುತ್ತಾ, ನಿರ್ಜನ ಪ್ರದೇಶಗಳಲ್ಲಿ ಅಲೆಯುತ್ತಾ, ಅನೇಕ ಗವಿಗಳಲ್ಲಿ ಅಡಗುತ್ತಾ, ಕಷ್ಟಪಟ್ಟರೂ ಹಿಡಿದ ಕಾರ್ಯವನ್ನು ಬಿಡಲಿಲ್ಲ. ಕೂದಲುಗಳು ಸಿಕ್ಕಿದುವು; ಅವುಗಳನ್ನು ಚಿನ್ನದಿಂದ ಬಿಗಿದು ನಗವು ಸಿದ್ಧವಾಯಿತು. ಚಿಕ್ಕತಾಯಿಯ ಆನೆಜಮೆಸರಕ್ಕೂ ಈ ನಗಕ್ಕೂ ಯಾವ ವ್ಯತ್ಯಾಸವೂ ಇದ್ದಂತೆ ನನಗೆ ತೋರಲಿಲ್ಲ. ಇನ್ನು ಮುದಿ ಕಣ್ಣುಗಳಿಗೆ ಕಂಡುಹಿಡಿಯಲಿಕ್ಕೆ ಸಾಧ್ಯವೇ? ಚಿಕ್ಕತಾಯಿಯ ಸರ್ವಸ್ವವೂ ನನ್ನ ಕೈಗೆ ಸಿಕ್ಕಿತು, ಇನ್ನು ಮುಂದೆ ನನ್ನ ಸೌಭಾಗ್ಯಕ್ಕೆ ಪಾರಾವಾರವಿಲ್ಲ; ಇನ್ನು ರಾಜಣ್ಣನವರ ಅಳಿಯನಾಗುವುದರಲ್ಲಿ ನನಗೇನೂ ಸಂಶಯವಿರಲಿಲ್ಲ. ಅಳಿಯನಾದರೆ ಮುಂದೆ ಅವರ ಹಣವು ನನ್ನ ಪಾಲಿಗೇ ಬರುವುದು. (ಅವರಿಗೆ ಒಂದು ಹೆಣ್ಣು ಮಗುವಲ್ಲದೆ ಬೇರೆ ಮಕ್ಕಳಿರಲಿಲ್ಲ). ಈ ವಿಧವಾಗಿ ಅಂತರಿಕ್ಷ ಗೋಪುರಗಳನ್ನು ಮನಸ್ಸಿನಲ್ಲಿಯೇ ಕಟ್ಟುತ್ತ ನಾನು ಮನೆಗೆ ಒಂದು ದಿನ ಸಾಯಂಕಾಲ ಹಿಂತಿರುಗುತ್ತಿದ್ದೆನು. ಎಡಬಲದಲ್ಲಿ ಹೋಗುವವರನ್ನು ನಾನು ಲಕ್ಷಿಸಲಿಲ್ಲ. ಒಡನೆ ನನ್ನ ಹಿಂದೆ ಯಾರೋ ಓಡಿಬರುವ ಸಪ್ಪುಳವನ್ನು ಕೇಳಿದೆನು. ಮನೆಯನ್ನು ಮುಟ್ಟಲಿಕ್ಕೆ ಒಂದೆರಡು ಹೆಜ್ಜೆ ದೂರವಿತ್ತು. ಸಪ್ಪುಳು ನನ್ನ ಬೆನ್ನು ಹಿಂದೆಯೇ ಕೇಳಿಸಿತು. ಒಡನೆ ನನ್ನ ಹೆಗಲಿನ ಮೇಲೆ ಯಾರೋ ಕೈಯಿಟ್ಟರು. ಕತ್ತಲು ಬಲವಾದುದರಿಂದ ಯಾರೆಂದು ಚೆನ್ನಾಗಿ ತಿಳಿಯಲಿಲ್ಲ.

ವ್ಯಕ್ತಿ:—"ರಾಯರೇ! ನಿಮ್ಮನ್ನು ಕರೆತರಲಿಕ್ಕೆ ನನ್ನನ್ನು ಕಳುಹಿಸಿರುವರು; ಒಂದು ಸಲ ಪೊಲೀಸ್ ಸ್ಟೇಶನ್ನಿಗೆ ದಯಮಾಡಬೇಕೆಂದು ಅಪ್ಪಣೆಯಾಗಿದೆ."

"ಇದೇನು ಯಾರು ಅಪ್ಪಣೆ ಕೊಟ್ಟಿರುವರು?" ಎಂದು ನಾನು ತುಟಿಯಲ್ಲಾಡಿಸಿದೆನು.

ಒಡನೆ ಜನರೆಲ್ಲರು ಗುಂಪುಗುಂಪಾಗಿ ಬರಲಾರಂಭಿಸಿದರು: ಒಬ್ಬಿಬ್ಬರು "ಏತಕ್ಕೆ ಕೈದು ಮಾಡಿದರು? ಏತಕ್ಕೆ ಕೈದು ಮಾಡಿದರು?" ಎಂದು ಪರಸ್ಪರ ವಿಚಾರಿಸುತ್ತಿದ್ದರು. ಆ ಮಾತುಗಳನ್ನು ಕೇಳುತ್ತಲೇ ತಲೆಯು

ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಕಣ್ಣುಗಳಲ್ಲಿ ನಕ್ಷತ್ರಗಳು ಮಿಣುಕಿದವು; ವಸ್ತುಗಳೆಲ್ಲವೂ ನನ್ನ ಸುತ್ತಲೂ ತಿರುಗುವಂತೆ ಕಂಡುಬಂದವು; ಜನರ ಮಾತುಗಳು ದೂರದಿಂದ ಕೇಳಿಸುವಂತಾದುವು.

ವ್ಯಕ್ತಿ—"ಇವರ ಚಿಕ್ಕತಾಯಿಯ ಕೆಲವು ನಗಗಳು ಕಳವಾಗಿದ್ದುವು. ಅದಕ್ಕೋಸುಗ ಇವರನ್ನು ಸ್ಟೇಶನ್ನಿಗೆ ತರಬೇಕೆಂದು ಖಾವಂದರು ಅಪ್ಪಣೆ ಕೊಟ್ಟಿದ್ದರು. ಮೂರು ದಿವಸಗಳಿಂದ ಇವರನ್ನು ಹುಡುಕಿದರೂ ಇವರು ಸಿಕ್ಕಲಿಲ್ಲ. ಅವರಲ್ಲಿ ಆಗುವುದೇನೂ ಇಲ್ಲ."

"ಅದು ಹೇ—ಹೇಗೆ ನಾ—ನಾನು ಕಳುವು ಮಾಡಿದೆನೇ?"

ವ್ಯಕ್ತಿ—"ನಿಮ್ಮ ಚಿಕ್ಕತಾಯಿ ಎಲ್ಲವನ್ನೂ ಬಲ್ಲಳು. ಅದನ್ನೆಲ್ಲ ಮತ್ತೆ ನೋಡುವ! ಈಗ ಒಂದು ಸಲ ಸ್ಟೇಶನ್ನಿಗೆ ನಡೆಯುವ!"

ನಾನು ಚಿಕ್ಕತಾಯಿಯನ್ನು ನೋಡದೆ ಬರಲಾರೆನೆಂದೆನು. ಕಡೆಗೆ ಪೊಲೀಸನವನು ಒಪ್ಪಿ, ನನ್ನ ಕೈ ಹಿಡಿದು ನನ್ನೊಡನೆ ಮನೆಗೆ ಬಂದನು.

ಮಾರ್ಗದ ಮೇಲೆ ಬರುತ್ತಿರುವಾಗ ನನಗೆ ಎಲ್ಲ ಸಂಗತಿಗಳು ಮನಸ್ಸಿನಲ್ಲಿ ಎದ್ದು ನಿಂತು ಸ್ಪಷ್ಟವಾಗಿ ತೋರಿದುವು. ಪೊಲೀಸನವರು ಮೊದಲಿನಿಂದ ನನ್ನನ್ನೇ ಗುರಿ ನೋಡುತ್ತಿದ್ದರೆಂತಲೂ, ನಾನು ಮೈಮರೆವಂತೆ ಅವರು ನಂಬ್ರುವನ್ನು ಸಡಿಲು ಬಿಟ್ಟರೆಂತಲೂ, ನನ್ನ ಕಳ್ಳಹೆಜ್ಜೆಗಳನ್ನು ಅವರು ಆಗಾಗ ಹೊಂಚಿ ನೋಡುತ್ತಿದ್ದರೆಂತಲೂ, ನನ್ನ ಮನಸ್ಸಿಗೆ ಖಚಿತವಾಯಿತು. ಅದಲ್ಲದೆ ನಾನು ಅನೇಕ ಅಕ್ಕಸಾಲಿಗರ ಅಂಗಡಿಗಳಲ್ಲಿ ಕುಳಿತಿರುವುದನ್ನೂ, ವಿಜನಸ್ಥಳಗಳಲ್ಲಿ ಒಂಟಿಗನಾಗಿ ಅಲೆಯುವುದನ್ನೂ, ಕ್ಷುದ್ರ ಸ್ತ್ರೀಯ ಗವಿಯಲ್ಲಿ ಆಗಾಗ ನುಸುಳುವುದನ್ನೂ ಇವರು ನೋಡಿದ್ದರೂ ಇರಬಹುದು. ಈ ವಿಷಯಗಳು ನನ್ನ ಮನಸ್ಸಿಗೆ ಪರಂಪರೆಯಾಗಿ ಸಾಲಿಡುತ್ತಲೇ ನನ್ನ ಕಳವಳವು ಭಯಂಕರವಾಯಿತು. ನನ್ನ ಚಿತೆಯನ್ನು ನಾನೇ ಸಿದ್ಧಪಡಿಸಿದಂತಾಯಿತು; ನಾನು ಅಗಿದ ಗುಣಿಯಲ್ಲಿ ನಾನೇ ಬೀಳುವುದಾಯಿತು. ಒಂದು ಕಡೆಯಲ್ಲಿ ಬಂಧನ ಶಿಕ್ಷೆ, ಇನ್ನೊಂದು ಕಡೆಯಲ್ಲಿ ದುಃಖಕರವಾದ ಕೃತಘ್ನತೆಯ ರೋಷ. ಇದನ್ನು ತಪ್ಪಿಸುವ ಹಾದಿ ಯಾವುದು? ಸತ್ಯವನ್ನು ಅಡಗಿಸಿದರೆ ಶಿಕ್ಷೆಯು ಎಷ್ಟು ವರ್ಷ ಎಂಬ ಪ್ರಶ್ನೆಯಲ್ಲದೆ ಮತ್ತೊಂದಿಲ್ಲ. ಸತ್ಯವನ್ನೊಪ್ಪಿದರೆ ಈ ಜನ್ಮದಲ್ಲಿ ಚಿಕ್ಕತಾಯಿಯನ್ನು ನೋಡುವುದು ಮುಗಿಯಿತು. ಆದುದರಿಂದ ಅಸತ್ಯದಿಂದ ಅಸತ್ಯವನ್ನು ದೃಢಪಡಿಸಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿದೆನು.

ಪೊಲೀಸನವರು ನನ್ನನ್ನು ಹಿಡಿದಿರುವರು ಎಂಬುದನ್ನು ಚಿಕ್ಕತಾಯಿಯು ಕೆಲವು ನಿಮಿಷಗಳ ಹಿಂದೆ ತಿಳಿದಿದ್ದಳು. ನಾವಿಬ್ಬರು ಒಳಗೆ ಬರುತ್ತಲೇ ಅವಳು ನನಗೋಸುಗ ಅಳುವುದನ್ನೂ, ಪೊಲೀಸನವರನ್ನು ಮಧುರ ಭಾಷೆಯಿಂದ ಶಪಿಸುವುದನ್ನೂ ನಾನು ಕೇಳಿದೆನು. ಒಡನೆ ಅವಳಿದ್ದಲ್ಲಿಗೆ ನಡೆದು, ಪೊಲೀಸನವನು ಬಂದ ಸಂಗತಿಯನ್ನು ತಿಳಿಸಿದೆನು; ವಿಳಂಬ ಮಾಡದೆ ನಗವನ್ನು ತಂದಿರುವೆನೆಂದು ಹೇಳಿ, ಅನೆಜಮೆಸರವನ್ನು ಅವಳ ಕೈಗೆ ಕೊಟ್ಟೆನು. ಅವಳು ಅದನ್ನು ಎಷ್ಟೋ ನೋಡಿದಳು! ನನ್ನನ್ನು ಎಷ್ಟೋ ಹೊಗಳಿದಳು! ಪೊಲೀಸನವರನ್ನು ಎಷ್ಟೋ ಬೈದಳು! ಪೊಲೀಸನವನು ನಗವನ್ನು ನೋಡಿ "ಅಮ್ಮಾ! ಆ ನಗವು ನಿಮ್ಮದೆಂದು ನೀವು ಹೇಳುವಿರೇ?" ಎಂದನು. "ನನ್ನ ನಗವನ್ನು ನಾನು ಕಂಡುಹಿಡಿಯಲಾರೆನೇ? ಇದು ಸಾವಿರ ನಗಗಳಲ್ಲಿದ್ದರೂ

ನಾನು ಇದನ್ನೇ ಗುರುತು ಹಿಡಿದೇನು" ಎಂದಳು. "ಇದು ನಿಮ್ಮದೆಂದು ನೀವು ಒಪ್ಪುತ್ತೀರೇ?" ಎಂದು ಪ್ರನಃ ಕೇಳಿದನು. ಈ ಮಾತುಗಳನ್ನು ಕೇಳಿ ನನ್ನ ಮನಸ್ಸಿಗೆ ಇನ್ನೂ ಸಂಶಯವೂ ಭಯವೂ ಉಂಟಾಯಿತು; ಏಕೆಂದರೆ ಈ ಮಾತುಗಳನ್ನೇ ನನ್ನ ಚಿಕ್ಕ ತಾಯಿ ಮತ್ತೂ ಒಪ್ಪಿದರೆ ನಾನೇ ಕಳ್ಳನೆಂದು ಸಾಧಿಸುವುದರಲ್ಲಿ ಪೊಲೀಸನವರಿಗೆ ಕಷ್ಟವೇನೂ ಇಲ್ಲ. ಆ ಮಾತುಗಳ ಬಲವನ್ನು ತಪ್ಪಿಸಲೋಸುಗ ನಾನು ಒಂದು ನುಡಿಯನ್ನಾಡಲಿಕ್ಕೆ ಬಾಯೆತ್ತಿದೆನು. ಆದರೆ ಅಷ್ಟರೊಳಗೆ ಯಾರೋ ಒಳಗೆ ಬಂದರು. ಬಂದವನು ಒಂದು ಕಾಗದವನ್ನು ಪೊಲೀಸನವನ ಕೈಗೆ ಕೊಟ್ಟನು. ಕಾಗದವು ಚಿಕ್ಕತಾಯಿಯ ವಿಳಾಸಕ್ಕೆ ಬರೆದಿತ್ತು. ಕೂಡಲೇ ಅವಳಿಯು ಅದನ್ನೋದುವುದಕ್ಕೆ ಹೇಳಿದಳು. ಅದರಲ್ಲಿ ಬರೆದುದನ್ನು ಪೊಲೀಸನವನು ಹೀಗೆ ಓದಿದನು.

''ನೀವು ಎರಡು ತಿಂಗಳ ಹಿಂದೆ ಇಲ್ಲಿ ಬಂದಾಗ, ಮಂದಿರದಲ್ಲಿ ನಡೆಯುವ ಪುರಾಣ ಶ್ರವಣಕಾಲದಲ್ಲಿ ನಿಮ್ಮ ನಗಗಳ ಗಂಟನ್ನು ಇಲ್ಲಿ ಮರೆತುಬಿಟ್ಟು ಹೋದಿರಿ. ನಿಮ್ಮ ಆನೆಜಮೆಸರವು ನಿಮ್ಮ ಜಪಕ್ಕೆ ನಿತ್ಯವೂ ಅವಶ್ಯವೆಂದು ಸ್ವತಃ ಗೊತ್ತಿದುದರಿಂದ, ಈ ಕಾಗದ ತರುವವನ ಕೈಯಲ್ಲಿ ಅದನ್ನು ಕಳುಹಿಸಿರುತ್ತೇನೆ. ತಮ್ಮ ಮಿಕ್ಕ ನಗಗಳು ದೇವ ಪ್ರತಿಮೆಯ ಅಲಂಕಾರಕ್ಕಾಗಿ ಇಲ್ಲಿ ಇಟ್ಟಿರುತ್ತೇವೆ. ಕೃಷ್ಣಾಷ್ಟಮಿಯ ಉತ್ಸವವೂ ಭಜನೆಯೂ ಈ ವರ್ಷ ವಿಶೇಷ ತರದ್ದಾಗಿರುವುದರಿಂದ ತಾವು ಬರಬೇಕಾಗಿ ಪೌರಾಣಿಕರು ಅಪೇಕ್ಷಿಸುತ್ತಾರೆ.''

ಈ ಕಾಗದವನ್ನು ಓದುತ್ತಲೇ ನನ್ನ ಮೈಯೆಲ್ಲಾ ತಣ್ಣಗಾಯಿತು; ಕಣ್ಣುಗಳಲ್ಲಿ ದೊಣ್ಣೆಯಿಂದ ಯಾರೋ ಬಡಿದಂತಾಯಿತು. ನಾನು ಏನು ಹೇಳಿದೆನೋ ಏನು ಮಾಡಿದೆನೋ ಈಗ ಸ್ಮರಿಸಲಾರೆನು.

ಆಮೇಲೆ ನಡೆದ ವಿಷಯವನ್ನು ಇಲ್ಲಿ ಹೇಳುವುದು ಅವಶ್ಯವಿಲ್ಲ. ನನಗೆ ಮನೆಗಿಂತಲೂ ಸೆರೆಯೆ ಲೇಸೆಂದು ಕಂಡುಬಂತು. ಇನ್ನು ಮಾಡುವುದೇನು? ಆದರೆ ಸಂಪೂರ್ಣ ವಿಷಯವನ್ನು ಹೇಳುವುದು ಒಳ್ಳೆಯದು. ಮರುದಿನ ಹೊಸಪೇಟೆ ರಾಜಣ್ಣನವರ ಪತ್ನಿಯು ಬಂದು, ನನ್ನ ಚಿಕ್ಕತಾಯಿಯೊಡನೆ ಈ ರೀತಿಯಲ್ಲಿ ಮಾತಾಡುವುದನ್ನು ನಾನು ಮರೆಯಲ್ಲಿದ್ದು ಕೇಳಿದೆನು—

''ನಿಮ್ಮ ಹುಡುಗನ ಜಾತಕವು ನಮ್ಮ ಸಕಲಾವತಿಯ ಜಾತಕಕ್ಕೆ ಕೂಡಿಬರುತ್ತಿತ್ತು; ಸಂಬಂಧವು ಒಳ್ಳೆಯದಾಗಿತ್ತು. ಆದರೆ ನಿಮ್ಮ ಹುಡುಗನು ಕೆಲವು ದಿನಗಳಿಂದ ಈಚೆಗೆ ಕೇರಿಕೇರಿಗಳಲ್ಲಿ ತಿರುಗುವುದನ್ನೂ, ಒಂದೆರಡು ಸಲ–ಮನೆಗಳನ್ನು ಸೇರಿದುದನ್ನೂ ನಮ್ಮ ಮನೆಯುವರು ನೋಡಿದರಂತೆ. ನಾನು ಹುಡುಗನೆಂದು ಸುಮ್ಮನಿದ್ದೆನು. ಆತನು ಹೆಚ್ಚು ಸಲ ನಮ್ಮ ನೆರಮನೆಯ ಸೋಮಿಯೊಡನೆ ಒಬ್ಬನೇ ಮಾತಾಡುವುದನ್ನೂ ರೂಪಾಯಿ ಕೈಯಲ್ಲಿ ಹಿಡಿದುದನ್ನೂ ನಾನು ಗೋವಿಂದರಾಯರ ಮನೆಗೆ ಬರುತ್ತ ಹೋಗುತ್ತಿದ್ದಾಗ ನೋಡಿದ್ದೇನೆ. ಈ ಕಾರಣದಿಂದ ನಮ್ಮ ಮನೆಯವರಿಗೆ ಸಂಬಂಧದ ಪ್ರಸ್ತಾಪವು ಈಗ ಕಿವಿಗೇ ಹೋಗುವುದಿಲ್ಲ.''

ಇದನ್ನು ಕೇಳುತ್ತಲೇ ನನ್ನ ಜೀವದಾಸೆ ಎಲ್ಲವೂ ಮುಗಿಯಿತು. ಏನು ಮಾಡುವುದು? ಈಗ ನಾನೇನು ಮಾಡಲಿ? ಸರ್ವಜನ ಪರಿಪೂರಿತವಾದ ಈ ಲೋಕಸಾಗರದಲ್ಲಿ ನಾನು ನನ್ನ ಜೀವನ ನೌಕವನ್ನು ಮುಂದೆ ಹೇಗೆ ನಡೆಯಿಸಲಿ? ನನ್ನ ಕಥೆಯನ್ನು ಓದುವ ಅಭಿಜ್ಞ ಪಾಠಕರಲ್ಲಿ ಯಾರೊಬ್ಬನಾದರೂ ಹೆಡ್ಡನಾದ ನಾನು ಮುಂದೆ ಏನು ಮಾಡಬೇಕೆಂದು ಹೇಳಲಾರ.

(ಸುವಾಸಿನಿ 1900)

ನನ್ನ ಚಿಕ್ಕ ತಂದೆ

ನನ್ನ ಚಿಕ್ಕತಾಯಿ ನಮ್ಮಿಬ್ಬರನ್ನು ತನ್ನ ಮನೆಯಲ್ಲಿ ಬಿಟ್ಟು ಈ ಲೋಕದಿಂದ ದೂರಳಾದಳು. ಅವಳು ಸ್ವರ್ಗಕ್ಕೆ ಹೋದಳೋ ನರಕಕ್ಕೆ ಬಿದ್ದಳೋ ನನ್ನಿಂದ ಹೇಳಲು ಸಾಧ್ಯವಿಲ್ಲ. ಸ್ವರ್ಗದ ಸೋಪಾನಗಳು ಸಾವಿರವಾದರೆ, ಅವನ್ನೆಲ್ಲಾ ಹತ್ತುವಷ್ಟು ದೇಹಶಕ್ತಿ ಅವಳಲ್ಲಿ ಇರಲಿಲ್ಲ. ನರಕದ ನವದ್ವಾರಗಳು ಇಕ್ಕಟ್ಟಾದರೆ ಅವುಗಳನ್ನು ದಾಟಿಹೋಗುವಷ್ಟು ದೇಹ ಕೃಶತ್ವವು ಅವಳಲ್ಲಿ ಇದ್ದಿಲ್ಲ. ಇಹದಲ್ಲಿ ಉಣ್ಣದೆ ಉಡದೆ ಕಾಸಿಗೆ ಕಾಸು ಕೂಡಿಸುವ ಪುಣ್ಯವಂತರು ಸ್ವರ್ಗವನ್ನು ಏರುವುದು ನಿಜವಾದರೆ, ಅವಳು ನರಕದಲ್ಲಿ ಬೀಳಲಿಲ್ಲ. ಸಂತಭಜನೆಯಲ್ಲಿ ದೇಹವನ್ನು ವಿನಿಯೋಗಿಸುವ 'ಮೊಂಡು ಭಕ್ತಿಯ' ವೃದ್ಧ ಪತಿವ್ರತೆಯರು ನರಕಕ್ಕೆ ಇಳಿಯುವುದು ಸತ್ಯವಾದರೆ, ಅವಳು ಸ್ವರ್ಗವನ್ನು ಸೇರಲಿಲ್ಲ. ಅವಳು ಎಲ್ಲಿ ಹೋದಳೆಂದು ಈಗ ವಿಚಾರಿಸುವುದು ಅವಶ್ಯವಿಲ್ಲ. ಒಂದು ದಿನ ನಾವೂ ನೀವೂ ಅದನ್ನು ಕಂಡು ಹಿಡಿಯದೆ ಇರಲಾರೆವು. ಹೇಗೂ ನನ್ನ ಚಿಕ್ಕತಾಯಿ ಮಾನವ ಶರೀರವನ್ನು ಬಿಟ್ಟುಹೋದಳು. ಹೋಗುವಾಗ ತನ್ನ ಮನೆಯನ್ನು ತನ್ನೊಡನೆ ಕೊಂಡು ಹೋಗಲು ಪ್ರಯತ್ನ ಮಾಡುವುದಕ್ಕೆ ಮರೆತುಬಿಟ್ಟಳು. ಅಂದಿನಿಂದ ಅವಳ ಮನೆ ಮಾತ್ರವೇ (ಅವಳ ಒಡವೆಯ ಗಂಟು ಯಥಾರ್ಥವಾಗಿ ನನಗೆ ಸಿಕ್ಕಲಿಲ್ಲ). ನನ್ನ ಪಾಲಿಗೆ ಬಂದ ಹಾಗಾಯಿತು. ಅಂದಿನಿಂದ ನಾವಿಬ್ಬರು—ನಾನು ಮತ್ತು ನನ್ನವಳು—ಆ ಮನೆಯಲ್ಲಿ, ನನ್ನ ಚಿಕ್ಕತಾಯ ಸ್ಥೂಲ ದೇಹಗಳತ್ಸ್ವೇದ ಜಲಸಮ್ಮಾರ್ಜಿತ ಭಿತ್ತಿಯುಕ್ತವಾದ ಮನೆಯಲ್ಲಿ, ಗಡ್ಡಮೀಸೆಗಳನ್ನು ಗಾಯವಾಗುವಂತೆ ಬೋಳಿಸಿಕೊಂಡು ಹದಿನೆರಡುದಿನ ತಣ್ಣೀರು ಮಿಂದು ಒಪ್ಪೊತ್ತು ಉಂಡುದಕ್ಕೆ ಪ್ರತಿಫಲವಾಗಿ ಸಿಕ್ಕಿದ ಮನೆಯಲ್ಲಿ, ನನ್ನ ಚಿಕ್ಕತಾಯ ಪೂರ್ವ ಮಹತ್ವಕ್ಕೆ ಇಹಲೋಕದಲ್ಲಿ ಸ್ಮಾರಕ ಚಿಹ್ನವಾಗಿ ಉಳಿದಂತಹ ಮನೆಯಲ್ಲಿ ನಾವಿಬ್ಬರು ಸ್ವಲ್ಪ ಕಾಲ ಸುಖವಾಗಿದ್ದೆವು. ಆದರೆ ಈ ಮನೆಯಲ್ಲಿ ನಾನು ಚಿರಕಾಲವಿರುವಂತೆ ನನ್ನ ಹಣೆಯಲ್ಲಿ ಬರೆಯುವುದಕ್ಕೆ ಬೊಮ್ಮದೇವನಿಗೆ ಮಸಿಯೂ ಲೇಖಣಿಯೂ ಇರಲಿಲ್ಲವೆಂದು ತೋರುತ್ತಿದೆ. ಇಲ್ಲವಾದರೆ ಮುದಿಗೂಗೆಯ ಗೂಡಿನಲ್ಲಿದ್ದ ಗಿಳಿಮರಿಗಳಂತಿರುವ ನಮ್ಮ ಬಳಿಗೆ ಅಕಸ್ಮಾತ್ ಈ ಮಾರ್ಜಾಲಋಷಿ ಏತಕ್ಕೆ ಬಂದನು? ಇದುವರೆಗೆ ಅಜ್ಞಾತವಾಸದಲ್ಲಿದ್ದ ಈ ವೃದ್ಧ ಯುಧಿಷ್ಠಿರನು ಮರಳಿ ಪಟ್ಟಣಕ್ಕೆ ಮೋರೆಯನ್ನು ತೋರಿಸಿದನೇತಕ್ಕೆ? 40 ವರ್ಷ ಊರುಬಿಟ್ಟು ಹೋದ ನನ್ನ ಚಿಕ್ಕತಂದೆಯವರು ತಿರುಗಿ ನನ್ನ-ತನ್ನ-ಮನೆಗೆ ಏತಕ್ಕೆ ಕಾಲಿಟ್ಟರು?

ನನ್ನ ಚಿಕ್ಕತಂದೆಯವರಿಗೆ ಸುಮಾರು 70 ವರ್ಷ. ಕೆಲವರಿಗೆ ವಾರ್ಧಕ್ಯದಲ್ಲಿ ಯೌವನ ಪ್ರಾಪ್ತಿಯುಂಟಾಗುವುದು. ನಮ್ಮ ಚಿಕ್ಕಪ್ಪನವರಿಗೆ ಹೀಗಿದ್ದಿತು. ಅವರು ಪ್ರಾಯದಲ್ಲಿ ಮುದುಕರಾದರೂ ದೇಹದಲ್ಲಿ ವೃದ್ಧರಾಗಿರಲಿಲ್ಲ; ಹೆಣ್ಣುಕೊಡುವವರಿದ್ದರೆ ತಲೆಗೆ ಬಾಸಿಂಗ ಸಿಕ್ಕಿಸಿಕೊಳ್ಳಲಿಕ್ಕೆ ಅವರು ಸಿದ್ಧರಾಗಿದ್ದರು. ಅವರು ಬಂದು ಎರಡು ವರ್ಷಗಳಾದರೂ, ತಮ್ಮ ಜಾತಕದ ಪ್ರತಿಯನ್ನು ತಲೆಯ ಮುಂಡಾಸಿನಲ್ಲಿಯೇ ಇಟ್ಟುಕೊಂಡು ದಿನವೆಲ್ಲ ತಿರುಗಿದರೂ, ಹೆಣ್ಣುಮಕ್ಕಳ ಆಸೆಯಿದ್ದ ಪಾಪಿಗಳು ಯಾರೂ ಅದನ್ನು ಕುರಿತು

ವಿಚಾರಿಸಲಿಲ್ಲ. ತಲೆಯ ಕೂದಲೆಲ್ಲಾ ನರೆತಿದ್ದುವು. ಕಣ್ಣುಗಳು ಮಾತ್ರ ಗುಂಡಿಗೆ ಇಳಿದಿರಲಿಲ್ಲ; ಅವುಗಳು ನೋಟಕರನ್ನು ಗುಂಡಿಗೆ ತಳ್ಳುವಂತಿದ್ದವು. ಈ ಕಣ್ಣುಗಳ ನಡುವಿನಿಂದ ಮೂಗಿನ ಮೇಲ್ಭಾಗವು ಉದ್ಭವಿಸಿ, ಗರಿಗಳಿಲ್ಲದ ತೆಂಗಿನ ಸೋಗೆಯಂತೆ ಕೆಳಕ್ಕೆ ಹರಿದು, ಅದರ ಮೊಂಡಭಾಗವು ಮೇಲಿನ ತುಟಿಯನ್ನು ಅಂಟಿ ಕೊಂಡಿತ್ತು. ಮೂಗಿನ ಸೊಳ್ಳೆಗಳ ಇಕ್ಕಡೆಗಳಲ್ಲಿಯೂ ಗಲ್ಲಗಳ ತೊಗಲು ಸ್ವಲ್ಪ ಮುದುರಿಕೊಂಡಿತ್ತು. ತುಟಿಗಳು ಸ್ವಲ್ಪ ತೆರೆದಿರುವುದರಿಂದ ಒಳಗಿನ ಹಲ್ಲುಗಳು ಇನ್ನೂ ಬೆಳ್ಳಗಾಗಿ ತೋರುತ್ತಿದ್ದವು. ಮೈಯಲ್ಲಿ ರೋಮವಿಲ್ಲದಿದ್ದರೂ ಒಂದು ಪ್ರಕಾರವಾದ ಕಪ್ಪುಬಣ್ಣವು ತುಂಬಿ ಹೋಗಿತ್ತು. ಕೆಲದಿನಗಳ ಕೆಳಗೆ ಗಟ್ಟದ ಕಾಫಿತೋಟಗಳಿಗೆ ಆಳುಗಳನ್ನು ಗೊತ್ತುಹಚ್ಚುವ 'ಕಂಟ್ರಾಕ್ಟ್‌ದಾರನು', ನಮ್ಮ ಚಿಕ್ಕತಂದೆಯವರ ಕೈಹಿಡಿದು ಬಳಿಕ ಅವರ ಕ್ಷಮಾಪಣೆಯನ್ನು ಬೇಡಿಕೊಂಡನಂತೆ. ಅವರ ಮೈ ಬಣ್ಣವು ಹೇಗಿರುವುದೆಂದು ಪಾಠಕ ಮಹಾಶಯರಿಗೆ ಖಚಿತ ಮಾಡುವುದಕ್ಕೆ ಅದಕ್ಕೆ ಸಾದೃಶ್ಯ ಪದಾರ್ಥವನ್ನು ಇನ್ನೂ ಹುಡುಕುತ್ತಲಿರುವೆನು. ನನ್ನ ಚಿಕ್ಕತಂದೆಯವರ ಹೆಸರು ಏನೆಂಬುದು ಈ ತನಕ ಸರಿಯಾಗಿ ನನಗೆ ಗೊತ್ತಾಗಲಿಲ್ಲ. ನನ್ನ ಚಿಕ್ಕತಾಯಿ ಜೀವಂತಳಾಗಿದ್ದಾಗ, 'ಜೋಗಳ ಹಾಡು' ಎನ್ನುವ ಬದಲಾಗಿ 'ತೊಟ್ಟಿಲು ತೂಗುವ ಪದ' ಎನ್ನುತ್ತಿದ್ದಳು. ಹಾಗೆಯೇ "ಮೇಲಿಂದ ನೀರು ಹರಿಯುವುದು" ಎನ್ನುವಳಲ್ಲದೆ "ಜೋಗು" ಎಂಬ ಪದವನ್ನು ಉಚ್ಚರಿಸು ತ್ತಿದ್ದಿಲ್ಲ. ಈ ಕಾರಣಗಳಿಂದ ನಮ್ಮ ಚಿಕ್ಕತಂದೆಯವರ ಹೆಸರು "ಜೋಗಪ್ಪ" ಎಂದು ನಾನು ಸಾಧಾರಣ ನಿಶ್ಚಯ ಮಾಡಿದೆನು. ನಾನು 'ಚಿಕ್ಕಪ್ಪಾ! ಚಿಕ್ಕಪ್ಪಾ!' ಎಂದು ಯಾವಾಗಲೂ ಕರೆಯುತ್ತಿದ್ದುದರಿಂದ, ನನ್ನ ಸ್ನೇಹಿತರೆಲ್ಲ ಈ ಮಾತನ್ನೆ ಹಿಡಿದು, ಅವರನ್ನು ಚಿಕ್ಕಪ್ಪಯ್ಯ ಎಂದು ಸಂಬೋಧಿಸುತ್ತಿದ್ದರು. ಹಲವು ಜನ ಪಾರಮಾರ್ಥ ಬಲ್ಲವರು ಇದಕ್ಕೆ ಬದಲಾಗಿ "ಚಿ! ಕಪ್ಪಯ್ಯ!" ಎಂತಲೂ ಹೇಳುತ್ತಿದ್ದರು. ಅವರು ಹೀಗೆ ಕರೆಯುತ್ತಿದ್ದುದು ನ್ಯಾಯವೋ ಅನ್ಯಾಯವೋ ವಾಚಕರೇ ವಿಚಾರಿಸಬಹುದು.

ನಮ್ಮ ಚಿಕ್ಕತಂದೆಯವರು ಮತದಲ್ಲಿ ಅದ್ವೈತವನ್ನು ಅವಲಂಬಿಸಿದ್ದರು. ಅವರಿಗೆ ಅನ್ಯ ಹಣ ಬೇರೆ, ತನ್ನ ಹಣ ಬೇರೆ, ಎಂಬ ದ್ವೈತಾಭಿಪ್ರಾಯವಿರಲಿಲ್ಲ; ಎಲ್ಲವೂ ತನ್ನ ಪೆಟ್ಟಿಗೆಯನ್ನೇ ಸೇರಬೇಕೆಂಬ ಸದ್ಧರ್ಮ ವನ್ನು ಅವರು ವಿಚಾರಿಸುತ್ತಿದ್ದರು. ಅವರು ವಿಚಾರಿಸುವಂತೆ ಅವರ ಬಳಿಯಲ್ಲಿ ಸ್ವಲ್ಪ ಹಣವಿತ್ತು. ಅದು ಎಷ್ಟಿತ್ತೆಂದು ಕಂಡು ಹಿಡಿಯುವುದಕ್ಕೆ ಅನುಕೂಲವಾದ ಸಮಯವು ಇನ್ನೂ ಒದಗಲಿಲ್ಲ ಎಂದು ನಾನು ವ್ಯಸನ ಪಡುತ್ತೇನೆ. ಹಣದ ಪೆಟ್ಟಿಗೆಯನ್ನು ದಿನಕ್ಕೆ ಎರಡು ಸಲ ಪೂಜಿಸುತ್ತಿದ್ದರು. ಈ ಹಣವು ಅವರೊಡನೆ ಉಂಟೆಂಬ ಪರಿಜ್ಞಾನದಿಂದಲೇ ನಾನು ನಿರಾಯಸವಾದ ಎರಡು ಊಟಗಳನ್ನು ಅವರಿಗೆ ಕೊಡುತ್ತಿದ್ದೆನು. ನಾನು ಊಟ ಹಾಕದಿದ್ದರೆ, ಪರರ ಮನೆಯಲ್ಲಿ ಈ ಹಣದ ಪೆಟ್ಟಿಗೆಯ ದರ್ಶನದಿಂದಲೇ ಉಳುಕೊಳ್ಳುವುದು ಅವರಿಗೆ ಕಷ್ಟವಾಗುತ್ತಿರಲಿಲ್ಲ. ಈ ಪೆಟ್ಟಿಗೆಯನ್ನು ನೋಡಿಕೊಂಡು ಎಷ್ಟೋ ಜನರು ಅವರ ಕಾಲುಹಿಡಿದು ತಮ್ಮ ಮನೆಯಲ್ಲಿ ಅವರನ್ನು ನಿಲ್ಲಿಸಿಕೊಂಡು ಮೋಸಹೋಗುವುದಕ್ಕೆ ಸಿದ್ಧರಾಗಿದ್ದರು. "ನನ್ನ ತಲೆಯ ಮೇಲೆ ಇನ್ನು ಹೆಚ್ಚು ದಿವಸಗಳು ಹೋಗಲಾವು" ಎಂದು ನನ್ನ ಚಿಕ್ಕತಂದೆಯವರು, ನನಗೆ ಕೇಳಿಸುವಂತೆ ಪದೇಪದೇ ಹೇಳುತ್ತಿದ್ದುದರಿಂದ, ನಾನು ವೆಚ್ಚದ ವಿಷಯದಲ್ಲಿ ಅಷ್ಟು ವಿಚಾರ ಮಾಡುತ್ತಿದ್ದಿಲ್ಲ. ಆದರೆ ಒಂದೊಂದು ಸಲ "ದಿನ ಹೋಗದಿದ್ದರೂ ವರ್ಷಗಳು ಹೋಗಬಹುದಲ್ಲವೆ" ಎಂದು ಸಂಶಯ ಮನಸ್ಕ ನಾಗುತ್ತಿದ್ದೆನು. ಅವರಿಗೆ ಇನ್ನೂ ದೀರ್ಘಕಾಲ ಬದುಕಬೇಕೆಂಬ ಆಸೆ ಇತ್ತೋ ಇಲ್ಲವೊ ನನ್ನಿಂದ ಹೇಳಲು ಬರುವುದಿಲ್ಲ. ಆದರೆ ಅಭ್ಯಂಗಸ್ನಾನಗಳಲ್ಲಿ ದಿನ ತಪ್ಪುತ್ತಿದ್ದಿಲ್ಲ; ಊಟಗಳಲ್ಲಿ ಗಂಟೆ ತಪ್ಪುತ್ತಿದ್ದಿಲ್ಲ; ಫಲಾಹಾರ ವಿಷಯದಲ್ಲಿ ನಿಮಿಷ ತಪ್ಪುತ್ತಿದ್ದಿಲ್ಲ.

ನಮ್ಮ ಚಿಕ್ಕತಂದೆಯವರು—

ಪಾಠಕಮಹಾಶಯರು ಇನ್ನೂ ತಾಳಲಾರರು. ನನ್ನ ಚಿಕ್ಕತಂದೆಯವರನ್ನು ಕುರಿತು ಓದಿ ಓದಿ ನಿಮ್ಮ ಸಹನಾಶಕ್ತಿಯು ಸಾಕುಸಾಕಾಯಿತು. "ಇನ್ನೂ ಈತನ ಚಿಕ್ಕತಂದೆಯವರು ಹೋಗಲಿಲ್ಲ" ಎಂದು ಮಹಾಶಯರು ಕೋಪಿಸಿ "ಸತ್ತುಹೋಗಲಿ" ಎಂದು ಪುಸ್ತಕವನ್ನು ಬಿಸುಡುವರೆಂದು ನಾನು ಸಂಶಯಪಡುತ್ತೇನೆ. 'ಹಾಗೆ ಆಗಲಿಲ್ಲವಲ್ಲ!' ಎಂದು ನಾನೂ ವ್ಯಸನಪಟ್ಟರೂ, ನನ್ನ ಚಿಕ್ಕತಂದೆಯವರ ಅಂಥ ಸ್ಥಿತಿಯನ್ನು ನೋಡಲು ನೀವು ಸಂತೋಷಪಡುವುದಾದರೆ ನಾನು ಮುಂದೆ ಹೇಳತೊಡಗುವೆನು. ಆದರೆ ಅಷ್ಟರಲ್ಲಿ ನಮ್ಮ ಮನೆಯಲ್ಲಿದ್ದ ಮತ್ತೊಬ್ಬ ವ್ಯಕ್ತಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳಲು ಬಯಸುವೆನು.

ಈ ವ್ಯಕ್ತಿಯ ಪರಿಚಯವು ಊರಲ್ಲಿ ಎಲ್ಲರಿಗೂ ಇತ್ತು. ಊರಲ್ಲಿ ಹೆಣ್ಣುಮಕ್ಕಳು ಅಳುತ್ತಿದ್ದರೆ' ಮುದ್ದಣ್ಣನಿಗೆ ಮದುವೆ ಮಾಡಿಕೊಡುತ್ತೇವೆ ಎಂದು ತಂದೆತಾಯಿಗಳು ಅಣಕಿಸುವುದುಂಟು. ಮುದ್ದಣ್ಣನ, ನಮ್ಮೆಲ್ಲರಿಗೂ ಅನ್ನದಾತಾರನಾಗಿದ್ದನು. ಅಡಿಗೆ ಮಾಡುವುದು ಅವನ ಕೆಲಸವಾದರೂ, 'ಅಡಿಗೆಭಟ್ಟ' ಎಂದು ಯಾರಾದರೂ ಕರೆದರೆ, ರೇಗುವನು. ರೂಪಲಾವಣ್ಯವು ಅಷ್ಟೊಂದು ವಿಶೇಷವಾಗಿರಲಿಲ್ಲ. ಕಣ್ಣು ಚಿಕ್ಕವು. ಕಿವಿ ಕೊಂಕು, ಮೂಗು ಮೊಂಡ, ಮುಖ ಮಂದ. ಕೆಲವರು ಈತನನ್ನು ಹುಚ್ಚನೆಂದು ನೋಡುತ್ತಲೇ ಹೇಳುತ್ತಿದ್ದರು. 'ಹುಚ್ಚು ಹೌದು. ಕಂಡವರ ಮೇಲೆ ಕಲ್ಲಿಡುವ ಹುಚ್ಚಲ್ಲ.' ತ್ರಿದಶ ವರ್ಷಗಳ ವರೆಗೆ ಧನಬಲವಿಲ್ಲದೆ ಕಠೋರ ಬ್ರಹ್ಮಚರ್ಯವ್ರತವನ್ನು ಅವಲಂಬಿಸಿದ ಮಹಾತ್ಮನಿಗೆ ಯಾವ ಬುದ್ಧಿವಿಕಲತೆಯು ಉಂಟಾಗಬಹುದೋ ಆ ಹುಚ್ಚು ಇವನನ್ನು ಹಿಡಿದಿತ್ತು. ಇದು ಕಾರಣದಿಂದ ಅವನು ಮಾತಿನಲ್ಲಿ ಯಾರೊಡನೆಯೂ ತಡವರಿಸುತ್ತಿದ್ದಿಲ್ಲ. ಆಮಂತ್ರಿತರಾದ ಗೃಹಸ್ಥರು ನಮ್ಮ ಮನೆಗೆ ಬಂದ ಕಾಲದಲ್ಲಿ ಮುದ್ದಣ್ಣನು ಅಡಿಗೆಮಾಡುವುದನ್ನು ಬಿಟ್ಟು, ಹೊಸ ಧೋತ್ರವನ್ನು ಉಟ್ಟುಕೊಂಡು ತನ್ನ ವಿದ್ಯಾರ್ಜನೆಯನ್ನೂ, ತನ್ನ ಕುಲೀನತೆಯನ್ನೂ, ತನ್ನ ಧನಸಂಪನ್ನತೆಯನ್ನೂ ಕುರಿತು ಅವರ ಮುಂದೆ ವ್ಯಾಖ್ಯಾನ ಮಾಡುವನು. ಅವನಲ್ಲಿ ಇವೆಲ್ಲವು ಕೊಂಚ ಕೊಂಚವಾಗಿ ಇಲ್ಲದೆ ಇರಲಿಲ್ಲ. ನೆರೆಯಲ್ಲಿದ್ದ ಸ್ತ್ರೀಯರು ನಮ್ಮ ಮನೆಯಲ್ಲಿ ಹಾಳುಹರಟೆಗಳನ್ನು ಜಗಿಯುವುದಕ್ಕೆ ಕೂಡಿದರೆ, ಈ ಸುಂದರ ಪುರುಷನು ಅಡಿಗೆಮನೆಯನ್ನು ಬಿಟ್ಟು, ಅವರ ಸಮ್ಮುಖದಲ್ಲಿ ಬಂದು ಗಂಭೀರಭಾವವನ್ನು ಧರಿಸಿ, ಕುರ್ಚಿಯ ಮೇಲೆ ಕುಳಿತುಕೊಳ್ಳುವನು. ಹಾಗೆಯೇ ಮೇಜಿನ ಮೇಲಿದ್ದ ಒಂದು 'ಸೋಶ್ಯಲ್ ರಿಫೋರ್ಮರ್' ಸಂಚಿಕೆಯನ್ನು ಕೈಯಲ್ಲಿ ಕೊಂಡು 'ವಾಂಟೆಡ್ ಏ ಯಂಗ್ ಮೆನ್ ಟು ಮೆರ್‍ರಿ ಏ ವರ್ಜಿನ್ ವಿಡೊ' ಎಂದು ಓದಿಕೊಂಡು ಒಮ್ಮೆ ಸ್ತ್ರೀಯರ ಮುಖವನ್ನು ನೋಡುತ್ತಾ, ಒಮ್ಮೆ 'ವರ್ಜಿನ್ ವಿಡೊ' ಎಂದು ಹೇಳಿ ತಲೆದೂಗುತ್ತಾ, ಆನಂದಪರವಶನಾಗುವನು. ತಾನು ಇತರರಂತೆ ಸದ್ವಂಶದಲ್ಲಿ ಹುಟ್ಟಿರುವೆನೆಂದು ಮರಳಿಮರಳಿ ನಮ್ಮ ಕಿವಿಗೆ ಹಾಕುತ್ತಿದ್ದನು. ಅವನು ಹೇಳುವಂತೆ ಅವನ ಸೋದರಮಾವನೊಬ್ಬನು ಜಿಲ್ಲಾ ಮುನ್ಸೀಫನಾಗಿದ್ದನು; ಮತ್ತೊಬ್ಬನು ತಾಲೂಕು ಅಮಲ್ದಾರನಾಗಿದ್ದನು. ಆದರೆ ಈ ಪುಣ್ಯಾತ್ಮರಿಗೆ ಅಳಿಯನ ಪರಿಚಯವೇನೋ ಇರಲಿಲ್ಲ. ಅಳಿಯುವ ಮೊದಲೇ ಅಳಿಯನಾಗಬೇಕೆಂಬ ಆಸೆಯಿಂದ ಅವನು ಸ್ವಲ್ಪ ಹಣವನ್ನು ಕೂಡಹಾಕಿದ್ದನು. ಈ ಧನಲೋಲುಪ್ತಿಯ ವಿಷಯದಲ್ಲಿ ಅವನು ನನ್ನ ಚಿಕ್ಕಪ್ಪನವರ ಸಾಕಣೆ ಮಗ ಎಂದು ಕರೆಯಲ್ಪಡುವಷ್ಟು ಅವರ ಪೂರ್ಣ ಅನುವರ್ತಿಯಾಗಿದ್ದನು. ಮೊದಲು ಮೊದಲು 'ಚಿಕ್ಕಪ್ಪಯ್ಯನ ದತ್ತಕಪುತ್ರ' ಎಂದು ಸರಸಕ್ಕೆ ಇವನನ್ನು ಯಾರಾದರೂ ಕರೆದರೆ ಈತನು ಉರಿದು ಬೀಳುತ್ತಿದ್ದರೂ. ಕ್ರಮೇಣ ಈ ಹೆಸರು ಹೇಳಿದರೆ ಅವನಿಗೆ ಒಂದು ಪ್ರಕಾರದ ಆನಂದ

ವುಂಟಾಗುತ್ತಲಿತ್ತು. ಯಾವ ಕಾರಣದಿಂದಲೊ ಇವರಿಬ್ಬರೊಳಗೆ ಪರಸ್ಪರ ಗೂಢ ಸ್ನೇಹವುಂಟಾಯಿತು. ಈ ರಹಸ್ಯವಾದ ಅನ್ಯೋನ್ಯ ಮೈತ್ರಿಯೇ ನನ್ನನ್ನು ಇನ್ನೊಮ್ಮೆ ಜೈಲಿಗೆ ಅಟ್ಟಿಬಿಟ್ಟಿತು. ಆದರೂ ಈ ಮುದ್ದಣನ ಮೇಲೆ ನನಗೆ ಕೋಪವಿರಲಿಲ್ಲ. ಏಕೆಂದರೆ ಆತನು ಸಜ್ಜನ ಸ್ವಭಾವದವನು, ಸಹನಾ ಶಕ್ತಿಯುಳ್ಳವನು. ಅಡಿಗೆ ಮನೆಯಲ್ಲಿ ಬೆಕ್ಕಿನಂತೆ ಯಾರ ಅಪ್ಪಣೆಯನ್ನೂ ಕೇಳದೆ ಕಣ್ಮುಚ್ಚಿ ತಿನ್ನುವುದಾಗಲೀ. ಚಿಕ್ಕಮನೆಯಲ್ಲಿ ಹಾಸಿದ ಹಾಸಿಗೆಯ ಮೇಲೆ ಅಂತರಂಗದಿಂದ ಬಂದು ಮನೆಯ ಯಜಮಾನನಂತೆ ಮಲಗುವುದಾಗಲೀ, ಅವನ ಕೃತ್ಯಗಳಲ್ಲಿ ಕಾಣಿಸಲಿಲ್ಲ.

ಸೋಮವಾರ ದಿನ ನನ್ನ ಚಿಕ್ಕತಂದೆಯವರು ನಿತ್ಯ ಕರ್ಮದಂತೆ ಊಟಕ್ಕೆ ಕುಳಿತಿದ್ದರು. ಅಡಿಗೆಯವನು ಪ್ರೇಮಪೂರ್ವಕವಾಗಿ ಸೇವಿಸುತ್ತಿದ್ದನು. ನಾನು ಸ್ನಾನವನ್ನು ತೀರಿಸಿ ಭೋಜನಕ್ಕೆ ಸಿದ್ಧನಾಗಿ ಅಡಿಗೆ ಮನೆಗೆ ಹೋಗುತ್ತಿದ್ದೆನು. ಆದರೆ ಅವರಿಬ್ಬರಿಗೂ ನಡೆಯುವ ಅಂತರಂಗದ ಸಂಭಾಷಣೆಯಲ್ಲಿ ಕೆಲವು ಮಾತುಗಳು ಹಿಂದುಗಡೆಯಲ್ಲಿದ್ದ ನನ್ನ ಕಿವಿಗಳಲ್ಲಿ ಇಳಿದುದರಿಂದ ನಾನು ಕುತೂಹಲಮನಸ್ಕನಾಗಿ ಅಲ್ಲಿಯೇ ತಡೆದೆನು.

ಚಿಕ್ಕಪ್ಪ—"ನಾನು ನನಗೆ ಬೇಕಾದ ಒಬ್ಬಿಬ್ಬರೊಡನೆ ಹಣವನ್ನೆಲ್ಲಾ ನಿನ್ನ ವಶಮಾಡುವೆನೆಂದು ಹೇಳಿದುದರಿಂದ, ನನ್ನ ಸಾಕಣೆಮಗ ಎಂದು ಎಲ್ಲರೂ ನಿನ್ನನ್ನು ಹೇಳಲು ಕಾರಣವಾಯಿತು."

ಮುದ್ದಣ್ಣ—"ಮನೆಯ ಯಜಮಾನರು ನಿಮ್ಮ ಸೋದರ ಮಗನಲ್ಲವೇ? ನಿಮ್ಮ ಹಣವೆಲ್ಲಾ ಅವರ ಪಾಲಿಗೆ ಹೋಗದೆ ನನ್ನ ವಶಕ್ಕೆ ಬರಲು ನ್ಯಾಯವು ಬಿಡುವುದೇ?"

ನಾನು ನಿಂತಲ್ಲಿಯೇ ಇದರ ಸಂಪೂರ್ಣ ಅರ್ಥವನ್ನು ಗ್ರಹಿಸಿದೆನು.

ಚಿಕ್ಕಪ್ಪ—"ಹುಚ್ಚಾ! ನೀನರಿಯೆ. ಈ ಮನೆಯ ಯಜಮಾನ ನಾನು; ಅವನಲ್ಲ. ಇದು ಆಗಿಹೋದ ನನ್ನ ಧರ್ಮಪತ್ನಿಯ ಮನೆ. ಆದುದರಿಂದ ಮನೆಯ ಒಂದು ಕಲ್ಲಿನಲ್ಲಿ ಕೂಡ ಆತನಿಗೆ ಹಕ್ಕಿಲ್ಲ. ನನ್ನ ನಗದು ಹಣವು ಸ್ವಾರ್ಜಿತವಾದುದರಿಂದ ಅದನ್ನು ನನ್ನ ಇಚ್ಛಾನುಸಾರವಾಗಿ ನಾನು ವಿನಿಯೋಗಿಸಬಹುದು, ಕಂಡೆಯಾ?"

ಹೀಗೆಂದು ಹೇಳಿ ಚಿಕ್ಕತಂದೆಯವರು ಭಕ್ಷ್ಯವನ್ನು ಬಡಿಸಲು ಹೇಳಿದರು. ಅಡಿಗೆಯವನು ಭಕ್ಷ್ಯಗಳನ್ನು ಅವರ ಎಲೆಯ ಮೇಲೆ ಧಾರಾಳವಾಗಿ ವರ್ಷಿಸಿದನು. ಕಣ್ಣುಕಾಣದ ನಷ್ಟವನ್ನು ನೋಡಿ ನಾನು ನನ್ನಲ್ಲಿಯೇ ಬೇಸರಗೊಂಡೆನು. ಆದರೂ ಮಾತುಗಳು ಕೊನೆಮುಟ್ಟಿದುದನ್ನು ನೋಡುವುದಕ್ಕೆ ಸಡಗರಿಸುತ್ತ ಅಲ್ಲಿಯೇ ನಿಂತೆನು.

ಚಿಕ್ಕಪ್ಪ—"ಮುದ್ದು! ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ಕೂಡ ನನ್ನನ್ನು ಇಷ್ಟು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ನೋಡುತ್ತಿದ್ದಿಲ್ಲ. ನನ್ನ ಹಣವೆಲ್ಲಾ ನಿನಗೆಂದು ನಾನು 'ಉಯಿಲ್' ಬರೆದಿಟ್ಟಿರುವೆನು."

ಮುದ್ದಣ್ಣ—"ಉಯಿಲ್ ಎಂದರೇನು?"

ಚಿಕ್ಕಪ್ಪ—"ಸ್ಥಿರಚರ ಸೊತ್ತನ್ನು ಒಬ್ಬನು ಮತ್ತೊಬ್ಬನಿಗೆ ತನ್ನ ಮರಣದ ಬಳಿಕ ದಾನವಾಗಿ ಬರೆದುಕೊಡುವ ನ್ಯಾಯಪತ್ರ."

ಮುದ್ದಣ್ಣ—"ಹಾಗಾದರೆ ಬರೆದುಕೊಡುವವನು ಸತ್ತ ವಿನಾ ಆ ಸೊತ್ತು ಮತ್ತೊಬ್ಬನ ಪಾಲಿಗೆ ಬರುವುದಿಲ್ಲವೇ?"

ಚಿಕ್ಕತಂದೆಯವರು ಅಡಿಗೆಭಟ್ಟನ ಮಾತಿನ ಅರ್ಥವನ್ನು ಸರಿಯಾಗಿ ತಿಳಿದುಕೊಂಡರು. ಊರಲ್ಲೆಲ್ಲಾ ವಾಂತಿಭೇದಿಯು ಹಬ್ಬಿದುದರಿಂದ ಈ ಮಾತು ಅವರಿಗೆ ಅಪಶಕುನವಾಗಿ ತೋರಿದ್ದರೂ ಇರಬಹುದು. ಹೇಗೂ ಆ ಮೇಲೆ ಅವರು ಮಾತೆತ್ತದೆ, ಕೈತೊಳೆದು ಹೊರಕ್ಕೆ ಹೋದರು.

ಸ್ವಲ್ಪ ಹೊತ್ತಿನ ಮೇಲೆ ನನ್ನ ಹೆಂಡತಿಯು ಅಡಿಗೆಮನೆಗೆ ಬಂದು ನನ್ನನ್ನು ಕರೆಯುತ್ತಲೇ ನಾನು ಊಟಕ್ಕೆ ಕುಳಿತುಕೊಂಡೆನು. ಪಾತ್ರೆಗಳಲ್ಲಿ ಶಾಕಪಾಕಗಳು ವರ್ಜ್ಯವಾದುದನ್ನು ನೋಡಿ ಸಕಲಾವತಿಗೂ ಅಡಿಗೆಯವನಿಗೂ ನಿತ್ಯದಂತೆ ಬಾಯ್ಜಗಳವು ನಡೆಯಿತು. ನನಗೆ 'ಆಫೀಸಿಗೆ' ಹೋಗುವುದಕ್ಕೆ ವಿಳಂಬವಾದುದ ರಿಂದಲೂ, ನನ್ನ ಮನಸ್ಸಿಗೆ ಸಮಾಧಾನವಿಲ್ಲದುದರಿಂದಲೂ, ನಾನು ಮನೆಯವಳ ಪಕ್ಷವಾಗಿ ಸಿಟ್ಟಿಗೆದ್ದು— "ಇವರ ಕರ್ಮದಿಂದ ಒಂದು ತುತ್ತು ಅನ್ನ ತಿನ್ನುವುದಕ್ಕೆ ಇಲ್ಲ! ಹಾಳಾಗಿ ಹೋಗಲಿ!" ಎಂದು ಶಪಿಸಿ, ಊಟ ಮುಗಿಸದೆ, ನೆಟ್ಟನೆ ಆಫೀಸಿಗೆ ಹೊರಟೆನು. ನಮ್ಮ ಚಿಕ್ಕಪ್ಪನವರು ಸುಖಾಸೀನರಾಗಿ ನಿದ್ರೆಗೆ ಪ್ರಸ್ತಾವನೆ ಯಾಗಿ ಆಕಳಿಸುವುದನ್ನು ನೋಡಿ. ಮನೆಯನ್ನು ಬಿಟ್ಟು ಹೋಗುವಾಗ ನನ್ನ ಅಸಮಾಧಾನತೆಯು ಕಡಿಮೆ ಯಾಗಲಿಲ್ಲ.

ದಾರಿಯಲ್ಲಿ ಬರುತ್ತಿದ್ದಾಗ ನನ್ನ ಮನಸ್ಸಿನಲ್ಲಿದ್ದ ಪೂರ್ವ ಸಂಶಯಗಳೆಲ್ಲಾ ನಿಜವಾಗಿ ಕಂಡುಬಂದುವು. ಅಡಿಗೆಯವನು ಚಿಕ್ಕತಂದೆಯ ಗಂಟಿನ ಆಸೆಗೆ ಒಳಗಾಗಿ, ಊಟ ಉಪಚಾರಗಳಲ್ಲಿ ನಮ್ಮಿಬ್ಬರಿಗೆ ಬರಿದಾದ ಪಾತ್ರೆಗಳನ್ನು ಮಾತ್ರ ನಿಲ್ಲಿಸುವನು ಎಂದು ನನ್ನ ಹೆಂಡತಿಗೂ ಅವನಿಗೂ ದಿನಂಪ್ರತಿ ಕಾಳಗವಾಗುತ್ತಿತ್ತು. ಇವೆಲ್ಲವು ಅಲ್ಪ ಸಂಗತಿಗಳೆಂದು ಬಗೆದು ಅಡಿಗೆಮನೆಯ ಕಲಹವನ್ನು ನನ್ನ ಆಫೀಸ್ ಚಾವಡಿಗೆ ತರಲು ಬಿಡುತ್ತಿರಲಿಲ್ಲ. ಈ ಹೊತ್ತು ನೋಡಿದ ನೋಟದಿಂದ ನನ್ನ ಮನಸ್ಸಿಗೆ ಅವೆಲ್ಲವೂ ಖಚಿತವಾದುವು. ನನ್ನ ಚಿಕ್ಕ ತಂದೆಯವರು ತನ್ನ ಹಣದ ವಾಸನೆಯನ್ನು ಇಟ್ಟು, ಮುದ್ದಣ್ಣನು ತನ್ನ ಹಿಂದುಗಡೆ ತನಗೆ ಬೇಕಾದ ಹಾಗೆ ಬರುವಂತೆ ಮಾಡಿ, 'ಮನ್ನಣೆಯ ಮನೆಯ ಅಳಿಯನಂತೆ' ಸರ್ವಸುಖವನ್ನು ಅನುಭವಿಸುವುದಕ್ಕೆ ಅನುಕೂಲ ಪಡಿಸಿರುವರು! ಇವರ ಮನೆಯನ್ನೂ ಧನವನ್ನೂ ಆಶಿಸಿದ ನನಗೆ ಬೂರುಗದ ಮರ ಕಾದ ಗಿಣಿಯಂತೆ ಹತಾಶನಾಗುವ ಕಾಲ ಬಂದೊದಗುವುದು. ಮನೆಯ ಗೋಡೆಯನ್ನು ಅಂಟಿಕೊಂಡ ಈ ಉಡುವನ್ನು ಹೊರಕ್ಕಟ್ಟಿಬಿಟ್ಟ ಹೊರತು ಮನೆಗೆ ಶ್ರೇಯಸ್ಸು ಇಲ್ಲ. ಇನ್ನು ಈ ಹಳೆಯ ಮರವು ಬೇರೂರಿದರೆ ನೆಲವನ್ನು ಬಿಡದೆ ಎಲ್ಲವನ್ನು ಆವರಿಸಿಕೊಳ್ಳುವುದು. ಆದುದರಿಂದ ಈ ವೃದ್ಧ ಶಕುನಿಯಿಂದ ನಾವಿಬ್ಬರು ದೂರರಾಗಿರ ಬೇಕು ಎಂದು ದೃಢಮನಸ್ಕನಾದೆನು.

'ಆಫೀಸಿನಲ್ಲಿ' ಗುಮಾಸ್ತರು ಒಬ್ಬಿಬ್ಬರು ಅಲ್ಲದೆ ಮತ್ತಾರು ಬಂದಿರಲಿಲ್ಲ. ಊರಲ್ಲೆಲ್ಲ ಭಯಂಕರವಾಗಿ ವಾಂತಿಭೇದಿಯು ಪಸರಿಸಿದುದರಿಂದ, ಅವರು ಇದೇ ನೆವವನ್ನು ಮಾಡಿ ಮನೆಯಲ್ಲಿ ನಿಂತುಬಿಟ್ಟಿದ್ದರು. ರೋಗವು ತಲೆದೋರುವ ಮೊದಲೇ ಹುಡುಗರೆಲ್ಲಾ ಶಾಲೆಗೆ 'ರಜಾ' ಎಂದು ತಮ್ಮಷ್ಟಕ್ಕೆ ಖಚಿತ ಮಾಡಿ ಕೊಂಡು ಊರಿಗೆ ಹೋಗಿಬಿಟ್ಟರು. ಎಂದೂ ಬಂಡಿಯನ್ನು ಹತ್ತದ "ಆಸ್ಪತ್ರೆಯ" ಬಡ ನೌಕರರೆಲ್ಲ ಕುದುರೆಗಾಡಿ ಯಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲು ಮಾಡಿದರು. 'ಲೋಕಲ್ ಫಂಡ್ ಮೆಂಬರ್ಸ್' ಎಂದು ಕರೆಯಲ್ಪಡುವ ಲೋಕದ ಪಂಡರು* ಖಜಾನೆಯಲ್ಲಿ ಕಾದಿಟ್ಟ ಹಣವನ್ನು ವ್ಯಯಮಾಡುವುದಕ್ಕೆ ತೊಡಗಿದರು. ಆದರೂ ಕೊಲೆರಾ (ಎಂದರೆ ಕೊಲೆರೋಗ) ಊರಲ್ಲಿ ಶಮನವಾಗಲಿಲ್ಲ. ಶಮನಾರ್ಥವಾಗಿ ಶಾಂತಿಗಳೂ ಪೂಜೆಗಳೂ

---

* ಪಂಡ—ಒಬ್ಬ ಬಮುಖ್ಯ ಮನುಷ್ಯ

ನಡೆದುವು. ದೇವಸ್ಥಾನಗಳಲ್ಲಿ ವಿಪ್ರಸಂತರ್ಪಣೆಗಳು ಮಹಾ ಸಂಭ್ರಮದಿಂದ ಜರಗಿದವು. ಕೆಲವು ದಿನಗಳಲ್ಲಿ ಬ್ರಾಹ್ಮಣರ ಅಗ್ರಹಾರದಲ್ಲಿ ಮರಣಗಳು ಸಂಭವಿಸಿದುವು. ಉಪಾಯವಿಲ್ಲ; ಎಲ್ಲರೂ ನಾನಾ ತರದ ಔಷಧಗಳನ್ನು ತರಿಸಿ ಇಟ್ಟುಕೊಂಡರು. ಬಹಿರಂಗವಾಗಿ ಬೀಡಿ ಸೇದುವುದಕ್ಕೆ ಹೆದರುತ್ತಿದ್ದ ಹುಡುಗರು ಹಣವನ್ನು ಹೊಗೆಯಾಗಿ ಮಾಡಿಬಿಟ್ಟರು. ಬ್ರಾಂಡಿ ವ್ಹಿಸ್ಕಿ ಸೀಸೆಗಳ ಕ್ರಯವು ಹೆಚ್ಚಿತು. ಆದರೂ ರೋಗವು ಶಾಂತವಾಗಲಿಲ್ಲ.

ಆಫೀಸಿನಲ್ಲಿ ನಾನು ಸ್ವಲ್ಪ ಕೆಲಸಮಾಡಿದ ಬಳಿಕ ಫಲಾಹಾರಕ್ಕೋಸ್ಕರ ಮುದ್ದಣ್ಣನ ಹಾದಿಯನ್ನು ಎದುರ್ನೋಡುತಿದ್ದೆನು. ಕೂಡಲೆ ಮುದ್ದಣ್ಣನು ಎಂದಿಗಿಂತ ಮುಂಚೆಯೇ ಬಂದನು; ನನ್ನ ಬೀರುವಿನ ಬೀಗದ ಕೈಯನ್ನು ಮನೆಯಲ್ಲಿ ತರಹೇಳಿದರೆಂದು ಹೇಳಿ, ಹೋಗುವಾಗ ಅದನ್ನು ಕೊಂಡುಹೋದನು. ಆ ದಿನ ಬೇಗನೆಹೋಗುವುದಕ್ಕೆ ಅವಕಾಶವಿದ್ದುದರಿಂದ, ನಾನು 7 ಗಂಟೆಗೆ 'ಆಫೀಸ್' ಬಿಟ್ಟು ಮನೆಯ ಹಾದಿಯನ್ನು ಹಿಡಿದೆನು. ದಾರಿಯಲ್ಲಿ ನೂತನವಾದ ವರ್ತಮಾನವನ್ನು ಕೇಳಿ ನನ್ನ ತಲೆ ಕೆಳಗಾಯಿತು. ನನ್ನ ಚಿಕ್ಕತಂದೆಯುವರು ಅಕಸ್ಮಾತ್ತಾಗಿ ಪ್ರಾಣಾಂತಸ್ಥಿತಿಯಲ್ಲಿರುವರೆಂದೂ, ಅವರ ಜೀವಂತ ಶವವನ್ನು 'ಪೊಲೀಸಿನವರು 'ಆಸ್ಪತ್ರೆಗೆ' ಒಯ್ದಿರುವರೆಂದೂ ಕೇಳಿ ನನ್ನ ಹೃದಯವು ತಳಮಳಗೊಂಡಿತು. ನಾನು ನಿಂತಲ್ಲಿ ನಿಲ್ಲದೆ ಓಡತೊಡಗಿದೆನು.

ನಾನು 'ಆಸ್ಪತ್ರೆಯನ್ನು' ಸೇರುವುದಕ್ಕೆ ವಿಳಂಬವಾಗಲಿಲ್ಲ. ನಮ್ಮ ಚಿಕ್ಕತಂದೆಯುವರು ಮಂಚದ ಮೇಲೆ ಮಲಗಿದ್ದರು ಅಥವಾ ಮಲಗಿಸಲ್ಪಟ್ಟಿದ್ದರು. 'ಡಾಕ್ಟರರು' ಬಳಿಯಲ್ಲಿ ನಿಂತು, ಔಷಧದ ದರ್ವಿಯನ್ನು ಅವರ ಹಲ್ಲುಗಳ ನಡುವೆ ತುರುಕುತ್ತಿದ್ದರು. ಚಿಕ್ಕತಂದೆಯುವರು ಅವರ ಮೇಲೆ ಕೋಪದಿಂದಲೊ ಎಂಬಂತೆ ಕಣ್ಮುಚ್ಚಿ ಹಲ್ಲು ಮಸೆಯುತ್ತಿದ್ದರು. ಚಿಕ್ಕತಂದೆಯವರಿಗೆ ಪ್ರಜ್ಞೆ ತಪ್ಪಿ ಹೋಗಿದ್ದಿತು; ನಾಲಗೆ ಬಿದ್ದುಹೋಗಿದ್ದಿತು; ಶ್ವಾಸ ಮಾತ್ರ ಮೆಲ್ಲಮೆಲ್ಲನೆ ಹೊರಬರುತ್ತ ಒಳಹೋಗುತ್ತ ಆಡುತಿದ್ದಿತು. ಅವರ ಅಂತ್ಯಸ್ಥಿತಿಯನ್ನು ನೋಡುವುದಕ್ಕೆ ಹಲವು ಜನರು ಅಲ್ಲಿ ನೆರೆದಿದ್ದರು. ಪುರೋಹಿತನೂ ಪೊಲೀಸಿನವನೂ ಎಲ್ಲರಿಗಿಂತಲೂ ಮುಂದೆ ನಿಂತಿದ್ದರು. ಎಲ್ಲಾದರೂ ಅಕಸ್ಮಾತ್ ಮರಣ ಉಂಟಾದರೆ, ಉಳಿದವರಿಗೆ ಮರಣದೋಷವು ತಗಲದಂತೆ ಮಾಡುವ ಸದುದ್ದೇಶವಿದ್ದ ಈ ಇಬ್ಬರು ಪುಣ್ಯಾತ್ಮರು ನಮ್ಮ ಚಿಕ್ಕತಂದೆಯುವರ ಅವಸ್ಥೆಯನ್ನು ಕುರಿತು ಕ್ಷಣೇಕ್ಷಣೇ ವಿಚಾರಿಸುತಿದ್ದರು.

ಸ್ವಲ್ಪ ಹೊತ್ತಿನ ಮೇಲೆ ಪ್ರಾಣವಾಯುವು ಸುಳಿವುದೋ ಎಂದು ಪರೀಕ್ಷಿಸುವುದಕ್ಕೆ ಕನ್ನಡಿಯನ್ನು ಅವರ ಮುಖದ ಇದಿರಿಗೆ ಹಿಡಿದರು. ಅದರ ಬದಲಾಗಿ ರೂಪಾಯಿಯ ಗೊಂಬೆಯನ್ನು ಮೂಗಿನ ಸೊಳ್ಳೆಗೆ ಒರಸಿದರೆ ಸರಿಯಾಗಬಹುದೆಂದು ಅಲ್ಲಿದ್ದವರಲ್ಲಿ ಯಾರೋ ಒಬ್ಬರು ಸೂಚಿಸಿದರು. 'ಡಾಕ್ಟರರು' ಮತ್ತೊಮ್ಮೆ ರೋಗಿಯ ನಾಡಿಯನ್ನು ಹಿಡಿದು, ಔಷಧವನ್ನು ಕೊಡಲು ಮನಸ್ಸು ಮಾಡಿ 'ಆಸ್ಪತ್ರೆಯ' ಆಳಿನೊಡನೆ 'ಪೆಟ್ಟಿಗೆಯನ್ನು ಕೊಂಡು ಬಾ!' ಎಂದು ಆಜ್ಞೆ ಮಾಡಿದರು. 'ಕ್ರಿಶ್ಚನ್ ಡಾಕ್ಟರನು' ಈ ಮಾತು ಹೇಳುತ್ತಲೇ ಪುರೋಹಿತನು ತವಕಗೊಂಡನು; ಮತ್ತು ನನ್ನೆಡೆಗೆ ಬಂದು "ಡಾಕ್ಟರನು ಕಟ್ಟಿಗೆ ಎನ್ನುವ ಬದಲಾಗಿ ಪೆಟ್ಟಿಗೆ ಎಂದು ಹೇಳಿದನೋ ನೋಡಿಕೊಳ್ಳು" ಎಂದು ನನ್ನನ್ನು ಎಚ್ಚರಗೊಳಿಸಿದನು. ಆದರೆ ಅಷ್ಟರಲ್ಲಿ 'ಪೊಲೀಸ್ ಜಮಾದಾರನು' ಬಂದು ನನ್ನೊಡನೆ ಮಾತನಾಡುತ್ತಿದ್ದುದರಿಂದ ಪುರೋಹಿತನ ಹಿತೋಕ್ತಿಯನ್ನು ನಾನು ಕಿವಿಗೆ ಹಾಕಿಕೊಳ್ಳಲಿಲ್ಲ.

ಜಮಾದಾರನು ನನ್ನೊಡನೆ "ನಿಮ್ಮ ಚಿಕ್ಕಪ್ಪನವರು ಬದುಕುವ ಸಂಭವ ತೋರುವುದಿಲ್ಲ. ಅಕಸ್ಮಾತ್ತಾಗಿ ನಡೆದಿರುವ ಈ ಸಂಗತಿಯನ್ನು ಕುರಿತು ನಿಮ್ಮೊಡನೆ ವಿಚಾರಿಸಬೇಕೆಂದಿರುವೆವು" ಎಂದನು. ನಾನು ಅದಕ್ಕೆ ಒಪ್ಪಿಕೊಂಡು ವಿಚಾರಣೆಗೆ ಸಿದ್ಧನಾಗಿ ನಿಂತೆನು. ಜಮಾದಾರನು ಚಿಕ್ಕತಂದೆಯವರ ಹೆಸರು, ಪ್ರಾಯ, ವೃತ್ತಿ ಮೊದಲಾದುವನ್ನು ಕೇಳಿಕೊಂಡು, ಕಾಗದದಲ್ಲಿ ಅದನ್ನು ಬರೆದುಕೊಂಡನು.

ಜಮಾದಾರ—ನಿಮ್ಮ ಚಿಕ್ಕತಂದೆಯವರನ್ನು ನೀವು ಈ ದಿನ ಎಷ್ಟು ಹೊತ್ತಿಗೆ ನೋಡಿದಿರಿ?

ನಾನು—ಅವರು ಈ ದಿನ 12 ಗಂಟೆಗೆ ಆರೋಗ್ಯವಂತರಾಗಿದ್ದರು.

ಜಮಾದಾರ—ಅಕಸ್ಮಾತ್ತಾಗಿ ಹೀಗಾಗಲು ನಿಮಗೆ ಏನಾದರೂ ಕಾರಣ ತೋರುವುದೇ?

ನಾನು—ಇಲ್ಲ.

ಜಮಾದಾರ—ಅವರಿಗೂ ನಿಮಗೂ ಪರಸ್ಪರ ವಿರೋಧ ಭಾವವಿದ್ದಿತೇ?

ನಾನು—ಇಲ್ಲ.

ಜಮಾದಾರ—ಈ ದಿನ ಉಣ್ಣದೆ ನೀವು ಆಫೀಸಿಗೆ ಹೋಗಲು ಕಾರಣವೇನು?

ಈ ಸಂಗತಿಯು ಜಮಾದಾರನಿಗೆ ಹೇಗೆ ತಿಳಿಯಿತೆಂದು ನಾನು ಆಶ್ಚರ್ಯಪಟ್ಟು ಒಂದು ನಿಮಿಷ ಮಾತಿಲ್ಲದವನಾದೆನು. ಆಫೀಸಿಗೆ ಹೋಗುವುದಕ್ಕೆ ವಿಳಂಬವಾದುದರಿಂದ ನಾನು ಉಂಡಂತೆ ಮಾಡಿ ಹೊರಟು ಹೋದೆನೆಂದು ಹೇಳಿದೆನು.

ಜಮಾದಾರ—ನಿಮ್ಮ ಮನೆಯ ವಿಷಯದಲ್ಲಿ ನಿಮಗೂ ಅವರಿಗೂ ಮಾತು ನಡೆಯುತ್ತಿದ್ದಿತೇ?

ನಾನು—ಹೌದು. ಆ ಮಾತುಗಳು ವಿನೋದದಿಂದ ಅಲ್ಲದೆ ವಿರೋಧದಿಂದ ನಡೆಯುತ್ತಿರಲಿಲ್ಲ.

ಜಮಾದಾರ—ಅವರೊಡನೆ ಸ್ವಲ್ಪ ಹಣವುಂಟೆಂದು ಸುದ್ದಿ ಇದೆ. ಇದು ನಿಜವೇ?

ನಾನು—ಅದನ್ನು ನಾನರಿಯೆ. ಅವರು ಬಂದಂದಿನಿಂದ ಮನೆಯ ವೆಚ್ಚದ ವಿಷಯದಲ್ಲಿ ಒಂದು ಚಿಕ್ಕಾಸೂ ಕೂಡ ಕೊಡದಿದ್ದುದರಿಂದ, ಅವರೊಡನೆ ಹಣವುಂಟು ಎಂದು ಹೇಳಲು ನನಗೆ ಸಂಶಯವಿದೆ.

ಜಮಾದಾರ—ನಿಮ್ಮ ಚಿಕ್ಕತಂದೆಯವರಿಗೂ ಹಳೆಯ ಪೇಟೆ ಶ್ಯಾಮರಾಯರಿಗೂ ದ್ವೇಷವಿದ್ದಿತೇ?

ನಾನು—ಶ್ಯಾಮರಾಯರನ್ನು ಕುರಿತು ಅವರಿಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ.

ಜಮಾದಾರ—ಯಾವ ಕಾರಣದಿಂದ?

ನಾನು—ಚಿಕ್ಕತಂದೆಯವರು ಚಿಕ್ಕದೊಂದು ಹುಡುಗಿಯನ್ನು ಅಂತರಂಗದಿಂದ ಮದುವೆಮಾಡಿ ಕೊಳ್ಳಲಿಕ್ಕೆ ಎಲ್ಲವನ್ನು ಒದಗಿಸಿದ್ದರು. ಆಗ ಸಮಾಜ ಸುಧಾರಕರಾದ ಶ್ಯಾಮರಾಯರು ಈ ವಿವಾಹ ವಿಷಯ ವಾಗಿ 'ಎಪ್ಪತ್ತು ವರ್ಷದ ಮುದುಕ ಇಪ್ಪತ್ತು ದಿವಸ ಬದುಕ'; 'ಹೆಣ್ಣಿಗೆ ಮನೆಯಾಯಿತು; ಗಂಡಗೆ ಮಸಣ

ಪಾಯಿತು: 'ಮುಪ್ಪಯ್ಯನ ಮದುವೆಯಲ್ಲಿ ಕಪ್ಪಯ್ಯನ ಮರಣ'; ಮೊದಲಾದ ಮಾತುಗಳನ್ನು ಕಂಡವರೊಡನೆ ಹೇಳಿ, ಆ ಮದುವೆ ನಡೆಯಕೂಡದೆಂದು ಮಾಡಿದರಂತೆ.

ಜಮಾದಾರ—ನಿಮ್ಮ ಚಿಕ್ಕತಂದೆಯವರಿಗೆ 'ಅಫೀಮು' ತಿನ್ನುವ ಅಭ್ಯಾಸವಿದ್ದಿತೇ?

ನಾನು—ನಾನರಿಯೆ; ಬಹುಶಃ ಇಲ್ಲವೆಂದು ಹೇಳಬಹುದು. ಕ್ರಯಕ್ಕೆ ಕೊಂಡು ಅದನ್ನು ಸೇವಿಸುವ ದುರಭ್ಯಾಸವಿರಲಿಲ್ಲ.

ಜಮಾದಾರ—ನೀವು ಅದನ್ನು ಸೇವಿಸುವಿರೇ?

ನಾನು—ಇಲ್ಲ.

ಜಮಾದಾರ—ಹಾಗಾದರೆ ಈ ಅಫೀಮಿನ ಸೀಸೆ ನಿಮ್ಮದೇ? ಹೀಗೆಂದು ಜಮಾದಾರನು ಒಂದು ಸೀಸೆಯನ್ನು ಎತ್ತಿ ತೆಗೆದು ನನ್ನ ಕೈಗೆ ಕೊಟ್ಟನು. ನಾನು ತಲೆ ಅಪ್ಪಳಿಸಿದಂತಾಗಿ, ಸೀಸೆಯನ್ನು ಹಿಡಿದು ನೋಡುವಂತೆ ಸ್ವಲ್ಪ ಹೊತ್ತು ನಿರುತ್ತರನಾದೆನು. ಉಪಾಯವಿಲ್ಲದವನಾಗಿ ಅದು ನನ್ನದೆಂದು ನಾನು ಒಪ್ಪಿದೆನು.

ಜಮಾದಾರ—ಅಫೀಮನ್ನು ನೀವು ಇಟ್ಟುಕೊಂಡುದೇಕೆ?

ನಾನು—ಊರಲ್ಲಿ ವಾಂತಿ ಭೇದಿ ಇದ್ದುದರಿಂದ ತತ್‌ಕ್ಷಣದ ಪರಿಹಾರಾರ್ಥವಾಗಿ ಅದನ್ನು ಮೊದಲೇ ತಂದು ಇಟ್ಟುಕೊಂಡಿದ್ದೆನು.

ಜಮಾದಾರನ ಮಾತುಗಳು ಇನ್ನೂ ಬಲವಾಗುತ್ತ ಬಂದುವು. ಇದರ ಪರಿಣಾಮವು ಏನಾಗುವುದೆಂದು ತಿಳಿಯುವುದಕ್ಕೆ ನನ್ನ ಮನಸ್ಸಿನಲ್ಲಿ ಕಳವಳವೂ ಭ್ರಾಂತಿಯೂ ಉಂಟಾದುವು.

ಜಮಾದಾರ—ನೀವು ನಿಮ್ಮ ಅಡಿಗೆಭಟ್ಟನನ್ನು ಎಲ್ಲಿಗೆ ಕಳುಹಿಸಿರುವಿರಿ?

ನಾನು—ಮುದ್ದಣ್ಣನು ಫಲಾಹಾರ ಕೊಂಡುಬಂದು, ಹಿಂತಿರುಗಿದ ಮೇಲೆ ನಾನು ಅವನನ್ನು ನೋಡಲಿಲ್ಲ.

ಜಮಾದಾರ—ಆಫೀಸಿಗೆ ಬಂದವನು ನಿಮ್ಮೊಡನೆ ಏನನ್ನಾದರೂ ಹೇಳಲಿಲ್ಲವೇ?

ನಾನು—ಈ ವಿಷಯವನ್ನು ಕುರಿತು ಅವನು ಹೇಳಲಿಲ್ಲ. ಬೀರುವಿನ ಬೀಗದ ಕೈ ತರಹೇಳಿದರೆಂದು, ನನ್ನಿಂದ ಅದನ್ನು ಕೊಂಡುಹೋದನು.

ಜಮಾದಾರ—ಅಫೀಮಿನ ಸೀಸೆಯು ಬೀರುವಿನೊಳಗೆ ಇದ್ದಿತೇ?

ನಾನು—ಹೌದು.

ಜಮಾದಾರ—ಮುದ್ದಣ್ಣನು ಈಗ ಎಲ್ಲಿಗೆ ಹೋಗಿರುವನು?

ನಾನು—ಅವನು ಮನೆಯಲ್ಲಿ ರಾತ್ರಿ ಮಲಗುವ ಪದ್ಧತಿ ಇಲ್ಲ.

ವಿಚಾರಣೆ ಆದ ಬಳಿಕ ಜಮಾದಾರನು ಪುನಃ ಚಿಕ್ಕತಂದೆಯವರನ್ನು ನೋಡುವುದಕ್ಕೆ ಹೋದನು. ಚಿಕ್ಕತಂದೆಯವರು ಕಣ್ಣು ಬಿಟ್ಟಿದ್ದರು; ಮಾತನಾಡುವುದಕ್ಕೆ ಪ್ರಯತ್ನಿಸುವಂತೆ ತುಟಿ ಅಲ್ಲಾಡಿಸುತ್ತಿದ್ದರು;

ಏನನ್ನೋ ಹುಡುಕುವಂತೆ ತಲೆದಿಂಬಿನ ಬಳಿಯಲ್ಲಿ ಕೈಬೆರಳನ್ನು ಸವರುತ್ತಿದ್ದರು. ದೂರಲೋಕಕ್ಕೆ ಪ್ರಯಾಣ ಮಾಡುವಷ್ಟು ಶಕ್ತಿಯಿಲ್ಲದುದರಿಂದ ಇಲ್ಲಿಯೇ ಉಳಿಯುವ ಸ್ಥಿತಿಯನ್ನು ತೋರಿಸಿದರು.

ಮೆಲ್ಲಮೆಲ್ಲನೆ ಒಂದೊಂದೇ ಮಾತು ಬಾಯಿಂದ ಹರಿಯುತ್ತ ಬಂತು. ಮೊದಲು ಮೊದಲು ಉಚ್ಚರಿಸಿದ ಅಕ್ಷರಗಳು ಸ್ಪಷ್ಟವಾಗಿ ಕೇಳಿಸಲಿಲ್ಲ. ಬ-ದು-ಕ—ಎಂಬೀ ಅಕ್ಷರಗಳು ಹೊರಟುವು. ಬದುಕಲಾರೆನೆಂದು ಹೇಳುವರೊ ಬದುಕುತ್ತಾರೆ ಎಂದು ಹೇಳುವರೊ ಎಂದು ತಿಳಿಯಲಿಕ್ಕೆ ಕಷ್ಟವಾಯಿತು. ಪುನಃ ಕಣ್ಮುಚ್ಚಿದರು: ಸ್ತಬ್ಧರಾದರು, ಜಮಾದಾರನು ಪಕ್ಕದಲ್ಲಿಯೇ ನಿಂತಿದ್ದನು. ಸ್ವಲ್ಪ ಹೊತ್ತಿನ ಮೇಲೆ ಮು-ಧ-ಣ ಎಂದು ಬಾಯಿಂದ ಉಸುರು ಹೊರಟಿತು.

ಜಮಾದಾರನು ಮುದ್ದಣ್ಣನ ಹೆಸರನ್ನು ಕಾಗದದಲ್ಲಿ ಬರೆದುಕೊಂಡನು. ಮುದ್ದು ಹಣ ಎಂದು ಬರೆಯಬೇಕಾಗಿ ಮತ್ತೊಬ್ಬ ಪೊಲೀಸಿನವನು ಆಗತಾನೇ ಸೂಚಿಸಿದನು. ಅಷ್ಟರಲ್ಲಿ 'ಡಾಕ್ಟರರು' ಸಮೀಪಕ್ಕೆ ಬಂದು ರೋಗಿಯನ್ನು ಆಗತಾನೆ ಮಾತನಾಡಿಸಿದರೆ, ಸ್ಥಿತಿಯು ಕೆಟ್ಟು ಹೋಗುವುದೆಂದು ಹೇಳಿ, ಚಿಕ್ಕತಂದೆಯವರ ಅಂತ್ಯೋಕ್ತಿಗಳನ್ನು ನಾವು ಕೇಳದಂತೆ ಮಾಡಿಬಿಟ್ಟರು. ಕೂಡಲೇ ಜಮಾದಾರನು ನನ್ನ ಬಳಿಗೆ ಬಂದು "ಈ ಅಕಸ್ಮಾತ್ತಾದ ವಿಷಯದಲ್ಲಿ ನಿಮ್ಮ ಮೇಲೆ ಸಂಶಯುವಿರುವುದರಿಂದ ನಿಮ್ಮನ್ನು 'ಕೈದು' ಮಾಡಿರುವೆನು" ಎಂದು ನಿರ್ದಯೆಯಿಂದ ಹೇಳಿದನು.

ನನ್ನ ತಲೆಯ ಮೇಲೆ ಸಿಡಿಲು ಬಿದ್ದಂತಾಯಿತು. ನಾಲಗೆಯು ಬಾಯಲ್ಲಿ ಬಿಗಿದುಕಟ್ಟಿದಂತಾಯಿತು. ಹಕ್ಕಿಗಳು ಬಾರದಂತೆ ಗದ್ದೆಯಲ್ಲಿಡುವ ಬೆರ್ಚಪ್ಪನ ಹಾಗೆ ನಾನು ಮಾತಿಲ್ಲದವನಾಗಿ ನಿಂತುಬಿಟ್ಟೆನು. ಚಿಕ್ಕ ತಂದೆಯವರ ಅಂದಿನ ಅವಸ್ಥೆಯೇ ಲೇಸೆಂದು ನನಗೆ ಆಗ ತೋರಿಬಂದಿತು. ನನ್ನನ್ನು 'ಸ್ಟೇಶನಿಗೆ' ಕೊಂಡು ಹೋಗುವುದಕ್ಕೆ ಜಮಾದಾರನು ಅಪ್ಪಣೆ ಕೊಟ್ಟನು. ನನ್ನನ್ನು ಅಲ್ಲಿಗೆ ಕೊಂಡೊಯ್ದರು.

ಮರುದಿನ ಬೆಳಗ್ಗೆ 'ಸ್ಟೇಶನಿನಲ್ಲಿ' ಅನೇಕರು ಬಂದು ನೆರೆದರು. 'ಪೊಲೀಸಿನವರು' ಮುದ್ದಣ್ಣನನ್ನು ಹಿಡಿದು ತಂದು ವಿಚಾರಿಸಿದರು. ಚಿಕ್ಕತಂದೆಯವರಿಗೆ 'ಅಫೀಮು' ತಿನ್ನುವ ಅಭ್ಯಾಸವಿದ್ದಿತೆಂದು ಅವನು ಒಪ್ಪಿದನು. ಹಾಗೂ ದಿನಂಪ್ರತಿ ಅದನ್ನು ಎಲ್ಲಿಂದಲಾದರೂ ಸಂಪಾದಿಸಿಕೊಂಡು ತಾನು ಚಿಕ್ಕತಂದೆಯವರಿಗೆ ಕೊಡುತ್ತಿದ್ದೆನು ಎಂದು ಮುದ್ದಣ್ಣನು ಹೇಳಿದನು. ಅದೂ ಅಲ್ಲದೆ 'ಕೊಲೆರಾ' ರೋಗದ ಶಮನಾರ್ಥವಾಗಿ ನಾನು ತಂದಿಟ್ಟ ಸೀಸೆಯ ಸಂಗತಿಯು ಚಿಕ್ಕತಂದೆಯವರಿಗೆ ಗೊತ್ತಿದ್ದಿತೆಂದೂ, ಅವರ ಮಾತಿನಂತೆ ಬೀಗದ ಕೈಯನ್ನು ನನ್ನಿಂದ ಕೊಂಡುಹೋಗಿ, ಸೀಸೆಯನ್ನು ಅವರ ಕೈಗೆ ಕೊಟ್ಟಿದ್ದೆನೆಂದೂ ಮುದ್ದಣ್ಣನು ಹೇಳಿಕೆ ಕೊಟ್ಟನು.

ಸ್ವಲ್ಪ ಹೊತ್ತಿನ ಮೇಲೆ ಚಿಕ್ಕತಂದೆಯವರು ಮರಣಾವಸ್ಥೆಯನ್ನು ಬಿಟ್ಟು ನಿದ್ರಾವಸ್ಥೆಗೂ ಜಾಗೃತಾವಸ್ಥೆಗೂ ಬಂದು ಎಚ್ಚರವಾಗಿ ಅವರ ಹೇಳಿಕೆಯ ಪ್ರಕಾರ 'ಅಫೀಮನ್ನು' ದೇಹದ ಅಂದಿನ ಅಜೀರ್ಣ ಪರಿಹಾರಾರ್ಥವಾಗಿ ತಾನೇ ತಿಳಿಯದೆ ಸ್ವಲ್ಪ ಹೆಚ್ಚು ತಿಂದುಬಿಟ್ಟಿದ್ದರೆಂದು ಚಿಕ್ಕತಂದೆಯವರು ಕೊಟ್ಟ ವಾಙ್ಮೂಲದ ಮೇಲೆ ನನಗೆ ಬಿಡುಗಡೆಯಾಯಿತು.

(ಸುವಾಸಿನಿ 1903)

ನನ್ನ ಚಿಕ್ಕತಂದೆಯುವರ 'ಉಯಿಲ್'

ನನ್ನ ಚಿಕ್ಕತಂದೆಯುವರಿಗೆ ನನ್ನೊಡನೆ ಉಳುಕೊಳ್ಳುವುದು ಸಮಾಧಾನವಾಗುತ್ತಿರಲಿಲ್ಲ. ನನ್ನ ಅಡಿಗೆಯವನಾದ ಮುದ್ದಣ್ಣನ ಬಲಾತ್ಕಾರಕ್ಕೆ ಅವರು ಒಂದು ತಿಂಗಳು ವರೆಗೆ ನಮ್ಮೊಟ್ಟಿಗೆ ಇದ್ದರು. ಮುದ್ದಣ್ಣನು ಎಂದಿನಂತೆ ಅವರ ಪರಿಚಾರಕನಾಗಿದ್ದನು. ಕೊನೆಗೆ ಚಿಕ್ಕತಂದೆಯುವರು ಊರುಬಿಟ್ಟು ಹೋಗುವ ಆಲೋಚನೆ ಮಾಡಿದರು. ಇದಕ್ಕೆ ಬಲವಾದ ಕಾರಣವಿತ್ತು. ಊರೊಳಗೆ ಪ್ಲೇಗ್ ರೋಗವು ಅಕಸ್ಮಾತ್ತಾಗಿ ಕಾಲುಹಾಕಿ, ಯುವಕರನ್ನೂ ಬಲಿಷ್ಟರನ್ನೂ ಕೊಂಡುಹೋಗುತ್ತಿತ್ತು. ಮನೆ ಮನೆಯಲ್ಲಿ ಇಲಿಗಳು ಸತ್ತು ಬಿದ್ದವು. ಇಲಿ ಬಿದ್ದ ಮನೆಗಳನ್ನು ಜನರು ಬಿಟ್ಟು ಓಡಿದರು. ಬಾಡಿಗೆ ಇಲ್ಲದೆ ದೊಡ್ಡ ದೊಡ್ಡ ಮನೆಗಳಲ್ಲಿ ಉಳುಕೊಳ್ಳುವುದಕ್ಕೆ ಬಡವರು ಮೊದಲು ಮಾಡಿದರು. ಈ ಸಮಯುವನ್ನೇ ನೋಡಿಕೊಂಡು ಮನೆಯ 'ಮಾಲಿಕರು' ತಮ್ಮ ಮನೆಯ ಬಾಡಿಗೆಯುನ್ನೂ ಕೊಡದೆ ಹಟಹಿಡಿದು ಉಳುಕೊಂಡಿದ್ದ ಜನಗಳನ್ನು ತಮ್ಮ ಮನೆಯಿಂದ ಓಡಿಸಿಬಿಡಲಿಕ್ಕೆ ಸತ್ತ ಇಲಿಗಳನ್ನು ಮನೆಯೊಳಗೆ ಹಾಕಿಬಿಟ್ಟರು. ದಿನಕ್ಕೆ ಹತ್ತರ ಪ್ರಕಾರ ಜನರು ಸಾಯತೊಡಗಿದರು. ಒಂದೆರಡು ದಿನಗಳಲ್ಲಿಯೇ ಈ ಸಂಖ್ಯೆ 50ಕ್ಕೆ ಮಿಾರಿತು. ಎಲ್ಲರೂ ಒಕ್ಕಲು ತೆಗೆದರು. ಹಳ್ಳಿಪಳ್ಳಿಗೆ ಪಲಾಯನ ಮಾಡಿದರು. ಅಂಗಡಿಗಳನ್ನು ಮುಚ್ಚಿಬಿಟ್ಟರು. ಒಕ್ಕಲು ಹೋಗುವ ಅಂಗಡಿಕಾರರು ಉಳಿದವರಂ ಧೈರ್ಯದಿಂದ ವ್ಯಾಪಾರ ಮಾಡುವುದನ್ನು ನೋಡಿ ಸಹಿಸಲಾರದೆ ಕಂಡಕಂಡವರೊಡನೆ 'ಅಂಗಡಿ ಬೀದಿಯಲ್ಲಿ ಎಲ್ಲಾ ಕಡೆಗಳಲ್ಲಿ ಇಲಿ ಬಿದ್ದಿವೆ' ಎಂದು ಸಾರುತ್ತ ಹೋದರು. ಶಾಲೆಯ ಉಪಾಧ್ಯಾಯರು ಒಂದೆರಡು ದಿನ 'ಡೆಸ್ಕುಗಳಿಗೂ' 'ಬೆಂಚುಗಳಿಗೂ' ಪಾಠ ಹೇಳಿ, ಉಪಾಯುವಿಲ್ಲದೆ ಹುಡುಗರಿಗೆ ಕೆಲಕಾಲ ರಜೆ ಕೊಟ್ಟರು. ಹೆಂಡತಿಯನ್ನು ತವರು ಮನೆಗೆ ಕಳುಹಿಸಿ ವಿರಹಪಡುತ್ತಿದ್ದ 'ಹಜೂರ್ ಗುಮಾಸ್ತನು' ತನ್ನ ಮನೆಯಲ್ಲಿ ಯಾರಿಗೋ ಜ್ವರವೆಂದು ಚೀಟನ್ನು ಕಳುಹಿಸಿ ನಿರಾಯಾಸವಾಗಿ ಹತ್ತು ದಿನಗಳ ರಜಾ ಪಡೆದು ಮಾನ ಮನೆಗೆ ನಡೆದುಬಿಟ್ಟನು. ದಿನ ಕಳೆದಂತೆ ಬ್ರಾಹ್ಮಣರಿಗೂ ರೋಗ ಸೋಂಕಿತು. ಔಷಧವಿಲ್ಲದ ರೋಗಕ್ಕೆ ಯಾರು ತಾನೇ ಹೆದರದೆ ಇರುವರು? ಕವಿರಾಜ ಗೋವರ್ಧನರು ಈ ರೋಗಕ್ಕೆ ಔಷಧವನ್ನು ಕಂಡುಕೊಂಡಿರುವೆನೆಂದು ಹೇಳಿ, ಕಲ್ಲುಸಕ್ಕರೆ ಬೆರೆಯಿಸಿದ ಹರಳೆಣ್ಣೆಯ ಸೀಸೆಗೆ 'ಛಾಪೆಯ ಟಿಕೆಟ್' ಒಂದನ್ನು ಹಚ್ಚಿ, ಮಾರಾಟದಿಂದ 300 ರೂಪಾಯಿ ಕೂಡಿಸಿಬಿಟ್ಟರು. ಜನರೆಲ್ಲರೂ ಭೀತರಾದರು. ದೇವಾಲಯಗಳಲ್ಲಿ ಪೂಜೆ ಪ್ರಸಾದಗಳು ನಡೆದುವು. ದೇವರೊಡನೆ ಮಿಾಸಲಿಟ್ಟು ಪರಿಹಾರವನ್ನು ಕೇಳಿದರು. "ಸತ್ತುಹೋದವರೆಲ್ಲಾ ನನ್ನ ಬಳಿಗೆ ಸೇರಿದರು. ಅತ್ತು ಪ್ರಯೋಜನವಿಲ್ಲ" ಎಂದು ದರ್ಶನಕಾಲದಲ್ಲಿ ದೇವರ ಉತ್ತರವು ಸಿಕ್ಕಿತು. ಇಂಗ್ಲೀಷ ಕಲಿತ ಹಲವು ಮಹನೀಯರು 'ದಾಕು ಹಾಕಿಸಿ' ಕೊಂಡರು. ಆದರೂ ರೋಗದ ಹಾವಳಿ ಒಂದಿಷ್ಟಾದರೂ ಕಡಿಮೆಯಾಗಲಿಲ್ಲ. ಅಲ್ಲಲ್ಲಿ 'ಪಾಸ್‌ಪೋರ್ಟುಗಳನ್ನು' ದಾರಿಗರಿಗೆ ಕೊಡುವುದಕ್ಕೆ ಶಿಬಂದಿಯನ್ನು ಒದಗಿಸಿದರು. ಆದರೂ ರೋಗವು ವೃದ್ಧಿಯಾಗುತ್ತ ಹೋಯಿತು.

ಈ ಅಪತ್ಕಾಲದಲ್ಲಿ ನನ್ನ ಚಿಕ್ಕತಂದೆಯುವರು ಏನು ಮಾಡಬೇಕೆಂದು ತಿಳಿಯಲಾರದೆ ಹೋದರು. "ಮುದುಕರಿಗೆ ಈ ರೋಗವು ಸೋಂಕಲಾರದು." ಎಂದು ಒಬ್ಬಿಬ್ಬರು ಅವರನ್ನು ಸಮಾಧಾನಪಡಿಸಿದ್ದರು.

ಆದರೆ ತಾನು ಮುದುಕನಲ್ಲವೆಂದು ತಾನು ಅಂತರ್ಯದಲ್ಲಿ ತಿಳಿದುದರಿಂದ, ಅನ್ಯರ ಮಾತುಗಳಿಂದ ಅವರ ಮನಸ್ಸಿಗೆ ಶಾಂತಿ ಉಂಟಾಗುತ್ತಿರಲಿಲ್ಲ. ಕೆಲವರು ಇವರನ್ನು ಸಾಯಂಕಾಲದಲ್ಲಿ ನೋಡಿ, "ಅಯ್ಯಾ! ಮುಖವು ಇಳಿದು ಹೋಗಿದೇನು?" ಎಂದು ಕೇಳುತ್ತಿದ್ದರು. ಪ್ರತ್ಯುತ್ತರವಾಗಿ ಮತ್ತೊಬ್ಬರು "ನನ್ನ ಚಿಕ್ಕಪ್ಪಯ್ಯ ನವರಿಗೆ ಬೇಸರ. ಹೋದವಾರ ಅವರು ಕಳೆದುಕೊಂಡ ಒಂದು ಆಣೆ ಇನ್ನೂ ಸಿಕ್ಕಲಿಲ್ಲವಂತೆ" ಎಂದು ಹೇಳುತ್ತಿದ್ದರು. ಅವರ ಹಿತಚಿಂತಕರಲ್ಲಿ ಯಾರೊಬ್ಬರು ದೂರದಲ್ಲಿದ್ದು ಇವರೊಡನೆ "ಮೈಯ್ಯಲ್ಲಿ ಆಲಸ್ಯವೇ? ಜ್ವರವುಂಟೇ?" ಎಂದು ಕೇಳುತ್ತಲೇ ನನ್ನ ಚಿಕ್ಕತಂದೆಯವರು ಸಿಟ್ಟಿಗೆದ್ದು ಬಾಯೊಳಗೆ ಅವರನ್ನು ಶಪಿಸು ತ್ತಿದ್ದರು. ನಮ್ಮ ಮನೆಗೆ ತಿಂಗಳಿಗೊಮ್ಮೆ ಬರುತ್ತಿದ್ದ ಕಟ್ಟಿಗೆ ಸಾವಕಾರ ಅಣ್ಣಪ್ಪ ಗೌಡರು ನಾನು ಇಲ್ಲದ ವೇಳೆಯಲ್ಲಿ ಮನೆಗೆ ಬಂದು ನನ್ನ ಚಿಕ್ಕತಂದೆಯವರೊಡನೆ, "ಕಟ್ಟಿಗೆ ಬೇಕಿತ್ತೇ?" ಎಂದು ಕೇಳಿ, ಇವರ ಬೈಗಳನ್ನು ತಲೆಯಮೇಲೆ ಹೊತ್ತುಕೊಂಡು ಹೋದರಂತೆ. ಆದರೂ ಚಿಕ್ಕತಂದೆಯವರು ಎದೆಗುಂದದೆ ಕೆಲವು ದಿವಸಗಳ ವರೆಗೆ ಊರಲ್ಲೇ ಇದ್ದರು. ಕೊನೆಗೆ ನಮ್ಮ ಅಗ್ರಹಾರದ ಬಳಿಯಲ್ಲಿ ಗೋಪಿವಲ್ಲಭಾಚಾರ್ಯರು ಎಂಭತ್ತು ವರ್ಷ ಪ್ರಾಯದಲ್ಲಿ ಪ್ಲೇಗ್ ತಗಲಿ ಸತ್ತರೆಂಬ ವರ್ತಮಾನವನ್ನು ಕೇಳುತ್ತಲೇ ನನ್ನ ಚಿಕ್ಕತಂದೆ ಯವರ ಮರಣ ಭೀತಿಗೆ ಪಾರವಿಲ್ಲದೆ ಹೋಯಿತು. ಈ ಮರಣದ ಮರುದಿನವೇ ನನ್ನ ಚಿಕ್ಕತಂದೆಯವರು ಎಲ್ಲಿಯೋ ಅದೃಶ್ಯರಾದರು.

ಭಾನುವಾರ ಮಧ್ಯಾಹ್ನ ನಾನು ಸಕಲಾವತಿಯೊಡನೆ ಚಿಕ್ಕತಂದೆಯವರ ಪ್ರಸ್ಥಾನವನ್ನು ಕುರಿತು ವಿಚಾರಿಸುತ್ತ ಕುಳಿತಿದ್ದೆನು. ಅಷ್ಟರಲ್ಲಿ ಮುದ್ದಣ್ಣನು ಒಂದು ಸರಕಾರಿ ಕಾಗದವನ್ನು ನನ್ನ ಕೈಯಲ್ಲಿ ಇಟ್ಟನು. ಕಾಗದವು ಈಪರಿಯಾಗಿತ್ತು.

"ಶನಿವಾರದಿನ ನಿಮ್ಮ ಮನೆಯಿಂದ ಹೊರಟು ಬಂದಿದ್ದ ಚಿಕ್ಕಪ್ಪಯ್ಯ ಯಾನೆ ಜೋಗಪ್ಪಯ್ಯನು ಈ 'ಸ್ಟೇಶನ್ನಿಗೆ' 'ಪಾಸಪೋರ್ಟ್' ತೆಗೆದುಕೊಳ್ಳಲಿಕ್ಕೆ ಬಂದ ಕಾಲದಲ್ಲಿ ಪ್ಲೇಗ್ ಸೋಂಕಿದ ಚಿಹ್ನೆಗಳನ್ನು ತೋರಿಸಿದುದರಿಂದಲೂ, ಸೊಂಟವನ್ನು ಮುಟ್ಟಿ ನೋಡುವುದಕ್ಕೆ ಬಿಡದಿದ್ದ ಕಾರಣದಿಂದಲೂ ಅವರನ್ನು ಇಲ್ಲಿ ತಡಸಿರುತ್ತೇವೆ. ಅವರ ಸ್ಥಿತಿಯು ಬಹಳ ಭಯಂಕರವಾಗಿದೆ. ಪ್ಲೇಗಿನ ಗುಡಿಸಲುಗಳಲ್ಲಿ ಯಾರೊಬ್ಬ ಪ್ರಯಾಣಿಕನು ಸತ್ತಪಕ್ಷಕ್ಕೆ ಸತ್ತವನ ವಾರಿಸ್ದಾರರಿಗೆ ಕೂಡಲೇ ವರ್ತಮಾನ ತಿಳಿಸಬೇಕೆಂದು ಸರಕಾರಿ ಹುಕುಂ ಇರುವುದರಿಂದ, ಅವರ ಆಸ್ತಿಯನ್ನು ಅವರ ಮರಣದ ಮುಂಚೆಯೇ ನಿಮಗೆ ತಿಳಿಸಿರುತ್ತೇವೆ.

(ಸಹಿ) ಎಸ್. ಪಿ. ಬಂಗರ್‌ಸನ್
ಡಿಸ್ಟ್ರಿಕ್ಟ್ ಕಲೆಕ್ಟರ್ ಒಫ್
ಪಾಸ್‌ಪೋರ್ಟ್ಸ್"

ಈ ಕಾಗದವನ್ನು ಓದುತ್ತಲೇ ನಾನು 'ಸ್ಟೇಶನಿ'ಗೆ ಹೊರಟೆನು. ಸಕಲಾವತಿಯು ನಾನು ಹೋಗುವುದನ್ನು ಅಡ್ಡೈಸುತ್ತ, ಮನಸ್ಸಿನಲ್ಲಿಯೇ ಏನನ್ನೋ ಗುಣುಗುಟ್ಟುತ್ತಿದ್ದಳು. ಮುದ್ದಣ್ಣನು ತಾನೂ ಬರುತ್ತೇನೆಂದು ಹೇಳಿ ಹೊರಟನು.

ನಾನು 'ಪ್ಲೇಗ್ ಸ್ಟೇಶನನ್ನು' ಮುಟ್ಟುವಾಗ ಸಾಯಂಕಾಲ ಆರು ಗಂಟೆ ಹೊಡೆದಿತ್ತು. ಚಿಕ್ಕತಂದೆ ಯವರು ತೆಂಗಿನ ಎಲೆಯ ಗುಡಿಸಲಿನಲ್ಲಿ ಮಲಗಿದ್ದರು. ಅವರನ್ನು ದೂರದಿಂದಲೇ ನಾವು ನಿಂತು ನೋಡಿದೆವು.

ಚಿಕ್ಕತಂದೆಯುವರು ನಮ್ಮನ್ನು ನೋಡಿ ನಗಾಡಿದರು. "ಈ ಪಾಪಿಗಳು ನನಗೆ ಪ್ಲೇಗ್ ಸೋಂಕಿದೆ ಎಂದು ಸುಳ್ಳುಮಾಡಿ. ನನ್ನನ್ನು ನಾನಾ ರೀತಿಯಲ್ಲಿ ಉಪದ್ರಪಡಿಸುವರು," ಎಂದು ನನ್ನೊಡನೆ ಮೊರೆಯಿಟ್ಟರು. ಅವರ ಮಾತುಗಳ ಸ್ವರವೇ ಬೇರೆಯಾಗಿತ್ತು. ನನಗೆ ಹತ್ತಿರ ಹೋಗಲು ಧೈರ್ಯಸಾಲಲಿಲ್ಲ.

"ಜ್ವರವುಂಟೇ?" ಎಂದು ನಾನು ಕೇಳಿದೆನು.

ಚಿಕ್ಕತಂದೆ:—ಜ್ವರ? ಯಾರಿಗೆ ಜ್ವರ? ನನಗೆ ಸ್ವಲ್ಪ ಚೈತನ್ಯ ಕಡಿಮೆಯಾಗಿದೆ. ಈ ಬಡ್ಡಿಮಕ್ಕಳು ನನ್ನಿಂದ ಇಪ್ಪತ್ತು ರೂಪಾಯಿ ಹಾರಿಸಬೇಕೆಂದು ಇದ್ದರು. ಅದನ್ನು ನಾನು ಕೊಡದೆ ಹೋದ್ದರಿಂದ, ಇಷ್ಟು ಸಂಕಷ್ಟಕ್ಕೆ ನನ್ನನ್ನು ಗುರಿಮಾಡಿದರು."

ಅಷ್ಟರಲ್ಲಿ ಕಾವಲಿದ್ದ ಪೊಲೀಸಿನವನು ನನ್ನ ಹತ್ತಿರ ಬಂದು, "ಅಯ್ಯಾ! ಪ್ಲೇಗ್ ರೋಗದಲ್ಲಿ ಮರಣಕ್ಕೆ ಮೊದಲು ರೋಗಿಯು ಸರಿಯಾಗಿ ಮಾತನಾಡುವನು. ಬುದ್ಧಿಭ್ರಂಶತೆ ಏನೇನೋ ಇರುವುದಿಲ್ಲ" ಎಂದನು.

ಈ ಮಾತುಗಳನ್ನು ಕೇಳಿ ಚಿಕ್ಕತಂದೆಯುವರು "ಓಹ್ಹೊ! ನಾನು ಸಾಯಲಾರೆನು. ನಾನು—ಓ ಕೆಂಪು ಮುಂಡಾಸ್! ನಾನು ನಿಮ್ಮ ಸಾವನ್ನು ನೋಡಿದ ಹೊರತು ಸಾಯಲಾರೆನು" ಎಂದು ಹೇಳಿ ಗುಡಿಸಲಿನ ಹೊರಬರುವುದಕ್ಕೆ ಪ್ರಯತ್ನಿಸುತ್ತಿದ್ದರು.

"ರೋಗಿಗೆ ಪಾಂತಿಯಾಗಿದೆ" ಎಂದು ಹೇಳಿ ಜಮೇದಾರನು ಒಂದು ಬಟ್ಟಲನ್ನು ರೋಗಿಯ ಇದಿರಿಗೆ ತಂದಿಟ್ಟನು. ರೋಗಿಯು ಅದನ್ನು ಬಿಸಾಡಿಬಿಟ್ಟನು; ಬಟ್ಟಲು ಚೂರು ಚೂರಾಯಿತು. "ಜ್ವರವು ರೋಗಿಯ ತಲೆಗೆ ಏರುತ್ತ ಬಂದಿದೆ. ಈಗ ರೋಗಿಯೊಡನೆ ನೀವು ಮಾತನಾಡುವುದು ಸರಿಯಲ್ಲ" ಎಂದು ಪೊಲೀಸಿನವನು ನನಗೆ ಚಿಕ್ಕತಂದೆಯವರೊಡನೆ ಮಾತನಾಡಗೊಡಿಸದೆ ಹೋದನು.

ನಾನು ಬಂಡಿಯನ್ನು ಹತ್ತಿ ಡಾಕ್ಟರನು ಇದ್ದೆಡೆಗೆ ಹೋಗಿ ವಿಚಾರಿಸಿದೆನು. ಡಾಕ್ಟರನು ಹಿಂದಿನ ರಿಪೋರ್ಟನ್ನು ನೋಡಿ, ಚಿಕ್ಕತಂದೆಯವರಿಗೆ 'ಪ್ಲೇಗ್' ಸೋಂಕಿದೆ ಎಂದು ದೃಢಪಡಿಸಿದನು. ಈ ಮಾತಿನಿಂದ ನನಗೆ ಸಂತೋಷವಾಯಿತೋ ಸಂತಾಪವಾಯಿತೋ ಈಗ ಹೇಳಲು ಬರುವುದಿಲ್ಲ. ನಾನು ಓಡತೊಡಗಿದೆನು. ಮನೆಗೆ ಹೋಗಿ ಸಕಲಾವತಿಗೆ ಇದನ್ನೆಲ್ಲಾ ನಾನು ತಿಳಿಸುತ್ತಲೇ, ಅವಳು ಬೆಚ್ಚಿಬಿದ್ದಳು. ನಾನು ಮರಳಿ ಅಲ್ಲಿಗೆ ಹೋಗಬಾರದೆಂದು ತನ್ನ ಮೇಲೆ ಆಣೆ ಇಟ್ಟು ನನ್ನನ್ನು ಬೇಡಿದಳು.

"ಚಿಕ್ಕತಂದೆ ಬದುಕುವುದೂ ಸಾಯುವುದೂ ದೇವರ ಇಚ್ಛೆ. ಅವರ ಕಡೆಗಾಲದಲ್ಲಿ ನಾನು ಅವರ ಹಾಸಿಗೆಯ ಹತ್ತಿರವಿಲ್ಲದಿದ್ದರೆ, ಜನಗಳು ಏನೆನ್ನುವರು?"

"ಹಾಸಿಗೆಯ ಹತ್ತಿರ ಹೋಗುವುದುಂಟೇ? ಅಯ್ಯೋ! ಜನಗಳು ಬಾಯಿಗೆ ಬಂದಂತೆ ಹರಟುವರು. ಅದು ಹೋಗಲಿ! ಪರರ ಮರಣವನ್ನು ನೋಡಿದರೆ, ಉಳಿದವರು ವೈರಾಗ್ಯ ಮನಸ್ಕರಾಗುವರಂತೆ. ಇದು ನಿಜವೇ?" ಎಂದು ಸಕಲಾವತಿಯು ಭೀತಿಯಿಂದ ಕೇಳಿದಳು.

"ವೈರಾಗ್ಯವು ಬರಬೇಕಾದರೆ ಮೊದಲು ಸಂಸಾರ ಜ್ಞಾನವು ಪೂರ್ಣವಾಗಬೇಕು. ಪ್ರಕೃತದಲ್ಲಿ ವೈರಾಗ್ಯವನ್ನು ಹೊದ್ದುಕೊಂಡ ಸಂತಪುರುಷರೆಲ್ಲರು ಸಂಸಾರ ಸಾಗರವನ್ನು ಈಸಿಕೊಂಡು, ಸೋತುಹೋಗಿ ವೈರಾಗ್ಯ

ತೀರವನ್ನು ಸೇರಿದರು. ಮರಣವನ್ನು ನೋಡಿದರೆ ಶ್ಮಶಾನ ವೈರಾಗ್ಯವು ಕೆಲವರಿಗೆ ಉಂಟಾಗುವುದು. ಅಂಥ ಮರಣದಿಂದ ಧನಪ್ರಾಪ್ತಿಯಾಗುವುದೂ ಉಂಟು. ಅನೇಕರು ಈ ವೈರಾಗ್ಯವನ್ನು ಆಶಿಸುವರು."

ಇಂತಹ ಸಂಭಾಷಣೆಯಿಂದಲೂ ಸುಖಸಲ್ಲಾಪದಿಂದಲೂ ನಾನು ಸಕಲಾವತಿಯ ಮನಸ್ಸನ್ನು ರಂಜಿಸುತ್ತ, ಅವಳ ಅಪ್ಪಣೆಯನ್ನು ಹೊಂದಿ, ರಾತ್ರಿಯೇ ಚಿಕ್ಕತಂದೆಯವರಿದ್ದ 'ಪಾಸ್‌ಪೋರ್ಟ್ ಸ್ಟೇಶನಿಗೆ' ನಡೆದೆನು.

ನನ್ನ ಚಿಕ್ಕತಂದೆಯವರಿಗೆ ಸೋಂಕಿದ ರೋಗವು ಪ್ಲೇಗ್ ಎಂದು ನಿಷ್ಕರ್ಷೆಯಾಯಿತು. ನಾನು 'ಪ್ಲೇಗ್ ಸ್ಟೇಶನಿಗೆ' ಮುಟ್ಟಿದಾಗ ರಾತ್ರಿ 8 ಘಂಟೆ ಹೊಡೆದಿತ್ತು. ಚಿಕ್ಕತಂದೆಯವರು ನಿದ್ದೆಹೋಗಿದ್ದರು. ಅದು ಅಲ್ಪ ನಿದ್ರೆಯೋ ದೀರ್ಘ ನಿದ್ರೆಯೋ ಎಂದು ಪರೀಕ್ಷಿಸಲು ಹತ್ತಿರ ಹೋಗುವಷ್ಟು ನಾನು ಧೈರ್ಯಗೊಳ್ಳಲಿಲ್ಲ. ನಾನು ರೋಗಿಯನ್ನು ಮುಟ್ಟಬಾರದೆಂದು ಸಕಲಾವತಿಯು ತನ್ನ ಮೇಲೆ ಆಣೆಯಿಟ್ಟು ನನಗೆ ಅಪ್ಪಣೆ ಮಾಡಿದ್ದಳು. ಮುದ್ದಣ್ಣನು 'ಸ್ಟೇಶನಿನ' ಹೊರಕ್ಕೆ ಚಿಂತೆಯಿಂದ ತಲೆಬಗ್ಗಿಸಿಕೊಂಡು ಕುಳಿತಿದ್ದನು. ಮುಪ್ಪಿನಲ್ಲಿ ದತ್ತಕ್ಕೆ ಪಡೆದುಕೊಂಡ, ಗಡ್ಡ ಮೀಸೆ ಬಂದ ಚಿಕ್ಕಮಗುವು ಸಾಕುತಂದೆಯ ಅನಿವಾರ್ಯವಾದ ಮರಣವನ್ನು ನೋಡಿ ಕಣ್ಣೀರು ಬಿಡುವಂತೆ, ಮುದ್ದಣ್ಣನು ತನ್ನೊಳಗೇನೇ ಮರುಗುತ್ತಿದ್ದನು. 'ಪೋಲೀಸ್ ಜಮೇದಾರನು' ಸಂಸಾರದ ನಶ್ವರತೆಯನ್ನು ಕುರಿತು ಮುದ್ದಣ್ಣನಿಗೆ ಉಪದೇಶ ಮಾಡುತ್ತಿದ್ದನು. "ಚಿಕ್ಕತಂದೆಯವರಿಗೆ ಹೇಗುಂಟು?" ಎಂದು ನಾನು ಜಮೇದಾರನೊಡನೆ ವಿಚಾರಿಸಿದೆನು. "ಸಾಯಂಕಾಲದ ವರೆಗೆ ಸರಿಯಾಗಿ ಮಾತನಾಡುತ್ತಿದ್ದರು. ಈಗ ಕೊಂಚ ಪ್ರಜ್ಞೆ ತಪ್ಪಿದೆ" ಎಂದು ಜಮೇದಾರರು ಹೇಳಿ ಸುಮ್ಮನಾದನು. "ಎಲ್ಲವೂ ದೈವೇಚ್ಛೆ" ಎಂದು ಹೇಳಿ ನಾನು ಅಲ್ಲಿಯೇ ಕುಳಿತುಬಿಟ್ಟೆನು. ಚಿಕ್ಕತಂದೆಯವರು ನಮ್ಮನ್ನೆಲ್ಲಾ ಬಿಟ್ಟುಹೋಗುವರು ಎಂಬ ಚಿಂತೆಯು ನನ್ನ ಮನಸ್ಸನ್ನು ತೊಂದರೆಗೊಳಿಸಲಿಲ್ಲ. ಅವರು ಒಂದು ವೇಳೆ ಜಗಲಿ ಬಿಟ್ಟು ಗಗನಕ್ಕೆ ಹಾರಿದರೂ ಅವರ ಶ್ಮಶಾನ ಕ್ರಿಯೆಗಳು ದಯಾಳುವಾದ ಸರಕಾರದವರಿಂದ ಸಾಗಿಸಲ್ಪಡುವುವು ಎಂಬ ನಿಶ್ಚಯವಿತ್ತು. ಅವರ ಉತ್ತರಕ್ರಿಯೆಗಳಿಗೋಸ್ಕರ ನನ್ನನ್ನು ಭಟ್ಟರು—ಮಾದಿಗರು ಚರ್ಮ ಸುಲಿದಂತೆ—ಸುಲಿದುಬಿಡುವರೋ ಎಂಬ ದುಃಖವು ವಿಪರೀತವಾಗಿತ್ತು. "ಗಂಡನ ಸಾವು ಒಂದು, ಮಂಡೆಯ ಗಾಯ ಒಂದು." ಅನ್ಯರ ಮರಣದಿಂದ ಮಹತ್ವವುಂಟಾಗುವುದಾದರೆ ಇಂತಹ ಸಂಸ್ಕಾರಗಳಲ್ಲಿ ಹಣವನ್ನು ವೆಚ್ಚಮಾಡಲು ಬೇಸರ ಬರುವುದಿಲ್ಲ. ನಾನು ಹತಭಾಗ್ಯನು, ಮರಣದಿಂದ ಮಹತ್ವ ಎಂಬ ಮಾತು ನನ್ನಲ್ಲಿ ಸರಿಹೋಗುವುದೋ ಇಲ್ಲವೋ ಹೇಳಬರುವುದಿಲ್ಲ. ಇತ್ತಲಾಗೆ ಪರರ ಮರಣದಿಂದ ನಮ್ಮ ಊರಲ್ಲಿ ಅನೇಕರು ಪ್ರಯೋಜನ ಹೊಂದಿದರೆಂಬುದು ನಿಜ. ಮಧ್ವರಾಯರ ಮರಣದಿಂದ ರಾಮಸೆಟ್ಟರಿಗೆ ನಿರಾಯಾಸವಾಗಿ ಸಿಕ್ಕಿತು—ಅವರ 'ವಿಮೆಯ' ಹೊನ್ನು. ಗಿರಿಧರಾಚಾರ್ಯರ ಮರಣದಿಂದ ಶ್ಯಾಮರಾಯರಿಗೆ ತೊಂದರೆ ಇಲ್ಲದೆ ಸಿಕ್ಕಿತು—ವಿಧವೆಯಾದ ಹೆಣ್ಣು. ಹೊನ್ನಾಗಲಿ ಹೆಣ್ಣಾಗಲಿ—ನನ್ನ ಪಾಲಿಗೆ ಸಿಕ್ಕುವ ಹಾಗೆ ಇರಲಿಲ್ಲ. ಹೊನ್ನುಹೆಣ್ಣು ಸಿಕ್ಕದವರಿಗೆ ಮಣ್ಣಾದರೂ ಸಿಕ್ಕುವುದಂತೆ. ಚಿಕ್ಕತಂದೆಯವರು ಸತ್ತರೆ ಮಣ್ಣಿನ ಮನೆ ಯಾರ ಪಾಲಿಗೆ ಹೋಗುವುದು ಎಂಬ ಯೋಚನೆಯಿಂದ ಇರುಳೆಲ್ಲ ನನ್ನ ಕಣ್ಣಿಗೆ ನಿದ್ದೆ ಹತ್ತಲಿಲ್ಲ.

ಹೆಣದ ಎಂಜಲನ್ನು ಬಯಸುವವನು ಪಾಪಿ ಎಂದು ಪಾಠಕಮಹಾಶಯರಲ್ಲಿ ಅನೇಕರು ಮೇಲೆ ಹೇಳಿದ ನನ್ನ ಅವಸ್ಥೆಯನ್ನು ನೋಡಿ ಬಾಯೊಳಗೆನೇ ನಗಾಡ ಬಹುದು. ಅಂತಹರಿಗೆ ನಾನು ಒಂದು ಮಾತನ್ನು ಹೇಳಬೇಕೆಂದಿರುವೆನು. ಮನುಷ್ಯನ ಮರಣಕ್ಕೋಸ್ಕರವೇ ಮನಮರುಗುವವರು ಈ ಕಾಲದಲ್ಲಿ ಕಡಿಮೆ.

ಸತ್ತವನು ನಮಗೇನೂ ಬಿಟ್ಟಿಲ್ಲ, ಕೊಟ್ಟಿಲ್ಲ, ಮುಂದೆ ನಮಗೇನು ಗತಿ? ಎಂದು ಅಳುವರಲ್ಲದೆ, ಸತ್ತವನ ಗತಿಯನ್ನು ಕುರಿತು ಒಬ್ಬರೂ ಲೆಕ್ಕಿಸುವುದಿಲ್ಲ. ಈ ಮಾತನ್ನು ಬಲಗೊಳಿಸುವುದಕ್ಕೆ ಕಾರಣಗಳಿವೆ. ಮನುಷ್ಯನು ಸಾಯುತ್ತಲೇ ಅವನ ನೆಂಟರಿಷ್ಟರು ಅವನನ್ನು ಕುರಿತು 'ಸತ್ತದ್ದು ಹೇಗೆ? ಹೊತ್ತದ್ದು ಯಾರು?' ಎಂದು ಕೇಳುವ ಬದಲಾಗಿ ಅವನ ಹೆಂಡತಿಗೆ ಮಕ್ಕಳಿಗೆ "ಸೊತ್ತುಂಟೇ? ವಿತ್ತವುಂಟೇ?" ಎಂದು ಮೊದಲು ಪ್ರಶ್ನೆ ಮಾಡಿ, 'ಬದುಕುಂಟು, ಭೂಮಿಯುಂಟು' ಎಂಬ ಉತ್ತರದಿಂದ ಸ್ವಲ್ಪ ಸಮಾಧಾನಚಿತ್ತರಾಗುವರು. ಹೀಗಿದ್ದುದರಿಂದ ನನ್ನ ಚಿಕ್ಕತಂದೆಯುವರ ಮರಣ ವಿಷಯದಲ್ಲಿ ನಾನು ಸ್ವಾರ್ಥಬುದ್ಧಿಯನ್ನು ತೋರಿಸಿದುದು ವಿಚಿತ್ರವೇನೂ ಅಲ್ಲ. ಆದುದರಿಂದ ಅವರನ್ನು ಆಗಾಗ ಮುಟ್ಟಿ ನೋಡಿ, ರೋಗಕ್ಕೆ ನಾನು ಬಲಿಬಿದ್ದು, ಮಕ್ಕಳು ಮರಿ ಹುಟ್ಟುವ ಮೊದಲೇ ನನ್ನ ಹೆಂಡತಿಯನ್ನು ಶಾರದಾಸದನದ ಸುಂದರ ಯುವತಿಯನ್ನಾಗಿ ಮಾಡಲು ನನಗೆ ಮನಸ್ಸು ಬರಲಿಲ್ಲ. ನಗಾಡುವವರು ನಗಾಡಲಿ; ಅವರು ಹೊತ್ತು ಗೊತ್ತು ಅರಿಯದೆ ನಗಾಡುವರು. ತಾಯಿ ಮಗುವಿಗೆ ಸ್ತನ್ಯಪಾನ ಮಾಡುವುದನ್ನು ನೋಡಿ ಅವರು ನಗಾಡುವರು. ತಂದೆ ಹೊಟ್ಟೆ ತುಂಬಾ ಉಂಡು ತೇಗುವುದನ್ನು ಕೇಳಿ ಅವರು ನಗಾಡುವರು. ಅಣ್ಣನು ಏಕಾಂತದಲ್ಲಿ ಹೆಂಡತಿಯೊಡನೆ ಮುದ್ದು ಮಾತುಗಳನ್ನು ಆಡುವುದನ್ನು ನೋಡಿ ಅವರು ನಗಾಡುವರು. ಬಡವನು ಭಾಗ್ಯ ತೋರಿಸಿದರೆ, ಕುರೂಪಿಯು ಕಾಂಚನ ತೊಟ್ಟುಕೊಂಡರೆ, ಭಟ್ಟರು ಬೂದಿ ಬಳಿದುಕೊಂಡರೆ ಅವರು ನಗಾಡುವರು. ಇದು ನಗಾಡುವುದೋ ಹಲ್ಲು ಕಿರಿಯುವುದೋ ನಾನು ಹೇಳಲಾರೆನು.

ಮಧ್ಯರಾತ್ರಿ ಕಳೆದುಹೋದ ಬಳಿಕ 'ಪೊಲೀಸ್ ಜಮೇದಾರನು' ನನ್ನ ಬಳಿಗೆ ಬಂದು "ಅಯ್ಯಾ! ನಿಮ್ಮ ಚಿಕ್ಕತಂದೆಯುವರು ಇನ್ನು ಉಳಿಯುವ ಹಾಗಿಲ್ಲ. ಮುಂದೆ ಏನು ಮಾಡಬೇಕೆಂದಿರುವಿರಿ?" ಎಂದು ಕೇಳಿದನು.

ಇದಕ್ಕೆ ಉತ್ತರವಾಗಿ "ಏನು ಮಾಡಬೇಕೆಂದು ನಾನರಿಯೆ. ನನಗೆ ಎಲ್ಲವು ವಿಪರೀತವಾಗಿ ಪರಿಣಮಿಸುತ್ತಿದೆ. ಮೊದಲೇ ಸಾಲವು ನನ್ನ ತಲೆಯೇರಿ ಹೋಗಿದೆ" ಎಂದು ನಾನು ಹೇಳಿದೆನು.

ಜಮೇದಾರ:—"ನಿಮ್ಮ ಚಿಕ್ಕತಂದೆಯುವರ ಕೈಯಲ್ಲಿ ಸ್ವಲ್ಪ ಹಣವಿರುವುದಲ್ಲವೇ? ನಿಮ್ಮ ಅಡಿಗೆಯವನು ಇದನ್ನೆಲ್ಲಾ ಬಲ್ಲನು. 'ಉಯಿಲನ್ನು' ಕುರಿತು ಮುದ್ದಣ್ಣನು ನಿಮ್ಮ ಚಿಕ್ಕತಂದೆಯುವರೊಡನೆ ಆಗಾಗ ವಿಚಾರಿಸುತ್ತಿದ್ದನು."

ನಾನು ಮಾತನಾಡದೆ ಜಮೇದಾರನು ಮುಂದರಿಸುವಂತೆ ಸುಮ್ಮನಾದೆನು.

ಜಮೇದಾರ:—"ಮುದ್ದಣ್ಣನು ಹುಚ್ಚನಂತೆ ತೋರುವನು ನಿಜ. ಆದರೆ ನಿಮಗೆ ಓನಾಮಾ ಹಾಕುವಷ್ಟು ಹುಚ್ಚುಬುದ್ಧಿಯು ಅವನಲ್ಲಿ ಉಂಟು. ಇಷ್ಟರ ಒಳಗೆ ಅವನು ಉಯಿಲನ್ನು ಜಾರಿಸದೆ ಇರಲಾರನು. ತಾವು ಎಚ್ಚರವಿಲ್ಲದಿದ್ದರೆ ಕೆಲಸವು ಕೆಟ್ಟುಹೋಗುವುದು."

ಈತನ ಮಾತುಗಳಿಂದ ನಾನು ಮೋಸಹೋಗಬಹುದೋ ಇಲ್ಲವೋ ಎಂದು ನನ್ನಲ್ಲಿಯೇ ವಿಚಾರಿಸುತ್ತಿದ್ದೆನು. ಅಷ್ಟರಲ್ಲಿ ಜಮೇದಾರನು ಮುದ್ದಣ್ಣನಿದ್ದ ಎಡೆಗೆ ಹೋಗಿ ಬರುವೆನೆಂದು ಹೇಳಿ, ಕೆಲವು ನಿಮಿಷಗಳ ಬಳಿಕ ನನ್ನ ಹತ್ತಿರಕ್ಕೆ ಬಂದನು.

ಜಮೇದಾರ:—"ನಾನು ಮುದ್ದಣ್ಣನ ಮೈಯನ್ನು ಹುಡುಕಿ ನೋಡಿದೆನು. ಉಯಿಲನ್ನು ಅವನು ಎಲ್ಲಿಯೋ ಅಡಗಿಸಿರಬಹುದು. ತಮಗೆ ಸಿಕ್ಕುವ ಹಣ ಅನ್ಯರ ಪಾಲಿಗೆ ಹೋಗುವುದೆಂದು ನನಗೆ ಚಿಂತೆ."

ನಾನು ಏನು ಹೇಳಬೇಕೆಂದು ತಿಳಿಯದೆ ಸುಮ್ಮನಾದೆನು. ಮುದ್ದಣ್ಣನು ಮೊದಲಿಂದಲೂ ಚಿಕ್ಕತಂದೆಯವರ ಹಣವನ್ನು ಆಶಿಸಿ ಉಪಾಯ ಮಾಡುತ್ತಿದ್ದನು. ಜಮೇದಾರನ ಮಾತುಗಳು ನಿಜವಾದರೆ ಹಣವು ಮುದ್ದಣ್ಣಗೆ; ಹಣವು ನನ್ನ ಪಾಲಿಗೆ. ಇದನ್ನು ಕುರಿತು ಮುದ್ದಣ್ಣನೊಡನೆ ವಿಚಾರಿಸಬೇಕೆಂದು ನಾನು ಆಲೋಚಿಸುವಷ್ಟರಲ್ಲಿ, ಮುದ್ದಣ್ಣನು ನಿದ್ದೆಯಿಂದ ಎಚ್ಚರವಾದಂತೆ, ತಲೆಯನ್ನು ತುರಿಸುತ್ತ ನನ್ನ ಬಳಿಗೆ ಬಂದು, "ಅಯ್ಯಾ! ನನ್ನ ಮೈಯಲ್ಲಿ ಹುಳುಹರಿದಂತಾಗುವುದು. ಯಾರೋ ನನ್ನ ಮೈಮೇಲೆ, ಬಂದು ಚಕ್ಕಲಗಲ ಮಾಡಿದಂತೆ ತೋರುವುದು" ಎಂದನು.

ಜಮೇದಾರನು ಈ ಮಾತನ್ನು ಕೇಳುತ್ತಲೇ "ನಿನಗೆ ಮೈಮೇಲೆ ಬಂತೇ? ಸರಿ! ಸರಿ! ಸತ್ತವರು ನಿಮ್ಮನ್ನು ಹಿಡಿದಿರುವರು. ಅವರು ಉಯಿಲನ್ನು ಕೇಳುವುದಕ್ಕೆ ಬಂದರೋ ಏನೋ?" ಎಂದು ಹೇಳಿದನು. ಮುದ್ದಣ್ಣನು ಅಲ್ಲಿ ನಿಲ್ಲದೆ ಹಿಂದೆಗೆದನು.

ಮರುದಿನ ಬೆಳಿಗ್ಗೆ ಡಾಕ್ಟರರು ಚಿಕ್ಕತಂದೆಯವರನ್ನು ದೂರದಿಂದ ನೋಡಿ, 'ಪ್ಲೇಗ್ ಸ್ಟೇಶನ್ ಆಫೀಸರರೊಡನೆ' ಮಾತನಾಡಿ, "ಚಿಕ್ಕಪ್ಪನವರು ಕಾಲಾಧೀನರಾದರು" ಎಂದು ಹೇಳಿ ಹೋದರು. ಹೆಣವನ್ನು ಎತ್ತುವುದಕ್ಕೆ ಜಾತಿ ಗೃಹಸ್ಥರಾಗಲಿ, ಕುಲಪುರೋಹಿತರಾಗಲಿ ಬರುವ ಸಂಭವ ತೋರಲಿಲ್ಲ. ನಾನು ಮತ್ತು ಮುದ್ದಣ್ಣ—ಇಬ್ಬರಿಂದ ಕೆಲಸವು ಸಾಗುವ ಹಾಗೆ ಇರಲಿಲ್ಲ. ಜಮೇದಾರನು ಮುಂದೆ ಬಂದು "ಇನ್ನು ಏನು ಮಾಡಬೇಕು?" ಎಂದು ಮೆಲ್ಲನೆ ಕೇಳಿದನು. ನಾನು ಯೋಚನೆಯಲ್ಲಿ ಬಿದ್ದೆನು. ಅನಾಥ ಪ್ರೇತ ಸಂಸ್ಕಾರದಿಂದ ಕೋಟಿ ಯಜ್ಞ ಫಲವು ಸಿಕ್ಕುವಂತೆ ಸರಕಾರದವರು ತಮ್ಮ ಕಡೆಯಿಂದ ದೀಕ್ಷಿತರಾಗಿ ನಿಯಮಿಸಿದ ಕೃಷ್ಣಕಾಯರಾದ ಪುರೋಹಿತರ ಹಸ್ತದಿಂದ ನಮ್ಮ ಚಿಕ್ಕತಂದೆಯವರಿಗೆ ಪವಿತ್ರವಾದ ಸಮಾಧಿಯು ದೊರೆಯುವುದೋ ಎಂದು ನಾನು ಸಂಶಯ ಪಡುವಷ್ಟರಲ್ಲಿ ನಮ್ಮ ಊರಿನ ಮಾದಣ್ಣನವರು ಅಲ್ಲಿಗೆ ಆಕಸ್ಮಾತ್ತಾಗಿ ಬಂದರು. ಮಾದಣ್ಣನವರು ಏಕೆ ಬಂದರೆಂದು ನನಗೆ ಮೊದಲು ತಿಳಿಯಲಿಲ್ಲ. ಮಾದಣ್ಣನವರು ನಮ್ಮ ಊರಿನ ಬಲಾಢ್ಯರಾದ ಮನುಷ್ಯರು. ಇವರಿಗೂ ನಮ್ಮ ಚಿಕ್ಕತಂದೆಯವರಿಗೂ ಆಂತರಿಕವಾದ ಸ್ನೇಹವಿತ್ತು. ಅದಕ್ಕೋಸ್ಕರ ಅವರು ಚಿಕ್ಕತಂದೆಯವರ ಕಡೆಗಾಲದಲ್ಲಿ ಅವರನ್ನು ದೃಷ್ಟಿಸಬೇಕೆಂದು ಬಂದಿರುವರೆಂದು ನಾನು ತಿಳಿದೆನು. ಮಾದಣ್ಣನವರಿಗೆ ಈಗ ಮೂರು ಜನ ಹೆಣ್ಣುಮಕ್ಕಳು. ಹಿರಿಯವಳು ಬಾಲವಿಧವೆಯಾಗಿದ್ದಳು. ನಡುವಿನವಳು ಅತಿಸುಂದರಿ. ಗಂಡನು ಅವಳನ್ನು ಬಿಟ್ಟಿದ್ದನೋ, ಅವಳು ಗಂಡನನ್ನು ಬಿಟ್ಟಿದ್ದಳೋ ಇದುವರೆಗೆ ತಿಳಿದು ಬರಲಿಲ್ಲ. ಹೇಗೂ ಹೆಣ್ಣು ತೌರುಮನೆಯಲ್ಲಿಯೇ ಇದ್ದಳು. ಕಿರಿಯವಳು ಮನೆಯಲ್ಲೇ ಇದ್ದರೂ, ಎರಡು ವರ್ಷಗಳಿಗೊಮ್ಮೆ ಗಂಡನ ಮನೆಗೆ ಹೋಗಿ, ಮೂರು ತಿಂಗಳು ಉಳುಕೊಂಡು, ತೊಟ್ಟಿಲ ಮಗುವಿನೊಡನೆ ತೌರುಮನೆಗೆ ಬರುತ್ತಲಿದ್ದಳು. ಇನ್ನೊಬ್ಬಳು ತೀರಿ ಹೋಗಿದ್ದಳು. ಅದು ಕಾರಣದಿಂದ ಮಾದಣ್ಣನವರಿಗೆ ಉಳಿದ ಹೆಣ್ಣುಮಕ್ಕಳ ಮೇಲೆ ಬಹಳ ಪ್ರೇಮ. "ಗೋವಿಂದಾ! ನಿನ್ನ ದಯೆಯಿಂದ ನನಗೇನೂ ಕಡಮೆ ಇಲ್ಲ. ನನಗೆ ಭೂಮಿ ಬೇಡ, ಆಸ್ತಿ ಬೇಡ, ಈ ಹೆಣ್ಣು ಮಕ್ಕಳಿಗೆ ದೀರ್ಘಾಯುವನ್ನು ಕೊಡು!" ಎಂದು ವರ್ಷ ವರ್ಷ ರಥೋತ್ಸವಕಾಲದಲ್ಲಿ ಅವರು ದೇವರೊಡನೆ ಬೇಡುತ್ತಿದ್ದರು. ಈ ಹೆಣ್ಣು ಮಕ್ಕಳು ಹುಟ್ಟಿದಂದಿನಿಂದ ಮಾದಣ್ಣನವರ ಕೀರ್ತಿಯು ದಿಗಂತವಾಗಿ ಪಸರಿಸುತ್ತಲಿತ್ತು. ಸರಕಾರದ ದೊಡ್ಡ

ದೊಡ್ಡ ಹುದ್ದೆದಾರರು ಈತನ ಆಜ್ಞೆಗಳನ್ನು ಶಿರಸಾವಹಿಸುತ್ತಿದ್ದರು. ಜಮೀನಿನ ಜವಾಬ್ದಾರಿಯ ಮೇಲೆ ಹಣವನ್ನು ಬಡ್ಡಿಗೆ ಕೊಡದ ಪರಮಲೋಭಿಗಳು ಸಹಾ ಇವನ ಒಂದು ಮಾತಿನ ಮೇಲೆ ಒತ್ತೆ ಕೇಳದೆ, ಇವನಿಗೆ ಧಾರಾಳವಾಗಿ ಸಾಲ ಕೊಡುತ್ತಿದ್ದರು. ಬಿಳೀ ಜನರ ಸಹಾಯವು ಯಾವ ಕಾರ್ಯದಲ್ಲಾದರೂ ದೇಶೀಯರಿಗೆ ಅವಶ್ಯವಿದ್ದರೆ, ಅದನ್ನು ಮಾಡಿಸುವ ಭಾರವು ಇವರ ಹೆಗಲ ಮೇಲೆ ಇತ್ತು,

ಮಾದಣ್ಣನವರನ್ನು ನಾನು ತಲೆಯೆತ್ತಿ ನೋಡಿ, "ರಾಯರೇ! ನೀವು ಬಂದುದು ಚೆನ್ನಾಯಿತು" ಎಂದೆನು.

ಮಾದಣ್ಣನವರು ಸಮೀಪಕ್ಕೆ ಬಂದು, "ನಿಮ್ಮ ಚಿಕ್ಕತಂದೆಯುವರಿಗೆ ಹೇಗಿದೆ?" ಎಂದು ಕೇಳಿದನು.

ಜಮೇದಾರನು "ಚಿಕ್ಕತಂದೆಯುವರೋ? ನೆಟ್ಟಗಿದ್ದಾರೆ" ಎಂದು ಹೇಳಿ ನೆಗಾಡಿದನು.

ನಾನು ತಲೆಯುಲ್ಲಾಡಿಸಿ ಒಳಗಿನ ಅವಸ್ಥೆಯನ್ನು ಹೊರಪಡಿಸಿದೆನು.

ಮಾದಣ್ಣನವರು ತಲೆಯ ಮೇಲೆ ಕಲ್ಲು ಬಿದ್ದಂತಾಗಿ ಸುಮ್ಮನೆ ನಿಂತರು. "ಗೋವಿಂದಾ! ನಮ್ಮ ಹಾಳು ದೆಶೆ. ಏನು ಸ್ವಾಮಿ ಮನುಷ್ಯನ ಅವಸ್ಥೆ? ಎರಡು ದಿನದ ಹಿಂದೆ ನಮ್ಮ ಮನೆಗೆ ಬಂದು ಮಾತನಾಡಿ ಹೋದ ಪುಣ್ಯಾತ್ಮರು ಈ ಹೊತ್ತು ಎಲ್ಲಿಯೋ? ನಿಮ್ಮ ಚಿಕ್ಕತಂದೆಯುವರು ಬದುಕಿರಬಹುದೆಂದು ನಾನು ಒಮ್ಮೆ ತಿಳಿದೆನು. ನೀವು ಯಾರೂ ಗೋಳಿಡುವುದನ್ನು ಕೇಳಲಿಲ್ಲ. ಅವರೊಡನೆ ಎರಡು ಮಾತು ಆಡುವುದಕ್ಕೂ ಆಗದೆ ಹೋಯಿತು" ಎಂದು ದುಃಖಿಸಿದರು.

ಮುದ್ದಣ್ಣನು "ಮನಸ್ಸಿದ್ದರೆ ಅವರು ಇದ್ದಲ್ಲಿಗೆ ಹೋಗಿ ತಾವು ಮಾತನಾಡ ಬಹುದಲ್ಲವೇ" ಎಂದನು.

ಮಾದಣ್ಣನವರು ವ್ಯಸನಪಟ್ಟರು; ಅಲ್ಲಿ ನಿಲ್ಲಲಾರದಷ್ಟು ವ್ಯಸನಪಟ್ಟರು. ಅವರು ದುಃಖದಿಂದ ಮನೆಯ ಕಡೆಗೆ ಹೆಜ್ಜೆಯಿಡುವುದನ್ನು ನೋಡಿ "ರಾಯರೇ! ಶವ ಎತ್ತುವುದಕ್ಕೆ ಜನಗಳಿಲ್ಲ. ತಾವೂ ಹೋಗುವಿರೇ?" ಎಂದೆನು.

ಮಾದಣ್ಣ:—"ನಾನು ಈಗ ಹೋಗದೆ ಉಪಾಯವಿಲ್ಲ; ಅಗತ್ಯವಾದ ಕೆಲಸವಿದೆ. ಇನ್ನೊಂದು ಸಂದರ್ಭದಲ್ಲಿ ನಾನು ಬರುತ್ತೇನೆ. ನನ್ನನ್ನು ಕ್ಷಮಿಸಬೇಕು—ಇನ್ನೊಂದು ಸಲ ನಿಜವಾಗಿ—"

ನಾನು ಅವರ ಕೈ ಹಿಡಿದು "ರಾಯರೇ! ನಿಮ್ಮ ಮನೆಗೆ ನಾವು ಆಗಾಗ ಬರುತ್ತಾ ಇರಬೇಕು ಎಂದು ಮನಸ್ಸಿದ್ದರೆ ತಾವು ಈಗ—" ಎಂದು ಅಲ್ಲಿಯೇ ತಡೆದೆನು.

ಈ ಮಾತಿನಿಂದ ಮಾದಣ್ಣನವರು ಸ್ವಲ್ಪ ಬೇನೆಗೊಂಡಂತಾಗಿ ಮರಳಿ ಬಂದರು. ಶವಸಂಸ್ಕಾರಕ್ಕೆ ವಿಳಂಬ ಮಾಡುವುದು ನ್ಯಾಯವಾಗಿರಲಿಲ್ಲ. ಪ್ಲೇಗ್ ಗುಡಿಸಲಿಗೆ ಆಧಾರವಾಗಿದ್ದ ಎರಡು ಬಿದಿರುಗಳನ್ನು ಈಚೆಗೆ ಸೆಳೆದು, ಅವನ್ನು ನಿಚ್ಚಣಿಗೆಯಂತೆ ಕಟ್ಟಿ, ಕದಳೀಪತ್ರದ ಬದಲಾಗಿ ಪಾಸ್‌ಪೋರ್ಟ್ ಬೂಪಗಳ ಪತ್ರಗಳನ್ನು ಹಾಸಿ, ಚಿತಿಯನ್ನು ಒದಗಿಸಿದೆವು. ಆ ಮೇಲೆ ನಾವು ಮೂವರು ಇಹಲೋಕದ ಚಿಂತನೆಯನ್ನು ಬಿಟ್ಟು, ನಾರಾಯಣ ಸ್ಮರಣೆಯಿಂದ ಶವವನ್ನು ಹೇಗೋ ಎತ್ತಿಕೊಂಡು, ಹತ್ತಿರದ ಸುಡುಗಾಡಿಗೆ ಹೋದೆವು, ಪುರೋಹಿತರು ಆ ಸ್ಥಾನವನ್ನು ಮೊದಲೇ ಅಲಂಕರಿಸಿದ್ದರು. ಚಿಕ್ಕತಂದೆಯುವರ ಅವಶೇಷವನ್ನು ಪುರೋಹಿತರ ಹಸ್ತಕ್ಕೂ ಅಗ್ನಿಯ ಮುಖಕ್ಕೂ ಕೊಟ್ಟು ನಾವು ಈಚೆಗೆ ಸರಿದೆವು.

ನನ್ನ ಚಿಕ್ಕತಂದೆಯವರ ಅಕಾಲಿಕ ಮರಣದ 3 ತಿಂಗಳ ವರೆಗೆ ನಾನು ಏನೊಂದೂ ತೊಂದರೆಗೊಳ್ಳದೆ ಇದ್ದೆನು. ಮುದ್ದಣ್ಣನು ನಮ್ಮನ್ನು ಬಿಟ್ಟುಹೋಗದೆ ನಮ್ಮೊಡನೆ ಉಳುಕೊಂಡಿದ್ದನು. ಸಕಲಾವತಿಯು ಅಕಸ್ಮಾತ್ತಾಗಿ ಅಸ್ವಸ್ಥದಲ್ಲಿ ಬಿದ್ದಳು. ಅವಳ ಕಾಹಿಲೆಯು ನೂತನ ತರದ್ದಾಗಿತ್ತು. ಅನೇಕರು ಅನೇಕ ಕಾರಣಗಳನ್ನು ಕೊಟ್ಟರು. ಒಬ್ಬರು "ಇದು ಇಷ್ಟರೋಗ (Hysteria); ಮಕ್ಕಳು ಹುಟ್ಟದಿದ್ದರೆ ಇದು ವಿಪರೀತವಾಗಿ ಪರಿಣಮಿಸುತ್ತಿದೆ" ಎಂದರು. ನಾನು ಅವರ ಮಾತನು ಕೇಳಿ ಹೆದರಿಕೆಯಿಂದ ಒಂದು ವಾರದವರೆಗೆ ಅವಳನ್ನು ಮನೆಯಲ್ಲಿಯೇ ಮುಚ್ಚಿಟ್ಟೆನು; ಪುರುಷರ ಮುಖವನ್ನು ನೋಡಬಿಡಲಿಲ್ಲ. ಕಾಹಿಲೆ ಏನೂ ಕಡೆಮೆಯಾಗಲಿಲ್ಲ. ಒಬ್ಬಿಬ್ಬರು "ಇದೆಲ್ಲಾ ನಿಮ್ಮ ಚಿಕ್ಕತಂದೆಯವರ ಉಪದ್ರ. ಅವರ ಉತ್ತರಕ್ರಿಯೆಗಳು ಸರಿಯಾಗಿ ನಡೆಯದೆ ಇದ್ದರೆ ಹೀಗಾಗಬಹುದು" ಎಂದು ಹೇಳಿದರು. ಅವರ ಮರಣದ 4ನೆಯ ತಿಂಗಳಲ್ಲಿ ಚಿಕ್ಕತಂದೆಯವರ ಉತ್ತರಕ್ರಿಯೆಗಳನ್ನು ನಾನು ಮಾಡತೊಡಗಿದೆನು. ನಾನು ಉತ್ತರಕ್ರಿಯೆಗಳನ್ನು ಪ್ರಾರಂಭಿಸಿರುವೆನೆಂದು ಕೇಳಿ ನನ್ನ ಸ್ನೇಹಿತರಲ್ಲಿ ಕೆಲವರು "ರಾಯರೇ! ನಿಮ್ಮ ಚಿಕ್ಕತಂದೆ ಯಾರ ಮೈಮೇಲೆ ಬರುವರಂತೆ?" ಎಂದು ನನ್ನೊಡನೆ ಕೇಳುತ್ತ ನಗುಮೊಗವನ್ನು ತೋರಿಸುತ್ತಿದ್ದರು. ಮನೆಯಲ್ಲಿ ಕಾಹಿಲೆಯಿಂದ ನಾನು 'ಆಫೀಸಿಗೆ' ಕ್ರಮವಾಗಿ ಹೋಗುವುದು ತಪ್ಪಿತು. ಸಕಲಾವತಿಯ ದೇಹವು ಕ್ಷೀಣವಾಗುತ್ತ ಬಂತು; 'ಆಫೀಸ್' ಕೆಲಸವು ಉಳಿದುಳಿದು ವೃದ್ಧಿಯಾಗುತ್ತ ಹೋಯಿತು. ನಡುವಿನಲ್ಲಿ ಉಪದ್ರವವು ಮೊಳೆಯಿತು. ನಾನು ಚಿಕ್ಕತಂದೆಯವರಿಂದ 500 ರೂಪಾಯಿ ಸಾಲ ಹೊಂದಿದ್ದೆನೆಂದು ಅವರ ಉಯಿಲಿಂದ ತೋರುವುದೆಂಬುದಾಗಿ, ಉಯಿಲಿನ ಹಕ್ಕುದಾರರಾದ ಮಾದಣ್ಣನವರು ನನ್ನ ಮೇಲೆ ದಾವಾ ತಂದರು. ನನಗೆ ಉಗುರುಹುಣ್ಣಾದ ಕಾಲಮೇಲೆ, ಒನಕೆಯು ಪೆಟ್ಟುಬಿದ್ದಂತಾಯಿತು.

ನಾನು ಯಥಾರ್ಥವಾಗಿ ಚಿಕ್ಕತಂದೆಯವರಿಂದ ಸಾಲ ಎತ್ತಿರಲಿಲ್ಲ. ಅವರು ಉಯಿಲಿನಲ್ಲಿ ಏನೇನು ಗೀಚಿಟ್ಟಿದ್ದರೋ ನನಗೆ ತಿಳಿದಿರಲಿಲ್ಲ. ಬಲಾಢ್ಯರಾದ ಮಾದಣ್ಣನವರು ನನ್ನ ಮೇಲೆ ಏಕೆ ಮುನಿದರೋ ನಾನು ಅರಿಯೆನು. ದಶಂಬರ 1ನೆಯ ತಾರೀಖಿಗೆ ದಾವೆಯು ವಿಚಾರಣೆಗೆ ಇಟ್ಟಿತ್ತು. ಮೊದಲಿನ ಮುನಿಸಿಫರು ಹಳೆಯ ಅಂಗಿ, ಹರಕು ಮುಂಡಾಸು ಇಟ್ಟುಕೊಂಡರೂ, ನ್ಯಾಯಶೀಲರಾಗಿದ್ದರು; ತಾನೇ ಮೂರು ನಾಮಾ ಹಾಕಿದರೂ, ನಮ್ಮಂತಹ ಬಡವರಿಗೆ ನಾಮಾ ಹಾಕುತ್ತಿರಲಿಲ್ಲ. ಹೊಸ ಮುನಿಸಿಫರ ಮರ್ಜಿ ನನಗೆ ಗೊತ್ತಿರಲಿಲ್ಲ. ಅವರು ಇಲ್ಲಿ ಬಂದಕೂಡಲೇ ಮಾದಣ್ಣನವರ ಕ್ಷೇಮಸಮಾಚಾರವನ್ನು ಕೇಳಿದ್ದರಂತೆ; ಮಾದಣ್ಣನವರ ಮನೆಯ ವರೆಗೆ ಯಾತ್ರೆಮಾಡಿ ಬಂದಿದ್ದರೆಂದೂ ಬಾಜಾರಿನಲ್ಲಿ ವರ್ತಮಾನವಿತ್ತು. ಅವರು ಮುಂಡಾಸು ಇಟ್ಟುಕೊಳ್ಳುತ್ತಿರಲಿಲ್ಲ; ಟೊಪ್ಪಿ ಹಾಕುತ್ತಿದ್ದರು. ಇದೆಲ್ಲಾ ನನಗೆ ಸ್ವಲ್ಪ ಅಪಶಕುನವಾಗಿ ಕಂಡು ಬಂತು. ನನಗೆ ಹಾಜರಾಗಲಿಕ್ಕೆ ಕೋರ್ಟಿನ ಕಡೆಯಿಂದ ಅಪ್ಪಣೆ ಬಂದಂತೆ "ಪೂರ್ವಾಹ್ನ 10 ಘಂಟೆಗೆ ಕಮಲಪುರದ ಮುನಿಸಿಫ್ ಕೋರ್ಟಿಗೆ ವಕೀಲರೊಡನೆ ಹೋದೆನು. ಮುನಿಸಿಫರು ಅವರ ಕ್ರಮಕ್ಕೆ ಅನುಸಾರವಾಗಿ 12 ಗಂಟೆಗೆ ಬಂದರು. ಬಂದವರು ಒಳಕ್ಕೆ ಹೋಗುತ್ತಲೇ, ಅಲ್ಲಿ ಮೊದಲೇ ಬಂದಿದ್ದ ಮಾದಣ್ಣನವರು ಎದ್ದುನಿಂತು, ಸ್ವಲ್ಪ ನಗುಮೋರೆಯಿಂದ ಸಲಾಂಮಾಡಿದರು. ಮುನಿಸಿಫರು ತಮ್ಮ ಟೊಪ್ಪಿಯನ್ನು ಎತ್ತಿ ತೋರಿಸಿದರು. ನನ್ನ ಎದೆಯಲ್ಲಿ ಚೂರಿ ಹಾಕಿದಂತಾಯಿತು. ಕೊಂಚ ಹೊತ್ತಿನ ಬಳಿಕ ನನ್ನ ಕಡೆಯ ವಕೀಲರು ನನ್ನ ಬಳಿಗೆ ಬಂದು, ಸ್ವಲ್ಪ ನಶ್ಯವನ್ನು ಕೇಳಿ, ಮುನಿಸಿಫರು ಮೂರು ಗಂಟೆಯವರೆಗೆ ನನ್ನನ್ನು ಕರೆಯಿಸಲಾರರು—ಎಂದರು. ನಾನು ಅಲ್ಲಿಯೇ ಕಾದು ಕುಳಿತುಕೊಂಡೆನು. ಪ್ಲೇಗ್ ಹೆಣವನ್ನು ಹೊರುವುದಕ್ಕೆ

ಒಬ್ಬನು ಮಾತ್ರವಿದ್ದರೆ, ಆ ಪಾಪಿಯು ಮಿಕ್ಕವರನ್ನು ಕಾದು ನಿಲ್ಲುವಂತೆ, ನಾನು ಕೋರ್ಟಿನ ಹೊರಜಗಲಿಯಲ್ಲಿ ಕಾದುಕುಳಿತೆನು. ಒಡನೆ ನನ್ನ ಕಣ್ಣಿಗೆ ಅಲ್ಲಿಯೇ ಸ್ವಲ್ಪ ಜಂಪು ಹಿಡಿಯಿತು.

ನಾನು ಎಚ್ಚರವಾದಾಗ ಮುನಿಸಿಫರ ಗುಲ್ಲು ಕೇಳಿಸುತ್ತಿತ್ತು. ವಕೀಲರೆಲ್ಲರು ಅಲ್ಲಲ್ಲಿ 'ಕಮಿಟಿ' ಯಾಗಿ ನಿಂತುಕೊಂಡು ಅಂತರಂಗದಲ್ಲಿ ಮಾತನಾಡುತ್ತಿದ್ದರು. ಕಕ್ಷಿಗಾರರು ಕಿಟಿಕಿಯ ಹಿಂದುಗಡೆಯಿಂದ ಇಣಿಕಿ ನೋಡುತ್ತಿದ್ದರು. ಗುಮಾಸ್ತರೆಲ್ಲರೂ ಬೆಪ್ಪರಂತೆ ಸುಮ್ಮನಾಗಿದ್ದರು. "ಈ ರಿಕಾರ್ಡನ್ನು ಯಾರು ತೆಗೆದರು?" "ಉಯಿಲ್ ಏನಾಯಿತು?" "ಕೋರ್ಟಿನಲ್ಲಿ ಕಳುವು" "ಉಯಿಲ್ ಎಲ್ಲಿ ಹೋಯಿತು?" ಎಂದು ಮೊದಲಾಗಿ ಹೇಳುತ್ತ ಮುನಿಸಿಫರು ಗುಮಾಸ್ತರನ್ನೆಲ್ಲಾ ಗಜರಿ ಗರ್ಜಿಸಿ ವಿಚಾರಿಸುತ್ತಿದ್ದರು. ನನ್ನ ಕಡೆಯ ವಕೀಲರು ನನ್ನ ಬಳಿಗೆ ಬಂದು, ಪುನಃ ನಶ್ಯವನ್ನು ಕೇಳಿ "ರಿಕಾರ್ಡಿನಿಂದ ಉಯಿಲ್ ಮಾಯವಾಗಿದೆ; ನಿಮಗೆ ನಂಬ್ರ ಗುಣವಾಯಿತೆಂದು ತಿಳಿಯಿರಿ" ಎಂದು ಹೇಳಿದರು. "ಸುಳ್ಳು ಉಯಿಲ್ ಕಳ್ಳರ ಕೈಲಿ." ನಾನು ಸಂತೋಷದಿಂದ ಸಕಲಾವತಿಗೆ ತಿಳಿಸುವುದಕ್ಕೆ ಮನೆಗೆ ಓಡಿದೆನು. ದೊಡ್ಡಿಯಲ್ಲಿ ಹುಲ್ಲುಕಡ್ಡಿ ಕೊಡದೆ ಕಟ್ಟಿದ್ದ ಕೋಣವು ಬಿಡುಗಡೆ ಹೊಂದುತ್ತಲೇ ಬಾಲಯೆತ್ತಿ ಮನೆಯ ಕಡೆಗೆ ಓಡುವಂತೆ ನಾನು ಓಡಿಹೋದೆನು.

ಮನುಷ್ಯನು ಅಲ್ಪಜ್ಞಾನಿ; ಮುಂದೇನು ಸಂಭವಿಸುವುದು ಎಂಬುದನ್ನು ಅವನ ಸಣ್ಣ ಮನಸ್ಸು ಊಹಿಸಲಾರದು. ನಾಳೆ ಆಗುವುದನ್ನು ಈ ಹೊತ್ತು ಅರಿಯದೆ ಸುಖಾಂತರಿಕ್ಷದಲ್ಲಿ ಹಾರುತ್ತಿರುವನು. ಈಸುವವನು ಮುಳುಗಿ ಸಾಯುವನೆಂದು ಅರಿಯದೆ ನೀರ ಮೇಲೆ ನಲಿಯುವನು; ಹೆಚ್ಚೇಕೆ? ಸಾಕ್ಷಾತ್ ಶ್ರೀರಾಮದೇವರು ಪ್ರಾತಃಕಾಲದಲ್ಲಿ ಯುವರಾಜರಾದರು. ಸಾಯಂಕಾಲದಲ್ಲಿ ವನಚರಿಯಾದರು. ನಾನು ಮಹಾಸಂತೋಷದಿಂದ ದಾವೆಯ ವರ್ತಮಾನವನ್ನು ಸಕಲಾವತಿಗೂ ಮುದ್ದಣ್ಣಗೂ ಹೇಳುತ್ತಿದ್ದಾಗ 'ಪೊಲೀಸ್ ಇನ್ಸ್‌ಪೆಕ್ಟರೊಬ್ಬನು' ಮನೆಯ ಜಗುಲಿಯ ಮೇಲೆ ಕಾಲಿಟ್ಟನು. 'ಪೊಲೀಸ್ ಇನ್ಸ್‌ಪೆಕ್ಟರನು' ನನ್ನ ನಮಸ್ಕಾರವನ್ನು ಸ್ವೀಕರಿಸಿ "ಅಯ್ಯಾ! ನಿಮ್ಮ ಮನೆಯನ್ನು ಜಫ್ತಿಮಾಡಬೇಕೆಂದು ಈಗ ತಾನೇ ಹುಕುಂ ಆಗಿದೆ. ರಿಕಾರ್ಡಿನಲ್ಲಿದ್ದ ಉಯಿಲನ್ನು ನೀವೇ ತಪ್ಪಿಸಿರಬಹುದೆಂದು ಸಾಕಷ್ಟು ರುಜುವಾತು ಸಿಕ್ಕಿದೆಯಾದ್ದರಿಂದ ನಿಮ್ಮ ಮನೆಯನ್ನು ಜಫ್ತಿ ಮಾಡುವುದಕ್ಕೆ ಅಪೇಕ್ಷಿಸುತ್ತೇನೆ" ಎಂದನು. ನಾನು ಅವಾಕ್ಕಾಗಿ ಅಲ್ಲಿಯೇ ನಿಂತುಬಿಟ್ಟೆನು. 'ಪೊಲೀಸಿನವರು' ಯಮದೂತರಂತೆ ಮನೆಯನ್ನು ಮುತ್ತಿದ್ದರು. ನಮ್ಮ ಊರಿನ ನಾಲ್ಕು ದೊಡ್ಡ ಮನುಷ್ಯರು ಅಂಗಳದಲ್ಲಿ ಆಸೀನರಾಗಿದ್ದರು. ಇವರ ಇದಿರಿಗೆ ಹೋಗಲು ನನಗೆ ಮೋರೆ ಇರಲಿಲ್ಲ. ಒಂದು ಗಂಟೆಯ ತರುವಾಯ 'ಇನ್ಸ್‌ಪೆಕ್ಟರನು' ಮುದ್ದಣ್ಣನೊಡನೆ ಹೊರಕ್ಕೆ ಬಂದನು. ನನ್ನ ಪ್ರಾಣವು ಕುತ್ತಿಗೆಗೆ ಓಡಿತು. 'ಇನ್ಸ್‌ಪೆಕ್ಟರನು' ಕೈಯಲ್ಲಿದ್ದ ಕಾಗದವನ್ನು ನಾಲ್ಕು ಜನರಿಗೆ ತೋರಿಸಿ "ಈ ಕಾಗದವನ್ನು ಮುದ್ದಣ್ಣನು ಎಲ್ಲಿಯೋ ಅಡಗಿಸಿಡುವ ಹಾಗಿದ್ದನು." ಎಂದನು. ಮುದ್ದಣ್ಣನು ಹೆದರಿಹೆದರಿ "ಇಲ್ಲ ಸ್ವಾಮಿ! ಆ ಕಾಗದವು ಚಿಕ್ಕತಂದೆಯವರು ಮಾಡಿದ ಉಯಿಲು. ಅದನ್ನು ಇದ್ದಲ್ಲಿಯೇ ಇಡಬೇಕೆಂದಿದ್ದೆನು" ಎಂದು ಅಂಗಲಾಚಿ ಹೇಳಿದನು. 'ಇನ್ಸ್‌ಪೆಕ್ಟರನು' ನನ್ನ ಕೈಹಿಡಿದು "ನಿಮ್ಮ ಮನೆಯಲ್ಲಿ ಉಯಿಲು ಸಿಕ್ಕಿತು. ನಿಮ್ಮ ಮೇಲೆ ರುಜುವಾತು ಬಲವಾದುದರಿಂದ ನಿಮ್ಮನ್ನು ಕೈದು ಮಾಡಿರುವೆನು" ಎಂದು ಹೇಳಿದರು. ನನ್ನ ಎದೆಗೆ ಗುಂಡು ಹೊಡೆದಂತಾಯಿತು. ನಡುಕು ನನ್ನ ಮೈಮೀರಿ ಹೋಯಿತು. ನಾನು ನಿರುಪಾಯನಾಗಿ "ಪೊಲೀಸ್ ಲೊಕಪ್ಪಿನಲ್ಲಿ" ಬೀಳಬೇಕಾಯಿತು. ನಿರಪರಾಧಿಯಾದ ನಾನು ನಾಲ್ಕನೆಯ ಸಲ 'ಜೈಲಿಗೆ' ಹೋಗಬೇಕಾಯಿತು. ನಾಲ್ಕನೆಯ ಸಲವೂ ನನಗೆ ತಾನಾಗಿ ಬಿಡುಗಡೆಯಾಯಿತು.

ಮರುದಿನ 10 ಗಂಟೆಯಹೊತ್ತಿಗೆ ಪೋಲೀಸ್ ಜಮೇದಾರನು ಬಂದು "ವರ್ಗವಾಗಿ ಹೋದ ಹಳೆಯ ಮುನಿಸಿಫರು ಈ ಉಯಿಲ್ ಪತ್ರವನ್ನು ಕಾರಣಾಂತರದಿಂದ ಭದ್ರವಾದ ಪೆಟ್ಟಿಗೆಯಲ್ಲಿ ಇಟ್ಟಿರುವರೆಂದು ಈ ಹೊತ್ತು ತಾನೆ ತಂತೀ ಮೂಲಕ ವರ್ತಮಾನ ಬಂದಿರುವುದರಿಂದ, ನಿಮ್ಮನ್ನು ಬಿಡುಗಡೆ ಮಾಡಬೇಕು ಎಂದು ಹುಕುಂ ಬಂದಿದೆ" ಎಂದು ಹೇಳಿ ನನ್ನನ್ನು ಬೆನ್ನು ತಟ್ಟಿ ನಗಾಡುತ್ತಾ ಮನೆಗೆ ಕಳುಹಿಸಿದನು. 15 ದಿನಗಳ ನಂತರ ನಂಬ್ರವು ಪುನಃ ವಿಚಾರಣೆಯಾಯಿತು. ಎರಡು ಉಯಿಲಿನ ಕಾಗದಗಳೂ ಮುನಿಸಿಫರ ಕೈಯಲ್ಲಿದ್ದವು ಒಂದು ಮತ್ತೊಂದರ ಪ್ರತಿಯಾಗಿತ್ತು. ಎರಡರಲ್ಲಿಯೂ ತನ್ನ "ಸ್ಥಿರಚರ ಸೊತ್ತು ಸರ್ವಾದಿಯನ್ನು **ಬಸವನ ಗುಡಿ ಮುದ್ದಣಗೆ**" ಎಂದು ಚಿಕ್ಕತಂದೆಯವರು ಬರೆದಿದ್ದರು. ನಮ್ಮ ಚಿಕ್ಕತಂದೆಯವರ ಹಸ್ತಾಕ್ಷರವು ಗ್ರಂಥಲಿಪಿಯಾದುದರಿಂದ, ಮಾದಣ್ಣಗೋ ಮುದ್ದಣ್ಣಗೋ ಎಂಬ ವಿವಾದಕ್ಕೆ ಆಸ್ಪದವಾಯಿತು. ಇಬ್ಬರ ತಂದೆಯ ಹೆಸರನ್ನೂ ಉಯಿಲಿನಲ್ಲಿ ಹೇಳಿರಲಿಲ್ಲ. ಇಬ್ಬರಿಗೂ ಬಸವನಗುಡಿ ಎಂಬ ಕುಲನಾಮವಿತ್ತು. ಇದೂ ಅಲ್ಲದೆ ಅದರಲ್ಲಿ ಅಕ್ಷರಪರಿಶೋಧನೆಯ ಒಗಟುಗಳು ಹಲವಿದ್ದುವು. ಕೆಲವರು ಒಂದು ಎಡೆಯಲ್ಲಿ **ಚಿನ್ನ ನೂರಿದ್ದು** ಎಂದು ಓದಿದರು; ಕೆಲವರು ಅದನ್ನೇ **ಜನ್ನ ಮೂಡಿದ್ದು** ಎಂದು ಅರ್ಥಿಸಿದರು. ದ್ವಯಾರ್ಥದ ಪದಗಳೂ ಕೇವಲವಿದ್ದುವು. **ಮನೆ ಕೊಟ್ಟಿದ್ದು** ಎಂದೂ **ಮನೆಕೊಟ್ಟೆದ್ದು** (ಕೊಟ್ಟ ರೋಗ) ಎಂದೂ ಬೇಕು ಬೇಕಾದ ಹಾಗೆ ವ್ಯಾಖ್ಯಾನವನ್ನು ಮಾಡಿದರು. ಇದನ್ನೆಲ್ಲಾ ಪರಿಶೋಧಿಸುವುದಕ್ಕೆ ಮದ್ರಾಸಿನ 'ಸ್ಪೊಲ್ಲೊ ಪೇ' ಎಂಬ ಸಾಹೇಬರ ಬಳಿಗೆ ಕಳುಹಿಸಿದರು. ಇವರು ಈ ಶಬ್ದಗಳಿಗೆ ಅರ್ಥವ್ಯಕ್ತಿವನ್ನು ಕೊಟ್ಟು ಕಳುಹಿಸಿದರು. ಇವರ ಹೇಳಿಕೆಯ ಪ್ರಕಾರ ಉಯಿಲಿನಲ್ಲಿ **ಮುದ್ದ್ಯಣ್ಣ, ಜನ್ನ ಮುದ್ದಿದ್ದು, ಮನೆ ಕಾಟಿದ್ದು** ಎಂದು ನಿಷ್ಕರ್ಷೆಯಾಯಿತು. ಈ ವ್ಯಾಖ್ಯಾನದ ಪ್ರಕಾರ ಹಣವೆಲ್ಲಾ ಸರಕಾರಕ್ಕೆ ಹೋಯಿತು. "ಸ್ಪೊಲ್ಲೋ ಪೇ" ಸಾಹೇಬರು ಈ ಉಯಿಲಿನ ಲಿಪಿಯ ಆಧಾರದಿಂದ "ಡ್ರೆವಿಡಿಯನ್ ಪೆಲಿಯೋಗ್ರೆಫಿ" ಎಂಬ ಪುಸ್ತಕವನ್ನು ಬರೆದು ಮಹಾವಿದ್ವಾಂಸರೆನ್ನಿಸಿಕೊಂಡರು. ಚಿಕ್ಕತಂದೆಯವರ ಉಯಿಲಿಂದ ಕೋರ್ಟ್ ಗುಮಾಸ್ತನಿಗೆ ಒಂದು ದಿನದ ಮಟ್ಟಿಗಾದರೂ 'ಸಸ್ಪೆಂಡ್' ಆಯಿತು; ಮಾದಣ್ಣನವರಿಗೆ ಒಂದು ಹೊತ್ತಿನ ಮಟ್ಟಿಗಾದರೂ ಸಂಕಷ್ಟವಾಯಿತು; ನನಗೆ ಒಂದು ರಾತ್ರಿ ಮಟ್ಟಿಗಾದರೂ ಸೆರೆಯು ಪ್ರಾಪ್ತವಾಯಿತು.

(ಸುವಾಸಿನಿ 1900–3)

ನನ್ನ ಹೆಂಡತಿ

ನನ್ನ ಚಿಕ್ಕತಾಯಿ ಜೈಲಿನ ಬಾಯಿಗೆ ಬೀಳಲಿಕ್ಕಾದ ನನ್ನನ್ನು ಹೇಗೂ ಬಿಡುಗಡೆ ಮಾಡಿದಳು. ನಾನು ಮಾಡಿದ ತಪ್ಪಿಗೆ ನಾನೇ ಬಹಳ ನಾಚಿಕೆಪಟ್ಟು, ಅವಳ ಮೋರೆ ನೋಡುತ್ತಿರಲಿಲ್ಲ. ಅವಳೂ ನನ್ನ ಮೋರೆಯನ್ನು ಚಿರಕಾಲ ನೋಡಲಿಲ್ಲ. ಒಂದು ವರ್ಷದ ಮೇಲೆ ಅವಳು ತನ್ನ ಮುತ್ತೈದೆತನದ ಮೋರೆಯನ್ನು ಈ ಲೋಕದಿಂದ ತಿರುಗಿಸಿಬಿಟ್ಟಳು. ಹೋಗುವಾಗ ತನ್ನ ಒಡವೆಗಂಟನ್ನೂ ಮನೆಯನ್ನೂ ತನ್ನೊಡನೆ ಕೊಂಡು ಹೋಗಲಿಕ್ಕೆ ಮರೆತುಬಿಟ್ಟಳೆಂದು ತೋರುತ್ತಿದೆ. ಮದುವೆಯಾಗಲು ಸಂಭವವಿಲ್ಲದ ನನಗೆ ಅಂದಿನಿಂದ ಹೆಣ್ಣು ಕೊಡಲು ಕೆಲವರು ಮೊದಲು ಮಾಡಿದರು. ಒಬ್ಬಿಬ್ಬರು ನನ್ನನ್ನೇ ಅಳಿಯನಾಗಿ ಮಾಡಿಕೊಳ್ಳಬೇಕೆಂದಿದ್ದರು; ಹಲವರು ನನ್ನ ಪಾಲಿಗೆ ಬಂದ ಚಿನ್ನದ ಗಂಟನ್ನು ಅಳಿಯನಾಗಿ ಮಾಡಿಕೊಳ್ಳಬೇಕೆಂದಿದ್ದರು. ಇದನ್ನೆಲ್ಲಾ ಯೋಚಿಸಿ, ಹೊಸಪೇಟೆ ರಾಜಣ್ಣನವರು ಸ......ತಿ, (ಮದುವೆಯಾದುದರಿಂದ ಹೆಂಡತಿಯ ಹೆಸರನ್ನು ಬಹಿರಂಗವಾಗಿ ಹೇಳಲಿಕ್ಕೆ ಸ್ವಲ್ಪ ಶಂಕೆ.) ಎಂಬ ತನ್ನ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಿದರು. ಮದುವೆಯಾದ ಎರಡು ವರ್ಷಗಳ ವರೆಗೆ, ನನ್ನ ಹೆಂಡತಿಯನ್ನು ನಾನು ಪ್ರೀತಿಸುತ್ತಿರಲಿಲ್ಲ. ಈ ರೀತಿಯ ವೈಮನಸ್ಸಾಗಲಿಕ್ಕೆ ಅನೇಕ ಕಾರಣಗಳಿದ್ದುವು. ಪತ್ನೀಪರಿತ್ಯಾಗವು ನಮಗೆ ಕುಲಪರಂಪರೆಯಾದ ಧರ್ಮವು. ನಮ್ಮ ತಂದೆಯು ನಾನು ಹುಟ್ಟಿದ ಬಳಿಕ ಸಂಸಾರ ಜ್ಞಾನೋದಯವುಳ್ಳವರಾಗಿ, ನನ್ನ ತಾಯಿಯನ್ನು ಬಿಟ್ಟುಬಿಟ್ಟು, ಸಂತಧರ್ಮವನ್ನು ಅವಲಂಬಿಸಿದರು. ನಮ್ಮ ಚಿಕ್ಕತಂದೆಯು ಪ್ರಾಯಭರಿತರಾದುದರಿಂದ, ಪರದೇಶಗಳಲ್ಲಿ ಸುಖವೇ ಹೆಚ್ಚೆಂದು ತಿಳಿದುಕೊಂಡು, ನನ್ನ ಚಿಕ್ಕತಾಯಿಯನ್ನು ಬಿಟ್ಟು ಓಡಿಹೋದರು. ನನಗಾದರೊ, ನನ್ನ ಮಾವನು ಚಿನ್ನದ ಉಡಿದಾರವನ್ನೂ, ವಜ್ರದ ಉಂಗುರವನ್ನೂ ಕೊಟ್ಟಿರಲಿಲ್ಲ. ಇಂತಹ ಪ್ರೀತಿಬಂಧಕಗಳು ಇಲ್ಲದೆ, ಹೆಂಡತಿಯನ್ನು ಪ್ರೀತಿಸುವ ಬಗೆ ಹೇಗೆ? ವಾಚಕರೇ ಹೇಳಿರಿ! ನಿಮ್ಮ ಪತ್ನಿಯರ ತವರುಮನೆಯಿಂದ ನಿಮಗೆ ಉಂಗುರ ಉಡಿದಾರ ಬರುವ ಸಂಭವವಿದ್ದರೆ, ನಿಮ್ಮ ಪ್ರೀತಿ ಇನ್ನೂ ಅಧಿಕವಾಗಲಾರದೇ? ನಾನು ನನ್ನ ಹೆಂಡತಿಯನ್ನು ಅಲಕ್ಷಿಸಲಿಕ್ಕೆ ಮೂರನೆಯ ಕಾರಣವು ಅವಳ ರೂಪಲಾವಣ್ಯವಾಗಿತ್ತು. ಹುಡುಗಿಯು ಎರಡು ವರ್ಷಗಳ ವರೆಗೆ ನೋಡಲಿಕ್ಕೆ ಅಷ್ಟೊಂದು ರುಚಿಯಾಗಿರಲಿಲ್ಲ. ಅವಳ ಕಣ್ಣು, ಮೂಗು, ಹಣೆ ಆಕರ್ಷಿಸುವಷ್ಟು ಸುಂದರವಾಗದೆ ಇದ್ದರೂ, ಹುಬ್ಬುಗಳು ಮಾತ್ರ ಎಲ್ಲರ ಕಣ್ಣುಗಳನ್ನೂ ಎಳೆಯುತ್ತಿದ್ದವು. ಈ ಹುಬ್ಬುಗಳು ಕಣ್ಣಿನ ಮೇಲ್ಗಡೆಯಲ್ಲಿಟ್ಟ ಸಣ್ಣ ಮೀಸೆಗಳಂತಿದ್ದುವು. ಇದರಿಂದ ಸಂಪೂರ್ಣ ರೂಪಕ್ಕೆ ಒಂದು ಬಗೆಯ ಆಕಾರವೋ ವಿಕಾರವೋ ಉಂಟಾಗುತ್ತಿತ್ತು. ಈ ವಿಚಿತ್ರ ಭ್ರೂಯುಗ್ಮವು ಅವಳನ್ನು ಮತ್ತೊಂದು ಅಪಾಯಕ್ಕೆ ಗುರಿಮಾಡಿತು. ಕೆಲವು ಗೃಹಸ್ಥರು ಅವಳನ್ನು ಹುಬ್ಬಿನ ಹುಡುಗಿ ಎಂದೂ, ಅಯ್ಯಗಳರ ಮಗಳೆಂದೂ, ನಾನು ಕೇಳುವ ಹಾಗೆ ಕರೆಯುತ್ತಿದ್ದರು. ಒಬ್ಬಿಬ್ಬರು ಇದಕ್ಕೆ ಬದಲಾಗಿ ಇತಿಹಾಸದ ಹೆಸರಿನಿಂದ ಅವಳನ್ನು ಸಂಬೋಧಿಸುತ್ತಿದ್ದರು. 'ಆಟದ ಸೀತೆ' 'ಆಟದ ಸೀತೆ' ಎಂದು ಪುನಃ ಪುನಃ ಈ ಪುಣ್ಯಾತ್ಮರು ಹೇಳಿರುವುದು ನನ್ನ ಕಿವಿಗೆ ಬಿದ್ದಿದೆ. ಇದರ ಕಾರಣವನ್ನು ತಿಳಿದುಕೊಳ್ಳುವಷ್ಟು ಶ್ರಮವನ್ನು ನಾನು ತೆಗೆದುಕೊಳ್ಳಬೇಕಾಗಲಿಲ್ಲ.

ಮೇಲೆ ಹೇಳಿದ ಕಾರಣಗಳಿಂದ ಅವಳನು ಎಲ್ಲಿ ನೋಡಿದರೂ ನಾನು ಅಲಕ್ಷಿಸುತ್ತಿದ್ದೆನು. ಅವಳು ಮಾತ್ರ ನನ್ನನ್ನು ನೋಡಿ ಹುಬ್ಬುಗಂಟು ಕೂಡಾ ಹಾಕುತ್ತಿರಲಿಲ್ಲ; ಅಥವಾ ಹಾಕಿಕೊಂಡರೂ ಆ ಹುಬ್ಬು ಗಂಟು ನನಗೆ ಚೆನ್ನಾಗಿ ತೋರುತ್ತಿರಲಿಲ್ಲ. ಈ ರೀತಿಯಲ್ಲಿ ಎರಡು ವರ್ಷಗಳು—ಪ್ರಣಯ ರಹಿತವಾದ 720 ದಿವಸಗಳು—ಕಳೆದುವು. ಆದರೂ ನಾನು ಸ್ಥಿರಚಿತ್ತನಾಗಿಯೇ ಇದ್ದು, ಬಂದ ಸಂಕಷ್ಟಗಳನ್ನೆಲ್ಲಾ ತಾಳಿ ಕೊಂಡೆನು. ಕಾಲವು ಇದ್ದಂತೆ ಇರುವುದಿಲ್ಲ. ಕಾಲಚಕ್ರವು ತಿರುಗುತ್ತಿರುವಾಗ ಅದರೊಂದಿಗೆ ಮನುಷ್ಯನ ಚರ್ಯೆಚೇಷ್ಟೆಗಳೂ, ಬುದ್ಧಿಜ್ಞಾನವೂ, ರೂಪಲಾವಣ್ಯವೂ ಬದಲಾಗುತ್ತ ಬರುವುವು. ಬಾಲ್ಯದಲ್ಲಿ ಕಳವು ಮಾಡಿ ದಿವಸ ಕಳೆಯುವ ಹುಡುಗನು ಯೌವನದಲ್ಲಿ ಪೊಲೀಸ್ ಇಲಾಖೆಯ ಇನ್ಸ್‌ಪೆಕ್ಟರಾಗುತ್ತಾನೆ; ಆನೆಯ ಮರಿಯೆಂದು ಲಾಯದಲ್ಲಿ ಸಾಕಿದ ಮೃಗವು ಕಾಲಾನುಕಾಲದಲ್ಲಿ ಕತ್ತೆಯ ಮರಿಯಾಗಿ ಹೋಗುವು ದುಂಟು; ಕಾಗೆಯ ಗೂಡಿನಲ್ಲಿ ಬೆಳೆದ ಹಕ್ಕಿಯು ಗರಿಗಳು ಬರುತ್ತಲೆ, ಕೋಗಿಲೆಯಾಗಿ ಹಾರಿಹೋಗುವುದು. ಹೀಗಿರುವಾಗ ನನ ಹೆಂಡತಿ, ಸ್ವಲ್ಪ ಕಾಲದ ಮೇಲೆ ನನಗೆ ಅತ್ಯಂತ ರೂಪವತಿಯೆಂದು ತೋರಿದುದರಲ್ಲಾಗಲಿ ನಾನು ಅವಳನ್ನು ಪ್ರೀತಿಸಿದುದರಲ್ಲಾಗಲಿ ನನ್ನ ದೋಷವೇನೂ ಇಲ್ಲ. ಮುಖವು ದಿನೇದಿನೇ ಪ್ರಫುಲ್ಲವಾಗುತ್ತ ಯೌವನ ಸಂಚಾರ ಸೂಚಕವಾಗುತ್ತಲೇ, ನನ್ನ ಹೃದಯದಲ್ಲಿ ಇಲ್ಲದ ಪ್ರೀತಿಯು ನನಗೆ ತಿಳಿಯದಂತೆ ಅಂಕುರಿಸಿತು. ಚಕ್ಷುಗಳನ್ನು ಕತ್ತಲಿಸುತ್ತಿದ್ದ ಭ್ರೂಯುಗ್ಮವು ಲಲಾಟಪ್ರದೇಶವು ಅಗಲವಾಗಿ ತೋರಿದುದರಿಂದ, ಚಿತ್ರದ ಕಡ್ಡಿಯಿಂದ ತಿದ್ದಿದಂತಾಯಿತು. ಮಾರ್ದವವೂ ಕೋಮಲತೆಯೂ ದೇಹದಲ್ಲಿ ಹಿಡಿಯಲಾರದಷ್ಟು ಉಕ್ಕಿ ಉಕ್ಕಿ ಬರುತ್ತಿರಲು, ನನ್ನ ಮನಸ್ಸಿನ ಲವಲವಿಕೆಯು ಉನ್ನತವಾಗುತ್ತ ಬಂದು, ನನ್ನನ್ನು ಒಂದು ಪ್ರಕಾರ ವಾಗಿ ಹುಚ್ಚುಗೊಳಿಸಿತು. ಅವಳನ್ನು ನೋಡಿದರೆ, ಹುಬ್ಬಿನ ಹುಡುಗಿ ಎಂದಾಗಲೀ ಗಂಡುಹುಡುಗಿ ಎಂದಾಗಲೀ, ಯಾರೂ ಸದ್ವಿಚಾರಮಾಡುವಷ್ಟು ಅವಕಾಶವಿರಲಿಲ್ಲ.

ಪತ್ನಿಯು ಪಾರಮಾರ್ಥಿಕ ವಸ್ತುವೆಂದು ಕೆಲವು ಗ್ರಂಥಕಾರರು ಹೇಳುವರು. ನನ್ನ ಹೆಂಡತಿಯು ಈ ತರಗತಿಗೆ ಬರುವಳೋ ಇಲ್ಲವೋ ನನಗೆ ಹೇಳಲು ಸಾಮರ್ಥ್ಯವಿಲ್ಲ. 'ಅಪುತ್ರಸ್ಯ ಲೋಕೋ ನಾಸ್ತಿ' ಎಂಬ ಮಾತು ಸುಳ್ಳಾದರೆ, ನನ್ನ ಹೆಂಡತಿಯು ಪಾರಮಾರ್ಥಿಕ ಸಂಬಂಧದವಳೆಂದು ಹೇಳಬಲ್ಲೆನು. ನನ್ನ ಹೆಂಡತಿಯು ಹೇಗಿದ್ದರೂ, ನನ್ನ ಪ್ರೀತಿಯು (ನಾವು ಈ ಲೋಕದಲ್ಲಿಯೇ ಇದ್ದುದರಿಂದ) ಇಹಲೋಕಸಂಬಂಧವಾದು ದಾಗಿತ್ತು. ಆದರೆ ಆ ಪ್ರಣಯವೇ ನನ್ನನ್ನು ಈ ಅನರ್ಥಕ್ಕೆ ತಂದಿಳಿಸಿತು; ಆ ಪ್ರೀತಿಯೇ ನನ್ನನ್ನು ಪುನಃ ಜೈಲಿನಲ್ಲಿ ಮಲಗಿಸಿತು; ಆ ಸುಖಸಂಭಾಷಣೆಯೇ ನನ್ನ ಸರ್ವ ಸುಖಕ್ಕೂ ನಾಶಕಾರಕವಾಯಿತು.

ಯಥಾರ್ಥ ಪ್ರಣಯವು ಮನುಷ್ಯನನ್ನು ದುಃಖಕ್ಕೆ ಹೇಗೆ ಗುರಿ ಮಾಡಬಹುದು ಎಂದು ಪಾಠಕ ಮಹಾಶಯರಲ್ಲಿ ಕೆಲವರು ಆಕ್ಷೇಪಿಸುವರು. ನಮ್ಮ ಪ್ರಣಯವು ಪ್ರಾಚೀನ ಮಾರ್ಗವನ್ನಾಗಲೀ, ನವೀನ ಮಾರ್ಗವನ್ನಾಗಲೀ ಅನುಸರಿಸಿಕೊಂಡು ಹೋಗಿರಲಿಲ್ಲ. ಅದು ಇವೆರಡರ ಮಧ್ಯಸ್ಥವಾಗಿ ಹರಿದು ಹೋಗು ತ್ತಿತ್ತು. ನಾನು ಎಲ್ಲರ ಇದಿರಿನಲ್ಲಿ ಅವಳ ಹೆಸರನ್ನೆತ್ತಿ ಸಕಲಾವತಿ! ಸಕಲಾವತಿ! ಎಂದು ಕರೆಯುತ್ತಿರಲಿಲ್ಲ. ಆದರೆ ನಾವಿಬ್ಬರೂ ಏಕಾಂತದಲ್ಲಿದ್ದಾಗ, "ನನ್ನ ಜೀವನ ಸರ್ವಸ್ವವೇ......" ಎಂದು ಏನೋ ಏನೋ ಭ್ರಮೆಯಿಂದ ಹೇಳುತ್ತಿದ್ದೆನು. ಇದರಂತೆಯೇ ನಮ್ಮ ಕಾರ್ಯಕೆಲಸಗಳು ಅಷ್ಟೊಂದು ವಿಪರೀತಕ್ಕೆ ಹೋಗಿರ ಲಿಲ್ಲ. ನಾನು 'ಚಾ' ಕುಡಿಯುವಾಗ, ನನ್ನ 'ಕಪ್'ನ್ನು ತುಟಿಯ ಬಳಿಗೆ ಅವಳು ಹಿಡಿಯಲೇಬೇಕೆಂಬ ನಿರ್ಬಂಧ ವಿರಲಿಲ್ಲ. ನಾನು 'ಚುಟ್ಟಾ' ಸೇದುವಾಗ, ಅವಳೇ ಅದಕ್ಕೆ ಬೆಂಕಿ ಹಚ್ಚಬೇಕೆಂಬ ಬಲಾತ್ಕಾರವಿರಲಿಲ್ಲ. ನಾನು

ಆಫೀಸಿಗೆ ಹೊರಡುವಾಗ, ಅವಳು ಇದಿರಾಗಿ ಬಂದು, ನನ್ನ ತಲೆಯನ್ನು ಹಿಡಿದುಕೊಂಡು ಬೊಟ್ಟನ್ನಿಡಬೇಕೆಂಬ ನನ್ನ ಕಾನೂನು ಇರಲಿಲ್ಲ. ಇವೆಲ್ಲವನ್ನು ಆಚರಣೆಗೆ ತರುವಷ್ಟು ಧೈರ್ಯ ನನಗೆ ಇರಲಿಲ್ಲ. ಆದರೂ ದಾಂಪತ್ಯಸುಖವು ಎಷ್ಟು ಮಧುರವಾಗಿರಬಹುದೋ ಅಷ್ಟು ಸುಖವು ನಮ್ಮಿಬ್ಬರ ಸಂಸಾರದಲ್ಲಿತ್ತು. ಅಷ್ಟೇಕೆ? ನನಗೆ ಬೇರೆ ಕೆಲಸವಿಲ್ಲದಿದ್ದರೆ ಹೆಂಡತಿಯೊಡನೆ ಸರಸ ಸಂಭಾಷಣೆಯನ್ನಾಡುತ್ತ ಕಾಲಕಳೆಯುವುದೇ ಪುಣ್ಯಸಾಧನೆಯೆಂದು ಭಾವಿಸುತ್ತಿದ್ದೆನು.

ಎರಡು ತಿಂಗಳುಗಳಿಂದೀಚೆಗೆ ಕಳ್ಳರ ಕಾಟವು ನಮ್ಮ ಕೇರಿಯಲ್ಲಿ ಕೇಳಿಸುತ್ತಿತ್ತು. ಕಳವು ಗೊತ್ತು ಹಚ್ಚದಿದ್ದರೂ ಒಬ್ಬಿಬ್ಬರು ಪೊಲೀಸಿನವರು ಜೈಲಿಗೆ ಹೋದರು. ನನ್ನ ಹೆಂಡತಿಯು ನನ್ನ ಚಿಕ್ಕತಾಯಿಯ ಒಡವೆಗಂಟಿನ ವಿಷಯವಾಗಿ ಬಹಳ ಎಚ್ಚರಿಕೆಯುಳ್ಳವಳಾಗಿದ್ದಳು. ಮನೆಯನ್ನು ಬಿಟ್ಟು ಎಲ್ಲಿಯೂ ಹೋಗುತ್ತಿದ್ದಿಲ್ಲ. ಮನೆಯ ಸುತ್ತಲೂ ಸದ್ದಾದರೆ, ತನ್ನ ಎಚ್ಚರಿಕೆಯನ್ನು ನನಗೆ ತೋರಿಸುವಂತೆ ಅತ್ತಿತ್ತ ನೋಡುತ್ತಿದ್ದಳು. ಅವಳಿಗೆ ನಿದ್ದೆಹತ್ತಿದಾಗ ಅವಳು ಎಷ್ಟು ಜಾಗರೂಕಳಾಗಿರುವಳೋ ಎಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೂ ಹೆಂಗಸರಲ್ಲಿ ತಾನೇ ಜಾಗರೂಕಳೆಂದೂ, ಗಂಡಸರಲ್ಲಿ ನಾನೇ ಕುಂಭಕರ್ಣನೆಂದೂ, ನನ್ನೊಡನೆ ಒಂದು ಪ್ರಕಾರವಾದ ಅಹಂಕಾರದಿಂದ ಮಾತನಾಡುವಳು. ಕೆಲವು ಸಂಗತಿಗಳಲ್ಲಿ ಹೆಂಗಸರು ನುಡಿಯುವ ಮಾತು ನಮಗೆ ವಿರುದ್ಧವಾದರೂ, ಅದನ್ನು ನಾವು ನಗಾಡುತ್ತಲೇ ಒಪ್ಪಬೇಕಾಗುತ್ತದೆ; ಅಥವಾ ಅವರ ತಪ್ಪುಗ್ರಹಿಕೆಯನ್ನು ನಮ್ಮ ಕೃತ್ಯಗಳಿಂದ ತೋರಿಸಬೇಕಲ್ಲದೆ ಬೇರೆ ಉಪಾಯವಿಲ್ಲ. ಅವರೊಡನೆ ಪ್ರತ್ಯುತ್ತರ ಕೊಡುವುದು ತರ್ಕವಿತರ್ಕಗಳಿಗೆ ಮಾರ್ಗವಾಗುವುದು; ಅವರನ್ನು ಸಮಾಧಾನಗೊಳಿಸುವುದು ಒರಟುತನವಾಗುವುದು. ಒಂದು ದಿನ ರಾತ್ರಿ ಊಟವಾದನಂತರ ನಾನು "ನಮ್ಮ ಒಡವೆಗಂಟನ್ನು ಕೋಣೆಯ ಪೆಟ್ಟಿಗೆಯಲ್ಲಿಡುವುದಕ್ಕೆ ಬದಲಾಗಿ, ನಾವು ಮಲಗುವ ಚಿಕ್ಕಮನೆಗೆ ತಂದಿಟ್ಟುಕೊಂಡರೆ ಒಳ್ಳೆಯದಲ್ಲವೇ? ಈ ಕಳ್ಳರು ಮನೆಯ ಹತ್ತಿರ ಹತ್ತಿರವಾಗಿ ಬರುತ್ತಾರೆ" ಎಂದು ಹೇಳಿದೆನು.

"ಇದ್ದ ಕಡೆಯಿಂದ ಅದನ್ನು ತೆಗೆಯುವುದು ಬೇಡ; ನನ್ನನ್ನು ಎಚ್ಚರಿಸದೆ ಕಳ್ಳರು ಹೇಗೆ ನುಗ್ಗಬಹುದು" ಎಂದು ಅವಳು ಉತ್ತರ ಕೊಟ್ಟಳು.

"ಕಳ್ಳರು ಎಷ್ಟು ಬುದ್ಧಿವಂತರೆಂದು ನೀನರಿಯೆ. ಅತ್ತೆಗೆ ತಿಳಿಯದೆ ಕಳ್ಳತನ ಮಾಡುವ ಸೊಸೆಯರಿಗಿಂತ ಜಾಣರು. ನಿನಗೆ ಸುಲಭ ನಿದ್ರೆಯಾದರೂ ಹೆಣ್ಣುಹೆಂಗಸರನ್ನು ಮೋಸಗೊಳಿಸುವುದು ಒಂದು ವಿಷಯವಲ್ಲ."

"ನನ್ನನ್ನು ಮೋಸಗೊಳಿಸುವರೇ? ನಿನ್ನೆ ನೆರೆಯ ಮನೆಯಲ್ಲಿ ಕಳ್ಳರು ನುಗ್ಗಿದ್ದಾಗ, ಅದನ್ನು ಮೊದಲು ತಿಳಿದು ಎಚ್ಚರಿಸಿದುದು ನಾನಲ್ಲವೇ? ನನ್ನ ಮನೆಯಲ್ಲಿ ಕನ್ನವಿಕ್ಕಿದರೆ, ನಾನು ಗಾಢನಿದ್ರೆಯಲ್ಲಿಯೂ ತಿಳಿಯದೆ ಇರುವೆನೇ?"

"ಅದಕ್ಕೆ ಕಾರಣವಿತ್ತು. ನಿನ್ನೆ ನಿನಗೆ ಹೊಟ್ಟೆನೋವು ಬಲವಾದುದರಿಂದ ನೀನು ನಿದ್ದೆಹೋಗದೆ ಎಚ್ಚರವಾಗಿದ್ದೆ. ಆದರೂ ನೀನು ಎಷ್ಟೋ ಸಲ ನಿದ್ದೆ ಹೋದುದು ನನ್ನ ಅನುಭವದಲ್ಲಿ ಇದೆ."

"ನನ್ನ ಎಚ್ಚರವನ್ನು ಕುರಿತು ಮಾತೇ? ಮನೆಯಲ್ಲಿ ಒಂದು ಇಲಿಯು ಬಟ್ಟೆಯನ್ನು ಕಡಿಯುತ್ತಿದ್ದರೂ ನಾನು ಎಚ್ಚರವಾಗುವೆನು. ಅಷ್ಟೇಕೆ ಇರುವೆ ಹರಿದು ಹೋದರೆ ಆ ಶಬ್ದವು ನನಗೆ ಗುಡುಗಿನಂತೆ ಕೇಳಿಸುವುದು."

"ಇರುವೆ ಮುಂದೆ ಹೋಗದವರಿಗೆ ಆನೆ ಹಿಂದುಗಡೆಯಿಂದ ಹೋಗಬಹುದು. ನಿನ್ನೊಡನೆ ಮುದ್ದು ತರ್ಕಗಳನ್ನು ಮಾತನಾಡಲಿಕ್ಕೆ ನನಗೆ ಸಮಯವಿಲ್ಲ. ಎಂಟು ಗಂಟೆಯಾಗಿ ಹೋಯಿತು; ನನ್ನ ಮಿತ್ರರೆಲ್ಲರೂ ನನ್ನನ್ನು ಒಂದು "ಪಾರ್ಟಿ" ಗೋಸ್ಕರ ಕಾದಿರುವರು. ನಾನು 9 ಗಂಟೆಯೊಳಗೆ ಹಿಂತಿರುಗಿ ಬರುವೆನು, ಮನೆಯ ಹತ್ತಿರ ಜೋಕೆಯಿಂದ ಇರು."

ಈ ಮಾತಿಗೆ ಉತ್ತರವಾಗಿ ನನ್ನ ಹೆಂಡತಿಯು ಏನೋ ಕೋಪದಿಂದ ಮಾತನಾಡಿದಳು. ಅದು ನನ್ನ ಮಾತುಗಳ ಮೇಲೆ ಕೋಪವಾಗಿರಲಿಲ್ಲ. ಕೋಪವು ನನ್ನ ಗಮನದ ವಿಷಯವಾಗಿತ್ತು. ನನ್ನ "ಪಾರ್ಟಿಯ" ಉತ್ಸಾಹದ ಪ್ರವಾಹದಲ್ಲಿ ಅವಳ ಕೋಪದ ಮಾತುಗಳು ನನ್ನಮೇಲೆ ತೇಲಿಹೋದುವು.

ಆ ರಾತ್ರಿ ವಿಶೇಷ ತೆರದ "ಪಾರ್ಟಿ" ಇತ್ತು. ಸಂಗೀತದಲ್ಲಿಯೂ ಗಾಯನದಲ್ಲಿಯೂ ಸಮಯ ಹೋದುದು ತಿಳಿಯಲೇ ಇಲ್ಲ. ನಾನು ಮನೆಗೆ ಹಿಂತಿರುಗಿ ಬಂದಾಗ ಮಧ್ಯರಾತ್ರಿ ಕಳೆದಿತ್ತು. ಈ "ಪಾರ್ಟಿ" ಗಳ ದೆಸೆಯಿಂದ ನಾನು ಮಧ್ಯರಾತ್ರಿ ಮನೆಯನ್ನು ಸೇರುವುದು ಅಪರೂಪವಾದ ವಿಷಯವಾಗಿರಲಿಲ್ಲ. ಆದರೆ ನನ್ನ ಹೆಂಡತಿಯು ನನ್ನ ಜಾಗ್ರತೆಯನ್ನು ತೆಗೆದುಕೊಳ್ಳುವುದಕ್ಕೋಸ್ಕರ ನನಗೆ ದುಃಖಕರವಾಗುವ ರೀತಿಯಲ್ಲಿ ಎಚ್ಚರವಿರುತ್ತಿರಲಿಲ್ಲ. ನಾನು ದಾರಿಯಲ್ಲಿ ಬರುತ್ತಿದ್ದಾಗ ನವಮಿಯ ಚಂದ್ರನು ನಗಾಡುತ್ತ ಅಸ್ತಮಿಸುತ್ತಲಿದ್ದನು. "ಮುನಿಸಿಪಾಲಿಟಿಯವರು" ಬೀದಿಯ ಬೆಳಕಿನ ವಿಷಯ ಅಥವಾ ಅದರ ವೆಚ್ಚದ ವಿಷಯದಲ್ಲಿ ಹೆಚ್ಚಾದ ಜಾಗರೂಕತೆ ತೆಗೆದುಕೊಳ್ಳುವುದರಿಂದ ಎಲ್ಲಾ ಕಡೆಯಲ್ಲಿಯೂ ಕತ್ತಲಾಗಿತ್ತು. ದೂರವಿರುವ ಮನೆಗಳು ಆ ಅಂಧಕಾರದಲ್ಲಿ ಭಯಂಕರವಾಗಿ ಎದ್ದು ನಿಂತಿದ್ದವು. ನಾನು ಯಾವುದನ್ನೂ ಲಕ್ಷಿಸದೆ ಬೇಗಬೇಗನೆ ಕಾಲುಹಾಕುತ್ತಿದ್ದೆನು. ಅಂಧಕಾರದಲ್ಲಿ ಮನಸ್ಸಿಗೆ ಸ್ವಾಭಾವಿಕವಾದ ಭೂತ ಪಿಶಾಚಿಗಳ ಭಯವೂ ಕಳ್ಳರ ಅಂಜಿಕೆಯೂ ನನ್ನ ಮನಸ್ಸಿಗೆ ಹೊಳೆದುವು. "ಕಳ್ಳನಿಗೆ ಒಳ್ಳೆಯರಾತ್ರಿ" ಎಂದು ಎಣಿಸುತ್ತ ನಾನು 'ಮುಂದರಿಸುತ್ತಿದ್ದೆನು. ಆಗ ಹಠಾತ್ತಾಗಿ ನಾನು ಹೆಂಡತಿಯೊಡನೆ ಕಳ್ಳರ ಕಾಟವನ್ನು ಕುರಿತು ಮಾತನಾಡಿದುದು ಮನಸ್ಸಿಗೆ ಒತ್ತೊತ್ತಿ ಬಂತು. ನನ್ನ ಹೆಂಡತಿಯನ್ನು ಮೋಸಗೊಳಿಸುವ ಸರಸ ಚೇಷ್ಟೆಯನ್ನು ನಾನು ಮಾಡಬೇಕೆಂದು ಯೋಚಿಸಿದೆನು. ಇದೇ ರೀತಿಯಲ್ಲಿ ಪತಂಗವು ದೀಪದ ಸುತ್ತಲೂ ಮಂಡಳಿ ಸುತ್ತ, ಅದರ ಜ್ವಾಲೆಯಲ್ಲಿಬಿದ್ದು ಹತವಾಗುವುದು.

ಮನೆಯನ್ನು ಸಮೀಪಿಸುತ್ತಲೇ ನಾನು ಮಾಡಿದ ಆಲೋಚನೆಗಳೆಲ್ಲವು ಸರಿಯಾದುವೆಂದು ತೋರಿದುವು. ನನ್ನ ಹೆಂಡತಿಯು ತನ್ನ ಸುಲಭನಿದ್ರೆಯನ್ನು ಬಡಾಯಿ ಹೇಳಿಕೊಳ್ಳುವುದನ್ನು ನಾನು ಕೇಳಿಕೇಳಿ, ಅವಳ ಎಚ್ಚರಿಕೆಯನ್ನು ಪರೀಕ್ಷಿಸಿ, ಅವಳನ್ನು ಅಪಹಾಸ್ಯಕ್ಕೆ ಗುರಿಮಾಡುವುದು ಯೋಗ್ಯವೆಂದು ತಿಳಿದುಕೊಂಡೆನು. ಮನೆಯ ಬಾಗಿಲಿಗೆ ಅಗುಣಿ ಹಾಕಿದರೂ, ಕಿಟಕಿಯ ಕಡೆಯಿಂದ ಒಳನುಗ್ಗಬಹುದೆಂದು ನನಗೆ ಚೆನ್ನಾಗಿ ಗೊತ್ತಿತ್ತು. ಚಿಕ್ಕ ಮನೆಗೆ ಬಂದು, ಅಲ್ಲಿಂದ ಬೇಗದ ಕೈಗಳನ್ನು ಕಳುವು ಮಾಡಿ, ಪೆಟ್ಟಿಗೆಯಲ್ಲಿರುವ ಒಡವೆ ಗಂಟನ್ನು ಮೆಲ್ಲಗೆ ಎತ್ತಿಕೊಂಡು ಅಡಗಿಸಿಟ್ಟು, ಬಳಿಕ ಹೆಂಡತಿಯನ್ನು ಎಚ್ಚರಿಸಿದರೆ, ಈ ಚೇಷ್ಟೆಯು ಬಹಳ ಸಂತೋಷಕರವಾಗುವುದೆಂದು ನಿಶ್ಚಯಿಸಿದೆನು. ಅವಳು ತನ್ನ ಬಾಯಿಯಿಂದಲೇ ತಾನು ನಿದ್ದೆಹೋಗಿ ಮೋಸ ಹೋದೆನೆಂದು ಹೇಳಿದ ಮೇಲೆ, ಇದ್ದ ಸಂಗತಿಯನ್ನು ಬಿಚ್ಚಿಹೇಳಿ, ಎಲ್ಲವನ್ನು ಸರಿಗೊಳಿಸಬೇಕು. ಇಷ್ಟೆಲ್ಲಾ ಮಾಡುವಾಗ ಅವಳ ನಿದ್ರಾಭಂಗವಾಗುವುದೆಂಬ ಸಂಶಯವಿಲ್ಲದಿದ್ದರೂ ಸಂಶಯದ ಛಾಯೆಯಿತ್ತು. ಪೂರ್ವಾಪರವನ್ನು ಯೋಚಿಸುತ್ತ ಬರುವಷ್ಟಕ್ಕೆ ಈ ಚೇಷ್ಟೆಯಲ್ಲಿ ಹೆಂಡತಿಗಿಂತ ಗಂಡನೇ ಗೆಲ್ಲುವುದು ಸಾಧ್ಯವೆಂದು ನನಗೆ ಕಂಡುಬಂತು.

ನಾನು ಮನೆಯನ್ನು ಸೇರಿದಾಗ, ಎಲ್ಲವೂ ಶಾಂತವಾಗಿತ್ತು. ಕಿಟಿಕಿಗಳಿಂದ ಒಳಗಿನ ದೀಪದ ಬೆಳಕು ತೋರುತ್ತಿರಲಿಲ್ಲ. ನನ್ನ ದುಶ್ಚೇಷ್ಟೆಗೆ ದೈವವೇ ಸಹಾಯಕವಾಗಿದೆ ಎಂದು ತಿಳಿದು, ನಡುಮನೆಯ ಕಿಟಿಕಿಯ ಬಳಿಯಲ್ಲಿ ಬಂದೆನು. ಕಿಟಿಕಿಯ ಬಾಗಿಲುಗಳು ತೆರೆದಿದ್ದುವು. ಕಿಟಿಕಿಯನ್ನು ಹತ್ತುವಾಗ ನನ್ನ ಮೈಯಲ್ಲೆಲ್ಲಾ ಒಂದು ಬಗೆಯ ಭೀತಿಯು ನಡುಗುತ್ತಿತ್ತು. ಬಾಲ್ಯದಲ್ಲಿ ಗೇರುಹಣ್ಣುಗಳಿಗೋಸ್ಕರ ಮರವನ್ನು ಹತ್ತಿದಾಗ, ದೂರದಿಂದ ಕೋಲು ಹಿಡಿದುಕೊಂಡು ಬರುವ ಮುದುಕನನ್ನು ನೋಡಿದಾಗ, ಯಾವ ಪ್ರಕಾರವಾಗಿ ಎದೆಯು ದಡದಡಿಸುತ್ತಲಿತ್ತೋ, ಅದಕ್ಕಿಂತಲೂ ನೂರುಪಾಲು ಈಗ ಅದು ಬಡಿಯುತ್ತಲಿತ್ತು—ಎಂದು ಹೇಳಿದರೆ ಒಂದು ದೊಡ್ಡ ಮಾತು ಆಗಲಾರದು. ನಡುಮನೆಗೆ ಧುಮುಕಿ ಬರುತ್ತಲೇ ಒಳಗಿನಿಂದ ಯಾರೋ ಕಾಳಪುರುಷನು ನನಗೆ ಇದಿರಾಗಿ ಸಮೀಪಿಸಿದುದನ್ನು ನೋಡಿ, ನನ್ನ ಮೈಯೆಲ್ಲಾ ತಣ್ಣಗಾಗಿ ನಾನು ಸ್ತಬ್ಧ ನಾದೆನು. ವ್ಯಕ್ತಿಯ ರೂಪು ಕತ್ತಲಲ್ಲಿ ಚೆನ್ನಾಗಿ ಕಾಣಿಸದಿದ್ದರೂ, ಕಣ್ಣುಗಳ ಗೊಂಬೆಗಳು ಗೂಗೆಯ ಕಣ್ಣು ಗಳಂತೆ ಮಿನುಗುತ್ತಿದ್ದವು. ಅವನನ್ನು ನೋಡುತ್ತ ಬರುವಷ್ಟಕ್ಕೆ ನನ್ನ ಭೀತಿಯು ಹೆಚ್ಚುಹೆಚ್ಚಾಗುತ್ತ ಬಂತು. ಅಷ್ಟರೊಳಗೆ ಆ ಕಾಳಪುರುಷನು ಏನು ಮಾಡಿದನೋ ನನಗೆ ತಿಳಿಯದು. ಫಕ್ಕನೆ ನನ್ನ ಎರಡು ಕೈಗಳನ್ನು ತನ್ನ ಕಠಿನಹಸ್ತದಲ್ಲಿ ಬಿಗಿದು ಹಿಡಿದುಕೊಂಡು, ಇನ್ನೊಂದು ಕೈಯಲ್ಲಿದ್ದ ಕತ್ತಿಯನ್ನು ನನ್ನ ಕೊರಳಿಗೆ ತೋರಿಸಿ ದನು.

ವ್ಯಕ್ತಿ:—"ನೀನು ಬೇರೆ ಮನೆಯನ್ನು ನೋಡಬಾರದಾಗಿತ್ತೇ? ಇದು ನನ್ನ ಊಟ. ಇಲ್ಲಿ ತಿನ್ನಲಿಕ್ಕೆ ಬಂದೆಯಾ? ನಡೆ! ಬೇರೆ ಕಡೆಗೆ ನಡೆ! ಇಲ್ಲವಾದರೆ..."

ಮಾತನ್ನು ಪೂರೈಸದೆ ಅದರ ಅರ್ಥವನ್ನು ಕತ್ತಿಯಿಂದ ಸೂಚಿಸಿದನು. ವ್ಯಕ್ತಿಯು ಕಳ್ಳನೆಂದು ತಿಳಿದು ಕೊಳ್ಳಲಿಕ್ಕೆ ಇನ್ನು ನನಗೆ ಕಷ್ಟವಿರಲಿಲ್ಲ. ಆದರೆ ನಾನೂ ಇವನ ಸಹಪಂಕ್ತಿಯವನೇ ಎಂದು ಅವನು ತಿಳಿದುದನ್ನು ನಂಬಲಿಕ್ಕೆ ನನಗೆ ಸ್ವಲ್ಪ ಕಷ್ಟವಿತ್ತು. ಈ ಸಂದರ್ಭದಲ್ಲಿ ನನ್ನ ಯಥಾರ್ಥ ಸ್ಥಿತಿಯು ತಿಳಿದುಬಂದರೆ, ನನ್ನ ಹೆಂಡತಿಯ ಕುಂಕುಮ ಉಳಿಯುವುದು ಕಷ್ಟ. ಓಡಿಹೋಗಿ 'ಪೊಲೀಸ್ ಸ್ಟೇಶನ್ನಿಗೆ' ತಿಳಿಸುವಷ್ಟರಲ್ಲಿ ಕಳ್ಳನು ಇದ್ದುದನ್ನೆಲ್ಲಾ ದೋಚಿಕೊಂಡು ಹೋದರೆ, ಲೋಕದಲ್ಲಿ ನನಗೆ ಹೆಂಡತಿಯಲ್ಲದೆ ಮತ್ತೇನೂ ಉಳಿಯದು. ಉಪಾಯಾಂತರದಿಂದ ಕಳ್ಳನನ್ನು ಬಂಧಿಸಿಕೊಂಡು, ಆಮೇಲೆ ಸಕಲಾವತಿಯನ್ನು ಎಚ್ಚರಿಸಿದರೆ, ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸಬಹುದು. ಹೀಗೆ ಮಾಡುವುದಕ್ಕೆ ನಾನು ಕಳ್ಳನ ಹಾಗೆಯೇ ನಟಿಸುವುದೂ, ಬಂದ ಸಂಗತಿಗಳನ್ನೆಲ್ಲಾ ನನಗೆ ಸಹಾಯಕವಾಗುವ ಹಾಗೆ ಪ್ರಯತ್ನಿಸುವುದೂ, ಅವಶ್ಯ ವೆಂದು ನನ್ನ ಮನಸ್ಸಿಗೆ ಹತ್ತಿತು. ಆಪತ್ಕಾಲದಲ್ಲಿ ನನ್ನ ಮನಸ್ಸು ಈ ಪ್ರಕಾರವಾದ ಆಲೋಚನೆಗಳನ್ನು ಯಾವಾಗಲೂ ಮಾಡಿಲ್ಲ. ಹೀಗೆಯೇ ಕಳ್ಳನು ಕನ್ನವನ್ನು ಕೊರೆಯುವಾಗ, ತನ್ನಷ್ಟು ಭಾಗ್ಯಶಾಲಿ ಯಾರೂ ಆಗಲಾರನು ಎಂದು ತಿಳಿಯುವನು.

"ಇಗೋ! ಚಿನ್ನದ ಪೆಟ್ಟಿಗೆಯನ್ನು ನಾನು ತೋರಿಸಿಕೊಟ್ಟರೆ, ನನಗೂ ನಿನಗೂ ಪಾಲಾಗಬಹುದೇ?" ಎಂದು ಕೇಳಿದೆನು.

ಕಳ್ಳನ ಮನಸ್ಸಿಗೆ ಏನು ಹೊಳೆಯಿತೋ ನನಗೆ ತಿಳಿಯದು. ಅವನು ಅಸ್ಫುಟಸ್ವರದಿಂದ "ಎಲಾ! ಗುಲ್ಲು ಮಾಡಬೇಡ! ಮೆಲ್ಲಗೆ, ಇಬ್ಬರಿಗೆ...... ಒಳ್ಳೆಯದು" ಎಂದು ಹೇಳಿದನು.

ನನ್ನ ಜೀವವು ಖಡ್ಗಧಾರೆಯ ಮೇಲೆ ಇತ್ತು. ನಾನು ಕಳ್ಳನೆಂದು ತೋರಿಸಿದುದರಲ್ಲಿ ತುಸ ತಪ್ಪಿ ಬಿದ್ದು, ಅವನಿಗೆ ಶಂಕೆಹುಟ್ಟಿದರೆ, ನನ್ನನ್ನು ಪರಲೋಕಕ್ಕೆ ಕಳುಹಿಸಿದ ಪುಣ್ಯವು ಕಳ್ಳನಿಗೆ ಬರುವುದೆಂದು ನನಗೆ ಚೆನ್ನಾಗಿ ಗೊತ್ತಿತ್ತು. ಆದುದರಿಂದ ನಾನು ಆದಷ್ಟು ಪ್ರಯತ್ನದಿಂದ ಅತ್ತಿತ್ತ ಹುಡುಕಿದವನಂತೆ ತೋರಿಸಿದೆನು.

"ಎಷ್ಟು ಹುಡುಕಿದರೂ ಸಿಕ್ಕಲಾರದು. ಇವರು ಬಡವರು. ನಾವು ಬೇರೆ ಮನೆಗೆ ನಡೆಯುವ!" ಎಂದು ಅವನೊಡನೆ ಆಲೋಚನೆ ಮಾಡಿದೆನು.

ಕಳ್ಳನು ತನ್ನಮುಖದ ಬಳಿಯಲ್ಲಿ ಕೈ ಹಿಡಿದುಕೊಂಡು "ಛೀ! ಛೀ! ಈ ಮನೆಯಲ್ಲಿ ಹಣವಿದೆ ಎಂಬುದನ್ನು ನೀನರಿಯೆ. ಸತ್ತುಹೋದ ಮುದುಕಿಯ ಹಣವು ಈ ಪಾಪಿಗಳ ಪಾಲಿಗೆ ಬಂದಿದೆ" ಎಂದು ಹೇಳಿದನು.

ಒಂದೆರಡು ನಿಮಿಷದ ವರೆಗೆ ಮಾತನಾಡಲಿಕ್ಕೆ ನನಗೆ ಬಾಯಿ ಬರಲಿಲ್ಲ. ಆದರೂ ಬಲಾತ್ಕಾರದಿಂದ, "ಹಣವನ್ನು ಎಲ್ಲಿ ಹೂಳಿಟ್ಟಿರುವರೋ ನಮಗೆ ತಿಳಿಯದು. ಮಾಳಿಗೆಯಲ್ಲಿ ಇರಬಹುದೇ" ಎಂದು ಕೇಳಿದೆನು.

ನಾನು ಮುಳ್ಳಿನ ಮರವನ್ನು ಏರಿದ್ದೆನು. ಆದರೂ ನನ್ನ ಮಾತು ಸಾರ್ಥಕವಾಯಿತು. ಗೃಹಸ್ಥನು ಒಪ್ಪಿಕೊಂಡು, ಮಾಳಿಗೆಯನ್ನು ಹತ್ತಲಿಕ್ಕೆ ಸಮ್ಮತಿಸಿದನು. ಮಾಳಿಗೆಯ ಹೊರಗೆ ತಾನು ಕಾದುಕೊಂಡಿದ್ದು, ನಾನು ಒಳಕ್ಕೆ ಹೋಗಿ ಹುಡುಕಬೇಕೆಂದು ಅಪ್ಪಣೆ ಮಾಡಿದನು. ನನಗೆ ಈ ಮಾತು ಯೋಗ್ಯವಾಗಿ ತೋರ ದಿದ್ದರೂ, ನಾನು ಒಳಗೆ ಪ್ರವೇಶಿಸಲೇ ಬೇಕಾಯಿತು. ಅಷ್ಟರಲ್ಲಿ ಕಳ್ಳನು ಪುನಃ ಬಂದು, "ಈ ಕಾರ್ಯವು ನಿನ್ನಿಂದ ಸಾಗದು. ನನ್ನ ಕೆಲಸವನ್ನು ನೀನು ಮಾಡು. ನಾನು ಒಂದು ನಿಮಿಷದಲ್ಲಿ ಹುಡುಕಿಬಿಡುತ್ತೇನೆ" ಎಂದು ಹೇಳಿದನು.

ಕಳ್ಳನು ನನಗಿಂತಲೂ ಜಾಣನಾಗಿದ್ದನು. ಒಳಕ್ಕೆ ಹೋಗಿ ಒಂದೆರಡು ನಿಮಿಷಗಳಲ್ಲಿಯೇ ಹೊರಗೆ ಬಂದು ನಾನು ಕಾದುಕೊಂಡಿರುವೆನೋ ಇಲ್ಲವೋ ಎಂದು ನಿಶ್ಚಯ ಮಾಡಿಕೊಂಡನು. ನಾನು ಬಾಗಿಲು ಬಿಡದೆ ಇದ್ದುದರಿಂದ, ನನ್ನಲ್ಲಿ ಪೂರ್ಣ ನಂಬುಗೆಯಿಟ್ಟು, ತನ್ನ ಕೆಲಸಕ್ಕೆ ಹೋದನು.

ನಾನು ಇನ್ನು ಅಲ್ಲಿ ತಡೆಯಲಿಲ್ಲ. ಪೊಲೀಸಿನವರನ್ನು ನಿದ್ದೆಯಿಂದ ಎಚ್ಚರಿಸುವುದಕ್ಕೆ ನನಗೆ ವಿಳಂಬ ವಾದರೂ, ಅವರನ್ನು ಕರೆತರುವುದಕ್ಕೆ ನನಗೆ ವಿಳಂಬವಾಗಲಿಲ್ಲ. ಕತ್ತಲು ಬಲವಾದುದರಿಂದಲೋ ಮಾಳಿಗೆಯ ಬಾಗಿಲನ್ನು ನಾನು ಎಳೆಯದೆ ಬಿಟ್ಟುದರಿಂದಲೋ, ಪೊಲೀಸಿನವರು ಒಳಕ್ಕೆ ಹೋಗಲು ಸಮ್ಮತಿಸಲಿಲ್ಲ. ಪೊಲೀಸಿನವರನ್ನು ಮಾಳಿಗೆಯ ಹೊಸ್ತಿಲಿನ ಬಳಿಯಲ್ಲಿರಿಸಿ, ನಾನು ಪುನಃ ಒಳಕ್ಕೆ ಹೋದೆನು. ಹೊರಗೆ ನಡೆದ ಸಂಗತಿ ಕಳ್ಳನಿಗೆ ಬೋಧೆಯಾಗಿತ್ತೋ ಇಲ್ಲವೋ ನನಗೆ ತಿಳಿಯದು. ಅವನು ಹಣದ ಗಂಟು ಸಿಕ್ಕಲಿಲ್ಲ ವೆಂದು ವ್ಯಸನಪಟ್ಟು, ಚಿಕ್ಕಮನೆಯನ್ನು ಹುಡುಕಲು ಕೆಳಗೆ ಇಳಿಯಲಿಕ್ಕೆ ಸಿದ್ಧನಾಗಿದ್ದನು. ನಾನು ಹಿಂದೆಯೇ ಬರುವೆನೆಂದು ಹೇಳಿ, ಅವನನ್ನು ಕೆಳಗೆ ಕಳುಹಿಸಿದೆನು. ಅವನು ಕೆಳಗೆ ಇಳಿಯುತ್ತಲೇ ಅಲ್ಲಿದ್ದವರು "ಏನು ಕಳ್ಳನು ಓಡಿಹೋದನೇ" ಎಂದು ಅವನೊಡನೆ ಕೇಳಿದರು.

"ಅವನು ಮೇಲಿರುವನು. ನೀವು ಬೇಗನೆ ಹೋಗಿ ಹಿಡಿದರೆ ಈಗ ತಾನೇ ಸಿಕ್ಕುವನು. ಇಲ್ಲವಾದರೆ ಮೇಲಿನಿಂದಲೇ ಹಾರಿ ಹೋಗುವನು" ಎಂದು ಹೇಳಿ ಕಳ್ಳನು ಕತ್ತಲಲ್ಲಿ ಅದೃಶ್ಯನಾದನು.

ಪೋಲೀಸಿನವರು "ಬಿಗಿಲ್" ಮಾಡಿದರು. ಕೂಡಲೇ ಮೂರು ನಾಲ್ಕು ಮಂದಿ ಬಂದು ಮೇಲಕ್ಕೆ ನುಗ್ಗಿ ನಿರಪರಾಧಿಯಾದ ನನ್ನನ್ನು ಬಂಧಿಸಿದರು.

"ಇದೇನು ಹುಚ್ಚುತನ! ನಾನು ಕಳ್ಳನಲ್ಲ! ನಾನು ಮನೆಯ ಯಜಮಾನ! ಕಳ್ಳನನ್ನು ಹಿಡಿಯದೆ ನನ್ನನ್ನು ಏತಕ್ಕೆ ಬಂಧಿಸಿದಿರಿ?" ಎಂದು ನಾನು ಆಶ್ಚರ್ಯದಿಂದಲೂ ಭಯದಿಂದಲೂ ಕೇಳಿದೆನು.

ಕೆಂಪು ಮುಂಡಾಸಿನವರು ಅವರ ಸ್ವಭಾವಕ್ಕನುಸಾರವಾಗಿ ನನ್ನ ಮಾತು ಪೂರೈಸಗೊಡಿಸದೆ, "ಹೆಚ್ಚು ಮಾತುಬೇಡ! ನಿನ್ನ ಸಂಗಡ ಇದ್ದವನನ್ನೂ ಬಂಧಿಸದೆ ಇರಲಾರೆವು; ಅವನು ಎಲ್ಲಿ ಹೋಗುವನು? ಅವನ, ಅಪ್ಪನ ಮನೆಗೆ?" ಎಂದು ಹೇಳಿ, ನನ್ನ ಕೈಗೆ ಕೋಳ ಹಾಕಿ, ಅಂಗಳಕ್ಕೆ ಬಲಾತ್ಕಾರದಿಂದ ತಂದರು.

ಸಮಯಕ್ಕೆ ಸರಿಯಾಗಿ ಸಕಲಾವತಿ ಎಚ್ಚತ್ತು, ಚಿಕ್ಕಮನೆಯ ಬಾಗಿಲು ತೆರೆದು' ಮೆಲ್ಲಗೆ ಚಾವಡಿಗೆ ಬಂದಳು. ನಾನು ಉಪಾಯವಿಲ್ಲದವನಾಗಿ, ಹೆಂಡತಿಯನ್ನು ಕರೆದು "ಬಂದ ಕಳ್ಳನನ್ನು ಹಾಳುಮಕ್ಕಳು ಸಡಿಲುಬಿಟ್ಟು, ನನ್ನನ್ನು ಕಟ್ಟಿ ತೆಗೆದುಕೊಂಡು ಹೋಗುತ್ತಿದ್ದಾರೆ. ನೀನಾದರೂ ನನ್ನನ್ನು ಗುರುತಿಸಿ, ಬಿಡುಗಡೆ ಮಾಡು" ಎಂದು ಮೊರೆಯಿಟ್ಟನು.

"ಅಮ್ಮ! ಒಬ್ಬ ಕಳ್ಳನು ನಮ್ಮನ್ನು ಮೋಸಪಡಿಸಿ ತಪ್ಪಿಸಿಕೊಂಡನು. ಈ ಕಳ್ಳರ ಜಾಣತನ ನೀನರಿಯೆ. ನೀನು ಇವನನ್ನು ಗುರುತಿಸಿದರೂ ಗುರುತಿಸದಿದ್ದರೂ, ನಾವು ಇವನನ್ನು ಕೊಂಡುಹೋಗದೆ ಬಿಡೆವು" ಎಂದು ಪೋಲೀಸಿನವನು ಹೇಳಿ, ನನ್ನನ್ನು—ನಿರಪರಾಧಿಯಾದ ಪ್ರಾಣಿಯನ್ನು—ಒಯ್ದುಕೊಂಡು ಹೋದರು. ಆಗ ನನ್ನ ಹೆಂಡತಿ ಬಿಕ್ಕಿ ಬಿಕ್ಕಿ ಅಳುತ್ತಿರುವುದು ನನಗೆ ಕೇಳಿಸುತ್ತಿತ್ತು.

ನನ್ನನ್ನು ಸ್ಟೇಶನ್ನಿಗೆ ತಂದ ಕೂಡಲೇ ಇದ್ದ ಸಂಗತಿಯನ್ನೆಲ್ಲಾ ನಾನು ಯಥಾರ್ಥವಾಗಿ ಹೇಳಿದೆನು. ನನ್ನ ಹೆಂಡತಿಯನ್ನು ನಾನು ಹೇಗೆ ಪ್ರೀತಿಸುತ್ತಿದ್ದೆನೆಂದೂ ನನ್ನ ಹೆಂಡತಿಯ ಮೇಲಿನ ಪ್ರೀತಿಗೋಸ್ಕರವಾಗಿ ನಾನು ಮಾಡಿದ ದುಶ್ಚೇಷ್ಟೆಯು ನನ್ನನ್ನು ಹೇಗೆ ಆಪತ್ತಿಗೆ ತಗುಲಿಸಿತೆಂದೂ' ನನ್ನ ಹೆಂಡತಿಯು ನನ್ನನ್ನು ಬಿಡುಗಡೆ ಮಾಡದೆ ಇರಲಾರಳೆಂದೂ ನಾನು ಪೋಲೀಸಿನವರಿಗೆ ತಿಳಿಸಿದೆನು. ಅವರು ನನ್ನ ಮಾತಿಗೆ ಕಿವಿ ಗೊಟ್ಟರೋ ಇಲ್ಲವೋ ನನಗೆ ತಿಳಿಯದು. ನನ್ನನ್ನು ಆಗತಾನೇ ಬಿಡುಗಡೆ ಮಾಡಲಿಕ್ಕೆ ಬಲವಾದ ಕಾರಣ ವಿರಲಿಲ್ಲ. ಏಕೆಂದರೆ ನನ್ನ ಕೈಯಲ್ಲಿ ಹಣವಿರಲಿಲ್ಲ. ಆದರೂ ನಾನು ಒಂದು ರಾತ್ರಿ ಜೈಲಿನಲ್ಲಿ ಮಲಗಬೇಕಾ ಯಿತು, ಎಂದು ಹೇಳಲಿಕ್ಕೆ ನಾಚಿಕೆ ಇಲ್ಲ. ನನ್ನ ಹೆಂಡತಿ ಸಕಲಾವತಿ ಮರುದಿನ ಬೆಳಿಗ್ಗೆ ನನ್ನನ್ನು ಬಿಡುಗಡೆ ಮಾಡಿದಳೆಂದೂ, ಅಂದಿನಿಂದ ನನ್ನ ಹೆಂಡತಿಯೊಡನೆ ದುಶ್ಚೇಷ್ಟೆ ಮಾಡುವುದು ನಿಂತುಹೋಯಿತೆಂದೂ, ಹೇಳಲಿಕ್ಕೆ ನನಗೆ ನಾಚಿಕೆ ಇಲ್ಲ.

ಪ್ರಥುಲಾ

ದಕ್ಷಿಣ ಹಿಂದುಸ್ಥಾನದ ಪ್ರಾಚೀನ ರಾಜ್ಯಗಳಲ್ಲಿ ವಿಜಯನಗರದಷ್ಟು ಲೋಕೋತ್ತರವಾದ ಕೀರ್ತಿಯನ್ನೂ, ಅಭ್ಯುದಯವನ್ನೂ ಹೊಂದಿದ ರಾಜ್ಯ ಮತ್ತೊಂದಿಲ್ಲ. ಉಷ್ಣಪ್ರದೇಶಗಳಲ್ಲಿ ರಂಜಿಸುವ ಸಂಧ್ಯಾಕಾಲದಂತೆ ಈ ರಾಜ್ಯವು ಅಲ್ಪಕಾಲ ಪ್ರಜ್ವಲಿಸಿ, ಒಡನೆಯೇ ಅಂಧಕಾರದಿಂದ ಆಚ್ಛಾದಿತವಾಯಿತು. ಪ್ರಕೃತದಲ್ಲಿ ಅದರ ದುರ್ಘಟ ದುರ್ಗಗಳು ಭಗ್ನವಾಗಿದ್ದರೂ, ಅದರ ಉನ್ನತ ಪ್ರಾಕಾರಗಳು ಬಿದ್ದು ಹೋಗಿದ್ದರೂ, ಅದರ ದಿವ್ಯ ದೇವಾಲಯಗಳು ಜೀರ್ಣವಾಗಿದ್ದರೂ ಒಂದು ಕಾಲದಲ್ಲಿ ವಿಜಯನಗರವು ಹಿಂದೂರಾಜರ ಬಲಸಂಪನ್ನವಾದ, ಮಹಿಮಾನ್ವಿತ ರಾಜ್ಯವಾಗಿತ್ತು. ಅದರ ವಿಸ್ತೀರ್ಣವು ಯುರೋಪ್ ಖಂಡದ ಒಸ್ಟ್ರಿಯ ಸಂಸ್ಥಾನದಷ್ಟು ಇದ್ದಿತು. ಪ್ರಜೆಗಳು 14ನೆಯ ಶತಮಾನದ ಒಸ್ಟ್ರಿಯನ್ ಜನರಷ್ಟೇ ಬುದ್ಧಿವಂತರಾಗಿಯೂ ನಾಗರಿಕರಾಗಿಯೂ ಇದ್ದರು. ರಾಜಧಾನಿಯ ವೈಭವವೂ ಐಶ್ವರ್ಯವೂ ವಿಯೆನ್ನ ಎಂಬ ನಗರವನ್ನು ನೋಡಿದ ಪ್ರವಾಸಕರಿಗೆ ಬೆರಗು ಮಾಡುತ್ತಿದ್ದವು. ಫೆರಿಷ್ತಾ ಎಂಬ ಮಹಮ್ಮದೀ ಇತಿಹಾಸಕಾರನು ಕ್ರಿ. ಶಕೆಯ 1378ರಲ್ಲಿ ವಿಜಯನಗರದ ವರ್ಣನೆಯನ್ನು ಕುರಿತು ಹೀಗೆ ಬರೆದಿರುವನು:

"ಗೋವೆಯ ರೇವು, ಮಲೆಗಾವಿನ ದುರ್ಗ... ಮತ್ತು ತುಳುಘಾಟಿಯಲ್ಲಿ ಅನೇಕ ಜಿಲ್ಲೆಗಳು ವಿಜಯನಗರದ ಅರಸುಗಳ ಕೈಸೇರಿದುವು. ರಾಜ್ಯವು ಪ್ರಜೆಗಳಿಂದ ಸುಖಮಯವಾಗಿದ್ದಿತು. ಪ್ರಜೆಗಳೆಲ್ಲರು ರಾಜನ ಅಧಿಕಾರವನ್ನು ಶಿರಸಾವಹಿಸುತ್ತಿದ್ದರು. ಮಲೆಯಾಳದ ಅರಸರೂ ಸಿಂಹಲ ಮೊದಲಾದ ದ್ವೀಪಗಳ ರಾಜರೂ ಕಳುಹಿಸಿದ ನಿಯೋಗಿಗಳು ವಿಜಯನಗರದ ರಾಜಸಭೆಯನ್ನು ಅಲಂಕರಿಸುತ್ತಿದ್ದರು. ಆ ದೇಶಗಳಿಂದ ಆಗಾಗ ರಾಜಾರ್ಹವಾದ ಉಡುಗೊರೆಗಳು ಕಳುಹಿಸಲ್ಪಡುತ್ತಿದ್ದವು."

ವಿಜಯನಗರವನ್ನು ಸ್ಥಾಪಿಸಿದ ಹರಿಹರ ಮತ್ತು ಬುಕ್ಕ ಎಂಬ ಅಣ್ಣತಮ್ಮಂದಿರಲ್ಲಿ ಬುಕ್ಕನು 1378ರಲ್ಲಿ ಆಳಿದನು. ಬುಕ್ಕರಾಯನ ಬಳಿಕ ಅವನ ಮಗನಾದ ಎರಡನೆಯ ಹರಿಹರರಾಯನ ಆಳ್ವಿಕೆಯಲ್ಲಿ ರಾಜ್ಯವು ವಿಸ್ತಾರಗೊಂಡಿತು. ಆ ರಾಜ್ಯವಿಸ್ತಾರವು ಎಷ್ಟಾಯಿತೆಂದು ಮೈಸೂರು, ಧಾರವಾಡ, ಕಂಚಿ, ಚೆಂಗಲ್ಪಟ್ಟು, ತಿರುಚಿನಾಪಳ್ಳಿ ಮೊದಲಾದ ಸ್ಥಳಗಳಲ್ಲಿ ಅವನು ಕೊರೆಯಿಸಿದ ಶಿಲಾಲೇಖಗಳಿಂದ ಈಗಲೂ ವಿಶದವಾಗುತ್ತಿದೆ. ಹರಿಹರರಾಯನ ತರುವಾಯ ಎರಡನೆಯ ಬುಕ್ಕರಾಯನು ಪಟ್ಟಕ್ಕೆ ಬಂದನು. ಅನಂತರ ಕ್ರಿ.ಶಕೆಯ 1406ರಲ್ಲಿ ಅವನ ತಮ್ಮನಾದ ದೇವರಾಯನು ಸಿಂಹಾಸನವನ್ನು ಏರಿದನು. ಪ್ರಸಕ್ತ ಸಮಯದಲ್ಲಿ ಈ ದೇವರಾಯನೇ ವಿಜಯನಗರವನ್ನು ಆಳುತ್ತಿದ್ದನು.

ವಿಜಯನಗರದ ಹಿಂದೂರಾಜರಿಗೂ, ಭಾಮಿನಿರಾಜ್ಯದ ಮುಸಲ್ಮಾನ್ ಸುಲ್ತಾನರಿಗೂ ಪೂರ್ವದಿಂದಲೂ ಮನಸ್ತಾಪವಿದ್ದಿತು. ಮತದ್ವೇಷವೇ ಮನಸ್ತಾಪದ ಮುಖ್ಯ ಕಾರಣವಾಗಿದ್ದರೂ, ತಮ್ಮ ತಮ್ಮ ರಾಜ್ಯಗಳ ಎಲ್ಲೆಯನ್ನು ಕುರಿತು ನೆವಮಾಡಿ, ಎರಡು ರಾಜ್ಯಗಳೂ ಘೋರವಾದ ಯುದ್ಧಗಳಲ್ಲಿ ಸೇರುತ್ತಿದ್ದವು. ವಿಜಯನಗರ ಸಂಸ್ಥಾನದ ಉತ್ತರ ಮೇರೆಯು ತುಂಗಭದ್ರಾ ನದಿ. ಹಾಗೂ ಭಾಮಿನಿ ರಾಜ್ಯದ ದಕ್ಷಿಣ ಮೇರೆಯು

ಕೃಷ್ಣಾನದಿಯಾಗಿದ್ದಿತು. ಈ ಎರಡೂ ನದಿಗಳ ನಡುವೆ ಇದ್ದ ಪ್ರದೇಶದ ಅಧಿಕಾರವನ್ನು ಎರಡೂ ರಾಜ್ಯಗಳೂ ವಿವಾದಿಸುತ್ತಿದ್ದವು. ಎರಡೂ ಸಂಸ್ಥಾನಗಳ ವ್ಯಾಪಾರಕ್ಕೆ ಇದುವೇ ಹೆದ್ದಾರಿಯಾದುದರಿಂದ, ಈ ಪ್ರದೇಶದ ಅಧಿಕಾರಕ್ಕೋಸ್ಕರ ಅನೇಕ ಕಲಹಗಳು ಉಂಟಾದುವು. ಈ ಯುದ್ಧಗಳಿಂದ ಆ ಪ್ರದೇಶವು ದಿನೇ ದಿನೇ ಹೀನ ಗತಿಗೆ ಇಳಿದು ಹೋಯಿತಲ್ಲದೆ ರಾಜ್ಯಗಳಿಗೂ ಪ್ರಯೋಜನಾಂಶವೇನೂ ಸಿಗಲಿಲ್ಲ. ಈ ಪ್ರದೇಶದಲ್ಲಿನ ಮುಖ್ಯಸ್ಥಳವಾದ ಮುದುಗಲ್ಲು ಇಬ್ಬರನ್ನೂ ಒಡೆಯನನ್ನಾಗಿ ಸ್ವೀಕರಿಸಲಿಲ್ಲ.

ಮುದುಗಲ್ಲು ಸ್ಥಳದಲ್ಲಿ ಒಂದು ಕುಟೀರ; ಸಾಮಾನ್ಯವಾದ ಕುಟೀರ. ಕುಟೀರದ ಒಳಗೆ ಯಾರೂ ಇರಲಿಲ್ಲ. ಮನೆಯ ಅಂಗಳದಲ್ಲಿ ಒಬ್ಬ ರಮಣಿಯು ನಿಂತಿದ್ದಳು. ಮಹಾಲಯ ದಿವಸಗಳ ಕತ್ತಲಿಂದ ವ್ಯಥಿತವಾದ ಜನದೃಷ್ಟಿಗೆ ಶರತ್ಕಾಲದ ಶಶಿಲೇಖೆಯು ಯಾವ ಆನಂದವನ್ನು ಬೀರುವುದೋ, ಆ ಸುಖೋಲ್ಲಾಸವನ್ನು ಈ ಸ್ತ್ರೀಯ ದರ್ಶನವು ವಿಸ್ತರಿಸುತ್ತಿತ್ತು. ಸಮುದ್ರದಲ್ಲಿ ಉಬ್ಬರವಿಳಿತಗಳು ಸಹಜವಾಗಿರುವಂತೆ, ರಮಣೀಜನಗಳ ಅಂಗಸೌಂದರ್ಯದಲ್ಲಿಯೂ ಉಬ್ಬರವಿಳಿತಗಳು ಇರುವುವು. ಯುವತಿಯರ ಶೊಭಾ ರಾಶಿಯು ಇಳಿತಕ್ಕೆ ಮೊದಲು ಯಾವ ಪ್ರಾಯದಲ್ಲಿ ಉಬ್ಬರದಿಂದ ಉಕ್ಕಿಬಂದು ದೇಹವನ್ನು ಆಕ್ರಮಿಸಿ ಬಿಡುವುದೋ, ಅಂತಹ ವಯಸ್ಸಿನಲ್ಲಿ ಈ ರಮಣಿಯು ಕಾಲಿಡುವಂತಿದ್ದಳು. ಅವಿರಳವಾದ ಕೇಶದಾಮ, ದೀರ್ಘವಾದ ಸೀಮಂತ, ವಿಶಾಲವಾದ ಹಣೆ, ವಕ್ರವಾದ ಹುಬ್ಬು, ಚಂಚಲವಾದ ಕಣ್ಣು, ಪ್ರೇಮಮಯವಾದ ತುಟಿ, ಪ್ರಜ್ವಲಿಸುವ ಮುಖ ಇವೆಲ್ಲವು ಲಾವಣ್ಯ ಲಕ್ಷಣಗಳಾದರೆ ಈ ರಮಣಿಯಲ್ಲಿ ಆ ಲಕ್ಷಣಗಳು ಇಲ್ಲದೆ ಇರಲಿಲ್ಲ. ಪ್ರಾಚೀನ ಕವಿಗಳು ಸತ್ಯಭಾಮಾ, ದ್ರೌಪದಿ, ಜಾನಕಿ ಮೊದಲಾದ ಸುಂದರಿಯರನ್ನು ಅತಿಶಯೋಕ್ತಿಯಿಂದ ವರ್ಣಿಸಿರುವರು. ಈ ಯುವತಿಯು ಇವರೊಳಗೆ ಯಾರನ್ನು ಹೋಲಿದ್ದಳೋ ನಾವು ಹೇಳಲಾರೆವು. ಸತ್ಯಭಾಮೆಯ ಹುಬ್ಬುಗಂಟು, ದ್ರೌಪದಿಯ ವೀರತ್ವ, ಜಾನಕಿಯ ಸರಳತೆ ಇವಳ ಮುಖದಲ್ಲಿ ಅಂಕಿತವಾಗಿದ್ದವು. ಆದರೆ ಆ ಹುಬ್ಬುಗಂಟು ಒರಟುತನದ ಚಿಹ್ನವಾಗಿರಲಿಲ್ಲ. ಆ ವೀರತ್ವವು ಹೃದಯದ ಕಠೋರ ಭಾವದ ಮುದ್ರೆಯಾಗಿರಲಿಲ್ಲ. ಆ ಸರಳತೆಯು ಅನ್ಯರಿಂದ ವಂಚಿತಳಾಗುವಳೆಂದು ಸೂಚಿಸುತ್ತಿರಲಿಲ್ಲ. ಉಟ್ಟುಕೊಂಡ ಹರಕುಬಟ್ಟೆಯು ರಂಧ್ರಯುಕ್ತವಾಗಿದ್ದರೂ ಯುವತಿಯ ಮಂಜುಲವಾದ ದೇಹಕಾಂತಿಯಿಂದ ನೂತನವಾದ ಸ್ವರೂಪವನ್ನೇ ಹೊಂದಿ, ಜರಿಯ ಚುಕ್ಕೆಗಳಿಂದ ಕೂಡಿದಂತೆ ಕಂಗೊಳಿಸುತಿತ್ತು.

ಯುವತಿಯು ಯಾರನ್ನೋ ನಿರೀಕ್ಷಿಸಿಕೊಂಡಿದ್ದಂತೆ ನಿಂತಿದ್ದಳು. ಆಗಾಗ ಏನನ್ನೋ ಕಿವಿಗೊಟ್ಟು ಕೇಳುತ್ತಿದ್ದಳು; ಒಮ್ಮೊಮ್ಮೆ ಮಾರ್ಗದ ತುದಿಯವರೆಗೆ ಕಣ್ಣನ್ನು ಚಾಚುತಿದ್ದಳು. ಮಾರ್ಗದಲ್ಲಿ ಜನಗಳು ನಡೆಯುವ ಸದ್ದಾದರೆ, ಕೊರಲನ್ನು ನೀಡಿ, ಯಾರ ಆಗಮನವನ್ನೋ ಹಾರೈಸಿದಂತೆ ಇಣಿಕಿ ನೋಡುತ್ತಿದ್ದಳು. ದಾರಿಗರು ತನ್ನನ್ನೇ ದೃಷ್ಟಿಸುತ್ತಲೇ ನಾಚಿದಂತೆ ತಾನೇ ಹಿಂದೆಗೆದು ಅಲ್ಲಲ್ಲಿ ನಡೆಯುತ್ತಿದ್ದಳು. ಅರ್ಧತಾಸಿನ ಬಳಿಕ ಒಬ್ಬ ವೃದ್ಧನು ಮಾರ್ಗದಿಂದ ಅಂಗಳಕ್ಕೆ ಕಾಲಿಟ್ಟನು. ಬಂದವನು ತನ್ನ ಹಿಂದುಗಡೆಯಲ್ಲಿ ಇದ್ದುದರಿಂದ, ರಮಣಿಯು ಮೊದಲು ಅವನನ್ನು ದೃಷ್ಟಿಸಲಿಲ್ಲ. ಬಂದವನು ಕಾಲಿನ ಧೂಳು ಹಾರಿಸುವುದಕ್ಕೆ ಅಂಗಳದಲ್ಲಿ ಸಪ್ಪಳಿಸಿದನು. ಒಡನೆ "ಮಗು! ಪೃಥುಲಾ! ಮನೆಯೊಳಗೆ ದೀಪ ಹಚ್ಚಲಿಲ್ಲವೇ? ಕತ್ತಲಾಗುತ್ತಾ ಬಂದಿತು" ಎಂದನು.

ರಮಣಿಯು ಹತ್ತಿರಕ್ಕೆ ಬಂದು, "ಅಪ್ಪಾ! ಹಾದಿಯಲ್ಲಿ ನೀನು ಯಾರನ್ನಾದರೂ ಕಂಡೆಯಾ? ಒಳಗೆ ದೀಪ ಹಚ್ಚಿರುವೆನು" ಎಂದು ಉತ್ತರಕೊಟ್ಟಳು.

ಮುದುಕನು ಜಗಲಿಯ ಮೇಲಿದ್ದ ತಂಬಿಗೆಯನ್ನು ತೆಗೆದುಕೊಂಡು ಕಾಲು ತೊಳೆದು ಬಂದನು. ಮಗಳು ಇನ್ನೂ ಅಂಗಳದಲ್ಲಿ ತಳುವಿದುದನ್ನು ನೋಡಿ ವೃದ್ಧನು "ಮಗು! ಒಳಕ್ಕೆ ಬಾ! ನೀನು ಅಲ್ಲಿ ಸುಮ್ಮನೆ ನಿಂತಿರುವೆ ಏಕೆ?" ಎಂದನು.

ಮಗಳು ನಗುತ್ತಾ "ಅಪ್ಪಾ! ನೀನು ಜ್ಯೋತಿಷ್ಯವನ್ನು ಬಲ್ಲೆಯಷ್ಟೇ? ನಾನು ಏಕೆ ನಿಂತಿರುವೆನೆಂದು ಹೇಳು?" ಎಂದು ಪ್ರಶ್ನೆ ಮಾಡಿದಳು.

ತಂದೆಯು ಪ್ರೇಮದಿಂದ "ಅಮ್ಮಣ್ಣಿ! ನನ್ನನ್ನು ಪರೀಕ್ಷಿಸಲಿಕ್ಕೆ ನಿಂತಿರುವೆಯಾ?" ಎಂದು ಹೇಳಿ ಒಂದು ನಿಮಿಷ ಯಾವುದನ್ನೋ ತನ್ನೊಳಗೆ ಗುಣಿಸಿ ನೋಡಿ "ಮಗು! ಪ್ರಥುಲಾ! ನೀನು ನಿನ್ನ ಭಾವಿ ಪತಿಯನ್ನು, ನಿನ್ನ ಹೃದಯವಲ್ಲಭನನ್ನು ನಿನ್ನ ಗುಂಡ—

ಮಾತು ಮುಗಿಯುವಷ್ಟರಲ್ಲಿ ಮಗಳು ಓಡಿಬಂದು, ತಂದೆಯ ಮುಖವನ್ನು ತನ್ನ ಎರಡೂ ಕೈಗಳಿಂದ ಮುಚ್ಚಿ, ಮನಸ್ಸಿನಲ್ಲೇ ನಗಾಡತೊಡಗಿದಳು. ವೃದ್ಧನು ಮಗಳ ಕೈಗಳನ್ನು ಎತ್ತಿ ಹಿಡಿದು, "ನಿನ್ನ ಗುಂಡ ನಾಯಕನ ಆಗಮನವನ್ನು" ಎಂದು ಪೂರೈಸಿದನು.

ವೃದ್ಧನು ಮುದುಗಲ್ಲು ಹಳ್ಳಿಯ ನಿವಾಸಕನು. ಇವನ ಪೂರ್ವಜರು ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ನಡುವಿನಲ್ಲಿದ್ದ ಪ್ರದೇಶಕ್ಕೆ ಒಂದು ಕಾಲದಲ್ಲಿ ಅಧೀಶ್ವರರಾಗಿದ್ದರು. ವಿಜಯನಗರದ ರಾಜನಾದ ಹರಿಹರನು ಇವನ ಪೂರ್ವಜರನ್ನು ವಿಶ್ವಾಸಘಾತುಕತೆಯಿಂದ ಕೊಂದು ಆ ಪ್ರದೇಶವನ್ನು ತಾನೇ ಆಕ್ರಮಿಸಿ ಕೊಂಡನು. ಹಾಗೂ ಭಾಮಿನಿ ಸುಲ್ತಾನರು ಇದೇ ಸ್ಥಳಕ್ಕೆ ತಾವು ಒಡೆಯರೆಂದು ತಮ್ಮ ಅಧಿಕಾರವನ್ನು ತೋರಿಸುತ್ತಿದ್ದರು. ಇವರಿಬ್ಬರ ಪರಸ್ಪರ ಕಲಹಗಳಿಂದ ಇವನ ಪೂರ್ವಜರ ಮಹತ್ವವೆಲ್ಲವು ಹೋಗಿ, ಪ್ರಕೃತದಲ್ಲಿ ಇವನು ಅತೀ ದರಿದ್ರನಾಗಿದ್ದನು. ಆದರೂ ಮುದುಗಲ್ಲಿನ ನಿವಾಸಕರ ಮನ್ನಣೆಗೂ ಪ್ರೀತಿಗೂ ಪಾತ್ರನಾಗಿದ್ದನು. ಪತಿಪಾರಾಯಣಳಾದ ಇವನ ಹೆಂಡತಿಯು ಈ ಕಥಾಕಾಲದ 10 ವರ್ಷಗಳ ಹಿಂದೆ ಮೃತಳಾದಳು. ಇವಳ ಮರಣದ ಬಳಿಕ ವೃದ್ಧನು ಪ್ರಥುಲೆಗೆ ತಂದೆಯೂ, ತಾಯಿಯೂ ಆದನು. ವೃದ್ಧನ ಧರ್ಮಪತ್ನಿಯು ತನ್ನ ಮರಣತಲ್ಪದಲ್ಲಿ ಮಗಳ ವಿವಾಹವನ್ನು ಕುರಿತು ಸೂಚಿಸಿ ಮೃತಳಾದಳು. ಪ್ರಥುಲೆಯು ಈ ಸಾಯಂಕಾಲದಲ್ಲಿ ಯಾರ ಆಗಮನವನ್ನು ಎದುರ್ನೋಡುತ್ತಿದ್ದಳೋ ಆ ಗುಂಡನಾಯಕನೇ ತನ್ನ ಅಳಿಯ ನಾಗಬೇಕೆಂದು ಅವಳ ಮರಣ ಪ್ರಾರ್ಥನೆಯಾಗಿದ್ದಿತು. ವೃದ್ಧನು ಮೊದಮೊದಲು ಈ ಪ್ರಾರ್ಥನೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಕೊನೆಗೆ ಮಗಳಿಗೂ, ನಾಯಕನಿಗೂ ಆಂತರಿಕವಾದ ಪ್ರೇಮವಿರುವುದೆಂದು ಖಚಿತ ಮಾಡಿಕೊಂಡು, ಮಗಳ ವಿವಾಹ ಸಂಬಂಧಕ್ಕೆ ಒಪ್ಪಿದನು. ಗುಂಡನಾಯಕನು ವಿಜಯನಗರದ ಸೈನ್ಯದಲ್ಲಿ ಒಂದು ಸಾಮಾನ್ಯವಾದ ಪದವಿಯನ್ನು ಹೊಂದಿದ್ದನು. ತನಗೆ ಅವಕಾಶವಿದ್ದಾಗ, ಗುಂಡನಾಯಕನು ಮುದು ಗಲ್ಲಿಗೆ ಬಂದು ತನ್ನ ಪ್ರಿಯಳ ಮಧುರವಾದ ಸಹವಾಸದಲ್ಲಿ ಒಂದೆರಡು ದಿನಗಳನ್ನು ಕಳೆದು ಹೋಗುತ್ತಿದ್ದನು. ಪ್ರಕೃತದಲ್ಲಿ ಗುಂಡನಾಯಕನು ತನ್ನ ಪ್ರಾಣೇಶ್ವರಿಯನ್ನು ವಿಜಯನಗರದಲ್ಲಿ ನಡೆಯುವ ಮಹಾನವಮಿಯ ಉತ್ಸವಕ್ಕೆ ಕೊಂಡು ಹೋಗುವೆನೆಂದು ಕೆಲವು ದಿನಗಳ ಹಿಂದೆ ಮಾತುಕೊಟ್ಟಿದ್ದನು. ಅದು ಕಾರಣದಿಂದಲೇ ಪ್ರಥುಲೆಯು—ಚಾತಕಪಕ್ಷಿಯು ಮೋಡಗಳ ಆಗಮನವನ್ನೇ ನಿರೀಕ್ಷಿಸುವಂತೆ—ತನ್ನ ಭಾವೀಪತಿಯ ಹಾದಿ ಯನ್ನು ಎದುರ್ನೋಡುತ್ತಿದ್ದಳು.

ಸ್ವಲ್ಪ ಪೊತ್ತಿನ ಮೇಲೆ ಒಬ್ಬ ಯುವಕನು ಮನೆಗೆ ಬಂದನು. ಇವನನ್ನು ನೋಡುತ್ತಲೇ ಪ್ರಥುಲೆಯ ಕಣ್ ನೈದಿಲೆಯು ಅರಳಿತು. ಪ್ರಥುಲೆಯು ಯುವಕನ ಬಳಿಗೆ ಬಂದು, "ನಿನ್ನ ಆಗಮನವನ್ನು ಇದುವರೆಗೆ ಹಾರೈಸುತ್ತ ಇದ್ದೆವು. ನೀನು ಹಾದಿಯಲ್ಲಿ ತಳುವಿದೆಯೋ ಏನೋ ಎಂದು ಚಿಂತಿಸುತ್ತಿದ್ದೆನು" ಎಂದಳು.

ಯುವಕನು ವೃದ್ಧನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ, ಪ್ರಥುಲೆಯನ್ನೇ ದೃಷ್ಟಿಸಿ "ಈಗ ನಾನು ಬಂದಿರುವೆನಷ್ಟೆ. ಇನ್ನೂ ಚಿಂತೆಯುಂಟೇ?" ಎಂದು ಕೇಳಿದನು.

"ವಿಜಯನಗರಕ್ಕೆ ಎಂದು ಹೋಗುವುದೆಂಬ ಚಿಂತೆಯೊಂದಲ್ಲದೆ ಬೇರೊಂದಿಲ್ಲ" ಎಂದು ಯುವತಿಯು ಉತ್ತರಕೊಟ್ಟಳು.

ವೃದ್ಧನು ಈ ಸಮಯದಲ್ಲಿ ಕವಡಿಗಳನ್ನು ಕೈಯಲ್ಲಿಕೊಂಡು ಎಂದಿನಂತೆ ಏನನ್ನೋ ಗುಣಿಸುತ್ತಿದ್ದನು.

ಯುವಕನು "ಇನ್ನೂ ವಿಳಂಬ ಮಾಡಲಾಗದು. ವಿಜಯನಗರದ ಮಹಾರ್ನವಮಿಯ ಉತ್ಸವವು ಒಂದೆರಡು ದಿನಗಳಲ್ಲೇ ಮುಗಿಯುವುದು" ಎಂದನು.

ಪ್ರಥುಲಾ:—" ನಾನು ಹೊರಡುವುದಕ್ಕೆ ಕಾಲ್ಬೆರಳ ಮೇಲೆ ನಿಂತಿರುವೆನು. ನಾಳೆ ಬೆಳಗ್ಗೆ ಪ್ರಯಾಣ ಬೆಳೆಯಿಸಿದರೆ ಆಗದೇ?"

ಯುವಕ:—"ಈ ರಾತ್ರಿ ತುಂಗಭದ್ರೆಯನ್ನು ದಾಟಿದರೆ, ನಾಳೆ ಸಾವಕಾಶದಿಂದ ವಿಜಯನಗರವನ್ನು ಮುಟ್ಟಬಹುದು."

ಪ್ರಥುಲಾ:—"ನನಗೆ ಒಪ್ಪಿಕೆ. ಆದರೆ ಅಪ್ಪನು ಏನು ಹೇಳುವನೋ ತಿಳಿಯಲಾರೆ."

ಯುವಕ:—"ನೀನು ನನ್ನೊಡನೆ ಬರುವುದಕ್ಕೆ ಅವನು ಅಡ್ಡಿಮಾಡುವನೇ? ನಮ್ಮ ಪ್ರೇಮಪರಿಚಯವು ಅವನು ಅರಿಯದವನೇ?"

ಆ ಸಮಯದಲ್ಲಿ ವೃದ್ಧನು ತನ್ನ ಗುಣಿತವನ್ನು ತೀರಿಸಿ ಭಾವೀದಂಪತಿಗಳ ಕಡೆಗೆ ನೋಡಿ ನಿಟ್ಟುಸಿರಿಟ್ಟನು. ಇವರಿಬ್ಬರ ಆಸೆಯನ್ನೂ ಅವಸರವನ್ನೂ ನೋಡಿ ಮನಸ್ಸಿನಲ್ಲೇ ಮರುಗಿದನು. ಪುನಃ ಕವಡೆಗಳನ್ನು ಹರಡಿ ಪರಿಷ್ಕಾರವಾಗಿ ಲೆಕ್ಕ ಮಾಡುವಂತಿದ್ದನು.

ಮಗಳು ಮುದುಕನ ಬಳಿಗೆ ಬಂದು, "ಅಪ್ಪಾ! ನಾವು ಈ ರಾತ್ರಿಯೇ ವಿಜಯನಗರಕ್ಕೆ ಹೊರಡಬೇಕೆಂದಿರುವೆವು; ನಿನ್ನ ಅಪ್ಪಣೆಯನ್ನು ಕೇಳಲಿಚ್ಛಿಸುವೆವು" ಎಂದಳು. ಯುವಕನು ಅವನ ಸಮೀಪದಲ್ಲೇ ಬಂದು ಕುಳಿತನು.

ವೃದ್ಧನು ಗಣಿತವನ್ನು ಮಾಡುತ್ತಾ,
ದ್ವಿಮೂರ್ತಿರಾಶಾವುದಯಂ ಪ್ರಪನ್ನೇ ಕ್ರೂರಗ್ರಹೈಯುಕ್ತ
ನಿರೀಕ್ಷ ತೇಚ॥

ಪ್ರಯಾತಿಯದ್ಯಪ್ಯಬುದಃತದಾನೀ ನಿವರ್ತತೇ ಶತ್ರು ಜನಾಭಿಭೂತಃ॥
ಎಂದು ಶ್ಲೋಕಿಸಿದನು.

ಬಳಿಕ ಮುದುಕನು, "ದ್ವಿಸ್ವಭಾವದ ಮಿಥುನರಾಶಿಯ ಸಪ್ತಮ ಕೇಂದ್ರವಾದ ಧನುಸ್ಸಿನಲ್ಲಿ ಕ್ರೂರನಾದ, ರಾಜಗ್ರಹನಾದ, ಅಸ್ತವನ್ನೈದುವ, ಸೂರ್ಯನು ಕೇತುವಿನಿಂದ ಕೂಡಿ ಅಸ್ತಮಿಸುವುದರಿಂದ ಪ್ರಯಾಣಪ್ರ ನಿಷಿದ್ಧ" ಎಂದನು.

ದಂಪತಿಗಳಿಬ್ಬರೂ ತಟಸ್ಥರಾಗಿ, ವ್ಯಸನಸೂಚಕವಾದ ಪರಸ್ಪರ ಮುಖವನ್ನು ನೋಡಿದರು. ಪ್ರಥುಲೆಯು "ಅಪ್ಪಾ! ದೇವರ ಉತ್ಸವವನ್ನು ನೋಡುವುದಕ್ಕೆ ಹೋಗುವ ನಮಗೆ ವಿಪತ್ತು ಬಂದರೆ ದೇವರೇ ಮುನಿ ದಂತಾದನು. ದೇವನು ಕರುಣಾಸಾಗರನು; ಅವನು ತನ್ನ ಭಕ್ತರನ್ನು ಕೈಬಿಡಲಾರನು. ನಾವು ಹೋಗುವುದೇ ಸಿದ್ಧ" ಎಂದು ದೃಢವಾಗಿ ಹೇಳಿದಳು.

ವೃದ್ಧ ಜ್ಯೋತಿಷ್ಯಕಾರನು ಖೇದಪೂರ್ವಕವಾಗಿ, "ಅಮ್ಮಾ! ಪ್ರಥುಲಾ! ನೀನು ಇಚ್ಛಿಸಿದುದನ್ನೂ ಮಾಡಿಯೇ ಬಿಡುವೆ. ನಾನು ನಿನಗೆ ಹೆಚ್ಚು ಹೇಳಲಾರೆನು. ಗುಂಡನಾಯಕಾ! ನನ್ನ ಮಗಳಿಂದ ನಿನಗೆ ಅಪಾಯ ಬರುವ ಸಂಭವ ತೋರುತ್ತಿದೆ—ಸರಿ! ಅಮ್ಮಾ! ಬೇಡ! ಈ ರಾತ್ರಿ ಹೋಗಬೇಡ! ಹೋಗಬೇಡಮ್ಮಾ!" ಎದನು.

ಗುಂಡನಾಯಕನು "ಪ್ರಥುಲೆಯಿಂದ ನನಗೆ ವಿಪತ್ತು ಬರುವುದಾದರೆ ನಾನು ಮರಣಕ್ಕೆ ಸಿದ್ಧ ನಿರುವೆನು" ಎಂದು ಹೇಳಿದನು.

ಮುದುಕನು ಮೆಲ್ಲನೆ ಕಣ್ಣೀರನ್ನು ಮರೆಯಿಸಿ "ನನ್ನ ಅಡ್ಡಿಯಿಲ್ಲ! ಬುಧನು ಲಗ್ನಾಧಿಪತಿಯಾದುದ ರಿಂದ ಅಬುಧಃ ಎಂದಿರುವುದರಿಂದ ಹೊರಡಲು ಅನುಕೂಲವಿದೆ" ಎಂದು ಹೇಳಿ "ಮಗು, ಪ್ರಥುಲಾ! ನಿನ್ನ ಯಶಸ್ಸು ವಿಜಯನಗರದ ಮಹಿಮೆಗಿಂತಲೂ ಚಿರಕಾಲ ಬಾಳುವ ಹಾಗೆ ದೇವರು ಕರುಣಿಸಲಿ!" ಎಂದು ಹರಸಿದನು.

ವಿಜಯನಗರದಲ್ಲಿ ಇನ್ನೂ ಅರುಣೋದಯವಾಗಿರಲಿಲ್ಲ. ಅಷ್ಟಮಿಯ ರಾತ್ರಿಯ ಮಹೋತ್ಸವ ದಿಂದ ಆಯಾಸಗೊಂಡಿದ್ದ ಜನಗಳು ಇನ್ನೂ ಸುಖನಿದ್ರೆಯಲ್ಲಿ ವಿಶ್ರಾಂತಿಯನ್ನು ಹೊಂದುತ್ತಿದ್ದರು. ಅರಮನೆ ಯೊಳಗೆ ದೇವರಾಜನು ಎಂದಿನಂತೆ ಬೇಗ ಎಚ್ಚತ್ತು ತನ್ನ ದಿನಚರ್ಯೆಗಳನ್ನು ಮಾಡತೊಡಗಿದನು. ಒಂದು ಸೇರು ಎಳ್ಳೆಣ್ಣೆಯನ್ನು ಪಾತ್ರೆಯಲ್ಲಿ ಅಳೆದುಕೊಂಡು ಒಬ್ಬ ಭೃತ್ಯನು ಬಂದನು. ಇವನು ನೋಟಕ್ಕೆ ಭೃತ್ಯ ನಂತಿದ್ದರೂ ತನ್ನ ಚರ್ಯೆಚೇಷ್ಟೆಗಳಲ್ಲಿ ಯಜಮಾನನಂತಿದ್ದನು. ಈತನು ಅರಸನ ಗೂಢಮಿತ್ರನಾಗಿದ್ದನು; ಅನ್ಯರಿಂದ ಮಾಡಿಸಲಾಗದ ಕೃತ್ಯಗಳನ್ನು ರಾಜನು ಇವನಿಂದ ಮಾಡಿಸುತಿದ್ದನು. ಈತನ ಮೇಲೆ ಅರಸನಿಗೆ ಅತ್ಯಂತ ವಿಶ್ವಾಸ; ರಾಜ್ಯವನ್ನಾದರೂ ಬಿಡುವುದಕ್ಕೆ ಒಪ್ಪುವನು; ಈ ಭೃತ್ಯ ಸ್ನೇಹಿತನನ್ನು ಅರಸನು ತನ್ನಿಂದ ದೂರ ಮಾಡಲು ಸಿದ್ಧನಾಗಿರಲಿಲ್ಲ. ಇತಿಹಾಸದಲ್ಲಿ ಈ ಪಾಪಿಯು ತಿಮ್ಮರಸ, ತಿಮ್ಮಪ್ರಭು, ಎಂಬ ಹೆಸರು ಗಳಿಂದ ಪ್ರಖ್ಯಾತನಾಗಿರುವನು. ತಿಮ್ಮನು ತನ್ನ ಕೈಯಲ್ಲಿ ಹಿಡಿದ ಎಣ್ಣೆಯ ಪಾತ್ರೆಯನ್ನು ದೇವರಾಜನು ಕೊಂಡು ಎಣ್ಣೆಯನ್ನು ಎಂದಿನಂತೆ ಕುಡಿದು ಬಿಟ್ಟನು. ಭೃತ್ಯನು ಇನ್ನಿಷ್ಟು ಎಣ್ಣೆಯನ್ನು ಅಳೆದು ಅರಸನ ಮೈಗೆ ತಿಕ್ಕತೊಡಗಿದನು. ಇದಾದ ಬಳಿಕ ಎರಡು ಮುದ್ಗರಗಳನ್ನು ತಂದು ಅರಸನ ಕೈಗೆ ಕೊಟ್ಟನು. ದೇವ ರಾಜನು ಅವನ್ನು ಕೈಗಳಿಂದ ಬೀಸುತ್ತ, ದಣಿವಿನ ಬೆವರಿನಲ್ಲಿ ಎಣ್ಣೆಯನ್ನು ಆರಿಸಿಬಿಟ್ಟನು. ಅಷ್ಟರಲ್ಲಿ ತಿಮ್ಮನ ಆಜ್ಞೆಯ ಪ್ರಕಾರ ಕುದುರೆಗಾರನು ಒದಗಿಸಿದ ಬೆಳ್ಗುದುರೆಯನ್ನು ಹತ್ತಿ ಸೂರ್ಯೋದಯದ ಮೊದಲೇ ಅರಸನು ನಿತ್ಯದ ಅಭ್ಯಾಸದಂತೆ ಸವಾರಿಗೆ ಹೋದನು.

ಸೂರ್ಯನು ಪರ್ವತ ಶಿಖರಗಳ ಮರೆಯಿಂದ ನಗುನಗುತ್ತಾ ಉದಯಿಸುತ್ತಲಿದ್ದನು. ಕ್ಷಣಕಾಲ ಶಿಖರಾಗ್ರದಲ್ಲಿ ನಿಂತು ವಿಶ್ವವನ್ನೆಲ್ಲಾ ತನ್ನ ಸಹಸ್ರಕರಗಳಿಂದ ಆಲಿಂಗಿಸಿದನು. ಆಶ್ವೀಜ ಶುದ್ಧ ನವಮಿಯ ದಿನ ವಿಜಯನಗರದಲ್ಲಿ ನಡೆಯುವ ಮಹೋತ್ಸವದ ಸಂಭ್ರಮಕ್ಕೆ ಸನ್ನಾಹ ಸಿದ್ಧತೆಗಳು ಆಗತೊಡಗಿದ್ದುವು. ಮಠಗಳೂ, ಮಂದಿರಗಳೂ, ಧ್ವಜಪತಾಕೆಗಳಿಂದ ಅಲಂಕೃತವಾದವು. ರಾಜನ ಅಶ್ವಶಾಲೆಯಲ್ಲಿಯೂ ಗಜ ಶಾಲೆಯಲ್ಲಿಯೂ ಇದ್ದ ಪೂಜಾರ್ಹವಾದ ನಾಲ್ಕು ರಾಜಾಶ್ವಗಳೂ, ನಾಲ್ಕು ರಾಜಗಜಗಳೂ ಶೃಂಗರಿಸ ಲ್ಪಟ್ಟವು. ದೇವಿಪೂಜೆಗೆ ಹಿಂಡುಗೊಳಿಸಿದ ಕುರಿಕೋಣಗಳು ವಧ್ಯಸ್ಥಾನಕ್ಕೆ ತೆರಳಿದುವು. ದೇವರಾಜನು ಪ್ರಾತಃಕಾಲದ ಸವಾರಿಯನ್ನು ತೀರಿಸಿ ಅರಮನೆಗೆ ಹಿಂದಿರುಗುತ್ತಿದ್ದನು. ಹಠಾತ್ತಾಗಿ ಒಂದು ಮನೆಯ ಸಮೀಪದಲ್ಲಿ ಏನು ಕಾರಣದಿಂದಲೋ ಕುದುರೆಯನ್ನು ನಿಲ್ಲಿಸಿದನು. ಯುವತಿಯೊಬ್ಬಳು ಮನೆಯ ಬಾಗಿಲಲ್ಲಿ ರಂಗವಲ್ಲಿಯನ್ನು ಬರೆಯುತ್ತಿದ್ದಳು. ಕುದುರೆಯು ಅಕಸ್ಮಾತ್ತಾಗಿ ತಡೆದುದನ್ನು ನೋಡಿ ರಮಣಿಯು ಮುಖವನ್ನು ತಿರುಗಿಸಿ ರಾಜನನ್ನು ದಿಟ್ಟಿಸಿದಳು. ರಾಜನ ದೃಷ್ಟಿತರಂಗಗಳು ರಮಣಿಯ ಸರ್ವಾಂಗವನ್ನು ಬಡಿದು ಹೋದುವು. ರಮಣಿಯು ರಾಜನ ಹೃದಯಾರ್ಥವನ್ನು ಅವನ ನಯನ ಪುಸ್ತಕದಿಂದ ತಿಳಿದು, ಮನೆಯೊಳಕ್ಕೆ ನಡೆದುಬಿಟ್ಟಳು. ದೇವರಾಜನು ತನ್ನೊಳಗೆನೇ ಲಜ್ಜಿತನಾಗಿ ಅರಮನೆಯ ಕಡೆಗೆ ಕುದುರೆ ಯನ್ನು ತಿರುಗಿಸಿದನು.

ರಾಜಗೃಹದಲ್ಲಿ ಅರಸನ ಸೇವಕರೆಲ್ಲರೂ ರಾಜನ ವಿಳಂಬವನ್ನು ಚರ್ಚಿಸುತ್ತಿದ್ದರು. ಅಷ್ಟರಲ್ಲಿ ದೇವ ರಾಜನು ಅರಮನೆಯನ್ನು ಪ್ರವೇಶಿಸಿ, ಶುದ್ಧಸ್ನಾನವನ್ನು ತೀರಿಸಿದನು. ನವರಾತ್ರಿಯ ಕಡೆಯ ದಿನದ ವ್ರತಕ್ಕೆ ಪ್ರಾರಂಭವಾಯಿತು. ರಾಜಗೃಹದೊಳಗೆ 'ವಿಜಯಮಂದಿರ' ಎಂಬ ದೇವರ ಗುಡಿಯೊಂದಿತ್ತು. ರಾಜನು ವಿಜಯಮಂದಿರವನ್ನು ಹೊಕ್ಕು, ವಿಪ್ರರ ಸಹಾಯದಿಂದಲೂ ಮಂತ್ರಘೋಷದಿಂದಲೂ ಆರಾಧನೆಯನ್ನು ಮುಗಿಸಿ ಚಪ್ಪರಕ್ಕೆ ಬಂದನು. ಮನಸ್ಸಿನೊಳಗೆ ಯಾವುದನ್ನೋ ಯೋಚಿಸುತ್ತಿರುವಂತೆ ರಾಜನು ಸುಮ್ಮನೆ ನಿಂತಲ್ಲಿಯೇ ನಿಂತುಬಿಟ್ಟನು. ನರ್ತನಸ್ತ್ರೀಯರು ಮುಂದೆ ಬಂದು ನಾಟ್ಯವನ್ನು ಗೀತಗಳನ್ನೂ ರಾಜಸನ್ನಿಧಿ ಯಲ್ಲಿ ಅರ್ಪಿಸಿದರು. ಒಡನೆ ರಾಜನ ಅಂಗರಕ್ಷಕರೂ, ಮಂತ್ರಿಗಳೂ, ಬ್ರಾಹ್ಮಣರೂ ಕ್ರಮವಾಗಿ ಸಾಷ್ಟಾಂಗ ಪ್ರಣಾಮ ಮಾಡಿದರು. ಬಳಿಕ ಅರಸನು ಮುಂದುವರಿಸುವಂತೆ, ತಿಮ್ಮನು ಸೂಚಿಸಿದನು. ಅಂಗಳದಲ್ಲಿ ಹಲ್ಲಣಿಸಿದ ಹನ್ನೊಂದು ಕುದುರೆಗಳೂ ನಾಲ್ಕು ರಾಜಗಜಗಳೂ ಅರಸನ ಆಗಮನವನ್ನು ಎದುರ್ನೋಡು ತ್ತಿದ್ದವು. ರಾಜನು ಸಮೀಪಸ್ಥನಾಗುತ್ತಲೇ ಕುದುರೆಗಳು ತಲೆಯೆತ್ತಿದವು; ಆನೆಗಳು ಸುಂಡಿಲೆತ್ತಿ ನಮಸ್ಕರಿಸಿ ದವು. ರಾಜನ ಲಕ್ಷ್ಯವೇನೋ, ಇವುಗಳ ಮೇಲೆ ಹೋಗಲಿಲ್ಲ. ಅವನ ವಿರಹಿತವಾದ ದೃಷ್ಟಿಗಳು ಜನಸ್ತೋಮದ ಕಡೆಯಲ್ಲಿ ಸಂಚರಿಸುತ್ತಿದ್ದವು. ನರ್ತಕಿಯರ ಮಂದಹಾಸ, ನಾಯಕರ ಶಸ್ತ್ರಾಸ್ತ್ರ ಝಣತ್ಕಾರ, ಬ್ರಾಹ್ಮಣರ ಸ್ವಸ್ತಿವಾಚನ, ಗಜಾಶ್ವಗಳ ಹರ್ಷಸೂಚಕ ಚಿಹ್ನ, ಎಲ್ಲವೂ ರಾಜನ ಹೃದಯದ ಮೇಲೆ ನಿರರ್ಥಕವಾಗಿ ಹೋದವು. ಬ್ರಾಹ್ಮಣನೊಬ್ಬನು ಪುಷ್ಪಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಅರಸನ ಸಮ್ಮುಖದಲ್ಲಿ ನಿಂತನು. ರಾಜನು ಹೂಗಳನ್ನು ಗಜಾಶ್ವಗಳ ಮೇಲೆ ಎರಚುವ ಬದಲಾಗಿ ತಿಮ್ಮನ ತಲೆಯ ಮೇಲೆ ಪುಷ್ಪಾಂಜಲಿ ಯನ್ನು ಸುರಿದನು. ಜನಗಳೆಲ್ಲರೂ ಆಶ್ಚರ್ಯಗೊಂಡರು; ದುಃಖಗೊಂಡರು. ಹೇಗೂ ಬ್ರಾಹ್ಮಣನು ಪುಷ್ಪಪಾತ್ರೆಯಿಂದ ತಾನೇ ಹೂಗಳನ್ನು ತೆಗೆದು ಅರಸನ ಕೈ ಮುಟ್ಟಿಸಿ ಆರಾಧಿತವಾದ ಮೃಗಗಳ ಮಸ್ತಕದ ಮೇಲೆ ಎರಚಿದನು. ಅರಸನ ಹೃದಯ ಸಂತಾಪವು ಆ ನವಮಿಯ ಮಹೋತ್ಸವದಿಂದ ಒಂದಿಷ್ಟಾದರೂ ಶಾಂತವಾಗಲಿಲ್ಲ. ಸಹಸ್ರಜನ ಪರಿಪೂರಿತವಾದ ಆ ಸ್ತೋಮದಲ್ಲಿ ಅರಸನ ಮನೋವ್ಯಥೆಯ ಕಾರಣವನ್ನು

ಯಾರೂ ತಿಳಿಯಲಾರದೆ ಹೋದರು. "ವಧ್ಯಸ್ಥಾನಕ್ಕೆ ದಯ ಮಾಡುವುದು" ಎಂದು ತಿಮ್ಮನು ಸೂಚಿಸಿದನು. "ಅದುವೇ ನಮಗೆ ಒಳ್ಳೆಯದು" ಎಂಬ ಕ್ರೂರವಾದ ಮಾತು ಅರಸನ ಬಾಯಿಯಿಂದ ಬಿದ್ದಿತು. ಎಲ್ಲರೂ ಸಂಭ್ರಾಂತರಾದರು; ಎಲ್ಲರೂ ದುಃಖಿತರಾದರು. ಬ್ರಾಹ್ಮಣನು ಖಡ್ಗವನ್ನು ರಾಜನ ಕೈಯಿಂದ ಮುಟ್ಟಿಸಿ ಶೂದ್ರನ ಕೈಗಿತ್ತನು. ಬಲಿಗೋಸ್ಕರ 24 ಕೋಣಗಳನ್ನೂ 150 ಕುರಿಗಳನ್ನೂ ತರಿಯುತ್ತಿದ್ದಾಗ ದೇವರಾಜನು ತಿಮ್ಮನೊಡನೆ ರಹಸ್ಯದಲ್ಲಿ ಏನನ್ನೋ ಹೇಳಿದನು.ತಿಮ್ಮನು ಕಾರಣಾಂತರದಿಂದ ಅಲ್ಲಿಂದ ಮಾಯವಾದನು.

ಪ್ರಾತಃಕಾಲದಲ್ಲಿ ದೇವರಾಜನು ಯಾವ ಮನೆಯ ಇದಿರಿನಲ್ಲಿ ತನ್ನ ಕುದುರೆಯನ್ನು ನಿಲ್ಲಿಸಿ ಒಂದು ಮುಹೂರ್ತ ತಳುವಿದನೋ ಆ ಮನೆಯು ಗುಂಡನಾಯಕನದಾಗಿದ್ದಿತು. ಮನೆಯಲ್ಲಿ ಯಾವಾಗಲೂ ಗುಂಡ ನಾಯಕನು ಅಲ್ಲದೆ ಬೇರೆ ಯಾರೂ ಇರುತ್ತಿರಲಿಲ್ಲ. ಈ ದಿನ ನಾಯಕನು ತನ್ನ ಪ್ರಾಣವಲ್ಲಭೆಯನ್ನು ಮುದು ಗಲ್ಲಿನಿಂದ ಕರೆದುತಂದಿದ್ದನು. ಪ್ರಥುಲೆಯು ತಂದೆಯು ಇವರಿಬ್ಬರೊಡನೆ ಬರಲು ಒಪ್ಪಲಿಲ್ಲವಾದುದರಿಂದ, ಗುಂಡನಾಯಕನು ತನ್ನ ಭಾವಿಪತ್ನಿಯನ್ನು ಮಾತ್ರ ಕರೆದು ತಂದಿದ್ದನು. ಗುಂಡನಾಯಕನು ತನ್ನ ವಲ್ಲಭೆಗೆ ನವಮಿಯ ಪ್ರಾತಃಕಾಲದ ಉತ್ಸವಗಳನ್ನೆಲ್ಲಾ ತೋರಿಸಿ, ಪುನಃ ಮಧ್ಯಾಹ್ನದಲ್ಲಿ ನಡೆಯುವ ಸಮಾರಂಭ ವನ್ನು ವಿನಂದಿಸಲಿಕ್ಕೆ ಸಂಗಡ ಕರೆದುಕೊಂಡು ಹೋಗಿ ಎಲ್ಲವನ್ನೂ ಕುರಿತು ವಿಶದವಾಗಿ ಹೇಳುತ್ತಿದ್ದನು. ಅರಮನೆಯ ಮುಂಭಾಗದಲ್ಲಿ ಸಿಂಹಾಸನವನ್ನು ಸಿದ್ಧಗೊಳಿಸಿದ್ದರು. ಒಂದು ಕಡೆಯಲ್ಲಿ ಜಟ್ಟಿಗಳ ಕಾಳಗ; ಒಂದು ಕಡೆಯಲ್ಲಿ ಡೊಂಬರ ಆಟ; ಈ ಕಡೆಯಲ್ಲಿ ಗೂಳಿ ಕಾಳಗ; ಆ ಕಡೆಯಲ್ಲಿ ಕೋಳಿಯ ಜೂಜು. ಎಲ್ಲಿ ನೋಡಿದರೂ ಗಲಭೆ; ಯಾವ ಕಡೆಗೆ ಕಣ್ಣು ತಿರುಗಿಸಿದರೂ 'ತಮಾಷೆ'; ಎಲ್ಲರ ಮುಖದಲ್ಲಿಯೂ ಆನಂದ, ಉತ್ಸಾಹಪೂರ್ಣತೆ; ಗುಂಡನಾಯಕನು ತನ್ನ ಭಾವಿವಲ್ಲಭೆಗೆ ಇದನ್ನು ತೋರಿಸುತ್ತ ಹೃದಯದಲ್ಲಿ ಹಿಡಿಯ ಲಾರದಷ್ಟು ಆನಂದದಿಂದ ಉಕ್ಕುತ್ತಿದ್ದನು. ಒಡನೆ ದೇವರಾಜನು ಸಿಂಹಾಸನವನ್ನು ಹತ್ತಿ ಅದರ ಮೇಲೆ ಎದ್ದು ನಿಂತು ಜನಸ್ತೋಮದಲ್ಲಿ ಯಾರೋ ಒಬ್ಬನ ಕಡೆಗೆ ಬೆರಳನ್ನು ನಿರ್ದೇಶಿಸಿ, ತಿಮ್ಮನ ಕಿವಿಯಲ್ಲಿ ಏನನ್ನೋ ಉಸಿರಿಸಿದರು. ಆಟಗಳು ಮುಗಿಯುತ್ತ ಬಂದುವು. ಸೂರ್ಯನು ಅಸ್ತಾಚಲವನ್ನು ಸೇರುವುದಕ್ಕೆ ಕಾಲಿಡು ವಂತಿದ್ದನು. ರಾಜನು ಸಾಯಂಕಾಲದಲ್ಲಿ ಅರಮನೆಯನ್ನು ಪ್ರವೇಶಿಸುತ್ತಲೇ ಜನಸ್ತೋಮವು ಶಿಥಿಲವಾಗುತ್ತ ಬಂದಿತು. ಜನರೆಲ್ಲಾ ಮೆಲ್ಲಮೆಲ್ಲನೆ ಹೋಗಿಬಿಟ್ಟರು.

ಮಧ್ಯಾಹ್ನದ ಆಟಗಳೆಲ್ಲಾ ಮುಗಿದ ಬಳಿಕ ಗುಂಡನಾಯಕನು ಪ್ರಥುಲೆಯೊಡನೆ ರಾತ್ರಿಯಲ್ಲಿ ನಡೆಯುವ ಬಾಣಬಿರುಸುಗಳ ವಿನೋದವನ್ನು ನೋಡುವುದಕ್ಕೆ ಹೊರಟನು. ಜನರೆಲ್ಲರೂ ತಂಡ ತಂಡವಾಗಿ ಬರ ತೊಡಗಿದರು. ಅರಮನೆಯ ಮುಂದುಗಡೆಯ ಬಯಲು ಸ್ಥಳದಲ್ಲಿ ಈ ವಿನೋದ ವಿಲಾಸಗಳನ್ನು ಒದಗಿಸಿದ್ದರು. ನಮ್ಮ ನಾಯಕನಾಯಕಿಯರು ಬೇಗಬೇಗ ಕಾಲಿಡುತ್ತ ಸಡಗರಿಸುತ್ತಿದ್ದರು. ಅಷ್ಟರಲ್ಲಿ ಅವರಿಗೆ ಇದಿರಾಗಿ ಮಾರ್ಗದ ಮೇಲೆ ಯಾರೋ ಒಬ್ಬನು ಬರುತ್ತಿದ್ದನು. ಗುಂಡನಾಯಕನು ಅವನನ್ನು ನೋಡುತ್ತಲೇ ಕೈಮುಗಿದು ಮಾರ್ಗದ ಒಂದು ಪಕ್ಕದಲ್ಲಿ ನಿಂತುಕೊಂಡನು. ಆಗಂತುಕನು ಮುಗುಳುನಗೆಯಿಂದ ಪ್ರತಿಯಾಗಿ ನಮಸ್ಕಾರ ಮಾಡಿದನು. ಬಳಿಕ ಇಬ್ಬರ ಸಮೀಪಸ್ಥನಾಗಿ ತಾನೇ ಸಂಭಾಷಣೆಗೆ ಮೊದಲು ಮಾಡಿದನು.

ಆಗಂತುಕ:—"ನಿಮ್ಮನ್ನು ಮಹಾರಾಜರು ನೋಡಲು ಇಚ್ಛಿಸುವುದಾಗಿ ನಿಮಗೆ ತಿಳಿಸಲು ಬಂದೆನು."

ಇಬ್ಬರೂ ಅವಾಕ್ಕಾಗಿ ಸುಮ್ಮನೆ ನಿಂತುಕೊಂಡರು. ತಮ್ಮ ತಲೆಯ ಮೇಲೆ ಏನೋ ವಿಪರೀತವು ಬಂದಿತೆಂದು ದಂಪತಿಗಳು ಒಬ್ಬರ ಮುಖವನ್ನೊಬ್ಬರು ನೋಡುತ್ತ ನಿಂತುಕೊಂಡರು.

ಆಗಂತುಕ:—"ಭಯವೇನೂ ಇಲ್ಲ. ಪೂರ್ವಯುದ್ಧದಲ್ಲಿ ನೀವು ಶತ್ರುಗಳೊಡನೆ ತೋರಿಸಿದ ಸತ್ವ ಸಾಹಸಗಳು ರಾಜರ ರಾಜಮಾನಸಕ್ಕೆ ತಿಳಿದುಬಂದುದರಿಂದ ನಿಮ್ಮನ್ನಲ್ಲಿ ಮಹಾರಾಜರು ಮನ್ನಿಸು ವಂತಿದೆ."

ಪ್ರಥುಲೆಯ ಭೀತ ಹೃದಯವು ಶಾಂತವಾಯಿತು. ಅವಳ ಮುಖಮಂಡಲದಲ್ಲಿ ವ್ಯಂಜಕವಾಗುತ್ತಲಿದ್ದ ಭೀತಿಯ ಬದಲಾಗಿ ಸ್ವಾಭಾವಿಕವಾಗಿದ್ದ ಉಲ್ಲಾಸವೇ ಅಲಂಕರಿಸಿತ್ತು.

ಗುಂಡ:—"ಸ್ವಾಮಿ! ಭೃತ್ಯನು ತಮ್ಮ ಕೃಪಾಬಲದಿಂದ ಇದಕ್ಕೆ ಪಾತ್ರನಾದನು. ಆದರೆ ಉಚಿತ ಉಡುಗೊರೆಗಳೂ ಮನ್ನಣೆ ಮರ್ರ್ಯಾದೆಗಳೂ ನಾಳೆ ಪ್ರಾತಃಕಾಲದಲ್ಲಿ ಎಲ್ಲರಿಗೂ ಕೊಡಲ್ಪಡುವುವಲ್ಲವೇ?"

ಆಗಂತುಕ:—"ನಿಜ! ಮಹಾರಾಜರು ಕಾರ್ಯ ವಿಶೇಷದಿಂದ ಎಲ್ಲವೂ ಈ ರಾತ್ರಿಯೇ ನಡೆಯಬೇಕೆಂದು ಅಪ್ಪಣೆ ಮಾಡಿರುವರು. ಕಲಶೋತ್ಸವವೂ ಈ ಇರುಳೇ ನಡೆಯುವುದು."

ಪ್ರಥುಲೆಯು ಈ ಮಾತುಗಳಿಂದ ಸ್ವಲ್ಪ ಕುತೂಹಲಚಿತ್ತಳಾಗಿ 'ಕಲಶೋತ್ಸವ ಎಂದರೇನು'? ಎಂದು ತನ್ನ ಪ್ರಾಣವಲ್ಲಭನೊಂದಿಗೆ ವಿಚಾರಿಸಿದಳು.

ಗುಂಡನಾಯಕನು ಪ್ರತ್ಯುತ್ತರವನ್ನು ಕೊಡುವುದಕ್ಕೆ ಬಾಯ್ದೆರೆಯುವಷ್ಟರಲ್ಲಿ ಆಗಂತುಕನು "ಅಮ್ಮಾ! ಕಲಶೋತ್ಸವವು ಎಲ್ಲಾ ಉತ್ಸವಗಳಿಗಿಂತಲೂ ಶ್ರೇಷ್ಠವಾದುದ್ದು. ಬಾಣಬಿರುಸುಗಳನ್ನೆಲ್ಲ ಸುಟ್ಟ ಬಳಿಕ ನೂರಾರು ಸ್ತ್ರೀಯರು ಜಲಪೂರಿತವಾದ ಪುಷ್ಪಾಲಂಕೃತವಾದ ಕಲಶಗಳನ್ನೆತ್ತಿಕೊಂಡು ಮಹಾರಾಜರ ಸಮ್ಮುಖದಲ್ಲಿ ಒಬ್ಬೊಬ್ಬರಾಗಿ ಬಂದು, ಕಲಶವನ್ನು ಎತ್ತಿ ಮುಖಕ್ಕೆ ನಿವಾಳಿಸಿ ಹೋಗುವರು. ಮಹಾರಾಜರು ಎಲ್ಲರಿಗೂ ಉಚಿತಗಳನ್ನು ಹಂಚುವರು. ಉತ್ಸವದಲ್ಲಿ ಯಾರೂ ಸೇರಬಹುದು. ನಿಮಗೆ ಮನಸ್ಸುಂಟೇ?" ಎಂದನು.

ಪ್ರಥುಲೆಯು ಮಾತಾಡಲಿಲ್ಲ. ಗುಂಡನಾಯಕನು "ಸ್ವಾಮಿ! ಉತ್ಸವದಲ್ಲಿ ರಾಣಿಯರ ದಾಸಿಯರಲ್ಲದೆ ಗರತಿಯರು ಸೇರುವರೇ?" ಎಂದು ಪ್ರಶ್ನೆ ಮಾಡಿದನು.

ತಿಮ್ಮನು "ನಿಮ್ಮಂಥವರು ಉತ್ಸವದಲ್ಲಿ ನೆರವಾಗುವುದಕ್ಕೆ ಅಡ್ಡಿ ಏನೂ ಇರಲಾರದು" ಎಂದು ಹೇಳಿ ಅರಮನೆಯ ಕಡೆಗೆ ಹಿಂದಿರುಗಿದನು. ದಂಪತಿಗಳಿಬ್ಬರೂ ಮಾತನಾಡುತ್ತಾ ಅರಮನೆಯ ಮುಂದುಗಡೆಯ ಮೈದಾನವನ್ನು ಸೇರಿದರು. ಒಡನೆ ಗುಂಡನು ತಾನು ಮಹಾರಾಜನು ಇದ್ದಲ್ಲಿಗೆ ಬೇಗನೆ ಹೋಗಿ ಬರುವೆನೆಂದು ಹೇಳಿ ಪ್ರಥುಲೆಯನ್ನು ಸುರಕ್ಷಿತವಾದ ಸ್ಥಳದಲ್ಲಿರಿಸಿ, ಹೋಗಿಬಿಟ್ಟನು.

ಗುಂಡನಾಯಕನು ಅರಮನೆಯನ್ನು ಸೇರಿದನು. ಅರಸನ ಕೋಪಕ್ಕೆ ಯಾವ ಕಾರಣದಿಂದಲೋ ಪಾತ್ರನಾದುದರಿಂದ ಸೆರೆಗೆ ಹಾಕಲ್ಪಟ್ಟನು. ಆಶ್ವೀಜ ಶುದ್ಧ ನವಮಿಯ ಮಹೋತ್ಸವದಿಂದ ವಿಜಯನಗರದ ಪ್ರಜೆಗಳೆಲ್ಲರೂ ಸಂತೋಷ ಸಂಭ್ರಮದಿಂದ ವಿನಂದಿಸುವಾಗ, ನಿರ್ಭಾಗ್ಯನಾದ ನಿರಪರಾಧಿಯಾದ ಗುಂಡ ನಾಯಕನು ಸೆರೆಮನೆಯಲ್ಲಿ ತನ್ನ ತಲೆಯನ್ನು ತಗ್ಗಿಸಿ ಕಣ್ಣೀರು ಬಿಡುತ್ತಿದ್ದನು. ಆ ಕಣ್ಣೀರುಗಳನ್ನು ಒರಸುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ಅವನ ಗದ್ಗದಗಳನ್ನು ಸೈಪಿಡುವುದಕ್ಕೆ ಅವನ ಪ್ರಾಣೇಶ್ವರಿಯು ಸಮೀಪದಲ್ಲಿರ ಲಿಲ್ಲ; ಅವನ ತಗ್ಗಿದ ತಲೆಯನ್ನು ನೇರ್ಪಡಿಸುವುದಕ್ಕೆ ಸಮರ್ಥಳಾದ ಪ್ರಥುಲೆಯು ಅಲ್ಲಿ ಎಲ್ಲಿಯೂ ಇರಲಿಲ್ಲ. ಅವಳನ್ನು ಹುಡುಕಿ ಹಿಡಿಯುವುದಕ್ಕೆ ದೇವರಾಜನೇ ಮನಸ್ಸು ಮಾಡಿದರೂ ಅವಳು ಸಿಕ್ಕುತ್ತಿರಲಿಲ್ಲ.

ಅರಸನು ಸಿಂಹಾಸನಾರೂಢನಾಗಿ ವಿನೋದವನ್ನು ನೋಡುವಂತಿದ್ದನು. ರಾಜಧಾನಿಯ ಹೊರಗೆ ನಾಲ್ಕು ದಿಕ್ಕುಗಳಲ್ಲಿಯೂ ಉತ್ಸವಸೂಚಕವಾದ ಅಗ್ನಿಕುಂಡಗಳು (bonfires) ಪ್ರಜ್ವಲಿಸುತಿದ್ದವು. ಬಾಣ ಬಿರುಸುಗಳೆಲ್ಲ ಉರಿಯುತ್ತಿದ್ದವು; ಅರಸನ ಹೃದಯದಲ್ಲಿಯೂ ಹಾಗೆಯೇ ಆಗುತಿತ್ತು. ರಾಜನು ಕಾತರ ಗೊಂಡನು; ಕಳವಳಗೊಂಡನು; ಪುನಃ ಪುನಃ ತಿಮ್ಮನನ್ನು ಕರೆದು ಪ್ರಾರ್ಥಿಸತೊಡಗಿದನು. ಆದರೆ ಪ್ರಥುಲೆ—ಪ್ರಥುಲೆಯು ಅಲ್ಲಿಂದ ಮಾಯವಾದಳು. ಹತಭಾಗ್ಯನ ಕೈಗೆ ಸೇರಿ. ಸೇರದ ಲಕ್ಷ್ಮಿಯ ಹಾಗೆ ನವಮಿಯ ಮಹೋತ್ಸವಕ್ಕೋಸ್ಕರ ನೆರೆದಿದ್ದ ಜನಜಂಗುಳಿಯಲ್ಲಿ ಪ್ರಥುಲೆಯು ತೇಲಿಹೋದಳು. ಅವಳನ್ನು ಹಿಡಿದು ತರುವುದಕ್ಕೆ ಹೋಗಿದ್ದ ಗೂಢಚಾರರು ನಿರಾಶರಾಗಿ ಬಂದು, ಅವಳು ಸಿಕ್ಕಲಿಲ್ಲವೆಂಬ ಅತ್ಯಂತ ಹೃದಯ ಭೇದಕವಾದ ವರ್ತಮಾನವನ್ನು ದೇವರಾಜನಿಗೆ ನಡುಗುತ್ತ ತಿಳಿಸಿದರು. ಕೂಡಲೇ ಪರಾಕ್ರಮಿಯಾದ ತಿಮ್ಮನು ಅವಳನ್ನು ತಾನೇ ಕೈಹಿಡಿದು ತಾರದೆ ಬಿಡನೆಂದು ರಾಜನಿಗೆ ನಂಬುಗೈಯಿತ್ತು, ಇಬ್ಬರು ಸಿಪಾಯ ರೊಡನೆ ಅಂತರಂಗದಿಂದ ನಡೆದುಬಿಟ್ಟನು.

ಅರಮನೆಯ ಕತ್ತಲಾದ ಕೊಟ್ಟಡಿಯಲ್ಲಿ ಏಕಾಕಿಯಾದ ಗುಂಡನಾಯಕನು ಕಣ್ಣಿಗೆ ನಿದ್ದೆ ಬಾರದೆ, ತನ್ನ ದುರವಸ್ಥೆಯನ್ನು ಕುರಿತು ಚಿಂತಿಸುತ್ತಿದ್ದನು. ರಾಣಿಯ ದಾಸಿಯರೆಲ್ಲರೂ ರಾತ್ರಿಯ ಕಲಶೋತ್ಸವಕ್ಕೆ ಸಿದ್ಧರಾಗತೊಡಗಿದರು. ಎಲ್ಲರೂ ತಂತಮ್ಮ ವಸ್ತ್ರಾಲಂಕಾರಗಳನ್ನು ಅಳವಡಿಸಿಕೊಂಡು ಹೊರಕ್ಕೆ ಬಂದರು. ಓಲಗದ ಚಾವಡಿಯಲ್ಲಿ ಸಾಲಾಗಿ ಇಟ್ಟಿದ್ದ ಕಲಶಗಳನ್ನು ನೋಡಿ, ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಚಿನ್ನದ, ಬೆಳ್ಳಿಯ, ತಾಮ್ರದ ಕುಂಭಗಳನ್ನು ಕೈಯಲ್ಲಿಕೊಂಡರು. ಗುಂಡನಾಯಕನು ಇದನ್ನು ಕಿಟಕಿಯ ಬಳಿಯಿಂದ ನೋಡುತ್ತಲೇ ಇನ್ನೂ ದುಃಖಗೊಂಡನು. ತನ್ನ ಪ್ರಾಣಪ್ರಿಯಳಾದ ಪ್ರಥುಲೆಯಿಂದ ಈ ಹೀನ ಕೃತ್ಯವನ್ನು ರಾಜನು ಬಲಾತ್ಕಾರದಿಂದ ಮಾಡಿಸುವನೋ ಎಂದು ಶಂಕಿತನಾಗಿ ನಾಯಕನು ನಿಟ್ಟುಸಿರಿಟ್ಟನು. ದಾಸಿಯರ ಮೈಗಾವಲಿಗೆ ಸಿಪಾಯರು ಸನ್ನದ್ಧರಾಗಿ ಬಂದು ನಿಂತರು. ನವರತ್ನಭೂಷಣಗಳಿಂದ ಒಪ್ಪುತ್ತಿರುವ, ಅಮೂಲ್ಯವಾದ ವಸ್ತ್ರದಿಂದ ಕಂಗೊಳಿಸುತ್ತಿರುವ ರಾಣಿಯು ಆ ದಾಸಿಯರ ಮಧ್ಯದಲ್ಲಿ "ನಕ್ಷತ್ರಮಯ ಮಾದ ದಿವಿಜಪದದೊಳ್ ಶಾರ್ವರೀ ಚಂದ್ರನುದಯಿಪಂತೆ" ಬಂದಳು. ದಾಸಿಯೊಬ್ಬಳು ಪರಿಮಳ ಜಲಪೂರಿತವಾಗಿ ಪರಿಮಳಿತ ಪುಷ್ಪಾಲಂಕೃತವಾಗಿ ಪರಿಶೋಭಿಸುವ ಸುವರ್ಣ ಕಲಶವನ್ನು ಅವಳ ಕೈಗಿತ್ತಳು. ರಾಣಿಯು ಅದನ್ನು ದಂಡಿಗೆಯಲ್ಲಿ ಇಟ್ಟಳು; ಚಿನ್ನದ ತೆಂಗಾಯನ್ನೂ, ರತ್ನ ನಿರ್ಮಿತವಾದ ಮಾವಿನೆಲೆಗಳನ್ನೂ ಕೋಡು ಅದರ ಮೇಲೆ ಇಟ್ಟಳು. ರಾಣಿಯು ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುತ್ತಲೇ ಎಂಟುಜನ ದಾಸಿಯರು ಅದನ್ನು ತಮ್ಮ ಕೋಮಲವಾದ ಸ್ಕಂಧಗಳಿಂದ ಆಧರಿಸಿದರು. ಸುವರ್ಣದ ತರುಣಿಯು ಯಮುನಾನದಿಯಲ್ಲಿ ತೇಲಿ ಹೋಗುವಂತೆ ಆ ದಂಡಿಗೆಯು ಸಖೀಜನ ಮಸ್ತಕಗಳ ಮೇಲೆ ತೋರುತ್ತ ಅರಮನೆಯ ಹೊರಕ್ಕೆ ಹೋಯಿತು. ಕೂಡಲೇ ಅರಸನಿದ್ದ ಎಡೆಯಿಂದ ಕಹಳೆಗಳು ಭೋರ್ಗರೆದುವು; ನಗಾರಿಗಳು ಮೊಳಗಿದುವು. ರಾಜಮಂದಿರದಲ್ಲಿ ಇದುವರೆಗೆ ಕೇಳಿಸುತ್ತಿದ್ದ ಕಲಕಲವು ದೂರವಾಗುತ್ತ ಬಂದಿತು. ಅರಮನೆಯ ಕಾವಲು ಗಾರರಲ್ಲಿ ಒಬ್ಬಿಬ್ಬರಲ್ಲದೆ ಮಿಕ್ಕವರೆಲ್ಲರೂ ನಡೆದುಬಿಟ್ಟರು.

ಗುಂಡನಾಯಕನು ಇದೆಲ್ಲವನ್ನು ನೋಡುತ್ತಿದ್ದನು; ಮೆರವಣಿಗೆಯ ಸಂಭ್ರಮವು ಅದೃಶ್ಯವಾಗುತ್ತಲೇ ಕಿಟಕಿಯ ಬಳಿಯಿಂದ ಹಿಂದಿರುಗಿದನು. ಅವನು ಹಿಂದಿರುಗುತ್ತಿದ್ದ ಹಾಗೆ ಒಬ್ಬ ಯುವಕನು ರಾಜಾಂಗಣದ ಬಲಪಕ್ಕದಲ್ಲಿ ಸುಳಿಯುತ್ತಿದ್ದನು. ಗುಂಡನಾಯಕನು ಅವನು ಪಹರೆಯವನೆಂದು ಸುಮ್ಮನಾದನು. ಯುವಕನು ಮೆಲ್ಲಮೆಲ್ಲನೆ ಕಾಲಿಡುತ್ತಿದ್ದನು: ಆಗಾಗ ಸುತ್ತೆಲ್ಲ ನೋಡುತ್ತಿದ್ದನು. ಯುವಕನು ಚಂದ್ರೋದಯವು ಹಾಸಿದ್ದ

ರಾಜಾಂಗಣದ ಮಾರ್ಗವನ್ನು ಬಿಟ್ಟು ಅರಮನೆಯ ಬಳಿಯಲ್ಲಿದ್ದ ಸಣ್ಣ ಸಾಲ್ಮರಗಳ ನೆರಳ ಹಾದಿಯನ್ನು ಹಿಡಿದು ಬರುತಿದ್ದನು. ಇದ್ದಕ್ಕಿದ್ದ ಹಾಗೆ ಯುವಕನು ಸೆರೆಮನೆಯ ಕೆಳಗಡೆಗೆ ಬಂದನು. ಅಲ್ಲಿಂದ ಮೇಲೆ ಪತ್ತಲು ದಾರಿಯಿಲ್ಲವೆಂದು ತಿಳಿದು ಪುನಃ ಹಿಂತಿರುಗಿದನು. ತನ್ನ ಆಗಮನವನ್ನು ಯಾರೂ ಅರಿಯಲಿಲ್ಲ ವೆಂದು ತರುಣನು ಧೈರ್ಯಗೊಂಡು, ಅರಮನೆಯ ಒಳಗಡೆಯಿದ್ದ ಭವಂತಿಯನ್ನು ಸೇರಿದನು. ಯುವಕನು ಎಲ್ಲಿಗೆ ಹೋದನೆಂದು ಗುಂಡನಾಯಕನಿಗೆ ಒಮ್ಮೆ ತಿಳಿಯಲಿಲ್ಲ. ನಾಯಕನು ಕಿಟಿಕಿಯ ಬಳಿಗೆ ಬಂದು ನೋಡುತ್ತಿರಲಾಗಿ, ಯುವಕ ಆ ಕಿಟಿಕಿಯ ಇದಿರಾಗಿ ಬರುತ್ತಿದ್ದನು. ಯುವಕನು ಅಲ್ಲಿಯೇ ಸ್ವಲ್ಪ ತಡೆದನು. ನಿದ್ದೆಹೋದ ಪಹರೆಯುವನ ಮುಂಡಾಸನ್ನು ಮೆಲ್ಲಗೆ ಮುಟ್ಟಿನೋಡಿ ಅದರಿಂದ ಏನನ್ನೋ ಎತ್ತಿಕೊಂಡನು. ಬಳಿಕ ಕಾಲ ಸದ್ದಾಗದಂತೆ ನಡೆದು ಕೊಟಡಿಯ ಬೀಗವನ್ನು ತೆರೆದು, ಗುಂಡನಾಯಕನಿಗೆ ಹೊರಕ್ಕೆ ಬರುವಂತೆ ಕೈಸನ್ನೆ ಮಾಡಿದನು. ಇಬ್ಬರೂ ಮಾತಾಡಲಿಲ್ಲ. ಗುಂಡನಾಯಕನು ಹೊರಕ್ಕೆ ಬಂದನು. ಯುವಕನು ಅವನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಗುಂಡನಾಯಕನು ಯುವಕನನ್ನು ಗುರುತಿಸಿದಂತೆ ನಗಾಡಿದನು. ಇಬ್ಬರೂ ಮೆಲ್ಲನೆ ಭವಂತಿಯನ್ನು ದಾಟಿ ಅರಮನೆಯ ಹಿಂದುಗಡೆಯಲ್ಲಿ ಇಳಿದರು. ಚಂದ್ರನು ಅಸ್ತಮಿಸು ತ್ತಿದ್ದನು. ಕಲಶೋತ್ಸವವು ಸಮಾಪ್ತವಾಯಿತೆಂದು ಕಹಳೆಗಳು ಕೂಗಿದವು. ಜನಗಳು ತಂತಮ್ಮ ಮನೆಗಳಿಗೆ ಹೋಗುತ್ತಿದ್ದರು. ಯುವಕರಿಬ್ಬರು ಅವಸರದಿಂದ ಕಾಲಿಡುತ್ತ ಅರಮನೆಯ ಗೋಡೆಯನ್ನು ರಹಸ್ಯ ಮಾರ್ಗದಿಂದ ದಾಟಿ ನಿರ್ಜನವಾದ ಸ್ಥಳಕ್ಕೆ ಬಂದರು.

ಯುವಕರಿಬ್ಬರು ಮಾತೆತ್ತದೆ ಬಹಳ ದೂರಕ್ಕೆ ಮುಟ್ಟಿದರು; ಮನುಷ್ಯನ ಸುಳಿವಿಲ್ಲದ ಹಾದಿಗಳನ್ನು ಹಿಡಿದು ಹೋಗುತ್ತಿದ್ದರು. ಇದುವರೆಗೆ ಮರಗಳ ಎಲೆಗಳಿಂದ ನೆಲಕ್ಕೆ ಉದುರಿ ಬಿದ್ದ ಚಂದ್ರಕಿರಣಗಳ ಬದಲಾಗಿ ಅಂಧಕಾರದ ಛಾಯೆಯು ಆವರಿಸುತ್ತಿದ್ದಿತು. ಇಬ್ಬರೂ ಕಳ್ಳರಂತೆ ಹಿಂದುಮುಂದೆ ನೋಡುತ್ತ, ಎಲೆಗಳ ಮರ್ಮರ ಶಬ್ದಕ್ಕೆ ಸುತ್ತಲೆಲ್ಲಾ ನೋಡುತ್ತಾ, ಬೇಗಬೇಗನೆ ಕಾಲಿಡುವಂತಿದ್ದರು. ಗುಂಡನಾಯಕನು ಮೌನವನ್ನು ತ್ಯಜಿಸಿ ಮಾತನಾಡತೊಡಗಿದನು.

ಗುಂಡ:—"ನಿನ್ನ ಸಾಹಸದಿಂದ ನನ್ನ ಪ್ರಾಣವುಳಿಯಿತು. ನನಗೆ ಬಂಧನ ಪ್ರಾಪ್ತಿಯಾಯಿತೆಂದು ನೀನು ಹೇಗೆ ತಿಳಿದೆ?"

ಯುವಕ:—ರಾಜನು ನನ್ನನ್ನು ನೋಡಿದಂದಿನಿಂದ ನಮಗೆ ಯಾವುದೋ ಅಪಾಯ ಸಂಭವಿಸುವುದೆಂದು ನನಗೆ ಶಂಕೆ ಇದ್ದಿತು. ಅಪ್ಪನು ಹೇಳಿದ ಮಾತು ಪದೇ ಪದೇ ನನ್ನ ಸ್ಮರಣೆಗೆ ಬರುತಿತ್ತು. ತಿಮ್ಮನು ನಿನ್ನನ್ನು ಕರೆದುಕೊಂಡು ರಾಜಸನ್ನಿಧಿಗೆ ಹೋದ ಬಳಿಕ ಈ ಸಂಶಯವು ಇನ್ನೂ ಬಲಗೊಂಡಿತು."

ಗುಂಡ:—"ನಿನ್ನ ಮನಸ್ಸಿನ ಶಂಕೆಯನ್ನು ನೀನು ಮೊದಲೇ ನನಗೆ ತಿಳಿಸಿರುತ್ತಿದ್ದರೆ ಈ ತೊಂದರೆಗಳನ್ನೆಲ್ಲಾ ತಪ್ಪಿಸಬಹುದಾಗಿತ್ತು. ನೀನು ಹೇಳಲಿಲ್ಲವೇಕೆ?"

ಯುವಕ:—"ಹಾಗೆ ನಾನು ತಿಳಿಸಿದ್ದರೆ ನೀನು ಅರಮನೆಗೆ ಹೋಗುವುದಕ್ಕೆ ಒಪ್ಪುತ್ತಿರಲಿಲ್ಲ. ರಾಜನು ಮೋಸದಿಂದ ಕಾರ್ಯ ಸಾಧನೆ ಆಗಲಿಲ್ಲವೆಂದು ತಿಳಿದು, ಕೂಡಲೇ ಬಲಾತ್ಕಾರವನ್ನು ಉಪಯೋಗಿಸು ತ್ತಿದ್ದನು. ಇದರಿಂದ ಕಾರ್ಯವು ಕೆಟ್ಟುಹೋಗಿ, ನೀನು ಬಂಧನಕ್ಕೆ ಒಳಗಾಗುತ್ತಿದ್ದೆ; ನಾನು ಉಪಾಯವಿಲ್ಲದೆ ರಾಜನಿಗೆ ಬಲಿ ಬೀಳಬೇಕಾಗುತ್ತಿತ್ತು."

ಅಷ್ಟರಲ್ಲಿ ದೂರಕ್ಕೆ ಜನರ ಮಾತುಗಳ ಕಲಕಲವನ್ನು ಕೇಳಿದಂತೆ, ಇಬ್ಬರೂ ತಟಸ್ಥರಾಗಿ ಹಿಂದೆ ನೋಡಿದರು. ಹತ್ತಿರದಲ್ಲಿ ಯಾರ ಸುಳಿವೂ ಇರಲಿಲ್ಲ. ಇಬ್ಬರೂ ಮುಂದೆ ನಡೆಯತೊಡಗಿದರು.

ಗುಂಡ:—ನಾನು ಸೆರೆಯಲ್ಲಿ ಹಾಕಲ್ಪಟ್ಟೆನೆಂದು ನೀನು ಹೇಗೆ ತಿಳಿದೆ?"

ಯುವಕ:—"ನೀನು ಅರಮನೆಗೆ ನಡೆದ ಬಳಿಕ ನಾನು ಅರ್ಧತಾಸು ನೀನು ನನ್ನನ್ನು ಇರಿಸಿದಲ್ಲೇ ತಳುವಿದೆನು. ಆದರೂ ನೀನು ಬರುವ ಹಾಗೆ ತೋರಲಿಲ್ಲ. ಅದಕ್ಕೋಸ್ಕರ ನಾನು ಮೆಲ್ಲಮೆಲ್ಲನೆ ಜನಸ್ತೋಮದಿಂದ ಹಿಂಜರಿದು ಜಾರತೊಡಗಿದಾಗ, "ಪ್ರಥುಲೆಯನ್ನು ಅರಸರು ನೋಡಬೇಕೆಂದಿರುವಂತೆ" ಯಾರೋ ಮಾತಾಡುವುದು ನನ್ನ ಕಿವಿಗೆ ಬಿದ್ದಿತು. ಇದನ್ನು ಕೇಳಿದೆನೋ ಇಲ್ಲವೋ ನಾನು ಮನೆಗೆ ಓಡಿ ಹೋಗಿ ನನ್ನ ಉಡುಪನ್ನು ಬದಲಾಯಿಸಿ ಈ ವೇಷದಿಂದ ಬಂದೆನು. ಪುನಃ ಮೈದಾನಿಗೆ ಬರುತ್ತಲೇ ನಿನ್ನನ್ನು ಹುಡುಕಾಡತೊಡಗಿದೆನು. ಕೊನೆಗೆ ನೀನು ಅರಮನೆಯಲ್ಲಿ ಸೆರೆಯಾಗಿರಬಹುದೆಂದು ಊಹಿಸಿ..."

ಮಾತು ಮುಗಿಯುವಷ್ಟರಲ್ಲಿ ಗುಂಡನಾಯಕನು ಹಿಂದುಗಡೆ ನೋಡಿದನು. ಅಲ್ಲಿ ಯಾರೂ ಇರಲಿಲ್ಲ. ಯುವಕನು ಅವನಂತೆಯೇ ನೋಡಿ "ಯಾರಾದರೂ ನಮ್ಮನ್ನು ಬೆಂಬತ್ತಿ ಬರುವರೆಂದು ಹೆದರಿಕೆಯೇ?" ಎಂದು ಕೇಳಿದನು.

ಗುಂಡನಾಯಕ:—"ನಾನು ಸೆರೆಯಿಂದ ತಪ್ಪಿಸಿಕೊಂಡ ಸಂಗತಿಯು ಅರಮನೆಯವರಿಗೆ ಇಷ್ಟರಲ್ಲಿ ತಿಳಿದಿರಬಹುದು. ಇನ್ನು ಈ ರಾಜ್ಯವನ್ನು ಬಿಟ್ಟ ಹೊರತು ನನ್ನ ಹೃದಯದಿಂದ ಭೀತಿಯು ಹೋಗಲಾರದು.

ಯುವಕನು:—"ಇನ್ನೂ ಹೆದರುವೆಯೇ?" ಎಂದು ಹೇಳಿ, ಸೊಂಟದಲ್ಲಿ ಅಡಗಿಸಿಟ್ಟ ಖಡ್ಗವನ್ನು ಈಚೆಗೆ ಹಿರಿದು "ಇಕೋ! ಇದರ ಸಹಾಯದಿಂದ ನಮ್ಮ ಆಪತ್ತನ್ನು ಪರಿಹರಿಸಿ, ಈ ರಾಜ್ಯದಿಂದ ನಾವು ಹೋಗಿ ಭದ್ರವಾದ ಸ್ಥಳವನ್ನು ಸೇರಬಹುದು" ಎಂದು ಗಂಭೀರವಾಗಿ ಹೇಳಿದನು.

ಗುಂಡನಾಯಕನು ಒಂದು ನಿಮಿಷ ಅವಾಕ್ಕಾಗಿ "ಪ್ರಿಯೇ! ನಿನ್ನ ಸಾಹಸವನ್ನೂ ಪ್ರತ್ಯುತ್ಪನ್ನ ಬುದ್ಧಿಯನ್ನೂ ಮೆಚ್ಚಿದೆ. ಇನ್ನು ಶತ್ರುಗಳು ನಮ್ಮ ಮಾರ್ಗವನ್ನು ಆತಂಕಿಸಿದರೂ ನಿನ್ನ ಖಡ್ಗದ ಸಹಾಯದಿಂದ— ಪುನಃ ಯುವಕನು ಬೆಚ್ಚಿಬಿದ್ದಂತಾಗಿ ಮುಖವನ್ನು ಹಿಂದಿರುಗಿಸಿದನು. ದೂರದಲ್ಲಿ ಪದಸಂಚಾರದ ಶಬ್ದದಂತೆ ಕೇಳಿಸಿತು. ಇಬ್ಬರೂ ಬೇಗ ಬೇಗನೆ ಕಾಲಿಟ್ಟರು. ಅವರು ಮುಂದುವರಿಸುವಷ್ಟಕ್ಕೆ ಸಪ್ಪಳು ಹಿಂದಿನಿಂದ ಅಟ್ಟಿಕೊಂಡು ಬಂದಂತೆ ಕೇಳಿಸಿತು. ವಿಜಯನಗರದ ಕೋಟೆಯ ಗೋಡೆಗಳು ಸಮೀಪಿಸಿದುವು.. ಗುಂಡನಾಯಕನು ಪ್ರಥುಲೆಯೊಡನೆ ಆ ಹಾದಿಯನ್ನು ಬಿಟ್ಟು ಎಡಕ್ಕೆ ತಿರುಗಿದನು. ಹಿಂದಿನಿಂದ ಕೇಳಿಸುತ್ತಿದ್ದ ಶಬ್ದವು ಸ್ವಲ್ಪ ಸ್ತಬ್ಧವಾಯಿತು. ಇಬ್ಬರು ಕೋಟೆಯ ರಹಸ್ಯಮಾರ್ಗದಲ್ಲಿದ್ದ ಒಂದು ರುಂಧ್ರದಿಂದ ನುಸುಳಿ ಹೊರಕ್ಕೆ ಬಂದು ಸ್ವಲ್ಪ ಉಸಿರನ್ನು ತೆಗೆದುಕೊಳ್ಳುವುದಕ್ಕೆ ಅಲ್ಲಿಯೇ ತಡೆದರು.

ಅಷ್ಟರಲ್ಲಿ ಅದೇ ರಂಧ್ರದಿಂದ ಒಬ್ಬ ಸಿಪಾಯನು ಕೆಳಕ್ಕೆ ಧುಮಿಕಿದನು; ಒಡನೆ ಇನ್ನೊಬ್ಬನು ಹಾರಿದನು. ಕಡೆಯವನು ಸಿಪಾಯನಾಗಿರಲಿಲ್ಲ. ಅವನು ತಿಮ್ಮನಾಗಿದ್ದನು. ಅವನನ್ನು ನೋಡುತ್ತಲೇ ಗುಂಡನಾಯಕನು ರೌದ್ರಾಕಾರವನ್ನು ಧರಿಸಿದನು. ತಿಮ್ಮನು ಗುಂಡನನ್ನು ಗುರುತಿಸಿ "ಈ ರಾಜದ್ರೋಹಿಯನ್ನು ಬಾಧಿಸಿಬಿಡಿರಿ" ಎಂದು ಸಿಪಾಯರಿಗೆ ಆಜ್ಞೆ ಮಾಡಿದನು. ಸಿಪಾಯರಲ್ಲಿ ಒಬ್ಬನು ಅವನನ್ನು ಸಮೀಪಿಸುತ್ತಲೇ ಗುಂಡನಾಯಕನು ಛಕ್ಕನೆ ಅವನ ಸಮ್ಮುಖಕ್ಕೆ ಹಾರಿ, ತನ್ನ ಕೈಯಲ್ಲಿದ್ದ ಖಡ್ಗದಿಂದ ಅವನನ್ನು ನೆಲಕ್ಕೆ

ಕೆಡಹಿದನು. ಒಡನೆ ತಿಮ್ಮನ ಬಳಿಗೆ ರೋಷಾವೇಶದಿಂದ ಬರುತ್ತಿರಲಾಗಿ ಮತ್ತೊಬ್ಬನು ಅವನನ್ನು ಇದಿರಾದನು. ಸಿಪಾಯನು ಬರುವುದನ್ನು ನೋಡಿ, ಯುವಕ ವೇಷದಲ್ಲಿದ್ದ ಪ್ರಥುಲೆಯು ಹಿಂದುಗಡೆಯಿಂದ ಹೋಗಿ ಆತನು ಎತ್ತಿ ಹಿಡಿದಿದ್ದ ಕೈಯನ್ನು ಬಿಗಿದು ಹಿಡಿದಳು. ಅಕಸ್ಮತ್ತಾಗಿ ಬಂದ ಆತಂಕವನ್ನು ತಿಳಿಯದೆ ಸಿಪಾಯನು ಹಿಂದಿರುಗಿದನು. ಅಷ್ಟರಲ್ಲಿ ಗುಂಡನಾಯಕನು ಸಿಪಾಯಿಯನ್ನು ತನ್ನ ಖಡ್ಗಕ್ಕೆ ಆಹುತಿಯನ್ನಾಗಿ ಮಾಡಿದನು. ಪ್ರಾಣೋತ್ಕ್ರಮಣ ಕಾಲದಲ್ಲಿ ಸಿಪಾಯನು ತನ್ನ ಖಡ್ಗವನ್ನು ಬೀಸಿಬಿಟ್ಟನು. ಅದು ಪ್ರಥುಲೆಗೆ ತಗಲುವುದೆಂದು ಬೆದರಿ "ಪ್ರಥುಲಾ! ನೀನು ಹಿಂತೆಗೆ! ಅಲ್ಲಿ ಬಿದ್ದ ಖಡ್ಗದಿಂದ ಆ ಪಾಪಿಯ ತಲೆ ಕಡಿದುಬಿಡು!" ಎಂದು ಹೇಳಿ ಸಿಪಾಯನ ಪೆಟ್ಟನ್ನು ತಾನೇ ತೆಗೆದುಕೊಂಡನು. ಪ್ರಥುಲೆಯು ಮೊದಲು ಬಿದ್ದ ಸಿಪಾಯನ ಕೈಯಿಂದ ಜಾರಿದ ಖಡ್ಗವನ್ನು ಹೆಕ್ಕಿ ತೆಗೆದು ತಿಮ್ಮನಿಗೆ ಇದಿರಾಗಿ ಬಂದಳು. ತನ್ನ ಪ್ರಾಣವಲ್ಲಭ ಏನಾದನೆಂದು ಲೆಕ್ಕಿಸದೆ ತಿಮ್ಮನನ್ನು ಬೆಂಬತ್ತಿ ಹೋದಳು. ತಿಮ್ಮನು ಗುಂಡನು ಪ್ರಥುಲೆಗೆ ಹೇಳಿದ ಮಾತನ್ನು ಕೇಳುತ್ತಲೇ ಆಯುಧರಹಿತನಾದುದರಿಂದಲೂ, ರಣಭೀರುವಾದುದರಿಂದಲೂ ರಂಧ್ರದೊಳಗಿಂದ ಒಳಕ್ಕೆ ಜಾರಲಿದ್ದನು. ಪ್ರಥುಲೆಯು ಖಡ್ಗವನ್ನು ಕೊಂಡು ಓಡಿ ಬಂದು, ರಂಧ್ರದೊಳಗೆ ತಿವಿದು ಬಿಟ್ಟಳು. ಆ ಏಟು ರಂಧ್ರಕ್ಕೆ ತಗಲಿ ಕಣಕಣಿಸಿತು. ತಿಮ್ಮನು ತಪ್ಪಿಸಿಕೊಂಡು ಹೋದನು. ಅವಳು ಹತಾಶಳಾಗಿ ತನ್ನ ಪ್ರಾಣವಲ್ಲಭನಿದ್ದ ಕಡೆಗೆ ಹಿಂದಿರುಗಿದಳು. ಅವಳ ಪ್ರಾಣೇಶ್ವರನು ರಕ್ತಸಾಗರದಲ್ಲಿ ಅಸ್ತಮಿಸುವಂತಿದ್ದನು. ಪ್ರಥುಲೆಯನ್ನು ದೃಷ್ಟಿಸುತ್ತಲೇ ಗುಂಡನಾಯಕನು "ಪ್ರಥುಲಾ! ತಿಮ್ಮನು ಇನ್ನೂ ಬದುಕಿರುವನೇ?" ಎಂದು ಕೇಳಿದನು. ಪ್ರಥುಲೆಯ ಉತ್ತರವನ್ನು ಕೇಳುವುದಕ್ಕೆ ಅವನ ದೇಹದಲ್ಲಿ ಪ್ರಜ್ಞೆ ಉಳಿದಿರಲಿಲ್ಲ. ಅವನ ಜೀವನ ನೌಕೆಯು ರಕ್ತಪ್ರಳಯದಲ್ಲಿ ಮುಳುಗಿ ಹೋಯಿತು. ಪ್ರಥುಲೆಯು ವ್ಯಾಕುಲಿತ ಮನಸ್ಸಿನಿಂದ ನಾಯಕನ ಉದರದಲ್ಲಿದ್ದ ಖಡ್ಗವನ್ನು ಈಚೆಗೆ ಸೆಳೆದಳು. ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಯೋಚನೆಯಿಂದ ಒಂದು ಮುಹೂರ್ತ ಖಡ್ಗವನ್ನು ಎತ್ತಿ ಹಿಡಿದಳು. ಪುನಃ ತನ್ನ ಪ್ರಾಣನಾಯಕನ ಅಂತಿಮಕಾಲದ ಮಾತುಗಳಿಂದ ಉದ್ರೇಕಿತಳಾಗಿ ಖಡ್ಗವನ್ನು ಬಿಸುಟಳು. "ಆತ್ಮಹತ್ಯೆಗೆ ಇದು ಸಮಯವಲ್ಲ! ಪ್ರಿಯನ ಮರಣಕಾಲದ ಆಸೆಯನ್ನು ಪೂರೈಸುವುದರಲ್ಲಾದರೂ ಈ ದೇಹವನ್ನು ವಿನಿಯೋಗಿಸುವೆನು" ಎಂದು ದೃಢಚಿತ್ತಳಾಗಿ ಅಲ್ಲಿಯೇ ಒಂದು ಗಳಿಗೆ ತಡೆದಳು.

ರಾಜಧಾನಿಯ ಬಡಗಣ ಕಡೆಯಲ್ಲಿ ನವಮಿಯ ಉತ್ಸವವನ್ನು ಸೂಚಿಸುವ ಅಗ್ನಿಕುಂಡವು ಎಲ್ಲಿ ಪ್ರಜ್ವಲಿಸುತ್ತಿತ್ತೋ ಅದರ ಸಮೀಪದಲ್ಲೇ ಮೇಲೆ ಹೇಳಿದ ಕಲಹವು ನಡೆಯಿತು. ಪ್ರಥುಲೆಯು ಗಂಭೀರವಾದ ಏಕಾಂತವಾದ ರಾತ್ರಿಯಲ್ಲಿ ಏನು ಮಾಡಬೇಕೆಂದು ತಿಳಿಯಲಾರದೆ ವಲ್ಲಭನ ಮೃತಶರೀರದ ಬಳಿಯಲ್ಲಿ ಕುಳಿತು ದುಃಖಿಸುತ್ತಿದ್ದಳು. ಇದ್ದಕ್ಕಿದ್ದ ಹಾಗೆ ದೂರ ಒಬ್ಬ ಮನುಷ್ಯನು ಬರುತಿದ್ದನು. ಪ್ರಥುಲೆ ಮೊತ್ತ ಮೊದಲು ಅವನನ್ನು ದೃಷ್ಟಿಸಲಿಲ್ಲ. ಅವನು ಸಮೀಪಸ್ಥನಾಗುತ್ತಲೇ ಕೆಳಗಿದ್ದ ಖಡ್ಗವನ್ನು ಕೈಯಲ್ಲಿ ಹಿಡಿದು ಎದ್ದು ನಿಂತಳು. ಕತ್ತಲು ಬಲವಾದುದರಿಂದಲೂ ಪತಿಶೋಕವು ಅಪಾರವಾದುದರಿಂದಲೂ ಅವಳು ಆಗಂತುಕನನ್ನು ಗುರುತಿಸಲಿಲ್ಲ. ಬಂದವನು ಅಲ್ಲಿಯೇ ತಡೆದು "ಇದೇನು ಪ್ರಮಾದ?" ಎಂದು ಆಶ್ಚರ್ಯದಿಂದಲೂ, ಭೀತಿಯಿಂದಲೂ, ಖೇದದಿಂದಲೂ ಕೇಳಿದನು. ಪ್ರಥುಲೆಯು ಈ ಮಾತುಗಳನ್ನು ಕೇಳಿದಳೋ ಇಲ್ಲವೋ ಬೇಗಬೇಗನೆ ಮುಂದರಿಸಿ ಆಗಂತುಕನ ಚರಣತಲದಲ್ಲಿ ತನ್ನ ಮಸ್ತಕವನ್ನು ಅರ್ಪಿಸಿದಳು; ತನ್ನ ಭಾಷ್ಪಗಳಿಂದ ಅವನ ಅಡಿಗಳನ್ನು ನೆನೆಯಿಸಿದಳು. ಆಗಂತುಕನು ಪ್ರಥುಲೆಯ ಸಮೀಪದಲ್ಲಿ "ಮಗು! ರೋದಿಸಬೇಡ! ಎಲ್ಲವೂ ವಿಧಿಕೃತ. ವಿಧಿಕಾರ್ಯಗಳು ವಿಚಿತ್ರವಾದವುಗಳು. ಸುಮ್ಮನೆ ಅಳಬೇಡಮ್ಮ!" ಎಂದನು.

ಪ್ರಥುಲೆಯು ಬಿಕ್ಕಿ ಬಿಕ್ಕಿ ಅಳುತ್ತಾ. "ಅಪ್ಪಾ! ನಿನ್ನ ಮಾತು ಮೀರಿ ಬಂದು. ಈ ದುರವಸ್ಥೆಯನ್ನು ತಂದುಕೊಂಡೆನು. ನೀನು ಬುದ್ಧಿ ಹೇಳಿದಂತೆ ನಾನು ಮನೆಯಲ್ಲೇ ಇರುತ್ತಿದ್ದರೆ ಚೆನ್ನಾಗಿತ್ತು! ನನ್ನ ಕುಂಕುಮ ವನ್ನು ನಾನೇ ಅಳಿಸಿಬಿಟ್ಟೆನಲ್ಲ!" ಎಂದು ಹಂಬಲಿಸಿದಳು.

ವೃದ್ಧನು ಮಗಳ ರೋದನವನ್ನು ನೋಡುತ್ತಾ "ಅಮ್ಮಾ! ಇನ್ನು ಗೋಳಿಡಬೇಡ! ನೀನು ಮನೆ ಯಲ್ಲಿ ಇದ್ದರೂ ಈ ಮೃತ್ಯುವನ್ನು ತಪ್ಪಿಸುವುದು ಅಶಕ್ಯವಾಗಿದ್ದಿತು. ನಿನ್ನ ಜನನಿಯ ನಿರ್ಬಂಧದಿಂದ ಅವನು ನನ್ನ ಅಳಿಯನಾಗಲು ಒಪ್ಪಿದನು. ಆಗಲೇ ನಾನು ಈ ದುರ್ಘಟನೆಯು ಬರುವುದೆಂದು ಎಣಿಸಿದ್ದೆನು. ಪ್ರಥುಲಾ! ಇನ್ನು ಅತ್ತು ಪ್ರಯೋಜನವಿಲ್ಲ. ನಿನಗೆ ಅಪಾಯ ಸಂಭವಿಸುವುದೆಂದು ತಿಳಿದು ನಾನು ಮುದುಗಲ್ಲಿ ನಿಂದ ಹೊರಟುಬಂದೆನು. ಅಳಬೇಡಮ್ಮ! ಅಳಬೇಡ! ಆದರೆ ನಿಮ್ಮನ್ನು ಮನೆಯಲ್ಲಿ ಕಾಣದೆ ಇದ್ದುದರಿಂದ ರಾಜಧಾನಿಯಲ್ಲಿ ಹುಡುಕಿದೆನು. ಬಳಿಕ ನಿಮ್ಮಿಬ್ಬರನ್ನು ಅರಸನು ಬಂಧಿಸಿರುವನೆಂದು ಕೇಳಿ ನಿಮ್ಮ ಬಂಧನ ಪರಿಹಾರಾರ್ಥವಾಗಿ ಹಂಪಿಯ ವಿರೂಪಾಕ್ಷ ದೇವಾಲಯಕ್ಕೆ ಹೋಗುತ್ತಿದ್ದೆನು. ಕಾರ್ಯವೆಲ್ಲಾ ಕೆಟ್ಟು ಹೋಯಿತು. ಈಗ ಚಿಂತೆಯಿಲ್ಲ; ಈ ಶವಕ್ಕೆ ತಕ್ಕ ಸಂಸ್ಕಾರಗಳನ್ನು ಮಾಡದೆ ಇರುವುದು ನ್ಯಾಯವಲ್ಲ; ಈ ಶವವು ಇಲ್ಲಿಯೇ ಬಿದ್ದಿದ್ದರೆ ನಾಳೆ ರಾಜನು ಅದನ್ನು ಕೋಟೆಯ ಬಾಗಿಲಿಗೆ ತೂಗಿಸಿ ಅವಮಾನಗೊಳಿಸು ವನು" ಎಂದನು.

ಕಡೆಯ ಮಾತನ್ನು ಕೇಳುತ್ತಲೇ ಪ್ರಥುಲೆಯು ಸ್ವಲ್ಪ ಸಮಾಧಾನಗೊಂಡು "ಅಪ್ಪಾ! ಹಾಗೆ ಆಗದಂತೆ ಸಂಸ್ಕಾರಗಳನ್ನು ಮಾಡಲು ಉಪಾಯವುಂಟೇ?" ಎಂದು ಕೇಳಿದಳು.

ತಂದೆಯು ಮಗಳನ್ನು ಕನಿಕರದಿಂದ ನೋಡಿ, "ಮಗು, ನೀನು ಶೋಕ ಬಿಡುವುದಾದರೆ ಕೆಲಸವು ಶೀಘ್ರದಲ್ಲಾಗುವುದು. ನೀನು ಇನ್ನೂ ದುಃಖದಿಂದ ಇಲ್ಲಿಯೇ ಬೀಳುವುದಾದರೆ, ನಮ್ಮ ಅವಸ್ಥೆ ಇನ್ನೊಂದು ಗಳಿಗೆಯಲ್ಲಿ ಏನಾಗುವುದೋ ಹೇಳಲಾರೆನು" ಎಂದನು.

ಪ್ರಥುಲೆಯು "ಅಪ್ಪಾ! ಆ ನೀಚ ತಿಮ್ಮನನ್ನು ಸಂಹರಿಸದೆ ನಾನು ಇಲ್ಲಿಂದ ಏಳಲಾರೆನು" ಎಂದಳು.

ತಂದೆಯು "ಅಮ್ಮಾ! ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡುವ! ಈಗ ಇಲ್ಲಿರುವುದು ಒಳ್ಳೆಯದಲ್ಲ" ಎಂದನು.

ಬಳಿಕ ಇಬ್ಬರೂ ಎದ್ದು ನಿಂತರು. ವೃದ್ಧನಾದ ತಂದೆಯು ಗುಂಡನಾಯಕನ ಶವದ ಗಾಯಕ್ಕೆ ತನ್ನ ತಲೆಬಟ್ಟೆಯನ್ನು ಬಿಗಿದು, ನೆತ್ತರನ್ನು ತಡಿಸಿ, ಅದನ್ನು ಹೊತ್ತುಗೊಂಡು ಹೋಗುವುದಕ್ಕೆ ಮಗಳೊಡನೆ ಸೂಚಿಸಿದನು. ಮಗಳು ಮುಂದುಗಡೆಯಲ್ಲಿಯೂ ತಂದೆ ಹಿಂದುಗಡೆಯಲ್ಲಿಯೂ ಅದನ್ನು ಹಿಡಿದು ಸಮೀಪ ದಲ್ಲಿ ಉರಿಯುತ್ತಿದ್ದ ಅಗ್ನಿಕುಂಡದಲ್ಲಿ ಅದನ್ನು ಸಮರ್ಪಿಸಿಬಿಟ್ಟರು. ಗುಂಡನಾಯಕನ ದೇಹವು ಅನ್ಯರ ಹಸ್ತದಿಂದ ಕಳಂಕಿತವಾಗದೆ ಪವಿತ್ರವಾದ ಅಗ್ನಿಮುಖದಲ್ಲಿ ವಿಲೀನವಾಗಿ ಹೋಯಿತು. ತತ್‌ಕ್ಷಣವೇ ವೃದ್ಧನು ಮಗಳೊಡನೆ ಅಲ್ಲಿಂದ ಅದೃಶ್ಯನಾದನು.

ಇತ್ತ ದೇವರಾಜನು ರಾತ್ರಿಯ ವೃತ್ತಾಂತವನ್ನೆಲ್ಲಾ ತಿಮ್ಮನಿಂದ ಕೇಳಿ ಪಶ್ಚಾತ್ತಾಪಗೊಂಡನು. ಪ್ರಥುಲೆಯು ಹೇಗೋ ತಪ್ಪಿಸಿಕೊಂಡುದಕ್ಕೆ ಬಹಳವಾಗಿ ವ್ಯಥೆಗೊಂಡನು. ತಿಮ್ಮನ ಮಾತುಗಳಿಂದ ಗುಂಡನಾಯಕನು ಸತ್ತನೋ ಇಲ್ಲವೋ ಎಂಬುದು ಅರಸನಿಗೆ ನಿಶ್ಚಯಿಸಲು ಆಗಲಿಲ್ಲ. ಪ್ರಾತಃಕಾಲದಲ್ಲಿ

ತಿಮ್ಮನನ್ನು ರಾಜನು ನೋಡಿ, "ಹಕ್ಕಿಗಳು ಎಲ್ಲಿ ಓಡಿರಬಹುದು?" ಎಂದು ಕೇಳಿದನು. ತಿಮ್ಮನು "ಗೂಡಿಗೆ" ಉತ್ತರಕೊಟ್ಟನು. "ಹಾಗಾದರೆ ನಾವು ಬೇಟೆಗಾದರೂ ಹೋಗಿ ಅವನ್ನು ಹಿಡಿಯಬೇಕು" ಎಂದು ಅರಸನು ಸೂಚಿಸಿದನು. ಹಾಗೆಯೇ ಮಧ್ಯಾಹ್ನದಲ್ಲಿ ವಿಜಯನಗರದ ಮಹಾಸೈನ್ಯವು ಈ ಎರಡು ಅಥವಾ ಒಂದು ಪಕ್ಕಿಯನ್ನು ಹಿಡಿಯಲೋಸುಗ ಸರ್ವಸನ್ನಾಹತೆಗಳನ್ನು ಒದಗಿಸಿಕೊಂಡು, ವಿದ್ಯಾದಶಮಿಯ ಮಧ್ಯಾಹ್ನ ದಲ್ಲಿ ರಾಜಧಾನಿಯನ್ನು ಬಿಟ್ಟು ಮುದುಗಲ್ಲಿಗೆ ತೆರಳಿತು. ದಾರಿಯಲ್ಲಿ ಸಿಕ್ಕಿದವರನ್ನು ಸೈನಿಕರು ವಿಚಾರಿ ಸುತ್ತ, ಕಂಡ ಮನೆಗಳನ್ನು ಹುಡುಕುತ್ತ ದ್ವಾದಶಿಯ ಮಧ್ಯಾಹ್ನದಲ್ಲಿ ಮುದುಗಲ್ಲನ್ನು ಮುಟ್ಟಿದರು. ನಿವಾಸಕರನ್ನು ಹಿಡಿದು ತಂದು ವಿಚಾರಿಸಿ ಪ್ರಥುಲೆಯ ಮನೆಯನ್ನು ಕಂಡುಹಿಡಿದರು. ಒಡನೆ 100 ಮಂದಿ ಸೈನಿಕರು ಬಡ ಗುಡುಸಲನ್ನು ಮುತ್ತಿದರು. ಗುಡುಸಲಿಗೆ ಬೀಗ ಹಾಕಿತ್ತು. "ಗುಡುಸಲನ್ನು ಹುಡುಕಿ ನೋಡಿದೆವು. ಪ್ರಥುಲೆ ಇಲ್ಲ. ಏನು ಮಾಡಬೇಕು?" ಎಂದು ಸೈನಿಕರು ಬಂದು ಕೇಳಿದರು. ತಿಮ್ಮನು "ಅದಕ್ಕೆ ಬೆಂಕಿ ಹಚ್ಚಿ ಬಿಡಿ" ಎಂದು ಆಜ್ಞೆಕೊಟ್ಟನು. ನಿಮಿಷಮಾತ್ರದಲ್ಲಿ ಹುಲ್ಲುಗುಡುಸಲು ಸುಟ್ಟು ಬೂದಿಯಾಯಿತು. ರಾಜನ ಕೋಪವು ಈ ಕಾರ್ಯದಿಂದ ಸ್ವಲ್ಪ ಆರಿತು.

ಅರ್ಧರಾತ್ರಿ ದೇವರಾಜನ ಶಿಬಿರವು ವಿಲಾಸಮಯವಾಗಿತ್ತು. ವಿಲಾಸಮಂಟಪದ ನಾಲ್ಕು ಕಡೆ ಗಳಲ್ಲಿಯೂ ಪಟ್ಟೆಯ ವಸ್ತ್ರ ಹೊದಿಸಿತ್ತು. ಇದರ ಹೊರಗಡೆಯಲ್ಲಿ ಪರ್ಣತೋರಣಗಳು ತೂಗಾಡುತ್ತಿದ್ದವು. ಇವುಗಳ ಇಕ್ಕಡೆಗಳಲ್ಲಿಯೂ ಪುಷ್ಪಸರಗಳು ಅಲೆದಾಡುತ್ತಿದ್ದವು. ಚಪ್ಪರದ ಮೇಲ್ ಹೊದಿಕೆಯಿಂದ ಸಹಸ್ರದೀಪಗಳು ಜ್ವಲಿಸುತ್ತಿದ್ದವು. ಈ ದೀಪಗಳ ಕಾಂತಿಯಿಂದ ಅಲ್ಲಿ ನೆರೆದಿದ್ದ ನರ್ತನ ಸ್ತ್ರೀಯರ ರತ್ನಾಭರಣ ಗಳು ಉಜ್ವಲವಾಗಿ ಥಳಥಳಿಸುತ್ತಿದ್ದುವು. ಗಾಯಕರ ಕರ್ಣಮಧುರವಾದ ಗಾನ, ವಾರಸ್ತ್ರೀಯರ ನಾಟ್ಯ ಪರಿಪಾಟ್ಯ, ವಿವಿಧ ಪುಷ್ಪಗಳ ಸುಗಂಧ, ಗಗನ ಶೋಭಿಯಾದ ಚಂದ್ರನ ಪ್ರಶಾಂತವಾದ ಚಂದ್ರಿಕೆ, ವಿಧವಿಧವಾದ ಪಾನಗಳ ಆಮೋದ—ಇವುಗಳಿಂದ ಆ ವಿಲಾಸ ಶಿಬಿರವು ಮನ್ಮಥನ ನಾಟ್ಯರಂಗದಂತೆ ಕಂಗೊಳಿಸುತ್ತಿತ್ತು. ದೇವರಾಜನು ಅಗ್ರಾಸನವನ್ನು ಅಲಂಕರಿಸಿದ್ದನು. ಅವನ ಉಭಯ ಪಾರ್ಶ್ವಗಳಲ್ಲಿಯೂ ಚಾಮರಗಳು ಚಿಮ್ಮಿಸಲ್ಪಡುತ್ತಿದ್ದುವು. ಆಗಾಗ ತಿಮ್ಮನು ಕೈಬಳಿ ಇದ್ದ ತಾಂಬೂಲ ಕರಂಡದಿಂದ ಎಲೆಯನ್ನು ಮಡಚಿ ರಾಜನ ಕೈಗೆ ಕೊಡುತ್ತಿದ್ದನು. ರಾಜನ ಹಿಂದುಗಡೆಯ ಅರ್ಧಚಂದ್ರಾಕೃತಿಯಲ್ಲಿದ್ದ ಆಸನದ ಮೇಲೆ ರಾಜ ಕುಲದವರೂ ರಾಜಮಿತ್ರರೂ ಮಂಡಿಸಿದ್ದರು. ನವವಿಕಸಿತವಾದ ಕಮಲಪತ್ರದ ದರ್ಶನದಿಂದ ಉತ್ಸಾಹಿತ ವಾದ ಭ್ರಮರವು ಮಧುರವಾದ ಝೇಂಕೃತಿಯನ್ನು ಎತ್ತುವಂತೆ, ವಸಂತನ ಆಗಮನದಿಂದ ಸಂತೋಷಗೊಂಡ ಕೋಗಿಲೆಯು ಸುರಸವಾದ ಕುಕಿಲವನ್ನು ಹಾಡುವಂತೆ, ಸಂಗೀತಕಲಾ ನಿಪುಣನಾದ ವೈಣಿಕನ ಬೆರಲಿಂದ ಮೀಟ ಲ್ಪಟ್ಟ ಬೀಣೆಯು ಕೋಮಲವಾದ ರಾಗತರಂಗಗಳನ್ನು ಪಸರಿಸುವಂತೆ, ನರ್ತನಸ್ತ್ರೀಯರು ಒಬ್ಬೊಬ್ಬರಾಗಿ ತಮ್ಮ ಮೃದು ಮಧುರವಾದ ಕಂಠಗಳಿಂದ ಗೀತಗಳನ್ನು ಹಾಡುತ್ತ, ಶ್ರಾವಕರ ಉದ್ವಿಗ್ನ ಹೃದಯವನ್ನು ಶಾಂತಗೊಳಿಸು ತ್ತಿದ್ದರು. ಬಂಧುಳರು ಬಡಿಯುತ್ತಿರುವ ಮೃದಂಗದ ತಾಳಕ್ಕೆ ತಮ್ಮ ಪದವಿನ್ಯಾಸವನ್ನು ಇಡುತ್ತ ತಂತೀ ವಾದ್ಯಗಳ ಮಂಜುಳವಾದ ಝೇಂಕಾರದಲ್ಲಿ ತಮ್ಮ ಹೃದಯಂಗಮವಾದ ಕಂಠಸ್ವರವು ಸಮ್ಮಿಲಿತವಾಗು ವಂತೆ ಹಾಡುತ್ತ, ಶ್ರಾವಕರ ಮನಸ್ಸನ್ನು ಆಕರ್ಷಿಸುವಂತೆ ಅಧರಗಳಿಂದ ಹಾರಿ ಬರುತ್ತಲಿರುವ ಮಧುರ ಗೀತಗಳ ಅರ್ಥವನ್ನು ತಮ್ಮ ಹಸ್ತಾಭಿನಯಗಳಿಂದಲೂ, ನಯನ ಸಂಚಲನದಿಂದಲೂ, ದೇಹ ವಿಕಾರದಿಂದಲೂ, ಪರಿಸ್ಫುಟ ಮಾಡುತ್ತ ವಾರಾಂಗನೆಯರು ನರ್ತಿಸತೊಡಗಿದರು. ನಡುನಡುವೆ ರಾಜನು ಒಬ್ಬೊಬ್ಬರನ್ನೇ ತನ್ನ ಬಳಿಗೆ ಕರೆದು ಕೈತುಂಬಾ ಹಣವನ್ನು ಉಚಿತವಾಗಿ ಕೊಡುತ್ತಿದ್ದನು. ಉಚಿತವನ್ನು ಸ್ವೀಕರಿಸಿದವರು

ಬೇರೊಂದೆಡೆಯಲ್ಲಿ ಕುಳಿತು ವಿಲಾಸವನ್ನು ನೋಡುತ್ತಿದ್ದರು. ಅರ್ಧರಾತ್ರಿ ಕಳೆದುಹೋಯಿತು. ಶ್ರಾವಕರಲ್ಲಿ ಅನೇಕರು ತಮ್ಮ ಶಿರಗಳನ್ನು ಅವಲಂಬಿಸಿ ತೂಕಡಿಸುತ್ತಿದ್ದರು. ದೀಪಗಳು ಮೆಲ್ಲಮೆಲ್ಲನೆ ಬೆಳಕು ಕುಂದ ತೊಡಗಿದವು. ಆಸನಕ್ಕೆ ಒರಗಿದ್ದ ದೇವರಾಜನ ರೆಪ್ಪೆಗಳು ಅಲ್ಲಿಯೇ ಸೆರೆಗೊಳ್ಳುವಂತಿದ್ದುವು. ಒಮ್ಮೊಮ್ಮೆ ತೆರೆದಂತೆ ತೋರಿ ಮೆಲ್ಲನೆ ಮುಚ್ಚಿಹೋಗುತ್ತಲಿದ್ದುವು. ಅಪ್ಸರಲ್ಲಿ ಮತ್ತೊಬ್ಬಳು ಮುಂದೆ ಬಂದು ನರ್ತನವನ್ನು ಪ್ರಾರಂಭಿಸಿದಳು. ಇವಳು ಯಥಾರ್ಥವಾಗಿ ನಾಟ್ಯರಂಗದಲ್ಲಿ ಕಾಲಿಡುವಂತಿದ್ದಳು. ಆ ಸಭಾಮಂಡಲಿಯಲ್ಲಿ ಭರತ ವಿದ್ಯಾವಿಶಾರದರು ಯಾರಾದರೂ ಇರುತ್ತಿದ್ದರೆ, ಆ ನರ್ತಕಿಯ ಚರಣವಿನ್ಯಾಸವು ಸರಿಯಾಗಿಲ್ಲವೆಂದು ಹೇಳುತ್ತಿದ್ದರು. ಯುವತಿಯು ಹಾಡತೊಡಗಿದಳು. ಆ ಹಾಡಿನಲ್ಲಿಯೂ ಸಂಗೀತ ಪಾಂಡಿತ್ಯದ ಚಿಹ್ನೆಗಳೇನೂ ತೋರುತ್ತಿರಲಿಲ್ಲ. ಚಂದ್ರೋದಯದಲ್ಲಿ ವಿರಹಿತವಾದ ಚಕ್ರವಾಕವು ನೆಲದ ಮೇಲೆ ಹೊರಳಾಡಿ ಚಂದ್ರನ ಇದಿರಾಗಿ ಹೇಗೆ ಮೆಲ್ಲುಲಿಗೈವುದೋ ಆ ಪ್ರಕಾರದಲ್ಲಿ ರಮಣಿಯು ಹಾಡುತ್ತಿದ್ದಳು. ಆಗಾಗ ಮುಂದೆ ಬರುತ್ತ. ಹಿಂದೆ ಹೋಗುತ್ತ, ಉಂಗುರದ ಬೆರಲನ್ನು ಅಭಿನಯಿಸುತ್ತ, ಉಡಿಯನ್ನು ತನ್ನ ಎಡಗೈಯಿಂದ ಮುಚ್ಚುತ್ತ, ಜಮಾವಟ್ಟಿನ ಮುಕ್ತಾಯಕ್ಕೆ ಸುತ್ತು ಸುತ್ತು ತಿರುಗುತ್ತ, ತೀಕ್ಷ್ಣವಾದ ದೃಷ್ಟಿಗಳ ಮಿಂಚನ್ನು ನಾಲ್ಕು ಕಡೆಗಳಲ್ಲಿಯೂ ಪಸರಿಸುತ್ತ ನಾಟ್ಯವಾಡಿದಳು. ದೇವರಾಜನು ರೆಪ್ಪೆ ತೆರೆದು ಕಣ್ಣೆತ್ತಿದನು. ರಮಣಿಯು ಹಾಡುತ್ತಿದ್ದಳು. ರಾಗ ಶಹಾನ್, ಆದಿತಾಳ

ಸಾರಿ ಹೇಳುವೆ ನಾನು। ಸ್ವೈರಿಪಾಲಿಸು ನೀನು! ।
ವೀರ ಲಕ್ಷ್ಮೀಮುಖಿ ಕಮಲ ಸಾದ್ಭಾನು! ॥ಪಲ್ಲ॥

ಮಾನವ ಮೂಢನೆ,! ಮಾನಿನಿ ಮಣಿಯನು
ಸಾನುರಾಗದಿ ತಾನೆ ಸಾಧಿಸಬೇಕೈ॥
ಮಾನಿತ ಸ್ತ್ರೀಯನ್ನು। ಹಾನಿಗೈಯಲು ನೋಳ್ಪ
ಓಪರಾಜನು ರಾಜ್ಯಹೃದಯದ ಶೂಲಂ॥ ಸಾರಿ ಹೇಳುವೆ ॥೧॥

ಉರಿವುದು ಪ್ರಣಯವು। ಸುರಿದಂತೆ ತೈಲವ;
ಅರರೇ! ಎಚ್ಚರಗೊಳ್ಳು। ನಿಸ್ನೇಹನಾಗು॥
ಸಿರಿಸಂಪತ್ತನ್ನ ಸುಟ್ಟು ನರಕಮಾರ್ಗವ ತೋರಿ
ನರನ ಜನ್ಮದಿ ಮುಚ್ಚುವುದು ಕತ್ತಲನ್ನು॥ ಸಾರಿ ಹೇಳುವೆ ॥೨॥

ಒಂದೊಂದು ಹೂವೊಳು। ನಿಂದು ಪಾರುವ ತುಂಬಿ
ಯಂದದ ಪ್ರಣಯವು ಪ್ರಣಯವೆನಿಸದೈ॥
ಸುಂದರಿಯೋರ್ವಳಂ। ಚಂದದಲಿ ನಂಬಿ,
ಒಡಾಗಿ ಬಾಳ್ವುದೆ ನಿಜದನುರಾಗಂ॥ ಸಾರಿ ಹೇಳುವೆ ॥೩॥

ಗೆಲ್ಲು ನೀನಿಂದ್ರಿಯ। ನೆಲ್ಲವ, ರಾಜ್ಯದ
ಫುಲ್ಲಾಕ್ಷಿಯರ ಧರ್ಮವನು ರಕ್ಷಿಸೈಯ್ಯಾ! ॥
ಎಲ್ಲರ ಕಾಯ್ವನೇ। ಮೆಲ್ಲನೆ ಮೋಸದಿ
ಕೊಲ್ಲಲು ನಿಂದರೆ ಸೊಲ್ಲಿಪಾರಾರೈ?॥ ಸಾರಿ ಹೇಳುವೆ ॥೪॥

ಜನರ ಹೆಂಗಳನೆಲ್ಲಾ। ಜನನಿಯೆಂದರಿದು ಸ
ದ್ವನಿತಾ ಸನ್ಮಾನರಕ್ಷಕನಾಗಿ ಬಾಳ್ವೆ! ॥
ಜನಕಜೆ, ದ್ರುಪದನ। ತನುಜೆಯ ಬಯಸಿರ್ದ
ಘನಪಾಪಿಗಳ ಗತಿಯನು ಯೋಚಿಸೈಯ್ಯಾ॥ ಸಾರಿ ಹೇಳುವೆ ॥೫॥

ಸ್ತ್ರೀ ಜನ ಧರ್ಮವು। ಓಜೆ ತಪ್ಪುತಲೆ, ಸ
ಮಾಜದ ಚ್ಯುತಿಯಹುದೆಂಬುದ ನಂಬು! ॥
ರಾಜನ ಬಳಿಯಣ। ದುರ್ಜನರ ಕೊಲ್ಲಲ್
ಮೂಜಗದೊಳು ಕೀರ್ತಿ ಪಸರಿಪುದಯ್ಯಾ॥ ಸಾರಿ ಹೇಳುವೆ ॥೬॥

ಈ ಗೀತವನ್ನು ಕೇಳುತ್ತಲೇ ರಾಜನು ಸ್ವಲ್ಪ ಸಂಭ್ರಾಂತನಾದಂತೆ ನೋಡಿದನು; ರಮಣಿಯ ಮುಂದುಗಡೆಯಲ್ಲಿದ್ದ ದೀಪವು ಕಾಂತಿಹೀನವಾದುದರಿಂದ ಅದನ್ನು ಜ್ವಲಿಸುವಂತೆ ತಿಮ್ಮನೊಡನೆ ಸೂಚಿಸಿದನು. ರಮಣಿಯು ಇನ್ನೂ ಹಾಡುತ್ತಲಿದ್ದಳು.

ಸ್ತ್ರೀ ಜನಧರ್ಮವು। ಓಜೆ ತಪ್ಪುತಲೆ, ಸ
ಮಾಜದ ಚ್ಯುತಿಯಹುದೆಂಬುದ ನಂಬು! ॥

ತಿಮ್ಮನು ರಮಣಿಯ ಹತ್ತಿರ ಬರುತ್ತಿದ್ದನು

ರಾಜನ ಬಳಿಯಣ। ದುರ್ಜನರನು ಕೊಲ್ಲಲ್

ತಿಮ್ಮನು ಊರ್ಧ್ವಮುಖನಾಗಿ ದೀಪವನ್ನು ಸರಿಮಾಡುತ್ತಿದ್ದನು. ರಮಣಿಯು

"ಮೂಜಗದೊಳು ಕೀರ್ತಿ ಪಸರಿಪುದಯ್ಯಾ" ॥೬॥
ಸಾರಿ ಹೇಳುವೆನು ನಾನು! ಸ್ಮೈರಿಪಾಲಿಸು ನೀನು
ವೀರಲಕ್ಷ್ಮೀಮುಖ ಕಮಲ ಸದ್ಭಾನು ॥

ಎಂದು ಪೂರೈಸಿದಳು. ಒಡನೆ ಮುದುಕನೊಬ್ಬನು ಮೃದಂಗವನ್ನು ಗಂಭೀರವಾಗಿ ಬಡಿಯುತ್ತಲೇ ಯುವತಿಯು ಕೆರಳಿದಂತಾಗಿ ಮುಕ್ತಾಯಕ್ಕೆ ಸುತ್ತುಮುತ್ತು ತಿರುಗುತ್ತ, ಉಡಿಯ ಮೇಲಿದ್ದ ಕೈಯನ್ನು ಸೆಳೆದು ಜಳಪಿಸುತ್ತ, ತಿಮ್ಮನನ್ನು ಎಡವಿದಂತೆ ಉಚ್ಛಳಿಸಿ ಬೆರಳಿನ ಉಂಗುರವನ್ನು ಮುದ್ದಿಟ್ಟು ಹಿಂಜರಿದಳು. ತತ್‌ಕ್ಷಣವೇ ತಿಮ್ಮನು "ಅಯ್ಯೋ!" ಎಂದು ನೆಲಕ್ಕೆ ಬಿದ್ದುಬಿಟ್ಟನು. ದೇವರಾಜನು ಉರಿಯುವ ದೀಪದ ಕಾಂತಿಯಿಂದ ಯುವತಿಯನ್ನು ಕಂಡುಹಿಡಿದು ಕೆಳಕ್ಕೆ ಧುಮಿಕಿದನು. ತಿಮ್ಮನ ದೇಹವು ರಕ್ತಮಯವಾಗಿತ್ತು; ಭರ್ಜಿಯೊಂದು ಅವನ ಉದರಸ್ಥವಾಗಿತ್ತು. ದೇವರಾಜನು ಅದನ್ನು ನೋಡುತ್ತಲೇ 'ಯುವತಿಯನ್ನು ಹಿಡಿಯಿರಿ' ಹಿಡಿಯಿರಿ!" ಎಂದು ಕೂಗಿದನು. ಸಿಪಾಯರು ಯುವತಿಯನ್ನು ಬಂಧಿಸಲು ಮುಂದೆ ಬಂದರು. ಜನಗಳೆಲ್ಲಾ ವಿಸ್ಮಯಗೊಂಡು ಎದ್ದು ನಿಂತರು. ವಿಲಾಸಮಂಟಪವೆಲ್ಲಾ ಅಲ್ಲೋಲಕಲ್ಲೋಲವಾಯಿತು. ಗಲಭೆಯು ವಿಪರೀತವಾಯಿತು. ಮದ್ದಳೆ ಬಾರಿಸುವವನು ಈ ಗಲಭೆಯಲ್ಲಿ ಮೆಲ್ಲಮೆಲ್ಲನೆ ಹಿಂದಕ್ಕೆ ಸರಿದು ಅಲ್ಲಿಂದ ಕಾಲ್ತೆಗೆದನು. ಆಗ ಪ್ರಥುಲೆಯು ಉನ್ಮತ್ತಳಾಗಿ ತನ್ನ ಬೆರಳಿನ ಉಂಗುರವನ್ನು ಚುಂಬಿಸಿ ಹೀಗೆಂದಳು.

"ರಾಜಾಧಿರಾಜ! ವಿಜಯನಗರ ಸಾಮ್ರಾಜ್ಯಪ್ರಭು! ಮೃತ್ಯುವು ಅನಾಥಳಾದ ಅಬಲೆಯ ಅಂಗವನ್ನು ಆಶಿಸಿದವನ ಆಯುಸ್ಸನ್ನು ಅಕಾಲದಲ್ಲಿ ಅಳಿದುಬಿಡುವುದು ನಿಮ್ಮಲ್ಲಿ ದೃಷ್ಟಾಂತಕ್ಕೆ ಬಂದಿತು. ವಿಜಯನಗರದ ಪ್ರಾಚೀನ ಮಹಾರಾಜರು ನಮ್ಮ ಹಿರಿಯರನ್ನು ನಿಷ್ಕಾರಣವಾಗಿ ಗಡೀಪಾರು ಮಾಡಿಸಿ ಪೀಡಿಸಿ, ಝಾಡಿಸಿ ಬಿಟ್ಟದ್ದು ಸಾಲದೆ, ನೀವು—ಸಾಕ್ಷಾತ್ ಮಹಾರಾಜರಾದ ನೀವು ಬಡವಾದ ಹೆಂಗಸಿನ ಧರ್ಮವನ್ನು ಹಾಳುಮಾಡುವುದಕ್ಕೆ ಮನಮಾಡಿದಿರೇ? ಸ್ತ್ರೀಯರ ಮಾನರಕ್ಷಿಸುವುದಕ್ಕೆ ಬದಲಾಗಿ, ದುರುಪಾಯದಿಂದ ನನ್ನ ದೇಹವನ್ನು ಕಲುಷಿತವನ್ನಾಗಿ ಮಾಡುವುದಕ್ಕೆ ಕೈನೀಡಿದಿರೇ? ಅನುಚಿತ ಕಾರ್ಯಕ್ಕೆ ಇಷ್ಟು ದೂರ ಓಡಿದಿರೇ?"

ಪ್ರಥುಲೆಯು ನೆಲಕ್ಕೆ ಬಿದ್ದುಬಿಟ್ಟಳು. ಪುನಃ ತನ್ನ ಬಿರುಗಣ್ಣುಗಳಿಂದ ಅರಸನ ಮೊಗವನ್ನು ನೋಡುತ್ತ ಉಂಗುರದ ಬೆರಲನ್ನು ತೋರಿಸುತ್ತ,

"ಈ ಉಂಗುರವು ತನ್ನ ಪಾತಿವ್ರತ್ಯವನ್ನು ರಕ್ಷಿಸಿತು. ಇದು ವಿಷಮಯವಾದ ಉಂಗುರವಾದುದರಿಂದ, ನಾನು ಇನ್ನು ಬದುಕಲಾರೆನೆಂದು ತಿಳಿ! ಸ್ತ್ರೀಲೋಲುಪನಾದ ನಿನ್ನ ದೂಷಿತ ಹಸ್ತದಿಂದ ಅಪವಿತ್ರವಾಗುವ ಮೊದಲೇ ಈ ದೇಹವು ಮಣ್ಣಾಗಿ ಹೋಗುವುದೆಂದು ತಿಳಿ! ನಿನ್ನ ದುರ್ವಿಲಾಸ ಭವನದ ಬಂದಿಯಾಗುವುದಕ್ಕೆ ಮುಂಚೆಯೇ ಈ ಪ್ರಾಣವು ನನ್ನ ಪತಿಯ ಚರಣದಲ್ಲಿ ಐಕ್ಯತೆಯನ್ನು ಹೊಂದಿತೆಂದು ತಿಳಿ! ಮಹಾರಾಜ! ನೀವು ಸ್ವಾಭಾವಿಕವಾಗಿ ಸರಳರು; ಧರ್ಮರಕ್ಷಕರು; ಅಲ್ಪರ ವಚನವನ್ನು ಸಾಧಿಸಿ ನಿಮ್ಮ ರಾಜ್ಯಕ್ಕೆ ನೀವೇ ಚಿತಿಯನ್ನು ಕಟ್ಟುವಿರಲ್ಲಾ! ರಾಜಾಧಿರಾಜ! ತಾವು ದೇವಾಂಶಸಂಭೂತರು! ರಾಜದ್ರೋಹವನ್ನು ಮಾಡಿದ ಪಾಪಿಗೆ ನರಕದಲ್ಲಿಯೂ ಸ್ಥಳವಿಲ್ಲವೆಂದು ಹೇಳುವರು. ಅದಕ್ಕೋಸ್ಕರವೇ ತಮ್ಮ ಮೇಲೆ ಕೈಯೆತ್ತಲಿಲ್ಲ! ಆದರೆ...

ಈ ಮಾತನ್ನು ಕೇಳುತ್ತಲೇ ದೇವರಾಜನು ಪ್ರಥುಲೆಯನ್ನು ನೋಡುವುದಕ್ಕೆ ಮುಂದೆ ಬಂದನು. ಪ್ರಥುಲೆಯ ಹೃದಯಪಂಜರದಿಂದ ಪ್ರಾಣಪಕ್ಷಿಯು ಹಾರುವಂತಿತ್ತು.

"ಅದಕ್ಕೋಸ್ಕರವೇ ಆ ಅಧಮ ತಿಮ್ಮನನ್ನು ಕೊಂದುಬಿಟ್ಟೆನು. ಹಾಗೆ ಕೊಂದು ನನ್ನ ಪ್ರಾಣವಲ್ಲಭನ ಕಡೆಯ ಆಜ್ಞೆಯನ್ನು ಪರಿಪಾಲಿಸಿದೆನೆಂದು ನಾನು ಸಂತೋಷದಿಂದ ಪ್ರಾಣ ಬಿಡುವೆನು"

ರಾಜನು ಸಮೀಪಕ್ಕೆ ಬಂದು ಅವಳ ಬಳಿಯಲ್ಲಿ ಕುಳಿತನು. ಅವನು ಏನು ಕಾರಣ ಬಂದನೆಂದು ಮೂರ್ಛಿತಳಾದ ಪ್ರಥುಲೆಯು ಅರಿಯದೆ ನೆಲದ ಮೇಲೆ ತೆವಳುತ್ತ, ದೂರಕ್ಕೆ ಸಾರಿ

"ರಾಜಾಧಮನೇ! ನಿನಗೆ ಧಿಕ್ಕಾರವಿರಲಿ! ನಿನ್ನ ರಾಜ್ಯಕ್ಕೆ ಧಿಕ್ಕಾರವಿರಲಿ! ನನ್ನನ್ನು ನಿನ್ನ ಮಗಳಂತೆ ನೋಡುವ ಬದಲಾಗಿ ನನ್ನ ಅಂತಿಮಕಾಲದಲ್ಲಿ ಎರಡನ್ನು ಬಗೆದ ನೀನು ನಿನ್ನ ಮಗಳ ಅವಸ್ಥೆಯನ್ನು ಕಣ್ಣಾರೆ ಕಂಡು, ತಕ್ಕ ಪ್ರತಿಫಲ ಹೊಂದುವೆ. ನಿನ್ನ ಮಗಳು ನಿನ್ನ ಶತ್ರುಗಳ ಹಸ್ತಗತಳಾಗಿ ಮುಸಲ್ಮಾನರ ಅಂತಃಪುರದಲ್ಲಿ ಕಳಂಕಿತಳಾಗಿ ಹೋಗಲಿ! ಸ್ತ್ರೀಯರ ಪಾತಿವ್ರತ್ಯಕ್ಕೆ ಆಶ್ರಯವಿಲ್ಲದ ನಿನ್ನ ರಾಜ್ಯವು ಭಾಮಿನಿ ಸುಲ್ತಾನರ ವಶವಾಗಿ, ನಿರ್ನಾಮವಾಗಿ. ಭೂಲೋಕ ಚರಿತ್ರದಲ್ಲಿ ಲುಪ್ತವಾಗಿ ಹೋಗಲಿ! ನೀನು ರಾಜಕೀಟನಾದ... ನೀನು, ಇನ್ನು... ಯುದ್ಧ..."

ಕಡೆಯ ಮಾತಿನೊಡನೆ ಪ್ರಥುಲೆಯು ಪ್ರಾಣವಾಯುವು ಹಾರಿ ಹೋಯಿತು. ಅಭಿನವ ದ್ರೌಪದಿಯ ವೀರಚರಿತೆಯು ಪರಿಸಮಾಪ್ತವಾಯಿತು. ನಾವು ದ್ರೌಪದಿಯೆಂದು ಹೇಳಿದೆವೋ? ದ್ರೌಪದಿಯಲ್ಲಿ ದೋಷ ವೊಂದಿತ್ತು. ದ್ರೌಪದಿಯ ವೀರತ್ವಕ್ಕೆ ಹೃದಯ ಕಠೋರತೆಯೂ ದೃಢಕೋಪವೂ ಆಯುಧಗಳಾಗಿದ್ದವು. ಪ್ರಥುಲೆಯ ಹೃದಯುವು ಕ್ರೂರವಾಗಿರಲಿಲ್ಲ; ಪ್ರಥುಲೆಯ ಕೋಪವು ಶೀಘ್ರವಾಗಿತ್ತು. ಅದು ಶೀಘ್ರದಲ್ಲಿ ಶಾಂತಿಯನ್ನೈದಿತು. ದ್ರೌಪದಿಯು ತನ್ನನ್ನು ಬಯಸಿದ ದುರ್ಯೋಧನನನ್ನು ತಮ್ಮಂದಿರೊಡನೆ ಸಂಹಾರ ಗೈಸಿದಳು. ಪ್ರಥುಲೆಯು ಪತಿಯನುಜ್ಞೆಗೆ ಅನುಸಾರವಾಗಿ ತಿಮ್ಮನನ್ನು ಮಾತ್ರ ಸಂಹರಿಸಿದಳು. ಈ ಕೃತ್ಯ ವನ್ನು ಮಾಡಿದ ಮೇಲೆ ಅವಳಿಗೆ ಜೀವಿಸುವ ಆಸೆಯಿರಲಿಲ್ಲ. ದೇವರಾಜನಿಂದ ಕಲುಷಿತಳಾಗದೆ ಕಲಿಯುಗದ ಅಹಲ್ಯೆಯು ಮಾನವಲೀಲೆಯನ್ನು ತ್ಯಜಿಸಿದಳು.

ಪ್ರಥುಲೆಯ ಅಂತಿಮಕಾಲದ ವಚನಗಳಿಂದ ದೇವರಾಜನು ಬುದ್ಧಿ ಕಲಿತನು. ಅಂದಿನಿಂದ ಅವನ ಮಾತುಮಾತುಗಳಲ್ಲಿಯೂ ಕಂಬನಿಗಳು ಸುರಿಯುತ್ತಿದ್ದುವು; ಅಂದಿನಿಂದ ಪರಸ್ತ್ರೀ ಮುಖಾವಲೋಕನವನ್ನು ಅವನು ಮಾಡಲಿಲ್ಲ. ನರ್ತನಸ್ತ್ರೀಯ ವೇಷದ ಪ್ರಥುಲೆಯೊಡನೆ ಮೃದಂಗವನ್ನು ಬಾರಿಸುವುದಕ್ಕೆ ಬಂದಿದ್ದ ಮುದುಕನನ್ನು ಹುಡುಕಿ ತರುವುದಕ್ಕೆ ಅವನು ಎಷ್ಟೋ ಪ್ರಯತ್ನಗಳನ್ನು ಮಾಡಿದನು; ಎಷ್ಟೋ ಹಣವನ್ನು ವೆಚ್ಚಮಾಡಿದನು. ಅವನು ಎಲ್ಲಿಗೆ ಹೋದನೆಂದು ಇದುವರೆಗೆ ತಿಳಿದು ಬರಲಿಲ್ಲ. ಪ್ರಥುಲೆಯು ತನ್ನ ಮರಣ ಕಾಲದಲ್ಲಿ ಇಟ್ಟಮಾತುಗಳು ಫಲಿಸಿದುವು. ಭಾಮಿನಿರಾಜ್ಯದ ಸುಲ್ತಾನನಾದ ಫಿರೋಜಶಹನು ದೇವರಾಜನು ತನ್ನ ರಾಜ್ಯವನ್ನು ಆಕ್ರಮಿಸುವುದಕ್ಕೆ ಬಂದನೆಂಬ ನೆವವನ್ನು ಮಾಡಿಕೊಂಡು ಅಸಂಖ್ಯಾತ ಸೈನ್ಯದೊಡನೆ ಯುದ್ಧಕ್ಕೆ ಹೊರಟನು. ಯುದ್ಧದ ಸಂಧಿ ಪ್ರಕಾರ ದೇವರಾಜನು ತನ್ನ ಮಗಳನ್ನು ಸುಲ್ತಾನನಿಗೆ ಮದಿವೆ ಮಾಡಿಕೊಡುವ ದುರ್ಗತಿಗೆ ಇಳಿದನು. ಈ ಯುದ್ಧಕ್ಕೆ ಕಾರಣೀಭೂತಳಾದವಳನ್ನು ಸುಲ್ತಾನನ ಮಗನಾದ ಹಸನ್‌ಖಾನನು 'ನಿಕ್ಕಾ ಮಾಡಿಕೊಂಡನು' ಎಂದು ಫೆರಿಷ್ಟನು ಹೇಳುವನು. ಈ ಸ್ತ್ರೀಯು ಯಾರೆಂದು ತಿಳಿದು ಬರಲಿಲ್ಲ. ಇತಿಹಾಸಕಾರನು 'ಪೆರ್ತಾಲ್, ಪೆರ್ತಾಲ್' ಎಂದು ಹೇಳುವುದರಿಂದ ಬಹುಶಃ ಪ್ರಥುಲೆಯ ದೇಹವು ಮ್ಲೇಚ್ಛರ ಹಸ್ತಸ್ಪರ್ಶದಿಂದ ಮಲಿನವಾಗಲಿಲ್ಲ. ಆದರೆ ಪ್ರಥುಲೆಯು ಹೇಳಿದಂತೆ ಒಂದು ಕಾಲದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ವಿಸ್ತಾರವಾಗಿದ್ದ ಬಲವತ್ತಾದ ವಿಜಯನಗರ ಸಾಮ್ರಾಜ್ಯವು ನವೀನ ಭೂಪಠದಿಂದ ವಿಲುಪ್ತವಾಗಿ ಹೋಯಿತು.

(ಸುವಾಸಿನಿ 1903)

ಶೈಲಿನಿ

ಚಂದ್ರನು ಗಗನಾಂಗಣದಲ್ಲಿ ಮೆಲ್ಲಮೆಲ್ಲನೆ ಸಂಚರಿಸುತ್ತಿದ್ದನು; ಒಮ್ಮೆ ಸಾಂದ್ರವಾಗಿದ್ದ ಮೋಡಗಳ ಮರೆಯಲ್ಲಿ ಹುದುಗಿ, ಒಮ್ಮೆ ಮುಗಿಲ್ದೆರೆಯನ್ನು ತೆರೆದು, ತನ್ನ ಮುಖವನ್ನು ತೋರಿಸುತ್ತ ಸಂಚರಿಸುತ್ತಿದ್ದನು. ಸ್ನಿಗ್ಧವಾದ ಚಂದ್ರಿಕೆಯು ಡಿಲ್ಲಿಯ ಪುರಾತನ ಕೋಟೆಯ ಹಾಳುಕೊಂಪೆಯ ಮೇಲೆ ಬಿದ್ದು ನಗುತ್ತಲಿತ್ತು; ನವೀನದುರ್ಗದ ಪ್ರಾಕಾರಗಳು ಶ್ವೇತಶಿಲೆಯಿಂದ ನಿರ್ಮಿತವಾದಂತೆ ಕಂಗೊಳಿಸುತ್ತಲಿದ್ದುವು. ನಗರೋಪಕಂಠದಲ್ಲಿದ್ದ ರಾಜಪುತ್ರರ ಮಂದಿರಗಳೂ ಮನಸಬ್ದಾರರ ಮಹಲುಗಳೂ ಇನ್ನೂ ಶುಭ್ರವಾಗಿ ರಂಜಿಸುತ್ತಲಿದ್ದುವು. ಸಮೀಪದಲ್ಲಿ ಯಮುನಾನದಿಯು ಮಂಜುಘೋಷಿಣಿಯಾಗಿ ಪ್ರವಹಿಸುತ್ತಲಿತ್ತು. ತರಂಗ ಕಲ್ಲೋಲದಿಂದ ನದಿಯಲ್ಲಿ ಚಂದ್ರನು ಸಹಸ್ರಬಿಂಬನಾಗಿ ಬೆಳಗುತ್ತಿದ್ದನು. ಒಂದೆರಡು ದೋಣಿಗಳು ನದಿಯ ಮೇಲೆ ಕ್ರೀಡಿಸುತ್ತಲಿದ್ದುವು. ನದಿಯ ದಡದಲ್ಲಿ ಮನುಷ್ಯ ಸಂಚಾರವಿರಲಿಲ್ಲ. ತರುಣನೊಬ್ಬನು ನದಿಯ ತೀರವನ್ನು ಬಿಟ್ಟು ರಾಜಮಾರ್ಗವಾಗಿ ಹೋಗುತ್ತಿದ್ದನು. ತರುಣನು ಒಮ್ಮೆ ಮೆಲ್ಲಮೆಲ್ಲನೆ ಕಾಲಿಡುತ್ತ, ಒಮ್ಮೆ ಬೇಗ ಬೇಗನೆ ನಡೆಯುತ್ತಿದ್ದನು. ಮಂದವಾದ ಯಮುನಾಜಲದಲ್ಲಿ ಪ್ರತಿಬಿಂಬಿತವಾದ ಚಂದ್ರನ ಸೌಂದರ್ಯವನ್ನು ವಿಸಂದಿಸುವುದಕ್ಕೆ ನಿಲ್ಲದೆ, ಯುವಕನು ರಾಜಮಾರ್ಗವಾಗಿ ಹೋಗುತ್ತಿದ್ದನು. ಅಲ್ಲಲ್ಲಿ ಮನೆಗಳ ಮುಹಡಿಗಳನ್ನು ನೋಡುತ್ತ ಮುಂದರಿಯುತ್ತಿದ್ದನು. ತರುಣನು ಯಾರೆಂದು ಸ್ಪಷ್ಟವಾಗಿ ತೋರುತ್ತಿರಲಿಲ್ಲ. ಆಕಾರದಲ್ಲಿ ಕುಳ್ಳನು, ಅಜಾನುಭಾಹುವು; ದೇಹದಲ್ಲಿ ಬಲಾಢ್ಯನು; ದೃಢಕಾಯನು: ಅವನ ನಡಿಗೆಯು ರಾಜಗಮನದಂತಿರಲಿಲ್ಲ. ಹೆಜ್ಜೆಯನ್ನು ದೂರವಿಡುತ್ತ ಯುವಕನು ರಾಜಮಾರ್ಗದ ಕೊನೆಯ ತನಕ ಏಕಾಕಿಯಾಗಿ ಹೋದನು. ಹಠಾತ್ತಾಗಿ ಒಂದು ನಿಮಿಷ ಮಾರ್ಗದ ಮೇಲೆ ತಳುವಿದನು. ಚಂದ್ರನು ಅಸ್ತಮಿಸುವಂತಿದ್ದನು. ಎಲ್ಲಿಂದಲೋ ಮಧುರವಾದ ಸ್ವರವು ವಾಯುತರಂಗದಲ್ಲಿ ತೇಲಿಬರುತ್ತಲಿತ್ತು. ಸ್ವರವು ಎಲ್ಲಿಂದ ಬರುವುದೆಂದು ನೋಡುವುದಕ್ಕೆ ತರುಣನು ಕುತೂಹಲಚಿತ್ತನಾಗಿ ಹಿಂದುಮುಂದು ನೋಡಿದನು. ಒಡನೆ ಒಂದು ಮಂದಿರದ ಉಪ್ಪರಿಗೆಯಿಂದ ಸ್ವರವು ಬೀಸುತ್ತಿರುವುದೆಂದು ಬೋಧೆಯಾಗಿ, ಯುವಕನು ಮಂದಿರದ ಕೆಳಗೆ ಬಂದು ನಿಂತನು. ಹೃದಯಂಗಮವಾದ ಗೀತಸ್ವರವು ಥಕ್ಕನೆ ಸ್ತಬ್ಧವಾಯಿತು. ಅಧ್ವಗನು ಮಾರ್ಗದ ಮೇಲೆ ನಿಲ್ಲುವುದು ಸರಿಯಲ್ಲವೆಂದು ಬಗೆದು ಮಹಲಿನ ಬಲಗಡೆಯಲ್ಲಿ ಬೆಳೆದಿದ್ದ ಮರದ ಹಿಂದುಗಡೆಯಲ್ಲಿ ಸರಿದು ನಿಂತನು. ಮರದ ಟೊಂಗೆಯೊಂದು ಉಪ್ಪರಿಗೆಯ ಗೋಡೆಯವರೆಗೆ ವಿಸ್ತರಿಸಿತ್ತು. ಹಾಡು ಉಪ್ಪರಿಗೆಯಿಂದ ಪುನಃ ಕೇಳಿಸಿತು.

ಇಚ್ಛಿತ ವರನನು ತುಚ್ಛೀಕರಿಸುತ
ಮ್ಲೇಚ್ಛನ ವರಿಸೆಂದು ಉಚ್ಚರಿಪನೆ ತಂದೆ.

ಯುವಾಪುರುಷನು ಕ್ಷುದಿತನಯನನಾಗಿ ಕಾಲಬೆರಳ ಮೇಲೆ ನಿಂತು ತನ್ನ ಕೊರಳನ್ನು ನಿಲ್ಕಿ ನೋಡಿದನು. ಯಾರ ಮುಖವೂ ಅವನ ದೃಷ್ಟಿಪಥದಲ್ಲಿ ತೋರಲಿಲ್ಲವೆಂದು ಚಿಂತಿಸಿ, ಯುವಕನು ಪಕ್ಕದಲ್ಲಿದ್ದ ಮರವನ್ನು ಹತ್ತಿದನು. ಗೀತದ ಮುಂದಿನ ಮಾತುಗಳು ಸರಿಯಾಗಿ ಕೇಳಿಸುತ್ತಲಿದ್ದುವು.

ಎಲ್ಲಿವ ತೊಲರೆವೆನು । ನಲ್ಲನ ಸೇರ್ವೆನು
ಕಲ್ಲಿನ ಕಾಡೊಳು । ನಿಲ್ಲದೆ ಪೋಗುವೆ.॥

ಯುವಕನು ಟೊಂಗೆಯನ್ನು ಹತ್ತಿ, ತೆರೆದಿದ್ದ ಕಿಟಕಿಯ ಇದಿರಾಗಿ ತನ್ನ ಮುಖವನ್ನು ಇಟ್ಟು ಇಣಿಕಿ ನೋಡಿದನು. ಉಪ್ಪರಿಗೆಯ ಕೊಟ್ಟಡಿಯಲ್ಲಿ ದೀಪವೊಂದು ಉರಿಯುತ್ತಲಿತ್ತು. ಅದರ ಬಳಿಯಲ್ಲಿ ಮತ್ತೊಂದು ದೀಪವು ಪ್ರಜ್ವಲಿಸುತ್ತಲಿತ್ತು; ಅನಂಗರಂಗಮಯವಾದ ಅಂಗನಾರತ್ನಪ್ರದೀಪ.

ಯುವಕನು ಸದ್ದಾಗದಂತೆ ಮರದ ರೆಂಬೆಯಲ್ಲಿ ಅವಿತುಕೊಂಡು ಕಣ್ಣಿಟ್ಟು ನೋಡಿದನು. ರಮಣಿಯ ಹಾಡು ತೀರಿತು. ಕಾಮಿನಿಯು ಚಿಂತಾಕುಲಿತಳಾದಂತೆ ಪರ್ಯಂಕದ ಮೇಲೆ ಒರಗಿದ್ದಳು. ಅವಳ ಅವಕುಂಠ ರಹಿತವಾದ ಮುಖವು ಬಿಳ್ಚೇರಿ ಹೋಗಿತ್ತು. ನೆನೆದ ಕನ್ನಡಿಯಂತೆ ತೋರುವ ಕಪೋಲವೊಂದು ಕೈದಳವನ್ನು ಆಧರಿಸಿತ್ತು. ಸ್ವಪ್ನಸಾಮ್ರಾಜ್ಯದ ಸುಖವನ್ನು ಅನುಭವಿಸುವಂತೆ ಅಧರಗಳಲ್ಲಿ ಮಂದಸ್ಮಿತವು ಅಡಗಿತ್ತು. ಹೊಳೆಹೊಳೆವ ಸೀರೆಯ ಅಂಚಲವು ವಕ್ಷೋಭಾಗದಿಂದ ಮೆಲ್ಲಮೆಲ್ಲನೆ ಓಸರಿಸುತ್ತಲಿತ್ತು. ಅವಳ ಅರ್ಧೋನ್ಮೀಲಿತವಾದ ನಯನಗಳ ಕಾಂತಿಯನ್ನು ಕಳುವುದಕ್ಕೆ ದೀಪದ ಕುಡಿಯು ಸಡಗರಿಸುತ್ತಲಿತ್ತು. ದೀಪದ ಅಡಿಯಲ್ಲಿ ಪುಸ್ತಕವೊಂದು ಅರೆತೆರೆದಿತ್ತು. ರಮಣಿಯ ರೂಪಲಾವಣ್ಯಗಳೇನೂ ಅಷ್ಟು ಅಸಾಧಾರಣವಾಗಿರಲಿಲ್ಲ. ಆದರೆ ಅವಳ ಮುಖದಲ್ಲಿಯೂ ಮೈಯಲ್ಲಿಯೂ ಒಂದು ಪ್ರಕಾರವಾದ ಚಿತ್ತಾಕರ್ಷಕವಾದ ಸೌಂದರ್ಯವು ಕವಿದಿತ್ತು. ಇವಳಿಗಿಂತಲೂ ರೂಪವತಿಯವರಾದ ಸ್ತ್ರೀಯರು ಎಷ್ಟೋ ನೋಡಸಿಕ್ಕುವರು. ಆದರೆ ಈ ಮುಖದಲ್ಲಿದ್ದ ಮಾಧುರ್ಯವೂ, ಮೋಹನಶಕ್ತಿಯೂ ಅವುಗಳಲ್ಲಿ ನೋಡಸಿಕ್ಕದು. ಪ್ರಥಮದೃಷ್ಟಿಗೆ ಅವಳ ಮುಖವು ಮನಸ್ಸಿನಲ್ಲಿ ಕನಿಕರವನ್ನೂ ದುಃಖವನ್ನೂ ಉಂಟುಮಾಡುವುದು. ಮುಖವನ್ನು ದರ್ಶಿಸಿದಷ್ಟಕ್ಕೆ ಅಂತರ್ಯದಲ್ಲಿದ್ದ ಕೋಮಲ ಭಾವವು ಪರಿಸ್ಫುಟವಾಗಿ ನೋಟಕನ ಕಣ್ಮನವನ್ನು ಸೆಳೆದುಬಿಡುವುದು. ಎಷ್ಟು ನೋಡಿದರೂ ಮನಸ್ಸು ತೃಪ್ತಿಗೊಳ್ಳದು, ಶಾಂತವಾಗದು. ಅವಳ ಪ್ರಥಮ ದರ್ಶನದಿಂದ ನೋಟಕನ ಮನಸ್ಸಿನಲ್ಲಿ ಉಂಟಾಗುವ ಸಂತೋಷವು ಪರಕ್ಷಣದಲ್ಲಿಯೇ ಅಲ್ಲಲ್ಲಿ ತೋರಿತೋರದ ವ್ಯಸನಬಿಂದುಗಳಿಂದ ಹೆಪ್ಪುಗಟ್ಟಿಹೋಗುತ್ತಲಿತ್ತು. ವೈಶಾಖಸೂರ್ಯನ ಆತಪದಿಂದ ಕಂದಿದ ಕುಂದಿದ ಕೋಮಲವಾದ ಬಳ್ಳಿಯೂ ದವಾನಲದ ಉಷ್ಣಸ್ಪರ್ಶದಿಂದ ಬಾಡಿಬಸವಳಿದ ಕರ್ಣಿಕಾರಪುಷ್ಪವೂ ಯಾವ ಪ್ರಕಾರದಲ್ಲಿ ವಿಷಾದ ವಿನೋದಗಳನ್ನು ಮನಸ್ಸಿನಲ್ಲಿ ಒಂದೇ ಸಲ ಉಂಟು ಮಾಡುವುವೋ ಆ ಭಾವವನ್ನೇ ಈ ಸುಂದರಿಯ ದರ್ಶನವು ಪ್ರೇಕ್ಷಕರ ಹೃದಯದಲ್ಲಿ ಉಂಟು ಮಾಡುತ್ತಲಿತ್ತು.

ಯುವಕನು ದೀಪದ ಜ್ಯೋತಿಯಿಂದ ಇನ್ನೂ ಉಜ್ವಲವಾಗಿ ತೋರುವ ಮುಖವನ್ನು ಸ್ವಲ್ಪ ಹೊತ್ತು ದೃಷ್ಟಿಸುತ್ತ ತನ್ನ ತುಟಿಯೊಳಗೆನೇ ಏನನ್ನೋ ಅನ್ನುತ್ತಿದ್ದನು. ಫಕ್ಕನೆ "ಶೈಲಿನಿ" ಎಂಬ ಮಾತು ಅವನ ಬಾಯಿಂದ ಎಚ್ಚರವಿಲ್ಲದೆ ಕೆಳಕ್ಕೆ ಬಿದ್ದಿತು. ನಿಶ್ಶಬ್ದವಾದ ಕೊಟಡಿಯೊಳಗೆ ಶೈಲಿನಿ ಎಂಬ ಪದವು ಪ್ರತಿಧ್ವನಿತವಾಯಿತು. ವೃಕ್ಷಾರೋಹಿಯು ಏನೆಂದೆನೆಂದು ಅರಿಯದೆ ಅಳುಕಿದನು. ಪುನಃ ಯುವಾಪುರುಷನು "ಶೈಲಿನಿ" ಎಂದು ಕೂಗಿ ಕರೆದನು. ಒಡನೆ ರಮಣಿಯು ಎಚ್ಚರವಾದಂತೆ ಕಣ್ದೆರಸಿ, ತನ್ನನ್ನು ಯಾರೋ ಕೂಗಿ ಕರೆಯುವರೆಂದು ಎಣಿಸಿ ಸುತ್ತಲೂ ನೋಡಿದಳು. ಕಿಟಕಿಯ ಕಡೆಯಿಂದ ಶೈಲಿನಿ ಎಂಬ ಸ್ವರವು ಮತ್ತೊಮ್ಮೆ ಕೇಳಿಸಿತು. ಯುವತಿಯು ಸಂತೋಷಚಿತ್ತಳಾಗಿ ತನ್ನ ಸೀರೆಯ ಸೆರಗನ್ನು ಸರಿಗೊಳಿಸುತ್ತ, ಗವಾಕ್ಷದ ಕಡೆಗೆ ಹೆಜ್ಜೆಯನ್ನಿಟ್ಟಳು. ನಿದ್ರಾಭಂಗದಿಂದಲೋ ಆಯಾಸದಿಂದಲೋ ತರುಣಿಯ ಕಾಲು ತಡವರಿಸುತ್ತ

ಲಿತ್ತು. ಅವಳು ತನ್ನ ಇದಿರಾಗಿ ಬರುವುದನ್ನು ನೋಡಿ ವೃಕ್ಷಾರೋಹಿಯು "ಶೈಲಿನಿ, ದಾರಿಗನೊಬ್ಬನು ಇರುಳೆಲ್ಲಾ..."

ಶೈಲಿನಿಯು ಕೈಸನ್ನೆ ಮಾಡುವುದನ್ನು ನೋಡಿ ಯುವಕನು ಮಾತು ಮುಂದುವರಿಸಲಿಲ್ಲ. ಅವಳು ಗವಾಕ್ಷದ ಬಳಿಗೆ ಬಂದು ಮುಖವನ್ನು ಹೊರಚಾಚಿ "ನೀನು ಇಷ್ಟು ಸಾಹಸವನ್ನು ಏಕೆ ಮಾಡಿದೆ?" ಎಂದು ಕೇಳಿದಳು.

ಯುವಕ:—"ನಿನಗೋಸ್ಕರ."

ಶೈಲಿನಿ:—"ನನಗೋಸ್ಕರ ನೀನು ಅಪಾಯಕ್ಕೆ ಗುರಿಯಾಗಬೇಕೆಂದು ನಾನು ಬಯಸುವುದಿಲ್ಲ."

ಯುವಕ:—"ಅಪಾಯಕ್ಕೆ ಈ ಮರಾಟನು ಹೆದರುವನೇ? ನನಗೆ ಅಪಾಯ ಬರುವುದು ಯಾರಿಂದ? ನಿನ್ನ ತಂದೆಯಿಂದಲೇ."

ಶೈಲಿನಿಯು ಮನಗುಂದಿದವಳಾಗಿ, "ಅಪಾಯವು ಯಾರಿಂದಲಾದರೂ ಬರಬಹುದು. ನಿಶೆಯಲ್ಲಿ ಈ ಎತ್ತರವಾದ ಮರವನ್ನು ನೀನು ಹೇಗೆ ಹತ್ತಿದೆ?"

ಯುವಕ:—"ಕಾಮದೇವನೇ ನನ್ನ ಬೆಂಬಲಕ್ಕೆ ಇದ್ದನು. ಅಂದು ನೀನು ಪ್ರತಾಪಗಡದಲ್ಲಿ ಅರಮನೆಯ ಗೋಡೆಯನ್ನು ಹೇಗೆ ಏರಿಬಂದೆ?"

ಶೈಲಿನಿಯು ಒಮ್ಮೆ ಮಾತಾಡಲಿಲ್ಲ. ಬಳಿಕ "ಅದು ಹೋಗಲಿ, ಈಗ ನೀನು ಬಂದುದು ಅನುಚಿತ ವಾಯಿತು" ಎಂದಳು.

ಯುವಕ:—"ಹೇಗೆ ಅನುಚಿತವಾಯಿತು?"

ಶೈಲಿನಿ:—"ನನ್ನ ತಂದೆಯು ನನ್ನೊಡನೆ ಮಾತನಾಡುವುದಕ್ಕೆ ಈಗಲೇ ಇಲ್ಲಿಗೆ ಬರುತ್ತಿರುವನು. ನಿನ್ನನ್ನು ನೋಡಿಬಿಟ್ಟರೆ, ನಮ್ಮ ಅವಸ್ಥೆ ಏನಾಗುವುದೋ ಎಂದು ಭಯವಾಗುತ್ತಿದೆ."

ಯುವಕ:—"ರಜಪೂತ ಸ್ತ್ರೀಯು ಮರಣಕ್ಕೆ ಭೀತಳಾಗುವಳೇ? ಸಖೀ ಶೈಲಿನಿ. ನಾನು ಮರಣಕ್ಕೆ ಸಿದ್ಧನಾಗಿರುವೆನು, ಆದರೆ ಸಾಯುವ ಮೊದಲು ನಿನ್ನೊಡನೆ ಎರಡು ಮಾತುಗಳನ್ನು ಕೇಳಬೇಕೆಂದಿರುವೆನು."

ಯುವಕನ ಕಾಂಕ್ಷಿತಸ್ವರವನ್ನು ಕೇಳಿ ಶೈಲಿನಿಯು ಏನೋ ಯೋಚಿಸುತ್ತ ನಿಂತುಬಿಟ್ಟಳು. ತಂದೆಯು ತನ್ನನ್ನು ನೋಡಲು ಬರುವ ಸಮಯವು ಸಮೀಪಿಸಿತೆಂದು ತಿಳಿದು, ಯುವಕನೊಡನೆ ಪ್ರಣಯಸಲ್ಲಾಪಕ್ಕೆ ಸಮಯವು ಅನುಚಿತವಾಯಿತೆಂದು ಕಾತರಳಾದಳು. ತಂದೆಯು ಇದುವರೆಗೆ ತನ್ನನ್ನು ನೋಡಲು ಬಾರದೆ ಇದ್ದುದರಿಂದ, ಇನ್ನು ಮೇಲೆ ಬರಲಾರನೆಂದು ಒಮ್ಮೆ ನಿಶ್ಚಯಿಸಿ ಶೈಲಿನಿಯು ಯುವಕನನ್ನು ಒಳಕ್ಕೆ ಬರುವಂತೆ ಕೈಸನ್ನೆ ಮಾಡಿದಳು. ಒಡನೆ ಶಿರೀಷಪುಷ್ಪಸದೃಶವಾದ ತನ್ನ ಹಸ್ತವನ್ನು ಹೊರನೀಡಿದಳು. ಯುವಕನು ಪಾಣಿಗ್ರಹಣ ಮಾಡಿ ಕೃತಕೃತ್ಯನಾದನು.

ಶೈಲಿನಿಯು ಎಲ್ಲಿಯೋ ಕಿವಿಗೊಟ್ಟಂತೆ ನೋಡುತ್ತ ಅಪ್ರತಿಭಳಾಗಿ ನಿಂತುಬಿಟ್ಟಳು.

ಯುವಕ:—"ಶೈಲಿನಿ. ನಿನ್ನ ಇಚ್ಛಿತ ವರನು ಯಾರು? ನಿನ್ನ ತಂದೆಯು ಯಾರನ್ನು ತುಚ್ಛೀಕರಿಸು ವನು? ನನ್ನನ್ನೇ?"

ಶೈಲಿನಿಯು ಏನು ಹೇಳಬೇಕೆಂದು ತಿಳಿಯಲಾರದೆ ಹೋದಳು. ಕೂಡಲೇ "ಶೈಲೀ ಶೈಲೀ" ಎಂದು ಕೆಳಗಿನಿಂದ ಯಾರೋ ಕೂಗಿ ಕರೆಯುವುದು ಕೇಳಿಸಿತು. ಶೈಲಿನಿಯು ಯುವಕನ ಕರಪಾಶದಿಂದ ಸಡಿಲಿಸುವುದಕ್ಕೆ ತವಕಗೊಂಡು, ಕೈಯನ್ನು ಹಿಂದೆ ಸೆಳೆದುಬಿಟ್ಟಳು. "ನನ್ನ ತಂದೆಯು ಈಗಲೇ ಮೇಲೆ ಬರುವನು. ಇನ್ನು ನಿಲ್ಲಬೇಡ" ಎಂದಳು. ಯುವಕನು "ತಂದೆ ಹೀನಿಸುವುದು ನನ್ನನ್ನೇ?" ಎಂದು ಪುನಃ ಕೇಳಿದನು.

ಮಹಡಿಯ ಮೆಟ್ಟಲು ಹತ್ತಿ ಯಾರೋ ಬರುವ ಸದ್ದು ಕೇಳಿಸಿತು. ಶೈಲಿನಿಯು ಯುವಕನೊಡನೆ ಮೆಲ್ಲನೆ ಏನನ್ನೋ ಹೇಳಿಬಿಟ್ಟಳು. "ನವಮಿ...ರಾತ್ರಿ...ಶಿಬಿರದ...ಬಳಿಯಲ್ಲಿ" ಎಂಬ ಮೊದಲಿನ ಶಬ್ದಗಳು ಮಾತ್ರ ಯುವಕನ ಕಿವಿಯಲ್ಲಿ ಇಳಿದವು. ಯುವಕನು ಮನಸ್ಸಿನಲ್ಲಿ ಸಂಪೂರ್ಣವಾದ ಅರ್ಥವನ್ನು ಮಾಡಿ, ವೃಕ್ಷದಿಂದ ಕೆಳಕ್ಕೆ ಇಳಿಯಲು ಸಿದ್ಧನಾದನು. ಪುನಃ ಶೈಲಿನಿಯ ಪ್ರಫುಲ್ಲಿತವಾದ ಮುಖ ಸಂದರ್ಶನವನ್ನು ಮಾಡಲೆಳಸಿ, "ನನ್ನನ್ನೇ?" ಎಂದು ಒತ್ತಿ ಕೇಳಿದನು.

ಶೈಲಿನಿಯು ಮನಸ್ಸಿನಲ್ಲಿಯೇ "ವರಿಸುವೆನು" ಎಂದು ಅಂದುಕೊಂಡಳು. ತತ್‌ಕ್ಷಣದಲ್ಲಿ ಉಪ್ಪರಿಗೆಯ ಬಾಗಿಲನ್ನು ತೆರೆದು ಯಾರೋ ಒಬ್ಬನು ಒಳಕ್ಕೆ ಬಂದನು. ಬಂದವನು ಶೈಲಿನಿಯ ತಂದೆ; ರಾಠೋರ್ ಸಂಸ್ಥಾನದ ರಾಜನಾದ ರಾಜಸಿಂಹನು.

ಈ ಕಥಾಕಾಲದಲ್ಲಿ ಅವರಂಗಜೇಬನು ಡಿಲ್ಲಿಯ ಸಾಮ್ರಾಟನಾಗಿದ್ದನು. ಅವರಂಗಜೇಬನ ಕಠೋರ ಶಾಸನದಿಂದ ಭಾರತವರ್ಷದಲ್ಲಿ ಸರ್ವತ್ರಭೀತಿಯೂ ಆತಂಕವೂ ಪಸರಿಸಿದುವು. ಅವನ ಕ್ರೂರವಾದ ಅಧಿಕಾರ ಜಂಝಾನಿಲದಿಂದ ಪ್ರಚಲಿತವಾದ ಭಾರತಸಾಗರದ ಜಲದಲ್ಲಿ ರಾಜಪುತ್ರರ ಸ್ವಾತಂತ್ರ್ಯವು ಮುಳುಗಿ ಹೋಗುತ್ತಲಿತ್ತು. ಸ್ವಾಧೀನತೆಯ ಪ್ರಧಾನಭಕ್ತನಾದ ಅಂಬರಸಂಸ್ಥಾನದ ಅಧಿಪತಿಯಾದ ಜಯಸಿಂಹನು ಡಿಲ್ಲಿಯ ಸಿಂಹಾಸನದ ಬಳಿಯಲ್ಲಿ ಬದ್ಧಹಸ್ತನಾಗಿ ನಿಲ್ಲಲು ಒಡಂಬಟ್ಟನು. ಮಾರವಾಡದ ಯಶವಂತಸಿಂಹನಿಗೂ ರಾಠೋರದ ರಾಜಸಿಂಹನಿಗೂ ಭೇದವನ್ನು ತಂದಿಕ್ಕಿ, ಇಬ್ಬರನ್ನೂ ಅವರಂಗಜೇಬನು ತನ್ನ ಸಿಂಹಾಸನಕ್ಕೆ ಅಲಂಕಾರಕಲಶಗಳನ್ನಾಗಿ ಮಾಡಿದನು. ಉತ್ತರ ಹಿಂದೂಸ್ಥಾನದಲ್ಲಿ ಸಿಖ್ ಜನರು ತಮ್ಮನ್ನು ಬಂಧಿಸಿದ ಶೃಂಖಲಗಳನ್ನು ಕಳಚುವುದಕ್ಕೆ ಹುರಿದುಂಬಿಸಿ ಒಟ್ಟುಗೂಡುತ್ತಲಿದ್ದರು. ದಕ್ಷಿಣದಲ್ಲಿ ಸ್ವತಂತ್ರವಾಗಿದ್ದ ಗೋಲ್ಕೊಂಡ ಮತ್ತು ಬಿಜಾಪುರ ಸಂಸ್ಥಾನಗಳು ಕ್ಷೀಣವಾಗಿ ಅಸ್ತಮಿಸುವಂತಿದ್ದುವು. ಲೋಕೈಕವೀರನಾದ ಶಿವಾಜಿಯು, ಮಹಾರಾಷ್ಟ್ರ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಹಿಂದುಗಳನ್ನು ಏಕತ್ರವಾಗಿ ಮಾಡಲು ಪ್ರಯತ್ನಿಸುತ್ತಿದ್ದನು. ಅವನ ಪ್ರಯತ್ನಗಳಿಂದ ಮೊಘಲ ಸಾಮ್ರಾಜ್ಯದ ಕೀಲು ಸಡಿಲಾಗುತ್ತಾ ಬಂದಿತ್ತು. ಭೂಕಂಪನದಿಂದ ಸಂಕ್ಷೋಭಿತವಾದ ಸಮುದ್ರದ ಅಂತಸ್ಥಳದಿಂದ ನವೀನ ದ್ವೀಪಗಳ ಶಿರೋದಯವಾಗುವಂತೆ, ಶಿವಾಜಿಯ ದೋರ್ದಂಡಪ್ರತಾಪದಿಂದ ಪ್ರಾಚೀನ ಹಿಂದೂರಾಜ್ಯಗಳ ಭಗ್ನಾವಶೇಷದ ಮೇಲಿಂದ ಮಹಾರಾಷ್ಟ್ರ ರಾಜ್ಯವು ತಲೆ ಯೆತ್ತುತ್ತಲಿತ್ತು. ಶೈಶವದಲ್ಲಿಯೇ ಅದರ ಗೋಣು ಮುರಿದು ಬಿಡುವುದಕ್ಕೆ ಅವರಂಗಜೇಬನು ಪೇಚಾಡಿದನು. ಅವರಂಗಜೇಬನ ಪೇಚಾಟವು ಬಯಲಾಯಿತು. ಆಪತ್ತು ವಿಪತ್ತುಗಳೇ ಶಿವಾಜಿಯ ಸಾಹಸ ಶೌರ್ಯಗಳಿಗೆ ಸಾಣೆಯ ಕಲ್ಲಾದುವು. ಕಷ್ಟ ಸಂಕಷ್ಟಗಳು ತಗಲಿದಷ್ಟಕ್ಕೆ ಮಹಾರಾಷ್ಟ್ರ ರಾಜ್ಯವು ಬಲವಾಗುತ್ತ, ಬೇರೂರುತ್ತ ಹೋಯಿತು. ಶಿವಾಜಿಯು ಮಕ್ಕಾವಿಗೆ ಹೋಗುವ ಮುಸಲ್ಮಾನ ಯಾತ್ರಿಕರನ್ನು ಸೂರೆಗೊಂಡನು. ಉರಿಯುವ ಗಡ್ಡದ ಇದಿರಿಗೆ ಹುಕ್ಕ ಹಿಡಿದಂತಾಯಿತು. ಕೋಪಾಕುಲಿತನಾದ ಅವರಂಗಜೇಬನು "ಪರ್ವತ ಮೂಷಕ" ವನ್ನು ಹಿಡಿಯುವುದಕ್ಕೆ ಮಹಾಸೇನೆಯೊಡನೆ ಜಯಸಿಂಹ

ನನ್ನೂ ದಿಲೇರಿಖಾನನ್ನೂ ದಕ್ಷಿಣ ಹಿಂದುಸ್ಥಾನಕ್ಕೆ ಕಳುಹಿಸಿದನು. ಪುರಂದರದುರ್ಗದಲ್ಲಿ ಮರಾಟರಿಗೂ ಮೊಘಲರಿಗೂ ಘೋರಯುದ್ಧ ನಡೆಯಿತು. ದೀರ್ಘದರ್ಶಿಯಾದ ಶಿವಾಜಿಯು ಏನೋ ಒಂದು ವಿಶೇಷ ಕಾರಣದಿಂದ ಮೊಘಲ್ ಸಾಮ್ರಾಟನೊಡನೆ ಸಂಧಿ ಮಾಡಿಕೊಳ್ಳುವುದು ಕ್ಷೇಮಕರವೆಂದು ಎಣಿಸಿ, ಜಯಸಿಂಹ ನಿಗೆ ಶರಣಾಗತನಾದನು. ಈ ಸಂಧಿಯ ಪ್ರಕಾರ ಅವರಂಗಜೇಬನು ಶಿವಾಜಿಗೆ ಡಿಲ್ಲಿಗೆ ಬರಬೇಕಾಗಿ ಆಹ್ವಾನ ಪತ್ರವನ್ನು ಬರೆದನು. ಶಿವಾಜಿಯು ತನ್ನ ಆಪ್ತರನ್ನೂ ಅಧಿಕಾರಿಗಳನ್ನೂ 1,000 ಮಂದಿ ಮಾವಳಿಗಳನ್ನೂ 3000 ಮಂದಿ ರಾವುತರನ್ನೂ ಕೂಡಿಕೊಂಡು ತನ್ನ ಜ್ಯೇಷ್ಠಪುತ್ರನಾದ ಶಂಭಾಜಿಯೊಡನೆ ಮಹಾಸಂಭ್ರಮ ದಿಂದ ಡಿಲ್ಲಿಗೆ ಬಂದಿಳಿದಿದ್ದನು.

ಶಿವಾಜಿಯನ್ನು ಇದಿರುಗೊಳ್ಳುವುದಕ್ಕೆ ಅವರಂಗಜೇಬನು ಸ್ವತಃ ಹೋಗಲಿಲ್ಲ. ಆವನು ಜಯಸಿಂಹನ ಮಗನಾದ ರಾಮಸಿಂಹನನ್ನು ಕಳುಹಿಸಿದನೆಂದು ಇತಿಹಾಸವು ಹೇಳುವುದು. ಇದು ನಮಗೆ ತಪ್ಪಾಗಿ ತೋರು ತ್ತದೆ. ಸಂಶಯಾತ್ಮಕವಾದ ಅವರಂಗಜೇಬನು ಮಹಾಯೋಧನಾದ ಜಯಸಿಂಹನು ತನ್ನ ಸಿಂಹಾಸನದ ಬಳಿಯಲ್ಲಿರುವುದು ಲೇಸಲ್ಲವೆಂದು ತಿಳಿದು, ಅವನನ್ನು ದಖ್ಖಣಕ್ಕೆ ಕಳುಹಿಸಿದ್ದನು; ಮತ್ತು ಜಯಸಿಂಹನು ತನ್ನ ಮೇಲೆ ಹಠಾತ್ತಾಗಿ ಬೀಳದಂತೆ ಅವನ ಮಗನಾದ ರಾಮಸಿಂಹನನ್ನು ಬಂಧಿಯಾಗಿ ಇಟ್ಟಿದ್ದನು. ಇಂತಹನು ತನ್ನ ಪ್ರತಿದ್ವಂದ್ವಿಯಾದ ಶಿವಾಜಿಯೊಡನೆ ಒಳಸಂಚು ನಡೆಯಿಸುವುದು ಸಂಭವನೀಯವೆಂದು ತಿಳಿದು, ಸಾಮ್ರಾಟನು ಅವನ ಕೈಗೆ ವಿಶೇಷ ಅಧಿಕಾರವನ್ನು ಹಚ್ಚುತ್ತಿರಲಿಲ್ಲ; ಮಾತ್ರವಲ್ಲ, ರಾಠೋರ್ ಸಂಸ್ಥಾ ನಾಧಿಪತಿಯಾದ ರಾಜಸಿಂಹನು ಇಂತಹ ಕಾರ್ಯಗಳಲ್ಲಿ ತನಗೆ ಅನುಕೂಲವೆಂದು ಸಮ್ರಾಟನು ತಿಳಿಯಲು ಅನೇಕ ಕಾರಣಗಳಿದ್ದುವು. ಹಾಗೂ ರಾಜಸಿಂಹನು ತನಗೆ ಅವರಂಗಜೇಬನೇ ಆಶ್ರಯದಾತಾರನೆಂದು ನಂಬಿ, ಅವನ ಮೇಲೆ ಶ್ರದ್ಧಾಭಕ್ತಿಗಳನ್ನಿಟ್ಟಿದ್ದನು. ಹೆಚ್ಚೇಕೆ? ರಾಜಸಿಂಹನು ತನ್ನ ಮಗಳಾದ ಶೈಲಿನಿಯನ್ನು ಕಾರ ಣಾಂತರಗಳಿಂದ ಸಮ್ರಾಟನ ಜ್ಯೇಷ್ಠಪುತ್ರನಾದ ಮುಆಜಮ್‌ನಿಗೆ (ಭಾವೀ ಶಹ ಆಲಮ್) ಕೊಡಲು ಉದ್ಯುಕ್ತನಾಗಿದ್ದನು. ತನ್ನನ್ನು ಇದಿರುಗೊಳ್ಳುವುದಕ್ಕೆ ಸಮ್ರಾಟನು ತಾನೇ ಬಾರದೆ ತೋರಿಸಿದ ಅನಾದರವು ಶಿವಾಜಿಗೆ ತಿಳಿಯದಿರಲಿಲ್ಲ. ಅನಾದರಭಾವಕ್ಕೆ ಪ್ರತಿಕಾರಮಾಡಲು ಅದು ಸಮಯವಲ್ಲವೆಂದು ಆತನು ಸುಮ್ಮನಿದ್ದನು.

ಶಿವಾಜಿಯು ಅವರಂಗಜೇಬನ ಸಂದರ್ಶನಕ್ಕೆ ಹೋಗಲು ನಿಶ್ಚಯಿಸಿದ ಮೊದಲಿನ ದಿವಸದ ರಾತ್ರಿ ಯಲ್ಲಿ ಪೂರ್ವೋಕ್ತ ಸಲ್ಲಾಪವು ನಡೆಯಿತು. ರಾಜಸಿಂಹನು ಮಹಡಿಯ ಮೆಟ್ಟಲನ್ನು ಹತ್ತಿ ಶೈಲಿನಿಯ ಕೊಟ್ಟಡಿಯನ್ನು ಪ್ರವೇಶಿಸಿದನು. ರಾಜಸಿಂಹನು ಪಕ್ಕದಲ್ಲಿದ್ದ ಆಸನವನ್ನು ತೆಗೆದುಕೊಂಡನು. ಶೈಲಿನಿಯು ತಂದೆಯ ಸಮ್ಮುಖದಲ್ಲಿ ವಿನೀತಭಾವದಿಂದ ನಿಂತಳು. ಸ್ವಲ್ಪ ಹೊತ್ತು ಇಬ್ಬರೂ ಮಾತೆತ್ತಲಿಲ್ಲ. ಬಳಿಕ ರಾಜ ಸಿಂಹನು ಎತ್ತಿದ ಹುಬ್ಬುಗಳಿಂದ "ಮಗು, ಶೈಲಿ, ರಾಜಕಾರ್ಯದಿಂದ ನಿನ್ನೊಡನೆ ಹಲವು ದಿನಗಳಿಂದ ಮಾತನಾಡಲು ಬಿಡುವಾಗಲಿಲ್ಲ. ಪಿತೃಭಕ್ತಿಯು ನಿನ್ನ ಹೃದಯದಲ್ಲಿ ಇರುವುದಾದರೆ, ಎರಡು ಬುದ್ಧಿವಾದ ಗಳನ್ನು ಹೇಳಬೇಕೆಂದಿದ್ದೇನೆ" ಎಂದನು.

ಶೈಲಿನಿ:—"ಅಪ್ಪಾ, ಮಗಳು ತಂದೆಯ ಮಾತನ್ನು ಸಲ್ಲಿಸಬೇಕಾದಲ್ಲಿ ನಾನು ನಿನ್ನ ಅನುಜ್ಞೆಯನು ಮನ್ನಿಸದೆ ಇರಲಾರೆನು."

ರಾಜಸಿಂಹನು ಮೆಲ್ಲನೆ ನಗುತ್ತ "ಪುಟ್ಟಮ್ಮಣ್ಣಿ. ನಾನು ಮುದುಕನಾದೆನು. ನನಗೆ 65 ವರ್ಷ ತುಂಬಿತು. ಇನ್ನು ಹೆಚ್ಚು ಕಾಲ ಬದುಕಲಾರೆನು. ಪ್ರಬುದ್ಧಳಾದ ನೀನು ಸುಖವಂತಳಾಗಿದ್ದರೆ ನನ್ನ ಮುಪ್ಪನ್ನು ನಿಶ್ಚಿಂತೆಯಿಂದ ಕಳೆಯುವೆನು."

ಶೈಲಿನಿ:—"ಮುಪ್ಪಿನಲ್ಲಿ ನಿನಗೆ ಯಾವುದೊಂದು ಚಿಂತೆಬಾರದೆ ಇರಲಿ ಎಂದು ನಾನು ದೇವರೊಡನೆ ಪ್ರಾರ್ಥಿಸುವೆನು. ನಿನ್ನ ವೃದ್ಧಾಪ್ಯವು ಸಂತೋಷಮಯವಾಗುವಂತೆ ಆತನು ಕರುಣಿಸಲಿ."

ರಾಜಸಿಂಹ:—"ನೀನು ಮೊಘಲ್ ಸಾಮ್ರಾಜ್ಯದ ರಾಣಿಯಾಗುವುದರಿಂದ ಉಂಟಾಗುವಷ್ಟು ಸಂತೋಷವನ್ನು ನನಗೆ ವೃದ್ಧಾಪ್ಯದಲ್ಲಿ ಮತ್ತಾವುದೂ ಕೊಡಲಾರದು."

ಶೈಲಿನಿ:—"ಅಪ್ಪಾ, ನನಗೆ ರಾಣಿಯಾಗುವಷ್ಟು ಬೇಸರವು ಬೇರೊಂದಿಲ್ಲವೆಂದು ನಾನು ಮೊದಲೇ ನಿನಗೆ ತಿಳಿಸಿರುವೆನಷ್ಟೆ."

ರಾಜಸಿಂಹ:—"ನೀನು ಅಂದು ವಿಚಾರ ಮಾಡಿರಲಿಲ್ಲ. ನೀನು ವಿಚಾರ ಮಾಡಬೇಕೆಂದು ಸಾಕಷ್ಟು ಅವಕಾಶ ಕೊಟ್ಟೆನು."

"ವಿಚಾರ ಮಾಡಿದ್ದಷ್ಟಕ್ಕೆ ರಾಜಪತ್ನಿಯಾಗುವುದಕ್ಕಿಂತಲೂ ಬಡವನ ತೊತ್ತಾಗುವುದು ಲೇಸೆಂದು ದೃಢವಾಗುವುದು."

ರಾಜಸಿಂಹನು ಸ್ವಲ್ಪ ಬೆಚ್ಚನಾಗಿ "ಶೈಲಿನಿ, ಸಾಮ್ರಾಜ್ಯದ ಚಕ್ರವರ್ತಿನಿ ಎನ್ನಿಸಿಕೊಳ್ಳುವುದಕ್ಕಿಂತಲೂ ಅಧಿಕವಾದ ಶ್ರೇಯಸ್ಸು ನಿನಗೆ ಮತ್ತೊಂದಿರುವುದೇ? ಚಕ್ರವರ್ತಿಯ ಮಾವನೆನ್ನಿಸಿಕೊಳ್ಳುವುದಕ್ಕಿಂತಲೂ ವಿಶೇಷವಾದ ಬಹುಮಾನ ನನಗೆ ಬೇರೊಂದುಂಟೇ? ರಾಜಕುಲದವರೆಂದು ಹೇಳಿಸಿಕೊಳ್ಳುವುದಕ್ಕಿಂತಲೂ ಅಧಿಕತರವಾದ ಕೀರ್ತಿಯೂ ಗೌರವವೂ ನಮ್ಮ ವಂಶಕ್ಕೆ ಯಾವುವು? ನೀನು ಆಡಿದ್ದೇ ನ್ಯಾಯ; ನೀನು ಮಾಡಿದ್ದೇ ಧರ್ಮ. ಹೀಗಿರಲು ಸಾಮಾನ್ಯ ಪುರುಷರಿಗೆ ನಿನ್ನ ಕೈಕೊಟ್ಟು ನಮ್ಮ ಕುಲಕ್ಕೆ ಕಲಂಕವನು ತಂದಿಕ್ಕಬೇಡ, ಕಂಡೆಯಾ?" ಎಂದನು.

ಶೈಲಿನಿಯು ಉದ್ರೇಕದಿಂದ "ಅಪ್ಪಾ, ನೀನೆನ್ನುವ ದುರ್ಗತಿಗೆ ಈ ದೇಹವು ಇಳಿಯುವ ಮೊದಲೇ ಅದರಿಂದ ಪ್ರಾಣವು ಹಾರಿಹೋಗಲಿ. ಅಕ್ಬರನಿಗೆ ಹೆಣ್ಣುಕೊಟ್ಟ ರಾಜಪುತ್ರರಿಗೆ ಯಾವ ಗೌರವವು ಹೆಚ್ಚಿತು? ರಾಜಾಮಾನಸಿಂಹನ ಮಗಳು ಸಲೀಮನ ಪತ್ನಿಯಾಗಿ ಯಾವ ಪ್ರಖ್ಯಾತಿಯನ್ನು ಹೊಂದಿದಳು? ಪ್ರಕೃತದಲ್ಲಿ ಅವರಂಗಜೇಬನ ಪತ್ನಿಯಾದ ಉದಿಪುರಿಯು ಹಗಲಿರುಳು ಕಣ್ಣೀರು ಮಿಡಿಯುವಳೇಕೆ? ಅವರಂಗಜೇಬನ ಚಿನ್ನದ ಕೋಳಕ್ಕೆ ಕೈಯೊಡ್ಡಿದ ನಮ್ಮ ಕುಲಕ್ಕೆ ಯಾವ ಯಶಸ್ಸು ಬಂದಿತು? ಅಪ್ಪಾ, ನಾನು ಯಥಾರ್ಥವಾಗಿ ಹೇಳುವೆನು. ನಾನು ಬಡ ಒಕ್ಕಲಿಗನ ಮನೆಯಲ್ಲಿ ಹುಟ್ಟಬಾರದಿತ್ತೆ? ನನಗೆ ಬೇಕಾದವನನ್ನು ವರಿಸಿ ಸುಖವಾಗಿರುತ್ತಿದ್ದೆನು. ನಿನ್ನ ಉದರದಲ್ಲಿ ಜನಿಸಿ ಕಾಗೆಯನ್ನು ವರಿಸಬೇಕೇ?" ಎಂದಳು.

ರಾಜಸಿಂಹನು ಅಡಗಿಸಿದ ಸಿಟ್ಟಿಂದ "ಮುಅಜಮನಿಗಿಂತಲೂ ನಿನಗೆ ಯೋಗ್ಯನಾದ ವರನು ಮತ್ತೊಬ್ಬನಿಲ್ಲ. ಅವನ ಪಾಣಿಗ್ರಹಣವೇ ನಮ್ಮ ವಂಶೋದ್ಧರಣ. ಮಗು, ಕಂಡವರನ್ನು ಕೈಹಿಡಿದು ಕುಲವನ್ನು ಕಳಂಕಿಸಬೇಡ" ಎಂದು ಬಿರುಗಣ್ಣಿನಿಂದ ನೋಡಿದನು.

ಶೈಲಿನಿಯು ಧೈರ್ಯಗೊಂಡು "ಅಪ್ಪಾ, ನಿನ್ನೊಡನೆ ಬಾಯಿಬಿಟ್ಟು ಹೇಳಿದರೆ, ಲಜ್ಜಾಹೀನಳೆಂದು ನೀನು ಭಾವಿಸುವುದಿಲ್ಲವಾದರೆ ನಾನು ಖಂಡಿತವಾಗಿ ಹೇಳುವೆನು; ಹಿಂದೂ ರಾಜಾಧಿರಾಜರನ್ನು ಬಿಟ್ಟು, ನಮ್ಮ ಸಂಸ್ಥಾನದ ಸ್ವಾತಂತ್ರ್ಯವನ್ನು ಮೊಘಲರಿಗೆ ಎಂದು ಬಲಿಕೊಟ್ಟೆವೋ ಆಗಲೇ ನಮ್ಮ ಕುಲವು ಕಳಂಕಿತವಾಗಿದೆ" ಎಂದಳು.

ರಾಜಸಿಂಹನು ಕೋಪವನ್ನು ತಡೆಯಲಾರದೆ ಎದ್ದುನಿಂತನು. ಮಗಳ ಪ್ರಾರ್ಸುಡಿಗೆ ಉತ್ತರ ಕೊಡಲಾರದೆ ನೀರವನಾದನು. ಒಂದು ನಿಮಿಷದ ಮೇಲೆ ಹಿಂದೂ ರಾಜಾಧಿರಾಜನು ಯಾರೆಂದು ಮಗಳೊಡನೆ ಗರ್ಜಿಸಿ ಕೇಳಿದನು. ಶೈಲಿನಿಯು ಮಂದಸ್ವರದಿಂದ, ಭವಾನಿಭಕ್ತನಾದ ರಾಮದಾಸರ ಶಿಷ್ಯನಾದ ಶಿವಾಜಿಯನ್ನು ಮುಕ್ತಕಂಠದಿಂದ ಹೊಗಳಿದಳು. ಶಿವಾಜಿಯು ವಿಶ್ವಾಸಘಾತುಕನಾದ, ಧರ್ಮದ್ರೋಹಿಯಾದ, ತುಂಡು ಪಾಳೆಯಗಾರನೆಂದು ತಂದೆಯು ತರ್ಕಿಸಿದನು. ಶೈಲಿನಿಯು ಅಲ್ಲಿಯೂ ಬಿಡದೆ, ಕುಲಸಂಹಾರಕನಾದ ಪಾಷಂಡನಾದ ಅವರಂಗಜೇಬನು ಹಿಂದುಗಳ ಅರಸನಲ್ಲವೆಂದೂ, ಶಿವಾಜಿಯೇ ಭಾರತವರ್ಷದ ಮಹಾರಾಜನೆಂದೂ ಬಿಗಿಹಿಡಿದು ಸಕಾರಣವಾಗಿ ತೋರಿಸಿದಳು. ಮಗಳ ಮಾತುಗಳಿಗೆ ಮರುಮಾತನಾಡದೆ ರಾಜಸಿಂಹನು ಕೆಳಕ್ಕೆ ಇಳಿದನು. ಇಳಿದು ಹೋಗುವಾಗ, ಮರಾಟನ ಮೂರ್ತಿಯು ಶೈಲಿನಿಯ ಹೃದಯಮಂದಿರದಲ್ಲಿ ಪ್ರತಿಷ್ಠಿತವಾಗಿರುವುದೆಂದು ನಿಶ್ಚಯಮಾಡಿಕೊಂಡು ಹೋದನು. ಕೋಪಾನಲದಿಂದ ದಗ್ಧವಾದ ಅವನ ಮನಸ್ಸು ಶೈಲಿನಿಯ "ಇಚ್ಛಿತವರ" ನನ್ನು ಸರಿಯಾಗಿ ಕಂಡುಹಿಡಿಯಲಾರದೆ ಹೋಯಿತು.

ಕ್ರಿ. ಶಕೆಯ 1333ನೆಯ ವರ್ಷದ ಡಿಲ್ಲಿಯು ಪ್ರಾಚೀನ ಹಿಂದೂರಾಜರ ದಿಲ್ಲಿಯಾಗಿರಲಿಲ್ಲ. ಅದರ ಹೆಸರು ಬೇರೆಯಾದಂತೆ. ಅದರ ಪೂರ್ವಸ್ಥಿತಿಯೂ ಪರಿವರ್ತಿತವಾಗಿತ್ತು. ಅದು ಶಹಾಜಹಾನಾಬಾದ್ ಎಂದು ಪ್ರಖ್ಯಾತಿಗೊಂಡಿತ್ತು. ಮೊಘಲ್ ಚಕ್ರೇಶ್ವರನಾದ ಶಹಾಜಹಾನನು ಪ್ರಾಚೀನ ಡಿಲ್ಲಿಯನ್ನು ಕೆಡವಿ, ತನ್ನ ಹೆಸರಿನ ಮಹಾನಗರವನ್ನು ಯಮುನಾ ನದಿಯ ತೀರದಲ್ಲಿ ಕಟ್ಟಿಸಿದನು. ಕಟ್ಟುವುದಕ್ಕೆ 9 ವರ್ಷ ಹಿಡಿಯಿತು; 60 ಲಕ್ಷ ರೂಪಾಯಿ ತಗಲಿತು. ನಗರದ ಸುತ್ತಲೂ ಸಾಂದ್ರವಾದ ತರುವನಗಳು; ಅಲ್ಲಲ್ಲಿ ಶಾಲಿಸಮೃದ್ಧವಾದ ಹೊಲಗದ್ದೆಗಳು. ಕಲ್ಲಿನ ಪ್ರಾಕಾರವೊಂದು ನಗರವನ್ನು ವೇಷ್ಟಿಸಿತ್ತು—7 ಮೈಲು ಸುತ್ತಳತೆಯ ಭದ್ರವಾದ ಮಂಡಲಾಕಾರವಾದ ಪ್ರಾಕಾರ. ಪ್ರಾಕಾರದ ಹೊರಗಡೆಯಲ್ಲಿ ಇಕ್ಕಟ್ಟಾದ ಬೀದಿಗಳು ನೆಲವನ್ನು ಸೀಳಿಹೋಗಿದ್ದುವು. ಇವುಗಳ ಇಕ್ಕೆಡೆಗಳಲ್ಲಿ ಮನಸಬ್ದಾರರ ಮಂದಿರಗಳು, ಉಮ್ರಾಗಳ ಮಹಡಿಗಳು; ರಾಜಾನುಚರರ ಗೃಹಗಳು. ಸ್ವಲ್ಪ ದೂರದಲ್ಲಿ ರಾಜಭಟರ ಗುಡಾರಗಳು; ಮುಂದೆ ಮುಂದೆ ವರ್ತಕರ ಅಂಗಡಿಗಳು, ವಾಣಿಜ್ಯಶಾಲೆಗಳು; ಅಲ್ಲಲ್ಲಿ ಬಡಬಗ್ಗರ ಹುಲ್ಲುಗುಡಿಸಲುಗಳು. ಇವುಗಳನ್ನು ಬಿಟ್ಟು ಮಹಾರಾಷ್ಟ್ರ ಶಿಬಿರವು ಪ್ರತ್ಯೇಕವಾದ ಒಂದು ಸ್ಥಳದಲ್ಲಿ ಇಳಿದಿತ್ತು.

ಹಿಂದೆ ಹೇಳಿದ ಘಟನಾವಳಿಯು ನಡೆದ ಮರುದಿನ ಶಿವಾಜಿಯು ಅವರಂಗಜೇಬನ ಸಂದರ್ಶನಕ್ಕೆ ಹೋಗಲು ಸಿದ್ಧನಾಗಿದ್ದನು. ರಾಜಸಿಂಹನು ಬಾದಶಹನ ಆಜ್ಞಾನುಸಾರವಾಗಿ ಶಿವಾಜಿಯನ್ನೂ ಅವನ ಪರಿಜನರನ್ನೂ ಕರೆದುಕೊಂಡು ಹೋಗುವುದಕ್ಕೆ ಮಹಾಸಂಭ್ರಮದೊಡನೆ ಸನ್ನದ್ಧನಾಗಿ ಬಂದನು. ಬಾದಶಹನ ಶ್ರೀಮಂತಪುತ್ರನಾದ ಮುಅಜಮನೂ ರಾಜಸಿಂಹನೊಡನೆ ಬಂದಿದ್ದನು. ರಾಜಸಿಂಹನು ಶಿಬಿರವನ್ನು ಪ್ರವೇಶಿಸಿದನು. ಶಿವಾಜಿಯು ಒಳಕ್ಕೆ ಹೋಗಿ ತನ್ನ "ಗರ್ಭಧಾರಿಣಿಯಾದ ಜೀಜಾಬಾಯಿಯನ್ನೂ ದೀಕ್ಷಾಗುರುವಾದ ರಾಮದಾಸನನ್ನೂ" ಸ್ಮರಿಸಿ ಹೊರಕ್ಕೆ ಬಂದು ಎಲ್ಲರ ಮಾನಮರ್ಯಾದೆಗಳನ್ನು ಸ್ವೀಕರಿಸಿದನು. ಈಗಲೂ ಅವರಂಗಜೇಬನು ಬರಲಿಲ್ಲವೆಂದು ಮನಸ್ಸಿನಲ್ಲಿ ಸ್ವಲ್ಪ ಕುದಿದನು. ಬಳಿಕ ಶಿವಾಜಿಯೂ ರಾಜಸಿಂಹನೂ

ಆಲಿಂಗನ ಮಾಡಿಕೊಂಡರು. ಆಲಿಂಗನಕಾಲದಲ್ಲಿ ರಾಜಸಿಂಹನ ಮುಖವು ಸ್ವಲ್ಪ ಭೀತಿವ್ಯಂಜಕವಾಗಿತ್ತು. ಶಿವಾಜಿಯು ರೇಶ್ಮೆಯಪಾಗುವನ್ನು ತಲೆಗೆ ಸುತ್ತಿಕೊಂಡು, ಅವರಂಗಜೇಬನು ಉಚಿತವಾಗಿ ಕಳುಹಿಸಿದ ಅಮೂಲ್ಯವಾದ "ಖಿಲಾತನ್ನು" ತೊಟ್ಟುಕೊಂಡು, ತನ್ನ ಸಹವಾಸಿಯಾದ ಭವಾನಿ ಎಂಬ ಕತ್ತಿಯನ್ನು ಸೊಂಟದಲ್ಲಿ ಬಿಗಿದುಕೊಂಡು, ತನ್ನ ಎಂಟುವರ್ಷದ ಸಂಭಾಜಿಯೊಡನೆ ರಾಜಗಜವನ್ನೇರಿ ಹೊರಟನು; ಅಂಗರಕ್ಷೆಯವರು ಬಳಿಸಂದರು. ಆಪ್ತರೂ ಅನುಚರರೂ ಪಲ್ಲಕ್ಕಿಗಳನ್ನು ಹತ್ತಿದರು. ವಾದ್ಯಗಳ ನಿಸ್ವನ, ಜನಸ್ತೋಮದ ಚೀತ್ಕಾರ, ಅಶ್ವಗಳ ಹೇಷಧ್ವನಿ ಮೊದಲಾದ ವಿವಿಧ ಕೋಲಾಹಲದಲ್ಲಿ ಶಿವಾಜಿಯು ತನ್ನ ಪ್ರಸ್ಥಾವನದ ಗೌರವಾರ್ಥವಾದ ತೋಪುಗಳ ಗುಡುಗನ್ನು ಕೇಳಲಿಲ್ಲ. ಶಿವಾಜಿಯು ಮನಸ್ಸಿನ ಖಿನ್ನತೆಯನ್ನು ಮುಖದಲ್ಲಿ ತೋರ್ಪಡಿಸದೆ, ಡಿಲ್ಲಿಯ ಪ್ರಾಚೀನ ವೈಭವವನ್ನು ಎಣಿಸುತ್ತ, ಗಜಾರೋಹಿಯಾಗಿ ಹೋದನು. ಜನಸಂದೋಹವು ನಗರದ ಹೆಬ್ಬಾಗಿಲನ್ನು ದಾಟಿ ಹೋಯಿತು. ಪ್ರಸ್ತರನಿರ್ಮಿತವಾದ, ಗಗನಚುಂಬಿಯಾದ, ನೂರಾರು ಮಿನಾರತುಗಳು ಬುರುಜುಗಳು ಪ್ರಕಾಶವಾದವು. ಲೋಕೋನ್ನತವಾದ ಕುತುಬಮಿನಾರಿನ ಶಿರಸ್ಸು ಸಮೀಪಸ್ಥವಾದಂತೆ ತೋರಿತು. ಜನಸಂದೋಹವು ಜುಮ್ಮಾಮಸೀದಿಯ ಬಳಿಯಿಂದ ಹರಿಯುತ್ತ ಮುಂದರಿಸಿತು. ಈ ಲೋಕೋತ್ತರನಾದ ಮಹಾರಾಷ್ಟ್ರ ವೀರನನ್ನು ನೋಡುವುದಕ್ಕೆ ಹಿಂದೂಸ್ಥಾನದ ಜನರೆಲ್ಲರು ಅಸಂಖ್ಯಾತರಾಗಿ ನಗರದ್ವಾರವನ್ನು ಹಿಡಿದು, ಎರಡು ಬೀದಿಗಳಲ್ಲಿಯೂ ಸಂದಣಿಸಿದ್ದರು. ಆನೆಯು ರಾಜಮಂದಿರದ ಮುಂದುಗಡೆಯ ಚಾಂದಣೀ ಚೌಕಕ್ಕೆ ಬರುತ್ತಲೇ ಜನರ ನುಗ್ಗಾಟವು ಅಧಿಕವಾಯಿತು. ಚೌಕದಲ್ಲಿ ಪಹರೆ ಮಾಡುತ್ತಲಿದ್ದ ರಜಪೂತರು ಕುದುರೆಗಳನ್ನು ಹತ್ತಿ ಸಾಲಾಗಿ ನಿಂತುಬಿಟ್ಟರು. ಜ್ಯೋತಿಷ್ಕರು ತಮ್ಮ ಚಿತ್ರಾಸನಗಳನ್ನು ಬಿಟ್ಟು, ಗಜಾರೋಹಿಯಾದ ಶಿವಾಜಿಯನ್ನು ವಿಸ್ಮಿತದೃಷ್ಟಿಯಿಂದ ನೋಡುತ್ತಲಿದ್ದರು. ವರ್ತಕರು, ವಾಣಿಜ್ಯರು, ವಿಪ್ರರು, ವೀಟಕಾಸ್ತ್ರೀಯರು, ವುಸ್ತಾದರು, ಉಮ್ರಾಗಳು, ವೈಶ್ಯಾಸ್ತ್ರೀಯರು, ವೈದ್ಯರು, ವಂದಿಪುತ್ರರು, ವಸ್ತ್ರಕಾರರು ಮೊದಲಾದ ಸಕಲ ವರ್ಣಾಶ್ರಮದವರು ಚೌಕದಿಂದ ಕೆಳಕ್ಕೆ ಇಳಿದು ಜನಸಂದೋಹದೊಡನೆ ತೆರಳಿದರು. ಶಿವಾಜಿಯು ಅವರಂಗಜೇಬನ ರಾಜಮಂದಿರದ ಬಳಿಯಲ್ಲಿ ಬಂದು ಮುಟ್ಟಿದನು. ಜನಗಳ ನೂಕಾಟವು ಅಧಿಕವಾಯಿತು. ಇದರಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಶಿವಾಜಿಯ ಗಜವು ಸೊಕ್ಕೇರಿ ಜನಗಳನ್ನೆಲ್ಲಾ ಹಾನಿಮಾಡುವಂತಿತ್ತು. ಶಿವಾಜಿಯು ಗಜಯೋಧನಿಗೆ ತಕ್ಕುದಾದ ಚಾತುರ್ಯದಿಂದ ಅದನ್ನು ಸಮಾಧಾನಗೊಳಿಸಿದನು. ನಂತರ ಕೆಳಗೆ ಇಳಿದನು. ಆದರೂ ಗೌರವಾರ್ಥದ ತೋಪುಗಳು ಹಾರಲಿಲ್ಲ. ಶಿವಾಜಿಯು ಮುಖವನ್ನೆತ್ತಿ ಮೇಲೆ ನೋಡಿದನು. ರಾಜದ್ವಾರದ ಬಳಿಯಲ್ಲಿ ಶಿಲಾಗಜಗಳ ಮೇಲೆ ಅಕ್ಬರನು ಇರಿಸಿದ ಪುತ್ತಳಿ ಮತ್ತು ಜಯಮಲ್ಲ ಎಂಬ ರಾಜಪುತ್ರ ವೀರರ ಪ್ರತಿಮೆಗಳನ್ನು ದೃಷ್ಟಿಸಿದನು. ಮನಸ್ಸಿನ ಖಿನ್ನತೆಯು ಇಮ್ಮಡಿಸಿದಂತಾಯಿತು. ಪ್ರತಿಮೆಗಳ ಮೇಲಿಂದ ದೃಷ್ಟಿಯನ್ನು ಹಿಂತೆಗೆಯಲಾರದೆ ಶಿವಾಜಿಯು ತಾನೂ ಪ್ರತಿಮೆಯಂತೆ ನಿಂತುದನ್ನು ಕಂಡು, ರಾಜಸಿಂಹನು ಮುಅಜಮ್‌ನೊಡನೆ ಶಿವಾಜಿಯ ಬಳಿಗೆ ಬಂದನು.

ರಾಜಸಿಂಹ:—"ಮುಂದೆ ದಯಮಾಡಬೇಕು."

ಶಿವಾಜಿಯು ಉಚ್ಚಸ್ವರದಿಂದ "ಬಾದಶಹರು ಇನ್ನೂ ಬರಲಿಲ್ಲವೇಕೆ?" ಎಂದು ಕೇಳಿದನು.

ರಾಜಸಿಂಹನು "ಬಾದಶಹರ ಪಕ್ಷವಾಗಿ ಯುವರಾಜರು ಬಂದಿರುವರು" ಎಂದು ಹೇಳಿ ಮುಅಜಮನನ್ನು ತೋರಿಸಿ, ಕೈಕೊಟ್ಟು ಶಿವಾಜಿಯನ್ನು ಸನ್ಮಾನಪೂರ್ವಕವಾಗಿ ಚಾಂದಿರಸ್ತೆಗೆ (ಬೆಳ್ಳಿಯ ಬೀದಿಗೆ) ಕರೆದು ತಂದನು.

ರಸ್ತೆಯ ಉಭಯಪಾರ್ಶ್ವಗಳಲ್ಲಿ ಜರತಾರಿನ ವಸ್ತ್ರಶಾಲೆಗಳು, ರೇಶ್ಮೆ ಬಟ್ಟೆಯ ಅಂಗಡಿಗಳು, ಆಯುಧಶಾಲೆಗಳು, ಮದ್ದುಗುಂಡನ್ನು ತಯಾರಿಸುವ ಆಲಯಗಳು ತೋರಿಬಂದುವು. ಶಿವಾಜಿಯು ಪಾದಚಾರಿಯಾಗಿ ಮುಂದುಗಡೆಯಲ್ಲಿದ್ದ ರಾಜಾಂಗಣವನ್ನು ಸೇರಿದನು.

ಅವರಂಗಜೇಬನು "ಅಮ್ ಖಾಸ್ ಖಾನೆ" ಯಲ್ಲಿ (ಆಸ್ಥಾನ ಮಂದಿರ) ಸಿಂಹಾಸನಾರೂಢನಾಗಿದ್ದನು. ತನ್ನ ವೈಭವದಿಂದಲೂ ಮಹತ್ವದಿಂದಲೂ ಶಿವಾಜಿಯನ್ನು ಬೆರಗುಗೊಳಿಸಬೇಕೆಂದು ಬಾದಶಹನು "ಅಮ್ ಖಾಸ್ ಖಾನೆ"ಯನ್ನು ಈ ದಿನ ಪರಿಷ್ಕಾರಗೊಳಿಸಿದ್ದನು. ಮಂದಿರದ ಆಕಾರವು ಪರಿಪಾಟಿಯಾಗಿತ್ತು. ಸುತ್ತಲೆಲ್ಲಾ ಧನುಸ್ಸಿನ ಆಕೃತಿಯ ಅಲಂಕೃತವಾದ ಕಮಾನುಗಳು, ರೇಶ್ಮೆಯಿಂದ ಹೊದಿಸಿದ್ದ ಅಂತಸ್ತು; ಇದಕ್ಕೆ ಆಧಾರವಾಗಿ ನಿಂತ ಚಿನ್ನದ ವರಕಿನ ಕಂಬಗಳು; ಈ ಸ್ತಂಭಗಳಲ್ಲಿ ಚಿತ್ರಿತವಾದ ಕೃತ್ರಿಮ ಪುಷ್ಪಗಳು, ಲತೆಗಳು, ನಿಕುಂಜಗಳು, ಮಂದಿರದ ಉಭಯಪಾರ್ಶ್ವಗಳಲ್ಲಿ ಒಂದರ ಮೇಲೆ ಒಂದಾಗಿ ಉನ್ನತವಾದ ಮೂರು ವೇದಿಕೆಗಳು, ಸುವರ್ಣಕೃತವಾದ ರಜತಮಯವಾದ, ಚಂದ್ರಕಾಂತನಿರ್ಮಿತವಾದ ಮೂರು ವೇದಿಕೆಗಳು. ಮಾಂಡಲೀಕರೂ ರಾಜಕುಲದವರೂ ಎತ್ತರವಾದ ವೇದಿಕೆಯನ್ನು ಏರಿದ್ದರು. ಮಿಕ್ಕವರೆಲ್ಲರು ಉಳಿದ ಎರಡು ಜಗುಲಿಗಳ ಮೇಲೆ ಪದವಿಗೆ ಅನುಸಾರವಾಗಿ ಕುಳಿತಿದ್ದರು. ಮಂದಿರದ ಒಂದು ಭಾಗದಲ್ಲಿ "ಜಾರುಕಾ" ಎಂಬ ವಿಶಾಲವಾದ ಕಿಟಕಿ; ದ್ವಾರಗಳಿಲ್ಲದ, ಕಂಜಾನವಿಲ್ಲದ ಕಿಟಕಿ. ಇಲ್ಲಿಯೇ ಮೊಘಲ ಚಕ್ರವರ್ತಿಗಳು ದಿನಂಪ್ರತಿ ಒಂದು ಸಲ ಬಂದು, ಪ್ರಜೆಗಳಿಗೆ ದೃಶ್ಯರಾಗುತ್ತಿದ್ದರು. "ಜಾರೂಕ" ದ ಹಿಂದೆ ಸ್ವಯಂ ಬಾದಶಹನು ವಿರಾಜಮಾನನಾಗಿದ್ದನು. ಜಾತಿ ಸುವರ್ಣನಿರ್ಮಿತವಾದ, ಅಮೂಲ್ಯ ನವರತ್ನಪ್ರೋಕ್ಷಿತವಾದ, ದ್ವಾದಶ ಕಾಂಚನ ಸ್ತಂಭಾದೃತವಾದ ಮಯೂರಾಸನವನ್ನು ಮೊಘಲ್ ಚಕ್ರೇಶ್ವರನು ಆರೋಹಿಸಿದ್ದನು. ಅವರಂಗಜೇಬನು ತನ್ನ ಜೀವಕಾಲದಲ್ಲಿ ಮಯೂರಪೀಠವನ್ನು ಏರಿದ್ದು ಈ ಸಲವೇ. "ಶಿವಾಜಿಯು ಮಾಯಾವಿ" ಎಂದೆಣಿಸಿ, ಲೋಹಕವಚವನ್ನೂ ಅಸ್ತ್ರಶಸ್ತ್ರಗಳನ್ನು ತೊಟ್ಟು ಮೈಗಾವಲನ್ನಿಟ್ಟುಕೊಂಡು ಸಿಂಹಾಸನದಲ್ಲಿ ಅವನು ಕುಳಿತಿದ್ದನು. ಜನಸ್ತೋಮದಲ್ಲಿ ಶಿವಾಜಿ ಯಾರೆಂದು ಅವರಂಗಜೇಬನು ತನ್ನವರೊಡನೆ ಕೇಳಿದನು. ಸಮೀಪದಲ್ಲಿದ್ದ ರಜಪೂತ ಮಾಂಡಲಿಕನೊಬ್ಬನು ಕೈಜೋಡಿಸಿ ನಿಂತು, ಪ್ರತಿಭಾಮಯನಾದ ಮುಖವುಳ್ಳವನಾಗಿಯೂ, ಶುಕನಾಸನಾಗಿಯೂ, ಸ್ವಲ್ಪ ನೀಲವರ್ಣನಾಗಿಯೂ, ಅಜಾನುಬಾಹುವಾಗಿಯೂ, ಕುಬ್ಜನಾಗಿಯೂ ಇದ್ದು, ಗಂಭೀರಗತಿಯಿಂದ ಬರುತ್ತಿದ್ದ ಶಿವಾಜಿಯನ್ನು ತೋರಿಸಿದನು. ಶಿವಾಜಿಯು ಆಸ್ಥಾನ ಮಂದಿರದಲ್ಲಿ ಪದಾರ್ಪಣ ಮಾಡಿದನು. ಒಮ್ಮೆ ತಟಸ್ಥನಾಗಿ ನಿಂತು "ಅಮ್ ಖಾಸ್ ಖಾನೆ"ಯ ಸೌಭಾಗ್ಯ ಸೌರಂಭವನ್ನು ನೋಡಿದನು; ಆದರೆ ನೋಡಿ ಸಾಮಾನ್ಯರಂತೆ ಬೆರಗಾಗಲಿಲ್ಲ; ಅವರಂಗಜೇಬನು ಮನಸ್ವಿಯಾಗಿ ಇದನ್ನೆಲ್ಲಾ ಮಾಡಿರುವನು ಎಂದು ಕೂಡಲೇ ತಿಳಿದುಬಿಟ್ಟನು. ಅವನ ದೃಷ್ಟಿಗಳು ಸುವರ್ಣ ವೇದಿಕೆಯ ಮೇಲಿದ್ದ ರಾಜಪೂತರ ಕಡೆಗೆ ತಿರುಗಿದವು. ಅಷ್ಟರಲ್ಲಿ ರಾಜಸಿಂಹನು ಹತ್ತಿರಕ್ಕೆ ಬಂದು, "ರಾಜರೇ, ಇಲ್ಲಿಂದ ಮುಂದರಿಸಬೇಕಾದರೆ ಬಾದಶಹರಿಗೆ ನೆಲವನ್ನು ಮುಟ್ಟಿ ಮೂರು ಸಲ ಸಲಾಂ ಮಾಡುವುದು ಪದ್ಧತಿಯಾಗಿದೆ" ಎಂದನು. ಶಿವಾಜಿಯು ರಾಜಸಿಂಹನನ್ನು ನೋಡಿದನು. ಬಳಿಕ ಉಚ್ಚಸ್ವರದಿಂದ "ಇದು ನಮ್ಮಿಂದಾಗದು; ಈ ಜನ್ಮದಲ್ಲಿ ಯಾವ ಮುಸಲ್ಮಾನನಿಗೂ ನಾವು ಸಲಾಂ ಮಾಡಿಲ್ಲ. ಇನ್ನು ಮುಂದೆಯೂ ಮಾಡಲಾರೆವು" ಎಂದನು.

ರಾಜಸಿಂಹನು ವ್ಯಗ್ರನಾಗಿ ಕಳವಳದಿಂದ, "ಇದೊಂದು ಕಠಿಣ ಸಮಸ್ಯೆಯಾಗಿದೆಯಲ್ಲ. ಸಾಮ್ರಾಟರು ಕೋಪಿಸಿಕೊಂಡರೆ ಕಾರ್ಯವು ಕೆಡುವುದು" ಎಂದನು.

ಶಿವಾಜಿಯು ತನ್ನ ಎಡಕ್ಕೆ ಇದ್ದ ರಾಜಪುತ್ರರನ್ನು ನೋಡಿ "ಇವರೆಲ್ಲರು ಅದೇ ಪ್ರಕಾರವಾಗಿ ಮಾಡಿ, ತಮ್ಮ ಆಸನವನ್ನು ಏರಿದರೇ?" ಎಂದು ಕೇಳಿದನು.

ರಾಜಸಿಂಹನು ಬಾದಶಹನ ಕಡೆಗೆ ನೋಡುತ್ತ, ಶಿವಾಜಿಯೊಡನೆ "ಹಾಗೆ ಮಾಡದೆ ಮುಂದರಿಸ ಕೂಡದು" ಎಂದನು. ಅವರಂಗಜೇಬನು ಪಕ್ಕದಲ್ಲಿದ್ದ ರಾಜಪುತ್ರರೊಡನೆ ಏನನ್ನೋ ಮಾತನಾಡುತ್ತಿದ್ದನು.

ಶಿವಾಜಿಯು ಸ್ವಲ್ಪ ಹೊತ್ತು ಮನಸ್ಸಿನಲ್ಲಿಯೇ ಚಿಂತಿಸಿದನು. ಬಳಿಕ ರಾಜಸಿಂಹನೊಡನೆ "ಈ ಮಾತು ಮನ್ನಿಸಬೇಕಾಗುವುದು. ಇಲ್ಲವಾದರೆ ಕೆಲಸವು ಕೆಟ್ಟುಹೋಗುವುದು ಎಂಬುದು ನಿಜ" ಎಂದನು.

ಶಿವಾಜಿಯು ಮುಂದೆ ಬಂದು ಮೂರು ಸಲ ಸಲಾಂ ಮಾಡಿದನು; ಆದರೆ ನೆಲವನ್ನು ಮುಟ್ಟಿ ಕೈ ಮುಗಿಯಲಿಲ್ಲ. ಅವರಂಗಜೇಬನು ಅದನ್ನು ಓರೆಗಣ್ಣಿನಿಂದ ನೋಡದೆ ಹೋಗಲಿಲ್ಲ. ರಾಜಸಿಂಹನು ತುಟಿಯೊಳಗೆ ನಗುವಂತಿದ್ದನು. ಶಿವಾಜಿಗೆ ಆಸನವನ್ನು ಮೊದಲೇ ಏರ್ಪಡಿಸಿದ್ದರೂ ಬಾದಶಹನು ರಾಜಸಿಂಹನೊಡನೆ "ರಾಜರು ಕುಳಿತುಕೊಳ್ಳುವುದಕ್ಕೆ ಎಲ್ಲಿ ಆಸನವನ್ನು ಮಾಡಿರುವೆ?" ಎಂದು ಕೇಳಿದನು.

ರಾಜಸಿಂಹನು ಶಿವಾಜಿಗೆ ಕೈಕೊಟ್ಟು ಬಾದಶಹನ ಬಲಗಡೆಯಲ್ಲಿದ್ದ ಸುವರ್ಣ ವೇದಿಕೆಯ ಮೂಲೆಯಲ್ಲಿ ಕುಳ್ಳಿರಿಸಿದನು. ಶಿವಾಜಿಯು ಫಕ್ಕನೆ ಆಸನದಿಂದ ಕೆಳಕ್ಕೆ ದುಮುಕಿ, "ನಮ್ಮ ಬಲಗಡೆಯಲ್ಲಿ ಇರುವವರು ಯಾರು?" ಎಂದು ಗಂಭೀರಧ್ವನಿಯಿಂದ ಕೇಳಿದನು.

ಬಲಗಡೆಯಲ್ಲಿದ್ದ ರಜಪೂತ ಸರದಾರರೂ ಉಮ್ರಾಗಳೂ ಸಂಧಿಗ್ಧ ಮಾನಸರಾಗಿ ನೋಡಿದರು. ಆದರೂ ಬಾದಶಹನು ಶಾಂತಚಿತ್ತನಾಗಿ ನೋಡುತ್ತಿದ್ದನು.

ಶಿವಾಜಿಯ ಪ್ರಶ್ನೆಗೆ ಉತ್ತರವಾಗಿ ರಾಜಸಿಂಹನು "ತಮ್ಮ ಬಲಗಡೆಯಲ್ಲಿದ್ದವರು ಮಾರವಾಡ ಸಂಸ್ಥಾನಾಧಿಪರಾದ ಯಶವಂತ ಸಿಂಹರು" ಎಂದು ಹುಸಿನಗುವಿನಿಂದ ಹೇಳಿದನು.

ಇದನ್ನು ಕೇಳಿದನೋ ಇಲ್ಲವೋ ಶಿವಾಜಿಯು ಕಿಡಿಕಿಡಿಯಾಗಿ ಉರಿದನು. ಅವಮಾನ ಶೂಲವನ್ನು ಮೈಯೊಳಗೆ ತಿವಿದು ತಿರುಪಿದಂತೆ ಉದ್ರೇಕಿತನಾದನು. ಆದರೂ ಅವಮಾನ್ಯಜನ್ಯವಾದ ಕೋಪವನ್ನಾಗಲೀ, ವ್ಯಥೆಯನ್ನಾಗಲೀ ತೋರಿಸದೆ, ಗಂಭೀರಸ್ವರದಿಂದ "ಯಶವಂತ ಸಿಂಹನ ಸಹಪಂಕ್ತಿಯಲ್ಲಿ ಕುಳಿತುಕೊಳ್ಳಲು ನಮ್ಮ ಯೋಗ್ಯತೆಯು ಎಂತಹುದು? ಸ್ವದೇಶವತ್ಸಲರಾದ, ಸ್ವಾತಂತ್ರ್ಯಪರಾಯಣರಾದ, ಸ್ವಧರ್ಮರಕ್ಷಕರಾದವರು ಯಾರಾದರೂ ಈ ಆಸ್ಥಾನದಲ್ಲಿ ಇದ್ದರೆ, ಆ ಬಡಪಾಪಿಗಳೊಡನೆ ಕೈಕಟ್ಟಿ ನಿಲ್ಲಲು ನಾವು ಯೋಗ್ಯರಲ್ಲದೆ, ಮೊಘಲ್ ಸಂಸ್ಥಾನದ ಜಹಗೀರುದಾರರೆಂಬ ದೊಡ್ಡ ದೊಡ್ಡ ಬಿರುದನ್ನು ತಾಳಿರುವ ಮಹಾರಜಪೂತರ ಬಳಿ ಸೇರುವುದಕ್ಕೆ ನಮ್ಮಲ್ಲಿ ಯೋಗ್ಯತೆ ಇಲ್ಲ! ಯಶವಂತಸಿಂಹ ಮೊದಲಾದವರು ತಮ್ಮೊಳಗೆ ನಾವು ಒಬ್ಬರೆಂದು ತಿಳಿದಿರಬಹುದು. ಬಾದಶಹರು ಎಲ್ಲರಿಗೂ ಮಾನಮರ್ಯಾದೆಗಳನ್ನು ಕೊಟ್ಟರು. ಪ್ರತಿಯಾಗಿ ಹಿಂದುಗಳು ತಮ್ಮ ರಾಜಮರ್ಯಾದೆಗಳನ್ನು ಬಾದಶಹರಿಗೆ ಬಿಟ್ಟುಕೊಟ್ಟರು. ಆದರೆ ಈ ಗೌರವವು ಚಿತ್ತೂರಿನ ರಾಣಾವಿಗೂ ಮಹಾರಾಷ್ಟ್ರದ ಶಿವಾಜಿಗೂ ಬರಲಿಲ್ಲ. ಅಂತಹ ಗೌರವದ ಅಪೇಕ್ಷೆ ಇದ್ದಲ್ಲಿ ನಾವು ಈ ಯಶವಂತ ಸಿಂಹ, ರಾಮ ಸಿಂಹ ಮೊದಲಾದವರ ಸಂಗಡ ಕುಳಿತುಕೊಳ್ಳುವೆವು, ಅಲ್ಲದೆ, ಪ್ರಕೃತದಲ್ಲಿ ಅಂತಹ ಬಹುಮಾನಗಳನ್ನು ಆಶಿಸುವುದಿಲ್ಲ" ಎಂದನು.

ಬಾದಶಹನ ಪಕ್ಕದಲ್ಲಿದ್ದ ರಜಪೂತರೆಲ್ಲರೂ ಅಧೋವದನರಾದರು. ರಾಜಸಿಂಹನು ಮಾತನಾಡ ಲಾರದೆ ಮೋರೆ ತಗ್ಗಿಸಿ ನಿಂತನು. ಬಾದಶಹನು ಶಿವಾಜಿಯು ಆಡಿದ ಭಾಷೆಯ ಜ್ಞಾನ ಶೂನ್ಯನಾದರೂ, ಸಂದರ್ಭಾನುಸಾರದಿಂದ ಅದರ ಅರ್ಥವನ್ನು ಸ್ವಲ್ಪ ತಿಳಿದು ರಾಜಸಿಂಹನೊಡನೆ "ಇದೇನು ಸಂಗತಿ?" ಎಂದು ಕೇಳಿದನು.

ರಾಜಸಿಂಹನು ನತಶಿರಸ್ಕನಾಗಿ "ವನಸಿಂಹವು ಬೋನಿನಲ್ಲಿ ಸಿಕ್ಕಿಕೊಂಡಿದೆ" ಎಂದನು.

ಅವರಂಗಜೇಬನು ನಗುತ್ತ, "ಅದಕ್ಕೋಸ್ಕರ ಬೊಬ್ಬಿಡುತ್ತಿದೆಯೇ? ವನ್ಯಸ್ಥಿತಿಯಲ್ಲಿದ್ದಾಗ ಮೃಗ ಗಳನ್ನು ನೋಡುವುದು ಸರಿಯಲ್ಲ" ಎಂದನು.

ರಾಜಸಿಂಹನು "ಮೃಗವನ್ನು ಈಗ ನಾನು ಏನು ಮಾಡಲಿ" ಎಂದು ಮೆಲ್ಲನೆ ಕೇಳಿದನು.

ಅವರಂಗಜೇಬ:—"ಅದನ್ನು ಕೊಂಡುಹೋಗಿ ಶಾಂತವಾದ ಬಳಿಕ ಮರಳಿ ತರಬಹುದಷ್ಟೆ."

ಇಷ್ಟಕ್ಕೆ ಶಿವಾಜಿಯು ಅಲ್ಲಿ ನಿಲ್ಲಲಾರದೆ "ಅಮ್ ಖಾಸ್ ಖಾನೆ" ಯಿಂದ ಹಿಂದೆರಳಿದನು. ಬಾದಶಹನಿಗೆ ನಮಸ್ಕಾರ ಮಾಡದೆ, ರಾಜಪುತ್ರರನ್ನು ಕಣ್ಣೆತ್ತಿ ನೋಡದೆ, ಅವನು ಹೋಗಿಬಿಟ್ಟನು. ಅವನ ಹಿಂದೆ ಅವನ ಪರಿಜನರೂ ನಡೆದುಬಿಟ್ಟರು. ಶಿವಾಜಿಯು ಆಕಸ್ಮಾತ್ತಾಗಿ ಅಲಕ್ಷವಾಗಿ ಆಸ್ಥಾನವನ್ನು ಬಿಟ್ಟು ಹೋದುದನ್ನು ನೋಡುತ್ತಲೇ, ಅವರಂಗಜೇಬನ ಕೋಪವು ಮಿತಿಮೀರಿತು. ಆದರೂ ಸ್ಥಿರಚಿತ್ತನಾಗಿದ್ದು, ಮೌನವಾಗಿದ್ದು ತನ್ನ ಮುಖಮುದ್ರೆಯನ್ನು ಬದಲಿಸಲಿಲ್ಲ. ಅವರೆಲ್ಲರೂ ಹೋದಬಳಿಕ ಅವರಂಗಜೇಬನು ರಾಜಸಿಂಹನನ್ನು ಕರೆದು, "ಹೋದವರು ಎಲ್ಲಿ ತಾನೇ ಇಳಿಯುವವರು?" ಎಂದು ಕೇಳಿದನು.

ರಾಜಸಿಂಹ:—"ಖಾವಂದರ ಅಪ್ಪಣೆಯಂತೆ ಅವರಿಗೋಸ್ಕರ ಕೋಟೆಯ ಒಳಗೆ ಮೊದಲೇ ಸಜ್ಜು ಗೊಳಿಸಿದ್ದ 'ದಿಲ್‌ಖುಷ್' ಮಂದಿರದಲ್ಲಿ ಅವರನ್ನು ಇಳಿಸಿದ್ದೇನೆ."

ಅವರಂಗಜೇಬನು "ಹಾಗಾದರೆ ನಡೆ. ವಿಳಂಬಿಸಬೇಡ. ಶಿವಾಜಿಯನ್ನು ಅಲ್ಲಿ ಇಳಿಸಿದ ಬಳಿಕ ನಮ್ಮನ್ನು ನೋಡಲು ನೀನು ಅರಮನೆಗೆ ಬರಬೇಕು. ರಾಜಕಾರ್ಯ ಗೌರವವು ಹೆಚ್ಚಿದೆ" ಎಂದು ಹೇಳಿ ಸುಮ್ಮನಾದನು.

ಶಿವಾಜಿಯು ಪೂರ್ವದ ಇಂದ್ರಪ್ರಸ್ಥದ ಸೌಭಾಗ್ಯವನ್ನೆಲ್ಲಾ ನೋಡುತ್ತ ಆರ್ಯಪುತ್ರರ ಆಸ್ಥಾನದಲ್ಲಿ ಮೊಘಲರು ಸ್ವೇಚ್ಛೆಯಿಂದ ರಾಜದಂಡವನ್ನು ಪರಿಪಾಲಿಸುವುದನ್ನು ಯೋಚಿಸುತ್ತ, ರಾಜಪುತ್ರರಿಗೂ ಇತರ ಹಿಂದುಗಳಿಗೂ ತಗಲಿದ ಹೀನಾವಸ್ಥೆಯನ್ನು ಕುರಿತು ದುಃಖಿಸುತ್ತ ಮೆಲ್ಲಮೆಲ್ಲನೆ ಹೋಗುತ್ತಿದ್ದನು. ರಾಜಸಿಂಹನು ತನ್ನ ಸಮೀಪಸ್ಥನಾದುದನ್ನು ನೋಡಿ ಶಿವಾಜಿಯು "ಬಾದಶಹನು ಎಂಥಹನು? ನಮ್ಮನ್ನೂ ಯಶವಂತಸಿಂಹನನ್ನೂ ಒಂದು ಮಾಡಿದನಲ್ಲ" ಎಂದು ಕೇಳಿದನು.

ರಾಜಸಿಂಹನು "ಅರಮನೆಯಲ್ಲಿದ್ದಾಗ ಅಲ್ಲಿನ ಪದ್ಧತಿಗನುಸಾರವಾಗಿ ನಡೆಯದೆ ಆಗಲಾರದು. ಅದು ಹೋಗಲಿ. ಈಗ ತಾವು ಸುರಕ್ಷಿತವಾಗಿ ತಮ್ಮ ಊರನ್ನು ಸೇರಿದರೆ ಸಾಕು. ನನ್ನ ಭಾರವನ್ನು ಇಳಿಸಿ ದಂತಾಗುವುದು" ಎಂದು ದೈನ್ಯದಿಂದ ಬೇಡಿಕೊಂಡನು.

ಶಿವಾಜಿಯು ಈ ಮಾತುಗಳ ಸೂಕ್ಷ್ಮಾರ್ಥವನ್ನು ಗ್ರಹಿಸಿಕೊಂಡು, ತನಗೋಸ್ಕರ ಅಣಿಮಾಡಿದ್ದ ಮಂದಿರವನ್ನು ಸೇರಿದನು. ಈ ರೀತಿಯಲ್ಲಿ ಕ್ರಿ. ಶಕೆಯ 1666ರಲ್ಲಿ ಶಿವಾಜಿಯು ಬಾದಶಹನಿಗೆ ಮೊತ್ತ ಮೊದಲು ಕೊಟ್ಟ ಸಂದರ್ಶನವು ಕಟ್ಟಕಡೆಯದಾಯಿತು.

ಯಾವ ದಿವಸ ಶಿವಾಜಿಯು ಅವರಂಗಜೇಬನ ಸಂದರ್ಶನಾರ್ಥವಾಗಿ ಹೋಗಿದ್ದನೋ ಆ ದಿವಸವೇ ಶೈಲಿನಿಯು ಕೋಟೆಯೊಳಗೆ ರಾಜಸಿಂಹನಿಗೋಸ್ಕರ ಸಜ್ಜುಗೊಳಿಸಿದ್ದ ಮಂದಿರದ ಉಪ್ಪರಿಗೆಯನ್ನು ಏರಿದ್ದಳು. ಶಿವಾಜಿಯು ಶಿಬಿರವನ್ನು ಮುಟ್ಟಿದನು. ಬಾದಶಹನ ಆಜ್ಞಾನುಸಾರವಾಗಿ ರಾಜಸಿಂಹನು ಅರಮನೆಗೆ ಹಿಂದೆರಳಿದನು. ಆದರೂ ಶೈಲಿನಿಯು ಮಹಡಿಯಿಂದ ಕೆಳಕ್ಕೆ ಇಳಿಯಲಿಲ್ಲ. ರಾತ್ರಿದೇವಿಯು ತನ್ನ ಭಯಾನಕ ರೂಪವನ್ನು ಧರಿಸಿ ಬರುವಾಗ ಒಂದೆರಡು ನಕ್ಷತ್ರಗಳು ಆಕಾಶದಲ್ಲಿ ಕಣ್ಣು ಮಿಟುಕಿಸುತ್ತಿದ್ದವು. ಆದರೂ ಶೈಲಿನಿಯು ಅಲ್ಲಿಯೇ ನಿಂತಿದ್ದಳು. ತಂದೆಯು ಬಾದಶಹನನ್ನು ಬೀಳ್ಕೊಂಡು ಮರಳಿ ಬಂದನು. ಬರುತ್ತಲೇ ಮಗಳನ್ನು ನೋಡುವುದಕ್ಕೆ ಮಹಡಿಯನ್ನು ಹತ್ತಿದನು. ಶೈಲಿನಿಯು ಸುಮ್ಮನೆ ನಿಂತಿರುವುದನ್ನು ಕಂಡು, "ಮಗು, ಇನ್ನೂ ನಿದ್ದೆ ಹೋಗಲಿಲ್ಲವೇಕೆ?" ಎಂದು ಕೇಳಿದನು.

ಶೈಲಿನಿ:—"ಅಪ್ಪಾ, ನೀನು ಬರಲಿಲ್ಲವೆಂದು ಕಾದಿದ್ದೆನು."

ರಾಜಸಿಂಹ:—"ಮುಅಜಮನು ನನ್ನ ಸಂಗಡ ಬರುವೆನೆಂದು ನೀನು ತಿಳಿದೆಯಾ?"

ಶೈಲಿನಿ:—"ಮುಅಜಮನು ಈ ಮನೆಗೆ ಏಕೆ ತಾನೇ ಬರುವನು? ಇದು 'ಶರಾಬ್ ಖಾನೆ' ಅಲ್ಲವಲ್ಲ."

ರಾಜಸಿಂಹನು ಹುಬ್ಬುಗಂಟಿಕ್ಕಿ "ಅಲ್ಲ, ಇದು ಶೈಲಿನಿ ಮಂದಿರ. ಇಲ್ಲಿಯೇ ಹೆಂಡತಿಯನ್ನು ನೋಡುವ ಹಾಗೆ ಅವನು ಬರಬೇಕೆಂದಿದ್ದನು."

ಶೈಲಿನಿ ಪ್ರತಿಯಾಗಿ "ಅಪ್ಪಾ, ಹೆಂಡ ತಿಂದು ನೋಡುವುದಕ್ಕೆ ಇದು 'ಶರಾಬ್ ಖಾನೆ' ಅಲ್ಲವೆಂದೇ ನಾನು ಹೇಳಿದೆನು."

ರಾಜಸಿಂಹ:—"ಅಮ್ಮಾ, ಉದ್ದುರುಟು ಮಾತಾಡಬೇಡ. ಸುಮ್ಮನೆ ಹಟ ಹಿಡಿದು ಹುಚ್ಚಳಾಗಬೇಡ, ಕಂಡೆಯಾ?"

ಶೈಲಿನಿ:—"ಅಪ್ಪಾ, ಹಟಹಿಡಿಯುವವರೆಲ್ಲರೂ ಹುಚ್ಚರಾದರೆ, ಲೋಕದಲ್ಲಿ ಬುದ್ಧಿವಂತರು ಯಾರು ತಾನೇ ಇರುವರು?"

ರಾಜಸಿಂಹ:—"ಮಗು, ನಾನು ನಿನ್ನ ಅರ್ಥವನ್ನೆಲ್ಲಾ ತಿಳಿದಿರುವೆನು. ಆದರೆ ಒಂದು ಮಾತನ್ನು ಮರೆಯಬೇಡ. ಮರಾಟರು ಶೂದ್ರರು."

ಶೈಲಿನಿ:—"ನಾನು ಅದಕ್ಕಿಂತಲೂ ಹೆಚ್ಚಾಗಿ ಬಲ್ಲೆನು. ಮುಸಲ್ಮಾನರು ಮ್ಲೇಚ್ಛರು."

ರಾಜಸಿಂಹನು ಉಚ್ಚಸ್ವರದಿಂದ "ಮಗು, ಶೈಲಿನಿ, ನಾನು ನಿನ್ನನ್ನು ಯಾವಾಗ ಪ್ರತಾಪಗಡಕ್ಕೆ ಕೊಂಡುಹೋದೆನೋ ಅಂದಿನಿಂದ ನೀನು ಹೀಗೆ ವರ್ತಿಸತೊಡಗಿರುವೆ. ಈಗ ಯಾರನ್ನೂ ದೂಷಿಸಿ ಪ್ರಯೋಜನ ವಿಲ್ಲ. ನನ್ನ ಹಣೆಯಲ್ಲಿ ಬರೆದಂತಾಗುವುದು. ಈ ನಿನ್ನ ನಡತೆಯು ನಿನಗೆ ಹಿತಕರವಲ್ಲ. ನೀನು ಅನ್ಯರ ಹಸ್ತಗತ ಳಾಗಿ, ನಿನ್ನೊಡನೆ ನನ್ನನ್ನೂ ನಮ್ಮ ಕುಲವನ್ನೂ ಅಳಿಸಿಬಿಡುವುದಕ್ಕಿಂತಲೂ, ನಾನು ಹೇಳಿದಂತೆ ನಡೆದು ಕೊಳ್ಳುವುದು ಒಳ್ಳೆಯದಲ್ಲವೇ? ಅವರಂಗಜೇಬನ ಬಂಧಿಯಾದ ಶೂದ್ರ ಮರಾಟನ ಕಪಟಪ್ರೇಮಪಾಶದಲ್ಲಿ ನೀನು ಬಿದ್ದು ಸಾಯುವುದಕ್ಕಿಂತಲೂ ಸಾಕ್ಷಾತ್ ಭಾರತ ಬಾದಶಾಹಿಯ ಪುತ್ರನಾದ, ವಿಕ್ರಮಸಂಪನ್ನನಾದ ಮುಅಜಮನ ಯಥಾರ್ಥ ಪ್ರಣಯಭಾಜನೆಯಾಗಿ, ಭಾಗ್ಯಶಾಲಿನಿ ಎನಿಸಿಕೊಳ್ಳುವುದು ಲೇಸಲ್ಲವೇ? ತುಚ್ಛ

ನಾವ ಆ ಮಾವಳಿಗನೆಲ್ಲಿ? ರಜಪೂತ ಕನ್ಯೆಯಾದ ಶೈಲಿನಿ ಎಲ್ಲಿ? ಈಚೆಗೆ ನಿನ್ನ ನಡತೆ ನನಗೆ ಅಸಹ್ಯವಾಗುತ್ತ ಬಂದಿದೆ. ಅನ್ನಾಹಾರಾದಿಗಳಲ್ಲಿ ಅಲಕ್ಷ್ಯ, ಮನೆಯವರ ಮೇಲೆ ಔದಾಸೀನ್ಯ, ನನ್ನೊಡನೆ ಅವಿಧೇಯತೆ, ಮುಅಜಮನ ವಿಷಯದಲ್ಲಿ ತಾತ್ಸಾರ, ನಿನ್ನ ಆತ್ಮಸಂಭಾಷಣೆ, ನಿನ್ನ ಅಂತರಂಗ ಪಲಾಯನ ಇವೆಲ್ಲವೂ ವಿಪರೀತವನ್ನು ಸೂಚಿಸುತ್ತಿವೆ. ಬಾದಶಹರ ರಾಜಕಾರ್ಯ ಗೌರವ, ಶಿವಾಜಿಯ ಆಗಮನ, ಮುಅಜಮನ ನಿರ್ಬಂಧ, ನಿನ್ನ ಹುಚ್ಚುಹಟ—ಇವೆಲ್ಲವುಗಳಿಂದ ನನ್ನ ಬುದ್ಧಿಯು ಮುಂಗಾಣದು" ಎಂದು ಹೇಳಿದನು.

ಶೈಲಿನಿಯು ಈ ವಾಕ್ಯಪರಂಪರೆಯಿಂದ ಕದಲದೆ, "ಅಪ್ಪಾ, ಶಿವಾಜಿಯು ಅವರಂಗಜೇಬನ ಬಂಧಿ ಎಂದು ನೀನು ಹೇಳಿದೆ. ಅವಮಾನ ಮಾಡಿದ್ದು ಸಾಲದೆ ಅವನನ್ನು ಮೋಸದಿಂದ ಬಂಧಿಯಾಗಿ ಮಾಡಿದನೇ?" ಎಂದು ಕೇಳಿದಳು.

ರಾಜಸಿಂಹನು ಮೈದೆಗೆದು, "ಶಿವಾಜಿ ಬಂಧಿಯಾಗಿರುವನೆಂದು ನಾನು ಹೇಳಿದೆನೇ? ನನ್ನ ಮನಸ್ಸು ಸರಿಯಾಗಿಲ್ಲ. ನಿದ್ದೆಗಣ್ಣುಗಳಿಂದ ಏನು ಹೇಳಿರುವೆನೆಂದು ಅರಿಯೆನು" ಎಂದು ಹೇಳಿ ಉಪ್ಪರಿಗೆಯಿಂದ ಇಳಿದುಹೋದನು.

ಶೈಲಿನಿಯು ತಂದೆಯ ಮಾತುಗಳನ್ನು ಮನಸ್ಸಿನಲ್ಲಿ ಮಥಿಸುತ್ತ, ಕುಳಿತಲ್ಲಿಯೇ ಗೋಡೆಗೆ ಒರಗಿ ನಿದ್ದೆ ಹೋದಳು.

ರಾಜಸಿಂಹನು ಎಚ್ಚರತಪ್ಪಿ ಹೇಳಿದಂತೆ, ಶಿವಾಜಿಯು ಢಿಲ್ಲಿಯಲ್ಲಿ ಸೆರೆಯಾಗಿದ್ದನು. ಶಿವಾಜಿಯು ತಪ್ಪಿಸಿಕೊಳ್ಳದಂತೆಯೂ, ರಾಜಪುತ್ರರೊಡನೆ ಒಳಸಂಚು ನಡೆಯಿಸದಂತೆಯೂ ಅವರಂಗಜೇಬನು ಅವನ ಮೇಲೆ ಹೊಂಚು ಹಾಕಿದ್ದನು. ಪಹರೆಯಲ್ಲಿ ಶಿವಾಜಿಯ ಬಂಧನವು ಸೂಚಿತವಾಗಿರದಿದ್ದರೂ ಅವನು ಕೋಟೆಯನ್ನು ದಾಟುವುದಾದರೆ, ಅವರಂಗಜೇಬನ ಸೈನಿಕರ ಕತ್ತಿಗಳು ಒರೆಯಿಂದ ಹಾರಲು ಸಿದ್ಧವಾಗಿದ್ದುವು. ಮೂರು ದಿನಗಳಿಂದ ಮೊಘಲ್ ಸೈನಿಕರು ಆಯುಧಪಾಣಿಗಳಾಗಿ ಹಗಲಿರುಳು ತನ್ನ ಶಿಬಿರವನ್ನು ಬಿಡದೆ ಕಾಯುವುದನ್ನು ಶಿವಾಜಿಯು ನೋಡಿದನು. ಈ ಮೈಗಾವಲಿನ ಅರ್ಥವನ್ನು ಅವನು ತಿಳಿಯದೆ ಹೋಗಲಿಲ್ಲ. ಈ ಸಂಕಷ್ಟಕರವಾದ ಸಮಸ್ಯೆಯಿಂದ ರಕ್ತಪಾತವಿಲ್ಲದೆ ಹೇಗೆ ಪಾರಾಗಬೇಕೆಂದು ಅವನು ಒಂದೆರಡು ದಿನ ವಿಚಾರಮಾಡಿದನು. ರಹಸ್ಯದಲ್ಲಿ ಪಲಾಯನ ಮಾಡುವುದಕ್ಕೆ ಅವನ ಬಳಿಯ ದಳವು ಅಧಿಕವಾಗಿತ್ತು; ಅವರನ್ನೆಲ್ಲಾ ಕಟ್ಟಿಕೊಂಡರೆ, ಪಲಾಯನದಲ್ಲಿ ಗುಟ್ಟು ನಿಲ್ಲಲಾರದು. ಬಹಿರಂಗ ಯುದ್ಧವನ್ನು ಮಾಡುವುದಕ್ಕೆ ದಳವು ಅಲ್ಪವಾಗಿತ್ತು; ಅಲ್ಪಸೇನೆಯನ್ನು ನಂಬಿ ಯುದ್ಧಮಾಡುವುದು ಹುಚ್ಚುತನವೆಂದು ಶಿವಾಜಿ ಎಣಿಸಿದನು.

ನಾಲ್ಕು ದಿನಗಳು ಕಳೆದುಹೋದುವು. ರಾಜಸಿಂಹನು ದಿನಕ್ಕೆ ಅನೇಕಾವರ್ತಿ ಮರಾಟರ ಪಾಳಯಕ್ಕೆ ಬಂದು ಹೋಗಿ, ಶಿವಾಜಿಗೆ ಬೇಕು ಬೇಕಾದುದನ್ನು ಒದಗಿಸುತ್ತ, ಆತನು ಉಳುಕೊಂಡ ಮಂದಿರ ವಿಷಯವಾಗಿ ಬಹಳ ಶ್ರಮಗೊಳ್ಳುತ್ತ, ಶಿವಾಜಿಯು ಮಹಾಹಿತಚಿಂತಕನೆಂದು ನಟಿಸುತ್ತ ಇರುವುದನ್ನು ಶಿವಾಜಿಯು ತಿಳಿದುಕೊಂಡನು. ಅದಕ್ಕೆ ತಕ್ಕುದಾದ ಪ್ರತಿಕಾರವನ್ನು ಮಾಡಲು ಉದ್ಯೋಗಿಸಿದನು. ಅವನ ಸರ್ವವ್ಯಾಪಕ ಬುದ್ಧಿಯ ಮುಂದೆ ಅವರಂಗಜೇಬನ ಪ್ರಯತ್ನಗಳೂ ರಾಜಸಿಂಹನ ಕಾರ್ಯಗಳೂ ಕುಂಠಿತವಾದುವು. ಈ ಸಂದರ್ಭದಲ್ಲಿ ಶಿವಾಜಿಯ ಕುಲದೇವತೆಯಾದ ಭವಾನಿಯು ಅವನ ಮೈಮೇಲೆ ಬಂದು, "ಶಿವಾ, ಹೆದರಬೇಡ. ಯಾವಾತನು ಜನನೀಜನ್ಮಭೂಮಿಯನ್ನು ಪ್ರೀತಿಸಿ, ಅದನ್ನು ಉದ್ಧಾರ ಮಾಡಲು ಪ್ರಯ

ಶ್ರಿಸುವನೋ, ಅವನು ನನ್ನ ಭಕ್ತನು, ಭಕ್ತರಲ್ಲಿ ಭಕ್ತನು. ಅವನಿಗೆ ಯಾವುದೊಂದು ಆಪತ್ತೂ ತಗಲಲಾರದು. ಅಂತಹನನ್ನು ಹಾಳುಮಾಡಲು ಬಗೆದವರು ಆ ದೇಶವತ್ಸಲನ ವೈಭವ ಪ್ರಭಾವವನ್ನು ನೋಡುವುದಕ್ಕೆ ಉಳಿಯದೆ, ನರಕಕ್ಕೆ ಹೋಗುವರು. ನೀನು ಭಯಪಡಬೇಡ. ನಿನ್ನ ಕೋರಿಕೆಗಳೆಲ್ಲವೂ ಸಿದ್ಧಿಸುವುವು" ಎಂದು ಹೇಳಿದಳು.

ಇದಾದ ಎರಡು ದಿನಗಳ ಬಳಿಕ ಶಿವಾಜಿಯು ರಾಜಸಿಂಹನನ್ನು ಕರೆಯಿಸಿ, "ನಮ್ಮ ಸೈನಿಕರೆಲ್ಲರೂ ಮಾರ್ಗಾಯಾಸದಿಂದ ಮೊದಲೇ ಬಳಲಿದ್ದರು. ಇಲ್ಲಿನ ಹವೆಯು ನಮಗೆ ಹಿತಕರವಾಗುವುದಿಲ್ಲ. ಹಾಗೂ ನೀರೂ ಗಾಳಿಯೂ ನಮ್ಮೆಲ್ಲರ ಆರೋಗ್ಯವನ್ನು ಕೆಡಿಸಿವೆ. ಏನಾದರೂ ಪ್ರಮಾದ ಸಂಭವಿಸಿದರೆ, ನಾವು ಢಿಲ್ಲಿಗೆ ಬಂದುದೇ ತಪ್ಪಾಯಿತೆಂದು ತಿಳಿಯಬೇಕಾಗುವುದು. ನಮ್ಮ ಸೈನಿಕರು ನಮ್ಮ ದೇಹವನ್ನು ನೆರಳಿನಂತೆ ಹಿಂಬಾಲಿಸುತ್ತಾರೆಂಬುದು ನಿಜ; ಆದರೂ ಅವರನ್ನೆಲ್ಲ ಊರಿಗೆ ಕಳುಹಿಸದೆ ನಿರ್ವಾಹವಿಲ್ಲ. ನಾವು ಅವರನ್ನೆಲ್ಲ ಹಿಂದಕ್ಕೆ ಕಳುಹಿಸಬೇಕೆಂದು ನಿಶ್ಚೈಸಿರುವೆವು. ಅವರಿಗೆ ಬಾದಶಹರ ಹೆಸರಿನಲ್ಲಿ 'ರಹದಾರಿ' ಗಳನ್ನು ಕೊಡಿಸ ಬೇಕಾಗಿ ಅಪೇಕ್ಷಿಸುತ್ತೇನೆ" ಎಂದು ಹೇಳಿದನು. ರಾಜಸಿಂಹನು ಬಾದಶಹನಿಗೆ ಶಿವಾಜಿಯ ಪ್ರಾರ್ಥನೆಯನ್ನು ಅರಿಕೆ ಮಾಡಿದನು. ಅವರಂಗಜೇಬನು ಆ ಪ್ರಸ್ತಾಪಕ್ಕೆ ಒಪ್ಪಿದನು. ಶಿವಾಜಿಯ ಆಪ್ತ ಅನುಚರರಲ್ಲದೆ ಮಿಕ್ಕ ವರೆಲ್ಲರೂ ಯಜಮಾನನ ನಿರ್ಬಂಧದಿಂದ ಊರಿಗೆ ಮರಳಿದರು.

ಸೈನಿಕರೆಲ್ಲರು ಹಿಂದೆರಳಿದ ಬಳಿಕ ಶಿವಾಜಿಯು ಮೈಯಲ್ಲಿ ಸ್ವಸ್ಥವಿಲ್ಲವೆಂದು ಹಾಸಿಗೆ ಹಿಡಿದು ಮಲಗಿದನು. ಶಿವಾಜಿಯ ಅಸ್ವಸ್ಥತೆಯ ಸುದ್ದಿಯು ಢಿಲ್ಲಿಯಲ್ಲೆಲ್ಲಾ ಹಬ್ಬಿತು. ಜನರು ಶಿವಾಜಿಯನ್ನು ನೋಡುವುದಕ್ಕೆ ಗುಂಪುಗುಂಪಾಗಿ ಶಿಬಿರಕ್ಕೆ ಬಂದರು. ಆದರೆ ರಾಜಸಿಂಹನ ಮುಅಜಮನ ಹೊರತು ಮಿಕ್ಕವರಿಗೆ ಶಿವಾಜಿಯನ್ನು ನೋಡುವುದಕ್ಕೆ ಅಪ್ಪಣೆಯಿರಲಿಲ್ಲ. ಇವರಿಬ್ಬರು ಸಹ ಶಿವಾಜಿಯು ನಿಜವಾಗಿ ಅಸ್ವಸ್ಥನಾಗಿರುವನೋ ಇಲ್ಲವೋ ಎಂದು ಸರಿಯಾಗಿ ತಿಳಿಯದೆ ಹೋದರು. ಶಿವಾಜಿಯ ಅಸ್ವಸ್ಥದಿಂದ ಎಲ್ಲರೂ ದುಃಖಿತರಾದರು. ಅವನ ಕ್ಷೇಮವನ್ನು ಎಲ್ಲರೂ ವಿಚಾರಿಸುತ್ತಿದ್ದರು. ಶೈಲಿನಿಯೂ ಪ್ರತಿದಿನ ತನ್ನ ತಂದೆಯು ಮನೆಗೆ ಬಂದೊಡನೆ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಳು. ಶಿವಾಜಿಯು ಹೇಗಿರುವನೆಂದು ನೋಡುವುದಕ್ಕೆ ಅವಳ ಪ್ರಾಣವು ತುಡಿದುಕೊಳ್ಳುತ್ತಲಿತ್ತು. ಗುಪ್ತವೇಷದಿಂದ ಅವನಿದ್ದಲ್ಲಿಗೆ ಹೋಗುವೆನೆಂದು ಒಂದು ಸಲ ಯೋಚಿಸಿದಳು. ಒಡನೆ ತನ್ನನ್ನು ಯಾರಾದರೂ ಗುರುತಿಸಿದರೆ, ತನ್ನ ಅವಸ್ಥೆಯೂ ಅನ್ಯರ ಅವಸ್ಥೆಯೂ ಏನಾಗುವುದೆಂದು ಚಿಂತಿಸಿದಳು. ಅಸ್ವಸ್ಥವು ಸ್ವಲ್ಪ ಗುಣವಾದಂತೆ ಸುದ್ದಿ ಎದ್ದಿತು. ತಾನು ಕ್ಷೇಮವನ್ನು ಹೊಂದಿದುದಕ್ಕೆ ಶಿವಾಜಿಯು ಪ್ರತಿ ಬೃಹಸ್ಪತಿವಾರ ಗುರುಪೂಜೆಯನ್ನು ಮಾಡಲಾರಂಭಿಸಿದನು. ಪ್ರತಿ ಗುರುವಾರ ಹಗಲು ಮಹೋತ್ಸವ ದಿಂದ ಪೂಜೆಯನ್ನು ರಾತ್ರಿ ಭಗವನ್ನಾಮಸಂಕೀರ್ತನವನ್ನೂ ಮಾಡಿ ದೇವರಿಗೆ ನಿವೇದನ ಮಾಡಿದ ಭಕ್ಷ್ಯಾದಿ ಗಳನ್ನು ದೊಡ್ಡ ದೊಡ್ಡ ಬಿದಿರಬುಟ್ಟಿಗಳಲ್ಲಿ ತುಂಬಿ, ಬ್ರಾಹ್ಮಣರಿಗೂ ಮುಖ್ಯಮುಖ್ಯರಾದ ಅಧಿಕಾರಿಗಳಿಗೂ, ಬೈರಾಗಿಗಳಿಗೂ, ಫಕೀರರಿಗೂ ಹಂಚುವಂತೆ ಆಜ್ಞೆ ಮಾಡಿದನು. ಮೊದಮೊದಲು ಕಾವಲುಗಾರರು ಬುಟ್ಟಿ ಗಳನ್ನು ಶೋಧಿಸದೆ ಬಿಡುತ್ತಿರಲಿಲ್ಲ. ಪ್ರತಿ ಗುರುವಾರವೂ ಈ ರೀತಿಯಾಗಿ ಭಕ್ಷ್ಯದ ಬುಟ್ಟಿಗಳು ಹೋಗ ಲಾರಂಭಿಸಿದಂತೆ ಮೊಘಲ್ ಕಾವಲುಗಾರರು ತಮ್ಮ ತಮ್ಮ ಕಾರ್ಯದಲ್ಲಿ ಉದಾಸೀನರಾಗಿ, ಪರೀಕ್ಷೆ ಮಾಡದೆಯೇ ಬುಟ್ಟಿಗಳನ್ನು ಬಿಡುತ್ತ ಬಂದರು. ಶಿವಾಜಿಯು ಗುಣಹೊಂದುತ್ತ ಬರುವಷ್ಟಕ್ಕೆ ಈ ಪೂಜೆಯು ಮಹಾವೈಭವದಿಂದ ನಡೆಯುತೊಡಗಿತು. ಈ ವೈಭವವು ಹೆಚ್ಚಿದಷ್ಟಕ್ಕೆ ಕಾವಲುಗಾರರ ಕಾರ್ಯ ಸಡಿಲ

ವಾಗುತ್ತ ಬಂದವು. ಶಿವಾಜಿಯು ಯಾವ ಉಪಾಯಗಳಿಂದ ತನ್ನ ಉದ್ದೇಶವನ್ನು ಕೊನೆಗಾಣಿಸಬೇಕೆಂದಿದ್ದನೋ ಆ ಉಪಾಯಗಳು ಫಲಿಸುವುದಕ್ಕೆ ಅನುಕೂಲವಾಗಿ ಸಮಯವು ಬಂದೊದಗಿತು.

ಅವರಂಗಜೇಬನು ಶಿವಾಜಿಯ ಪೂಜಾಕೃತ್ಯಗಳನ್ನು ನೋಡಿ ಮಾಯಾವಿಯಾದನು. ಶಿವಾಜಿಯು ಅವುಗಳನ್ನು ಏಕೆ ನಡೆಯಿಸುವನೆಂದು ರಾಜಸಿಂಹನೊಡನೆ ವಿಚಾರಿಸಿದನು. ರಾಜಸಿಂಹನು ಅವುಗಳಿಂದ ಮೋಸವೇನೂ ಇರಲಾರದೆಂದು ಬಾದಶಹನಿಗೆ ಭರವಸೆಯಿತ್ತನು. ಸಂದೇಹಗ್ರಸ್ತನಾದ ಬಾದಶಹನಿಗೆ ಈ ಉತ್ತರವು ಸಮರ್ಪಕವಾಗಲಿಲ್ಲ. ಶಿವಾಜಿಯ ಮೇಲಿನ ಕಾವಲನ್ನು ಬಿಗಿಮಾಡುವಂತೆ ಅವನು ತನ್ನ ಸೈನಿಕರಿಗೆ ಆಜ್ಞೆ ಮಾಡಿದನು. ಹಾಗೂ ತಾವು ಯೋಚಿಸಿದ ಕಾರ್ಯವನ್ನು ಬೇಗನೆ ನೆರವೇರಿಸಬೇಕೆಂದು ರಾಜಸಿಂಹನಿಗೆ ಸೂಚಿಸಿದನು. ಎಂದಿನಂತೆ ಬೃಹಸ್ಪತಿವಾರವು ಬಂದಿತು. ಪೂಜೆಯು ಸ್ವಲ್ಪ ವಿಳಂಬವಾಗಿ ನಡೆಯಿತು. ರಾತ್ರಿ 4 ಗಳಿಗೆಯಾಯಿತು. ಭಿಕ್ಷುಕರೂ. ಬಡವರೂ, ಪೀರರೂ, ಫಕೀರರೂ, ಶಿವಾಜಿಯ ಶಿಬಿರವನ್ನು ಮುತ್ತಿ ಕೊಂಡಿದ್ದರು. ಎಂದಿನಂತೆ ಭಕ್ಷ್ಯ ಭೋಜ್ಯಗಳನ್ನು ಎಲ್ಲರಿಗೂ ಹಂಚಿದರು. ಬ್ರಾಹ್ಮಣರು ದಕ್ಷಿಣೆಗಳಿಂದ ಸಂತೃಪ್ತರಾಗಿ ಶಿವಾಜಿಯನ್ನು ಹರಸಿ ಹೋದರು. ನೂರಾರು ಬುಟ್ಟಿಗಳನ್ನು ಧರಿಸಿ, ಅನಾಥರೂ ಅಶನಾರ್ಥಿ ಗಳೂ ಕೋಟೆಯ ಮಾರ್ಗವಾಗಿ ನಡೆದರು. ಇವರ ನಡುವಿನಲ್ಲಿ "ಭೀಮಕಾಯರಾದ ಇಬ್ಬರು ಮಾವಾಳಿಗಳು ಎರಡು ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮನೆಯಿಂದ ಹೊರಟು, ಢಿಲ್ಲಿಯಿಂದಾಚೆ"ಗೆ ನುಸುಳಿಬಿಟ್ಟರು. ಮುಸಲ್ಮಾನ್ ಕಾವಲುಗಾರರು ತಮಗೆ ಸಿಕ್ಕಿದ ಖಾದ್ಯ ಪದಾರ್ಥಗಳ ವಿಚಾರದಲ್ಲಿ ಮಗ್ನರಾಗಿದ್ದುದರಿಂದ. ಬರುವವರ, ಹೋಗುವವರ ಬುಟ್ಟಿಗಳನ್ನು ಪರೀಕ್ಷಿಸಿ ನೋಡದೆ, ತಲೆಯ ಮೇಲೆ ಬುಟ್ಟಿ ಹೊತ್ತವರನ್ನು ಹೊರಕ್ಕೆ ಹೋಗಬಿಟ್ಟರು. ಕತ್ತಲು ಬಲವಾಗುತ್ತ ಬಂದಿತು. ಕೋಟೆಯ ಹೊರಕ್ಕೆ ಹೋಗುವವರೆಲ್ಲರೂ ಅವಸರಗೊಂಡರು. ಪಹರೆಯವರು ರಾತ್ರಿಯಾಯಿತೆಂದು ಕೋಟೆಯ ಹೆಬ್ಬಾಗಿಲನ್ನು ಮುಚ್ಚಿಬಿಟ್ಟರು. ಇದುವರೆಗೆ ಅಂಬೋಧಿಯಂತೆ ಕಲಕಲಮಯವಾದ ಶಿಬಿರವು ನಿರ್ಜನವಾದ ಕಾಂತಾರದಂತೆ ನಿಶ್ಶಬ್ದವಾಯಿತು.

ಕೃಷ್ಣಪಕ್ಷದ ಕಾಳಿಮೆಯ ರಾತ್ರಿ. ಆಕಾಶದಿಂದ ಸುರಿವ ತಿಮಿರ ಧಾರೆಯಲ್ಲಿ ಢಿಲ್ಲಿನಗರವು ನನೆದುಹೋಗಿ ಮುಸುಕಾಗಿ ತೋರುತ್ತಲಿತ್ತು. ಬಾದಶಹನ ಅರಮನೆಯಿಂದ ಒಬ್ಬ ಯುವಕನು ಹೊರಕ್ಕೆ ಬಂದನು. ಪಹರೆಯವನು ಕೈಯಲ್ಲಿದ್ದ ಆಯುಧವನ್ನು ಎತ್ತಿ ತೋರಿಸಿ, ರಾಜದ್ವಾರವನ್ನು ತೆರೆದುಬಿಟ್ಟನು. ಯುವಕನು ರಾಜಮಾರ್ಗಕ್ಕೆ ಇಳಿದನು. ಅವನ ಹಿಂದುಗಡೆಯಲ್ಲಿಯೇ ರಾಜದ್ವಾರವು ಕಣಕಣ ಶಬ್ದದಿಂದ ಮುಚ್ಚಲ್ಪಟ್ಟಿತು. ಯುವಕನು ಬಾದಶಹನ ಜ್ಯೇಷ್ಠಪುತ್ರನಾದ ಮುಅಜಮ್ ಆಗಿದ್ದನು. ಶಿವಾಜಿಯು ಪೂಜೆಯ ನೆವದಿಂದ ಹಂಚುತ್ತಲಿದ್ದ ಬುಟ್ಟಿಗಳನ್ನು ಪುನಃ ಪರೀಕ್ಷಿಸಬೇಕೆಂದು ಮುಅಜಮನು ಸಾಯಂಕಾಲದಲ್ಲಿಯೇ ಆಜ್ಞಪ್ತ ನಾಗಿದ್ದನು. ತಂದೆಯ ಈ ಆಜ್ಞೆಯನ್ನು ಶಿರಸಾವಹಿಸುವುದು ಯುವಕನಿಗೆ ಅಸಾಧ್ಯವಾಗಿತ್ತು. ಅದಕ್ಕೆ ಕಾರಣವೊಂದಿತ್ತು. ಸುರಾದೇವಿಯು ಅವನ ಶಿರಸ್ಸಿನಲ್ಲಿ ಆವಿರ್ಭವಿಸಿದ್ದುದರಿಂದ, ಪಿತೃವಿನ ಆಜ್ಞೆಗೆ ಅಲ್ಲಿ ಸ್ಥಳವಿರಲಿಲ್ಲ. ಬಾದಶಹನ ಆಜ್ಞೆಯನ್ನು ಮನಃಪೂರ್ವಕವಾಗಿ ಈ ಸತ್ಪುತ್ರನು ಪಾಲಿಸಿದ್ದರೆ, ಭಾರತವರ್ಷದ ಇತಿಹಾಸವು ಬೇರೊಂದು ರೂಪವನ್ನು ಹೊಂದುತ್ತಿತ್ತು. ಮುಅಜಮನು ನೆಟ್ಟಗೆ ಶಿವಾಜಿಯ ಶಿಬಿರದ ಕಡೆಗೆ ನಡೆಯುವ ಬದಲಾಗಿ ತೆರೆಮುಸಗಿದ ಕಡಲಿನಲ್ಲಿ ಚುಕ್ಕಾಣಿ ಇಲ್ಲದ ನಾವೆಯಂತೆ ಕಂಡ ಕಂಡ ಕಡೆಗೆ ಅಲೆದನು. ಕೊನೆಗೆ ಈ ನಾವೆಯು ರಾಜಸಿಂಹನ ಮಂದಿರದ ಬಳಿಯಲ್ಲಿ ಬಂದು ನಿಂತಿತು. ರಾಜಸಿಂಹನನ್ನು ಈಗ ತಾನೇ ಅರಮನೆಯಲ್ಲಿ ಸ್ವತಃ ನೋಡಿದ್ದರೂ, ಮುಅಜಮನು ಅವನನ್ನು ಕುರಿತು ಮನೆಯೊಳಗೆ

ವಿಚಾರಿಸಿದನು. ರಾಜಸಿಂಹನು ಮನೆಯಲ್ಲಿ ಇಲ್ಲದಿದ್ದರೂ ಮುಅಜಮನು ಅನೇಕಸಲ ಶೈಲಿನಿಯೊಡನೆ ಮಾತುಕತೆ ಮಾಡುವುದಕ್ಕೆ ಅವನ ಮನೆಗೆ ಬಂದು ಹೋಗುತ್ತಿದ್ದನು. ಶೈಲಿನಿಯ ಪ್ರಣಯವನ್ನು ಸಾಧಿಸುವುದಕ್ಕೆ ಅವನು ನಾನಾ ಉಪಾಯಗಳನ್ನು ಮಾಡಿದ್ದನು. ಒಂದು ಸಲ ನೂರಾರು ಸುರಾಪೂರಿತ ಸೀಸೆಗಳನ್ನು ತರಿಸಿಕೊಂಡು ಬಂದನು. ಶೈಲಿನಿಯು ಪ್ರಸನ್ನಳಾಗದೆ ಸುರೆಯನ್ನು ತಂದವನೊಡನೆ, "ಇವುಗಳು ನಮ್ಮಲ್ಲಿ ಬಿಕರಿಯಾಗವು. ಅವಕ್ಕೆ ಬಾದಶಹನ ಅಂತಃಪುರದಲ್ಲಿ ಬೆಲೆ ಬರುವುದು" ಎಂದು ಮುಅಜಮನು ಕೇಳುವಂತೆ ಹೇಳಿ ನಡೆದುಬಿಟ್ಟಳು. ಮುಅಜಮನು ಸಿಟ್ಟುಗೊಂಡು ತನ್ನ ಪರಾಕ್ರಮವನ್ನು ತೋರಿಸುವುದಕ್ಕೆ ಮತ್ತಾವುದನ್ನೂ ಕಾಣದೆ, ಸೀಸೆಗಳ ಕೊರಳುಗಳನ್ನು ಮುರಿದು, ಕೆನ್ನೀರನ್ನು ಪಾನಮಾಡಿಬಿಟ್ಟನು. ಇನ್ನೊಮ್ಮೆ ಮುಅಜಮನು ಸ್ವತಃ ಹೋಗದೆ ತನ್ನದೊಂದು ತಸಬೀರನ್ನೂ ಪ್ರಣಯ ಪತ್ರಿಕೆಯನ್ನೂ ಕಳುಹಿಸಿದನು. ಶೈಲಿನಿಯು ಪ್ರತಿಯಾಗಿ "ನಿನ್ನ ಪ್ರಣಯ ಪಾತ್ರಳ ತಸಬೀರು ಇಲ್ಲದೆ ಇದ್ದುದರಿಂದ, ಅದರ ಮಾತ್ರಿಕೆ (ಒರಿಜಿನಲ್ ಕಾಪಿ)ಯನ್ನು ಕಳುಹಿಸಿರುವೆನು" ಎಂದು ಪತ್ರ ಬರೆದು ಸಿಪಾಯಿಯ ಒಡನೆ ಒಂದು ದೊಡ್ಡ ವಾನರಿಯನ್ನು ಕಳುಹಿಸಿದಳು. ಮತ್ತೊಮ್ಮೆ ಮುಅಜಮನು ಶಿವಾಜಿಯ ವೇಷವನ್ನು ಅಳವಡಿಸಿಕೊಂಡು ಶೈಲಿನಿಯ ಮಂದಿರಕ್ಕೆ ಹೋದನು. ಶೈಲಿನಿಯು ಬಂದವನನ್ನು ಕುಳ್ಳಿರಿಸಿ, "ಸಿಂಹಚರ್ಮದಲ್ಲಿ ಕತ್ತೆ ಎಂಬ ಪಾರಸೀ ಕಥೆಯನ್ನು ಅವನಿಗೆ ಓದಲು ಕೊಟ್ಟು, ತನ್ನ ದಾಸಿಯನ್ನು ಕರೆದು, ಬಂದವನನ್ನು ಸತ್ಕರಿಸೆಂದು ಹೇಳಿ ಹೋಗಿಬಿಟ್ಟಳು. ಶೈಲಿನಿಯ ತಿರಸ್ಕಾರವನ್ನು ಮುಅಜಮನು ರಾಜಸಿಂಹನಿಗೆ ತಿಳಿಸಿದ್ದನು. ಹಾಗೂ ಅವಳು ಶಿವಾಜಿಯನ್ನು ಪ್ರೀತಿಸಿ, ಗುಪ್ತವೇಷದಿಂದ ಮರಾಟರ ಶಿಬಿರಕ್ಕೆ ಹೋಗುತ್ತಿದ್ದಳೆಂದು ಹೇಳಿದ್ದನು. ರಾಜಸಿಂಹನು ಕೋಪಾವಿಷ್ಟನಾಗಿ ಮಗಳನ್ನು ಅವಳ ಚಿಕ್ಕಮನೆಯಲ್ಲಿ ಮುಚ್ಚಿಟ್ಟನು. ಮಹಡಿಯ ಬಳಿಯಲ್ಲಿ ಬೆಳೆದಿದ್ದ ಮರವನ್ನು ಕಡಿದು ಹಾಕಿಸಿದನು. ಶೈಲಿನಿಯ ಸೆರೆಮನೆಯನ್ನು ಒಳಹೋಗಲು ಮುಅಜಮನಿಗಲ್ಲದೆ ಮತ್ಯಾರಿಗೂ ಅಪ್ಪಣೆಯಿರಲಿಲ್ಲ. ಶೈಲಿನಿಯು ಇದುವರೆಗೆ ತನಗೆ ತೋರಿಸಿದ ಅಲಕ್ಷ್ಯಭಾವಕ್ಕೂ ಹಾಸ್ಯಕರವಾದ ಆಚರಣೆಗೂ ತಕ್ಕದಾದ ಶಾಸ್ತಿಯನ್ನು ಮಾಡಬೇಕೆಂದು, ಮುಅಜಮನು ಈ ರಾತ್ರಿ ಶೈಲಿನಿ ಇದ್ದಲ್ಲಿಗೆ ಬಂದಿದ್ದನು.

ಮುಅಜಮನು ಉಪ್ಪರಿಗೆಯನ್ನು ಹತ್ತಿ, ಶೈಲಿನಿಯ ಮಂದಿರದ ಬಾಗಿಲನ್ನು ತೆರೆದು ಒಳಕ್ಕೆ ಕಾಲಿಟ್ಟನು. ಅಚ್ಚರಿಗೊಂಡ ಕಣ್ಣುಗಳಿಂದ ಬಾಯಿಬಿಟ್ಟು ಅಪ್ರತಿಭನಾಗಿ ಅಲ್ಲಿಯೇ ನಿಂತು ನೋಡಿದನು. ಶೈಲಿನಿಯು ಅಲ್ಲಿರಲಿಲ್ಲ. ದುರ್ಜನರ ಅಶುದ್ಧಾಚರಣೆಯಿಂದ ಹಾಳಾದ ಊರಿನಿಂದ ಪುರದೇವತೆಯು ತೊಲಗುವಂತೆ ಶೈಲಿನಿಯು ತನ್ನ ಮನೆಯಿಂದ ಓಡಿಹೋಗಿದ್ದಳು. ಕಣ್ದೆರೆದು ಎಲ್ಲಾ ಕಡೆಗಳಲ್ಲಿ ನೋಡಿದನು. ದೀಪವನ್ನು ಕೈಯಲ್ಲಿ ಕೊಂಡು ಕೊಟ್ಟಡಿಯನ್ನೆಲ್ಲಾ ಹುಡುಕಿದನು. ಉನ್ನತವಾದ ಉಪ್ಪರಿಗೆಯಲ್ಲಿ ಬಂಧಿತಳಾದವಳು ಅಲ್ಲಿಂದ ಹೇಗೆ ಜಾರಿಹೋದಳೆಂದು ನೋಡುತ್ತಿರುವಾಗ ಅವನಿಗೆ ಒಂದಕ್ಕೊಂದು ಜೋಡಾಗಿ ಬಿಗಿದ, ಒಂದು ಕೊನೆಯನ್ನು ಕೊಟ್ಟಡಿಯ ತೊಲೆಗೆ ಸುತ್ತಿ, ಮತ್ತೊಂದನ್ನು ಕಿಟಕಿಯಿಂದ ಕೆಳಗೆ ಇಳಿಬಿಟ್ಟ, ಎರಡು ಪಟ್ಟೆಯ ಸೀರೆಗಳು ಕಂಡುಬಂದವು. ಶೈಲಿನಿಯು ಇವುಗಳ ಸಹಾಯದಿಂದ ಕೆಳಕ್ಕೆ ಇಳಿದು, ಪಲಾಯನ ಮಾಡಿರಬೇಕೆಂದು ಮುಅಜಮನು ತಿಳಿದುಕೊಂಡನು. ಇನ್ನೂ ಕಾಲಕಳೆದರೆ ಕಾರ್ಯವು ಕೆಟ್ಟುಹೋಗುವುದೆಂದು ಎಣಿಸಿ, ಅವಳನ್ನು ಹುಡುಕುವುದಕ್ಕೆ ಹೊರಟನು. ಮೊದಲು ಶೈಲಿನಿಯು ಮರಾಟರ ಶಿಬಿರಕ್ಕೆ ಓಡಿಹೋಗಿರಬಹುದೆಂದು ಅವನು ನಿಶ್ಚಯಿಸಿದನು. ಅವನ ಊಹೆಗೆ ಕಾರಣವಿಲ್ಲದಿರಲಿಲ್ಲ. ಇದು ಅವನ ಮನಸ್ಸಿಗೆ ಹೊಳೆದೊಡನೆ ಅವಳನ್ನು ಹಿಡಿದುತಂದು, ಅವಳ ತಂದೆಯ ವಶದಲ್ಲಿ ಕೊಟ್ಟು ಅವಳು ಮಾಡಿದ

ದುಷ್ಕಾರ್ಯವನ್ನು ಅವಳ ಮುಖಕ್ಕೆ ಇಟ್ಟು ತನ್ನ ಪರಾಕ್ರಮವನ್ನು ತೋರಿಸಬೇಕೆಂದು ಅವನು ನಿರ್ಧರಿಸಿ ಕೆಳಕ್ಕೆ ಇಳಿದನು. "ಅಂದು ನಾನು ಕಾಲಿಗೆ ಎರಗಿದಾಗ ನನ್ನನ್ನು ಎಡವಿ ಒದ್ದುಬಿಟ್ಟಳು. ತಾಯಿ ತಂದೆಗಳಿಗೆ ನಮಸ್ಕರಿಸಿದ ನನ್ನ ಪವಿತ್ರ ಮಸ್ತಕವನ್ನು ಈ ಮೂಳಿಯು ಚೆಂಡಾಡಿದಂತೆ ಒದೆದುಬಿಟ್ಟಳು. ಈ 'ಹರಾಮ್ ಖೋರಿ' ಯನ್ನು ಮೂಗುದಾರ ಹಿಡಿದು, ಹಟ್ಟಿಗೆ ಒಯ್ಯದೆ ಬಿಡೆನು" ಎಂದು ಮನಸ್ಸಿನಲ್ಲಿಯೇ ಅನ್ನುತ್ತ, ಮುಅಜಮನು ಮಾರ್ಗಕ್ಕೆ ಬಂದನು.

ರಾತ್ರಿ 10 ಗಳಿಗೆ ಕಳೆಯಿತು. ಪೃಥ್ವಿಗೆ ಗಂಢಾಂಧಕಾರವಾದ ಆವರಣವು ಸುತ್ತಿತ್ತು. ಶ್ರಾಂತವಾದ ಢಿಲ್ಲಿನಗರವು ಪ್ರಕೃತಿಯ ಸುಷುಪ್ತಿಯಲ್ಲಿ ಸ್ವಪ್ನಮಯವಾಗಿತ್ತು. ಮಾರ್ಗಗಳಲ್ಲೆಲ್ಲಾ ನಿರ್ಜನ, ನಿಶ್ಯಬ್ಧ, ಭೂಗಗನಗಳ ಅಂತರವು ಉಜ್ವಲವಾದ ನಕ್ಷತ್ರಗಳಿಂದ ಅಲ್ಲದೆ ತಿಳಿಯಲು ಅಸಾಧ್ಯ. ನೀಲವಾದ ಆಕಾಶದಲ್ಲಿ ಪ್ರಭಾಪುಂಜದಂತಿರುವ ಸಾವಿರಾರು ನಕ್ಷತ್ರಗಳು. ಕರಿಕಂಬಳಿಯಲ್ಲಿ ದಟ್ಟವಾಗಿ ಚಿಮುಕಿಸಿದ ವಜ್ರದ ಗೊಂಚಲುಗಳಂತಿರುವ ನಕ್ಷತ್ರಗಳು. ಈ ನಿಶಿಯಲ್ಲಿ ಶೈಲಿನಿಯು ಒಬ್ಬಳೇ ನಡೆದುಬಿಟ್ಟಿದ್ದಳು. ಎಲ್ಲಿಗೆ ಹೋಗುತ್ತಿದ್ದಳೆಂಬುದು ವಾಚಕರಿಗೆ ತಿಳಿದಿದೆ. ರಾಜಮಾರ್ಗದಿಂದ ಕವಲಾಗಿ ಹೋದ, ಅಳಿಸಿದ ಕಾಲು ಹಾದಿಯನ್ನು ಹಿಡಿದು ಅವಳು ಹೋಗುತ್ತಿದ್ದಳು. ಹಾದಿಯಲ್ಲಿ ಜನಸಂಚಾರವಿರಲಿಲ್ಲ. ಇದ್ದರೂ ಶೈಲಿನಿಯ ಗುರುತು ಯಾರಿಗೂ ಹತ್ತದು. ಮೊದಲೇ ಅಂಧಕಾರ; ಅದರಮೇಲೆ ಅವಳು ಗಂಡು ಉಡುಪನ್ನು ಉಟ್ಟುಕೊಂಡಿದ್ದಳು. ಆ ಕಾಲದಲ್ಲಿ ರೋಗಿಗಳ ಚಿಕಿತ್ಸೆಗೆ ಹೋಗುವ 'ಹಕೀಮರು' ಯಾವ ಉಡುಪನ್ನು ಧರಿಸಿಕೊಳ್ಳುತ್ತಿದ್ದರೋ, ಆ ವೇಷವನ್ನು ಶೈಲಿನಿಯು ಇಂದು ಅಳವಡಿಸಿದ್ದಳು. ಇದೇ ವೇಷದಲ್ಲಿ ಅವಳು ಈ ಮೊದಲು ಒಂದೆರಡು ಸಲ ಮರಾಟರ ಶಿಬಿರಕ್ಕೆ ಹೋಗಿದ್ದಳು. ಅವಳ 'ಇಚ್ಛಿತವರ'ನು ಸಂಕೇತ ಮಾಡಿದ ರಾತ್ರಿಯಲ್ಲೇ ಶೈಲಿನಿಯು ಅವನ ಆಶಾನುಬದ್ಧಳಾಗಿ ಒಂದು ಗುರುವಾರ ಹೋದಳು. ಆದರೆ ಆದಿನ ಶಿವಾಜಿಯು ತನ್ನ ಪರಿಜನರೊಡನೆ ಯಾವುದೋ ಒಂದು ರಾಜ್ಯಾಲೋಚನೆಯನ್ನು ಕುರಿತು ವಿಚಾರಮಗ್ನನಾಗಿದ್ದುದರಿಂದ, ಶೈಲಿನಿಯು ಕೃತಕಾರ್ಯಳಾಗಲಿಲ್ಲ. ಶಿವಾಜಿಯ ಅಸ್ವಸ್ಥವು ಶೈಲಿನಿಯ ಪುನರಾಗಮನಕ್ಕೆ ಕಾರಣವಾಯಿತು. ಶಿವಾಜಿಗೆ ಮೂಲಿಕೆಯನ್ನು ತಂದುಕೊಡುವ ನಿಮಿತ್ತವಾಗಿ ಶೈಲಿನಿಯು 'ಹಕೀಮ' ವೇಷದಲ್ಲಿ ಬಂದು ಹೋಗುತ್ತಿದ್ದಳು. ಇದೆಲ್ಲವನ್ನು ಶಿವಾಜಿಯು ಅರಿತಿದ್ದನೋ ಇಲ್ಲವೋ ತಿಳಿಯದು. ಆದರೆ 'ಹಕೀಮ' ನನ್ನು ಮರಾಟರು ಶಿಬಿರದಲ್ಲಿ ಪ್ರವೇಶ ಮಾಡುವುದಕ್ಕೆ ಯಾರು ಅಡ್ಡಿ ಮಾಡುತ್ತಿರಲಿಲ್ಲ. ಅವಳು ಒಳಹೋಗಿ ಯಾರೋ ಒಬ್ಬನ ಕೂಡೆ ಮಾತನಾಡಿ ಮರಳಿಹೋಗುತ್ತಿದ್ದಳು. ಈ ಕಥಾಪ್ರಾರಂಭದಲ್ಲಿ, ಯಾರು ರಹಸ್ಯವಾಗಿ ಶೈಲಿನಿಯ ಮಂದಿರದ ಮರ ಹತ್ತಿ ಅವಳ ಪಾಣಿಗ್ರಹಣ ಮಾಡಿದನೋ ಆ ಮಹಾಶಯನೊಡನೆ ಮಾತನಾಡಿ ಶೈಲಿನಿಯು ಮನೆಗೆ ಹಿಂತೆರಳುತ್ತಿದ್ದಳು. ಎರಡು ದಿವಸಗಳ ಹಿಂದೆ, ಇವರಿಬ್ಬರು ಮರಾಟರ ಶಿಬಿರದ ಬಳಿಯಲ್ಲಿ ಏಕಾಂತವಾಗಿ ಪ್ರಣಯಸಲ್ಲಾಪ ಮಾಡುತ್ತಿದ್ದಾಗ ಮುಅಜಮನು ಶೈಲಿನಿಯ ಗುರುತು ಹಿಡಿದನು; ಮುಅಜಮನು ಅವರ ಸಂಭಾಷಣೆಗೆ ವಿಘ್ನವಾಗಿ ಬಂದುದು ಮಾತ್ರವಲ್ಲ. ಅದಕ್ಕಿಂತಲೂ ಸ್ವಲ್ಪ ದೂರಕ್ಕೆ ಹೋದನು. ಅವಳು ಕೋಪಗೊಂಡು ತನ್ನ ಕೈಬಿಟ್ಟಿದ್ದು ಒಂದು; ಅನ್ಯರಿಗೆ ಕೈಕೊಟ್ಟಿದ್ದು ಒಂದು. ಇವೆರಡರಿಂದ ಮುಅಜಮನು ರೋಷಾವೇಶಗೊಂಡನು. ಅವನು ಶೈಲಿನಿಯ ವಿಷಯವಾಗಿ ರಾಜಸಿಂಹನ ಕಿವಿಯಲ್ಲಿ ದೂರು ಸುರಿದನು. "ಶಿವಾಜಿಯು ನಿನ್ನ ಮಗಳನ್ನು ಎತ್ತಿಕೊಳ್ಳುವನು" ಎಂದು ಗದ್ದಲ ಹಚ್ಚಿದನು. ಮುಅಜಮನ ಈ ಮಾತಿನಿಂದ ಶಿವಾಜಿಯ ಮೇಲೆ ರಾಜಸಿಂಹನಿಗೆ ಇದ್ದ ಅಲಕ್ಷ್ಯಭಾವವು ದ್ವೇಷವಾಗಿ ಪರಿಣಮಿಸಿತು. ಮಗಳು ಜಾರಿಹೋಗದಂತೆ ರಾಜಸಿಂಹನು ಅವಳನ್ನು ಕೊಟ್ಟಡಿಯಲ್ಲಿ ಮುಚ್ಚಿಟ್ಟನು. ದಿನಕ್ಕೆ ಎರಡು ಬಾರಿ

ರಾಜಸಿಂಹನು ಅವಳನ್ನು ನೋಡುವನು; ಆದರೆ ಪೂರ್ವದಂತೆ ಮಾತನಾಡುತ್ತಿರಲಿಲ್ಲ. ರಾಜಸಿಂಹನ ದರ್ಶನವಾಗುತ್ತಲೇ ಬಂಧಿತಳಾದ ಶೈಲಿನಿಯು "ಶಿವಾಜಿ ಮಹಾರಾಜರು ಹೇಗಿರುವರು?" ಎಂದು ಕೇಳುವಳು. ತಂದೆಯು ಮಾತಿಲ್ಲದವನಾಗಿ, ಶಿವಾಜಿಯ ಪೂರ್ವಜರ ನಾಮಸ್ಮರಣೆ ಮಾಡುತ್ತ ಮಹಡಿಯಿಂದ ಕೆಳಕ್ಕೆ ಇಳಿದು ಹೋಗುವನು. ಈ ದಿನ ರಾಜಸಿಂಹನು ಕಾರ್ಯಗೌರವದಿಂದ ಅರಮನೆಯಲ್ಲಿ ಹಗಲೆಲ್ಲಾ ತಳುವಿದ್ದನು. ಯಾವ ಕಾರ್ಯ ವಿಶೇಷದಿಂದ ಅವನು ವಿಳಂಬಿಸಿದ್ದನೋ ಅದನ್ನು ಶೈಲಿನಿಯು ತಿಳಿದಿದ್ದಳು. ರಾಜಸಿಂಹನು ಹಿಂದಿನ ರಾತ್ರಿ ಮುಅಜಮನೊಡನೆ ಬಾದಶಹನ ಯಾವ ಆಜ್ಞೆಯನ್ನು ತಾವು ಮನ್ನಿಸಬೇಕೆಂಬ ವಿಷಯದಲ್ಲಿ ಮಾತುಕಥೆಯನ್ನು ನಡೆಯಿಸುತ್ತಲಿದ್ದನೋ, ಆ ಮಾತುಗಳನ್ನೆಲ್ಲಾ ಶೈಲಿನಿಯು ಮಹಡಿಯ ಕೊಟ್ಟಡಿಯಲ್ಲಿ ಇದ್ದು ಕೇಳಿದಳು. ಅದಕ್ಕೋಸ್ಕರವೇ ಅವಳ ಹೃದಯವು ಮರಾಟರ ಶಿಬಿರಕ್ಕೆ ಹಾರಿಹೋಗುವುದಕ್ಕೆ ಸಂಕಷ್ಟಗೊಳ್ಳುತ್ತಲಿತ್ತು.

ಶೈಲಿನಿಯು ಕಾಲುನಡೆಯಾಗಿ ಹೋಗುತ್ತಿದ್ದಳು. ಹಾದಿಯಲ್ಲಿ ತಾನೇ ಆತ್ಮಗತ ವಿಚಾರ ಮಾಡುತ್ತಿದ್ದಳು. ಅವಳ ಇದಿರಿಗೆ ಆಕಾಶದಲ್ಲಿ ಚಂದ್ರನು ಉದಯವಾಗುತ್ತಲಿದ್ದನು. ರೋಹಿಣಿ ನಕ್ಷತ್ರವು ಚಂದ್ರನ ಸಮಿಪಕ್ಕೆ ಬರುವಂತೆ ಅವಸರಗೊಳ್ಳುತ್ತಲಿತ್ತು. ಶೈಲಿನಿಯು ನಿಶಾನಾಥನನ್ನು ನೋಡಿ ಏನೇನೋ ಹೇಳತೊಡಗಿದಳು. "ಚಂದ್ರನೇ, ನೀನು ವಿರಹಿಗಳ ವೈರಿ ಎಂಬುದು ನಿಜವೇ? ನೀನು ಕಾಮುಕರ ತಾಪಕಾರಕನೆಂಬುದು ಸತ್ಯವೇ? ಹಾಗಿದ್ದರೆ ಈ ಕತ್ತಲಾದ, ಕಂಗಾಣದ ಹಾದಿಯಲ್ಲಿ ನನ್ನ ಮಾರ್ಗದರ್ಶಕನಾಗಿ ಏಕೆ ಉದಯಿಸುತ್ತಲಿರುವೇ? ನಿನ್ನ ರೋಹಿಣಿಯು ನಿನ್ನ ಸಮಿಪಕ್ಕೆ ಬರುತ್ತಿರುವಳು. ನೀನು ದೂರ ದೂರಕ್ಕೆ ಹೋಗುತ್ತಿರುವುದೇಕೆ? ನನ್ನ ಜೀವಿತೇಶನು ನಿನ್ನಂತೆ ಗಗನದಲ್ಲಿ ಚಲಿಸುತ್ತಿದ್ದರೆ, ನಾನು ರೋಹಿಣಿಯಂತೆ ಅವನನ್ನು ಅನುವರ್ತಿಸುತ್ತಿದ್ದೆನು. ನನ್ನ ಪ್ರಿಯನು ನಿನ್ನಂತೆಯೇ ಇರುವನು; ನಿನ್ನಂತೆಯೇ ಸೌಂದರ್ಯಮಯನು; ಸುಧಾಮಯನು; ಶಾಂತನು ಛೀ. ಛೀ. ಈ ಸಾಮ್ಯವು ಸರಿಹೋಗದು. ಅವನ ಪ್ರೀತಿಯು ನಿನ್ನಂತೆ ದಿನೇ ದಿನೇ ಕುಂದಬಹುದೇ? ನೀನು ರೋಹಿಣಿಯಿಂದ ದೂರಕ್ಕೆ ಮನಸ್ವಿಯಾಗಿ ಸಾರುವಂತೆ, ಅವನ ಪ್ರೀತಿಯು ಗಳಿತವಾಗಬಹುದೇ? ಹಾಗೆ ಪ್ರೇಮವು ಕುಂದದಿದ್ದರೆ ಮೊನ್ನೆ ನನ್ನೊಡನೆ ಏತಕ್ಕೆ ಅಷ್ಟು ಉದಾಸೀನನಾದನು? ನಾವು ಏಕಾಂತದಲ್ಲಿದ್ದರೂ ನನ್ನನ್ನು ಸರಿಯಾಗಿ ಆದರಿಸಲಿಲ್ಲವೇಕೆ? ನನ್ನ ಪ್ರೇಮಸಲ್ಲಾಪವನ್ನು ಕಲ್ಲುನುಡಿಗಳಿಂದ ಜಗುಳಿಸಿದನೇಕೆ? "ನನ್ನ ಪ್ರೇಮಪಾಶದಲ್ಲಿ ಸಿಕ್ಕಿ ಮೋಸಹೋದೆ" ಎಂದು ಮೈಮರೆತಂತೆ ಹೇಳಿದನೇತಕ್ಕೆ? ನನ್ನನ್ನು ಮಧುರವಾದ ಮಾತುಗಳಿಂದ ಕಳುಹಿಸಿಕೊಡಲಿಲ್ಲವೇಕೆ? ಛೀ. ಮನವೇ, ಕೊಂಚ ತಡೆ, ತಡೆ. ಸುಮ್ಮನೆ ಬಹಳ ದೂರಕ್ಕೆ ಯೋಚಿಸುತ್ತಿರುವೆ. ನೀನೂ ಅವನ ಪಕ್ಷವಾಗಿ ಹೇಳಲಾರೆಯಾ? ಶಿವಾಜಿಯು ಕಾರ್ಯಾಂತರದಲ್ಲಿರಬಹುದು. ದುಷ್ಟ ಅವರಂಗಜೇಬನ ಬಂದಿಯಿಂದ ತಪ್ಪಿಸಿಕೊಳ್ಳುವ ವಿಚಾರದಲ್ಲಿ ಅವನ ಮನಸ್ಸು ಮಗ್ನವಾಗಿದ್ದಿರಬಹುದು. ಹಾಗೆ ಮಗ್ನವಾಗಿತ್ತು ಎಂದು ತಿಳಿಯಲೆ? ಆದರೂ ಈ ಹತಭಾಗಿನಿಗೆ ಆ ಹೃದಯದಲ್ಲಿ ಒಂದು ಎಡೆಯಿಲ್ಲವೇ? ರಾಜ್ಯಕಾರ್ಯವು ವಿಶೇಷವಾದ ಮಾತ್ರಕ್ಕೆ ಅರಸರು ತಮ್ಮ ಪ್ರಾಣವಲ್ಲಭೆಯರನ್ನು ತ್ಯಜಿಸಿಬಿಡುವರೇ? ಬಿಡುವಂತಹವರು ಬಿಡುವರು. ಶ್ರೀರಾಮನು ತನ್ನ ಪತ್ನಿಯನ್ನು ತೊರೆದನು. ದೂರುವವರ ಬಾಯನ್ನು ಮುಚ್ಚುವುದಕ್ಕೆ ರಾಮನು ಜಾನಕಿಯ ಕೈಬಿಟ್ಟನು. ನನ್ನಲ್ಲಿ ದೋಷವೇನು? ಹಗಲೆಲ್ಲಾ ಪತಿದೇವತೆಯ ಧ್ಯಾನ ಮಾಡುತ್ತಾ, ಎಂದಿಗೆ ಸುಖಿಯಾಗುವೆನು ಎಂದು ಚಿಂತಿಸುತ್ತ ಇರುವುದು ದೋಷವೇ? ಇರುಳೆಲ್ಲಾ ನಿದ್ದೆಯಿಲ್ಲದೆ ನೆಲದ ಮೇಲೆ ಹೊರಳುತ್ತ, ಕನಸು ಕಂಡ ಮಾತ್ರಕ್ಕೆ ಸುಖಿಯೆಂದು ತಿಳಿದು, ಎಚ್ಚರವಾಗಿ, ನೋಡುವುದು ದೋಷವೇ? ತಂದೆಯ ಮಾತನ್ನು ಮೀರಿ,

ಅನೇಕ ನೃಪಕುಮಾರರನ್ನು ತ್ಯಜಿಸಿ, ನೀನೇ ಗತಿಯೆಂದು ನಂಬಿದುದು ದೋಷವೇ? ನಾನು ಮೂರ್ಖಳು. ಸುಮ್ಮನೆ ಹುಚ್ಚಳಂತೆ ಮಾತಾಡುವೆನು. ನನ್ನ ಮನಸ್ಸಿಗೆ ಭ್ರಮೆ. ನನ್ನ ಹುಚ್ಚು ಭ್ರಾಂತಿ. ಪತಿಯ ಪ್ರೇಮದಲ್ಲಿ ಸಂಶಯಪಡುವವಳು ಮೂರ್ಖಳಲ್ಲದೆ ಮತ್ತೇನು? ನನ್ನ ವಲ್ಲಭನ ಪ್ರೀತಿಯು ಅಚಲವಾದುದು; ಪರ್ವತದಂತೆ ಅಚಲವಾದುದು. ನಕ್ಷತ್ರದಂತೆ ಸ್ಥಿರವಾದುದು; ಅದು ಅಸ್ಥಿರವೆಂಬುದು ಚಲಿಸುತ್ತಿರುವವನ ಸುಳ್ಳು ಭಾವನೆಯಾಗಿದೆ. ಪತಿಯ ಪ್ರಣಯ ಮುಕುರದಲ್ಲಿ ನಮ್ಮ ಮನೋಭಾವವೇ ಪ್ರತಿಬಿಂಬಿಸುವುದಲ್ಲದೆ, ಅದು ತಾನೇ ವರ್ಣರಹಿತವಾದುದು. ನಾನು ಇದನ್ನೆಲ್ಲಾ ಚಿಂತಿಸುವುದಷ್ಟಕ್ಕೆ ನನ್ನ ನಡೆಯು ಹಿಂಜುವುದು. ನನ್ನ ವಿಳಂಬವು ಘೋರ ಪ್ರಮಾದಕ್ಕೆ ಕಾರಣವಾಗುವುದು. ಇಕೋ, ಶಿಬಿರವು ನನ್ನ ಮುಂದೆ ತೋರುವುದು. ಢಿಲ್ಲಿಯೇ! ನಿನಗೆ ನಮಸ್ಕಾರವು. ನಿನ್ನ ಧರ್ಮಾಂಧತೆಗೆ ನಿನ್ನ ಕುಹಕೋಪಾಯಗಳಿಗೆ, ನಿನ್ನ ರಾಜತಂತ್ರಗಳಿಗೆ, ನಿನ್ನ ದುಷ್ಕಾರ್ಯ ಕೌಶಲಕ್ಕೆ ತ್ರಾಹಿ ಎನ್ನುವೆನು. ನಮ್ಮ ಸ್ವಾತಂತ್ರ್ಯಾಪಹಾರಿಯಾದ ನಗರವೇ, ನಾನು ಇನ್ನು ನಿನ್ನ ಮುಖವನ್ನು ನೋಡಲಾರೆನು. ರಾಜಪುತ್ರರ ಸುವರ್ಣಕಾರಾಗೃಹವೇ, ಯಾವಾತನನ್ನು ನಿನ್ನ ಮೋಸದ ಕೈಗಳಿಂದ ಬಂಧಿಸಬೇಕೆಂದು ನೀನು ಉಪಾಯವನ್ನು ಮಾಡುತ್ತಿರುವೆಯೋ ಆತನ ಸಹಾಯದಿಂದಲೇ ನಾನು ನಿನ್ನ ಅಪವಿತ್ರ ಸ್ಥಳದಿಂದ ಮುಕ್ತಳಾಗುವೆನು. ನಿನ್ನ ಅಧೀಶ್ವರಿಯಾಗಿ ನಿನ್ನ ಸಾಮ್ರಾಜ್ಯರಥವನ್ನು ನಾನು ನಡೆಸುವುದಕ್ಕೆ ಧಿಕ್ಕಾರವಿರಲಿ. ನಾನು ಶಿವಾಜಿಯ ದಾಸಿಯಾಗಿ ಅವನ ರಾಜ್ಯವೆಂಬ ಮಂದಿರದ ಬಳಿಯಣ ಕಸವನ್ನು ಗುಡಿಸಿ ಈ ಜೀವ ಕಾಲವನ್ನು ಕಳೆಯುವೆನು."

ಅರಮನೆಯಲ್ಲಿ ಅವರಂಗಜೇಬನು ಈ ರಾತ್ರಿ ಏಕಾಂತದಲ್ಲಿ ರಾಜಕಾರ್ಯವನ್ನು ಕುರಿತು ಆಲೋಚಿಸುತ್ತಲಿದ್ದನು. ಮಂತ್ರಿಗಳು ಯಾರೂ ಅವನ ಬಳಿಯಲ್ಲಿ ಇರಲಿಲ್ಲ. ಬಾದಶಹನ ಬಲಗಡೆಯಲ್ಲಿ ರಾಜಸಿಂಹನು ನಿಂತಿದ್ದನು. ಸ್ವಲ್ಪ ದೂರದಲ್ಲಿ ಇಬ್ಬರು ಸಿಪಾಯರು ಕಾವಲಾಗಿದ್ದರು. ಬಾದಶಹನು ಹಣೆಯಲ್ಲಿ ನಿರಿಗೊಳಿಸಿ, "ನಮ್ಮ ಮನಸ್ಸು ಸ್ವಸ್ಥವಾಗಿಲ್ಲ. ಮರಾಟರ ಶಿಬಿರದಿಂದ ಏನೊಂದೂ ವರ್ತಮಾನ ಬರಲಿಲ್ಲ. ಹೋದ ಮುಅಜಮನು ಇನ್ನೂ ಬರಲಿಲ್ಲ. ನಮಗೆ ಯೋಚನೆ ಹತ್ತಿದೆ" ಎಂದು ಹೇಳಿದನು.

ರಾಜಸಿಂಹ:—"ಅಂತಹ ಯೋಚನೆಗೆ ಆಸ್ಪದವಿಲ್ಲ. ಈ ದೂತನು ಈಗ ತಾನೇ ಪಾಳೆಯದಿಂದ ಬಂದಿರುವನು. ಅವನು ಶಿವಾಜಿಯನ್ನು ಕಣ್ಣಾರೆ ನೋಡಿ ಬಂದಿರುವನು."

ಬಾದಶಹನು ಕೈಯಿಂದ ತಲೆಯನ್ನು ಸವರುತ್ತ, "ನೀವೆಲ್ಲರೂ ಹೇಗೆ ಹೇಳಿದರೂ, ನಮ್ಮ ಮನಸ್ಸಿಗೆ ಸಮಾಧಾನವಿಲ್ಲ. ಬೋನಿನಲ್ಲಿ ಬಿದ್ದ ಬೆಟ್ಟದ ಇಲಿಯು ತಪ್ಪಿಸಿಕೊಂಡಿರಬಹುದು ಎಂದು ನಮಗೆ ಶಂಕೆ ಉಂಟು. ನಮ್ಮ ಶಂಕೆ ಸುಳ್ಳಾಗಲಾರದು" ಎಂದನು.

ರಾಜಸಿಂಹನು ಸ್ವಲ್ಪ ಹತ್ತಿರಕ್ಕೆ ಬಂದು "ಹುಜೂರ್, ಅಂತಹ ಸಮಯ ಒದಗಿದರೆ ಈ ಸೇವಕನು ಯಾವ ಕಾರ್ಯಕ್ಕೂ ಸಿದ್ಧನಾಗಿರುವನು. ಬೋನು ಬಿಗಿಯಾದುದರಿಂದ, ಇಲಿಯು ತಪ್ಪಿಸಿಕೊಳ್ಳಲಾರದು" ಎಂದು ಸಮಾಧಾನಗೊಳಿಸಿದನು.

ಬಾದಶಹನು ಸ್ವಲ್ಪ ಆಲೋಚಿಸುತ್ತ, ಮುಅಜಮನು ಬರುವತನಕ ನೀನು ಇಲ್ಲಿಯೇ ಇರುವೆಯಾ? ಅವನು ವಿಲಾಸಪ್ರಿಯನು; ವಿಲಾಸದಲ್ಲಿ ಮಗ್ನನಾಗಿ ಇರುಳೆಲ್ಲಾ ಕಳೆದರೆ, ಕಾರ್ಯವು ಕೆಟ್ಟುಹೋಗುವುದು" ಎಂದನು.

ರಾಜಸಿಂಹ:—ಅಪ್ಪಣೆಯಾದರೆ ನಾನೇ ಹೋಗುವೆನು.

ಬಾದಶಹನು ಸ್ವಲ್ಪ ಶಾಂತನಾದನು. ರಾಜಸಿಂಹನ ಕಡೆಯ ಮಾತುಗಳಿಂದ ಅವನ ಶಿರಸ್ಸಿನ ಭಾರವು ಕೊಂಚ ಇಳಿದಂತಾಯಿತು. ಒಡನೆ ಅವರಂಗಜೇಬನು ರಾಜಸಿಂಹನನ್ನು ತನ್ನ ಬಳಿಗೆ ಕರೆದು, ಅವನ ಕಿವಿಯಲ್ಲಿ ಏನನ್ನೋ ಉಸುರಿದನು. ರಾಜಸಿಂಹನು ಇನ್ನೂ ಅಲ್ಲಿ ತಡೆಯಲಿಲ್ಲ. ಅವನು ಬಾದಶಹನಿಗೆ ಪ್ರಣಾಮವನ್ನು ಮಾಡಿ, ಅರಮನೆಯಿಂದ ಹೊರಟುಹೋದನು.

ಮಧುರವಾದ ಚಂದ್ರೋದಯ. ಬೆಳದಿಂಗಳಲ್ಲಿ ಸನೆದ ಮರಾಟರ ಶಿಬಿರ. ಶಿಬಿರವು ಸುತ್ತಲೆಲ್ಲಾ ರಜತಮಯವಾದಂತಿತ್ತು. ಚಂದ್ರನು ಮೆಲ್ಲಮೆಲ್ಲನೆ ಇಳಿವಷ್ಟಕ್ಕೆ ಚಂದ್ರಿಕೆಯು ಮಂದಿರದ ತೆರೆದ ಕಿಟಕಿಗಳಿಂದ ಹಾಯ್ದು, ಒಳಗಡೆಯ ಕತ್ತಲನ್ನು ತೊಲಗಿಸುತಲಿತ್ತು. ಮಂದಿರದ 'ಹೋಲ್' ಒಂದು ಚಂದ್ರಿಕೆಯಿಂದ ಉಜ್ವಲವಾಗಿತ್ತು. 'ಹೋಲ್' ಪರಿಷ್ಕಾರವಾಗಿತ್ತು. ಆದರೆ ಎರಡೂ ದ್ವಾರಗಳಲ್ಲಿ ರೇಶ್ಮೆಯ ಪರದೆ, ಪರದೆಯಲ್ಲಿ ಚಿತ್ರಿತವಾದ ಹೂಗಳು. ಕಿಟಕಿಗೆ ಇದ್ದ ಪರದೆಯು ತೆರೆದಿತ್ತು. ಚಂದ್ರನ ಕಿರಣವು ಈ ಕಿಟಕಿಯಿಂದ ನುಸುಳಿ ಬಂದು, ಗೋಡೆಯ ಪಟ್ಟೆತೂಗುಗಳ (Silk hanging) ಮೇಲೆ ಕುಣಿಯುತಲಿತ್ತು. ಗೋಡೆಯ ಸಮೀಪವಾಗಿ ಪರ್ಯಂತ; ಬೆಳ್ಳಿಯ ಕಾಲುಗಳುಳ್ಳ ಪರ್ಯಂತ; ಮಂಚದ ನಾಲ್ಕು ಕಂಬಗಳೂ ಬೆಳ್ಳಿ; ಇವುಗಳ ಮೇಲೆ ಚಿನ್ನದ ಹುಲಿಯ ಮುಖಗಳು. ಮಂಚದ ಕೆಳಗೆ ಮೆತ್ತಗಾದ, ದಪ್ಪವಾದ ರತ್ನಗಂಬಳಿಯು ಹಾಸಿತ್ತು. ಗೋಡೆಗಳಲ್ಲಿ ಚಿತ್ರಗಳು ಇದ್ದಂತೆಯೇ ರತ್ನಗಂಬಳಿಯ ಮೇಲೂ ಚಿತ್ರಗಳು. ಮಂಚದ ಮೇಲೆ ಹಂಸತೂಲಿಕಾತಲ್ಪ. ಕಿನ್‌ಕಾಪಿನಿಂದ ರಚಿತವಾದ ಮೃದುವಾದ ಹಾಸಿಗೆ. ಹಾಸಿಗೆಯ ಮೇಲೆ ಡಾಕ್ಕಾ ಮಲ್‌ಮಲಿನ ಹೊದಿಕೆ. ಹಾಸಿಗೆಯ ಇಕ್ಕೆಡೆಗಳಲ್ಲಿಯ ತಪುಳಿಗ ತಲೆದಿಂಬುಗಳು. ಹಾಸಿಗೆಯ ಮೇಲೆ ಯಾರೂ ಮಲಗಿದಂತೆ ತೋರಲಿಲ್ಲ. ಹೊದಿಕೆಯ ಸುರ್ತುಗೊಂಡಿರಲಿಲ್ಲ. ಅಂತಸ್ತಿನಿಂದ ಬೆಳ್ಳಿಯ ತೂಗುದೀಪವೊಂದು ಮಿಣಮಿಣನೆ ಉರಿಯುತಲಿತ್ತು. ದೀಪಕ್ಕೆ ಚಿನ್ನದ ಸರಪಣಿ; ಗಂಧದ ಎಣ್ಣೆ; ದೀಪದ ಕೆಳಗೆ ಆಜಾನುಬಾಹುವಾದ ಯುವಕನೊಬ್ಬನು ಏನನ್ನೋ ಯೋಚಿಸುತ್ತ ಕುಳಿತಿದ್ದನು. ಯುವಕನು ಒಂದೇತಡವೆ ಕಣ್ಣೊರಸುತ್ತ, ಮತ್ತೊಂದು ತಡವೆ ಚಂದ್ರನನ್ನು ನೋಡುತ್ತಲಿದ್ದನು. ನಡುನಡುವೆ "ನಾನೇಕೆ ಹೀಗೆ ಮಾಡಿದೆನು?" ಎನ್ನುವನು. ದೀಪವು ನಂದಿಹೋಗುವಂತಿತ್ತು. ಯುವಕನು ಅದನ್ನು ಸರಿಮಾಡುವುದಕ್ಕೆ ಎದ್ದನು. ಅಷ್ಟರಲ್ಲಿ ಹೊರಕ್ಕೆ ಯಾರೋ ಬಂದಂತೆ ಸದ್ದಾಯಿತು. ಬಂದವನಿಗೆ ಯುವಕನಿದ್ದ ಕೊಟ್ಟಡಿಯನ್ನು ಪ್ರವೇಶಿಸುವುದಕ್ಕೆ ಯಾರೂ ಅಡ್ಡಿಮಾಡಲಿಲ್ಲ. ಬಂದವಳು "ಹಕೀಮನ" ವೇಷದಲ್ಲಿದ್ದ ಶೈಲಿನಿ.

ಯುವಕ:—"ಶೈಲಿನಿ! ನೀನು ಈ ಗಂಭೀರವಾದ ರಾತ್ರಿ ಇಲ್ಲಿ ಬಂದೆ ಏತಕ್ಕೆ?" ಶೈಲಿನಿಯು ಈ ಮಾತಿನಿಂದ ನೀರವಳಾದಳು. ಸಲ್ಲಾಪದ ಪ್ರಾರಂಭದಲ್ಲೇ ಕೇಳಿದ ವಿಪರೀತವಾದ ಪ್ರಶ್ನೆಗೆ ಶೈಲಿನಿಯ ತುಟಿಗಳು ಉತ್ತರವಿಲ್ಲದೆ ಅಲುಗಿದುವು.

ಯುವಕನು "ಏಕೆ ಬಂದೆ? ಏಕೆ ಪ್ರಯಾಸಪಟ್ಟೆ?" ಎಂದು ಮತ್ತೂ ಕೇಳಿದನು.

ಶೈಲಿನಿಯು ಸ್ವಲ್ಪ ಧೈರ್ಯಗೊಂಡು "ನಿನ್ನ ಕ್ಷೇಮವನ್ನು ವಿಚಾರಿಸುವುದಕ್ಕೆ. ಅವರಂಗಜೇಬನ ಕೃತ್ರಿಮವನ್ನು ತಿಳಿಸುವುದಕ್ಕೆ" ಎಂದಳು.

ಯುವಕನು ನಿಟ್ಟುಸಿರಿಡುತ್ತ "ಎಲ್ಲವೂ ಕೃತ್ರಿಮ" ಎಂದು ಹೇಳಿ ಪುನಃ ಉಸಿರುಬಿಟ್ಟನು.

ಶೈಲಿನಿಯ ಹೃದಯವು ಧಡಧಡಿಸತೊಡಗಿತು. ಆದರೂ ಅವಳು ಮನಸ್ಸನ್ನು ಸ್ಥಿರಗೊಳಿಸಿ, ತನ್ನ ಪ್ರಿಯನ ಮಾತನ್ನು ಲಕ್ಷಿಸದಂತೆ ಮಾಡಿ, "ನನ್ನ ತಂದೆಯು ವಿಚಾರವಿಲ್ಲದೆ ಮಾಡಿದ ಕೃತ್ಯಕ್ಕೆ ನೀನು ಇಷ್ಟು..."

ಯುವಕನು ಕಣ್ಣೀರನ್ನು ಕಾಣಿಸದೆ ಒರಸುತ್ತ "ಎಲ್ಲರೂ ವಿಚಾರವಿಲ್ಲದೆ ಕೆಲಸ ಮಾಡುವರು. ನಾನೂ ಹಾಗೆಯೇ, ನೀನೂ ಹಾಗೆಯೇ, ಎಲ್ಲರೂ ಹಾಗೆಯೇ" ಎಂದು ಸ್ತಬ್ಧನಾದನು.

ಯುವಕನ ಮಾತುಗಳು ಶಲ್ಯದಂತೆ ಶೈಲಿನಿಯ ಮನಸ್ಸನ್ನು ಚುಚ್ಚಿದುವು. ಶೈಲಿನಿಯು ಹತ್ತಿರ ಬಂದು, "ನಾನು ವಿಚಾರವಿಲ್ಲದೆ ಮಾಡಿದ ಕಾರ್ಯವು ಯಾವುದು?" ಎಂದು ಕೇಳಿದಳು.

ಯುವಕನು ತಲೆಯನ್ನು ಕೈಯಿಂದ ಆದರಿಸುತ್ತ "ನ...ನನ್ನನ್ನು...ಪ್ರೀ...ಪ್ರೀತಿಸಿದುದು" ಎಂದು ಹೇಳಿ, ಮುಖವನ್ನು ತಗ್ಗಿಸಿದನು.

ಶೈಲಿನಿಯ ಹೃದಯವು ವಿದೀರ್ಣವಾಗುವಂತಿತ್ತು. ಅವಳು ಕಿಟಿಕಿಯ ಕಡೆಗೆ ಕಣ್ಣೆತ್ತಿ ನೋಡಿದಳು. ಚಂದ್ರನು ಇದಿರಿಗೆ ತೋರುತ್ತಿರಲಿಲ್ಲ. ಕಾತರಸ್ವರದಿಂದ, "ನನ್ನ ಕೃತ್ಯಗಳಲ್ಲಿ ವಿಚಾರವಿಲ್ಲ. ಅದನ್ನು ನಾನು ತಿಳಿದಿರುವೆ. ನನ್ನ ಪ್ರೀತಿಯಲ್ಲಿ ಅವಿಚಾರವು ಯಾವುದು? ತುಂಬಿಯು ಕಮಲದ ಬಳಿಗೈಯುವುದರಲ್ಲಿ ಯಾವ ವಿಚಾರ ಮಾಡುವುದು?"

ಯುವಕ:—"ಕಮಲಪುಷ್ಪವೋ ಕಿಂಶುಪುಷ್ಪವೋ ಎಂದು ನೋಡದೆ ಇರುವುದೇ?"

ಶೈಲಿನಿಯು ಬಾಯಲ್ಲಿ ಮಾತಿಲ್ಲದೆ ಯುವಕನನ್ನೇ ನೋಡುತ್ತ ನಿಂತಳು. ಯುವಕನು ರುದ್ಧಕಂಠನಾದನು. ಹೊರಕ್ಕೆ ಯಾರೋ ಬಂದಂತೆ ಸದ್ದು ಕೇಳಿಸಿತು.

ಒಡನೆ ಶೈಲಿನಿಯ ಕೈಯನ್ನು ಯುವಕನು ತನ್ನ ಕೈಯಿಂದ ಬಿಗಿ ಹಿಡಿದು, "ಶೈಲಿನಿ, ನನ್ನನ್ನು ಕ್ಷಮಿಸು, ಶೈಲಿನಿ, ನನ್ನನ್ನು ಕ್ಷಮಿಸು" ಎಂದು ಹೇಳಿ ಅಳತೊಡಗಿದನು.

ಅಷ್ಟರಲ್ಲಿ ಹೊರಗಿನ ಗದ್ದಲವು ಹೆಚ್ಚಾಯಿತು. ಶೈಲಿನಿಯು ಅವಾಕ್ಕಾದಳು. ಆದರೂ ಚಿತ್ತಸ್ಥೈರ್ಯದಿಂದ, "ರಾಜಾಧಿರಾಜ, ಈ ದಾಸಿಯು ಯಾವುದನ್ನು ಮನ್ನಿಸಬೇಕು? ನಾನು ಕ್ಷಮಿಸುವುದಕ್ಕೆ ಅಪರಾಧ ವೇನಿದೆ?" ಎಂದು ವಿಸ್ಮಿತನಯನಗಳಿಂದ ಕೇಳಿದಳು.

"ಒಳಗೆ ಹೋಗುವುದಕ್ಕೆ ಯಾರ ಅಪ್ಪಣೆಯೂ ಇಲ್ಲ" ಎಂದು ಹೊರಗಿಂದ ಮಾತುಗಳು ಕೇಳಿಸಿದುವು.

ಯುವಕನು ಒಮ್ಮೆ ಮಾತನಾಡಲಿಲ್ಲ. ಬಳಿಕ ಶೈಲಿನಿಯ ಮುಖವನ್ನು ತುಂಬಾ ನೋಡುತ್ತ "ಶೈಲಿನಿ, ನೀನು ನನ್ನಿಂದ ವಂಚಿತಳಾದೆ. ವಂಚಿತಳಾದೆ. ನೀನು ಹೇಗೆ ವಂಚಿತಳಾದೆ ಎಂದು ನಾನೇ ಬಾಯ್ಬಿಟ್ಟು ಹೇಳುವ ಬದಲಾಗಿ ಈ ಪತ್ರವೇ ತಿಳಿಸುವುದು; ಇದನ್ನು ಓದಿ ನೋಡಿ, ನನ್ನ ಅಪರಾಧವನ್ನು ಕ್ಷಮಿಸು." ಎಂದು ಹೇಳಿ, ಅಲ್ಲಿಯೇ ಕೈಗಳಿಂದ ಕಣ್ಣುಮುಚ್ಚಿ ನಿಂತುಬಿಟ್ಟನು.

ಹೊರಕ್ಕೆ ಮುಅಜಮನು ಪಹರೆಯವನನ್ನು ಗದರಿಸಿ, ಒಳಗೆ ಬಂದನು. ಅವನು ಕೊಟ್ಟಡಿಗೆ ಇದಿರಾಗಿ ಬರುವುದನ್ನು ಶೈಲಿನಿಯು ಕಂಡು "ರಾಜಾಧಿರಾಜ, ನನ್ನನ್ನು ರಕ್ಷಿಸು, ರಕ್ಷಿಸು" ಎಂದು ಕೂಗಿದಳು. ಮುಅಜಮನು ಶೈಲಿನಿಯನ್ನು ಸ್ವರದಿಂದ ಗುರುತಿಸಿದನು. ಅವನು ಒಳಕೊಟ್ಟಡಿಯ ಸಮೀಪಸ್ಥನಾಗಿ "ಶಿವಾಜಿರಾಜ! ಇದೇನು ಅಕೃತ್ಯವನ್ನು ಮಾಡುವೆ?" ಎಂದು ಕೇಳಿದನು.

ಶೈಲಿನಿಯ ಪ್ರಾಣವಲ್ಲಭನು ಮುಂದೆ ಬಂದು, ಶೈಲಿನಿಯನ್ನು ತನ್ನ ಬೆನ್ನ ಹಿಂದೆ ಇರಿಸಿ, "ನನ್ನ ಏಕಾಂತದ ಕೊಟ್ಟಡಿಗೆ ನೀನು ಯಾರ ಅನುಮತಿಯಿಂದ ಪ್ರವೇಶ ಮಾಡಿದೆ?" ಎಂದು ಕೇಳಿದನು. "ಎಲ್ಲವೂ ನಮ್ಮದಾದಲ್ಲಿ ನಾವು ಯಾರೊಡನೆ ಕೇಳಬೇಕು?" ಎಂದು ಮುಅಜಮನು ಉತ್ತರಕೊಟ್ಟನು. ಪುನಃ "ನಮ್ಮ ನಗರದಲ್ಲಿ ಹೆಣ್ಣು ಕಳವು ಆಗದಂತೆ ನಾವು ಜಾಗರೂಕರಾಗಿರಬೇಕು" ಎಂದು ಮುಂದವರಿಸಿದನು.

ಅವನ ಪ್ರತಿದ್ವಂದ್ವಿಯು ಉದ್ರೇಕಗೊಂಡನು. ಇಬ್ಬರಿಗೂ ಮಾತಿಗೆ ಮಾತು ಬಂದಿತು. ಮುಸಲ್ಮಾನನು ಕತ್ತಿಯನ್ನು ತೋರಿಸಿದನು. ಒಡನೆ ಹಿಂದುವು ಖಡ್ಗವನ್ನು ಕೈಯಲ್ಲಿ ಹಿಡಿದು, ಕೊಟ್ಟಡಿಯ ಹೊರಕ್ಕೆ ಹೋದನು. ಮುಅಜಮನು ಮುಂದೆ ಓಡತೊಡಗಿದನು. ಮಂದಿರದ ಒಳಕ್ಕೆ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಓಡಿಯೋಡಿ, ಮುಅಜಮನು ಹೊರಕ್ಕೆ ಬಂದು, ಪಹರೆಯವನಿಗೆ "ಬಾಗಿಲನ್ನು ಬಿಗಿ ಮಾಡು" ಎಂದು ಆಜ್ಞೆ ಕೊಟ್ಟನು.

ಮರಾಟನು ಹೊರಕ್ಕೆ ಬಾರದಂತೆ, ಪಹರೆಯವನು ಬಾಗಿಲನ್ನು ಬಿಗಿದುಬಿಟ್ಟನು. ಮರಾಟನು ಉಚ್ಚಸ್ವರದಿಂದ, "ಶೈಲಿನಿ, ಶೈಲಿನಿ, ಪ್ರಮಾದ ಸಂಭವಿಸುವಂತಿದೆ. ಬೇಗನೇ ಓಡಿಬಿಡು. ನಿನ್ನ ಪ್ರಾಣವನ್ನು ರಕ್ಷಿಸಿಕೊಳ್ಳು" ಎಂದು ಹೇಳುತ್ತ ಮತ್ತೊಂದು ಕೊಟ್ಟಡಿಗೆ ಹೋಗಿ, ತೆರೆದಿದ್ದ ಕಿಟಿಕಿಯನ್ನು ಹತ್ತಲಾರಂಭಿಸಿದನು. ಅದನ್ನು ನೋಡಿ ಮಂದಿರದ ಜಗುಲಿಯ ಮೇಲಿದ್ದ ಮುಅಜಮನು ಓಡತೊಡಗಿದನು. ಶಿಬಿರದ ಸುತ್ತಲಿದ್ದ ಸೈನಿಕರೆಲ್ಲರೂ ಗದ್ದಲದಿಂದ ಸಂಭ್ರಾಂತರಾದರು. ಅಷ್ಟರಲ್ಲಿ ರಾಜಸಿಂಹನು ಮಂದಿರದ ಬಳಿಯಲ್ಲಿ ಇಬ್ಬರು ಸಿಪಾಯರೊಡನೆ ಬಂದು ಇಳಿದನು. ಮರಾಟನು ಕಿಟಿಕಿಯನ್ನು ಹತ್ತಿ, ಕೈಯಲ್ಲಿದ್ದ ಖಡ್ಗವನ್ನು ಜಳಪಿಸುತ್ತ ಕೆಳಗೆ ಧುಮುಕುವುದಕ್ಕೆ ಸಿದ್ಧನಾಗಿದ್ದನು. ಮುಅಜಮನು ರಾಜಸಿಂಹನನ್ನು ನೋಡಿ.— "ಅಯ್ಯಾ, ಶಿವಾಜಿಯು ನನ್ನನ್ನು ಅಟ್ಟಿಕೊಂಡು ಬರುತ್ತಿದ್ದಾನೆ. ಇಕೊ, ನನ್ನನ್ನು ರಕ್ಷಿಸು" ಎಂದು ಚೀರುತ್ತ ಹತ್ತಿರಕ್ಕೆ ಬಂದನು. ರಾಜಸಿಂಹನು ಮರಾಟನನ್ನು ನೋಡಿದನೋ ಇಲ್ಲವೊ ಉಪ್ಪರಿಗೆಯ ಮೇಲೆ ಕಾವಲಿದ್ದ ಸೈನಿಕರಿಗೆ ಕೈಸನ್ನೆ ಮಾಡಿ, "ಕಳಚಿ ಬಿಡು" ಎಂದು ಒದರಿದನು. ನೂರಾರು ಬಂಡಿಗಳ ಗಡಗಡ ಶಬ್ದದ ಚೀತ್ಕಾರವೊಂದು ಮಹಡಿಯಿಂದ ಕೇಳಿಸಿತು. ಮರಾಟನು ಕಿಟಿಕಿಯಿಂದ ಕೆಳಕ್ಕೆ ಹಾರಿದನು. ಕಣ್ಣು ಮುಚ್ಚುವಷ್ಟರಲ್ಲಿ ಮಂದಿರದ ಉಪ್ಪರಿಗೆಯು ಮಾಡಿನೊಡನೆ ಜರಿದು ಜಾರಿ ಬರುವಂತಿತ್ತು. ಸಾವಿರಾರು ಬೀಳಲುಗಳಿಂದ ಆವರಿಸಿದ್ದ ಉನ್ನತವಾದ ಮಹತ್ತಾದ ಆಲದ ಮರವು ಸಿಡಿಲಘಾತದಿಂದ ಬುಡದೊಡನೆ ನೆಲಕ್ಕೆ ಒರಗುವಂತೆ, ಸೈನಿಕರು ಶೀಘ್ರವಾಗಿ ಗೊಣಸುಗಳನ್ನು ಕಳಚಿಬಿಡುತ್ತಲೇ, ಆ ಕೃತ್ರಿಮ ಭವನವು ಓರ್ಗುಡಿಸಿ ಬೀಳತೊಡಗಿತು.

ಮುಅಜಮನು ಕಳವಳದಿಂದ "ಅಯ್ಯೋ, ಅಯ್ಯೋ, ಶೈಲಿನಿಯು ಒಳಗೆ ಇದ್ದಾಳೆ. ನಿನ್ನ ಮಗಳನ್ನು ರಕ್ಷಿಸು" ಎಂದು ಚೀರಿದನು.

ಅದೇ ಸಮಯದಲ್ಲಿ ಶಿಬಿರದ ಅಂತಸ್ತು ಮರಾಟನ ತಲೆಯನ್ನು ಹಳಚಿತು. ಮರಾಟನು ಭಾರದಿಂದ ಮುಂದರಿಸಲಾರದೆ "ಶೈಲಿನಿ, ಶೈ..." ಎನ್ನುತ್ತ ಅಡ್ಡಗೆಡಲಿಕ್ಕಾದನು.

"ಶೈಲಿನಿ" ಎಂಬ ಮಾತು ಕಿವಿಗೆ ಬಿದ್ದಿತೋ ಇಲ್ಲವೋ ರಾಜಸಿಂಹನು ಉನ್ಮತ್ತನಾದನು. ಕೆಲಸವು ಕೈಮೀರಿಹೋಯಿತು. ಯಾರನ್ನು ಬದುಕಿಸುವುದಕ್ಕೂ ಉಪಾಯವಿರಲಿಲ್ಲ. "ಅಮ್ಮಾ. ಶೈಲಿನಿ, ನೀನು ಎಲ್ಲಿ

ಇರುವೆ?" ಎಂದು ಕೇಳುತ್ತಾ ರಾಜಸಿಂಹನು ಜೀವದಾಸೆಯಿಲ್ಲದೆ ಒಳಕ್ಕೆ ಹಾರಿದನು. ಸಿಪಾಯನೊಬ್ಬನು ಅವನನ್ನು ತಡಿಸುವುದಕ್ಕೆ ಹೋದನು. ಅವನು ಕೃತಕೃತ್ಯನಾಗಲಿಲ್ಲ. ಎತ್ತರವಾದ ಮಾಡು ಮಹಾಶಬ್ದ ದೊಡನೆ ನೆಲವನ್ನು ಚುಂಬಿಸಿಬಿಟ್ಟಿತು. ಆ ಭಯಂಕರ ಧ್ವನಿಯು ಆ ಗಂಭೀರವಾದ ರಾತ್ರಿಯಲ್ಲಿ ಅರಣ್ಯ ಮಧ್ಯದಲ್ಲಿ ಉಂಟಾದ ಗುಡುಗಿನಂತೆ ಕೇಳಿಸಿತು.

ಮುಅಜಮನು ಅರಮನೆಗೆ ಓಡಿದನು. ಬಾದಶಹನು ಅರಮನೆಯಲ್ಲಿ ನಿದ್ದೆ ಹೋಗದೆ, ರಾಜಸಿಂಹನಿಂದ ಸಮಾಚಾರವನ್ನು ನಿರೀಕ್ಷಿಸುತ್ತಿದ್ದನು. ಮುಅಜಮನು ಬಾದಶಹನ ಬಳಿಗೆ ಬಂದು "ಘೋರ ಪ್ರಮಾದ ವಾಯಿತು" ಎಂದನು.

ಅವರಂಗಜೇಬನು "ಶಿವಾಜಿಯು ತಪ್ಪಿಸಿಕೊಂಡು ಹೋದನೇ?" ಎಂದು ಕಾಂಕ್ಷಿತಸ್ವರದಿಂದ ಕೇಳಿದನು.

ಮುಅಜಮ್:—"ರಾಜಸಿಂಹನು ಶಿಬಿರವನ್ನು ಬಿಚ್ಚುವಂತೆ ಆಜ್ಞೆ ಮಾಡಿದನು."

ಬಾದಶಹ:—"ಶಿವಾಜಿಯು ಒಳಗೆ ಇರಲಿಲ್ಲವೇ?"

ಮುಅಜಮ್:—"ಶಿವಾಜಿಯೂ ಇದ್ದನು. ಅವನೊಡನೆ ಶೈಲಿನಿಯೂ ಇದ್ದಳು."

ಬಾದಶಹ:—"ರಾಜಸಿಂಹನು ಮಗಳನ್ನು ರಕ್ಷಿಸಲಿಲ್ಲವೇ?"

ಮುಅಜಮ್:—"ಮಗಳನ್ನು ರಕ್ಷಿಸುವುದು ಅಸಾಧ್ಯವಾಗಿದ್ದಿತು. ಮಗಳು ಒಳಗೆ ಇರುವಳೆಂದು ಕೇಳುತ್ತಲೇ ರಾಜಸಿಂಹನು ತಾನೂ ಬಲಿಬಿದ್ದನು.

ಅವರಂಗಜೇಬನು ಇದನ್ನು ಕೇಳುತ್ತಲೇ ಶಿಬಿರದ ಕಡೆಗೆ ಹೊರಟನು. ಸೈನಿಕರಿಗೆ ಆಜ್ಞೆ ಮಾಡಿ ಹಾಳು ಕೊಂಪೆಯನ್ನೆಲ್ಲಾ ಬೆಳಗಾಗುವಷ್ಟರಲ್ಲಿ ತೋಡಿಸಿ ತೆಗೆದನು. ನಾಲ್ಕು ಮಂದಿ ರಜಪೂತ ಸೈನಿಕರು ಮರಾಟನ ಶವವನ್ನು ಅವರಂಗಜೇಬನ ಕಾಲಡಿಯಲ್ಲಿ ತಂದಿಟ್ಟರು. ಅವರಂಗಜೇಬನು ಮುಖದಲ್ಲಿ ಸಂತೋಷವನ್ನಾಗಲೀ ದುಃಖವನ್ನಾಗಲೀ ಸ್ಫುಟ ಮಾಡಲಿಲ್ಲ. ಶಿವಾಜಿಯು ಸತ್ತು ತನ್ನ ಪಾದಾಕ್ರಾಂತನಾದನೆಂದು ಮನಸ್ಸಿನಲ್ಲಿ ತಿಳಿದರೂ, ಬಾದಶಹನು ಶಾಂತನಾಗಿದ್ದನು. ಬಳಿಕ ರಾಜಸಿಂಹ ಶೈಲಿನಿಯರ ಶವಗಳು ತೆಗೆಯಲ್ಪಟ್ಟವು. ಚಂದ್ರಕಾಂತ ಪುತ್ಥಳಿಯು ಚಂದ್ರಕಿರಣದಲ್ಲಿ ನೆನೆದುಹೋದಂತೆ, ಶೈಲಿನಿಯ ದೇಹವನ್ನು ನೋಡುತ್ತ ನಿಂತನು. ಅವಳ ಹಸ್ತದಲ್ಲಿ ಬಿಗಿಹಿಡಿದ ಪತ್ರವೊಂದಿತ್ತು. ಬಾದಶಹನು ಕಾಗದವನು ಓದಿಸಿದನು. ಕಾಗದವು ಈ ಪರಿಯಾಗಿ ಬರೆದಿತ್ತು.—

"ಶೈಲಿನಿ,

ನಿನ್ನನ್ನು ಹೇಗೆ ಸಂಬೋಧಿಸಬೇಕೆಂದು ಇದುವರೆಗೆ ನಿಶ್ಚಯ ಮಾಡಲಾರದವನಾಗಿದ್ದೇನೆ. ಒಂದೆರಡು ಬಾರಿ ನಿನ್ನನ್ನು ಪ್ರಿಯೆ ಪ್ರಿಯೆ, ಎಂದು ಕರೆದಿದ್ದೇನೆ. ಹಾಗೆ ಏಕೆ ಕರೆದೆನೆಂದು ಈಗ ದುಃಖಪಡುತ್ತೇನೆ. ನಾನು ಹತಭಾಗ್ಯನು; ಪಾಪಿಯು; ನನ್ನ ಪಾಪದಿಂದ ನಿನ್ನ ದೇಹವನ್ನು ಪಾಪಮಯವಾಗಿ ಮಾಡಲು ನಾನು ಆಶಿಸುವುದಿಲ್ಲ. ಯಾವ ಕಾಲದಲ್ಲಿ ನೀನು ನನ್ನ ತಂದೆಯೊಡನೆ ಪ್ರತಾಪಗಡಕ್ಕೆ ಬಂದೆಯೋ ಆ ಕಾಲದಲ್ಲಿ ಈ ಪಾಪದ ಬೀಜವು ನನ್ನ ಹೃದಯದಲ್ಲಿ ಉಂಟಾಯಿತು. ನೀನು ಒಂದು ಸಾಯಂಕಾಲ ಪ್ರತಾಪಗಡದ ಉಪವನದಲ್ಲಿ ಏಕಾಕಿಯಾಗಿ ಏನನ್ನೋ ಚಿಂತಿಸುತ್ತ ಕುಳಿತಿದ್ದೆ. ಬಳಿಕ ಚಿಂತನೆಯನ್ನು ಬಿಟ್ಟು ನಿನ್ನ ಪ್ರಾಣೇಶನ ಸ್ಮರಣೆಯನ್ನು ಮಾಡತೊಡಗಿದೆ. ನಿನ್ನ ದೀರ್ಘವಾದ ಕೇಶಧಾಮವು ಬೆನ್ನಮೇಲೆ ಗುಂಗುರು ಗುಂಗುರಾಗಿ

ಹರಡಿತ್ತು. ಮುಖವು ಕೈದಳದ ಮೇಲೆ ಆಶ್ರಯಿಸಿತ್ತು. ಪ್ರಣಯಜನ್ಯವಾದ ಕಣ್ಣೀರುಗಳು ದರದರನೆ ಸುರಿಯುತ್ತಿದ್ದವು. ಆಗ ನಾನು ಬಳಿಯಲ್ಲಿದ್ದ ನಿಕುಂಜದ ಮರೆಯಲ್ಲಿದ್ದೆನು. ವಿರಹಿಣಿಯಾದ ವನದೇವತೆಯಂತೆ ಒಪ್ಪುತ್ತಲಿದ್ದ ನಿನ್ನ ಮೂರ್ತಿಯನ್ನು ನೋಡಿ ನಾನು ಮುಗ್ಧನಾದೆನು. ನಾನು ಯೋಚಿಸಿದ ಕೃತ್ಯವು ಅಕಾರ್ಯ ವೆಂದು ನಾನು ಆಗ ತಿಳಿದಿದ್ದರೂ, ನಿನ್ನ ಲಾವಣ್ಯಮಯವಾದ ಶರೀರದ ಕಡೆಯಿಂದ ನನ್ನ ಮನಸ್ಸನ್ನು ನಾನು ಹಿಂದೆಳೆಯಲಾರದೆ ಹೋದೆನು. ನಾನು ಮರೆಯಿಂದ ಹೊರಕ್ಕೆ ಬಂದೆನು. ನೀನು ನನ್ನನ್ನು ನೋಡಿ ಲಜ್ಜಿತ ಳಾದೆ. ನಾನು ಮಾತನಾಡುಪಷ್ಟರಲ್ಲಿ ಕೋಟೆಯ ಘಂಟಾನಾದವಾದುದರಿಂದ, ನಾನು ನಿನ್ನನ್ನು ಬಿಟ್ಟು ಹೋಗಬೇಕಾಯಿತು. ನೀನು ನನ್ನ ಹೃದಯವನ್ನು ಓದಿಬಿಟ್ಟೆ."

"ಶೈಲಿನಿ, ನಿನ್ನೊಡನೆ ಮುಚ್ಚುಮರೆ ಏಕೆ? ನಿನ್ನ ಪ್ರಣಯ ಸರ್ವಸ್ವವನ್ನು ನನಗೆ ಅರ್ಪಿಸಲಿಕ್ಕೆ ಇದ್ದ ನಿನ್ನೊಡನೆ ಮರೆ ಮೋಸವೇಕೆ? ನನ್ನನ್ನು ಶಿವಾಜಿ ಎಂದು ಭಾವಿಸಿ, ನೀನು ಮೋಸಹೋದೆ. ನಿನ್ನ ಹೃದಯವು ಶಿವಾಜಿ ಮಹಾರಾಜರು ಇರುವಲ್ಲಿ ಅಲ್ಲದೆ ಮತ್ತೆಲ್ಲಿ ಹೋಗುವುದು? ಕಮಲಿನಿಯು ರಾಜಹಂಸನಿಗೆ ಆಶ್ರಯ ಕೊಡುವುದಲ್ಲದೆ ಕಪ್ಪೆಯನ್ನು ಬಯಸುವುದೇ? ನಾನು ಶಿವಾಜಿ ರಾಜರ ಸ್ವಾಮಿಭಕ್ತನಾಗಿದ್ದರೂ ಸ್ವಾಮಿದ್ರೋಹಿಯಾದೆನು. ಮಹಾರಾಜರ ಆಪತ್ತುಗಳಲ್ಲಿ ನಾನು ಅವರಿಗೆ ನೆರವಾಗುವಂತೆ ನನಗೆ ಅವರು ಬಳಿಯಲ್ಲಿ ಆಶ್ರಯ ಕೊಟ್ಟಿದ್ದರು. ನನ್ನ ರೂಪ, ದೇಹ, ಆಕಾರ, ವರ್ಣ ಎಲ್ಲವೂ ಶಿವಾಜಿರಾಜರಂತೆಯೇ. ಆವಳಿಜವಳಿ ಕೂಸುಗಳಲ್ಲಾದರೂ ಸ್ವಲ್ಪ ಬೇಧ ತೋರಬಹುದು, ನಮ್ಮಲ್ಲಿರಲಿಲ್ಲ. ಏನೊಂದು ಪ್ರಮಾದ ಸಂಭವಿಸುವ ಹಾಗಿದ್ದರೆ, ರಾಜರು ನನ್ನನ್ನು ತಮ್ಮ ಸ್ಥಾನದಲ್ಲಿ ಇಟ್ಟು ಪ್ರಾಣವನ್ನು ಉಳಿಸಿಕೊಳ್ಳುತ್ತಿದ್ದರು. ರಾಜರು ಒಂದು ಕಾಲ ದಿಲೇರಿಖಾನನ ಹಸ್ತಗತವಾಗುವಂತಿದ್ದರು. ಆಗ ರಾಜರ ಬದಲಿಗೆ ನಾನೇ ಬಹಿರಂಗದಲ್ಲಿ ಕಾರ್ಯವನ್ನು ವಿಚಾರಿಸುತ್ತಿದ್ದೆನು. ಯುದ್ಧದಲ್ಲಿ ರಾಜರಿಗೆ ಏಟು ತಗಲುವ ಹಾಗಿದ್ದರೆ, ಸೈನ್ಯವು ಹಿಂಜಾರದಂತೆ, ನಾನೇ ನಾಯಕನಾಗಬೇಕಾಗುತ್ತಿತ್ತು. ಅಷ್ಟೇಕೆ? ಪ್ರಕೃತದಲ್ಲಿ ಬಾದಶಹರ ಬದಿಯಲ್ಲಿದ್ದ ಶ್ರೀ ಶಿವಾಜಿ ಮಹಾ ರಾಜರು ತಾವು ತಪ್ಪಿಸಿಕೊಂಡುದು ಬಾದಶಹರಿಗೆ ತಿಳಿಯಲು ಸ್ವಲ್ಪ ವಿಳಂಬವಾಗುವಂತೆ, ನನ್ನನ್ನು ಅವರ ಹಾಸಿಗೆಯ ಮೇಲೆ ಮಲಗಬೇಕೆಂದು ಆಜ್ಞೆ ಮಾಡಿದ್ದರು."

"ಶೈಲಿನೀ, ಬ್ರಹ್ಮಹತ್ಯಕ್ಕಾಗಲಿ, ಪತ್ನಿಹತ್ಯಕ್ಕಾಗಲೀ ಪ್ರಾಯಶ್ಚಿತ್ತವು ಉಂಟು. ಸ್ವಾಮಿದ್ರೋಹಕ್ಕೆ ಪ್ರಾಯಶ್ಚಿತ್ತವಿಲ್ಲ. ನಾನು ಶಿವಾಜಿರಾಜರ ಸೇವೆಯಲ್ಲಿ ಸೇರುವಾಗ, ವಿವಾಹ ಮಾಡಿಕೊಳ್ಳುವುದಿಲ್ಲ ಎಂದು ರಾಜಚರಣಗಳನ್ನು ಹಿಡಿದು ಪ್ರಮಾಣ ಮಾಡಿದ್ದೆನು. ಇದಕ್ಕೋಸ್ಕರವೇ ನನ್ನ ಬಡ ತಾಯಿಯನ್ನೂ ತಮ್ಮಂದಿ ರನ್ನೂ ರಾಜ್ಯದ ವೆಚ್ಚದಿಂದ ಮಹಾರಾಜರು ಪೋಷಿಸುತ್ತಿರುವರು. ನಾನು ಈ ಸ್ಥಿತಿಯಲ್ಲಿ ವಿವಾಹ ಮಾಡಿ ಕೊಳ್ಳುವುದು ಅನುಚಿತವಾಗಿತ್ತು. ನನ್ನ ವಿವಾಹದಿಂದ ರಾಜಕಾರ್ಯಗಳಿಗೆ ತೊಡಕು ಉಂಟಾಗುವುದೆಂದು ನನಗೆ ಗೊತ್ತಿತ್ತು. ಆದರೆ ಅಂದು ನಿನ್ನ ರೂಪವನ್ನು ನೋಡಿ ನಾನು ಮರುಳಾದೆನು. ನನ್ನನ್ನು ಶಿವಾಜಿಯೆಂದು ಭ್ರಮಿಸಿ ನೀನೂ ಮರುಳಾದೆ. ನಾನು ಸ್ವಾಮಿದ್ರೋಹವನ್ನು ಮಾಡಿದುದು ಅಲ್ಲದೆ ನನ್ನ ಕಪಟವೇಷದಿಂದ ನಿನ್ನ ಹೃದಯವನ್ನೂ ಸೂರೆಗೊಳ್ಳಲಿಕ್ಕೆ ಹತ್ತಿದೆನು. ನನ್ನ ಕಪಟಾಚರಣೆಯು ಶಿವಾಜಿ ಮಹಾರಾಜರಿಗೆ ಪ್ರಕೃತದಲ್ಲಿ ತಿಳಿದಿತ್ತೋ ಇಲ್ಲವೋ ನಾನು ಖಂಡಿತವಾಗಿ ಹೇಳಲಾರೆನು. ಆದರೆ ದಿನೇ ದಿನೇ ನನ್ನ ದ್ರೋಹವು ನನ್ನನ್ನೇ ಚುಚ್ಚತೊಡಗಿತು. ಅಂದಿನಿಂದ ನಿನ್ನನ್ನು ಏಕೆ ಪ್ರೀತಿಸಿದೆನೋ ಎಂದು ವಿಷಾದಗೊಂಡೆನು. ನೀನು ಆ ರಾತ್ರಿ ಗುಪ್ತವೇಷದಿಂದ ಶಿಬಿರಕ್ಕೆ ಬಂದಾಗ ನಿನ್ನ ಮೇಲೆ ಉದಾಸೀನಗೊಳ್ಳಲಿಕ್ಕೆ ಇದೇ ಕಾರಣ."

"ಶೈಲಿನಿ, ನಾನು ಇನ್ನೂ ಹೇಳುವುದಕ್ಕಿಂತ ನನ್ನ ಶ್ವಾಸವು ನಿಂತುಹೋದರೆ ಚೆನ್ನಾಗಿತ್ತಲ್ಲವೇ? ನಾನು ಇನ್ನೂ ಬರೆಯುವುದಕ್ಕಿಂತ ನನಗೆ ಕೈಗೆಟ್ಟರೆ ಒಳ್ಳೆಯದಾಗಿತ್ತಲ್ಲವೇ? ನಾನು ನಿನ್ನ ಪಾಣಿಗ್ರಹಣ ಮಾಡಿದ್ದು ಹೊರತು ನಿನ್ನ ಶುದ್ಧ ದೇಹವನ್ನು ನನ್ನ ಅಶುದ್ಧತೆಯಿಂದ ಹಾಳು ಮಾಡಲಿಲ್ಲ. ನಾನು ಸ್ವಾಮಿ ದ್ರೋಹಿ ಎನಿಸಿಕೊಳ್ಳುವುದಕ್ಕಿಂತಲೂ ಕಪಟಪ್ರೇಮಿಯೆಂದಾದರೂ ಜನಗಳಿಂದ ಹೇಳಿಸಿಕೊಳ್ಳುವೆನು. ನೀನು ನನ್ನನ್ನು ಕ್ಷಮಿಸು. ನನ್ನನ್ನು ಶುದ್ಧವಾಗಿ ಮಾಡಿಬಿಡು. ನೀನು ಯಾರನ್ನು ನೋಡಿ ಶಿವಾಜಿಯೆಂದು ಭ್ರಾಂತಿ ಗೊಂಡೆಯೋ ಆ ಹೀರೋಜಿ ಫರ್ಜಂದ ಎಂಬ ಈ ಪಾಪಿ ಮರಾಟನನ್ನು ಇನ್ನು ಸಂಪೂರ್ಣವಾಗಿ ಮರೆತು ಬಿಡು. ನೀನು ಮರೆತು ಬಿಡುವುದೇ ನನಗೆ ಕ್ಷಮಾಪಣೆಯೆಂದು ಭಾವಿಸುವೆನು.

ಹಿರೋಜಿ ಫರ್ಜಂದ್."

ಅವರಂಗಜೇಬ್ ಬಾದಶಹನು ಈ ಕಾಗದವನ್ನು ಕೇಳುತ್ತಲೇ ಕೋಪಗೊಂಡನು. ದುಃಖಗೊಂಡನು. ಶಿವಾಜಿ ತಪ್ಪಿಸಿಕೊಂಡನು ಎಂದು ಕೋಪ: ರಾಜಸಿಂಹನು ಮಗಳೊಡನೆ ಸತ್ತನೆಂದು ದುಃಖ. ಶಿವಾಜಿಯ ಬೆನ್ನ ಹಿಂದೆ ಜನಗಳನ್ನು ಕಳುಹಿಸಿದನು. ಶಿವಾಜಿಯ ಹೆಜ್ಜೆ ಹಿಡಿಯಲಿಕ್ಕೆ ಆಗದೆ ಹೋಯಿತು. ಬಾದಶಹನು ಮೂರು ಶವಗಳಿಗೂ ಹಿಂದೂ ದಹನ ಸಂಸ್ಕಾರಗಳನ್ನು ಮಾಡಿಸಿದನು. ಆದರೆ 15 ದಿನಗಳವರೆಗೆ ಅವನು 'ಆಮ್ ಖಾಸ್ ಖಾನೆ" ಯಲ್ಲಿ ಕಾಲಿಡಲಿಲ್ಲವಂತೆ.

ದುರ್ಗಾವತಿ

ಭಾರತಖಂಡ ಪುರಾಣೇತಿಹಾಸಗಳಲ್ಲಿ ಕ್ಷಾತ್ರಧರ್ಮಾನುವರ್ತಿಗಳಾದ, ವೀರತ್ವದಿಂದ ಕೀರ್ತಿವಂತೆಯರಾದ ಮಹಿಳೆಯರು ಅನೇಕರಿರುವರು. ತೇಜಸ್ವಿನಿಯಾದ ಕೈಕಾದೇವಿಯು ರಾಕ್ಷಸರ ಸಮರಭೂಮಿಯಲ್ಲಿ ನಿಸ್ಸಹಾಯಕನಾದ ದಶರಥನ ಕಳಚಿಹೋದ ರಥಚಕ್ರದಲ್ಲಿ ತನ್ನ ಕೋಮಲ ಹಸ್ತಾಂಗುಳಿಯನ್ನು ಸಿಲುಕಿಸಿ, ತನ್ನ ವೀರಪತಿಯ ಯುದ್ಧವನ್ನು ಪೂರೈಸಿದಳು. ಆಗರ್ಭ ಶ್ರೀಮಂತೆಯಾದ ಜನಕನಂದನೆಯು ಪತಿವಿಯೋಗಕ್ಕಿಂತಲೂ ಅರಣ್ಯವಾಸವೇ ಮಧುರವೆಂದು ಭಾವಿಸಿ, 14 ವರ್ಷಗಳ ವರೆಗೆ ಗಟ್ಟಬೆಟ್ಟಗಳಲ್ಲಿ ಅಲೆದಳು. ಭಾರತ ಇತಿಹಾಸ ಕಾಲದಲ್ಲಿಯೂ ಸಂಯೋಗಿತಾ, ಪದ್ಮಿನಿ, ಕರ್ಮದೇವಿ ಮೊದಲಾದ ಅಸಂಖ್ಯಾತ ರಜಪುತ್ರ ವೀರರಮಣಿಯರು ಧರ್ಮಾಂಧರಾದ ಮುಸಲ್ಮಾನರನ್ನು ಯುದ್ಧದಲ್ಲಿ ಪ್ರತಿಭಟಿಸಿ, ತಮ್ಮ ಪತಿಗಳ ಆಪತ್ತುವಿಪತ್ತುಗಳನ್ನು ಪರಿಹರಿಸುವುದಕ್ಕೆ ರಣರಂಗದಲ್ಲಿ ರಕ್ತವನ್ನು ಬಸಿದರು. ಆದರೂ ಪಾಶ್ಚಾತ್ಯ ನಾಗರಿಕೆಯನ್ನು ಹೊಂದಿ, ಸರ್ವವಿಷಯಗಳಲ್ಲೂ ಪಾಶ್ಚಾತ್ಯರೇ ನಮಗೆ ಬುದ್ಧಿ ಕಲಿಸುವರೆಂದು ನಂಬುವವರು ಈ ಪುರಾಣಗಳು ಕಲ್ಪಿತ ಕಥೆಗಳೆಂದೂ, ಈ ಪುರಾಣ ಪ್ರಸಿದ್ಧ ಸ್ತ್ರೀಯರು ಕವಿ ಸೃಷ್ಟಿಗಳೆಂದೂ ಅಲ್ಲಗಳೆವರು. ಅಷ್ಟೇಕೆ? ಸ್ವಪ್ಷಾಕ್ಷರಗಳಿಂದ ಅಂಕಿತವಾದ ಜೀಜಾಬಾಯಿ, ಅಹಲ್ಯಾಬಾಯಿ ಮೊದಲಾದ ಭಾರತಯುವತಿಯರ ಪ್ರಭಾವವು ಚರಿತ್ರಕಾರನ ಅತಿಶಯೋಕ್ತಿ ಎಂದು ಇವರು ಅನುಮಾನಿಸುವರು. ಜನರ ಕಟ್ಟುಕಥೆಗಳನ್ನಾಗಲೀ ಕವಿಯ ಬಣ್ಣಮಾತುಗಳನ್ನಾಗಲೀ ನಂಬಬೇಕೆಂದು ನಾವು ಪ್ರತಿಪಾದಿಸುವುದಿಲ್ಲ. ಪುರಾಣೋಕ್ತವಾದ ವಿಷಯಗಳು ಸಟೆಯಾದರೂ ಸತ್ಯವಾದರೂ ದೋಷವಿಲ್ಲ. ಆದರೆ ಪುರಾಣ ಕಥನಗಳು ಸುಳ್ಳೆಂದು ಮೊದಲಿಂದ ಹಿಡಿದು ಹೋಗಿ ಇದರಿಂದ ಭಾರತ ಇತಿಹಾಸದ ಸ್ಥಿತಿಗತಿಯನ್ನೂ ಪ್ರಮಾಣಿಸುವದು ಯೋಗ್ಯವಲ್ಲ. ಪಾತಿವ್ರತ್ಯ, ಧರ್ಮಪರಾಯಣತೆ, ರಣೋತ್ಸಾಹ ಮೊದಲಾದ ಗುಣಗಳು ಪುರಾಣಕಾಲದಲ್ಲಿ ಇಲ್ಲದೆ ಇರುತ್ತಿದ್ದರೆ, ಅವುಗಳು ಇತಿಹಾಸಕಾಲದಲ್ಲಿ ಉಜ್ವಲವಾಗಿ ಪ್ರತಿಬಿಂಬಿಸುತ್ತಿದ್ದಿಲ್ಲ. ಭಾರತಭೂಮಿಯು ಮುಸಲ್ಮಾನರ ಕಠೋರ ಶಾಸನದಿಂದ ತಲ್ಲಣಿಸುತ್ತಿದ್ದಾಗ, ಈ ಗುಣಗಳು ಇನ್ನೂ ಪ್ರಭಾವಮಯವಾಗಿ ಬೆಳಗಿದುವು.

ಪ್ರತಾಪಶಾಲಿಯಾದ ಅಕ್ಬರನು ದೆಹಲಿಯ ಸಿಂಹಾಸನಾರೂಢನಾಗಿದ್ದನು. ಮೊಘಲ್ ಸಾಮ್ರಾಜ್ಯದ ಅರ್ಧಚಂದ್ರಾಂಕಿತವಾದ ಧ್ವಜವು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ, ಸಿಂಧೂ ನದಿಯಿಂದ ಬಂಗಾಲದ ವರೆಗೂ ನೆರಳು ಹಾಕುತ್ತಿತ್ತು. ಪೂರ್ವದ ಅಫಘಾನ್ ರಾಜರು ಬದ್ಧಹಸ್ತರಾಗಿ ದಿಲ್ಲೀಶ್ವರನಿಗೆ ಕೈಮುಗಿದರು. ರಾಜಪುತ್ರರಲ್ಲಿ ಅನೇಕರು ಅವನ ದೋರ್ದಂಡ ಪ್ರತಾಪವನ್ನು ಸಹಿಸಲಾರದೆ, ಅವನ ಗದ್ದುಗೆಯ ನೆರಳಲ್ಲಿ ಮರೆಹೊಕ್ಕರು. ಅವರ ಅನೇಕ ದುರ್ಗಗಳು ಮೊಘಲರ ವಿಹಾರಸ್ಥಾನಗಳಾದವು. ಪರಂತು ಗಢಾಮಂಡಲದ ರಾಣಿಯು ತನ್ನ ಕೊರಳನ್ನು ಅಕ್ಬರನ ಪಾಶಕ್ಕೆ ಒಡ್ಡಲಿಲ್ಲ. ಚತುರೋಪಾಯ ಸಂಪನ್ನನಾದ ಅಕ್ಬರನು ಗಢಾಮಂಡಲದ ರಾಣಿಯಾದ ದುರ್ಗಾವತಿಯು ತನ್ನ ಅನುಚರಿಯಾಗುವಂತೆ, ಹಲವು ಉಪಾಯಗಳನ್ನು ಮಾಡಿದನು. ತೇಜಸ್ವಿನಿಯಾದ ದುರ್ಗಾವತಿಯ ವೀರಸಾಹಸದಿಂದ, ಅವೆಲ್ಲವೂ ಬಯಲಾಗಿ ಹೋದುವು.

ದುರ್ಗಾವತಿಯು ಮಧ್ಯಹಿಂದೂಸ್ಥಾನದ ಮಹೊಬ್ಬಾ ಸಂಸ್ಥಾನದ ರಾಜನಾದ ಚಂದೇಲನ ಮಗಳು. ದುರ್ಗದ ಅಧಿದೇವತೆಯ ನಾಮಾಂಕಿತದಿಂದ ಅವಳಿಗೆ ದುರ್ಗಾವತಿ ಎಂದು ಹೆಸರಿಟ್ಟರು. ಕನ್ನಿಕೆಯ ಬುದ್ಧಿ ಸಂಪನ್ನತೆಯನ್ನೂ ಸೌಂದರ್ಯವನ್ನೂ ನೋಡಿ ಆನಂದಪಡುತ್ತಲಿದ್ದ ಚಂದೇಲನು, ತನ್ನ ವಂಶಕ್ಕೆ ಅನುರೂಪ ನಾದ ಕುಲೀನ ರಾಜಪುತ್ರ ರಾಜನಿಗೆ ಅವಳನ್ನು ಕೊಡಬೇಕೆಂದು ಮನಸ್ಸು ಮಾಡಿದ್ದನು. ದುರ್ಗಾವತಿಯು ಗಢಾಮಂಡಲದ ಗೌಡರಾಜನಾದ ದಳಪತಿಶಹನ ಸಾಹಸಕ್ಕೂ ಪರಾಕ್ರಮಕ್ಕೂ ಮುಗ್ಧಳಾಗಿ ತನ್ನ ತಂದೆಗೆ ತಿಳಿಯದಂತೆ ಆ ವೀರನನ್ನು ಹೃದಯದಲ್ಲಿ ವರಿಸಿದ್ದಳು. ದಳಪತಿಶಹನು ಮಹಾಯೋಧನು; ರಾಜಕಾರ್ಯ ದುರಂಧರನು. ರಾಜಪುತ್ರರಮಣಿಯರ ಮಾನರಕ್ಷಕನು. ದುರ್ಗಾವತಿಯು ಅಂತರಂಗದಲ್ಲಿ ತನ್ನ ಪ್ರಣಯ ಚಿಹ್ನವಾದ ಹೊನ್ನಿನ ತೆಂಗಾಯಿಯನ್ನು ದಳಪತಿಶಹನಿಗೆ ಕಳುಹಿಸಿದಳು. ದಳಪತಿ ಶಹನು ಕನ್ನಿಕೆಯ ಪ್ರೇಮ ಪುರಸ್ಕಾರವನ್ನು ಅತ್ಯಂತ ಶ್ರದ್ಧೆಯಿಂದ ಸ್ವೀಕರಿಸಿದನು. ಕ್ರಮೇಣ ದುರ್ಗಾವತಿಯ ಆಶೆಯು ಹೊರಬಿದ್ದಿತು. ದುರ್ಗಾವತಿಯ ತಂದೆಯು ಈ ಸಂಬಂಧವನ್ನು ಒಪ್ಪಲಿಲ್ಲ. ದಳಪತಿಶಹನು ಸಾಮಾನ್ಯ ರಾಜಪುತ್ರನೆಂದೂ, ಅವನ ರಾಜ್ಯವು ಬಲು ಚಿಕ್ಕದೆಂದೂ, ಅವನು ಅಳಿಯನಾದರೆ ತನ್ನ ಕುಲಗೌರವವು ಕಳಂಕಿತವಾಗುವುದೆಂದೂ ಭಾವಿಸಿ, ಒಂದು ಉಪಾಯವನ್ನು ಮಾಡಿದನು. ದಳಪತಿ ಶಹನು ಅರ್ಧಲಕ್ಷ ಸೈನ್ಯದೊಡನೆ ಸ್ವಯಂವರಕ್ಕೆ ಬರಬೇಕೆಂದು ಚಂದೇಲನು ಹೇಳಿಕಳುಹಿಸಿದನು. ಅಷ್ಟು ಸೈನ್ಯವನ್ನು ತನ್ನ ಚಿಕ್ಕ ಮಂಡಲದಲ್ಲಿ ಸಾಮಾನ್ಯ ರಾಜನಾದ ದಳಪತಿಶಹನು ಜತೆಗೊಳಿಸಲಾರನೆಂದು ಚಂದೇಲನು ಬಗೆದನು. ವೀರಭೂಮಿಯು ತುರುಕರ ಪಾಲಾದರೂ, ವೀರತ್ವವು ಈ ಭಾರತ ಭೂಮಿಯಿಂದ ಇನ್ನೂ ನಿರ್ನಾಮವಾಗಿರಲಿಲ್ಲ ಎಂದು ಚಂದೇಲನು ತಿಳಿದಿರಲಿಲ್ಲ. ಪ್ರಸಿದ್ಧ ವೀರನಿದ್ದರೆ, ರಾಜಪುತ್ರರು ಉತ್ಸಾಹಿತರಾಗಿ ಅವನ ಪತಾಕೆಯ ಕೆಳಗೆ ಇನ್ನೂ ಒಟ್ಟು ಗೂಡುತ್ತಿದ್ದರೆಂದು ಚಂದೇಲನ ಮನಸ್ಸಿಗೆ ಹತ್ತಲಿಲ್ಲ. ಲಕ್ಷಾರ್ಧಸೈನ್ಯವನ್ನು ಮೋಹರಿಸಲಾರದೆ ದಳಪತಿ ಶಹನು ತಾನೇ ಹಿಂದೆಗೆವನೆಂದು ಚಂದೇಲನು ನಂಬಿದನು.

ಸ್ವಯಂವರದ ದಿನವು ಪ್ರಾಪ್ತವಾಯಿತು. ದುರ್ಗಾವತಿಯ ಸೌಂದರ್ಯ ಕೀರ್ತಿಯನ್ನು ಕೇಳಿ ಮೋಹಿತ ರಾದ ರಾಜಪುತ್ರರೆಲ್ಲರೂ ಮಂಟಪದಲ್ಲಿ ಬಂದು ನೆರೆದರು. ಆ ರಾಜಪುತ್ರರ ಮಂಡಲದಲ್ಲಿ ಗಢಾಮಂಡಲದ ನಾಯಕನು ಮಾತ್ರ ಇರಲಿಲ್ಲ. ಕನ್ನಿಕೆಯಾದ ದುರ್ಗಾವತಿಯು ಕೈಯಲ್ಲಿ ಪುಷ್ಪಮಾಲಿಕೆಯನ್ನು ಹಿಡಿದುಕೊಂಡು, ಸ್ವಯಂವರ ಮಂಟಪದಲ್ಲಿ ಮೆಲ್ಲನೆ ಕಾಲಿಟ್ಟಳು; ಮುಹೂರ್ತ ಮಾತ್ರ ನಿಂತುಕೊಂಡು, ತನ್ನ ಕಣ್ಣಿನ ಮಿಂಚನ್ನು ಸಭಾಮಂಡಲದಲ್ಲಿ ಬೀರಿದಳು. ಕೂಡಲೇ ಅವನತಮಸ್ತಕಳಾಗಿ ಪ್ರತಿಮೆಯಂತೆ ನಿಂತುಬಿಟ್ಟಳು. ದಳಪತಿ ಶಹನ ಉಜ್ವಲ ಮುಖವು ಅಲ್ಲಿ ತೋರಲಿಲ್ಲ. "ಆಸಿಸುವಂತಹನನ್ನು ಆಯ್ದುಕೊಳ್ಳು" ಎಂದು ಮುದಿ ಹೃದಯ ನಾದ ತಂದೆಯು ಅಪ್ಪಣೆ ಕೊಟ್ಟನು. ದುರ್ಗಾವತಿಯು ನಿರುತ್ತರಳಾದಳು. ತಿಳಿಯದಂತೆ ಜಗುಳಿಬಿದ್ದ ಅಶ್ರು ದಳವು ಹೂಮಾಲೆಯಲ್ಲಿ ಹಿಮಬಿಂದುವಿನಂತೆ ನಿಮಿಷಮಾತ್ರವಿದ್ದು ತೊಲಗಿ, ಕರ್ಕಶವಾದ ಭೂಮಿಗೆ ಬಿದ್ದು ಆರಿಹೋಯಿತು. ಸ್ವಯಂವರ ಮಂಗಲ ಮುಹೂರ್ತವು ತಪ್ಪಿಹೋಗುವುದೆಂದು ಚಂದೇಲನು ದುರ್ಗಾವತಿಯನ್ನು ತವಕಿಸಿದನು. ಅವಳ ಮುಕುಳಿತವಾದ ಮನಸ್ಸಿನಲ್ಲಿ ಆ ಮಾತು ಇಳಿಯಲಿಲ್ಲ. ಅವಳು ಅಧೋವದನಳಾಗಿ ಕಣ್ಣೆತ್ತದೆ ಮುಂದೆ ಮುಂದೆ ಹೆಜ್ಜೆಯನ್ನಿಟ್ಟಳು. ಅವಳ ಹೃದಯ ಕಮಲವನ್ನು ವಿಕಸಿಸುವ ಬಾಲಸೂರ್ಯನು ಇನ್ನೂ ಪೂರ್ವ ಶಿಖರವನ್ನು ಹತ್ತಿರಲಿಲ್ಲ. ದಳಪತಿ ಶಹನು ಸೈನ್ಯವನ್ನು ಸೇರಿಸಿ, ದುರ್ಗದ ಒಂದುಗಡೆಯಲ್ಲಿ ನಿಲ್ಲಿಸಿ, ವಿವಾಹಮಂಟಪವನ್ನು ಅಲಂಕರಿಸುವುದಕ್ಕೆ ಕಾಲವಿಳಂಬವಾಯಿತು. ಕನ್ನೆಯ ಈ ಅವಸ್ಥೆಯನ್ನು ನೋಡಿ ಆಮಂತ್ರಿತ ರಾಜಪುತ್ರರೆಲ್ಲರೂ ಆಶ್ಚರ್ಯಗೊಂಡರು. ಕೈಕಟ್ಟಿದಂತಾದ ಕನ್ನೆಯು

ಏನು ಮಾಡಬೇಕೆಂಬುದು ಮುಂದುಗಾಣದೆ, ನೆಟ್ಟನೆ ಮಂಟಪದ ಬಹಿರ್ದ್ವಾರಕ್ಕೆ ಸರಿಯಾಗಿ ನಡೆದಳು. ಎರಡೂ ಕಡೆಗಳಲ್ಲಿ ಕುಳಿತುಕೊಂಡ ಅತಿಥಿಗಳೆಲ್ಲ ಕೊರಳುಗಳನ್ನು ನೀಡುತ್ತ ಹೊರಬಾಗಿಲಿನ ಕಡೆಗೆ ತಮ್ಮ ದೃಷ್ಟಿಯನ್ನು ಚಾಚಿದರು. ರಾಜಾಂಗಣದಲ್ಲಿ ಆನೆಯನ್ನು ಹತ್ತಿ ಒಬ್ಬ ಯೋಧನು ಬರುತ್ತಿದ್ದನು. ಅವರು ನೋಡುವಷ್ಟರಲ್ಲಿ ಯೋಧನು ಆನೆಯಿಂದ ಇಳಿದು ಮಂಟಪವನ್ನು ಪ್ರವೇಶಿಸಲಿಕ್ಕಿದ್ದನು. ದೂರದಿಂದ ಹಾರಿ ಬರುವ ಗಂಡುಕಪೋತವನ್ನು ವಿರಹಿಣಿಯಾದ ಹೆಣ್ಣುಕಪೋತವು ದೃಷ್ಟಿಸಿ, ಗರಿಗಳನ್ನು ಬಿಚ್ಚಿ, ಹಾರಿಹೋಗಿ ಅದರ ಬಳಿಸಂದು ಅದರ ರೆಕ್ಕೆಗಳಲ್ಲಿ ಒಗ್ಗೂಡುವಂತೆ, ತನ್ನ ಪ್ರಾಣವಲ್ಲಭನಾದ ದಳಪತಿಶಹನು ಸ್ವಯಂವರ ಮಂಟಪದಲ್ಲಿ ಪದಾರ್ಪಣ ಮಾಡುತ್ತಲೇ ಪುಳಕಿತಳಾದ ದುರ್ಗಾವತಿಯು ಓಡಿಹೋಗಿ ಕುಸುಮ ಮಾಲೆಯನ್ನು ಅವನ ಕಂಠದಲ್ಲಿ ಇಟ್ಟು, ಅವನ ವಾಮಭಾಗವನ್ನು ಅವಲಂಬಿಸಿ ನಿಂತುಬಿಟ್ಟಳು. ಭಗ್ನಮನೋರಥನಾದ ಚಂದೇಲನು ತನ್ನ ಮಗಳ ನಡತೆಯನ್ನು ನೋಡಿ ಅವಾಕ್ಕಾದನು. ಮನಃಪೂರ್ವಕವಾಗಿ ಮಗಳನ್ನು ಅಳಿಯನಿಗೆ ಕೊಡುವುದಕ್ಕೆ ಅವನು ಸಮ್ಮತಿಸಲಿಲ್ಲ. ದುರ್ಗಾವತಿಯನ್ನು ಅಳಿಯನ ಕೈಗೆ ಖಡ್ಗಧಾರಾಪೂರ್ವಕವಾಗಿ ಕೊಡಬೇಕೆಂದು ನಿಶ್ಚಯಿಸಿದನು. ಕೂಡಲೇ ಇತ್ತಂಡಗಳ ಸೇನೆಗಳು ಸನ್ನದ್ಧವಾಗಿ ಬಂದುವು; ಸ್ವಯಂವರ ಭೂಮಿಯು ಸಮರಭೂಮಿಯಾಯಿತು; ಅಳಿಯನಿಗೂ ಮಾವನಿಗೂ ಕಾಳಗವಾಯಿತು. ಚಂದೇಲನು ಸೋತುಹೋದನು. ವಿಜಯಿಯಾದ ದಳಪತಿಶಹನು ರಮಣೀ ರತ್ನವನ್ನು ಹಾರಿಸಿಕೊಂಡು ಹೋದನು.

ಆದರೆ ದುರ್ಗಾವತಿಯ ಸಹವಾಸಕಾಲವನ್ನು ಚಿರಕಾಲ ಅನುಭವಿಸುವುದನ್ನು ದಳಪತಿಶಹನ ಹಣೆಯಲ್ಲಿ ವಿಧಾತನು ಬರೆದಿರಲಿಲ್ಲ. ದುರ್ಗಾವತಿಯಲ್ಲಿ ಪುತ್ರೋತ್ಸವವಾದ ಸ್ವಲ್ಪ ಕಾಲದಲ್ಲಿಯೇ ದಳಪತಿಶಹನು ಕಾಲವಶನಾದನು. ಗಢಾಮಂಡಲದ ಮೇಲೆ ಸ್ವಲ್ಪ ಕಾಲದವರೆಗೆ ಅಂಧಕಾರವು ಆಚ್ಛಾದಿತವಾಯಿತು. ಗಢಾಮಂಡಲಕ್ಕೆ ಉಂಟಾದ ಈ ದುರ್ಗತಿಯನ್ನು ನೋಡಿ ಅಕ್ಬರನು ಸಮಯವನ್ನು ಎದುರ್ನೋಡುತ್ತಿದ್ದನು. ಕೂಡಲೇ ದುರ್ಗಾವತಿಯು ತನಗೆ ಒದಗಿದ ಕಷ್ಟಸಂಕಷ್ಟಗಳನ್ನು ಮರೆತುಬಿಟ್ಟಳು, ಪತಿವಿಯೋಗದಿಂದ ಉಂಟಾದ ಕಣ್ಣೀರುಗಳನ್ನು ಕಣ್ಣುಗಳಿಂದ ಒರಸಿಬಿಟ್ಟಳು. ದುಃಖಸೂಚಕವಾದ ವಸನಗಳನ್ನು ತೆಗೆದಿಟ್ಟಳು. ಪ್ರಜಾಪರಿಪಾಲನದಲ್ಲಿಯೂ ಸಂಸ್ಥಾನಾಭಿವೃದ್ಧಿಯಲ್ಲಿಯೂ, ಬಾಲಕನ ಅಭ್ಯುದಯದಲ್ಲಿಯೂ ತನ್ನ ಮನಸ್ಸನ್ನು ಊರಿದಳು. ಬಾಲಕನಾದ ವೀರ ನರೇಂದ್ರನು ಪ್ರಾಯಕ್ಕೆ ಬರುವವರೆಗೆ ಅಸಾಧಾರಣ ಸ್ತ್ರೀಯಾದ ದುರ್ಗಾವತಿಯು ರಾಜಕಾರ್ಯ ಸೂತ್ರಗಳನ್ನು ತನ್ನ ಕೈಯಲ್ಲೇ ಹಿಡಿದುಕೊಂಡಳು. ಅವಳ ಆಳಿಕೆಯಲ್ಲಿ ಮಾರ್ಗಗಳು ಸಂಸ್ಥಾನವನ್ನು ಸೀಳಿಹೋದುವು. ಅಲ್ಲಲ್ಲಿ ಪ್ರಯಾಣಸ್ಥರಿಗೆ ಅನುಕೂಲವಾದ ವಾಪಿಗಳೂ ಪ್ರಪಶಾಲೆಗಳೂ ತಲೆದೋರಿದುವು. ಕೆರೆಕಾಲುವೆಗಳು ವ್ಯವಸಾಯಕ್ಕೆ ಸಹಾಯವಾಗಿ ಹರಿದುಹೋದುವು. ರಾಜ್ಯದ ಕಂದಾಯವು ಇಮ್ಮಡಿಯಾಯಿತು. ಗಢಾಮಂಡಲವು ಉನ್ನತಿಗೆ ಏರಿತು. ಪ್ರಜೆಗಳಿಗೆ ತಾಯಿಯಂತಿದ್ದ ದುರ್ಗಾವತಿಯ ಆಳಿಕೆಯಲ್ಲಿ ಸುಖವಂತ ಜನರೆಲ್ಲರು ತಮ್ಮ ಅಧಿಪತಿಯ ಅಕಾಲಿಕ ಮರಣ ದುಃಖವನ್ನು ಕ್ರಮೇಣ ಮರೆತುಬಿಟ್ಟರು.

ಅವಿಚ್ಛಿನ್ನವಾದ ಸುಖವು ಐಹಿಕ ಮನುಷ್ಯನ ಪಾಲಿಗೆ ಬರುವುದಿಲ್ಲ. ದುರ್ಗಾವತಿಯ ರಾಜ್ಯರಕ್ಷಣ ಸುಖವನ್ನು ಅನುಭವಿಸುವ ಅದೃಷ್ಟವು ಪ್ರಜೆಗಳಿಗೆ ಇದ್ದಿಲ್ಲ. ಅವಳ ದೇಶೋನ್ನತಿಯ ಸಮಾಚಾರವನ್ನು ಕೇಳಿ ಅಸೂಯೆಗೊಂಡವರು ಅನೇಕರು ಇದ್ದರು. ಇಂತಹವರಲ್ಲಿ ಅಸೋಫ್‌ಖಾನನು ಒಬ್ಬನು. ಅಸೋಫ್‌ಖಾನನು ಗಢಾಮಂಡಲದ ಬಳಿಯಲ್ಲಿರುವ ಮಾಳವದೇಶದ ಸುಬೇದಾರನಾಗಿದ್ದನು. ಸ್ತ್ರೀಪಾಲಿತವಾದ ಸಂಸ್ಥಾನವನ್ನು ಆಕ್ರಮಿಸುವುದಕ್ಕಾಗಿ ಇದೇ ಅವಕಾಶವೆಂದು ಅವನು ರಾಜಾಧಿರಾಜನಾದ ಅಕ್ಬರನಿಗೆ

ಬರೆದು ಕಳುಹಿಸಿದನು. ಅಕ್ಬರನು ಪರರಾಷ್ಟ್ರ ಆಕಾಂಕ್ಷಿತನಾಗಿದ್ದನು. ಶತ್ರುಗಳಲ್ಲಿ ಕೂಡ ಸದ್ಗುಣವನ್ನು ಪರಿಗ್ರಹಿಸಿ ಸನ್ಮಾನಿಸುತ್ತಿದ್ದನು. ಅಬಲೆಯಾದ ದುರ್ಗಾವತಿಯನ್ನೂ ಬಾಲಕನಾದ ವೀರ ನರೇಂದ್ರನನ್ನು ನೋಯಿಸುವುದು ಅಕ್ಬರನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಗಢಾಮಂಡಲವು ರಕ್ತಪಾತವಿಲ್ಲದೆ ತನಗೆ ಶರಣು ಬರಬೇಕೆಂದು ತನ್ನ ಅಂತರ್ಯದಲ್ಲಿ ಆಶಿಸುತ್ತಿದ್ದನು. ಅಸೋಫಖಾನನು ಪುನಃ ಪುನಃ ಈ ವಿಷಯ ವನ್ನು ಅಕ್ಬರನ ಕಿವಿಗೆ ಒತ್ತಿಒತ್ತಿ ಕೊನೆಗೆ ಗಢಾಮಂಡಲದ ಮೇಲೆ ದಳವನ್ನು ನಡೆಯಿಸಬಹುದೆಂದು ಅವನು ಅಪ್ಪಣೆಯನ್ನು ಪಡೆದನು.

ಅಸೋಫ್‌ಖಾನನು ಅಸಂಖ್ಯಾತ ಸೇನೆಯೊಡನೆ ಪುರದ್ವಾರದಲ್ಲಿ ಬಂದಿಳಿದನು. ನಗರದಲ್ಲಿ ಕೋಲಾ ಹಲವು ಎದ್ದಿತು. ಅರಮನೆಯಲ್ಲಿ ಎಲ್ಲರೂ ದಿಗಿಲುಬಿದ್ದರು. ಕೂಡಲೇ ದುರ್ಗಾವತಿಯು ಅರಮನೆಯನ್ನು ಬಿಟ್ಟು ಕೆಳಕ್ಕೆ ಬಂದಳು. ಸಂಸ್ಥಾನದ ಮುಖ್ಯಾಧಿಕಾರಿಗಳನ್ನು ಕರೆಯಿಸಿ ದುರ್ಗಾವತಿಯು ಹೀಗೆಂದಳು:— "ನೀವು ಬುದ್ಧಿಸಂಪನ್ನರು; ರಣಪುಣ್ಯಶೀಲರು. ನಾನು ಎಷ್ಟಾದರೂ ಹೆಂಗಸು; ಅರಮನೆಯನ್ನು ಬಿಟ್ಟವಳಲ್ಲ. ನಮ್ಮೆಲ್ಲರಿಗೆ ಬಂದೊದಗಿದ ಆಪತ್ತು ದುಸ್ಸಹವಾಗಿದೆ. ನಿರಪರಾಧಿಗಳಾದ ನಮ್ಮನ್ನು ಕೊಂದು, ನಮ್ಮ ಸದ್ಧರ್ಮವನ್ನು ಹಾಳುಮಾಡಿ, ನಮ್ಮ ರಾಜ್ಯವನ್ನು ಆಕ್ರಮಿಸಬೇಕೆಂಬ ಈ ಅಸೋಫಖಾನನ ನಡತೆಯು ನಿಮಗೆ ಯುಕ್ತತೋರುವುದೇ? ಇದಕ್ಕಿಂತಲೂ ದುಃಖಕರವಾದ ಸಂಗತಿಯುಂಟೇ? ಮನಸ್ವಿಯಾಗಿ ರಾಜ ಪುತ್ರರನ್ನು ಈ ತೆರನಾಗಿ ಪೀಡಿಸುವುದೆಂದರೆ ನಮ್ಮಲ್ಲಿ ಸಹನಾಶಕ್ತಿಯಲ್ಲದೆ ಪೌರುಷವೇ ಇಲ್ಲದಂತಾಯಿ ತಲ್ಲಾ! ನನ್ನ ಪ್ರಜೆಗಳಿರ! ನನ್ನ ಬಂಧುಗಳಿರ! ನಾವು ಹೆಣ್ಣುಕುರಿಗಳಂತೆ ಸುಮ್ಮನಿದ್ದರೆ ಪಲಾಯನಮಾಡುವ ಕತ್ತೆಕಿರುಬನು ಮೇಲೆಬೀಳಲು ಮುಂದೆ ಹೆಜ್ಜೆಯನ್ನಿಡುವುದು. ನಿಮ್ಮ ಈ ದೇಶವು ಶತ್ರುಗಳ ಪಾಲಾಗು ವುದು. ನಿಮ್ಮ ಮಕ್ಕಳುಮರಿಗಳು ಅವರ ದಾಸರಾಗುವರು. ನಿಮ್ಮ ಹೆಂಡತಿಯರು ಅವರ ಮನೆಯ ತೊತ್ತು ಗಳಾಗುವರು. ಇದಕ್ಕಿಂತಲೂ ಹೀನವಾದ ಅಧೋಗತಿಯುಂಟೆ? ಯಾರು ನಮ್ಮ ಸನಾತನ ಧರ್ಮದ ವಿಗ್ರಹಗಳನ್ನು ಪದಹತಿಯಿಂದ ಚೂರ್ಣಮಾಡುವರೋ, ಯಾರು ನಮ್ಮ ಬೆನ್ನಮೇಲೆ ಕುಳಿತುಕೊಂಡು ನಿರಂಕುಶರಾಗಿ ಇಲ್ಲಿ ಆಳುವರೋ, ಯಾರು ನಮ್ಮ ಕಳತ್ರಪುತ್ರಿಯರ ಪಾತಿವ್ರತ್ಯವನ್ನು ಸೂರೆಗೊಳ್ಳು ವರೋ ಅವರು ನಮ್ಮ ಪುರದ್ವಾರದ ಬಳಿಯಲ್ಲಿ ಇಳಿದಿರುವರಂತೆ. ಭಾರತ ಭೂಮಿಯಲ್ಲಿ ಇನ್ನೂ ವೀರತ್ವವು ಇದ್ದರೆ ಅದು ಈಗ ಚಿಗುರಲಿ! ಭಾಪ್ಪಾರಾಯನ ಪವಿತ್ರರಕ್ತವು ನಿಮ್ಮ ಧಮನಿಯಲ್ಲಿ ಹರಿಯುವುದು ನಿಜ ವಾದರೆ, ಅದರ ದೃಷ್ಟಾಂತವು ಈಗ ತೋರಲಿ! ನೀವು ವೀರಶಿರೋಮಣಿಗಳಾದ ರಾಜಪುತ್ರರ ಸಂತತಿಯವ ರಾಗಿದ್ದರೆ, ಕತ್ತೆಕಿರುಬಗಳು ತಡೆಗಟ್ಟಿದ್ದ ಈ ಅನಾಥ ಗೋವನ್ನು ರಕ್ಷಿಸಿರಿ! ಯಾವತರದ ಹತ್ಯಕ್ಕೂ ಅವರು ಹೇಸುವವರಲ್ಲ. ಆದರೆ ಅವರು ನನ್ನ ಯಥಾರ್ಥ ಸ್ಥಿತಿಯನ್ನು ಕಂಡುಹಿಡಿಯಲಿಲ್ಲ. ಈ ಗೋವೇ ಅವರಿಗೆ ವ್ಯಾಘ್ರಿಯಾಗಿ ಪರಿಣಮಿಸುವುದೆಂದು ತಿಳಿದುಕೊಳ್ಳಿರಿ! ದುರ್ಗಾ! ನಮ್ಮೆಲ್ಲರಿಗೆ ಸಹಾಯಕಳಾಗು! ದುರ್ಗಾ! ನಮ್ಮ ಶತ್ರುಗಳನ್ನು ಹಾರಿಸಿಬಿಡುವುದಕ್ಕೆ ನಮ್ಮ ಹೃದಯದಲ್ಲಿ ಉತ್ಕಟಶಕ್ತಿಯನ್ನು ತುಂಬಿಸು!"

ದುರ್ಗಾವತಿಯ ಈ ಉತ್ತೇಜಕ ವಾಕ್ಯಗಳನ್ನು ಕೇಳಿ ನಗರದ ರಾಜಪುತ್ರರೆಲ್ಲರು ರಕ್ತವರ್ಣವಸನ ವನ್ನು ಉಟ್ಟುಕೊಂಡು ಯುದ್ಧಕ್ಕೆ ಸಿದ್ಧರಾಗಿ ಬಂದರು. ಎಂಟುಸಾವಿರ ಸವಾರರೂ ಎಂಟುಸಾವಿರ ಸೈನಿಕರೂ ಸ್ವದೇಶವನ್ನು ರಕ್ಷಿಸುವುದಕ್ಕೆ ಮುಂದಾದರು. ಈ ಸೈನ್ಯಕ್ಕೆ ದುರ್ಗಾವತಿ ತಾನೇ ಅಗ್ರೇಸರಳಾದಳು. ಲೋಹ ಕವಚವನ್ನು ತೊಟ್ಟುಕೊಂಡು, ಶಸ್ತ್ರಧಾರಿಣಿಯಾಗಿ, ದುರ್ಗಾವತಿಯು ಕುದುರೆಯನ್ನು ಹತ್ತಿ, ಸೈನ್ಯವನ್ನು ನಡೆಯಿಸಿದಳು. ಯುದ್ಧವು ಪ್ರಾರಂಭವಾಯಿತು. ದುರ್ಗಾವತಿಯು ಪ್ರಾಣದ ಮೇಲೆ ಆಶೆಯನ್ನಿಡದೆ,

ಶತ್ರುಸೈನ್ಯವನ್ನು ಭೇದಿಸಿಕೊಂಡು ಹೋದಳು. ಅವಳ ಭಲ್ಲೆಯ ಪೆಟ್ಟಿಗೆ ಶತ್ರುಗಳು ಚೂರ್ಣರಾಗಿ ಹೋದರು. ಹಿಂದಿರುಗುವಾಗ ದುರ್ಗಾವತಿಯು ಶತ್ರುವಿನ ವ್ಯೂಹದಲ್ಲಿ ಸಿಕ್ಕಿಬಿದ್ದಳು. ಅವಳ ಭುಜದಿಂದ ರಕ್ತಪ್ರವಾಹವು ಹರಿಯುತ್ತಿತ್ತು. ಅವಳನ್ನು ರಕ್ಷಿಸುವುದಕ್ಕೆ ರಾಜಪುತ್ರರು ತಂಡತಂಡವಾಗಿ ಹೋಗಿ ರಣರಂಗದಲ್ಲಿ ಮಲಗಿದರು. ಕೊನೆಗೆ ರಣಮಂತ್ರಿಯಾದ ಸಾಕ್ಷಾತ್ "ದುರ್ಗಾವತಿ"ಯನ್ನು ರಾಜಪುತ್ರರ ಪಾಳಯಕ್ಕೆ ಸುರಕ್ಷಿತವಾಗಿ ತಂದರು. ದೂರದಿಂದ ಇದನ್ನೆಲ್ಲ ನೋಡುತ್ತಿದ್ದ ಅಸೋಫಖಾನನು ಆಶ್ಚರ್ಯದಿಂದ ಭ್ರಾಂತಿಗೊಂಡನು. ಈ ಭ್ರಾಂತಿಯೇ ಪಲಾಯನವಾಗಿ ಪರಿಣಮಿಸಿತು. ಹತಾಶನಾದ ಅಸೋಫ್‌ಖಾನನು ಅಳಿದುಳಿದ ಸೇನೆಯನ್ನು ಕೂಡಿಸಿ ಅಪಮಾನವನ್ನೂ ಜೀವವನೂ ಕಟ್ಟಿಕೊಂಡು. ಮಾಳವದೇಶಕ್ಕೆ ಜಾರಿಬಿಟ್ಟನು.

ನೀಚನಾದ ಅಸೋಫಖಾನನು ಈ ಅಪಜಯದಿಂದಲೂ ಅಪಮಾನದಿಂದಲೂ ಇನ್ನೂ ಕೆರಳಿದಂತಾದನು. ಗಢಾಮಂಡಲವನ್ನು ಧ್ವಂಸಮಾಡಬೇಕೆಂದು ಅವನು 18 ತಿಂಗಳುಗಳ ಮೇಲೆ ಮಹಾ ಸೈನ್ಯವನ್ನು ಜೋಡಿಸಿಕೊಂಡು ಬಂದನು. ಆದರೂ ಗಢಾಮಂಡಲಕ್ಕೆ ರಕ್ಷಕರು ಇಲ್ಲದೆ ಇರಲಿಲ್ಲ. ಈ ಸಲವೂ ಅಸೋಫ್‌ಖಾನನು ಅಪಜಯವನ್ನು ತಾಳಲಾರದೆ ಓಡಿಹೋದನು. ಯುದ್ಧದ ಮುಖಾಂತರವಾಗಿ ತನ್ನ ಮನೋರಥವು ಸಿದ್ಧಿಸದೆ ಇದ್ದುದರಿಂದ ಅಧಮಾಧಮನಾದ ಅಸೋಫಖಾನನು ಕಪಟೋಪಾಯಗಳನ್ನು ಮಾಡುವುದಕ್ಕೆ ಕೈಹಾಕಿದನು. ದುರ್ಗಾವತಿಯ ರಾಜ್ಯಾಧಿಕಾರದಲ್ಲಿ ಪ್ರಮುಖರಾದ ಸರದಾರರಲ್ಲಿ ಭೇದವುಂಟಾಗುವಂತೆಯೂ. ಅವಳ ಆಪ್ತರು ಅವಳಿಂದ ಸಡಲಿಹೋಗುವಂತೆಯೂ ಗೂಢಚಾರರಿಂದ ಒಳಸಂಚು ನಡೆಯಿಸಿದನು. ಈ ಕುಹಕದಿಂದ ರಾಜ್ಯದಲ್ಲಿ ಅನೇಕ ಅನಿಷ್ಟಗಳು ಮೊಳೆತುವು. ದುರ್ಗಾವತಿಯು ಈಗ ಯಥಾರ್ಥವಾಗಿ ಅಬಲೆಯಾದಳು. ಆದರೂ ತನ್ನ ದೇಹದಲ್ಲಿ ಪ್ರಾಣವಾಯುವು ಸಂಚರಿಸುವವರೆಗೆ ಮೊಘಲರು ತನ್ನ ರಾಜ್ಯದಲ್ಲಿ ಕಾಲಿಡದ ಹಾಗೆ ಮಾಡುವೆನೆಂದು ವೀರರಾಜ್ಞಿಯು ಶಪಥ ಕಟ್ಟಿದಳು. ಅಷ್ಟರಲ್ಲಿ ಅಸೋಫಖಾನನು ಮೂರನೆಯ ಸಲ ದಂಡಿನೊಡನೆ ಬಂದನು. ದುರ್ಗಾವತಿಯು ಇದ್ದಷ್ಟು ಸೇನೆಯನ್ನು ಒತ್ತರಿಸಿಕೊಂಡು ಮುಂದರಿಸಿದಳು. ಆ ಕಾಲದಲ್ಲಿ ಅವಳ ಹದಿನಾಲ್ಕು ವರ್ಷ ವಯಸ್ಸಿನ ಬಾಲಕನು ಆಯುಧಪಾಣಿಯಾಗಿ ರಣಸನ್ನದ್ಧನಾದನು. ಯುದ್ಧವು ಘೋರವಾಗಿ ನಡೆಯಿತು. ವೀರೇಂದ್ರನು ಉನ್ಮತ್ತನಂತೆ ಶತ್ರುಗಳ ಮೇಲೆ ಬಿದ್ದು ಕಾಳಗಮಾಡಿದನು. ಕೊನೆಗೆ ಗಾಯಗೊಂಡು ಖಡ್ಗಹಸ್ತನಾಗಿ ರಣರಂಗದಲ್ಲಿ ಮಲಗಿದನು: ಮಲಗಿದವನು ಮತ್ತೇಳಲಿಲ್ಲ. ಮರಿಯನ್ನು ಕಳೆದ ವ್ಯಾಘ್ರಿಯಂತೆ ದುರ್ಗಾವತಿ ಆವೇಶಗೊಂಡು ಶತ್ರುಗಳ ಮೇಲೆ ಬೀಳಲು ಹೊರಟಳು. "ಮರಣಕರವಾದ ಏಟನ್ನು ಹೊಂದಿದ ಬಾಲಕನನ್ನು ಕರೆದುಕೊಂಡು ಸ್ವಾಮಿನಿ ಶಿಬಿರಕ್ಕೆ ತೆರಳಬಾರದೆ? ನಮ್ಮಂತಹ ವೀರರಿರಲು ಯುದ್ಧದ ಗೊಡವೆ ತಮಗೇಕೆ?" ಎಂದು ರಣರಂಗದಲ್ಲಿ ಸ್ವಾಮಿಭಕ್ತನಾದ ರಾಜಪುತ್ರನೊಬ್ಬನು ಕೇಳಿದನು. ಅದಕ್ಕೆ ದುರ್ಗಾವತಿಯು ಗಂಭೀರ ಸ್ವರದಿಂದ "ನಾನು ಹಿಂತಿರುಗುವೆನೆಂಬ ಸುದ್ದಿ ತಿಳಿದರೆ. ಸೈನ್ಯವೆಲ್ಲವೂ ಹಿಮ್ಮೆಟ್ಟುವುದು. ವೀರಕುಮಾರನು ರಣರಂಗದಲ್ಲಿ ಮಡಿದು ಕ್ಷತ್ರಿಯ ಸ್ವರ್ಗವನ್ನು ಪಡೆದನೆಂದರೆ ನನಗೆ ಸಂತೋಷವಲ್ಲವೇ? ಯುದ್ಧ ತೀರಿದೊಡನೆಯೇ ನನ್ನ ಪ್ರಿಯ ಪುತ್ರನನ್ನು ಪರಲೋಕದಲ್ಲಿ ನಾನು ಸೇರಬೇಕೆಂದಿರುವೆನು" ಎಂದು ಹೇಳಿದಳು. ದುರ್ಗಾವತಿ! ನೀನು ಧನ್ಯೆ! ನೀನು ಯುದ್ಧದಲ್ಲಿ ಸೋತರೂ ಇನ್ನು ಗೆದ್ದೆ! ಶತ್ರುಗಳ ಪರಂಪರೆಯ ಹಾವಳಿಗಳಿಂದ ದುರ್ಗಾವತಿಯ ಸೇನೆ ಪುಡಿಪುಡಿಯಾಯಿತು. ಒಂದು ಬಾಣವು ಅವಳ ಕಣ್ಣನ್ನು ಚುಚ್ಚಿತು. ಮತ್ತೊಂದು ಬಾಣವು ಅವಳ ಎದೆಯನ್ನು ನಾಟಿತು. ಬಾಣಗಳನ್ನು ಕಿತ್ತು ತೆಗೆದರೂ ಅವಳು ರಕ್ತಸ್ರಾವದಿಂದ ಮೂರ್ಛೆಹೋಗಿ ವಾಹನದ ಮೇಲೆ ಒರಗಿದಳು. ಅವಳು ಕುಳಿತಿದ್ದ ಆನೆಯನ್ನು ಯೋಧ

ನೊಬ್ಬನು ಶಿಬಿರಕ್ಕೆ ಹಿಂತಿರುಗಿಸಲಿಕ್ಕೆ ಪ್ರಯತ್ನಿಸಿದನು. ಕೂಡಲೇ ಧೀರಯುವತಿಯು ಮೂರ್ಛೆತಿಳಿದು ಎದ್ದು. ಮುಗುಳ್ನಗು ನಗಾಡಿದಳು. "ನನ್ನನ್ನು ಬದುಕಿಸಲು ಎಣಿಸುವೆಯಾ? ನನ್ನನ್ನು ಶಿಬಿರಕ್ಕೆ ಒಯ್ದರೆ, ನನಗೆ ಮುಂದಿನ ಮರಣವನ್ನು ತಪ್ಪಿಸಬಹುದೇ? ಅದರ ಬದಲಾಗಿ ಕೈಯಲ್ಲಿದ್ದ ಶಸ್ತ್ರದಿಂದ ನನ್ನ ಪ್ರಾಣವನ್ನು ದೇಹದಿಂದ ಉಗಿದುಬಿಡು" ಎಂದು ಅಸ್ಫುಟಸ್ವರದಿಂದ ಹೇಳಿದಳು. ಇಂತಹ ಜನನಿಯನ್ನು ಕೊಲ್ಲಲು ಯಾರುತಾನೆ ಕೈಮಾಡುವರು? ಸುತ್ತಲಿರುವವರೆಲ್ಲರೂ ಮರುಗಿದರು. ಕೂಡಲೇ ದುರ್ಗಾವತಿಯು ನಗುತ್ತಾ ತನ್ನ ಖಡ್ಗಕ್ಕೆ ತನ್ನ ಉದರವನ್ನು ಒರೆಯಾಗಿ ಮಾಡಿಬಿಟ್ಟಳು.

ಯುದ್ಧವು ಸಮಾಪ್ತವಾಯಿತು. ಯುದ್ಧದ ನಾಯಕಿಯೇ ರಣತಲದಲ್ಲಿ ಒರಗಿದ ಬಳಿಕ ಯುದ್ಧವನ್ನು ನಡೆಯಿಸುವವರು ಯಾರು? ರಾಜ್ಯವು ಆಸೋಫ ಖಾನನ ವಶವಾಯಿತು. ಆದರೆ ಕ್ಷಾತ್ರಧರ್ಮಪರಾಯಣೆಯಾದ ಆ ವೀರಶಿರೋಮಣಿಯ ಪವಿತ್ರ ದೇಹವು ಶತ್ರುಗಳ ಅಪವಿತ್ರ ಹಸ್ತದಿಂದ ಮಲಿನವಾಗಲಿಲ್ಲ. ಅನುಚರರಲ್ಲಿ ಕೆಲವರು ಕೂಡಲೇ ಅಗ್ನಿಕುಂಡವನ್ನು ಬೆಳಗಿಸಿ. ಶಾಸ್ತ್ರೋಕ್ತವಿಧಿಯಿಂದ ದುರ್ಗಾವತಿಯ ಸಂಸ್ಕಾರಗಳನ್ನು ನಡೆಯಿಸಿದರು.

ದುರ್ಗಾವತಿಯು ಈ ನಶ್ವರ ಶರೀರವನ್ನು ಬಿಟ್ಟು ಅವಿನಶ್ವರ ಕೀರ್ತಿಯನ್ನು ಪಡೆದಳು. ಈ ವೀರ ಯುವತಿಯನ್ನು ಕುರಿತು ಕರ್ನಲ್ ಸ್ಲೀಮನ್ ಎಂಬ ಆಂಗ್ಲೇಯನು ಹೀಗೆ ಬರೆದಿರುವನು "ರಣಶೂರ ದುರ್ಗಾವತಿಯ ಸ್ಮಾರಕವು ಆದೇ ಪರ್ವತ ಪ್ರದೇಶ ಮಧ್ಯದಲ್ಲಿ ಕಟ್ಟಲ್ಪಟ್ಟಿದೆ. ಅಲ್ಲಿ ಎರಡು ಪಾಷಾಣ ಸ್ತಂಭಗಳು ನೆಟ್ಟಗೆ ನಿಲ್ಲಿಸಿದ್ದು, ಅವುಗಳು ಆ ಯುದ್ಧಭೂಮಿಯ ಪ್ರೇಕ್ಷಕರ ಮನಸ್ಸಿನಲ್ಲಿ ಮೂರ್ತಿವಂತವಾದ ದೃಶ್ಯವನ್ನು ಉತ್ಪನ್ನಮಾಡುವುವು. ಈ ಗಿರಿಶಿಖರದಲ್ಲಿ ರಾತ್ರಿಸಮಯದಲ್ಲಿ ಅತಿ ಭಯಂಕರವಾದ ರಣಘೋಷವು ಆಗುತ್ತದೆಂದು ಹೇಳುವರು. ಈ ನಿರ್ಜನವಾದ ಮತ್ತು ರಮಣೀಯವಾದ ಪ್ರದೇಶ ಮಧ್ಯದಲ್ಲಿ ಹೋಗುವ ಪ್ರವಾಸಿ ಜನರು ಆತ್ಮಾನಂದದಿಂದ ಈ ಸ್ಥಳದಲ್ಲಿ ನಡೆಯುವರು. ಈ ರಾಣಿಯ ಸಮಾಧಿಯ ದರ್ಶನವನ್ನು ಪ್ರೇಮಪೂರ್ವಕವಾಗಿ ಸ್ವೀಕರಿಸುವರು; ಅವಳ ಪರಾಕ್ರಮ ಗುಣಗಳಿಂದ ಬೆರಗಾಗಿ ಸ್ವಾನಂದ ಚಿತ್ತದಿಂದ ಅವಳನ್ನು ಪೂಜಿಸುವರು. ಈ ಪ್ರದೇಶ ಮಧ್ಯದಲ್ಲಿ ಹೊಳೆಹೊಳೆವ ಕಂಚಿನ ತುಂಡುಗಳು ಹೇರಳವಾಗಿ ಸಿಕ್ಕುತ್ತವೆ. ಅವನ್ನು ತೆಗೆದುಕೊಂಡು ಆ ಜನರು ಅಲ್ಲಿ ಸಮರ್ಪಿಸುವರು. ತಮ್ಮ ಪ್ರಜಾಭಕ್ತಿಗನುಸಾರವಾಗಿ ನಾನು ಅದನ್ನು ನೋಡುತ್ತಲೇ ಮಹಾರಾಣಿ ದುರ್ಗಾವತಿಯ ದಿವ್ಯಗುಣದ ಅಭಿನಂದನಾರ್ಥವಾಗಿ ಒಂದು ತುಂಡನ್ನು ಅರ್ಪಣ ಮಾಡಿದೆನು." ಅಲೌಕಿಕ ಸೌಂದರ್ಯವನ್ನು ಯಾರುತಾನೇ ಪೂಜಿಸದೆ ಇರುವರು?

ವೀರಮತಿ

ಮಧ್ಯಾಹ್ನ ಸೂರ್ಯನು ಆಕಾಶವೃಕ್ಷವನ್ನು ಏರಿದ್ದನು. ಅವನ ಉಷ್ಣವಾದ ಕಿರಣಗಳು ದೇವಗಿರಿಯ ರಾಜಮಾರ್ಗಗಳನ್ನು ತಪ್ತಮಾಡುತ್ತಲಿದ್ದುವು. ಅತ್ತಿತ್ತ ಮೇಯುತ್ತಿದ್ದ ಗೋವುಗಳು ವೃಕ್ಷಛಾಯೆಯನ್ನು ಆಶ್ರಯಿಸಿ, ವಿಶ್ರಾಂತಿಯಿಂದ ಮೆಲುಕಾಡುತ್ತಿದ್ದುವು; ಆಗಾಗ ಬಾಲಗಳನ್ನು ಬೀಸುತ್ತ, ಬೆನ್ನಮೇಲಿನ ನೊಣಗಳನ್ನು ಝಾಡಿಸುತ್ತಿದ್ದುವು. ಹಕ್ಕಿಗಳು ಮರದ ಎಲೆಗಳಲ್ಲಿ ಹುದುಗಿಕೊಂಡು, ಸುಖವಾಗಿ ನಿದ್ದೆ ಹೋಗುತ್ತಿದ್ದುವು. ಕಾಗೆಯು ಅತ್ತಿತ್ತ ಅರಚುತ್ತ ಮರದಿಂದ ಮರಕ್ಕೆ ಹಾರುತ್ತಲಿತ್ತು. ಗಿಡುಗನು ಗಗನದ ಮಧ್ಯದಲ್ಲಿ ಮಂಡಳಿಸಿ, ನೆಲದ ಮೇಲೆ ಸುಳಿಯುವ ಕೊಳ್ಳಿಯನ್ನು ತೀಕ್ಷ್ಣದೃಷ್ಟಿಯಿಂದ ನೋಡಿ, ಫಕ್ಕನೆ ಕೆಳಕ್ಕೆ ಹಾರಿಬಂದು, ಹತಾಶನಾಗಿ ಸಮೀಪದಲ್ಲಿದ್ದ ಉನ್ನತವಾದ ಮಂದಿರದ ಸೂರುಗಳಲ್ಲಿ ಕುಳಿತುಕೊಳ್ಳುತ್ತಿತ್ತು. ದೇವಗಿರಿಯ ಅರಮನೆಯ ಬಳಿಯಲ್ಲಿ ಕಾವಲುಗಾರರು ಬಹಳ ಎಚ್ಚರಿಕೆಯಿಂದ ಪಹರೆಮಾಡುತ್ತಿದ್ದರು. ಅರಮನೆಯಲ್ಲಿ ಜನರು ಕಾರ್ಯಗೌರವದಿಂದ ಹೋಗುತ್ತ ಬರುತ್ತ, ಅಲ್ಲಲ್ಲಿ ಗುಂಪುಕೂಡಿ ನಿಂತು, ತಮ್ಮೊಳಗೆನೇ ಏನನ್ನೋ ವಿಚಾರ ಮಾಡುತ್ತಿದ್ದರು. ರಾಜಮಂದಿರದ ಕಿರುಬಾಗಿಲಿನಿಂದ ಒಂದು ಪಲ್ಲಕ್ಕಿಯು ಹೊರಗೆ ಬಂದಿತು. ಪ್ರಜೆಗಳೆಲ್ಲರೂ ವಿಶೇಷವಾದ ಕಾರ್ಯದಲ್ಲಿ ಮಗ್ನರಾದುದರಿಂದ, ಪಲ್ಲಕ್ಕಿಯನ್ನು ಯಾರೂ ಲಕ್ಷಿಸಲಿಲ್ಲ. ಅಂದಣವು ತಪ್ತವಾದ ರಾಜಮಾರ್ಗವನ್ನು ಬಿಟ್ಟು, ನಿರ್ಜನವಾದ, ಶೀತಲವಾದ ರಹಸ್ಯಮಾರ್ಗವನ್ನು ಹಿಡಿದುಕೊಂಡು ಹೋಯಿತು. ಪಲ್ಲಕ್ಕಿಯು ಕೋಟೆಯನ್ನು ಸಮೀಪಿಸುತ್ತಲೇ ಪಹರೆಯವನು ಅದನ್ನ ನೋಡಿ, ಖಡ್ಗವನ್ನು ಎತ್ತಿಹಿಡಿದು ಅದನ್ನು ಅಡ್ಡಿಮಾಡದೆ ಹೊರಕ್ಕೆ ಬಿಟ್ಟನು. ಅಂದಣವು ದೇವಗಿರಿಯ ಕೋಟೆಯನ್ನು ಆಕ್ರಮಿಸಿ, ಅದರ ಬಹಿರ್ಭಾಗದಲ್ಲಿದ್ದ ಅರಣ್ಯವನ್ನು ಸೇರಿತು. ಕೊನೆಗೆ ವಿಜನವಾದ ಭೀಕರವಾದ ಅರಣ್ಯಮಧ್ಯದಲ್ಲಿದ್ದ ಕಾಳಿಕಾದೇವಸ್ಥಾನದ ಬಳಿಯಲ್ಲಿ ಆಳುಗಳು ಪಲ್ಲಕ್ಕಿಯನ್ನು ಬಿಟ್ಟುಹೋದರು. ಕೂಡಲೇ ರಮಣಿಯರಿಬ್ಬರು ಅಂದಣದಿಂದ ಕೆಳಕ್ಕೆ ಇಳಿದು, ಕಾಲ್ನಡೆಯಾಗಿ ದೇವಸ್ಥಾನವನ್ನು ಪ್ರವೇಶಿಸುವುದಕ್ಕೆ ಸಿದ್ಧರಾಗಿ, ತಮ್ಮ ವಸ್ತ್ರಾಲಂಕಾರಗಳನ್ನು ಸರಿಗೊಳಿಸುವುದಕ್ಕೆ ಒಂದು ಮುಹೂರ್ತ ಅಲ್ಲಿಯೇ ತಡೆದರು.

ಇಬ್ಬರೂ ಸಮವಯಸ್ಕೆಯರು. ಇಬ್ಬರೂ ಅಸಮಾನ ಸೌಂದರ್ಯಶಾಲಿನಿಯರಾಗಿದ್ದರೂ, ಒಬ್ಬಳ ರೂಪಲಾವಣ್ಯಗಳು ಮತ್ತೊಬ್ಬಳ ಅಂದಚೆಂದವನ್ನು ಅತಿಕ್ರಮಿಸಿದ್ದುವು. ಭಾರತೀಯ ಕವಿಗಳು ಸ್ತ್ರೀಯನ್ನು 'ಚಂದ್ರಮುಖಿ', 'ಕಮಲವದನೆ' ಎಂದು ವರ್ಣಿಸಿರುವರು. ಈ ಯುವತಿಯು ಈ ಅಭಿಮಾನಕ್ಕೆ ಪಾತ್ರಳಾಗಿರಲಿಲ್ಲ, ಏಕೆಂದರೆ ಇವಳ ಮುಖಮಂಡಲವು ನೈಸರ್ಗಿಕ ಚಂದ್ರನಂತಾಗಲಿ ಕಮಲದಂತಾಗಲಿ ಶೋಭಿಸಿರಲಿಲ್ಲ. ವರ್ತುಲನಾದ ಪೂರ್ಣಚಂದ್ರನು ಸ್ವಲ್ಪ ದೀರ್ಘಾಕಾರವನ್ನು ಧರಿಸಿದರೆ ಎಷ್ಟು ಮಧುರವಾಗಿ ಶೋಭಿಸಬಹುದೋ, ಅಥವಾ ಧೀರ್ಘವಾದ ಕಮಲಪತ್ರವು ಸ್ವಲ್ಪ ವೃತ್ತಾಕಾರವನ್ನು ವಹಿಸಿದರೆ ಎಷ್ಟು ರಮ್ಯವಾಗಿ ಉಜ್ವಲಿಸುವುದೋ ಅಷ್ಟೇ ಸೌಂದರ್ಯಮಯವಾಗಿ ಈ ರಮಣಿಯ ಮುಖಮಂಡಲವು ರಂಜಿಸುತ್ತಿತ್ತು. ನಯನೇಂದ್ರಿಯಗಳು ಹರಿಣಲೋಚನದಂತೆ ಕಂಪಿಸುತ್ತಲಿದ್ದುವು. ಈ ಕಂಪನವು ಅವುಗಳಲ್ಲಿ

ಪ್ರವಹಿಸುತ್ತಲಿದ್ದ ಪ್ರೇಮರಸದಿಂದ ಸರಿಯಾಗಿ ವ್ಯಕ್ತವಾಗುತ್ತಿರಲಿಲ್ಲ. ಅದೂ ಅಲ್ಲದೆ ಮುಖದ ಮೇಲೆ ಕ್ಷಾತ್ರತೇಜಸ್ಸು ಸಂಪೂರ್ಣವಾಗಿ ಪ್ರತಿಫಲಿಸುತ್ತಿದ್ದುದರಿಂದ, ಭಯದಿಂದ ಉಂಟಾದ ಕಂಪನವು ಎಲ್ಲಿಯೋ ಅದೃಶ್ಯವಾಗಿತ್ತು. ಸೂರ್ಯನ ಉಷ್ಣದಿಂದಲೋ ಅಥವಾ ಮಾರ್ಗದ ಆಯಾಸದಿಂದಲೋ ಪ್ರಾಪ್ತವಾದ ಸ್ವೇದಬಿಂದುಗಳನ್ನು ಧರಿಸಿದ ಆ ಮುಖವು ಹಿಮಜಲದಿಂದ ಮ್ಲಾನವಾದ ಹೇಮಂತ ಋತುವಿನ ಕಮಲದಂತೆ ಕನಿಕರವನ್ನು ಉಂಟುಮಾಡುತ್ತಲಿತ್ತು. ಮಸ್ತಕದ ಹಿಂದುಗಡೆಯಲ್ಲಿದ್ದ ವೇಣಿಯು ಶಿರವನ್ನು ಏರಿದ ಚೀನಾಂಬರದಿಂದ ಆಚ್ಛಾದಿತವಾಗಿದ್ದುದರಿಂದ, ಅವಳ ಪೃಷ್ಟದಲ್ಲಿಯೇ ಸ್ವತಂತ್ರವಾಗಿ ಕ್ರೀಡಿಸುತ್ತಲಿತ್ತು. ಹಸುರು ರೇಷ್ಮೆಯ ಸೆರಗನ್ನು ದಕ್ಷಿಣ ಬಾಹುವಿನ ಕೆಳಗಡೆಯಿಂದ ಸೆಳೆದುಕೊಂಡು, ಉಡಿಯಲ್ಲಿ ಬಿಗಿದುದ ರಿಂದ ವಕ್ಷೋರಂಗವು ಇನ್ನೂ ಉನ್ನತವಾಗಿಯೂ ಉಜ್ವಲವಾಗಿಯೂ ತೋರುತ್ತಲಿತ್ತು. ಮನ್ಮಥ ವೈಜಯಂತಿಯಂತೆ ವಾಯುವಿನಲ್ಲಿ ಮೆಲ್ಲಮೆಲ್ಲನೆ ತೇಲುತ್ತಿರುವ ಹಸುರಾದ ದುಕೂಲವು ಅವಳ ಅಂಗಕಾಂತಿ ಯನ್ನು ಸಂಪೂರ್ಣವಾಗಿ ಮುಚ್ಚಿದ್ದರೂ, ಅಂಗಛ್ಛಾಯೆಯು ವಸ್ತ್ರದ ಹಿಂದುಗಡೆಯಿಂದ ನೋಟಕರ ಮನಸ್ಸನ್ನು ಆಕರ್ಷಿಸುವಂತಿತ್ತು. ದೇಹವರ್ಣವು ಹರಿದ್ರ; ಸ್ವಲ್ಪ ಹಳದಿ; ಸುವರ್ಣ ಕಮಲದಂತೆ ಹರಿದ್ರ ವಾಗಿರಲಿಲ್ಲ. ಹಿಮದಿಂದ ಆರ್ದ್ರವಾದ ಸುವರ್ಣಕಮಲವು ಹರಿತಪತ್ರದ ಛಾಯೆಯಿಂದ ಯಾವ ಕಾಂತಿ ಯನ್ನು ಧರಿಸುವುದೋ, ಚಂದ್ರಕಾಂತಿಯಿಂದ ನೆನೆದ ಹೊಂಗೇದಗೆಯ ಹಸುರೆಲೆಯ ಮರೆಯಲ್ಲಿ ಯಾವ ಬಣ್ಣದಿಂದ ಶೋಭಿಸುವುದೋ, ಆ ಕಾಂತಿಯೂ ಆ ವರ್ಣವೂ ಆ ಯುವತಿಯ ಪ್ರಫುಲ್ಲಿತ ದೇಹದಲ್ಲಿ ಸಮ್ಮಿಳಿತವಾಗಿದ್ದುವು.

ರಮಣಿಯರಿಬ್ಬರು ದೇವಸ್ಥಾನವನ್ನು ಪ್ರವೇಶಿಸಿದರು. ಕಾಳಿಕಾ ಮೂರ್ತಿಯ ಸಮ್ಮುಖದಲ್ಲಿ ಬದ್ಧ ಹಸ್ತದಿಂದ ಇಬ್ಬರೂ ಕಣ್ಮುಚ್ಚಿ ನಿಮಿಷ ಮಾತ್ರ ನಿಂತರು. ಬಳಿಕ ಕರಾಳವಾದ ಚಂಡಿಕಾವಿಗ್ರಹವನ್ನು ಬಲವಂದು ದೇವಿಯ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿದರು. ಪುನಃ ಎದ್ದು ನಿಂತು "ತಾಯೇ! ಚಂಡಿಕೇ! ನಮಗೆ ಬಂದಿದ್ದ ಆಪತ್ತನ್ನು ಪರಿಹರಿಸು! ಯುದ್ಧದಲ್ಲಿ ನಮ್ಮ ಪತಿಗಳಿಗೆ ಸಹಾಯಕಳಾಗು! ಅವರ ಹಸ್ತದಿಂದಲೇ ನಮ್ಮ ವೈರಿಗಳನ್ನು ಸಂಹರಿಸು!" ಎಂದು ಪ್ರಾರ್ಥಿಸಿದರು. ಪುನಃ ದೇವಗಿರಿ ದುರ್ಗದ ಅಧಿಷ್ಠಾತ್ರಿಯಾದ ದುರ್ಗಾಂಬಿಕೆಯನ್ನು ಪ್ರದಕ್ಷಿಣೆ ಮಾಡಿ, ಇಬ್ಬರೂ ಪಲ್ಲಕ್ಕಿಯನ್ನು ಹತ್ತುವಷ್ಟರಲ್ಲಿ ಕುದುರೆಯ ಕುರಪುಟ ಧ್ವನಿಯು ಕೇಳಿಸಿದುದರಿಂದ, ಇಬ್ಬರೂ ಸ್ವಲ್ಪ ಸಂಭ್ರಾಂತರಾದಂತೆ ಅಲ್ಲಿಯೇ ತಡೆದರು. ಕೂಡಲೇ ಒಬ್ಬ ಅಶ್ವರೋಹಿಯು ಕುದುರೆಯಿಂದ ಧುಮುಕಿ, ಯುವತಿಯರ ಸಮೀಪ ಬರುತ್ತಿದ್ದನು. ಯುವತಿಯರು ಇವನನ್ನು ದೃಷ್ಟಿಸುತ್ತಲೇ ಆನಂದದಿಂದಲೂ ಆಶ್ಚರ್ಯದಿಂದಲೂ ಚಕಿತರಾಗಿ ಹೋದರು.

ಯುವಕ:—"ವೀರಮತಿ! ನೀನು ಗೌರಿಯೊಡನೆ ಇಲ್ಲಿ ಏಕೆ ಬಂದಿ?"

ವೀರಮತಿಯು ಯುವಕನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು. "ನಾವು ಇಲ್ಲಿ ಬಂದೆವೆಂದು ನಿನಗೆ ಹೇಗೆ ತಾನೇ ತಿಳಿಯಿತು?" ಎಂದು ಪ್ರಶ್ನಿಸಿದಳು.

ಯುವಕ:—"ರಾಜಮಂದಿರದಲ್ಲಿ ನೀವು ಇಲ್ಲದೆ ಇದ್ದುದನ್ನು ನೋಡಿ. ನಾನು ಕಾತರದಿಂದ ನಿಮ್ಮನ್ನು ಹುಡುಕಿ ಬಂದೆನು. ಕೋಟೆಯ ಪಹರೆಯವರು ನೀವು ಕಾಳಿಕಾ ಪೂಜೆಗೆ ಹೋಗಿರುವಿರಿ ಎಂದು ಹೇಳಿದರು. ನೀವು ಇಲ್ಲಿ ಏಕೆ ಬಂದಿರಿ?"

ವೀರಮತಿ:—"ಏಕೆಂದು ಇನ್ನೂ ತಿಳಿಯಲಿಲ್ಲವೇ? ಮುಂದಿನ ಆಪತ್ತನ್ನು ಪರಿಹರಿಸುವಂತೆ ದೇವಿಯನ್ನು ಬೇಡುವುದಕ್ಕೆ"

ಯುವಕ:—"ಅದಕ್ಕೋಸ್ಕರ ನೀವು ಇಷ್ಟು ದೂರ ಬರಬೇಕಿತ್ತೇ? ಶತ್ರುವಿನ ಪಾಳೆಯದವರು ನಿಮ್ಮನ್ನು ಇಲ್ಲಿ ಎಲ್ಲಾದರೂ ನೋಡಿದರೆ ನಿಮ್ಮ ಗತಿ ಏನಾಗುವುದು?"

ಈ ಮಾತನ್ನು ಕೇಳುತ್ತಲೇ ವೀರಮತಿಯ ಮುಖದಲ್ಲಿ ಒಂದು ಪ್ರಕಾರವಾದ ತೇಜಸ್ಸು ಹೊಳೆಯಿತು. ಕೂಡಲೇ ತನ್ನ ಕಟಿಭಾಗದಲ್ಲಿ ಅಡಗಿಸಿಟ್ಟ ಭರ್ಚಿಯನ್ನು ಈಚೆಗೆ ಸೆಳೆದುಕೊಂಡು—"ನೋಡಿದೆಯೇ ಇದನ್ನು? ಇದರ ಸಹಾಯದಿಂದಲೇ ನಾನು ದಾರಿಯನ್ನು ಬಿಡಿಸಿಕೊಂಡು ಅರಮನೆಗೆ ಹಿಂದೆರಳುತ್ತಿದ್ದೆನು" ಎಂದು ವೀರಮತಿಯು ಉತ್ತರಕೊಟ್ಟಳು.

ಯುವಕ:—"ನೀನು ಕ್ಷತ್ರಿಯ ಕುಮಾರಿ ಎಂದುಬಲ್ಲೆ. ನೀವೆಲ್ಲರೂ ನಮ್ಮ ಭುಜಗಳ ನೆರಳಿನಲ್ಲಿರುವಾಗ ಇಷ್ಟು ಆಯಾಸವೇಕೆ?"

ವೀರಮತಿ:—ಯುದ್ಧಕಾಲದಲ್ಲಿ ಶೌರ್ಯವನ್ನು ತೋರಿಸುವುದು ಪುರುಷರ ಕರ್ತವ್ಯ. ದೇವಪ್ರಾರ್ಥನೆಯನ್ನು ಮಾಡುವುದು ಸ್ತ್ರೀಕೃತ್ಯ. ಇಬ್ಬರ ಕಾರ್ಯಗಳೂ ಒಂದೇ ಫಲವನ್ನು ಕೊಡುವುವು.

ಯುವಕನು ಮತ್ತೆ ಮಾತಾಡಲಿಲ್ಲ. ಗೌರಿಯು ಈ ಸಂಭಾಷಣೆಯ ಕಾಲದಲ್ಲಿ ಸುಮ್ಮನಿದ್ದು ಕೊನೆಗೆ "ಸಖಿಯೇ! ವೀರಮತಿ! ನಾವು ಇನ್ನೂ ಇಲ್ಲಿ ತಳುವಿದರೆ, ತಂದೆಯು ನಮ್ಮ ಮೇಲೆ ಕೋಪಿಸದೆ ಇರಲಾರನು" ಎಂದಳು.

ಇಬ್ಬರೂ ಪಲ್ಲಕ್ಕಿಯನ್ನು ಹತ್ತಿ, ಯುವಕನನ್ನು ಕರೆದರು. ಯುವಕನು "ನಾನು ಇದೇ ಸಂದರ್ಭದಲ್ಲಿ ಶತ್ರುವಿನ ಸೇನೆಯ ವಿಸ್ತಾರವನ್ನೂ ರಚನೆಯನ್ನೂ ಹೊಂಚಿ ನೋಡಿ ಬರುವೆನು. ನೀವು ಬೇಗನೆ ಮುಂದು ಹೋಗಿರಿ" ಎಂದು ಹೇಳಿ ಕೋಟೆಯವರೆಗೆ ಅವರಿಬ್ಬರಿಗೆ ಮೈಗಾವಲಾಗಿ ಬಂದು ಅಲ್ಲಿಯೇ ಹಿಂದುಳಿದನು.

ಕಥಾಸೂತ್ರವನ್ನು ಪಾಠಕಮಹಾಶಯರು ಸರಿಯಾಗಿ ಹಿಡಿಯುವಂತೆ ಇಲ್ಲಿ ಕೆಲವು ಪ್ರಸ್ತಾವಗಳನ್ನು ಹೇಳಬೇಕಾಗುವುದು. ಕ್ರಿ. ಶಕೆಯ 13ನೆಯ ಶತಮಾನದ ಆದಿಯ ವರೆಗೆ ದಕ್ಷಿಣ ಹಿಂದೂಸ್ಥಾನದ ಮೇಲೆ ಮುಸಲ್ಮಾನರ ದೃಷ್ಟಿಯು ಬಿದ್ದಿರಲಿಲ್ಲ. ಪಠಾನ ಸುಲ್ತಾನರು ಉತ್ತರ ಹಿಂದೂಸ್ಥಾನದಲ್ಲೇ ಸರ್ವಶಕ್ತರಾಗಿದ್ದರಲ್ಲದೆ, ದಕ್ಷಿಣದಲ್ಲಿನ ಚಿಕ್ಕದೊಡ್ಡರಾಜ್ಯಗಳು ಸ್ವಾತಂತ್ರ್ಯ ಸುಖವನ್ನು ಅನುಭವಿಸುತ್ತಲಿದ್ದುವು. ಇಂತಹ ಸ್ವತಂತ್ರರಾಜ್ಯಗಳಲ್ಲಿ ಭಾವಿ ಮಹಾರಾಷ್ಟ್ರ ಸಾಮ್ರಾಜ್ಯದ ಅಂಕುರ ಸ್ವರೂಪವಾದ ಚಿಕ್ಕದೊಂದು ರಾಜ್ಯವಿತ್ತು. ದೇವಗಿರಿ ಎಂಬುದು ಇದರ ರಾಜಧಾನಿಯಾಗಿತ್ತು; ರಾಮದೇವ ಎಂಬವನು ರಾಜನಾಗಿದ್ದನು. ಈ ಮರಾಟ ರಾಜ್ಯವನ್ನು ಕುರಿತು ಜೀಯುದ್ದೀನ್ ಬಾರ್ನಿ ಎಂಬ ತುರುಷ್ಕ ಇತಿಹಾಸಕಾರನು ಹೀಗೆಂದು ಬರೆದಿರುವನು:

"ಈ ಮೊದಲು ಇಲ್ಲಿನ ಜನರು ಮುಸಲ್ಮಾನರನ್ನು ಕುರಿತು ಕೇಳಿರಲಿಲ್ಲ. ಮುಸಲ್ಮಾನ್ ಸೈನ್ಯವು ಇದಕ್ಕಿಂತ ಮೊದಲು ಮಹಾರಾಷ್ಟ್ರ ರಾಜ್ಯದಲ್ಲಿ ಪದಾರ್ಪಣ ಮಾಡಿರಲಿಲ್ಲ. ದೇವಗಿರಿ ನಗರವು ಚಿನ್ನ ಬೆಳ್ಳಿ ಮೊದಲಾದ ಅಮೂಲ್ಯ ವಸ್ತುಗಳಿಗೆ ತವರುಮನೆಯಾಗಿತ್ತು."

ಈ ವರ್ಣನೆಯು ಆ ರಾಜ್ಯಕ್ಕೆ ಮಾತ್ರ ಸಲ್ಲುತ್ತಿರಲಿಲ್ಲ. ವಿದೇಶೀಯರು ಭಾರತಭೂಮಿಯಲ್ಲಿ ಕಾಲಿಡುವ ಮೊದಲು ಹಿಂದುಸ್ಥಾನದ ಸ್ಥಿತಿಯನ್ನು ಪ್ರತಿ ಒಬ್ಬ ಇತಿಹಾಸಕಾರನು ಇಂತಹ ಮಾತುಗಳಲ್ಲಿಯೇ ವರ್ಣಿಸಿರುವನು. ಈ ಧನವೇ ವಿದೇಶೀಯರ ದೃಷ್ಟಿಗೆ ಬಿದ್ದುದರಿಂದ, ದಿಲ್ಲಿಯ ಅಂದಿನ ಚಕ್ರವರ್ತಿಯಾದ ಜಲಾಲುದ್ದೀನ್ ಖಿಲ್ಜಿಯ ಅಳಿಯನಾದ ಅಲ್ಲಾವುದ್ದೀನ್ ಖಿಲ್ಜಿಯು ಮಹಾಸೈನ್ಯದೊಡನೆ ಕ್ರಿ.ಶಕೆಯ 1294ರಲ್ಲಿ ದಖ್ಖಣಕ್ಕೆ ದಂಡೆತ್ತಿ ಹೋದನು. ಅಲ್ಲಾವುದ್ದೀನನು ಮಹಾ ಸೈನ್ಯದೊಡನೆ ದೇವಗಿರಿಯನ್ನು ಎರಡುಸಲ ಮುತ್ತಿಗೆ ಹಾಕಿ ಹತಾಶನಾಗಿ, ಮೂರನೆಯ ಸಲ ಅದರ ಕೋಟೆಯ ಬಾಗಿಲಲ್ಲಿ ಕುಳಿತುಕೊಂಡಿದ್ದು, ಪ್ರಕೃತದಲ್ಲಿ ಜಾರುವಂತಿದ್ದನು.

ರಾಮದೇವರಾಜನಿಗೆ ಬಲಗೈಯಂತಿದ್ದು ಯುದ್ಧದಲ್ಲಿಯೂ ರಾಜ್ಯವಿಸ್ತರಣದಲ್ಲಿಯೂ ಅವನಿಗೆ ಸಹಾಯ ಮಾಡಿದ್ದ ಸರದಾರನೊಬ್ಬನು ಈ ಮುತ್ತಿಗೆಯ ಕಾಲದಲ್ಲಿ ಮಡಿದು ಹೋದನು. ಈ ಸರದಾರನು ತನ್ನ ಪುತ್ರೀರತ್ನವಾದ ವೀರಮತಿಯ ವಿವಾಹಕ್ಕೆ ಎಲ್ಲವನ್ನು ಸಿದ್ಧಪಡಿಸಿದ್ದನು. ವೀರಮತಿಯು ಕಾಳಿಕಾ ದೇವಸ್ಥಾನದ ಬಗೆಯಲ್ಲಿ ಯಾರೊಡನೆ ಮಾತಾಡಿದಳೊ ಆ ಯುವಕನು ತನ್ನ ಪ್ರಾಣೇಶ್ವರನೆಂದು ಆರಿಸಲ್ಪಟ್ಟಿದ್ದನು. ಕೃಷ್ಣರಾಜನು ತನ್ನ ಅಳಿಯನಾಗುವುದು ವೀರಮತಿಯ ತಂದೆಗೆ ಏನು ಕಾರಣದಿಂದಲೋ ಮೊದಲು ಯೋಗ್ಯವಾಗಿ ತೋರಲಿಲ್ಲ. ಕೊನೆಗೆ ಮಗಳ ನಿರ್ಬಂಧದಿಂದ ಅವನು ಸಮ್ಮತಿ ಕೊಟ್ಟನು. ಆದರೆ ಪ್ರಕೃತದ ಅವನ ಅಕಾಲಿಕ ಮರಣದಿಂದ ವೀರಮತಿಯ ಲಗ್ನಕ್ಕೆ ವಿಘ್ನ ಬಂದಿತು. ಈಗ ವೀರಮತಿಯು ತಂದೆಯ ಮರಣಕ್ಕೆ ಪ್ರತೀಕಾರವನ್ನು ಮಾಡಿದ ಹೊರತು, ಲಗ್ನಮಂಟಪವನ್ನು ಸೇರುವುದಿಲ್ಲ ಎಂದು ನಿಶ್ಚಯ ಮಾಡಿದಳು. ಅದಕ್ಕೋಸ್ಕರವೇ ಅವಳು ಅರಸನ ಮಗಳಾದ ಗೌರಿಯೊಡನೆ ಕಾಳಿಕಾಪೂಜೆಗೆ ಹೋಗಿದ್ದಳೆಂದು ವಾಚಕ ಮಹಾಶಯರು ಈಗ ತಾನೇ ತಿಳಿಯಬಹುದು.

"ಭಾರತ ಭೂಮಿಯ ಸೌಭಾಗ್ಯ ಭಂಡಾರವನ್ನು ಸೂರೆಗೊಂಡು ತಮ್ಮ ವಂಶಸ್ಥರ ನಾಮವನ್ನೂ ತಮ್ಮ ಹೆಸರನ್ನೂ ಇತಿಹಾಸ ಪುಟದಲ್ಲಿ ಕಳಂಕಿತವಾಗಿ ಮಾಡಿದ ಮುಸಲ್ಮಾನರಲ್ಲಿ ಘಜ್ನಿ ಮಹಮ್ಮದ್, ಅಲ್ಲಾವುದ್ದೀನ್ ಖಿಲ್ಜಿ, ತೇಮೂರ್ ಲೇನ್ ಈ ಮೂವರಿಗಿಂತಲೂ ಅಧಮರು ಯಾರೂ ಇಲ್ಲ" ಎಂದು ಒಬ್ಬ ಬಂಗಾಳೆಯ ಚರಿತ್ರೆಕಾರನು ಹೇಳಿದ್ದಾನೆ. ಈ ಮೂವರು ತಾವು ಕಾಲಿಟ್ಟ ಭೂಮಿಯಲ್ಲಿ ಆರ್ಯಧರ್ಮಾವಲಂಬಿಗಳಾದ ಆಬಾಲವೃದ್ಧರನ್ನು ಕೊಂದು, ಪವಿತ್ರವಾದ ದೇವಸ್ಥಾನಗಳ ಮುಂದುಗಡೆಯಲ್ಲಿ ಪಶು ರಕ್ತವನ್ನು ಬಸಿದು, ಆರಾಧಿತವಾದ ವಿಗ್ರಹಗಳನ್ನು ಮಸೀದಿಯ ಸೋಪಾನಗಳಿಗಾಗಿ ಹಾಸಿ, ನಂದನವನದಂತೆ ಇದ್ದ ಪ್ರದೇಶಗಳನ್ನು ಶ್ಮಶಾನವಂತೆ ಮಾಡಿ, ಹೊಟ್ಟೆಯೊಳಗಿದ್ದ "ಒಂದೇಬಾರಿ ಸುರಿಗೊಂಬ" ತವಕದಿಂದ ಭಾರತಧೇನುವಿನ ಉದರವನ್ನು ಸೀಳಿಬಿಟ್ಟರು. ಇವರು ನಡೆದ ಮಾರ್ಗಗಳೆಲ್ಲಾ ಸಿಡಿಲು ಬಡೆದ ಬೆಟ್ಟದ ದಾರಿಗಳಂತೆ ಆದುವು. ನುಗ್ಗಿದ ನಗರಗಳೆಲ್ಲಾ ಅಡವಿಯ ಗುಹೆಗಳಂತೆ ಆದುವು. ಇವರ 'ದೀನ್! ದೀನ್!' ರಣಕೋಲಾಹಲವನ್ನು ಕೇಳುತ್ತಲೇ ಹಳ್ಳಿಹಳ್ಳಿಗರು ತಾವು ತಿಂದುಳಿದ ಕೊಂಚ ಹಣವನ್ನು ಉಡಿಯಲ್ಲಿ ಕಟ್ಟಿಕೊಂಡು, ಹುಲಿಹಾವುಗಳಿದ್ದ ಅಡವಿಗಾದರೂ ಒಕ್ಕಲು ಹೋಗುತ್ತಿದ್ದರು. ರಾಜಯುವತಿಯರು ತಮ್ಮ ವೀರಪತಿಗಳನ್ನು ಇವರೊಡನೆ ಯುದ್ಧಕ್ಕೆ ಸಶಸ್ತ್ರರಾಗಿ ಕಳುಹಿಸಿ ತಮ್ಮ ಪಾತಿವ್ರತ್ಯವನ್ನು ರಕ್ಷಿಸುವುದಕ್ಕೆ ನಗುನಗುತ್ತ ಚಿತೆಯನ್ನು ಏರುತ್ತಿದ್ದರು. ಇವರು ಮಾಡಿದ ಹಾಳು ಹಾವಳಿ ಎಷ್ಟೆಂಬುದಕ್ಕೆ ಗಾದೆಗಳೇ ಹುಟ್ಟಿವೆ. ಆದರೂ ಈ ಮೂವರಲ್ಲಿ ಇಷ್ಟೊಂದು ಭೇದವಿತ್ತು: ಅವರ ಕಾರ್ಯಗಳಲ್ಲಿ ಸಾಮ್ಯವಿದ್ದರೂ

ಅವರ ಉದ್ದೇಶಗಳಲ್ಲಿ ಇಷ್ಟೊಂದು ತಾರತಮ್ಯವಿತ್ತು. ತೇಮೂರಲೇನನು ಅತ್ಯಂತ ಧನಾಪೇಕ್ಷೆಯುಳ್ಳವನು, ಆ ಆಸೆಯು ತೀರುವ ತನಕ ಅವನು ಹಸಿದ ಸಿಂಹ; ಹಸಿವು ಅಣಗುವುದಕ್ಕೆ ಕೈಗೆ ಸಿಕ್ಕಿದ ಕೊಳ್ಳೆಯನ್ನು ಹೊಡೆದುಬಿಡುತ್ತಲೇ ತೃಪ್ತಿಗೊಂಡು, ದೂರದ ಗವಿಗೆ ಹಿಂತಿರುಗಿದನು. ಘಜ್ನಿಮುಹಮ್ಮದನು ಧನಾಪೇಕ್ಷೆಯೊಡನೆ ಧರ್ಮಾಂಧತೆಯನ್ನು ಬೆರಸಿದ್ದನು. ಹಿಂದೂ ಜನರ ಬೊಕ್ಕಸವನ್ನು ಬಿಚ್ಚಿ, ಅವರ ದ್ರವ್ಯಾಪಹಾರವನ್ನು ಮಾಡುವುದು ಮಾತ್ರವಲ್ಲ, ಅವರ ಧರ್ಮವನ್ನು ನಿರ್ಮೂಲಿಸಿ, ತನ್ನ ಮತವನ್ನು ಖಡ್ಗಮುಖದಿಂದ ಸ್ಥಾಪಿಸಬೇಕೆಂದು ಬದ್ಧಕಂಕಣನಾದನು. ಇದಕ್ಕೋಸ್ಕರವೇ ಈತನು ಹನ್ನೊಂದು ಸಲ ಹಿಂದುಸ್ಥಾನಕ್ಕೆ ದಂಡೆತ್ತಿ ಬಂದುದು ಸಾಲದೆ, ಕೊನೆಗೆ ಕ್ರಿ.ಶ. 1024ರಲ್ಲಿ ಗುಜರಾತಿನಲ್ಲಿದ್ದ ಸೋಮನಾಥ ದೇವಸ್ಥಾನವನ್ನು ಒಳನುಗ್ಗಿ, ವಿಗ್ರಹಗಳನ್ನು ಪುಡಿಪುಡಿಗೈದನು. ಆದರೂ "ಪರದ್ರವ್ಯಾಪಹಾರಿ" "ಅನ್ಯಮತಭಂಜಕ" ಎಂಬ (ಮಹಾ + ಅಯೋಗ್ಯ?) ಬಿರುದುಗಳನ್ನು ತಾಳಿದ ಬಳಿಕ ತನ್ನ ದೇಶಕ್ಕೇನೇ ಹಿಂತೆರಳಿದನು. ಅಲ್ಲಾವುದ್ದೀನನಾದರೋ ತನ್ನ ಹಾಳು ಜೀವನ ಕಾಲದಲ್ಲಿ ಮೂರು ಉದ್ದೇಶಗಳನ್ನು ಕೊನೆಗಾಣಿಸುವುದಕ್ಕೆ ಯತ್ನಿಸಿದನು. ತೇಮೂರಲೇನನ ಧನಾಪೇಕ್ಷೆಯೂ, ಮಹಮ್ಮದನ ಮತಾಭಿಮಾನವೂ ಮಾತ್ರವಲ್ಲ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ರಾಜದಂಡವನ್ನು ಬೀಸಬೇಕೆಂಬ ರಾಜ್ಯಾಕಾಂಕ್ಷೆಯೂ ಈತನ ಹೃದಯದಲ್ಲಿ ಬೇರೂರಿದ್ದವು. ಈ ಅಭಿಲಾಷೆಯು ಹುಟ್ಟುಬಂಜೆಗೆ ಮಕ್ಕಳಾಗಬೇಕೆಂಬ ಆಸೆಯಾಗಿರಲಿಲ್ಲ. ಅಲ್ಲಾವುದ್ದೀನನು ಮಹಾವೀರನಾಗಿದ್ದನು ಎಂಬುದೇನೋ ನಿಜ; ಆದರೆ ಬಾಲ್ಯದಿಂದಲೂ ನ್ಯಾಯನೀತಿಗಳ ಚಿಂತೆಯನ್ನು ಇವನು ಕಟ್ಟಿಕೊಳ್ಳದೆ ಇದ್ದುದರಿಂದ. ಕೆಲವು ಕಾಲ ಮಾತ್ರವೇ ಬೆಳೆಯುತ್ತ ಹೋದನು. ಹೊಕ್ಕುಳಿನ ಪ್ರಯೋಜನವನ್ನು ಅರಿಯದ ಈ ಕೃತಘ್ನನು ಯಾವ ಸೋಪಾನಗಳನ್ನು ಹತ್ತಿ ಶಿಖರಕ್ಕೆ ಏರಿದನೋ, ಅವುಗಳನ್ನೇ ಧಿಕ್ಕಾರ ದೃಷ್ಟಿಯಿಂದ ಮೇಲೆ ನಿಂತು ನೋಡುತ್ತಿದ್ದನು. ಯಾವ ಮರದ ಕೊಂಬೆಯ ಮೇಲೆ ತನ್ನ ಕೈಕೊಡಲಿಯನ್ನು ತಿಕ್ಕಿ ಹರಿತವಾಗಿ ಮಾಡಿದನೋ, ಆ ವೃದ್ಧ ವೃಕ್ಷವನ್ನೇ ಕಡಿದು ಹಾಕಲಿಕ್ಕೆ ಇವನು ಹೇಸಲಿಲ್ಲ. ತನ್ನನು ಉನ್ನತ ಪದವಿಯಲ್ಲಿಟ್ಟ ತನ್ನ ಮಾವನಾದ ಜಲಾಲುದ್ದೀನ್ ಖಿಲ್ಜಿಯನ್ನು ರಾಜ್ಯಾಭಿಲಾಷೆಯಿಂದ ಸಂಹರಿಸುವುದಕ್ಕೆ ಯಾವನು ಹಿಂಜರಿಯಲಿಲ್ಲವೋ, ಸಿಂಹಾಸನವನ್ನು ಹತ್ತುವುದಕ್ಕೆ ಹೋಗಬೇಕಾದ ಮಾರ್ಗದಲ್ಲಿದ್ದ ತನ್ನ ಬಂಧು ಬಾಂಧವರನ್ನೂ, ಗುರುಹಿರಿಯರನ್ನೂ ನೆಲ್ಲುಹುಲ್ಲಿನಂತೆ ಕೊಯ್ದುಬಿಟ್ಟು ಯಾವನು ಮುಂದೆ ಗದ್ದುಗೆಯನ್ನು ಏರಿದನೋ, ಆ ವಿಶ್ವಾಸಘಾತುಕನೇ, ಆ ಪರಮಪಾಪಿಯೇ ಅತುಲ ಸೈನಿಕರೊಡನೆ, ದೇವಗಿರಿಯ ಮುತ್ತಿಗೆಯನ್ನು ತೆಗೆದು ಓಡುವಂತಿದ್ದನು.

ಈ ಸಂಕಷ್ಟಕರವಾದ ಸಮಯವನ್ನು ಹೇಗೆ ಇರಿಸಬೇಕೆಂಬ ವಿಷಯದಲ್ಲಿ ರಾಮದೇವರಾಜನು ತನ್ನ ಸ್ನೇಹಿತ ಸರದಾರರ ಆಲೋಚನೆಯನ್ನು ವಿಚಾರಿಸಿದನು. ರಾಮದೇವನ ಅಳಿಯನಾದ ಹರಪಾಲದೇವನು ಕೋಟೆಯನ್ನು ದಾಟಿ ಯುದ್ಧ ಕೊಡುವುದು ನ್ಯಾಯವಲ್ಲವೆಂದು ಹೇಳಿದನು. ಈ ಮಾತು ರಾಜನಿಗೆ ಸಮ್ಮತಿಯಾಯಿತು. "ಅಲ್ಲಾವುದ್ದೀನನು ಎರಡುಸಲ ಸೋತು ಹೋದನು. ಮೂರನೆಯ ಸಲ ಹಾಕಿದ ಮುತ್ತಿಗೆಯನ್ನು ತಾನೇ ತೆಗೆದು ಈಗ ಪಲಾಯನ ಮಾಡುತ್ತಿರುವನು. ತಾನಾಗಿ ಹೀಯಾಳಿಸಿ ಶತ್ರುವನ್ನು ಕೆರಳಿಸಿ, ಹೋಗುವ ಮಾರಿಯನ್ನು ಕರೆದು, ನಮ್ಮ ಸೈನ್ಯವನ್ನು ಆಪತ್ತಿಗೆ ಗುರಿಮಾಡುವುದು ಶ್ರೇಯಸ್ಕರವಲ್ಲ. ಇದಲ್ಲದೆ ಅಲ್ಲಾವುದ್ದೀನನು ಯಾವ ಕಾರಣದಿಂದ ಪಲಾಯನ ಮಾಡುತ್ತಿರುವನೆಂದು ತಿಳಿಯಬೇಕು; ಅಭೇದ್ಯವಾದ ಕೋಟೆಯೊಳಗೆ ಸುರಕ್ಷಿತವಾಗಿದ್ದ ನಮ್ಮನ್ನು—ಹಾವಾಡಿಗನು ಕೊಳಲೂದಿ ಬಿಲದಿಂದ ಹಾವನ್ನು ಹೊರಡಿಸುವಂತೆ—ಅವನು ಸೆಳೆಯಬೇಕೆಂಬ ಉಪಾಯ ಮಾಡಿದ್ದರೆ, ನಮ್ಮ ಸೈನ್ಯವೆಲ್ಲಾ ನಿರರ್ಥಕವಾಗಿ

ಶತ್ರುಹಸ್ತದಿಂದ ಸಂಹಾರವಾಗಬಹುದು", ಎಂದು ರಾಮದೇವನು ಅಳಿಯನ ಅಭಿಪ್ರಾಯವನ್ನು ಬಲಗೊಳಿಸಿದನು. ಈ ಮಾತು ಕೃಷ್ಣರಾಜನಿಗೆ ಯಾವ ಕಾರಣದಿಂದಲೂ ಸಮ್ಮತವಾಗಲಿಲ್ಲ. ಅವನು ಯುದ್ಧ ಮಾಡಲೇಬೇಕೆಂದು ನಿಂತುಬಿಟ್ಟನು. "ಅಲ್ಲಾವುದ್ದೀನನು ಈಗ ಹಿಮ್ಮೆಟ್ಟಿದರೂ ಮತ್ತೆ ಬಾರದೆ ಇರಲಾರನು. ಯಾರು ಬಾರದೆ ಹೋದರೂ ನಮ್ಮ ಸೈನ್ಯವನ್ನು ನಾನೊಬ್ಬನೇ ಕೋಟೆಯ ಹೊರಕ್ಕೆ ಕೊಂಡುಹೋಗಿ, ಶತ್ರುವು ಯಾವ ಉಪಾಯದಿಂದಲಾದರೂ ನನಗೆ ತಲೆ ಬಾಗಿಸುವಂತೆ ಮಾಡಿ, ದೇವಗಿರಿ ರಾಜ್ಯವು ನನ್ನನ್ನು ಚಿರಕಾಲ ಸ್ಮರಿಸುವಂತೆ ಮಾಡುವೆನು" ಎಂದು ಕೃಷ್ಣರಾಜನು ಹೇಳಿದನು. ಈ ಅಭಿಪ್ರಾಯಗಳಲ್ಲಿ ಯಾವುದನ್ನು ಸ್ವೀಕರಿಸಬೇಕೆಂದು ತಿಳಿಯದೆ, ರಾಜನು ವೀರಮತಿಯ ಮುಖವನ್ನು ದೃಷ್ಟಿಸಿದನು. ಪ್ರಾಚೀನಕಾಲದಲ್ಲಿ ಭಾರತಸ್ತ್ರೀಯರ ಸ್ವಾತಂತ್ರ್ಯಕ್ಕೆ ಯಾವುದೊಂದು ನಿರ್ಬಂಧವಿಲ್ಲದೆ ಇದ್ದುದರಿಂದ, ವೀರರಮಣಿಯರು ಇಂತಹ ಸಂದರ್ಭಗಳಲ್ಲಿ ತಮ್ಮ ಆಲೋಚನೆಯಿಂದಲೂ ಆಯುಧದಿಂದಲೂ ರಾಜ್ಯಾಧಿಕಾರಿಗಳಿಗೆ ಸಹಾಯ ಮಾಡುತ್ತಿದ್ದರು! ರಾಮದೇವನು ಸಾಕೂತದೃಷ್ಟಿಯಿಂದ ತನ್ನನ್ನು ನೋಡುತ್ತಲೇ ವೀರಮತಿಯು ಉತ್ಸಾಹಿತಳಾಗಿ ಹೀಗೆಂದಳು:—"ನನ್ನ ಪ್ರಾಣವಲ್ಲಭನ ಅಭಿಪ್ರಾಯವು ವಿದಿತವಾಗಿದೆ. ಅಲ್ಲಾವುದ್ದೀನನನ್ನು ಈಗ ಜಾರಬಿಟ್ಟರೆ ರಕ್ತದ ರುಚಿ ಹತ್ತಿದ ಹುಲಿಯು ಮತ್ತೆ ಮತ್ತೆ ಗ್ರಾಮಗಳಿಗೆ ಬಂದು, ಹಳ್ಳಿಗರನ್ನು ಹೆದರಿಸುವಂತೆ ಅವನು ಮರಳಿ ಮರಳಿ ಇಲ್ಲಿಗೆ ಬರುವನಲ್ಲವೇ? ಇದಲ್ಲದೆ ನನ್ನ ಜನ್ಮದಾತಾರನಾದ ತಂದೆಯು ಶತ್ರುವಿನಿಂದ ರಣರಂಗದಲ್ಲಿ ಬಿದ್ದು ಹೋದನೆಂಬ ದುಃಖಾಗ್ನಿಯು ನನ್ನ ಹೃದಯವನ್ನು ಪದೇಪದೇ ದಹಿಸುತ್ತಿರುವುದು. ಶತ್ರುವಿನ ರಕ್ತಸೇಚನದಿಂದ ಈ ಅಗ್ನಿಯು ಶಾಂತವಾಗಬೇಕಾದುದರಿಂದ, ನನ್ನ ಪ್ರಾಣೇಶ್ವರನು ಸೈನ್ಯದ ವಿಶೇಷ ಭಾಗವನ್ನು ಈ ರಾತ್ರಿ ಕೋಟೆಯ ಹೊರಕ್ಕೆ ಕೊಂಡುಹೋಗುವಂತೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸುವೆನು. ಇವನ ಸಹಾಯಕಳಾಗಿ ಹೋಗಲಿಕ್ಕೆ ನನಗೂ ಆಜ್ಞೆಯಾಗಬೇಕೆಂದು ವಿಜ್ಞಾಪಿಸುವೆನು." ರಾಮದೇವನು ಮೊದಲಿನ ಎರಡು ಯುದ್ಧಗಳಲ್ಲಿಯೂ ಕೃಷ್ಣರಾಜನ ಸಾಹಸವನ್ನೂ ಚಾತುರ್ಯವನ್ನೂ ಕಣ್ಣಾರೆ ಕಂಡಿದುದ್ದರಿಂದ, ಕೃಷ್ಣರಾಜನು ಸೇನೆಯ ಹೆಚ್ಚಿನ ಭಾಗವನ್ನು ಆ ರಾತ್ರಿ ಹೊರಗೆ ಕೊಂಡುಹೋಗಿ ಯುದ್ಧ ಮಾಡುವುದಕ್ಕೆ ರಾಮದೇವನು ಸಮ್ಮತಿಸಿ, ತಾನು ಅವನೊಡನೆ ಹೊರಡಲಿಕ್ಕೆ ಸಿದ್ಧನಾದನು. ಆದರೆ ವೀರಮತಿಯು ಸೈನ್ಯದೊಡನೆ ಹೊರಕ್ಕೆ ಹೋಗುವುದು ಯೋಗ್ಯವಲ್ಲವೆಂದು ಬಹುಪಕ್ಷದವರ ಮತವಾಯಿತು.

ದೇವಗಿರಿ ದುರ್ಗವು ಪುರಾತನ ಕಾಲದಲ್ಲಿ ಮಹಾಪ್ರಖ್ಯಾತಿಗೊಂಡಿತ್ತು. ಕಡಲುಮಟ್ಟಕ್ಕಿಂತ 640 ಅಡಿ ಎತ್ತರಕ್ಕೆ ಏರಿದ ಏಕಾಕಿಯಾದ ಪರ್ವತದ ಮೇಲೆ ಅದು ಇದ್ದಿತ್ತು. ಈ ಪರ್ವತವು ಸೂಚ್ಯಾಕಾರವಾಗಿದ್ದು (cone-shaped), ಸುತ್ತಲೂ ಪ್ರಪಾತಮಯವಾದ ಬಂಡೆಗಳಿಂದ ಭದ್ರವಾಗಿತ್ತು. ಲಂಬಾಯಮಾನವಾದ ಪ್ರಾಕಾರಗಳು, ಉನ್ನತವಾದ ತೆನೆಗಳು, ವಿಸ್ತಾರವಾದ ಪರಿಗೆಯೂ ಕೋಟೆಯನ್ನು ಬಲಪಡಿಸಿದ್ದುವು. ದೂರ ದೃಷ್ಟಿಗೆ ಈ ದುರ್ಗವು ಒಂದೇ ಆಗಿ ತೋರಿದ್ದರೂ, ಇದರಲ್ಲಿ ಒಂದರ ಒಳಗೊಂದಾಗಿ ಮೂರು ಕೋಟೆಗಳಿದ್ದುವು. ದುರ್ಗದ ಅಡಿಯಲ್ಲಿ ದೇವಗಿರಿ ನಗರವು ಹುದುಗಿಕೊಂಡು ಭದ್ರವಾಗಿತ್ತು. ಇಂತಹ ಕೋಟೆಯನ್ನು ಶತ್ರುವು ಮಹಾಸೈನ್ಯದೊಡನೆ 10 ವರ್ಷಗಳ ವರೆಗೆ ಮುತ್ತಿದರೂ ರಾಮರಾಜನು ಸುಖವಾಗಿಯೂ ನಿರಾತಂಕವಾಗಿಯೂ ನಿದ್ದೆಹೋಗಬಹುದಿತ್ತು. ಮುಸಲ್ಮಾನರ ಸೇನಾಸಮುದ್ರವು ಉತ್ತರ ಹಿಂದುಸ್ಥಾನದ ಮೇರೆಯನ್ನು ಅತಿಕ್ರಮಿಸಿ, ಚಿರಕಾಲ ದೇವಗಿರಿಯ ಪ್ರಾಕಾರಗಳ ಮೇಲೆ ಬಂದು ಬಡಿದರೂ, ಅದರ ಸ್ವಾತಂತ್ರ್ಯವು ನಾಶವಾಗುತ್ತಿದ್ದಿಲ್ಲ. ವಿಧಾತನು ಮಾತ್ರ ಹಾಗೆ ಎಣಿಸಿರಲಿಲ್ಲ.

ಮಧ್ಯರಾತ್ರಿ ಅಷ್ಟಮಿಯ ಚಂದ್ರನು ದುಃಖದಿಂದ ಅಸ್ತಮಿಸುತ್ತಲಿದ್ದನು. ಅಂಧಕಾರವು ಮೆಲ್ಲಮೆಲ್ಲನೆ ದೇವಗಿರಿಯ ಹೊರವಳಯವನ್ನೆಲ್ಲಾ ಆಕ್ರಮಿಸಿಕೊಳ್ಳತೊಡಗಿತು. ದೇವಗಿರಿಯ ಪಾಳಯದಲ್ಲಿ ಕಾವಲುಗಾರರು ದೀವಟಿಗೆಯನ್ನು ಹಿಡಿದುಕೊಂಡು ಅತ್ತಿತ್ತ ತಿರುಗುತ್ತಿದ್ದರು. ವೀರರು ಶಸ್ತ್ರಕವಚಗಳನ್ನು ತೊಟ್ಟುಕೊಳ್ಳುವ ಝಣತ್ಕಾರ ಯುದ್ಧಾಶ್ವಗಳ ಹೇಷಧ್ವನಿ, ಭಟರ ಕಲಕಲ—ಇವೆಲ್ಲಾ ನಿಶ್ಶಬ್ದವಾದ ರಾತ್ರಿಯ ಕರ್ಣವನ್ನು ಭೇದಿಸಿ ಹೋಗುವಂತಿದ್ದುವು. ರಾಮದೇವನು ತಾನೇ ಪಾಳಯದಲ್ಲಿ ಸಂಚರಿಸುತ್ತ, ಪ್ರಾತಃಕಾಲದ ಯುದ್ಧಕ್ಕೆ ಸೈನಿಕರಲ್ಲಿ ಭೀತರಾದವರನ್ನು ಉತ್ಸಾಹಗೊಳಿಸುತ್ತ ಶತ್ರುಚಲನೆಯನ್ನು ತಿಳಿಯುವುದಕ್ಕೆ ನೆಲಕ್ಕೆ ಒರಗಿ, ಕಿವಿ ಕೊಡುತ್ತಿದ್ದನು.ಅಲ್ಲಾವುದ್ದೀನನ ಪಾಳಯವು ದುರ್ಗದಿಂದ 10 ಮೈಲು ದೂರವಿದ್ದುದರಿಂದ ಶತ್ರುಚಲನೆಗಳೇನೂ ತೋರುತ್ತಿರಲಿಲ್ಲ. ಕೃಷ್ಣರಾಜನು ತಾನೇ ಮುಂದು ಹೋಗಿ ಪರೀಕ್ಷಿಸುವೆನೆಂದು ಹೇಳಿ ಕೋಟೆಯ ಗೋಡೆಯನ್ನು ಹತ್ತಲು ಹೋದನು.

ಅಲ್ಲಾವುದ್ದೀನನ ಸೈನಿಕರೆಲ್ಲರು ಗಾಂಜಾವಿನ ಬಲದಿಂದ ಸುಖವಾಗಿ ನಿದ್ದೆಹೋಗುತ್ತಿದ್ದರು. ಅಲ್ಲಲ್ಲಿ ಒಬ್ಬಿಬ್ಬರು ಕಾವಲುಗಾರರು ಪಹರೆ ಮಾಡುತ್ತಿದ್ದರು. ಅಷ್ಟರಲ್ಲಿ ಅಲ್ಲಾವುದ್ದೀನನ ಪಾಳಯದಲ್ಲಿ ಒಂದು ದೀಪವನ್ನು ಯಾರೋ ಹಚ್ಚಿದರು. ಡೇರೆಯ ಒಳಗೆ ಒಬ್ಬ ಯುವಕನು ಏನನ್ನೋ ಆಲೋಚಿಸುತ್ತ ಕುಳಿತುಕೊಂಡಿದ್ದನು. ಬಳಿಕ ಹೊರಗೆ ಬಂದು ಯಾರನ್ನೋ ಹುಡುಕಿದಂತೆ ಅತ್ತಿತ್ತ ನೋಡಿಕೊಂಡು ನಿಂತನು. ಶೀತಲವಾದ ಗಾಳಿ ಬೀಸುತ್ತಿತ್ತು. ಆಕಾಶದಲ್ಲಿ 'ಸಹಸ್ರ ರತ್ನಗಳು' ಮಿನುಗುತ್ತಿದ್ದವು. ಯುವಕನು ಪುನಃ ಡೇರೆಯೊಳಗೆ ಹೋಗಿ ಕುಳಿತುಕೊಂಡನು. ಯುವಕನ ಹೆಸರು ಮಾಲಿಕ್ ನಾಯಬ್ ಕಾಫರ್. ಹಿಂದುಸ್ಥಾನದ ಇತಿಹಾಸದಲ್ಲಿ ಈ ಹೆಸರೇ ಮಾಲಿಕ್ ಕಾಫರ್ ಎಂದು ಸಂಕ್ಷೇಪವಾಗಿರುವುದು. ಈ ಮಾಲಿಕ್ ಕಾಫರನು ಮೊತ್ತಮೊದಲು ಅಲ್ಲಾವುದ್ದೀನನ ಗುಲಾಮನಾಗಿದ್ದು, ಅವನ ದಯೆಯಿಂದಲೇ ಸೈನ್ಯದಲ್ಲಿ ಉಚ್ಚಪದವಿಯನ್ನು ಪಡೆದಿದ್ದನು. ಹಲವು ದುರ್ಗುಣಗಳು ಇವನಲ್ಲಿ ಹಾಸುಹೊಕ್ಕಾಗಿದ್ದುವು. ಅಲ್ಲಾವುದ್ದೀನನು ಈ ಪಾಪಿಯಲ್ಲಿ ಹೆಚ್ಚಾದ ವಿಶ್ವಾಸವಿಟ್ಟಿದ್ದನು; ಅವನನ್ನೇ ತನ್ನ ಸೇನಾಧಿಪತಿಯಾಗಿ ಮಾಡಿದ್ದನು; ಅವನ ವಚನವನ್ನು ಕುರಾನಿನಂತೆ ಪಾಲಿಸುತ್ತಿದ್ದನು. ಅಲ್ಲಾವುದ್ದೀನನ್ನು ರಾಜ್ಯಾಭಿಲಾಷೆಯಿಂದ ಲೋಕಾಂತರಕ್ಕೆ ಕಳುಹಿಸಿದ ವಿಶ್ವಾಸಘಾತುಕನು ಈತನೇ. ಮಾಲಿಕ್ ಕಾಫರನು ಹೊರಕ್ಕೆ ಬಂದು ಅಲ್ಲಲ್ಲಿ ವಿಹರಿಸುತ್ತಿದ್ದನು. ರಾತ್ರಿಯು ಮೆಲ್ಲಮೆಲ್ಲನೆ ಸರಿಯುತ್ತ ಬಂದಿತ್ತು. ಮುಸಲ್ಮಾನರ ಸೈನ್ಯದಲ್ಲಿ ಒಬ್ಬಿಬ್ಬರು ಎಚ್ಚರವಾಗುತ್ತಿದ್ದರು. ಮಾಲಿಕ್ ಕಾಫರನು ಡೇರೆಯ ಸಮೀಪದಲ್ಲಿದ್ದ ಮರದ ತೋಪಿನ ಬಳಿಯಲ್ಲಿ ಬಂದು ನಿಂತನು. ಅಷ್ಟರಲ್ಲಿ ಅವನ ಇದಿರಿಗೆ ಯಾರೋ ಒಬ್ಬನು ಕಾಲ್ನಡಿಗೆಯಾಗಿ ಬರುತ್ತಿದ್ದನು. ಮಾಲಿಕ್‌ಕಾಫರನು ಆಗಂತುಕನನ್ನು ನೋಡಿ ಸಲಾಂ ಮಾಡಿದನು.

ಮಾಲಿಕ್ ಕಾಫರನು ಆಗಂತುಕನ ಬಳಿಗೆ ಬಂದು, "ನಿನ್ನೊಡನೆ ಮತ್ತಾರಾದರೂ ಬಂದಿದ್ದನೇ?" ಎಂದನು.

ಆಗಂತುಕನು ಸುತ್ತಲೂ ನೋಡುತ್ತ "ಇಲ್ಲ, ನಾನು ಬಂದುದು ಯಾರೂ ತಿಳಿಯಲು ಕಾರಣವಿಲ್ಲ," ಎಂದನು.

ಮಾಲಿಕ್ ಕಾಫರ್:—"ನಿನ್ನ ಹಿಂದೆಯೇ ಏನೋ ದೂರದಲ್ಲಿ ನಿನ್ನ ನೆರಳಂತೆ ತೋರಿತು. ಇಷ್ಟು ವಿಳಂಬವೇಕಾಯಿತು?"

ಆಗಂತುಕ:—"ಮಧ್ಯಾಹ್ನ ನಿನ್ನನ್ನು ನೋಡಿದ ಬಳಿಕ ಅರಮನೆಯ ಕಾರ್ಯಗೌರವದಿಂದ ತಳುವಿದೆನು."

ಮಾಲಿಕ್ ಕಾಫರ್:—"ನೀನು ಹಗಲು ನನಗೆ ಮಾತು ಕೊಟ್ಟಂತೆ ದೇವಗಿರಿಯ ಸೈನ್ಯವನ್ನು ಹೊರಕ್ಕೆ ಇಳಿಸಿರುವೆಯೋ?"

ಎಲೆಯ ಮರಮರ ಶಬ್ದದಂತೆ ಹತ್ತಿರದಲ್ಲಿ ಕೇಳಿಸಿತು.

ಆಗಂತುಕ:—"ಕೊಟ್ಟ ಮಾತನ್ನು ಮರೆಯಲಾರೆನು. ಅರಮನೆಯನ್ನು ಕಾಯುವಷ್ಟು ಕೈತುಂಬಾ ಸೈನಿಕರನ್ನು ಹಿಂದೆಬಿಟ್ಟು ಮಿಕ್ಕ ಸೈನ್ಯವನ್ನು ಹೊರಕ್ಕೆ ಹೊರಡಿಸಿರುವೆನು."

ಮಾಲಿಕ್ ಕಾಫರ್:—"ಹಾಗಾದರೆ ನಮ್ಮ ಸೈನ್ಯವು ಒಳ ನುಗ್ಗುವುದಕ್ಕೆ ಇದೇ ಅವಕಾಶವಲ್ಲವೇ? ರಹಸ್ಯ ಮಾರ್ಗವು ಯಾವುದು?"

ಆಗಂತುಕ:—"ಇದೇ ಸಮಯ. ನಾನು ಈ ಮಧ್ಯಾಹ್ನದಲ್ಲಿ ನಿನ್ನೊಡನೆ ಯಾವ ಸ್ಥಳದಲ್ಲಿ ಸಂಭಾಷಣೆ ಮಾಡಿದೆನೋ ಆ ಸ್ಥಳದಿಂದ ಎಡಕ್ಕೆ ತಿರುಗಿದರೆ..."

ಮಾಲಿಕ್ ಕಾಫರ್:—"ಎಡಕ್ಕೆ ತಿರುಗಿದರೆ ಹಾಳು ಗುಡಿಯೊಂದು ತೋರುವುದು."

ಆಗಂತುಕ:—"ಸರಿ, ಆ ಕಾಳಿಕಾ ದೇವಸ್ಥಾನಕ್ಕೆ ಇದಿರಾದ ಹಾದಿಯನ್ನು ಹಿಡಿದು ಹೋದರೆ, ಅರಮನೆಯ ಹಿಂದುಗಡೆಯಲ್ಲಿ ಇಳಿಯಬಹುದು."

ಮಾಲಿಕ್ ಕಾಫರ್:—"ಅಲ್ಲಿ ಸೈನ್ಯವೆಷ್ಟಿರುವುದು?"

ಅಷ್ಟರಲ್ಲಿ ಇಬ್ಬರೂ ಸುತ್ತುಮುತ್ತಲು ನೋಡಿದರು. ಯಾರೊಬ್ಬರ ಸುಳಿವೂ ತೋರುತ್ತಿರಲಿಲ್ಲ. ಗಾಳಿಯ ಶಬ್ದವೆಂದು ಸುಮ್ಮನಾದರು. ಪುನಃ ಕಣ್ಣೆತ್ತಿ ನೋಡಿದರು. ವಾಯುವಿನ ಹಿಲ್ಲೋಲದಿಂದ ಉಂಟಾದ ಎಲೆಗಳ ಮರಮರ ಶಬ್ದದಲ್ಲಿ ಅವರಿಗೆ ಏನೊಂದೂ ಕೇಳಿಸಲಿಲ್ಲ.

ಆಗಂತುಕ:—"ಅಲ್ಲಿ ಬೇಕೆಂತಲೇ ಮೂವರು ಸಿಪಾಯರನ್ನು ಇಟ್ಟಿರುವೆನು."

ಮಾಲಿಕ್ ಕಾಫರ್:—"ಅಲ್ಲಾವುದ್ದೀನರು ನೀನು ಮಾಡಿದ ಉಪಕಾರವನ್ನು ಮರೆಯಲಾರರು. ಯಾವ ಉಪಾಯದಿಂದಲಾದರೂ ಕೋಟೆಯನ್ನು ಜಯಿಸಿದ ಹೊರತು, ತಾನು ಅನ್ನಾಹಾರವನ್ನು ತೆಗೆದುಕೊಳ್ಳುವುದಿಲ್ಲವೆಂದು ನಿನ್ನೆಯಿಂದ ಹಟ ಹಿಡಿದಿರುವರು. ರಾಮದೇವನ ಸ್ಥಾನವನ್ನು ನೀನೇ ಅಲಂಕರಿಸುವೆ ಎಂದು ತಿಳಿ."

ಆಗಂತುಕ:—"ರಾಜನಾದ ಬಳಿಕ ನಾನು ವಿವಾಹವಾಗಬೇಕೆಂದು ಯೋಚಿಸಿರುವೆನು. ಅಲ್ಲಾವುದ್ದೀನನ ಸಮಕ್ಷಮದಲ್ಲಿಯೇ ನಾನು ವೀರಮತಿಯನ್ನು ವಿವಾಹವಾಗಬೇಕೆಂದು ನನ್ನ ಆಸೆ."

ಆಗ ಗಾಳಿಯು ಪುನಃ "ಚಿ! ಚಿ!" ಎಂಬ ಸ್ವರದಿಂದ ಬೀಸಿತು. ಒಂದೊಂದು ಹಕ್ಕಿಯು ಮರದಲ್ಲಿ ಗೂಡಿನಿಂದ "ಟಿಕ್! ಟಿಕ್! ಎಂದು ಅರಚಿತು. ಮಾಲಿಕ್ ಕಾಫರನು ಆಗಂತುಕನ ಹಸ್ತವನ್ನು ಹಿಡಿದುಕೊಂಡು "ಕೃಷ್ಣರಾಜ್! ಇನ್ನು ಮುಂದೆ ನೀನೇ ದೇವಗಿರಿಯ ರಾಜನೆಂದು ತಿಳಿ. ನೀನು ಇಲ್ಲಿ ಡೇರೆಯಲ್ಲಿ ತಳುವಿದರೆ ನಾನು ಅಲ್ಲಾವುದ್ದೀನರಿಗೆ ನಿನ್ನನ್ನು ಮನ್ನಣೆಗೊಳಿಸಬೇಕೆಂದು ಹೇಳುವೆನು. ವಿಳಂಬವಾದರೆ ಕಾರ್ಯವು

ಕೆಟ್ಟುಹೋಗುವುದು. ಕುದುರೆಯನ್ನು ಹತ್ತಿ ನಾನು ಕೋಟೆಯನ್ನು ಬೆಳಗಾಗುವಷ್ಟರಲ್ಲಿ ನುಗ್ಗಬೇಕು. ಇಕೋ, ಕೋಳಿ ಕೂಗಿತು!" ಎಂದು ಹೇಳಿ ಕುದುರೆಯ ಮೇಲೆ ಹತ್ತಿ ಅದೃಶ್ಯವಾದನು.

ಆಗಂತುಕನು ಮನಸ್ಸಿನಲ್ಲಿ ಏನನ್ನೋ ಯೋಚಿಸುತ್ತ ಮಾಲಿಕ್‌ನು ಇದ್ದ ಡೇರೆಯ ಕಡೆಗೆ ಮೆಲ್ಲಮೆಲ್ಲನೆ ಕಾಲಿಡುತ್ತಿದ್ದನು. ಅಷ್ಟರಲ್ಲಿ "ಹಾ! ದುಷ್ಟಾ!" ಎಂದೊಂದು ಸ್ತ್ರೀ ಧ್ವನಿಯು ಅವನ ಕಿವಿಯನ್ನೂ ಎದೆಯನ್ನೂ ಸೀಳಿಕೊಂಡು ಹೋಯಿತು. ಆಗಂತುಕನು ಪುನಃ ತಿರುಗಿದನು. ಕಣ್ಣುಮುಚ್ಚುವಷ್ಟರಲ್ಲಿ ಮುಸುಕಿಟ್ಟು, ಒಂದು ವ್ಯಕ್ತಿಯು ಅವನ ಸಮ್ಮುಖಕ್ಕೆ ಹಾರಿ ಬಂದಿತು. ಆಗಂತುಕನು ತನ್ನ ಕಟಿಯಲ್ಲಿದ್ದ ಕಠಾರಿಯನ್ನು ಈಚೆಗೆ ಸೆಳೆಯುವಷ್ಟರಲ್ಲಿ ವ್ಯಕ್ತಿಯ ಕೈಯಲ್ಲಿದ್ದ ಭರ್ಚಿಯು ಅವನ ಹೊಟ್ಟೆಯನ್ನು ಹಾಯ್ದುಕೊಂಡು ಅವನ ಸೊಂಟದ ಕಠಾರಿಯನ್ನು ಝಣತ್ಕರಿಸಿತು. ಆಗಂತುಕನು ಘಾತವನ್ನು ತಡೆಯಲಾರದೆ ಒರಗಿದನು.

ಕೃಷ್ಣರಾಜನು ಕರ್ಕಶವಾದ ಭೂಮಿಯ ಮೇಲೆ ಬಿದ್ದುಬಿಟ್ಟನು. ಅವನ ದೇಹದ ರಕ್ತದಿಂದ ನೆಲವೇ ಹರಿದು ಹೋಗುವಂತಿತ್ತು. ಕೃಷ್ಣರಾಜನ ಪ್ರಾಣವು ಮೆಲ್ಲಮೆಲ್ಲನೆ ದೇಹವನ್ನು ಬಿಟ್ಟುಹೋಗುತ್ತಿತ್ತು. ಅವನು ಅಸ್ಫುಟಸ್ವರದಿಂದ, "ಪ್ರಿಯೇ! ನನ್ನ ಹತ್ಯವನ್ನು ಮಾಡುವುದಕ್ಕೆಂದು ಇಲ್ಲಿಗೆ ಬಂದೆಯೋ?" ಎಂದು ಕೇಳಿದನು.

ವೀರಮತಿಯು ಉದ್ರೇಕಿತಳಾಗಿ "ಯಾವನು ಜನ್ಮಭೂಮಿಯ ಹತ್ಯವನ್ನು ಮಾಡುವನೋ ಅವನು ನಿನ್ನ ಗತಿಗೆ ಹೋಗಲಿ" ಎಂದಳು.

ಕೃಷ್ಣರಾಜ:—"ಸಖಿ! ವೀರಮತಿ! ನನ್ನನ್ನು ನೀನು ಪ್ರೀತಿಸಲಿಲ್ಲವೇ?"

ವೀರಮತಿಯ ಉತ್ಸಾಹಿತವಾದ ಹೃದಯವು ಈ ಪ್ರಣಯ ಪ್ರಸ್ತಾವದಿಂದ ಫಕ್ಕನೆ ಪರಿವರ್ತಿತವಾಯಿತು. ಕೃಷ್ಣರಾಜ-ಮಾಲಿಕ್ ಕಾಫರರ ಗುಪ್ತಸಂಭಾಷಣದಿಂದ ಉದ್ರೇಕಿತವಾದ ಅವಳ ಸ್ವದೇಶಾನುರಾಗವು ಸರ್ವ ದೇಹವನ್ನು ಆವರಿಸಿಕೊಂಡು ಅವಳ ಹಸ್ತದಿಂದ ಈ ಘೋರಕೃತ್ಯವನ್ನು ಹೇಗೆ ನಡೆಯಿಸಿತೋ, ಹಾಗೆಯೇ ಆ ಮನೋಭಾವವು ಶಾಂತವಾಗುತ್ತಲೇ, ಪ್ರಾಣವಲ್ಲಭನ ಅಂತಿಮ ದರ್ಶನದಿಂದ ಅವಳ ಮನಸ್ಸನ್ನು ಆಕ್ರಮಿಸಿ, ತಾನೇತಾನಾಗಿ ನಿಂತ ಪ್ರಣಯವು ಅವಳನ್ನು ದುಃಖಕ್ಕೆ ಗುರಿಮಾಡಿತು. ಕೃಷ್ಣರಾಜನು ಉಜ್ವಲ ಮುಖದಿಂದ "ಪ್ರಾಣೇಶ್ವರೀ! ರಾಜ್ಯ-ಬೇಡ-ನಿನ್ನ-ಚುಂ-ಬ-ನ-ನಾನು-ಸಾ-ಯು..." ಎಂದನು. ಅವನ ಕಡೆಯ ಮಾತುಗಳು ನಾಲಿಗೆಯಲ್ಲೇ ಉಳಿದುಹೋದುವು.

ವೀರಮತಿಯು ಆ ಮೃತದೇಹವನ್ನು ಚುಂಬಿಸಿದಳು; ಮತ್ತೊಮ್ಮೆ ಚುಂಬಿಸಿದಳು; ಪುನಃ ಚುಂಬಿಸಿ ದಳು. ಅಯ್ಯೋ! ವಿಧಾತನು ಈ ಸುಂದರವಾದ ದೇಹದಲ್ಲಿ ಕಪಟವನ್ನು ಏಕೆ ಅಡಗಿಸಿಟ್ಟನು? ಮಧುರ ಪುಷ್ಪದಲ್ಲಿ ಕ್ರಿಮಿ ಇರುವುದೆಂದು ಹೇಳುವರಲ್ಲವೇ? ಆದಕಾರಣದಿಂದಲೇ ಅದು ಸುಂದರ ಪುಷ್ಪವೆನಿಸುವುದೇ? ಪ್ರಿಯನೇ! ನಿನ್ನ ದೇಹವು ಚಂದ್ರನಂತೆ ಶೀತಲವಾಯಿತಲ್ಲಾ! ಚಂದ್ರನ ಕಳಂಕ ಗೋಚರವಾಗಿದೆ. ನಿನ್ನ ಕಳಂಕ ವನ್ನು ನೀನು ಮರೆಗೊಳಿಸಿ, ನನಗೆ ಈ ದುರ್ಗತಿಯನ್ನು ತಂದುಬಿಟ್ಟೆಯಲ್ಲ! ನಿನ್ನ ಸ್ಥಿತಿಯನ್ನು ನೋಡಲಾರದೆ 'ಆಕಾಶದೀಪಗಳು' ಕಣ್ಮುಚ್ಚಿದವು. ನನ್ನ ಕೈದೀಪವೇ! ನಿನ್ನ ಜೀವಜ್ಯೋತಿಯನ್ನು ನಾನು ನಂದಿಸಿದೆನಲ್ಲಾ! ಮರಳಿ ಇದನ್ನು ಹಚ್ಚುವುದಕ್ಕೆ ನಾನು ಬಲ್ಲೆನೇ? ಮುಸಲ್ಮಾನರಿಗೆ ಸಿಕ್ಕಿದರೇನು? ಸರಿ! ಸರಿ! ಮುಸಲ್ಮಾನರು ಕೋಟೆ ನುಗಿದರು!" ಹೀಗೆಂದು ಪ್ರಲಾಪಿಸುತ್ತಾ, ವೀರಮತಿಯು ಪುನಃ "ನನ್ನ ಪ್ರಾಣವಲ್ಲಭನೇ! ಈ

ಕಠಾರಿಯು ನಿನ್ನನ್ನು ಎಷ್ಟು ತಿವಿಯಿತೋ ನಾನು ಇದನ್ನು ನೋಡುವೆನು" ಎಂದು ಹೇಳಿ ಕಠಾರಿಯನ್ನು ಮೃತದೇಹದಿಂದ ಈಚೆಗೆ ಸೆಳೆದಳು. "ಶಿರಪುಷ್ಪವೇ! ನಿನ್ನನ್ನು ಇನ್ನೊಮ್ಮೆ ಆಘ್ರಾಣಿಸುವೆನು" ಎಂದು ಹೇಳಿ ಪುನಃ ಪುನಃ ಚುಂಬಿಸಿ "ಕೃಷ್ಣ! ಕೃಷ್ಣ! ಕೃಷ್ಣ!" ಎಂದು ಉಚ್ಚರಿಸುತ್ತ, ಕಠಾರಿಯ ಹತಿಯಿಂದ ಆಹತಳಾಗಿ, ಕೃಷ್ಣರಾಜನ ದೇಹದ ಮೇಲೆ ಬಿದ್ದು ಪ್ರಾಣವನ್ನು ತೊರೆದಳು.

* * * *

ಇಲ್ಲಿ ಇನ್ನೂ ಹೇಳುವುದೇನೂ ಉಳಿಯಲಿಲ್ಲ. ಅಲ್ಲಾವುದ್ದೀನನು ಮಾಲಿಕ್ ಕಾಫರನ ಮುಖಾಂತರವಾಗಿ ಮಾಡಿದ ಭೇದೋಪಾಯವು ಫಲಿಸಿತು. ದೇವಗಿರಿಯ ದುರ್ಗವು ಅಲ್ಲಾವುದ್ದೀನನ ವಶವಾಯಿತು. ಮಿಕ್ಕ ಅಂಶವೆಲ್ಲಾ ಹಿಂದೂಸ್ಥಾನದ ಇತಿಹಾಸದಲ್ಲಿ ವಿಸ್ತರಿತವಾಗಿದೆ.

ಕೋಟಿ ಚೆನ್ನಯ

ಮು ನ್ನು ಡಿ

ಈ ಸಂಸಾರದ ಕಷ್ಟಸಂಕಷ್ಟಗಳೂ ಕಾಯಿಲೆ ಕಸಾರಿಕೆಗಳೂ ದೈವ್ವದೇವತೆಗಳಿಂದ ಪ್ರಾಪ್ತವಾಗುತ್ತವೆಂದು ನಂಬಿ, ಹಣ್ಣುಕಾಯಿಯ ಹರಿಕೆಯಿಂದಾಗಲೀ ರಕ್ತಮಾಂಸದ ಬಲಿಯಿಂದಾಗಲೀ ಅವುಗಳ ಉಗ್ರತೆಯನ್ನು ಶಮನಿಸಲು ಪ್ರಯತ್ನಪಟ್ಟು ಬಹುಕಾಲದಿಂದ ಅವನ್ನು ನಂಬಿಕೊಂಡು ಬಂದಿರುವ ಸೀಮೆಗಳಲ್ಲಿ ತುಳುನಾಡು ಒಂದಾಗಿದೆ. ಇಲ್ಲಿ ಗ್ರಾಮಕ್ಕೆ ಒಂದರಂತೆ 'ಭೂತ' ಇದೆ; ಆ ಭೂತದ ಸಲುವಾಗಿ ವರ್ಷಕ್ಕೊಂದು ಜಾತ್ರೆ ಇದೆ; ಜಾತ್ರೆಯಲ್ಲಿ ಭೂತದ ವೇಷವನ್ನು ಆವೇಶದಿಂದ ಕುಣಿಯ ತಕ್ಕ ಪ್ರತ್ಯೇಕ ಜಾತಿಯವರೂ ಇದ್ದಾರೆ. ಭೂತವು ಮೈದುಂಬಿ ಬರುವ ಮೊದಲು ವೇಷಗಾರನು ಎರಡು ಮೂರು ತಾಸುಗಳ ತನಕ ಒಂದೇ ತೆರನಾಗಿ ಸ್ವರವೆತ್ತಿ ತುಳು ಹಾಡನ್ನು ಹೇಳುವನು. ಇದಕ್ಕೆ 'ಭೂತದ ಸಂಧಿ' ಎಂಬ ಹೆಸರೇ ತುಳುನಾಡಿನಲ್ಲಿ ವಾಡಿಕೆಯಾಗಿದೆ. ಆಯಾ ಭೂತದ ಚರಿತ್ರೆಯು ಆಯಾ ಭೂತದ ಸಂಧಿಯಲ್ಲಿ ಬಹುಮಟ್ಟಿಗೆ ಅಡಕವಾಗಿದೆ. "ಕೋಟಿಚೆನ್ನಯ" ಎಂಬೀ ಭೂತಗಳ 'ಸಂಧಿಯನ್ನು' ಅವಲಂಬಿಸಿ ಬರೆದ ಈ ಪುಸ್ತಕದಲ್ಲಿನ ಕಥೆಯನ್ನು ಆ ಭೂತ ಕಟ್ಟುವ ತುಳುವರ ಬಾಯಿಯಿಂದ ಈಗಲೂ ಕೇಳಬಹುದು.

ನಾನು ಈ ಕಥೆಯನ್ನು ಎನೆಕಲ್ಲು ಉಪಾಧ್ಯಾಯರಾದ ಕೈ. ವಾ. ರಾ. ಉಕ್ಕಣ್ಣ ಗೌಡರ ಪ್ರಯತ್ನದಿಂದ 1908ರಲ್ಲಿ ಹೆಕ್ಕಿಕೊಂಡನಂತರ ಇದೇ ಕಥೆಯ ಇಂಗ್ಲೀಷ್ ಭಾಷಾಂತರವನ್ನು 'ಇಂಡಿಯನ್ ಎಂಟಿಕ್ವೇರಿ' ಎಂಬ ಇಂಗ್ಲೀಷ್ ಮಾಸಪತ್ರಿಕೆಯ ಹಳೆಯ ಸಂಚಿಕೆಯಲ್ಲಿ ಓದಿ, ಇದರ ಮೂಲವು ಡಾಕ್ಟರ್ ಮೊಗ್ಲಿಂಗ್ ಎಂಬವರಿಂದ ಸಂಗ್ರಹಿಸಲ್ಪಟ್ಟ 'ಪಾಡ್ದೊನೆಳು' ಎಂಬ ಪುಸ್ತಕದಲ್ಲಿದೆ ಎಂದು ತಿಳಿದು ಆ ಪುಸ್ತಕವನ್ನು 1909ರಲ್ಲಿ ಸಂಪಾದಿಸಿಕೊಂಡೆನು.

ಡಾಕ್ಟರ್ ಮೊಗ್ಲಿಂಗರ ತುಳು 'ಪಾಡ್ದೊನೆಯಲ್ಲಿಯೂ' ನಾನು ಕೇಳಿದ್ದ ಕೋಟಿ ಚೆನ್ನಯರ 'ಸಂಧಿ' ಯಲ್ಲಿಯೂ ಮುಖ್ಯವಾದ ಕಥಾಭಾಗವು ಒಂದೇಯಾಗಿದ್ದರೂ, ಅಲ್ಲಲ್ಲಿ ಅನೇಕ ವ್ಯತ್ಯಾಸಗಳು ಕಂಡು ಬಂದುದರಿಂದ, ಕಥೆಯ ರಂಗಸ್ಥಳಗಳಾಗಿದ್ದ ಪಂಜ, ಪಡುಮಲೆ ಎಂಬೀ ಗ್ರಾಮಗಳನ್ನು ಸಂಚರಿಸಿ, ಅಲ್ಲಿಯ ಭೂತಕಟ್ಟುವವರಿಂದ ಈ ಕಥೆಯ ಬೇರೆ ಬೇರೆ ಪಾಠಾಂತರಗಳನ್ನು ಸಂಗ್ರಹಿಸಿ, ಎಂಟು ವರ್ಷಗಳ ತರುವಾಯ ಎಂದರೆ 1917ರಲ್ಲಿ ಡಾಕ್ಟರ್ ಮೊಗ್ಲಿಂಗರ ತುಳು 'ಪಾಡ್ದೊನೆ' ಯನ್ನು ನನ್ನ ಸ್ನೇಹಿತರಾದ ರಾ. ರಾ. ಆರ್. ಎಸ್. ಬಾಗಲೋಡಿಯವರಿಂದ ಯಥಾಮತಿಯಾಗಿ ಕನ್ನಡಿಸಿ ಕಥೆಯನ್ನು ಪ್ರಕಟಿಸಬೇಕೆಂದು ಯತ್ನಿಸಿದೆನು. ಇದ್ದುದನ್ನು ಇದ್ದ ಹಾಗೆಯೇ ಪ್ರಕಟಿಸಲೋ ಎಂದರೆ ಕಥಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿರದೆ, ಕಥೆಯ ಸಂವಿಧಾನಕ್ಕೆ ಭಂಗಬರುತ್ತದೆ. ಕಥೆಯನ್ನು ಬೇಕಾದಂತೆ ಪಲ್ಲಟಿಸಿ ಬರೆಯಲೋ ಎಂದರೆ, ಪುರಾತನ ವಿಗ್ರಹಕ್ಕೆ ಬೊಟ್ಟಿಟ್ಟ ದೋಷವು ಬರುತ್ತದೆ.—ಹೀಗೆ ಏನು ಮಾಡಬೇಕೆಂದು ನಾನು ದೃಢ ಮಾಡ

ಲಾರದೆ, ಕೈಬರಹದ ನನ್ನ ಪ್ರತಿಗಳನ್ನು ಇನ್ನೂ ಎಂಟು ವರ್ಷಗಳ ವರೆಗೆ ಕಟ್ಟಿ ಇಟ್ಟಿದ್ದೆನು. ಗೆದ್ದಲ ಬಾಯಿಯಿಂದ ತಪ್ಪಿಸಿಕೊಂಡ ಆ ಹಳೆಯ ಕಾಗದಗಳನ್ನು ಇನ್ನೊಮ್ಮೆ ನೋಡಿ ಈಗ ಮುದ್ರಿಸುವುದಕ್ಕೆ ಇತ್ತಲಾಗಿನ ಮಂಗಳೂರು ವಾರ್ತಾಪತ್ರಿಕೆಗಳಲ್ಲಿ ಕೋಟಿ ಚೆನ್ನಯರ ವಿಷಯವಾಗಿ ಒಂದೆರಡು ಲೇಖಗಳು ಪ್ರಕಟ ವಾದದ್ದೇ ಕಾರಣವಾಯಿತು.

ಅಕ್ರಮ. ವ್ಯರ್ಥ. ಪುನರುಕ್ತ, ಅಪಾರ್ಥ, ಹತೋಪಮೆ, ಲೋಕನ್ಯಾಯವಿರುದ್ಧತೆ ಎಂಬೀ ವಚನ ದೋಷಗಳಲ್ಲಿ ಮೊದಲನೆಯ ಮೂರು ದೋಷಗಳು ಮಾತ್ರವೇ ಮೂಲಕಥೆಯಲ್ಲಿ ಇದ್ದುದರಿಂದ ಅವನ್ನು ತೆಗೆದುಬಿಟ್ಟು, ನನಗೆ ದೊರೆತಿದ್ದ ಪಾಠಾಂತರಗಳಲ್ಲಿಯ ಕಥಾಭಾಗಗಳೆಲ್ಲಾ ಒಂದನ್ನೊಂದು ಹೊಂದುವಂತೆ ಮಾಡಿ ಕೋಟಿ ಚೆನ್ನಯರ ತುಳು 'ಪಾಡ್ದೊನೆ' ಯನ್ನು ಕನ್ನಡಿಸಿರುತ್ತೇನೆ. ಮೂಲದಲ್ಲಿದ್ದ ಒಂದೆರಡು ಅಸಹ್ಯ ಪ್ರಸಂಗಗಳನ್ನೂ ಚರ್ವಿತಚರ್ವಣವನ್ನೂ ಕಥಾನಾಯಕರ ಭೀಕರವಾದ ಕ್ರೌರ್ಯವನ್ನೂ ಬಿಟ್ಟುಬಿಟ್ಟು, ಬ್ರಾಹ್ಮಣ ಜೋಯಿಸನ ವೃತ್ತಾಂತವನ್ನೂ ಪಡುಮಲೆ ಬೀಡಿನ ದಹನ ಪ್ರಸ್ತಾಪವನ್ನೂ ಕಥೆಯ ಚೌಕಟ್ಟಿ ನಲ್ಲಿ ನೂತನವಾಗಿ ಸೇರಿಸಿರುತ್ತೇನೆ.

ಮಳೆಗಾಲದ ಹಗಲು ಹೊತ್ತಿನಲ್ಲಿ ತುಳುನಾಡಿನ ಒಕ್ಕಲಿಗನು ನಾಟಿ ಕೆಲಸವನ್ನು ಮುಗಿಸಿ, ಹೊತ್ತು ಮುಳುಗುವುದರೊಳಗೆ ತನ್ನ ಹುಲ್ಲುಮನೆಯನ್ನು ಸೇರಿಕೊಂಡು ಬೇಗನೆ ಊಟ ಮಾಡಿ, ಜೊಯ್ಯೆಂದು ಹೊರಗೆ ಸುರಿಯುತ್ತಿದ್ದ ಕಾರತಿಂಗಳ ಮಳೆಯಿಂದ ರಾತ್ರಿಯ ಕತ್ತಲು ಭಯಂಕರವಾಗಿ ಕಾಣುತ್ತಿದ್ದಾಗ ಮಿಣಮಿಣನೆ ಉರಿಯುವ ಬೆಳಕಿನ ಬಳಿಯಲ್ಲಿ ಕುಳಿತುಕೊಂಡು, ದುಡಿಯಿಂದ ತಾಳಹಾಕಿ, ಬಾಯಿಂದ ರಾಗವೆತ್ತಿ ಹಾಡುವ ಪಾಡ್ದೊನೆಯನ್ನು ಕೇಳಿ ಉಂಟಾಗುವ ರಸಸ್ವಾದನೆಯು ಈ ಕನ್ನಡಗದ್ಯದ ಒಣ ಮಾತು ಗಳನ್ನು ಓದುವುದರಿಂದ ಉಂಟಾಗಲಾರದೆಂದು ನನಗೆ ಗೊತ್ತಿದೆ. ಆದರೂ ತುಳುನಾಡಿನಲ್ಲಿ ಆಗಿಹೋದ ಈ ಪುರಾತನ ವೀರರು ಕರ್ನಾಟಕದ, ತುಳುವರಲ್ಲದವರ ಹೃದಯದಲ್ಲಿ ಚಿರಕಾಲ ಜೀವಂತರಾಗಿ ಇರಬೇಕೆಂಬ ಉದ್ದೇಶದಿಂದ ಈ ಹಳೆಯ ತುಳುಕಥನವನ್ನು ಕನ್ನಡಕ್ಕೆ ಪರಿವರ್ತಿಸಿ, ಹೊಸರೂಪದಲ್ಲಿ ಬರೆದಿದ್ದೇನೆ. ಇದರಲ್ಲಿ ಇರಬಹುದಾದ ಕುಂದುಕೊರತೆಗಳನ್ನು ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಆದ ಕನ್ನಡಿಗರು ಮನ್ನಿಸಬೇಕಾಗಿ ನಾನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ.

ಮಡಿಕೇರಿ

ಪಂಜೆಮಂಗೇಶರಾಯ

ಒಂದನೆಯ ಭಾಗ

ಪ ಡು ಮ ಲೆ ಯ ಲ್ಲಿ

ಬಹುಕಾಲದ ಹಿಂದೆ ತುಳುರಾಜ್ಯದ ಒಂದೊಂದು ಭಾಗವನ್ನು ಒಂದೊಂದು ಮನೆತನದ ಅರಸರು ಆಳುತ್ತಿದ್ದರು. ಆ ರಾಜ್ಯದ ಒಂದು ಪ್ರಾಂತಕ್ಕೆ ಬಂಗರು ಮನೆಯವರು ಅರಸರಾಗಿದ್ದರು; ಒಂದು ಸೀಮೆಗೆ ಚೌಟರು ದೊರೆಗಳಾಗಿದ್ದರು. ಒಂದು ಭಾಗದಲ್ಲಿ ಅಜಲ ಮನೆತನದವರು ಬಲಿಷ್ಠರಾಗಿದ್ದರು. ಈಗ ಹಳ್ಳಿಹಳ್ಳಿಗಳಲ್ಲಿ ಪಟೇಲರು ಇರುವ ಹಾಗೆ ಆ ಕಾಲದಲ್ಲಿ ಗ್ರಾಮಕ್ಕೊಬ್ಬ ಗುರಿಕಾರನಿದ್ದನು. ಇಂಥ ನಾಲ್ಕಾರು ಮಂದಿ ಗ್ರಾಮ ಗುರಿಕಾರರ ಮೇಲೆ ಮತ್ತೊಬ್ಬ ಅಧಿಕಾರಿ ಇದ್ದನು; ಇವನಿಗೆ ಬಲ್ಲಾಳ ಎಂದು ಹೆಸರು. ಬಂಗರು, ಚೌಟರು, ಅಜಲರು, ಸಾವಂತರು ಮೊದಲಾದವರ ಕೈಕೆಳಗೆ ಅನೇಕ ಮಂದಿ ಬಲ್ಲಾಳರಿದ್ದರು. ಇಂಥ ಒಬ್ಬ ಬಲ್ಲಾಳನು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪಡುಮಲೆ ಎಂಬಲ್ಲಿ ಇದ್ದನು: ಮತ್ತೊಬ್ಬನು ಪಂಜದಲ್ಲಿ ಇದ್ದನು. ಮೂರನೆಯವನು ಎಣ್ಮೂರಿನಲ್ಲಿ ಇದ್ದನು.

ಒಂದಾನೊಂದು ದಿನ ಪಡುಮಲೆಯ ಪೆರುಮಾಳು ಬಲ್ಲಾಳನು ಬೇಟೆಯಾಡುವುದಕ್ಕೆ ತನ್ನ ಸಂಗಾತಿಯವರೊಡನೆ ಹೊರಟು, ಸಮೀಪದ ಅಡವಿಯಲ್ಲಿ ನುಗ್ಗಿ ಒಂದು ಕಾಡುಹಂದಿಯನ್ನು ಅಟ್ಟಿಕೊಂಡು ಹೋಗುತ್ತಿದ್ದಾಗ, ದಾರಿಯ ಮೇಲೆ ಇದ್ದ ಮೊನೆಯಾದ ಕಾಸರ್ಕನ ಮುಳ್ಳೊಂದು ಅವನ ಅಂಗಾಲಿಗೆ ಚುಚ್ಚಿ, ತಲೆಗೆ ಕೆಟ್ಟ ನೋವು ಏರಿ, ಅವನು ಅಲ್ಲಿಯೇ ಬಿದ್ದುಬಿಟ್ಟನು.

"ಎಲಾ, ನನ್ನನ್ನು ಏನು ನೋಡುತ್ತೀರಿ? ಇಲ್ಲಿಯೇ ಹತ್ತಿರ ಬೂದಿ ಬೊಮ್ಮಯ್ಯ ಎಂಬುವ......" ಎಂಬೀ ಮಾತುಗಳು ಬಲ್ಲಾಳನ ಬಾಯಿಂದ ಬಿದ್ದವೋ ಇಲ್ಲವೋ ಎನ್ನುವಷ್ಟರಲ್ಲಿ ಅವನಿಗೆ ಕಣ್ಣುಕತ್ತಲೆ ಬಂದು, ಅವನು ಅಲ್ಲಿಯೇ ಒರಗಿದನು. ಆಗ ಅವನ ಆಳುಗಳು ಮಲೆಗೆ ಇಳಿದು, ಗಳ ಕಡಿದು, ಚಟ್ಟೆಕಟ್ಟಿ ಅದರ ಮೇಲೆ ಬಲ್ಲಾಳನನ್ನು ಮೆಲ್ಲಗೆ ಮಲಗಿಸಿ, ಬೂದಿ ಬೊಮ್ಮಯ್ಯನ ಚಾವಡಿಗೆ ಹೊತ್ತುಕೊಂಡು ಹೋಗಿ ಇಳಿಸಿದರು.

ಇಷ್ಟರಲ್ಲಿ ಪೆರುಮಾಳು ಬಲ್ಲಾಳನಿಗೆ ಮುಳ್ಳು ತಗಲಿದ ಸುದ್ದಿ ಮಲೆಯಲ್ಲೆಲ್ಲಾ ಹಬ್ಬಿತು. ಮುಳ್ಳು ಕೀಳುವವರು ಬೇಗನೆ ಬಂದು ನೋಡಿದ್ದಾಯಿತು; ಮಂತ್ರ ಹಾಕುವವರು ಹಾಕಿದ್ದಾಯಿತು; ಮದ್ದು ಕೊಡುವವರು ಕೊಟ್ಟದ್ದಾಯಿತು; ಬೊಮ್ಮಯ್ಯ ಬಲ್ಲಾಯನ ಬಲಿಯಾಯಿತು; ಅಮ್ಮಣ್ಣ ಬೈದ್ಯನ ಮದ್ದಾಯಿತು. ಆದರೆ ತಾನೆ ಏನು? ಬಲ್ಲಾಳನಿಗೆ ದಿನದಿನಕ್ಕೆ ಉರಿನೋವು, ಬೀಗು ಬಾವು, ಕೆಂಪು ಕೀವು ಹೆಚ್ಚುತ್ತಾ ಹೋಯಿತು. ಅನ್ನದಲ್ಲಿ ರುಚಿಯಿಲ್ಲ, ಹಾಸಿಗೆಯಲ್ಲಿ ಸುಖವಿಲ್ಲ; ಅವನು ಮನದ ಗೆಲುವಾಗಲೀ ಇರುಳ ನಿದ್ದೆಯಾಗಲೀ ಯಾವುದೊಂದೂ ಇಲ್ಲದೆ ನೋವಿನಿಂದ ನರಳಿ, ಕಡ್ಡಿಯಂತೆ ಕಂಗಾಲಾದನು. ಮಾಗಣೆಯ ಜನರೆಲ್ಲಾ ಪಡುಮಲೆಯ ಬೀದಿಗೆ ಹೋಗಿ, ಬಲ್ಲಾಳನ ಸ್ಥಿತಿಯನ್ನು ಕಂಡು, ಕಣ್ಣೀರು ತುಂಬಿ ಹಿಂದೆರಳುತ್ತಿದ್ದರು.

ಹೀಗೆ ಅವನನ್ನು ನೋಡಬಂದವರಲ್ಲಿ ಒಬ್ಬನು ಒಂದು ದಿನ "ಇಂಥ ಮುಳ್ಳು ಹುಣ್ಣಿಗೆ ನಮ್ಮ ಸಾಯಿನ ಬೈದ್ಯನು ಮುಂಚೆ ಮದ್ದುಮಾಡುತ್ತಿದ್ದನು. ಈಗ ಅವನಿಗೆ ಚಾಳೀಸು, ಕಣ್ಣು ಕಾಣದು. ಆದರೆ ಅವನ ತಂಗಿ ದೇಯಿಗೂ ಆ ಮದ್ದು ಗೊತ್ತಿದೆಯಂತೆ" ಎಂದು ಮೆಲ್ಲನೆ ಹೇಳಿದನು.

ಅದಕ್ಕೆ ಮತ್ತೊಬ್ಬನು "ಅದು ಹೌದು. ದೇಯಿಯ ಮದ್ದು ಒಳ್ಳೆಯದು. ಆದರೆ ಅವಳು ಈಗ ಬರುವುದು ಹೇಗೋ? ತುಂಬಿದ ಬಸುರಿ" ಎಂದು ಸಂಶಯಪಟ್ಟನು. "ಗಂಡ ಕಾಂತಣ್ಣ ಬೈದ್ಯನು ಸತ್ತು ಇನ್ನೂ ಮೂರು ತಿಂಗಳಾಗಲಿಲ್ಲ" ಎಂದು ಇನ್ನೊಬ್ಬನು ಹೇಳಿದನು.

ದೇಯಿ ಬೈದಿತಿಯು ಮದ್ದು ಬಲ್ಲಳು ಎಂಬೀ ಮಾತು ಬಲ್ಲಾಳನ ಕಿವಿಗೆ ಬೀಳಲು ಅವನು "ನನ್ನ ದಂಡಿಗೆಯಲ್ಲಿ ಅವಳನ್ನು ಕರೆದುಕೊಂಡು ಬನ್ನಿ" ಎಂದು ಬೋವಿಗಳಿಗೆ ಅಪ್ಪಣೆ ಮಾಡಿದನು. ಆಳುಗಳು ಕೂಡಲೇ ಹೊರಟರು.

ಪೆರುಮಾಳು ಬಲ್ಲಾಳನ ಬೋವಿಗಳು ತನ್ನ ಮನೆಯ ಬಾಗಿಲಿಗೆ ಸಿಂಗರಿಸಿ ತಂದಿದ್ದ ದಂಡಿಗೆಯನ್ನು ಕಂಡು ದೇಯಿ ಬೈದಿತಿಯು—"ಆಹಾ, ಅವಶ್ಯವಿಲ್ಲದ ಭವಿಷ್ಯ ಬಂತಲ್ಲಾ!" ಎಂದು ಮನಸ್ಸಿನಲ್ಲಿ ಮಾಡಿ ಕೊಂಡು, ಉಟ್ಟ ಉಡಿಗೆಯಲ್ಲಿಯೇ ಏಳ್ಮಲೆಗೆ ಹೋಗಿ ಏಳು ಹಿಡಿ ಸೊಪ್ಪು ಕೊಯ್ದಳು; ಮೂರ್ಮಲೆಗೆ ಹೋಗಿ ಮೂರು ಹಿಡಿ ಮದ್ದು ತಂದಳು; ಮನೆಗೆ ಬಂದು, ಅಟ್ಟ ಹತ್ತಿ, ತೆಂಗಿನ ಕಾಯಿ ತಂದು, ಮಿಾಸಲು ಕಟ್ಟಿಟ್ಟಳು. ಆಮೇಲೆ ಅವಳು ಆ ಮದ್ದನ್ನೂ, ಕಾಯಿಯನ್ನೂ ದಂಡಿಗೆಯಲ್ಲಿರಿಸಿ ಹೊರಟಳು. ಬೋವಿಗಳು ದಂಡಿಗೆಯನ್ನು ಹೊತ್ತುಕೊಂಡು ಬಂದರು.

ಇತ್ತ ಬಲ್ಲಾಳನು "ದೇಯಿ ಬಂದಳೋ? ಬರುತ್ತಾಳೋ? ಬರುವಳೋ?" ಎಂದು ಪದೇ ಪದೇ ಕೇಳುತ್ತ ಅವಳ ಬರವನ್ನೇ ಎದುರು ನೋಡುತ್ತಿದ್ದನು. ಅಷ್ಟರಲ್ಲಿ ದೇಯಿಯು ದಂಡಿಗೆಯಿಂದ ಇಳಿದು, ನಾಚಿಕೊಂಡು ಹೇಚಿಕೊಂಡು ಬಂದು, ಬಲ್ಲಾಳನ ಹಾಸಿಗೆಯ ಮಗ್ಗುಲಲ್ಲಿ ಕುಳಿತುಕೊಂಡಳು.

ಬಲ್ಲಾಳನು ದೇಯಿಯ ಮೋರೆಯನ್ನು ದೃಷ್ಟಿಸುತ್ತ, "ಬೈದಿತಿ, ನನ್ನ ಒಂದು ಜೀವವನ್ನು ಉಳಿಸಿ ಕೊಡವ್ವಾ. ಹಿಂದೆ ನನ್ನ ತಾಯಿಯ ಬಸುರಿಂದ ನಾನು ಬಂದೆ. ಇಂದು ನಿನ್ನ ಬಸುರಿಂದ ಬಂದವನು ಎನ್ನಿಸಿ ಬಿಡವ್ವಾ. ನಿನಗೆ ಯಾರೂ ಮಾಡದಿದ್ದ ಮಾನ ಮಾಡುವೆ; ಕೊಡದಿದ್ದ ಉಡುಗೊರೆ ಕೊಡುವೆ" ಎಂದು ಅಂಗಲಾಚಿ ಬೇಡಿಕೊಂಡನು.

ದೇಯಿ ಬೈದಿತಿಯು ಕೂಡಲೇ ಎದ್ದು ತಾನು ತಂದಿದ್ದ ಔಷಧದ ಪೊಟ್ಟಳವನ್ನು ಬಿಚ್ಚಿ, ಅಮ್ಮಣ್ಣನು ಮೊದಲು ಹಚ್ಚಿದ್ದ ಮದ್ದನ್ನು ತೊಳೆದು ತೆಗೆದಳು; ಅನಂತರ ತನ್ನ ಮದ್ದನ್ನು ಅರೆದು ಪೂಸಿದಳು; ಮಂತ್ರ ದಿಂದ ಮಾಣಿಸಿದಳು; ಸೊಪ್ಪಿನಿಂದ ತಣಿಸಿದಳು.

ಹೀಗೆ ಮಾಡಲಾಗಿ—ಬಲ್ಲಾಳನಿಗೆ ಗಳಿಗೆಯಿಂದ ಗಳಿಗೆಗೆ, ದಿನದಿಂದ ದಿನಕ್ಕೆ—ಎದೆಯಲ್ಲಿ ಇದ್ದದ್ದು ನಡುವಿಗೆ ಬಂತು; ನಡುವಿನಿಂದ ಕಾಲಿಗೆ ಇಳಿಯಿತು; ಕಾಲಿನಲ್ಲಿ ಇದ್ದದ್ದು ಅಂಗಾಲಲ್ಲಿ ತೋರಿ ಭೂಮಿಗೆ ಬಿತ್ತು. ಹೋದರುಚಿ, ನಿಂತ ಹಸಿವೆ, ಬಾರದ ನಿದ್ದೆ—ಇವೆಲ್ಲಾ ತಿರುಗಿ ಬಂದವು. ಬಲ್ಲಾಳನು ಮೊದಲಿನ ಬಲ್ಲಾಳ ನಾದನು. ಅಂದಿನಿಂದ ಬಲ್ಲಾಳನಿಗೂ ಬೀಡಿನವರಿಗೂ ದೇಯಿ ಬೈದಿತಿಯಲ್ಲಿ ಗೌರವವು ಹೆಚ್ಚಾಯಿತು. ಅದನ್ನು ಕಂಡು ಕೆಲವರಿಗೆ ಹೊಟ್ಟೆ ಉರಿಯಿತು. ಹೀಗೆ ಹೊಟ್ಟೆಕಿಚ್ಚು ಪಟ್ಟವರಲ್ಲಿ ಬಲ್ಲಾಳನಿಗೆ ಮಂತ್ರಿಯಾಗಿದ್ದ ಮಲ್ಲಯ ಬುದ್ಧಿವಂತ ಎಂಬುವನು ಒಬ್ಬನಾಗಿದ್ದನು.

ಇತ್ತ ಬಲ್ಲಾಳನಿಗೆ ಮೊದಲಿಗಿಂತ ಚೆನ್ನಾಗಿ ಮೈಬೆಳೆದದ್ದನ್ನು ಕಂಡು ಒಂದುದಿನ ದೇಯಿ ಬೈದಿತಿಯು "ಬಲ್ಲಾಳರೇ. ನಾನು ಮನೆಗೆ ಹೊರಡಬೇಕೆಂದಿದ್ದೇನೆ. ನನಗೆ ಏನಾದರೂ ಕೊಡುವುದು ಇದ್ದರೆ. ಅದಕ್ಕೆ ಅಪ್ಪಣೆಯಾಗಲಿ" ಎಂದು ಕೈಮುಗಿದು ಬಿನ್ನಯಿಸಿದಳು.

"ನೀನು ಹೋಗತಕ್ಕದ್ದೇ. ಆದರೆ ಉಡುಗೊರೆ ಕೊಡಲಿಕ್ಕೆ ನಮ್ಮ ಮಲ್ಲಯ ಬುದ್ಧಿವಂತನು ಈಗ ಇಲ್ಲಿ ಇಲ್ಲವಷ್ಟೆ. ಅವನ ಕೂಡೆ ಒಂದು ಮಾತು ಕೇಳಬೇಕು" ಎಂದು ಪೆರುಮಾಳು ಬಲ್ಲಾಳನು ಮುಬ್ಬೆತ್ತಿ ಹೇಳಿದನು.

"ಹಾಗೋ? ಅಳಿದ ಜೀವ ಉಳಿಸಿ ಕೊಡಲು ಆಗ ಇಲ್ಲದವರು ಈಗ ಮಾತ್ರ ಬೇಕೋ?" ಎಂದು ದೇಯಿಯು ಮರುಮಾತು ಕೊಟ್ಟು, ಬೀಡಿನ ಚಾವಡಿಯಿಂದ ಎದ್ದಳು.

ಅಷ್ಟರಲ್ಲಿ ಬೀಡಿನ ಯಜಮಾನಿ ಹೆಂಗಸು "ಜೀವದಾನ ಮಾಡಿದ್ದಕ್ಕೆ ಯಾವ ಮಾನ ಮಾಡಿದರು? ಆಹಾ!" ಎಂದು ತನ್ನೊಳಗೆ ತಾನೇ ಮಾತಾಡಿಕೊಂಡದ್ದನ್ನು ಬಲ್ಲಾಳನು ಕೇಳಿ, ಚಾವಡಿಗೆ ಬೆನ್ನು ತಿರುಗಿಸಿ ಹೋಗುತ್ತಿದ್ದ ಆ ದೇಯಿಯನ್ನು ಮತ್ತೆ ಕರೆಯಿಸಿ, "ಇಕೋ, ಈ ತಳಿಗೆಯನ್ನು ಹಿಡಿದುಕೋ" ಎಂದು ಹೇಳಿ, ವೀಳ್ಯದ ಹರಿವಾಣವನ್ನು ಅವಳ ಕೈಯಲ್ಲಿ ಕೊಟ್ಟು "ಅವ್ವಾ. ಈ ಎಣ್ಣೆ ಓಲೆ, ಎಸಳು ಬುಗುಡಿ. ಮುಳ್ಳಿನ ಕೊಪ್ಪು, ಪಚ್ಚೆಯ ಮೂಗುತಿ, ಇವೆಲ್ಲ ನಿನಗೆ; ಇನ್ನು ಕೊಡಲಿಕ್ಕೆ ಇರುವುದನ್ನು ನಿನ್ನ ಮುಂದಿನ ಮಕ್ಕಳಿಗೆ ಕೊಡುತ್ತೇನೆ" ಎಂದು ಸಂತಯಿಸಿದನು.

"ನನ್ನ ಮಗಳು ಕಿನ್ನಿದಾರು ಇದ್ದಾಳೆ. ಅವಳಿಗೆ?" ಎಂದು ಬೈದಿತಿಯು ಕೇಳಿದಳು. "ಅವಳು ನಿಮ್ಮ ಮನೆಯಲ್ಲಿ ಇದ್ದಾಳೋ?" ಎಂದು ಬಲ್ಲಾಳನು ಪ್ರಶ್ನೆ ಮಾಡಿದನು.

ಬೈದಿತಿಯು "ಅವಳಿಗೆ ಏಳು ವರ್ಷ ವಯಸ್ಸು ಎಂದಾಗ ಪಂಜದಲ್ಲಿನ ಪಯ್ಯ ಬೈದ್ಯನಿಗೆ ಕೈಹಿಡಿಸಿ ಕೊಟ್ಟುಬಿಟ್ಟಿದ್ದೇವೆ. ಈ ವರ್ಷದ ಆಯನಕ್ಕೆ ಇಲ್ಲಿಗೆ ತರಿಸಿಕೊಳ್ಳಬೇಕೆಂದಿದ್ದೇನೆ" ಎಂದಳು.

ಅದಕ್ಕೆ ಬಲ್ಲಾಳನು "ಈ ಪಟ್ಟೆಯ ಸೀರೆ, ಈ ಕುತ್ತಣಿಯ ರವಕೆ, ಈ ಚಿನ್ನದ ಬಳೆ ಅವಳಿಗೆ" ಎಂದು ಹೇಳಿ ಕೆಲವು ಒಡವೆ ವಸ್ತುಗಳನ್ನು ಕೊಟ್ಟು, ದೇಯಿ ಬೈದಿತಿಯನ್ನು ಕಳುಹಿಸಿದನು.

ಬೀಡಿನ ಚಾವಡಿಯಿಂದ ಇಳಿದು ಬಂದ ದೇಯಿಗೆ ಕಂಬಳದ ಗದ್ದೆಯ ಹತ್ತಿರ ಬರುವಷ್ಟರಲ್ಲಿ ಹೆರಿಗೆ ಬೇನೆಯು ತೋರಿತು. ಅವಳು ಗದ್ದೆಯ ತೆವರಿಯ ಮೇಲಿನ ಒಂದು ಕೆಂದಾಳೆ ತೆಂಗಿನಮರಕ್ಕೆ ಒರಗಿಕೊಂಡು. ವ್ಯಥೆಯಿಂದ ನಿಂತುಬಿಟ್ಟಳು. ಅಷ್ಟರಲ್ಲಿ ಹಿಂದೆ ಹೇಳಿದ ಆ ಮಲ್ಲಯ ಬುದ್ಧಿವಂತನು ಬೀಡಿಗಾಗಿ ಅದೇ ದಾರಿಯಲ್ಲಿ ಬರುತ್ತಿದ್ದು, ಹಾದಿಗೆ ಅಡ್ಡವಾಗಿ ಕದಲದೆ ನಿಂತಿದ್ದ ದೇಯಿಯನ್ನು ಕಂಡು. "ಅಬ್ಬ, ಬಿಲ್ಲರ ಹೆಣ್ಣೋ? ರಕ್ತದ ಕೊಬ್ಬೋ? ದುಡ್ಡಿನ ಸೊಕ್ಕೋ?" ಎಂದು ಬಿರುಸಾಗಿ ಬಾಯಿ ಮಾಡಿದನು. ದೇಯಿಯು ಉಸ್ಸೆಂದು ಉಸಿರುಬಿಟ್ಟು, "ನಾನು ಸೊಕ್ಕಿನಿಂದ ನಿಂತದ್ದೇ ಆದರೆ, ನಾನು ಮಾಡಿದ್ದನ್ನು ನಾನೇ ಉಣ್ಣುವೆ. ನಾನು ಸಂಕಟದಿಂದ ನಿಂತದ್ದು ಹೌದಾದರೆ, ನನ್ನ ಮಕ್ಕಳು ನೋಡಿಯಾರು" ಎಂದು ಮೆಲ್ಲನೆ ಉತ್ತರ ಕೊಟ್ಟಳು.

ಇಷ್ಟರೊಳಗೆ ಬೈದಿತಿಯ ಬೇನೆಯ ಸುದ್ದಿಯು ಬೀಡಿಗೆ ಮುಟ್ಟಿತು. ಪೆರುಮಾಳು ಬಲ್ಲಾಳನು ದೇಯಿಯನ್ನು ಬರಮಾಡಿಕೊಂಡು ಅವಳ ಹೆರಿಗೆಗಾಗಿ ಎಲ್ಲವನ್ನು ಏರ್ಪಡಿಸಿದನು. ದೇಯಿಯು ಬೀಡಿನ ಒಂದು ಅರೆಯಲ್ಲಿ ಅವಳಿಜವಳಿ ಗಂಡುಮಕ್ಕಳನ್ನು ಹೆತ್ತಳು. ಪುರುಡಿನ ದಿವಸಗಳು ಕಳೆದನಂತರ ಮಕ್ಕಳಿಗೆ ನಾಮಕರಣವಾಯಿತು. "ದಕ್ಷಿಣ ಕೋಟೇಶ್ವರ ದೇವರ ಬದಿಕಲ್ಲು ಬಾಳುವಂತೆ ಬಾಳು" ಎಂದು ಹರಸಿ ಹಿರಿಯ

ಮಗುವಿಗೆ ಕೋಟಿ ಎಂತಲೂ. "ಉತ್ತರ ಚೆನ್ನಿಗ ದೇವರ ಬದಿಕಲ್ಲು ಬಾಳುವಂತೆ ಬಾಳು" ಎಂದು ಹರಸಿ ಕಿರಿಯ ಮಗುವಿಗೆ ಚೆನ್ನಯ ಎಂತಲೂ ಇಬ್ಬರಿಗೂ ಹೆಸರಿಟ್ಟರು.

ಮಕ್ಕಳಿಗೆ ನಾಮಕರಣವಾದ ತರುವಾಯ ದೇಯಿ ಬೈದಿತಿಯು ಬಹಳ ಕಾಲ ಬದುಕಲಿಲ್ಲ. ಅವಳು ಸಹಜವಾಗಿ ಕಾಲವಾದಳೋ, ಇಲ್ಲವೆ ಅಮ್ಮಣ್ಣ ಬೈದ್ಯನೂ, ಮಲ್ಲಯ ಬುದ್ಧಿವಂತನೂ ಕೂಡಿ ಮಾಡಿಸಿದ ರೆಂಬುದಾಗಿ ಹೇಳುವ ಮಾಟದಿಂದ ಸತ್ತು ಹೋದಳೋ ಎಂಬುದು ಈ ತನಕ ತಿಳಿದಿಲ್ಲ. ಆದರೆ ಆ ಪಡುಮಲೆ ಬಲ್ಲಾಳನು ಮಾತ್ರ ಆ ತಾಯಿ ತಂದೆಗಳಿಲ್ಲದ ಮಕ್ಕಳನ್ನು ತೊರೆಯಲಿಲ್ಲ. ಆತನು ಅವರ ದೂರದ ಸೋದರ ಮಾವನಾದ ಸಾಯಿನ ಬೈದ್ಯನೆಂಬ ಬಿಲ್ಲವನನ್ನು ಕರೆಯಿಸಿ, ಆ ಅನಾಥ ಮಕ್ಕಳನ್ನು ಅವನ ಸೆರಗಿನಲ್ಲಿ ಹಾಕಿ, ಮಕ್ಕಳ ಸಾಕಣೆಗಾಗಿ ಬಿಂದಿಗೆ ತುಂಬ ಹಾಲು. ಹಾಲಿಗಾಗಿ ಹಸು, ಹಸು ಬತ್ತಿದರೆ ಎಮ್ಮೆ, ಮಕ್ಕಳಿಗೆ ಮಲಗಲಿಕ್ಕೆ ಮಂದರಿ, ಮಂದರಿ ಹರಿದರೆ ಹಚ್ಚಡ. ಹಚ್ಚಡ ಹರಿದರೆ ಮಂದರಿ ಕೊಡಿಸಿ, ಅವನನ್ನು ಕಳುಹಿಸಿದನು. ಸಾಯಿನ ಬೈದ್ಯನ ಮನೆಯಲ್ಲಿ ಕೋಟಿಚೆನ್ನಯರು ಸಾಯಿನ ಬೈದಿತಿಯ ಆರೈಕೆಯಿಂದ ಬೆಳೆದು ದೊಡ್ಡವ ರಾದರು.

ಪಡುಮಲೆಯಲ್ಲಿ ಒಂದು ವಿಸ್ತಾರವಾದ ಆಟದ ಬೈಲು ಇದೆ. ಹಳ್ಳಿಯ ಮಕ್ಕಳು ಸಂಜೆಯಲ್ಲಿ ಚೆಂಡಾಟವನ್ನೋ, ಬಿಲ್ಲಾಟವನ್ನೋ ಆ ಬೈಲಿನಲ್ಲಿ ಆಡುತ್ತಿದ್ದರು. ಬಡವರು ಮತ್ತು ಬಲ್ಲಿದರು, ಬೈದ್ಯರು ಮತ್ತು ಒಕ್ಕಲಿಗರು ಎಂಬ ಯಾವ ಭೇದವೂ ಇಲ್ಲದೆ ಇಲ್ಲರೂ ಕೂಡಿ ಆಟವಾಡುತ್ತಿದ್ದರು. ಆಟದಲ್ಲಿ ಮಾತಿಗೆ ಮಾತು ಬರುತ್ತದಷ್ಟೆ. ಹೀಗೆ ಒಂದು ದಿನ ಆಡುವಾಗ, ಮಾತಿಗೆ ಮಾತು ಬಂದು ಅಂದಿನ ಆಟವೆಲ್ಲ ಜಗಳದಲ್ಲಿ ಮುಗಿಯಿತು. ಬಿಲ್ಲವರ ಮಕ್ಕಳು ಆ ದಿವಸ ಗೆದ್ದಿದ್ದರು; ಒಕ್ಕಲಿಗರ ಮಕ್ಕಳು ಸೋತಿದ್ದರು. ಸೋತವರು ಜಗಳಕ್ಕೆ ನೆಪವನ್ನು ತೆಗೆದರು. "ಕಳದ ಬಾಡಿಗೆ ಕೊಡಬೇಕು" ಎಂದು ಬುದ್ಧಿವಂತನ ಮಕ್ಕಳೂ, "ಕಳದ ಬಾಡಿಗೆ ಇದೆ ಎಂದು ಆಟದ ಮೊದಲು ಕಟ್ಟು ಮಾಡಿಲ್ಲ" ಎಂದು ಚೆನ್ನಯನೂ ಕಚ್ಚಾಡಿ. ಕಚ್ಚಾಡಿ ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ಚೆಂಡು ಮಾತ್ರ ಬೈದಿತಿಯ ಮಕ್ಕಳ ಕೈಯಲ್ಲಿ ಉಳಿಯಿತು. ಬುದ್ಧಿವಂತನ ಮಕ್ಕಳು ಬರಿಯ ಕೈಯಲ್ಲಿ ಅಳುತ್ತ ಮನೆಗೆ ಹೋದರು.

ಮನೆಗೆ ಬಂದ ಮಕ್ಕಳ ಮೋರೆಯನ್ನು ಕಂಡು, ಅವರ ದೂರು ಕೇಳಿ, ಮಲ್ಲಯ ಬುದ್ಧಿವಂತನು ಕೋಟಿಚೆನ್ನಯರನ್ನು ಹುಡುಕ ಹೋದನು. ದಾರಿಯಲ್ಲಿ ಅವರಿಬ್ಬರು ಚೆಂಡಾಡುತ್ತಾ, ತನ್ನ ಎದುರಿಗೆ ಬಂದದ್ದನ್ನು ಕಂಡು ಬುದ್ಧಿವಂತನು ಅವರ ಕೈಗೆ ಹೊಡೆದು, ಚೆಂಡನ್ನು ಕಸಿದುಕೊಂಡು ಹಿಂದೆರಳಿದನು. ಕೋಟಿ ಚೆನ್ನಯರು ಕೈಯೆತ್ತಲಿಲ್ಲ.

"ಅಯ್ಯಾ, ಚೆಂಡನ್ನು ಚೆನ್ನಾಗಿ ಕಟ್ಟಿಡಿ. ನಮ್ಮ ಸಣ್ಣ ಕೈಗಳಿಂದ ನೀವು ಕಿತ್ತ ಚೆಂಡನ್ನು ದೊಡ್ಡ ಕೈಗಳಿಂದ ಸೆಳೆದು ತಂದೇವು. ಮರೆಯಬೇಡಿ" ಎಂದು ಹೇಳಿ ಇಬ್ಬರು ಹುಡುಗರೂ ಮನೆಯ ದಾರಿ ಹಿಡಿದರು.

ಅಲ್ಲಿಂದ ಇತ್ತ ಬುದ್ಧಿವಂತನ ಮನೆಯವರಿಗೂ ಬಿಲ್ಲವರ ಮನೆಯವರಿಗೂ ಮನಸ್ಸು ಸರಿಯಿಲ್ಲದೆ ಜಗಳಗಳು ಹುಟ್ಟಿ, ಆಗಾಗ ಬಲ್ಲಾಳನ ಬೀಡಿಗೆ ದೂರು ಹೋಗುತ್ತಿತ್ತು. ಈ ಮನೆಯ ಕೋಳಿಯ ಮರಿ ಅವರ ಅಂಗಳದ ಅಡ್ಡ ಹಾರಿತೆಂದು ಜಗಳ. ಆ ಮನೆಯ ದನದ ಕರು ಇವರ ಗದ್ದೆಯ ಪಕ್ಕದಲ್ಲಿತ್ತೆಂದು ಜಗಳ. ಇಂಥ ವ್ಯಾಜ್ಯಗಳನ್ನು ಪದೇಪದೇ ತೀರಿಸುವ ಬದಲಾಗಿ ಇವರಿಬ್ಬರನ್ನು ಬೇರ್ಪಡಿಸುವುದೇ ಮೇಲೆಂದು ಪೆರುಮಾಳ ಬಲ್ಲಾಳನು ನಿಶ್ಚಯಿಸಿ, "ನೀವು ಇಬ್ಬರೂ ಒಂದೇ ಬೈಲಿನಲ್ಲಿ ಒಂದೇ ನೆರೆಯಲ್ಲಿ ಇದ್ದರೆ, ನಿಮ್ಮ

ತೊಂಡು ತೊಳಸು ನಮಗೆ ಎಂದೆಂದಿಗೂ ತಪ್ಪದು. ಭೂಮಿಯನ್ನು ಪಾಲು ಮಾಡಿ ಕೊಡುತ್ತೇನೆ. ಆಸ್ತಿಯಲ್ಲಿ ಕೆಳಗಿನ ಕಂಬುಳದ ಗದ್ದೆಯು ಬುದ್ಧಿವಂತನಿಗೆ. ಮೇಲಿನ ಕಂಬುಳವು ಬಿಲ್ಲವರಿಗೆ" ಎಂದು ತೀರ್ಮಾನ ಮಾಡಿ, ಗಡಿ ಬಿಡಿಸಿಕೊಟ್ಟು, "ಕಂಬುಳವನ್ನು ಗೋರುವಾಗ ಬಿಲ್ಲವರು ಬುದ್ಧಿವಂತನಿಗೆ ಒಂದು ಕಾಣಿಕೆ ಕೊಡಬೇಕು" ಎಂದು ಕಟ್ಟು ಮಾಡಿದನು. ಈ ರೀತಿಯಾಗಿ ಗದ್ದೆಗಳನ್ನು ವಿಂಗಡಿಸಿಕೊಟ್ಟು ತರುವಾಯ ಕೋಟಿಚೆನ್ನಯರು ಅನಿಲಜೆ ಎಂಬ ಬೈಲನ್ನು ಬಿಟ್ಟು ಏರಜೆ ಎಂಬಲ್ಲಿಗೆ ಹೋಗಿ, ಅಲ್ಲಿ ಉಳುಕೊಂಡಿದ್ದರು.

ಕೋಟಿ ಚೆನ್ನಯರು ದೂರವಾದರೂ ಮಲ್ಲಯ ಬುದ್ಧಿವಂತನ ಮನಸ್ಸಿನಲ್ಲಿದ್ದ ಕಿಚ್ಚು ಮಾತ್ರ ಆರಲಿಲ್ಲ. ಒಳಗೊಳಗೇ ಬೇಯುತ್ತಲಿದ್ದ ಆ ಹಗೆಯು ಒಂದು ದಿನ ಕುದಿಬಂದು ಹೊರಗೆ ಹರಿಯಿತು.

ವರ್ಷ ವರ್ಷವೂ ಬರುವ ಅನಿಲಜೆ ಬೈಲಿನ ಕಂಬುಳದ ಉತ್ಸವವು ಸಮೀಪಿಸಿತು. ಬುದ್ಧಿವಂತನು ಕಂಬುಳದ ಉತ್ಸವಕ್ಕೆ ಮುಹೂರ್ತ ಕೇಳಿಕೊಳ್ಳುವುದಕ್ಕಾಗಿ ತನ್ನ ಮನೆಯಿಂದ ಹೊರಟು, ಊರ ಜೋಯಿಸನಿದ್ದಲ್ಲಿಗೆ ಹೋಗುತ್ತಿದ್ದನು. ಜೋಯಿಸನ ಮನೆಗೆ ಹೋಗಲು ಏರಜೆ ಬೈಲು ದಾಟಿ ಹೋಗಬೇಕಾಗಿತ್ತು. ಬುದ್ಧಿವಂತನು ಹೋಗುವುದನ್ನು ಕಂಡು, ಕೋಟಿಯು ತಮ್ಮ ಮನೆಯಿಂದ ಹೊರಕ್ಕೆ ಬಂದು—"ಅಯ್ಯಾ, ನಮ್ಮ ಕಂಬುಳಕ್ಕೂ ಮುಹೂರ್ತ ಕೇಳಿ ಬಿಡಿ" ಎಂದು ಹೇಳಿ, ಜೋಯಿಸನ ದೇವರಿಗೆ ಕಾಣಿಕೆಗಾಗಿ ತೆಂಗಿನ ಕಾಯನ್ನು ಕೊಟ್ಟನು. ಮಲ್ಲಯನು ಹೂಗುಟ್ಟಿ ಮುಂದರಿಸಿ, ಅವನ ತಲೆಯು ಕಣ್ಣಿಗೆ ಮರೆಯಾದ ಕೂಡಲೇ ಆ ಹರಕೆಯು ತೆಂಗಿನ ಕಾಯಿಯನ್ನು ದಾರಿಕಲ್ಲಿಗೆ ಒಡೆದು, ನೀರು ಕುಡಿದು, ಕೊಬ್ಬರಿ ತಿಂದು, ಜೋಯಿಸನಿದ್ದಲ್ಲಿಗೆ ಹೋದನು. ಮರಳಿ ಬರುವಾಗ "ನಮ್ಮ ಕಂಬುಳಕ್ಕೆ ಈ ಮಂಗಳವಾರ ಮುಹೂರ್ತ, ನಿಮ್ಮ ಕಂಬುಳಕ್ಕೆ ಮುಂದಿನ ಮಂಗಳವಾರ ಕೂಡಿ ಬರುತ್ತದಂತೆ" ಎಂದು ಸುಳ್ಳು ಸುಳ್ಳೇ ಹೇಳಿದನು. ಆದರೆ ಚೆನ್ನಯನಿಗೆ ಬುದ್ಧಿವಂತನ ಮಾತಿನಲ್ಲಿ ಸಂಶಯ ಬಾರದೆ ಹೋಗಲಿಲ್ಲ. "ಬುದ್ಧಿವಂತನ ಕಂಬುಳ ನಾಡದು ಮಂಗಳವಾರವಷ್ಟೆ. ನಮಗೂ ಅದೇ ದಿನ ಕಂಬುಳ ಆಗಬೇಕು. ಬುದ್ಧಿವಂತನು ಗೋರುವ ದಿನವೇ ನಾವೂ ಗೋರಬೇಕು. ಅವನು ಬಿತ್ತುವ ದಿನವೇ ನಾವೂ ಬಿತ್ತಬೇಕು" ಎಂದು ಅವನು ತನ್ನೊಳಗೇ ನಿಶ್ಚಯಿಸಿಕೊಂಡು, ಅಟ್ಟದಲ್ಲಿದ್ದ ಬೀಜದ ಬತ್ತವನ್ನು ತೆಗೆದು ನೀರಿನಲ್ಲಿ ನೆನೆ ಹಾಕಿ, ಮನೆಮನೆಗೆ ಹೋಗಿ "ಕಂಬುಳಕ್ಕೆ ನಾಳೆ ಆಳು ಬೇಕು, ಎತ್ತು ಬೇಕು. ನಾಲ್ಕೆತ್ತು ಇದ್ದವರು ಎರಡೆತ್ತು ನಮ್ಮ ಗದ್ದೆಗೆ ಬಿಡಬೇಕು, ಎರಡೆತ್ತು ಬುದ್ಧಿವಂತನ ಗದ್ದೆಗೆ ಹೊಡೆಯಬೇಕು. ಎರಡೆತ್ತು ಇದ್ದವರು ಮನಸ್ಸಿದ್ದರೆ ಎರಡನ್ನೂ ನಮ್ಮ ಗದ್ದೆಗೆ ಅಟ್ಟಬೇಕು, ಅಲ್ಲದಿದ್ದರೆ ಅವನ ಗದ್ದೆಗೆ ಅಟ್ಟಬೇಕು" ಎಂಬುದಾಗಿ ಸಾರಿದನು.

ಇದನ್ನು ಕೇಳಿ ಬುದ್ಧಿವಂತನು ಸ್ವಲ್ಪ ಬಿಸಿಯೇರಿ, "ನಿಮ್ಮ ಕಂಬುಳಕ್ಕೂ ನಾಳೆಯ ದಿನವೇ ಕೂಡಿಬಂತೇ? ಇರಲಿ, ನಮ್ಮ ಕಂಬುಳವು ನಾಳೆಯೇ ಆಗುವುದು, ಬೆಳ್ಳಿ ಮೂಡಿ ಬೆಳಕು ಹರಿಯುವಷ್ಟರಲ್ಲಿ, ನಿಮ್ಮ ಎತ್ತು ನಮ್ಮ ಗದ್ದೆಗೆ ಇಳಿಯಬೇಕು. ಮನೆಯ ಹೆಂಗಸರು ನೀರಿಗೆ ಬರುವಷ್ಟರಲ್ಲಿ ನಮ್ಮ ಗದ್ದೆಯಲ್ಲಿ ನಿಮ್ಮ ಎತ್ತು ಬಂದು ನಿಲ್ಲಬೇಕು" ಎಂದು ಕೆರಳಿಸಿ ಹೇಳಿ, ತನ್ನ ಮನೆಗೆ ಹಿಂತಿರುಗಿದನು.

ಇರುಳು ಕಳೆದು ಬೆಳಕು ಹರಿಯಿತು. ಕೋಟಿ ಚೆನ್ನಯರ ಗದ್ದೆಯು ಎರಡು ಸಾಲು ಉತ್ತಾಯಿತು: ಆದರೂ ಬುದ್ಧಿವಂತನ ಗದ್ದೆಗೆ ಎತ್ತುಗಳು ಇಳಿಯಲಿಲ್ಲ. ಗದ್ದೆಗೋರಿದ ತರುವಾಯ ಕೋಟಿ ಚೆನ್ನಯರು ಎರಡು ಜೋಡಿ ಎತ್ತನ್ನೂ ಎರಡು ಆಳನ್ನೂ ಬುದ್ಧಿವಂತನಿಗೆ ಕಳುಹಿಸಿದರು.

ತನ್ನ ಗದ್ದೆಗಿಂತ ಬಿಲ್ಲವರ ಕಂಬುಳವು ಮೊದಲು ಗೋರಿ ಮುಗಿದಿದ್ದನ್ನು ಕಂಡು ಬುದ್ಧಿವಂತನಿಗೆ ಕಿಡಿಕಿಡಿಯಾಯಿತು. ತನ್ನ ಗದ್ದೆಗೆ ಇಳಿದ ಅವರ ನಾಲ್ಕೆತ್ತುಗಳನ್ನು ಕಂಡು, ತಾನು ನಿಂತಿದ್ದ ಕಟ್ಟೆಯಿಂದ ಕೆಳಕ್ಕೆ ಹಾರಿ, ನೇಗಿಲಿಗೆ ಹೂಡಿದ್ದ ಎತ್ತುಗಳನ್ನು ಹೊಡೆದು, ಹೊಡೆದು ಓಡಿಸುತ್ತ ತನ್ನ ಗದ್ದೆಯನ್ನು ಗೋರತೊಡಗಿದನು.

ಹೀಗೆ ಬುದ್ಧಿವಂತನು ಸಿಟ್ಟಿನಿಂದ ಎತ್ತುಗಳನ್ನು ಬಡಿಯುವುದನ್ನು ಕಂಡು, ಕೋಟಿ ಚೆನ್ನಯರು "ಅಯ್ಯಾ, ಹೆರವರ ಎತ್ತನ್ನು ಹೊಡೆಯುವುದು ಸರಿಯಲ್ಲ. ಏಟು ಎತ್ತಿನ ಬೆನ್ನಿಗೆ, ನೋವು ಮಾತ್ರ ನಮ್ಮ ಎದೆಗೆ; ನಮ್ಮ ಮೇಲೆ ನಿಮಗೆ ಸೇಡು ಇದ್ದರೆ ಅದನ್ನು ನಮ್ಮ ಮೇಲೆ ತೀರಿಸಬೇಕೇ ಹೊರತು, ಅದನ್ನು ಬಡ ಎತ್ತಿನ ಮೇಲೆ ತೋರಿಸಬೇಕೆ?" ಎಂದು ಹಿಂಜರಿಯದೆ ಮಾತಾಡಿದರು. ಬುದ್ಧಿವಂತನ ಬಾಯಿಂದ ಉತ್ತರ ಬರಲಿಲ್ಲ; ಉಂಕಾರ ಮಾತ್ರ ಹೊರಟಿತು.

ಆ ದಿನದ ಕಂಬುಳದ ಗೌಜಿ ಹೇಗೋ ಮುಗಿಯಿತು. ಊಟ ಮಾಡುವವರಿಗೆ ಊಟ ಕೊಟ್ಟದ್ದಾಯಿತು. ಊಟ ಮಾಡದವರಿಗೆ ಎಳನೀರು ಹಂಚಿದ್ದಾಯಿತು. ಬಂದವರನ್ನು ಮರ್ಯಾದೆಯಿಂದ ಕಳುಹಿಸಿದ್ದಾಯಿತು. ತರುವಾಯ ಪೂರ್ವಪದ್ಧತಿಗೆ ಸರಿಯಾಗಿ ಗದ್ದೆಯಲ್ಲಿ ಬೀಜ ಬಿತ್ತುವ ಸಂಭ್ರಮವು ಪ್ರಾರಂಭವಾಯಿತು. ಬುದ್ಧಿವಂತನ ಗದ್ದೆಯ ಬಿತ್ತವನ್ನು ದಂಡಿಗೆಯಲ್ಲಿಯೂ, ಬಿಲ್ಲರ ಗದ್ದೆಯ ಬಿತ್ತವನ್ನು ಕುಕ್ಕೆಯಲ್ಲಿಯೂ ತಂದು ಬಿತ್ತಿ ಬಾಳೆಯ ಪೂಕರೆಯನ್ನು ಹಾಕಿದರು.

ಬಿತ್ತಿದ ಗದ್ದೆಯಲ್ಲಿ ಅಗೆಯು ಅಂದವಾಗಬೇಕಾದರೆ, ಬಿತ್ತಿದ ನಾಲ್ಕಾರು ದಿನಗಳೊಳಗೆ ಮೊದಲಿನ ಕೊಳೆ ನೀರು ಕಳೆದು, ತಿಳಿನೀರು ಬಿಡುವುದು ಕೆಲವು ಕಡೆ ವಾಡಿಕೆಯಾಗಿದೆ. ಅದಕ್ಕಾಗಿ ಕೋಟಿಯು ಏರಜೆಯಿಂದ ಹೊರಟು ಅನಿಲಜೆಗೆ ಬಂದನು. ಕೋಟಿಯ ಗದ್ದೆಯು ನೀರು ತುಂಬಿ ರಾಮಸಮುದ್ರದಂತೆ ಕಾಣುತ್ತಿತ್ತು; ಬುದ್ಧಿವಂತನ ಗದ್ದೆಯಲ್ಲಿ ಚಿಟ್ಟೆ ಕುಡಿಯಲು ಕೂಡ ನೀರು ಇಲ್ಲದೆ, ಕೊಕ್ಕರೆ ಆಡುತ್ತಿತ್ತು. ಕೋಟಿಯು ನೆಟ್ಟಗೆ ಬುದ್ಧಿವಂತನ ಮನೆಗೆ ಹೋಗಿ, ತಲೆ ಹೊರೆಯನ್ನು ಕೆಳಗಿರಿಸಿ, ಬಗ್ಗಿ ಕೈ ಮುಗಿದನು. ಬುದ್ಧಿವಂತನು ಅವನನ್ನು ನೋಡಿದರೂ ನೋಡದಂತೆ ಮಾಡಿ, ಮೋರೆ ತಿರುಗಿಸಿ ಕುಳಿತು ಕೊಂಡನು. ಕೋಟಿಯು ತಾನು ನಮಸ್ಕಾರ ಮಾಡಿದರೂ ಕಣ್ಣೆತ್ತಿ ನೋಡದ ಬುದ್ಧಿವಂತನಿಗೆ ಕೇಳಿಸುವಂತೆ "ಅಯ್ಯಾ ನಾನು ನಾಲ್ಕು ಸಾರಿ ನಿಮಗೆ ನಮಸ್ಕಾರ ಮಾಡಿದೆ. ನೀವು ಒಂದಕ್ಕಾದರೂ ಕೈ ಅಲ್ಲಾಡಿಸಲಿಲ್ಲ. ಇರಲಿ, ಕಾಡಿನ ಕಾಸರ್ಕನ ಮರಕ್ಕೆ ಅಡ್ಡಬಿದ್ದಿದ್ದರೆ ಹಣ್ಣೆಲೆ ಉದುರುತ್ತಿತ್ತು. ಚಿಗುರೆಲೆ ನಗುತ್ತಿತ್ತು" ಎಂದು ಹೇಳಿದನು. ಆದರೂ ಮಲ್ಲಯ ಬುದ್ಧಿವಂತನು ಮೀಸೆ ತಿರುವುತ್ತ ಸುಮ್ಮನಿದ್ದನು.

ಕೋಟಿಯು "ಅಯ್ಯಾ. ನಮ್ಮ ಕಂಬುಳವನ್ನು ಬಿತ್ತಿ ಮೂರು ದಿನವಾಯಿತು. ನಮ್ಮ ಗದ್ದೆಯ ನೀರು ಬಿಡುವುದಕ್ಕೆ ಅಪ್ಪಣೆಯಾಗಬೇಕು" ಎಂದು ಹೇಳಿ ಮತ್ತೊಮ್ಮೆ ಕೈಮುಗಿದನು.

ಮೇಲಿನ ಗದ್ದೆಯಿಂದ ಬಿಟ್ಟ ನೀರು ಕೆಳಗಿನ ಗದ್ದೆಗೆ ಇಳಿದು ತೋಡಿಗೆ ಹರಿಯುವಾಗ ಕೆಳಗಿನ ಗದ್ದೆಯಲ್ಲಿದ್ದ ಬಿತ್ತವೂ ಅಗೆಯೂ ನೀರಿನೊಡನೆ ಕೊಚ್ಚಿಕೊಂಡು ಹೋಗುವುದೆಂದು ಬುದ್ಧಿವಂತನು ಅರಿತಿದ್ದರೂ ಆತನು ಕಣ್ಣಿದ್ದ ಕುರುಡನಂತೆಯೂ, ಕಿವಿಯಿದ್ದ ಕಿವುಡನಂತೆಯೂ, ಬಾಯಿದ್ದ ಮೂಕನಂತೆಯೂ ಸುಮ್ಮನಿದ್ದನು.

ಅವನ ಅಲಕ್ಷ್ಯಭಾವದ ಪರಿಯನ್ನು ನೋಡಿ ಕೋಟಿಯು "ನನ್ನ ನಮಸ್ಕಾರಗಳು ನಿಮ್ಮ ಗುರು ಒಡಿಯರಿಗೆ ಇರಲಿ" ಎಂದು ಹೇಳಿ ಅಲ್ಲಿಂದ ತಟ್ಟನೆ ಇಳಿದು, ತನ್ನ ಗದ್ದೆಯ ಪತ್ತಿರ ಬಂದನು. ಗದ್ದೆಯು ನೀರು

ತುಂಬಿ ಕೆರೆಯಾಗಿತ್ತು. ಕೋಟಿಯು ತನ್ನ ಹೊರೆಯಿಂದ ಒಂದು ಗುದ್ದಲಿಯನ್ನು ಈಚೆಗೆ ತೆಗೆದು, ಗದ್ದೆಯ ತೆವರಿಯನ್ನು ಒಂದು ಕಡೆ ಕಡಿದುಬಿಟ್ಟನು. ಮೇಲಿನ ಗದ್ದೆಯ ನೀರೆಲ್ಲಾ ಸೆರೆಯ ನೀರಿನಂತೆ ಕೆಳಗಿನ ಗದ್ದೆಗೆ ಪರಿಯಿತು. ಜೋಯೆಂದು ಗದ್ದೆಗೆ ಧುಮುಕುವ ನೀರಿನ ಜೋಗನ್ನು ಕಂಡು, ಮಲ್ಲಯ ಬುದ್ಧಿವಂತನು ತನ್ನ ಆಳುಗಳನ್ನು ಕೂಗಿ ಕರೆದು, ಹುಲ್ಲು ಸೊಪ್ಪನ್ನು ತರಿಸಿ, ತೆವರಿಯ ಬಾಯನ್ನು ಕಟ್ಟಿಸಿ, ತನ್ನ ಗದ್ದೆಗೆ ನೀರು ಹನಿಯದಂತೆ ಮುಚ್ಚಿಸಿಬಿಟ್ಟನು.

ಆಗ ಕೋಟಿಯು "ಅಯ್ಯಾ, ನಿಮ್ಮ ಆಳುಗಳು ಗದ್ದೆಯ ಬಾಯಿ ಮುಚ್ಚುವುದು ಸರಿಯಲ್ಲ. ಎಣಲ ಕಾಲದ ಉಪ್ಪನ್ನ, ಸುಗ್ಗಿ ಕಾಲದ ಮಳೆ ಬೆಳೆ, ಇವು ನಮಗೂ ಸರಿ ನಿಮಗೂ ಸರಿ. ನಮ್ಮ ಮೇಲೆ ನಿಮಗೆ ಹಗೆ ಇದ್ದರೆ, ಅದನ್ನು ನಮ್ಮೊಡನೆ ಸಾಧಿಸಿರಿ; ಬಿತ್ತಿದ ಬೆಳೆಯೊಡನೆ ಸಾಧಿಸಬೇಡಿರಿ. ನೀತಿ ಪ್ರಕಾರ ಹೋಗುವ ನೀರು ನೀತಿ ಪ್ರಕಾರ ಹೋಗಲಿ" ಎಂದನು.

ಅದಕ್ಕೆ ಬುದ್ಧಿವಂತನು ಜರ್ಬಿನಿಂದ "ಏನೆಂದೆ? ನೀತಿಯೋ? ನೀತಿಗೀತಿ ನಿನಗೆ ಬಿಲ್ಲರ ಕುಟ್ಟಿಗೆ ಯಾರು ಕೊಟ್ಟರೋ? ನಿನ್ನ ಗದ್ದೆಯ ನೀರಿಗೆ ನನ್ನ ಗದ್ದೆಯ ದಾರಿಯೇ? ಗದ್ದೆ ಒತ್ತಿನ ಕಾಡು ಕಡಿ, ಕಾಲುವೆ ತೋಡು. ನೀರು ಬಿಡು—ಹೋಗುತ್ತದೋ ಇಲ್ಲವೋ ನೋಡು" ಎಂದು ಆರ್ಭಟಿಸಿದನು.

ಕೋಟಿಯು ಇನ್ನೂ ಸಮಾಧಾನದಿಂದ "ಅಯ್ಯಾ, ನಾನು ಬಂದೇ ಇಷ್ಟಾಯಿತು. ನನ್ನ ತಮ್ಮ ಚೆನ್ನಯ ಬಂದಿದ್ದರೆ, ಒಂದಕ್ಕೆ ಒಂದೂವರೆ ಆಗುತ್ತಿತ್ತು" ಎಂದನು.

"ಏನು ಬೊಗಳುತ್ತೀ? ನಿನ್ನ ತಮ್ಮ? ಅವನೇನು ಕಾಟಿಯ ಹಾಲು ಕುಡಿದವನೇ? ಅವನು ಬಾನನ್ನು ಒಡೆದು ಬರುತ್ತಾನೋ? ಇಲ್ಲವೆ ಭೂಮಿಯನ್ನು ಬಿರಿದು ಬರುತ್ತಾನೋ? ನಿನ್ನ ತಮ್ಮ!" ಎಂದು ಬುದ್ಧಿವಂತನು ಅಬ್ಬರದಿಂದ ಅಣಕಿಸಿದನು.

ಇವರಿಬ್ಬರ ಬಾಯಿಯ ಬಡಿದಾಟವನ್ನು ದೂರದಲ್ಲಿ ನಿಂತು ಕೇಳುತ್ತಲಿದ್ದ ಚೆನ್ನಯನು ತನ್ನ ಕತ್ತಿಯನ್ನು ಹಿಡಿದುಕೊಂಡು, ಸರಸರನೆ ಅಲ್ಲಿಗೆ ಬಂದನು. ಆದರೂ ಬುದ್ಧಿವಂತನ ಬಾಯಲ್ಲಿ ಬೈಗಳು ಅಡಗಲಿಲ್ಲ.

ಕೋಟಿಯು ಚೆನ್ನಯನನ್ನು ತಡೆದು, "ಮಲ್ಲಯ, ಬೇಡ, ಕೆಣಕಬೇಡ. ತಲೆಗೆ ಹೊಯ್ದ ನೀರು ಕಾಲಿಗೆ ಇಳಿಯುತ್ತದೆ. ಕಾಲಿಗೆ ಎರೆದ ನೀರು ತಲೆಗೆ ಏರುವುದೇ? ಕ್ರಮಪ್ರಕಾರವಾಗಿ ಮೇಲಿಂದ ಕೆಳಕ್ಕೆ ಹರಿಯತಕ್ಕ ನೀರು ಕ್ರಮಪ್ರಕಾರವಾಗಿಯೇ ಹೋಗಲಿ. ಅಡ್ಡಗಟ್ಟಬೇಡ. ರೀತಿ ರಿವಾಜು ಮೀರಬೇಡ" ಎಂದು ಹೇಳಿ, ಮತ್ತೊಮ್ಮೆ ಕೈಮುಗಿದನು.

"ಕ್ರಮಗಿಮ, ರೀತಿರಿವಾಜು ನಿಮಗೆ ಮಂಡೆ......" ಎಂದು ಮಲ್ಲಯನ ನಾಲಿಗೆಯಿಂದ ಬೈಗಳು, ಸುರಿಯುವಷ್ಟರಲ್ಲಿ, ಚೆನ್ನಯನು ಅಣ್ಣನ ಕೈಯಿಂದ ಬಿಡಿಸಿಕೊಂಡು, ಚಟ್ಟನೆ ಚೀರಿ, ಬುದ್ಧಿವಂತನ ತಲೆ ಹಿಡಿದು, ಗಂಟಲು ಸೆರೆಯನ್ನು ಮಿಸುಕಿ, ಬೆನ್ನನ್ನು ಮುಟ್ಟಿ, ಮುಳ್ಳುಹುರಿಯನ್ನು ಮುರಿದು, ನೆಲದ ಮೇಲೆ ಅಂಗತನಾಗಿ ಕೆಡವಿ, ಬೆಳ್ಳಿಯ ಕಟ್ಟಿನ ಬಿಳಿಯ ಸುರಗಿಯನ್ನು ಮೂರು ಸಲ ಅವನ ಎದೆಗೆ ಹಾಕಿದನು. ಮಲ್ಲಯ ಬುದ್ಧಿವಂತನು ಕತ್ತಿಯ ತಿವಿತದಿಂದ ಬಿಸಿ ನೆತ್ತರವನ್ನು ನೊರೆನೊರೆಯಾಗಿ ಕಾರಿ, ಕಾಯಬಿಟ್ಟು ಕೈಲಾಸಕ್ಕೆ ಸಂದನು.

ಅನಂತರ ಬುದ್ಧಿವಂತನ ಶವಕ್ಕೆ ಕೋಟಿಚೆನ್ನಯರು ನೂತನ ಸಂಸ್ಕಾರ ಮಾಡಿದರು. ಅವರು ಹೆಣವನ್ನು ಗದ್ದೆಯ ತೋಡಿನಲ್ಲಿ ಇಟ್ಟು ಒಂದೊಂದು ಹಾರೆ ತುಂಬ ಮಣ್ಣು ತೆಗೆದು "ಈ ಮಣ್ಣು ಮುದ್ದೆ ನಿನ್ನ ತಲೆಯ ಮುಂಡಾಸು, ಇದು ಮೈಯ ಹಚ್ಚಡ, ಇದು ಕಂಬಿಯ ದೋತರ, ಇದು ಕಾಲಿನ ಎಕ್ಕಡ" ಎಂಬುದಾಗಿ ಹೇಳುತ್ತ, ಸುಗ್ಗಿಯ ಗದ್ದೆಯ ತೆವರಿಗೆ ಮಣ್ಣು ಮುತ್ತುವಂತೆ ಹೆಣದ ಮೇಲೆ ಮಣ್ಣು ಮುಚ್ಚಿ, ಬುದ್ಧಿವಂತನ ಮನೆಯ ಕಡೆಗೆ ತಿರುಗಿದರು.

ಕೋಟಿಚೆನ್ನಯರನ್ನು ಕಾಣುತ್ತಲೇ ಬುದ್ಧಿವಂತನ ಹೆಂಡತಿಯ ಎದೆಯು ದಡದಡಿಸಿತು, ಬಾಯ ನೀರು ಒಣಗಿತು. ಅವಳು ಚೆನ್ನಯನ ಕೈಯಲ್ಲಿದ್ದ ರಕ್ತದ ಕತ್ತಿಯನ್ನು ಕಂಡು, ತನ್ನ ಗಂಡನಿಗೆ ಆಪತ್ತು ಬಂತೆಂದು ತಿಳಿದು 'ಕುಯ್ಯೋ' ಎಂದು ಕೂಗುತ್ತ ಕಂಬುಳದ ಗದ್ದೆಗೆ ಓಡಿದಳು. ಆಗ ಚೆನ್ನಯನು "ಅಣ್ಣಾ ಇದೀಗ ಸಮಯ! ನಮ್ಮ ಸಣ್ಣ ಕೈಗಳಿಂದ ಅಂದು ಕಸುಕೊಂಡು ಹೋದ ಚೆಂಡನ್ನು, ದೊಡ್ಡ ಕೈಗಳಿಂದ ತಂದೇವೆಂಬುದಾಗಿ ನಾವು ಆಡಿದ ಮಾತನ್ನು ಸಲ್ಲಿಸುವುದಕ್ಕೆ ಇದೀಗ ಸಮಯ" ಎಂದು ಹೇಳಿ ಆ ಮನೆಯೊಳಕ್ಕೆ ಹೋಗಿ, ತಮ್ಮ ಚಿಕ್ಕಂದಿನ ಚೆಂಡನ್ನು ಹೊರಕ್ಕೆ ತಂದು, "ಅಣ್ಣಾ, ಹೊತ್ತಾಯಿತು, ಇನ್ನು ಮನೆಗೆ ಹೋಗೋಣ" ಎಂದು ಹೇಳಿ, ಇಬ್ಬರೂ ತಮ್ಮ ಮನೆಯ ದಾರಿ ಹಿಡಿದರು.

ಇತ್ತ ಬುದ್ಧಿವಂತನ ಕೈಹಿಡಿದವಳು ನೆಟ್ಟಗೆ ಪಡುಮಲೆ ಬೀಡಿಗೆ ಹೋಗಿ, ಬಲ್ಲಾಳನ ಕಾಲಡಿಯಲ್ಲಿ ಬಿದ್ದು, ತನ್ನ ಮೂಗಿನ ಮೂಗುತಿ, ಕತ್ತಿನ ಸರಮಣಿ, ಕಿವಿಯ ಓಲೆ, ಕೈಯ ಬಳೆ, ಇವನ್ನೆಲ್ಲಾ ಆತನ ಪಾದ ದಲ್ಲಿಟ್ಟು, ತನ್ನ ದುಃಖವನ್ನೂ ದುರ್ದೆಶೆಯನ್ನೂ ಹೇಳಿಕೊಂಡಳು. ಬಲ್ಲಾಳನು "ಕೊಂದವರಿಗೆ ಕೊಲೆ ತಪ್ಪಲಿಕ್ಕಿಲ್ಲ" ಎಂದು ಆಕೆಗೆ ಸಮಾಧಾನ ಹೇಳಿ, ಮನೆಗೆ ಕಳುಹಿಸಿಕೊಟ್ಟು, ಕೋಟಿ ಚೆನ್ನಯರನ್ನು ಕರೆ ತರುವುದಕ್ಕೆ ಕೂಡಲೇ ಆಳನ್ನು ಅಟ್ಟಿದನು. ನರಹತ್ಯದ ಸುದ್ದಿಯಿಂದ ಬೀಡಿನವರು ಬೆಚ್ಚಿಬೆದರಿದರು; ಹಳ್ಳಿಯವರು ಭಯಭೀತರಾದರು.

ಕೋಟಿಚೆನ್ನಯರು ಮನೆಗೆ ಮುಟ್ಟುವ ಮುಂಚೆಯೇ—ಅವರು ಮಾಡಿದ ಘಾತಕ ಕೃತ್ಯ, ಅದನ್ನು ಕುರಿತು ವಿಧವೆಯು ಹೇಳಿಕೊಂಡ ದುಃಖದ ದೂರು, ದೂರನ್ನು ಕೇಳಿ, ಬಲ್ಲಾಳನಿಗಾದ ಕರಿಕರಿ ಕೋಪ, ಇವುಗಳ ಸುದ್ದಿಯೆಲ್ಲಾ ಅವರ ಸಾಕುತಾಯಿಯಾದ ಸಾಯಿನ ಬೈದಿತಿಯ ಕಿವಿಗೆ ಬಿದ್ದು, ಅವಳು ಕಳವಳ ಗೊಳ್ಳುತ್ತಿದ್ದಳು. ಅಷ್ಟರಲ್ಲಿ ಇವರಿಬ್ಬರೂ ಮನೆಗೆ ಬಂದರು.

ಅವರನ್ನು ಕಾಣುತ್ತಲೇ ಸಾಯಿನ ಬೈದಿತಿಯು "ಕೋಟಿ! ಏನಾಯಿತು? ಚೆನ್ನಯ! ಏನು ಮಾಡಿದಿ? ನಮಗೆ ಕೇಡುಗಾಲ ಬಂತಲ್ಲಾ!" ಎಂದು ಸಿಡಿಮಿಡಿಗೊಂಡು ಕೇಳಿದಳು.

ಆಗ ಕೋಟಿಯು "ಅಮ್ಮಾ! ಬುದ್ಧಿವಂತನ ಬಾಯಿಂದ ಹದತಪ್ಪಿ ಮಾತು ಬಂತು. ಚೆನ್ನಯನ ಕೈಯಿಂದ ಹದ್ದುಮೀರಿ ಏಟುಬಿತ್ತು. ಬುದ್ಧಿವಂತನ ಹಾಳು ಒರಟುತನಕ್ಕೂ ಚೆನ್ನಯನ ಹರೆಯದ ದುಡುಕಿಗೂ ಸರಿಹೋಯಿತು" ಎಂದು ಹೇಳಿ ತಲೆ ತಗ್ಗಿಸಿ ನಿಂತನು.

ಸಾಯಿನ ಬೈದಿತಿಯು "ಮಕ್ಕಳೇ! ನೀವು ಮಾಡಿದ ಮಾಟಕ್ಕೆ ಬಲ್ಲಾಳನು ನಿಮ್ಮಾಟ ಅಡಗಿಸುತ್ತಾ ನಂತೆ. ನಿಮ್ಮನ್ನು ಬೆಟ್ಟದಿಂದ ಬೀಳಿಸುತ್ತಾನೋ ಮಡುವಿನಲ್ಲಿ ಮುಳುಗಿಸುತ್ತಾನೋ ಆನೆಯಿಂದ ತುಳಿಸುತ್ತಾನೋ ಕುದುರೆಯಿಂದ ಒದಿಸುತ್ತಾನೋ ಏನು ಮಾಡುತ್ತಾನೆಂಬುದು ಯಾರು ಬಲ್ಲರು? ದೇವರೇ!" ಎಂದುಸುರಿ ಅಳತೊಡಗಿದಳು.

ಅವಳ ಗೋಳನ್ನು ಕಂಡು ಚೆನ್ನಯನು "ಅಮ್ಮಾ! ನೀನೇಕೆ ಅಳುವೇ? ಈ ಕತ್ತಿಗೆ ಧಾರೆ ಇದೆ; ನನ್ನ ಕೈಗೆ ಚಳಕವಿದೆ. ನಾವು ಯಾರಿಗೂ ಹೆದರಬೇಕಾಗಿಲ್ಲ. ಯಾರಾದರೂ ಸರಿಯೆ, ನಮ್ಮನ್ನು ನೀತಿಯಿಂದ ಕಂಡರೆ, ಅವರಿಗೆ ಎದೆಯ ಮೇಲಿಂದ ಹಾದಿ ಕೊಟ್ಟೇವು. ಅನ್ಯಾಯದಿಂದ ಕಂಡರೆ, ಅವರ ಪ್ರಾಣವನ್ನು ಹೀರಿಬಿಟ್ಟೇವು" ಎಂದು ಬಿರುಸಿನಿಂದ ಹೇಳಿದನು.

ಸಾಯಿನ ಬೈದಿತಿಯು, "ಮಕ್ಕಳೇ! ಇನ್ನು ನಮಗೆ ಉಳಿಗಾಲವಿಲ್ಲ. ಇಲ್ಲಿ ಇನ್ನು ಮುಂದೆ ನಿಮಗೆ ನೀರು ನಂಜಾಯಿತು. ಊರು ಹಗೆಯಾಯಿತು. ಪಡುಮಲೆ ರಾಜ್ಯದಲ್ಲಿ ಒಂದು ಹಗೆ, ಒಂಭತ್ತು ಹಗೆ" ಎಂದಳು.

ಅದಕ್ಕೆ ಕೋಟಿಯು "ಹಾಗಾದರೆ ನಾವು ಪರರಾಜ್ಯಕ್ಕೆ ಹೋಗುತ್ತೇವೆ. ನಮ್ಮ ಈ ರಾಜ್ಯದಲ್ಲಿಯೇ ನೀರು ಬರೆದಿದೆಯೋ?" ಎಂದನು.

ಆ ಮಾತಿಗೆ ಬೈದಿತಿಯು "ಈ ನಿಮ್ಮ ಯೋಚನೆಯು ಬಲ್ಲಾಳನಿಗೆ ಗೊತ್ತಾದರೆ, ಅವನು ಸುಮ್ಮ ನಿರಲಿಕ್ಕಿಲ್ಲ. ನಿಮಗೆ ತನ್ನ ರಾಜ್ಯದಲ್ಲಿ ಬೆಂಕಿ ನೀರು ಕೊಡಕೂಡದೆಂದು ಡಂಗುರ ಹೊಡೆಯಿಸುವನು; ನೀವು ರಾಜ್ಯದ ಗಡಿ ದಾಟುವಾಗ ನಿಮ್ಮನ್ನು ಹಿಡಿದು ತರಬೇಕೆಂದು ಉಕ್ಕಡದವರಿಗೂ, ಸುಂಕದ ಕಟ್ಟೆಯವರಿಗೂ, ಅರವಟ್ಟಿಗೆಯವರಿಗೂ ಅಪ್ಪಣೆ ಮಾಡುವನು. ಅವನ ಕಣ್ಣು ಮರೆಸಿಕೊಂಡು ಹೋಗುವುದು ಸರಿಯೂ ಅಲ್ಲ, ಸಾಧ್ಯವೂ ಇಲ್ಲ" ಅಂದಳು.

"ಹಾಗಾದರೆ ಅವನನ್ನು ಬೀಡಿನಲ್ಲಿ ಕಂಡೇ ಹೋಗುವೆವು. ಅವನ ಭಯವೇನು?" ಎಂದು ಚೆನ್ನಯನು ಹೇಳಿದನು.

ತಾಯಿಮಕ್ಕಳು ಹೀಗೆ ಮಾತನಾಡುತ್ತಿದ್ದಾಗ, ಬಲ್ಲಾಳನ ಕಡೆಯ ಜನರು ಬಂದು, ಕೋಟಿ ಚೆನ್ನಯರನ್ನು ಬೀಡಿಗೆ ಕರೆದುಕೊಂಡು ಹೋದರು. ಅವರು ಮನೆಯಿಂದ ಹೊರಡುವ ಮೊದಲು ಬೈದಿತಿಯು ಕೋಟಿಯನ್ನು ಕರೆದು, ಬಲ್ಲಾಳನ ಮುಂದೆ ಹೇಗೆ ಹೇಗೆ ನಡೆದುಕೊಳ್ಳಬೇಕೆಂದು ಆತನ ಕಿವಿಯಲ್ಲಿ ಹೇಳಿದಳು.

ಮನೆಯಿಂದ ಹೊರಟ ಕೋಟಿ ಚೆನ್ನಯರು ಬಲ್ಲಾಳನ ಆಳುಗಳೊಂದಿಗೆ ಪಾಲೆ ದಾಟಿ, ಬೈಲು ಕಳೆದು, ಬೆಟ್ಟ ಹತ್ತಿ, ಹಿತ್ತಲಿಗೆ ಇಳಿದು, ಅಡ್ಕವನ್ನು ಅಡರಿ, ಹೊಡೆಯಲ್ಲಿ ಹೋಗಿ ಹೊಳೆಯನ್ನು ಹಾಯ್ದು, ಕೋಟೆಯ ಆನೆಬಾಗಿಲನ್ನು ಹತ್ತಿ, ರಾಜಾಂಗಣಕ್ಕೆ ಬಂದು ಚಾವಡಿಯನ್ನು ಬಿಟ್ಟು ಪಡುವಣ ಪಟ್ಟಶಾಲೆಗೆ ಹೋಗಿ, ಬೆಳ್ಳಿಯ ಕಲಶದ ಬಿಳಿಯ ಉಪ್ಪರಿಗೆಯನ್ನು ಏರಿದರು. ಅವರು ರಾಜಾಂಗಣದಲ್ಲಿ ಬಂದಾಗಲೇ ಪಡುಮಲೆಯ ಪೆರುಮಾಳು ಬಲ್ಲಾಳನು ಉಪ್ಪರಿಗೆಯಿಂದ ಕಿಟಿಕಿ ಬಾಗಿಲಿನಿಂದ ಇಣಿಕಿನೋಡಿ, "ಓಹೋ! ಅರೆಯಲ್ಲಿ ಇಲಿಯಂತೆ ಹುಟ್ಟಿದ್ದ ಮಕ್ಕಳು ಈಗ ಹುಲಿಯಂತಾಗಿದ್ದಾರೆ" ಎಂದು ತನ್ನೊಳಗೆ ತಿಳಿದುಕೊಂಡು, ಅವರ ವಿಚಾರಣೆ ನಡಿಸುವುದಕ್ಕೆ ಓಲಗವನ್ನು ಕೊಡುವಂಥವನಾದನು.

ಕೋಟಿ ಚೆನ್ನಯರು ಒಳಕ್ಕೆ ಬಂದು, ಅರಸುಮಣೆಯ ಮೇಲೆ ಕುಳಿತುಕೊಂಡು ಓಲಗವನ್ನು ಕೊಡುತ್ತಿದ್ದ ಪಡುಮಲೆ ಬಲ್ಲಾಳನಿಗೆ ಅಡ್ಡ ಬಿದ್ದರು.

ಬಲ್ಲಾಳನು "ಮಾಡಬಾರದ್ದನ್ನು ಮಾಡಿದಿರಿ. ಈಗ ಆಗಬಾರದ್ದು ಆಗಬೇಕಷ್ಟೆ" ಎಂದು ಮೊದಲಿಟ್ಟನು.

ಆಗ ಕೋಟಿಯು ತನಗೆ ಸಾಯಿನ ಬೈದಿತಿಯು ಕಿವಿಯಲ್ಲಿ ಹೇಳಿದ ಮಾತನ್ನು ನೆನಸಿಕೊಂಡು, "ಬುದ್ಧಿ! ನಮ್ಮ ತಾಯಿಗೆ ತಾವು ಕೊಟ್ಟ ಮಾತುಂಟಷ್ಟೆ" ಎಂದನು.

"ಯಾವ ಮಾತು?" ಎಂದು ಬಲ್ಲಾಳನು ಕೇಳಿದನು.

"ಬುದ್ಧೀ, ಈ ಒಡವೆ ವಸ್ತುಗಳೆಲ್ಲಾ ನಿನಗೆ. ಇನ್ನು ಕೊಡಲಿಕ್ಕೆ ಇರುವುದನ್ನು ಮುಂದೆ ನಿನ್ನ ಮಕ್ಕಳಿಗೆ ಕೊಡುತ್ತೇನೆ ಎಂದು ತಾವು ನಮ್ಮ ತಾಯಿಗೆ ಮಾತು ಕೊಡಲಿಲ್ಲವೇ?" ಎಂದು ಕೋಟಿಯು ಕೇಳಿದನು.

ಬಲ್ಲಾಳ—"ಕೋಟಿ, ನಿನ್ನ ತಾಯಿಗೆ ನಾವು ಆಗ ಕೊಟ್ಟ ಮಾತಿಗೂ ನೀವು ಈಗ ಮಾಡಿದ ತಪ್ಪಿಗೂ ಏನೂ ಸಂಬಂಧವಿಲ್ಲ."

ಕೋಟಿ—"ಬುದ್ಧಿ, ನಾವು ಆಳು ಕೊಂದದ್ದಕ್ಕೆ ನಮಗೆ ಆಗುವುದು ಆಗಲಿ! ಆದರೆ ನೀವು ಮಾತು ಕೊಟ್ಟದ್ದಕ್ಕೆ ನಮಗೆ ದೊರೆಯುವುದು ದೊರೆಯಲಿ!"

ಚೆನ್ನಯ—"ನಾವು ಸತ್ತನಂತರ ನಿಮ್ಮ ಹತ್ತಿರ ಕೇಳುವವರು ಯಾರು?"

ಬಲ್ಲಾಳ—"ಏನು ಬೇಕು ಕೇಳಿ, ಕೊಡುತ್ತೇನೆ."

ಕೋಟಿ—"ಬೀಡಿನ ಮುಂದಿನ ಬಾಕಿಮಾರು ಗದ್ದೆ."

ಬಲ್ಲಾಳ—"ಅದಾಗದು."

ಕೋಟಿ—"ಹಾಲು ಬತ್ತದ ಸರಳೆಮ್ಮೆ."

ಬಲ್ಲಾಳ—"ಅದು ನಮಗೆ ಬೇಕು."

ಕೋಟಿ—"ಇಡೀ ವರ್ಷ ಕಾಯಿ ಮಿಡಿ ಹಣ್ಣುಗಳನ್ನು ಒಟ್ಟಿಗೆ ಬಿಡುತ್ತಿರುವ ಆ ಹಲಸಿನ ಮರ."

ಬಲ್ಲಾಳ—"ಅದನ್ನು ಬಿಡು. ಬೇರೊಂದು ಕೇಳು."

ಚೆನ್ನಯ—"ನಿಮ್ಮ ಇಬ್ಬರು ಹೆಂಡಿರ ಹೂದೋಟಗಳನ್ನು ಕೊಡಿಸಿ."

ಬಲ್ಲಾಳ—"ಏನೆಂದೆ?"

ಚೆನ್ನಯ—"ನಿಮ್ಮ ಪಟ್ಟದ ಕತ್ತಿ."

ಬಲ್ಲಾಳನು ಕೋಪದಿಂದ ಕೆಂಪೇರಿ "ಬೀಡಿನ ಹಾಲಿನಿಂದ ಬೆಳೆದ ನೀವು ನಮ್ಮ ಹೆಂಡಿರ ಹೂದೋಟಗಳನ್ನೂ, ನಾವು ಹಿಡಿಯುವ ಪಟ್ಟದ ಕತ್ತಿಯನ್ನೂ ಬಯಸಿದ ಮೇಲೆ ಮುಂದೆ ಯಾವುದನ್ನು ಕೇಳುವಿರಿ, ಏನನ್ನು ಮಾಡುವಿರಿ ಎಂದು ಹೇಳಲಾಗುವುದಿಲ್ಲ. ನಿಮ್ಮನ್ನು ಹೀಗೆ ಬಿಡಲಾಗದು" ಎಂದು ಹೇಳಿ, ಅವರನ್ನು ಹೆಡೆಮುಡಿ ಕಟ್ಟಿ ತೆಗೆದುಕೊಂಡು ಹೋಗಲು ತನ್ನ ಕಡೆಯವರಿಗೆ ಕಟ್ಟಾಜ್ಞೆ ಮಾಡಿದನು.

"ಕೇಳದ ಉಚಿತ ಕೇಳಿದರೆ ಬಲ್ಲಾಳನಿಗೆ ಬಾರದ ಕೋಪವು ಬರುತ್ತದೆ" ಎಂದು ಬೈದಿತಿಯು ತನಗೆ ಹೇಳಿದ್ದು ಸತ್ಯವೆಂದು ಕೋಟಿಗೆ ಈಗ ನೆನಪಿಗೆ ಬಂದು, ಅವನು ತನ್ನ ಹಚ್ಚಡದೊಳಗೆ ಅಡಗಿಸಿಟ್ಟಿದ್ದ ಒಂದು ಚೀಲವನ್ನು ಮೆಲ್ಲನೆ ಬಿಚ್ಚಿದನು. ಆ ಚೀಲದಲ್ಲಿ ವೀಳ್ಯದೆಲೆಯ ಕವಳಿಗೆಗಳು ಇದ್ದುವು. ಹಾಲೆಮರಕ್ಕೆ

ಹೋಗ ಬಿಟ್ಟ ಪಂಚವಳ್ಳಿ ಜಾತಿಯ ವೀಳ್ಯ, ಮಾವಿನ ಮರಕ್ಕೆ ಹೋಗಬಿಟ್ಟ ಮುಂಡುವಳ್ಳಿ ಜಾತಿಯ ವೀಳ್ಯ—ಕೋಟಿಯು ವೀಳ್ಯದೆಲೆಯ ಕವಳಿಗೆಗಳನ್ನು ಕೈಯಲ್ಲಿ ಹಿಡಿದು ಬಲ್ಲಾಳನು ಓಲಗವಾಗಿದ್ದಲ್ಲಿಗೆ ಹೋಗಿ,

"ನಮ್ಮ ಮಾತನ್ನು ಸಲಿಸುವುದಕ್ಕೆ ಆರು ವರ್ಷದ ಗಡುವು"

ಎಂದು ಗಟ್ಟಿಯಾಗಿ ಒದರಿ, ಆ ವೀಳ್ಯದೆಲೆಯನ್ನು ಗದ್ದಿಗೆಯ ಮೇಲೆ ಇಟ್ಟು ಹೆದರದೇ ಅಲ್ಲಿಯೇ ನಿಂತನು. ಕೋಟಿಯು ಗಡುವಿಟ್ಟಿದ್ದನ್ನು ಕಂಡು ಬಲ್ಲಾಳನ ಉಪ್ಪರಿಗೆಯೇ ಗಡಗಡನೆ ನಡುಗಿತು; ಅಂತಃಪುರದಲ್ಲಿ ದಿಗಿಲು ಉಂಟಾಯಿತು; ಬೀಡಿನವರೆಲ್ಲಾ ಮೂಕರಂತೆ ಪಿಳಪಿಳನೆ ನೋಡಿದರು. ಅಲ್ಲಿದ್ದವರೆಲ್ಲರು ಕೋಟಿ ಚೆನ್ನಯರ ಆ ವೀರಾವೇಶಕ್ಕೆ ಬೆದರಿ ಅವರ ಮೈ ಮುಟ್ಟುವಷ್ಟು ಧೈರ್ಯವಿಲ್ಲದೆ ಅಂಜುಬುರುಕರಂತೆ ಹಿಂಜರಿದರು.

ಕೋಟಿ ಚೆನ್ನಯರು ಯಾರ ತಡೆಯೂ ಇಲ್ಲದೆ ಬಡಬಡ ಉಪ್ಪರಿಗೆಯ ಮೆಟ್ಟಲು ಇಳಿದು ಬೀಡಿನಿಂದ ಮಾಯವಾದರು.

ಕನಸು ಕಂಡಂತೆಯೂ ಕಣ್ಣುಕತ್ತಲೆ ಬಂದಂತೆಯೂ ಅರಸುಮಣೆಯಲ್ಲಿಯೇ ಮರವೆಗೊಂಡಿದ್ದ ಪೆರುಮಾಳ ಬಲ್ಲಾಳನು ಒಂದು ತಾಸಿನ ತರುವಾಯ ಕಣ್ಣು ತೆರೆದು "ಬೆಳೆಯಿಟ್ಟ ಬಳ್ಳಿಯು ಬೆಳಿಸಿದವನನ್ನೇ ಬಂಧಿಸಿಬಿಟ್ಟಿತಲ್ಲಾ" ಎಂದು ಯೋಚಿಸಿ, "ಈ ಬಿಲ್ಲರ ಕೊಬ್ಬು ಬೀಡಿಗೆ ಕೆಡುಕು, ನಾಡಿಗೆ ತೊಡಕು" ಎಂದು ಬಗೆದು, ಅವರನ್ನು ಹಿಡಿದು ಕೊಲ್ಲಿಸುವುದಕ್ಕೆ ನಾನಾ ಪ್ರಕಾರವಾಗಿ ಸಾಧಿಸಿದನು.

ಬಲ್ಲಾಳನ ಕೈಗೆ ಸಿಗದೆ ಅವನ ರಾಜ್ಯದಲ್ಲಿ ಯಾರ ಹಂಗು ಹೆದರಿಕೆ ಇಲ್ಲದೆ ಸುತ್ತಾಡುತ್ತಿದ್ದ ಕೋಟಿ ಚೆನ್ನಯರು ಒಂದು ದಿನ ನಡುಹಗಲು ಬಿಸಿಲಲ್ಲಿ ದಾರಿ ನಡೆದು, ಬಳಲಿ ಬೇಸತ್ತು, ದಣಿವಾರಿಸುವುದಕ್ಕೆಂದು ಒಂದು ಅರಳಿಕಟ್ಟೆಯ ಹತ್ತಿರ ಬಂದರು. ಆ ಕಟ್ಟೆ ಪರಿಷ್ಕಾರವಾಗಿತ್ತು. ಕಪ್ಪಾದರೂ ಕನ್ನಡಿಯಂತೆ ಬೆಳಗುವ ನೆಲ, ನೆಲದ ಮೇಲೆ ನಾಲ್ಕು ಕೊಡ ನೀರು ಹಿಡಿಯುವ ಗಡಿಗೆ, ಗಡಿಗೆಯ ಹತ್ತಿರ ಒಂದು ಬಿಂದಿಗೆ. ಅದರ ಎಡಕ್ಕೆ ಸ್ವಲ್ಪ ದೂರದಲ್ಲಿ ಒಂದು ಕಂಚಿನ ಕೈದಂಬೆ— ಇವುಗಳಿಂದ ಅದು ಅರವಟ್ಟಿಗೆ ಕಟ್ಟೆ ಎಂದು ಗೊತ್ತಾಗುತ್ತಿತ್ತು.

ಕಟ್ಟೆಯ ಪಕ್ಕದಲ್ಲಿ ನಿಂತುಕೊಂಡು ಚೆನ್ನಯನು "ಯಾರೂ ಇಲ್ಲವೇ? ಅಸರಿಗೆ ನೀರು ಬೇಕು!" ಎಂದು ಕೂಗಿದನು.

ಆಗ ಕಟ್ಟೆಯ ಹಿಂದುಗಡೆಯ ಒಂದು ಹುಲ್ಲುಗುಡಿಸಲಿಂದ ಒಬ್ಬ ಬ್ರಾಹ್ಮಣನು ಕಟ್ಟೆ ಹತ್ತಿ ಬಂದು, ಇವರನ್ನು ಕಂಡು ಅರೆಗಳಿಗೆ ಹಾಗೆ ನೋಡುತ್ತಾ, "ನಿಮ್ಮ ಜಾತಿನೀತಿ ಗೊತ್ತಾಗಬೇಕಾಯಿತು" ಎಂದು ಹಗುರವಾಗಿ ಕೇಳಿದನು.

ಕೋಟಿ—"ನಾವು ಜಾತಿಯಲ್ಲಿ ಮುರ್ತೆ ಮಾಡುವವರು."

ಚೆನ್ನಯ—"ನೀತಿಯಲ್ಲಿ ನೂಲು ಹಾಕಿದವರು."

"ಹಾಗಾದರೆ ತೆಂಕಲ ಮಗ್ಗುಲಲ್ಲಿ ಬನ್ನಿ. ಕಂಚಿನ ಕೈದಂಬೆಯಲ್ಲಿ ನೀರು ಹೊಯ್ಯುತ್ತೇನೆ. ಕೈಕೊಟ್ಟು ಆಸರು ಆರಿಸಿಕೊಳ್ಳಿ" ಎಂದು ಅರವಟ್ಟಿಗೆಯವನು ಸ್ವಲ್ಪ ಧೈರ್ಯದಿಂದ ಹೇಳಿದನು.

ಅದಕ್ಕೆ ಚೆನ್ನಯನು "ನೂರು ಕುಲದವರ ಎಂಜಲ ದಂಬೆಯಲ್ಲಿ ಕುಡಿಯುವಂಥವರು ನಾವಲ್ಲ!" ಎಂದನು.

ಬ್ರಾಹ್ಮಣನು ಗಾಬರಿಗೊಂಡು, "ನಾನು ಏನು ಮಾಡಲಿ?" ಎಂದು ದೈನ್ಯದಿಂದ ಹೇಳಿದನು. ಆ ನಮ್ರತೆಯ ಮಾತಿಗೆ ಕೋಟಿಯು "ನಾವು ಕೈಯೊಡ್ಡುತ್ತೇವೆ" ಎಂದನು.

"ಬೇಡಣ್ಣ. ನನ್ನ ಕತ್ತಿಯ ಹಿಡಿಯನ್ನು ಹೀಗೆ ಒಡ್ಡುತ್ತೇನೆ, ನೀರು ಎರೆಯಲ್ಲಿ" ಎಂದು ಹೇಳಿ ಚೆನ್ನಯನು ತನ್ನ ಕತ್ತಿಯ ತುದಿಯನ್ನು ಬಾಯೊಳಗೆ ಇಟ್ಟು, ಅದರ ಹಿಡಿಯನ್ನು ಬ್ರಾಹ್ಮಣನ ಕಡೆ ಒಡ್ಡಿದನು. ಬ್ರಾಹ್ಮಣನು ನೀರು ಸುರಿದನು. ಚೆನ್ನಯನು ಒಂದೇ ಒಂದು ತೊಟ್ಟು ಕೆಳಗೆ ಬೀಳಿಸದೆ ನೀರು ಕುಡಿದ ಚಮತ್ಕಾರವನ್ನು ನೋಡಿ, ಆ ಬ್ರಾಹ್ಮಣನು ಅಚ್ಚರಿಗೊಂಡನು.

ಹೀಗೆ ಇಬ್ಬರು ಆಸರುಬೇಸರು ಕಳೆದನಂತರ ಕೋಟಿಯು "ಸ್ವಾಮಿ, ತಾವು ಯಾರು? ಅರವಟ್ಟಿಗೆಯ ಬ್ರಾಹ್ಮಣರೋ? ಇಲ್ಲವೇ ಶಕುನ ಹೇಳುವ ಭಟ್ಟರೋ?" ಎಂದು ಕೇಳಿದನು.

ಅದಕ್ಕೆ ಬ್ರಾಹ್ಮಣನು "ಬೇಕಾದರೆ ನಾನೇ ಶಕುನ ಹೇಳುತ್ತೇನೆ" ಎಂದು ಹೇಳಿ ತನ್ನ ಗುಡಿಸಲಿಗೆ ಇಳಿದು ಹೋಗಿ, ಬಿಳಿಗೆರೆಯ ಮಂಡಲದ ಮಣೆ, ಕವಡೆ ತುಂಬಿದ ಚೀಲ, ದರ್ಭೆ ಹುಲ್ಲಿನ ಚಾಪೆ—ಇವನ್ನು ಹಿಡಿದುಕೊಂಡು ಬಂದು, ಕಣಿ ಹೇಳುವುದಕ್ಕಾಗಿ ಕುಳಿತುಕೊಂಡನು. ಕೋಟಿಚೆನ್ನಯರೂ ಅಲ್ಲೇ ಕುಳಿತು ನೋಡುತ್ತಿದ್ದರು. ಬ್ರಾಹ್ಮಣನು ಒಮ್ಮೆ ಕವಡೆಗಳನ್ನು ಲೆಕ್ಕ ಮಾಡಿದನು; ಕೈ ಬೆರಳುಗಳನ್ನು ಎಣಿಕೆ ಮಾಡಿದನು; ಜೇಡಿಮಣ್ಣಿನ ಚೂರಿನಿಂದ ನೆಲದ ಮೇಲೆ ಬರೆದನು; ಗುಣಿಸಿ ನೋಡಿದನು; ಮಣಮಣ ಮಂತ್ರ ಹೇಳಿದನು. ಕಡೆಗೆ ಇಬ್ಬರ ಮೊಗವನ್ನು ದಿಟ್ಟಿಸಿ,

"ಎರಡು ಮರಿಯಾನೆಗಳು ಕಾಡಿನಿಂದ ಹೊರಬಿದ್ದು, ತೋಡನ್ನು ಕಲಕಿ, ಗದ್ದೆಯನ್ನು ತುಳಿದು, ಕಬ್ಬಿನ ತೋಟದ ಮೇಲೆ ಕಣ್ಣಿಟ್ಟಂತೆ ತೋರುತ್ತದೆ" ಎಂದನು.

ಚೆನ್ನಯನು "ಸರಿ, ಜೋಯಿಸರೇ! ಚೆನ್ನಾಗಿ ಹೇಳಿದಿರಿ, ಇನ್ನೇನು ಕಾಣುತ್ತದೆ?" ಎಂದು ಕೇಳಿದನು.

ಬ್ರಾಹ್ಮಣನು ಚೆನ್ನಾಗಿ ಗುಣಿಸಿ ನೋಡಿ, "ಆನೆಮರಿಗಳಿಗೆ ನಾಲ್ಕು ಕಡೆ ಅಪಾಯ. ಮೂಡುಕಡೆಯಿಂದ ಕಿಚ್ಚಿನ ಅಪಾಯ, ಪಡುಕಡೆಯಿಂದ ಕರ್ಪದ ಮೋಸ, ಬಡಗಿನಿಂದ ಕೋವಿಯ ಏಟು, ತೆಂಕಲಿಂದ ಮೊಸಳೆಯ ಕಾಟ—ಹೀಗೆಲ್ಲಾ ತೋರುತ್ತದೆ" ಎಂದು ಹೇಳಿ "ನೀವು ಮಾತ್ರ—" ಎಂದು ಮಾತು ಮುಗಿಸುವಷ್ಟರಲ್ಲಿ ಚೆನ್ನಯನು, "ನಮಗೆ ಏನಾಗುತ್ತದೆಂದು ಹೇಳಿಬಿಡಿ" ಎದು ಒದರಿದನು.

ಚೆನ್ನಯನ ಗರ್ಜನೆಗೆ ಬ್ರಾಹ್ಮಣನ ಬೆರಳೆಣಿಕೆ ತಪ್ಪಿ ಹೋಯಿತು; ಅವನು ಮತ್ತೆ ಲೆಕ್ಕ ಹಾಕಿ, "199ರ ಮೇಲೆ ಬಿಡಬೇಕು" ಎಂದು ಸೂಚಿಸಿದನು.

ಕೋಟಿ—"ಇನ್ನೂರು ಬಿಡಬೇಕೆ?" ಎಂದು ಕೇಳಿದನು.

ಬ್ರಾಹ್ಮಣ—"ಇನ್ ಊರು ಬಿಡು; ಮುಂದೆ ಹತ್ತು, ಹತ್ತು, ಹತ್ತು, ಹತ್ತು ಹೀಗೆ ಏರಿಸಿ ಹೋಗಬೇಕು" ಎಂದನು.

"ಎಲ್ಲಿಯವರೆಗೆ?"

ಆದಕ್ಕೆ ಬ್ರಾಹ್ಮಣನು ತನ್ನ ಬಲಗೈಯ ಬೆರಳುಗಳನ್ನು ಬಿಡಿಸಿ ತೋರಿಸಿ "ಇಲ್ಲಿವರೆಗೆ ಹೋಗಬೇಕು" ಎಂದನು.

ಕೋಟಿಯು "ಐನೂರನ್ನು ಮುಟ್ಟಿದ ಮೇಲೆ ನಮಗೆ ಮುಹೂರ್ತಗಳು ಕೂಡಿ ಬಂದಾವೋ?" ಎಂದು ತಿರುಗಿ ಪ್ರಶ್ನೆ ಇಟ್ಟನು.

ಬ್ರಾಹ್ಮಣನು ಕವಡೆಗಳನ್ನು ಅಡಿಸಿಬಿಟ್ಟು, "ಅಯ್ಯನ್ನೂರನ್ನು ಮುಟ್ಟಿದ ನಂತರದ ದಿನಗಳಲ್ಲಿ ವಿಷ ಗಳಿಗೆ ಸಂದರ್ಭಗಳೇ ಹೆಚ್ಚು; ಜಗಳದ ಕುರುಹೂ ತೋರುತ್ತದೆ" ಎಂದನು.

ಕೋಟಿ—"ಯಾರೊಳಗೆ ಜಗಳ?"

ಬ್ರಾಹ್ಮಣ—"ನೆಗಳೆಗೂ, ಆನೆಗೂ."

ಚೆನ್ನಯ—"ಜಗಳದಲ್ಲಿ ನಾನು ಮೊಸಳೆಯನ್ನು ಸೀಳಿಬಿಟ್ಟರೋ?"

ಕೋಟಿಯು "ಜಗಳದಲ್ಲಿ ಏನಾಗುವುದೆಂದು ನೋಡಿ ಹೇಳಿರಿ" ಎಂದು ಮರಳಿ ಪ್ರಶ್ನೆ ಇಟ್ಟನು.

ಬ್ರಾಹ್ಮಣನು ಮತ್ತೊಮ್ಮೆ ಕವಡೆಗಳನ್ನು ಮುಗುಚಿ ಹಾಕಿ, "ಜಗಳದಲ್ಲಿ ಆ ಆ ಆ ಆ" ಎಂದು ಬಾಯಿ ತೆರೆದು ಆಕಳಿಸಿದನು.

ಚೆನ್ನಯ—"ಜೋಯಿಸರೇ, ಸೊಲ್ಲು ಹೊರಡುವುದಿಲ್ಲವೇ?"

ಬ್ರಾಹ್ಮಣನು "ಬೈದ್ಯರೇ, ಆ ನೆ ಗ ಳೆ ನೆಲಕ್ಕೆ ಬಿದ್ದು ಸತ್ಯದ ಬುಗ್ಗೆ ಒಸರೀತು; ಕೀರ್ತಿಯ ಹೊಳೆ ಹರಿದೀತು; ಶಾಂತಿಯ ಬೆಳೆ ಬೆಳೆದೀತು; ಸೌಖ್ಯದ ಫಲ ಫಲಿಸೀತು" ಎಂದು ಹೇಳುತ್ತ ದೇವರ ಹೆಸರೆತ್ತಿ, ಮಣೆಗೂ ಕಾಯಿಬೀಲಕ್ಕೂ ಪೊಡಮುಟ್ಟು, ನಿಮಿತ್ತ ಹೇಳುವುದನ್ನು ಮುಗಿಸಿ, ಒಳಕ್ಕೆ ಹೋದನು.

ಕೋಟಿಚೆನ್ನಯರ ಮನಸ್ಸಿಗೆ ಬ್ರಾಹ್ಮಣನು ಹೇಳಿದ್ದೆಲ್ಲಾ ರುಚಿಸಿತೋ ಇಲ್ಲವೋ ಗೊತ್ತಾಗಲಿಲ್ಲ. ಆದರೂ ಬ್ರಾಹ್ಮಣನು ಮನೆಯೊಳಗಿಂದ ಹೊರಕ್ಕೆ ಬರುವವರೆಗೆ ಕೋಟಿಯು ಅಲ್ಲಿಂದ ಏಳಲಿಲ್ಲ.

ಒಂದು ಗಳಿಗೆಯ ತರುವಾಯ ಬ್ರಾಹ್ಮಣನು ಎರಡು ಬಿಂದಿಗೆಗಳನ್ನು ತಂದು ಅವರ ಮುಂದಿಟ್ಟನು. ಅಣ್ಣತಮ್ಮಂದಿರು ಬಿಂದಿಗೆಯ ಹಾಲು ಕುಡಿದು, ತಟ್ಟೆಯಲ್ಲಿ ಇಟ್ಟಿದ್ದ ವೀಳ್ಯದೆಲೆಯನ್ನು ಕೈಯಲ್ಲಿ ತೆಗೆದು ಕೊಂಡರು.

ಇಷ್ಟರಲ್ಲಿ ಹೊತ್ತು ಮುಳುಗುವ ಸಮಯವಾಗಲು ಅವರು ಬ್ರಾಹ್ಮಣನಿಗೂ ಅವನ ಕವಡೆ ಮಣೆಗೂ ಬಗ್ಗಿ ನಮಸ್ಕಾರ ಮಾಡಿ, ಕಟ್ಟೆಯಿಂದಿಳಿದು, ಮುಂದಕ್ಕೆ ತೆರಳಿದರು.

ಆ ಅರವಟ್ಟಿಗೆಯ ಕಟ್ಟೆ ಎಲ್ಲಿತ್ತೋ ಅಲ್ಲಿಂದ ಪಡುಮಲೆ ಬಲ್ಲಾಳನ ಸೀಮೆಯ ಗಡಿಕಲ್ಲಿಗೆ ಬಹಳ ದೂರವಿರಲಿಲ್ಲ; ತಕ್ಕಷ್ಟು ಎತ್ತರದ ಒಂದು ಗುಡ್ಡ ಮಾತ್ರ ಮಧ್ಯದಲ್ಲಿತ್ತು. ಕೋಟಿಚೆನ್ನಯರು ಆ ಗುಡ್ಡವನ್ನು ಏರಿ, ಅಡ್ಡಹಾದಿಯಿಂದ ಹೋಗುತ್ತಿದ್ದಾಗ, ಚೆನ್ನಯನು "ಇದೇನು ಆಶ್ಚರ್ಯ! ಅಣ್ಣಾ, ಮೂಡು ದಿಕ್ಕಿನಲ್ಲಿ ದೇವರು ಮುಳುಗುತ್ತಾರೋ?" ಎಂದು ವಿಚಾರಿಸಿದನು.

ಕೋಟಿಯು ಮೋರೆ ತಿರುಗಿಸಿ, ಕೊಂಬು ಕೂಗಿನ ದೂರದಲ್ಲಿ ಕಾಣುವ ಕೆಂಬಣ್ಣವನ್ನು ಕಂಡು, "ತಮ್ಮಾ, ಸರಿ—ಅಲ್ಲಿಯೇ ನಮ್ಮ ಮನೆಯಲ್ಲವೇ? ಹೌದು—ಇದು ಹೊತ್ತು ಮುಳುಗುವ ಬಣ್ಣವಲ್ಲ; ನಮ್ಮ ಮನೆ ಹೊತ್ತಿ ಮೇಲೆ ಆಡುವ ಬೆಂಕಿಯ ನಾಲಗೆ" ಎಂದನು.

ಚೆನ್ನಯನು "ಅಣ್ಣಾ, ಜೋಯಿಸರು ಮೂಡುಗಡೆಯಿಂದ ಕಿಚ್ಚಿನ ಅಪಾಯವುಂಟೆಂದು ಕಣಿಹೇಳಿದ್ದು ನಿಜವಾಯಿತು. ಅಯ್ಯೋ! ಮನೆಯವರು ಏನಾದರೋ?" ಎಂದು ನಿಟ್ಟುಸಿರು ಬಿಟ್ಟನು.

ಕೋಟಿಯು "ಅವರು ಮೊನ್ನೆಯೇ ಮನೆಬಿಟ್ಟು ಹೋಗಿರಬಹುದು. ದೇವರ ಮನಸ್ಸಿನಲ್ಲಿದ್ದರೆ, ನಾವು ನಮ್ಮ ತಾಯಿಯನ್ನು ಇನ್ನೊಮ್ಮೆ ನೋಡುವೆವು" ಎಂದು ಸಂತಯಿಸುತ್ತ ಮುಂದರಿದನು. ಅವರು ಸೀಮೆಯ ಗಡಿಕಲ್ಲನ್ನು ಮುಟ್ಟುವಾಗ ಎರಡು ಗಳಿಗೆ ಇರುಳು ಆಯಿತು. ಗಡಿಕಲ್ಲಿನಿಂದ ಒಂದು ಮಾರು ಈಚೆಗೆ ಸುಂಕದ ಕಟ್ಟೆ ಇತ್ತು. ಅಲ್ಲಿ ದೇರೆ ಎಂಬುವನು ಇವರ ಕಾಲಿನ ಸದ್ದನ್ನು ಕೇಳಿ "ಕತ್ತಲಲ್ಲಿ ಯಾರದು ಹೋಗುವುದು?" ಎಂದು ವಿಚಾರಿಸಿದನು.

"ನಾವು ದಾರಿಹೋಕರು" ಎಂದು ಕೋಟಿಯು ಉತ್ತರ ಕೊಟ್ಟನು.

"ಯಾರೇ ಆಗಲಿ, ದಾರಿಸುಂಕ ಕೊಟ್ಟು ಹೋಗಿ" ಎಂದು ದೇರೆಯು ಇದ್ದಲ್ಲಿಂದ ಕದಲದೆ ಹೇಳಿದನು.

ಕೋಟಿ—"ಯಾವ ಸುಂಕವೋ? ನಮ್ಮ ಮೈ ಬೆವರಿನ ಉಪ್ಪಿನ ಸುಂಕವೋ? ಬಾಯಿ ವೀಳ್ಯದ ಸುಣ್ಣದ ಸುಂಕವೋ?"

ಚೆನ್ನಯ—"ತಲೆಯ ಮೇಲಿನ ಕೂದಲು ಸುಂಕವೋ? ಕಾಲಿಗೆ ಹಾಕಿದ ಎಕ್ಕಡದ ಸುಂಕವೋ?"

ಆಗ ದೇರೆಯು ಹೊರಕ್ಕೆ ತಲೆ ಹಾಕಿ "ನಿಮ್ಮ ಕೈಯಲ್ಲಿನ ಉಕ್ಕಿನ ಕತ್ತಿಯ ಸುಂಕ" ಎಂದನು.

ಚೆನ್ನಯನು "ನಮ್ಮ ಕತ್ತಿಗೆ ಕ್ರಯ ಕಟ್ಟುವವರು ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟಲಿಕ್ಕಿಲ್ಲ" ಎಂದನು.

ಅದಕ್ಕೆ ಸುಂಕದವನು "ಬಂಟರ ಕಾಲಿನ ಎಕ್ಕಡದ ಹೂವಿನ ಮೇಲೆ ಸುಂಕ, ಸೆಟ್ಟಿಯ ಕೊಡೆಯ ಕಾವಿನ ಮೇಲೆ ಸುಂಕ, ಅರಸು ಮಗನ ದಂಡಿಗೆಯ ಕೊಂಬಿನ ಮೇಲೆ ಸುಂಕ—ಇಷ್ಟೆಲ್ಲಾ ಸುಂಕವನ್ನು ನಾವು ತೆಗೆದುಕೊಂಡಿದ್ದೇವೆ. ನಿಮ್ಮನ್ನು ಬಿಡುವುದುಂಟೇ?" ಎಂದನು.

ಚೆನ್ನಯನು "ನಮ್ಮನ್ನು ಹಿಡಿಯುತ್ತೀಯಾ? ಬಾ ಕೆಳಗೆ, ಬಿಂಕದ ಬಲ್ಲಾಳನಿಗೆ ಕದಲದ ನಾವು ಸುಂಕದ ಕಲ್ಲಾಳನಿಗೆ ಬೆದರುವುದುಂಟೇ? ಕೆಳಗಿಳಿ; ನಮ್ಮ ಮೇಲೆ ಸುಂಕ ಹೊರಿಸು" ಎಂದು ಹೇಳುತ್ತ ಮುಂದಕ್ಕೆ ಬಂದನು.

ಬಿಂಕದ ಬಲ್ಲಾಳನ ಹೆಸರು ಕೇಳುತ್ತಲೇ ಸುಂಕದವನ ಬಾಯಿ ಒಣಗಿತು. ಅವನು ಬೆಳಕು ತರುತ್ತೇನೆಂದು ಹೇಳಿ, ಒಳಕ್ಕೆ ಹೋಗಿ, ಅಲ್ಲಿಂದಲೇ ತಲೆ ತಪ್ಪಿಸಿಕೊಂಡು ಓಡಿಹೋದನು.

ಕೋಟಿಚೆನ್ನಯರು ಪಡುಮಲೆ ಬಲ್ಲಾಳನ ಸೀಮೆ ಕಳೆದು, ರಾತ್ರಿ ಎಲ್ಲಿಯೂ ತಂಗದೆ, ದಾರಿ ನಡೆದು, ಎರಡು ಮೂರು ಗಳಿಗೆ ಹೊತ್ತು ಏರುವುದರೊಳಗೆ ಪಂಜಕ್ಕೆ ಬಂದು ಮುಟ್ಟಿದರು.

ಎರಡನೆಯ ಭಾಗ

ಪಂಜದಲ್ಲಿ

ಪಡುಮಲೆ ಸೀಮೆಗೆ ಒಬ್ಬ ಬಲ್ಲಾಳನಿದ್ದಂತೆಯೇ ಪಂಜ ಸೀಮೆಗೂ ಒಬ್ಬ ಬಲ್ಲಾಳನಿದ್ದನು. ಇವನ ಹೆಸರು ಕೇಮರಬಲ್ಲಾಳ. ಇವನ ಬೀಡು ಪಂಜದಲ್ಲಿತ್ತು; ಆ ಕಾಲದಲ್ಲಿ ಪಂಜವು ದೊಡ್ಡ ಊರಾಗಿತ್ತು.

ಪಂಜದಲ್ಲಿ ಒಂದು ಮನೆ, ಮಾಳಿಗೆಯ ಮನೆ; ಎದುರು ಸಣ್ಣದೊಂದು ಹಂದರ, ಬಲಗಡೆ ಪದ್ಮಕಟ್ಟೆಯುಳ್ಳ ತೆಂಗಿನಮರ, ಎಡಗಡೆ ಏತಹಾಕಿದ ಬಾವಿ, ಹಿಂದುಗಡೆ ಜೋಡು ಹಟ್ಟಿಗಳು, ಅದರ ಮಗ್ಗುಲಲ್ಲಿ ಕೋಳಿಯ ಗೂಡು. ಕೋಟಿಚೆನ್ನಯರು ಈ ಮನೆಯ ಮುಂದಿನ ಅಡ್ಡಗಟ್ಟಿದ ಗುಜ್ಜು ತಡಮೆ ದಾಟಿ, ಬೇಲಿಯೊಳಕ್ಕೆ ಹೋಗಿ ನಿಂತು, "ಪಯ್ಯ! ಪಯ್ಯ!" ಎಂದು ಕರೆದರು.

ಒಳಗಿನಿಂದ ಯಾರೂ ಓಯೆನ್ನಲಿಲ್ಲ. ಚೆನ್ನಯನು "ಓ ಪಯ್ಯ, ಪಯ್ಯ ಇಲ್ಲವೇ?" ಎಂದು ಗಟ್ಟಿಯಾಗಿ ಕೂಗಿದನು.

"ಯಾರದು ಕರೆಯುವುದು?" ಎಂಬುದಾಗಿ ಹೆಂಗಸಿನ ಸ್ವರವೊಂದು ಕೇಳಿಸಿತು.

ಕೋಟಿಯು—"ಯಾರೂ ಇಲ್ಲ; ನಾವು ಹಾದಿ ಪಯಣದ ಮಂದಿ. ಪಯ್ಯಬೈದ್ಯ ಇದ್ದಾನೋ?"

ಉತ್ತರ—"ಅವರಿಲ್ಲ."

ಪ್ರಶ್ನೆ—"ಎಲ್ಲಿ ಹೋಗಿದ್ದಾನೆ?"

ಉತ್ತರ—"ಬೈನಿ ಕಟ್ಟಲಿಕ್ಕೆ ಸಂಕಮಲೆಗೆ ಹೋಗಿದ್ದಾರೆ."

ಪ್ರಶ್ನೆ—"ಯಾವಾಗ ಬಂದಾನು?"

ಉತ್ತರ—"ಬೆಳಗ್ಗೆ ಹೋದರೆ, ಮಧ್ಯಾಹ್ನ ಬರುವರು. ಮಧ್ಯಾಹ್ನ ಹೋದರೆ ಸಂಜೆಗೆ ಬರುವರು."

ಪ್ರಶ್ನೆ—"ಬರಲಿಕ್ಕೆ ಹೊತ್ತು ಆಗಲಿಲ್ಲವೇ?"

ಉತ್ತರ—"ಈಗಲೇ ಬಂದಾರು; ಕೂತುಕೊಳ್ಳಿ. ನೂಲು ಹಾಕಿದವರಾದರೆ ಕೆಂದಾಳೆಯ ಪದ್ಮಕಟ್ಟೆ ಇದೆ. ಒಕ್ಕಲಿಗರಾದರೆ ಬಡವರ ಚಪ್ಪರ ಇದೆ. ಜಾತಿಯವರಾದರೆ ಮೊಗಸಾಲೆಯಲ್ಲಿ ತೂಗುಯ್ಯಾಲೆ ಇದೆ."

ಗಂಡಸರಿಲ್ಲದ ಮನೆಯೊಳಕ್ಕೆ ತಾವು ತಲೆಹಾಕುವುದು ಸರಿಯಲ್ಲವೆಂದು ಹೇಳಿ, ಕೋಟಿ ಚೆನ್ನಯರು ಚಪ್ಪರದಲ್ಲಿ ಹಾಸುಕಂಬಳಿಯನ್ನು ಬಿಡಿಸಿ ಬಿಟ್ಟು, ಅಲ್ಲೇ ಕುಳಿತುಕೊಂಡು, ಎಲೆಯ ಸಂಚಿಯನ್ನು ಬಿಚ್ಚಿ,

ಬಾಯಿ ಕೆಂಪಗೆ ಮಾಡಿಕೊಂಡರು. ಆಗ ಚೆನ್ನಯನಿಗೆ ಅಡಕೆಯು ತಲೆಗೇರಿ, ಬಾಯಾರಿ, ಜೋಮು ಬಂತು. ಕೋಟಿಯು "ನಮಗೆ ಒಂದು ಗಿಂಡಿ ನೀರು ಬೇಕು" ಎಂದು ಗಟ್ಟಿಯಾಗಿ ಹೇಳಿದನು.

ಗಂಡಸರಿಲ್ಲದಿದ್ದಾಗ ಮನೆಯ ಹೊರಗೆ ತಾನು ತಲೆ ಹಾಕುವುದು ಸರಿಯಲ್ಲವೆಂದು ಮಾತಿನಿಂದ ಹೇಳಿದರೂ ಆ ಹೆಂಗಸು ತನ್ನ ಕೆಲಸದಿಂದ ತೋರಿಸಲಿಲ್ಲ. ಆಕೆಯು ಮಡಿಯುಟ್ಟು, ಕಲ್ಲು ಕಟ್ಟಿದ ಬಾವಿಗೆ ಹೋಗಿ, ನೀರು ತುಂಬಿದ ಬಿಂದಿಗೆಯನ್ನು ಹಿಡಿದುಕೊಂಡು ಹೊರಕ್ಕೆ ಬಂದಳು.

ಇಷ್ಟರಲ್ಲಿ ಚೆನ್ನಯನು ಮರವೆ ತಿಳಿದು, ಕೈಬಟ್ಟೆಯಿಂದ ಮೋರೆಯನ್ನು ಒರಸಿಕೊಳ್ಳುತ್ತಿದ್ದನು. ಹೆಂಗಸು ನೀರಿನ ಬಿಂದಿಗೆಯನ್ನು ಹೊಸ್ತಿಲ ಹೊರಗಿಟ್ಟು, ಬಾಗಿಲ ಹಿಂದುಗಡೆ ನಿಂತಳು. ಬಿಂದಿಗೆಯನ್ನು ನೋಡಿ ಅಣ್ಣನು ತಮ್ಮನ ಮುಖವನ್ನೂ, ತಮ್ಮನು ಅಣ್ಣನ ಮುಖವನ್ನೂ ದೃಷ್ಟಿಸುತ್ತ, ಇಬ್ಬರೂ ನೀರು ಮುಟ್ಟದೆ ಸುಮ್ಮನಿದ್ದರು. ಹೆಂಗಸು ಅದನ್ನು ಕಂಡು "ನೀರು ಮಡಗಿದ್ದೇನೆ" ಎಂದು ಹೇಳಿದಳು.

ಅದಕ್ಕೆ ಕೋಟಿಯು "ನಿನ್ನ ಕೈನೀರು ಕುಡಿಯಬೇಕಾದರೆ, ಹುಟ್ಟುಬುಡ ಹೇಳಬೇಕು; ಜಾತಿಕುಲ ತಿಳಿಯಬೇಕು" ಎಂದನು.

ಅದಕ್ಕೇನು ಅಡ್ಡಿ? ಕಥೆ ಮಾತ್ರ ದೊಡ್ಡದಿದೆ, ಮನೆಯವರು ಬರಲಿಕ್ಕೂ ತಡ ಇದೆ" ಎಂದು ಉತ್ತರ ಬಂದಿತು.

ಅಷ್ಟರೊಳಗೆ ಅವಳ ಗಂಡನು ಕಳ್ಳು ಹೊತ್ತುಕೊಂಡು ಹಿತ್ತಿಲ ಕಡೆಯಿಂದ ಮನೆಗೆ ಬಂದದ್ದು ಆ ಹೆಂಗಸಿಗೆ ಗೊತ್ತಾಗಲೇ ಇಲ್ಲ. ಅವಳು ಪರಕೀಯರೊಡನೆ ಮಾತನಾಡುವುದನ್ನು ಅವನು ಕೇಳಿ, ಸಂಶಯದಿಂದ ಮನೆಯ ಬಲಗಡೆಯ ಗೋಡೆಯಲ್ಲಿ ಮರೆಯಲ್ಲಿ ನಿಂತುಕೊಂಡು ಇವರ ಮಾತುಕಥೆ ಕೇಳುತ್ತಾ ಇದ್ದನು.

ಚೆನ್ನಯ—"ಕಥೆ ಕೇಳೋಣ."

ಹೆಂಗಸು—"ನಮ್ಮ ಅಜ್ಜಿ, ಅಂದರೆ ತಾಯಿಯ ತಾಯಿ ಬ್ರಾಹ್ಮಣತಿಯಂತೆ. ಅವಳು ತಕ್ಕ ಕಾಲದಲ್ಲಿ ಮದುವೆಯಾಗದೆ ದೊಡ್ಡವಳಾದುದರಿಂದ, ತಾಯಿತಂದೆಗಳು ತಮ್ಮ ಜಾತಿಕಟ್ಟಳೆ ಮೀರಲಾರದೆ, ಅವಳನ್ನು ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟರಂತೆ."

ಕೋಟಿ—"ಆಮೇಲೆ..."

ಹೆಂಗಸು—"ಆಮೇಲೆ ಕಳ್ಳು ತೆಗೆಯಲು ತಾಳೇಮರವನ್ನು ಏರಿದ್ದ ಒಬ್ಬನು ಅವಳನ್ನು ಕಂಡು, ಬೀಡಿಗೆ ಹೋಗಿ ಬಲ್ಲಾಳರಿಗೆ ತಿಳಿಸಿದನಂತೆ. ಅವರ ಅಪ್ಪಣೆಯಂತೆ ಅವನು ಆಮೇಲೆ ಅವಳನ್ನು ಮನೆಗೆ ಕೊಂಡುಹೋಗಿ, ಚೆನ್ನಾಗಿ ಸಾಕಿ, ಬಿರ್ಮಣ ಬೈದ್ಯನಿಗೆ ಮದುವೆಮಾಡಿ ಕೊಟ್ಟನಂತೆ"

ಕೋಟಿ—"ಕರ್ಗೋಲ ತೋಟದ ಬಿರ್ಮಣ ಬೈದ್ಯನಿಗೋ?"

ಹೆಂಗಸು:—"ಹೌದು, ಹೌದು; ಕರ್ಗೋಲ ತೋಟ—ಆ ಹೆಸರೇ ಮರೆತುಹೋಗಿತ್ತು. ನನ್ನ ತಾಯಿ ಆ ಹೆಸರನ್ನು ಒಂದು ಸಲ ಹೇಳಿದ್ದು ನನಗೆ ಈಗ ನೆನಪಿಗೆ ಬಂತು."

ಕೋಟಿ—"ತಾಯಿ ಯಾರು?"

ಹೆಂಗಸು—"ಬಿರ್ಮಣ ಬೈದ್ಯನ ಮಗಳೇ ನನ್ನ ತಾಯಿ."

ಕೋಟಿ—"ತಾಯಿಯ ಹೆಸರೇನು?"

ಹೆಂಗಸು—"ದೇಯಿ."

ಕೋಟಿ—"ತಂದೆಯ ಹೆಸರು?"

ಹೆಂಗಸು—"ಕಾಂತಣ್ಣ."

ಕೋಟಿ—"ಮೂಲಸ್ಥಳ?"

ಹೆಂಗಸು—"ಕೆಮ್ಮಲಜೆಯ ಬ್ರಹ್ಮರ ಎಂದು ಹೇಳುವುದನ್ನು ಕೇಳಿದ್ದೇನೆ. ನಾನು ನೋಡಲಿಲ್ಲ."

ಕೋಟಿ—"ಒಬ್ಬ ತಾಯಿಗೆ ನೀವು ಎಷ್ಟು ಮಂದಿ ಮಕ್ಕಳು?"

ಹೆಂಗಸು—"ಚೊಚ್ಚಲಿಗೆ ನಾನಂತೆ. ನನ್ನ ಬೆನ್ನ ಹಿಂದೆ ನನ್ನ ತಾಯಿ ಅವಳಿ-ಜವಳಿ ಗಂಡುಮಕ್ಕಳನ್ನು ಬೀಡಿನ ಅರೆಯಲ್ಲಿ ಹೆತ್ತಳಂತೆ."

ಕೋಟಿ—"ಕರ್ಗೋಲ ತೋಟದವರಿಗೆ ಬೀಡಿನ ಅರೆಯಲ್ಲಿ ಹೆರಿಗೆಯಾಗಲು ಕಾರಣವೇನು?"

ಹೆಂಗಸು—"ಅದೋ? ಅದನ್ನು ಹೇಳುತ್ತೇನೆ. ಪಡುಮಲೆಯ ಪೆರುಮಾಳು ಬಲ್ಲಾಳರು ಇರುವರಷ್ಟೆ. ಅವರು ಒಂದು ಸಾರಿ ಬೇಟೆಗೆ ಹೋಗಿದ್ದಾಗ ಅವರ ಕಾಲಿಗೆ ಮುಳ್ಳು ತಾಗಿ ಜೀವ ಹೋಕುಬರ್ಕು ಎಂಬಂತಾಯಿತಂತೆ. ಆಗ ನನ್ನ ತಾಯಿ ತುಂಬಿದ ಬಸುರಿ. ಅವಳ ಮದ್ದು ಆಗಬಹುದೆಂದು ಅವಳನ್ನು ಬೀಡಿಗೆ ಕರೆತರಿಸಿದರಂತೆ. ಅವಳು ತಾನು ತುಂಬಿದ ಬಸುರಿ ಎಂಬುದನ್ನು ಲೆಕ್ಕಿಸದೆ ತಾನೇ ತನ್ನ ಕೈಯಿಂದ ಸೊಪ್ಪು ಅರೆದು, ಮೈಗೆ ಹಚ್ಚಿ ವಾಸಿ ಮಾಡಿದಳಂತೆ. ನಂತರ ಅವಳ ಹೆರಿಗೆಯು ಬೀಡಿನಲ್ಲಿಯೇ ನಡೆಯಿತಂತೆ. ಆ ಹೆರಿಗೆಯಲ್ಲಿ ಆಕೆ ಅವಳಿ ಜವಳಿ ಗಂಡುಮಕ್ಕಳನ್ನು ಹೆತ್ತಳಂತೆ.

ಕೋಟಿ—"ಅನಂತರ ಏನಾಯಿತು?"

ಹೆಂಗಸು—"ಮಕ್ಕಳು ಹುಟ್ಟಿದ ಮೂರು ತಿಂಗಳಲ್ಲಿಯೇ ಅವಳು ಕಾಲವಾದಳು."

ಕೋಟಿ—"ಅವಳ ಕಡೆಗಾಲದಲ್ಲಿ ಅವಳ ಹತ್ತಿರ ಯಾರೂ ಇರಲಿಲ್ಲವೇ?"

ಹೆಂಗಸು—"ನನಗೆ ಏಳು ವರ್ಷ ವಯಸ್ಸು ಅನ್ನುವಾಗ ನನ್ನನ್ನು ಇಲ್ಲಿಗೆ ತಂದು ಕೈ ಹಿಡಿಸಿಕೊಟ್ಟರು. ಅಂದಿನಿಂದ ನಾನು ಮನೆಬಿಟ್ಟು ಹೊರಕ್ಕೆ ಕಾಲು ಇಡಲಿಲ್ಲ. ಹೀಗಾದ್ದರಿಂದ ತಾಯಿ ಹೆತ್ತ ಸುದ್ದಿಯ ಸುಖವಾಗಲೀ, ಸತ್ತ ಗೋಳಿನ ದುಃಖವಾಗಲೀ, ಕಿವಿಯಿಂದ ಕೇಳಿದ್ದೇನೇ ಹೊರತು ಕಣ್ಣಿನಿಂದ ಕಾಣಲಿಲ್ಲ."

ಕೋಟಿಚೆನ್ನಯರ ಮನಸ್ಸಿನಲ್ಲಿ ಉಲ್ಲಾಸದ ಏರ್ತವೂ, ಉದ್ವೇಗದ ಇಳಿತವೂ ತೋರಿ. ಅವರು ಒಬ್ಬರನ್ನೊಬ್ಬರು ನೋಡುತ್ತ ಒಂದು ನಿಮಿಷ ಸುಮ್ಮನಿದ್ದರು.

ಸ್ವಲ್ಪ ಹೊತ್ತಿನ ಮೇಲೆ "ಆ ಮಕ್ಕಳನ್ನು ಯಾರು ಸಾಕಿದರು?" ಎಂದು ಕೋಟಿಯು ಕೇಳಿದನು.

ಹೆಂಗಸು—"ಅನಂತರದ ಸಂಗತಿ ನನಗೆ ಬೇಡವಾಯಿತು. ಬಿತ್ತಿದ ಗದ್ದೆಗೆ ತೆವರಿ ಗಟ್ಟಿ ಇರಬೇಕು; ಹುಟ್ಟಿದ ಹೆಣ್ಣಿಗೆ ತವರು ಗಟ್ಟಿ ಇರಬೇಕು. ತಾಯಿ ಹೋದ ಮೇಲೆ ತವರು ಮನೆಗೆ ಹೋಗಲಿಲ್ಲ. ತಮ್ಮಂದಿ

ರನ್ನು ಕಾಣಲಿಲ್ಲ. ಊರಿನವರು ಮಾತ್ರ ಅವರ ಪ್ರತಾಪವನ್ನು ಹೊಗಳುತ್ತಾರೆ. ನೀರಿನಿಂದ ಹುಟ್ಟಿದ ಬೆಂಕಿಯಂತೆ, ನೆಲದಿಂದ ಬಂದ ಸಿಡಿಲಂತೆ,—"

ಚೆನ್ನಯ—"ಅಕ್ಕಾ, ನಿನ್ನ ಹೆಸರು?"

ಹೆಂಗಸು—"ನನ್ನ ಹೆಸರು ಕಿನ್ನಿದಾರು."

ಕೂಡಲೇ ಕೋಟಿಚೆನ್ನಯರು ಎದ್ದು, "ಅಕ್ಕ ಎಂದರೆ ನೀನೇ ಸೈ, ತಮ್ಮ ಎಂದರೆ ನಾವೇ ಸೈ" ಎಂದು ಬಾಯಿಂದ ಹೇಳುತ್ತ, ಇಬ್ಬರೂ ಅವಳ ಪಾದದ ಮೇಲೆ ತಲೆಯಿಟ್ಟು ಅಡ್ಡಬಿದ್ದರು. ಆಗ ಗೋಡೆಯ ಹಿಂದುಗಡೆ ಅದುವರೆಗೆ ಅವಿತುಕೊಂಡಿದ್ದ ಆಕೆಯ ಗಂಡನು ಈಚೆಗೆ ಬಂದು "ಏಳಿ, ಏಳಿ" ಎಂದು ಹೇಳಿ, ಅವರನ್ನು ಬಲಗೈಯಿಂದ ಎತ್ತಿ, ಪೊಗಸಾಲೆಯ ತೂಗುಯ್ಯಾಲೆಯ ಮೇಲೆ ಕುಳ್ಳಿರಿಸಿದನು; ಕಿನ್ನಿದಾರುವಿಗಂತೂ ಆದ ಸಂತೋಷವು ಅಷ್ಟಿಷ್ಟಲ್ಲ. ಅವಳು ಹಸುವನ್ನು ಕರೆದು, ಹಾಲನ್ನು ಕಾಯಿಸಿ ತಂದು, ಅವರನ್ನು ಆದರಿಸಿದಳು. ಆ ದಿನ ಅಕ್ಕನ ಮನೆಯ ಅಕ್ಕಿಯ ಬಿಳಿಯನ್ನವೇನು, ಬೆಲ್ಲದ ಪಾಯಸವೇನು, ಹಲಸಿನ ಸುಟ್ಟವೆಯೇನು, ತುಪ್ಪದ ಒಗ್ಗರಣೆಯೇನು, ಬೆಣ್ಣೆಯ ಮೊಸರೇನು, ಉಪ್ಪಿನ ಕಾಯಿಯೇನು? ಒಟ್ಟೇನು? ಅಡಿಗೆ ಆರೋಗಣೆಗಳು ಹಸಿಯದ ಹೊಟ್ಟೆಗೆ ಹಸಿವೆಯನ್ನು ಉಂಟು ಮಾಡಿದುವು.

ಈ ಪ್ರಕಾರವಾಗಿ ಕೋಟಿಚೆನ್ನಯರು ಪಂಜದಲ್ಲಿಯ ತಮ್ಮ ಅಕ್ಕನ ಮನೆಯಲ್ಲಿ ಸುಖವಾಗಿ ಕಾಲ ಕಳೆಯುತ್ತಿರಲು, ಆ ಸುದ್ದಿಯು ಪಂಜದ ಊರಲ್ಲೆಲ್ಲಾ ಮೆಲ್ಲಮೆಲ್ಲನೆ ಹರಡಿತು. ಅನೇಕರು ಬೈದ್ಯನ ಮನೆಗೆ ಹೋಗಿ, ಇವರ ಗಂಡುಸಿರಿಯ ಮುಖ, ಅಗಲದ ಎದೆ, ಸೆಣಕಲು ಮೈ, ಚಳಕದ ಕೈ ನೋಡಿ ತಮ್ಮಲ್ಲಿಯೇ ಬೆರಗುಗೊಂಡು ಹಿಂದೆರಳುತ್ತಿದ್ದರು. ಮೊತ್ತಮೊದಲು ಕೋಟಿಚೆನ್ನಯರು ಮನೆಬಿಟ್ಟು ಕದಲುತ್ತಿರಲಿಲ್ಲ. ಆದರೆ ಕ್ರಮೇಣ ಹೊರಗಿನ ಜನಗಳು ಆಗಾಗ ತಮ್ಮನ್ನು ಮನೆಗೆ ಬಂದು ನೋಡಿದಷ್ಟಕ್ಕೆ ಸಲುಗೆಯು ಒಬ್ಬಿಬ್ಬರ ಹತ್ತಿರ ಹೆಚ್ಚಾಗಲು, ಅವರು ಊರಲ್ಲಿ ತಲೆಯೆತ್ತಿ ತಿರುಗತೊಡಗಿದರು. ಈ ಸುದ್ದಿಯು ಪಂಜ ಸೀಮೆಯ ಅಧಿಕಾರಿಯಾದ ಕೇಮರ ಬಲ್ಲಾಳನ ಕಿವಿಗೂ ಮುಟ್ಟಿತು. ಅವರ ಬುದ್ಧಿಯ ಜಾಣ್ಮೆಯನ್ನೂ ಮೈಯ ಬಲ್ಪನ್ನೂ ಕೇಳಿ ಆತನ ಕಿವಿಗೆ ಮೊದಲು ಮೊದಲು ಬಹಳ ರುಚಿಯಾಯಿತು. ಕ್ರಮೇಣ ಆ ಹೊಗಳಿಕೆಯೇ ಕಹಿಯಾಗತೊಡಗಿತು. ಹಾಗೆ ಬಲ್ಲಾಳನ ಮನಸ್ಸು ತಿರುಗುವುದಕ್ಕೆ ಚೆಂದುಗಿಡಿ ಎಂಬ ಹೆಸರಿನವನೊಬ್ಬನು ಮುಖ್ಯ ಕಾರಣನಾಗಿದ್ದನು.

ಚೆಂದುಗಿಡಿಯೂ ಕೇಮರ ಬಲ್ಲಾಳನೂ ಒಂದೇ ಮಡಕೆಯಲ್ಲಿ ಉಂಡ ಉಂಡಾಡಿಗಳು; ಒಂದೇ ಹಟ್ಟಿಯಲ್ಲಿ ಹೋರಿದ ಹೋರಿಗಳು; ಒಂದೇ ಗರಡಿಯಲ್ಲಿ ಕಲಿತ ಕಲಿಬಂಟರು. ಚೆಂದುಗಿಡಿಯು ಹರೆಯದ ಜವ್ವನಿಗನಿದ್ದಾಗ, ಪಂಜದ ಮುದುಕ ಬಲ್ಲಾಳನು ಸತ್ತುಹೋದನು. ತರುವಾಯ ಕೇಮರ ಬಲ್ಲಾಳನಿಗೆ ಎಂಟು ಮಾಗಣೆಯವರು ಕೂಡಿ ಪಟ್ಟಕಟ್ಟಿದರು. ಪಟ್ಟ ಕಟ್ಟಿದ್ದೇ ತಡ, ಚೆಂದುಗಿಡಿಯ ಎರಡು ತೋಳುಗಳಲ್ಲಿ ಎಂಟು ತೋಳುಗಳು ಎದ್ದಂತಾಯಿತು. ಹಿರಿಯ ಬಲ್ಲಾಳನಿದ್ದಾಗ ಪಯ್ಯಬೈದ್ಯನು ಆತನ ಬಲಗೈಯಂತಿದ್ದು, ಬೀಡಿಗೆ ಬೇಕಾದವನಾಗಿದ್ದನು. ಚೆಂದುಗಿಡಿಗೆ ಮೀಸೆ ಮೂಡುವುದಕ್ಕೆ ಮುಂಚಿನಿಂದ ಆತನ ಕಣ್ಣು ಪಯ್ಯಬೈದ್ಯನ ಮಣೆಯ ಮೇಲೆ ಇತ್ತು. ಕೇಮರನು ಸೀಮೆಯ ಬಲ್ಲಾಳನಾಗಿ ಎರಡು ಮಳೆಗಾಲಗಳು ಕಳೆಯುವುದರೊಳಗೆ ಚೆಂದುಗಿಡಿಯು ಬೈದ್ಯನ ಮೇಲೆ ಇಲ್ಲದ ಸಲ್ಲದ ದೂರುಗಳನ್ನು ಹೊರಿಸಿ, ಅವನನ್ನು ಬೀಡಿನಿಂದ ಹೊರಡಿಸಿ, ಅವನಿದ್ದ ಸ್ಥಳದಲ್ಲಿ ತನ್ನ ಚಾಪೆಯನ್ನು ಬಿಡಿಸಿ, ಕಾಲುನೀಡಿ ಕುಳಿತು ಕೊಂಡನು. ಬೈದ್ಯನು

ಬೀಡಿನಿಂದ ದೂರವಾದರೂ, ಬಲ್ಲಾಳನಿಂದ ದೂರವಾಗಲಿಲ್ಲ. ಆತನು ತನ್ನ ತಂದೆಯು ನೆಚ್ಚಿದ್ದ ಬಲ್ಬಂಟನೆಂಬ ಅಭಿಮಾನವು ಕೇಮರ ಬಲ್ಲಾಳನ ಮನಸ್ಸಿನಿಂದ ತೀರಾ ಮಾಸಿ ಹೋಗಲಿಲ್ಲ. ಈ ಅಭಿಪ್ರಾಯವನ್ನು ಬಲ್ಲಾಳನ ಮನಸ್ಸಿನಿಂದ ಹೇಗಾದರೂ ಕಿತ್ತುಬಿಟ್ಟು, ಇಬ್ಬರೊಳಗೆ ಪರಸ್ಪರ ವೈರವನ್ನು ತಂದು ಹೂಡಬೇಕೆಂದು ಚೇದುಗಿಡಿಯು ಸಮಯವನ್ನು ಸಾಧಿಸುತ್ತಿದ್ದನು. ಹೀಗೆ ಸಾಧಿಸುವುದಕ್ಕೂ ಕೋಟಿಚೆನ್ನಯರು ಆ ಬೈದ್ಯನ ಮನೆಯಲ್ಲಿ ಉಳಕೊಂಡದ್ದಕ್ಕೂ ಸರಿಯಾಯಿತು.

ಕೋಟಿಚೆನ್ನಯರು ಹಲವು ಕಾಲದಿಂದ ಪಯ್ಯಬೈದ್ಯನಲ್ಲಿ ಇದ್ದದ್ದು ಚೆಂದುಗಿಡಿಗೆ ಆಗಲಿಲ್ಲ. ಚೆಂದುಗಿಡಿಯು ಸ್ವಭಾವದಲ್ಲಿ ಅಂಜುಬುರುಕ; ಬೇರೊಬ್ಬರ ಎದೆಗಾರಿಕೆಯು ಅವನ ಕಣ್ಣಿಗೆ ಸೊಗಸದು. ಅವನು ಈ ಮೊದಲೇ ಚೆನ್ನಯನ ಕೈಯಾಟವನ್ನೂ, ಬಿಲ್ಲಿನ ಹೊಡೆತವನ್ನೂ, ಕೊಳಲಿನ ಜಾಣ್ಮೆಯನ್ನೂ ಕಂಡು ಬೆಚ್ಚಿ ಹೋಗಿದ್ದನು. ಅದೂ ಅಲ್ಲದೆ ತಾನು ಬೀಡಿನಿಂದ ಕೆಳಕ್ಕೆ ಕೆಡವಿಬಿಟ್ಟದ್ದ ಪಯ್ಯಬೈದ್ಯನು ಈಗ ಅರಸು ಕೊಂಬೆಯಲ್ಲಿ ತೊನೆದು ತೂಗುತ್ತಲಿದ್ದ ತನ್ನನ್ನು ಈ ಕೋಟಿಚೆನ್ನಯರ ಬಲ್ತೋಳಿನ ದೋಟಿಯಿಂದ ಎಳೆದು ಹಾಕಿ ನೆಲಕ್ಕೆ ಉದುರಿಸಿ ಬಿಡಲಿಕ್ಕಿಲ್ಲವೇ ಎಂಬೊಂದು ಹೆದರಿಕೆಯು ಚೆಂದುಗಿಡಿಯ ತಲೆಯನ್ನು ತಿನ್ನುತ್ತಲಿತ್ತು. ಆದುದರಿಂದ ಆ ಮೂವರು—ಕೇಮರ ಬಲ್ಲಾಳ, ಪಯ್ಯ ಬೈದ್ಯ, ಕೋಟಿ-ಚೆನ್ನಯರು—ಪರಸ್ಪರ ಕೈಗೂಡಿರದೆ, ಮೂರು ಮೂಲೆಗಳಲ್ಲಿ ಮೂವರು ದೂರವಾಗಿರುವುದೇ ತನಗೆ ಮೇಲೆಂದು ಯೋಚಿಸಿ, ಚೆಂದುಗಿಡಿಯು ಕೇಮರ ಬಲ್ಲಾಳನು ಕೋಟಿ ಚೆನ್ನಯರನ್ನು ಕಣ್ಣು ತುಂಬ ನೋಡದಂತೆ ಹವಣಿಸುತ್ತಿದ್ದನು. ಆದರೆ ತನ್ನ ಮನಸ್ಸಿನಲ್ಲಿ ಇದ್ದುದನ್ನು ಮೋರೆಯಲ್ಲಾಗಲೀ ಮಾತಿನಲ್ಲಾಗಲೀ ತೋರಿಸುತ್ತಿರಲಿಲ್ಲ. ಇದು ಪಯ್ಯ ಬೈದ್ಯನಿಗೆ ಗೊತ್ತಾಗದೆ ಅವನು ದಿನಕ್ಕೆ ಒಂದು ಬಾರಿ "ನಮ್ಮ ಭಾವಂದಿರು ಬೀಡಿನ ಬಲ್ಲಾಳರನ್ನು ಓಲಗದಲ್ಲಿ ಕಾಣಬೇಕೆಂದಿದ್ದಾರೆ. ನೀವು ಭೇಟಿ ಮಾಡಿಸಬೇಕು" ಎಂದು ಚೆಂದುಗಿಡಿಯ ಹತ್ತಿರ ಪದೇ ಪದೇ ಕೇಳುವನು; ಚೆಂದುಗಿಡಿಯು "ಈ ಹೊತ್ತು, ನಾಳೆ, ಈ ಹೊತ್ತು, ನಾಳೆ" ಎಂದು ಒಂದಲ್ಲ ಒಂದು ನೆಪವನ್ನು ಹೇಳಿ, ಅವನ ಆಲೋಚನೆಯನ್ನು ಕಡಿದು ಹಾಕುವನು; ಬೈದ್ಯನು ಕೋಟಿ ಚೆನ್ನಯರಿಗೆ ಬಂದು ತಿಳಿಸಿ, "ಮುಂದೆ ನೋಡೋಣ" ಎಂದು ಹೇಳುವನು; ಹೀಗೆ ಅನೇಕ ತಿಂಗಳುಗಳು ಕಳೆದುವು.

ಇತ್ತ ಪಡುಮಲೆಯಲ್ಲಿ ಪೆರುಮಾಳು ಬಲ್ಲಾಳನ ಕಣ್ಣಿನ ಮುಂದೆ ಕೋಟಿಚೆನ್ನಯರು ಗದ್ದಿಗೆಯ ಮೇಲೆ ಗಡುವಿಟ್ಟು ಯಾವ ದಿವಸ ಬೀಡಿನಿಂದ ಕೆಳಕ್ಕೆ ಇಳಿದು ಹೋದರೋ ಆ ದಿನದಿಂದ ಬಲ್ಲಾಳನ ಮನಸ್ಸು ಒಂದುಕ್ಕೊಂದಾಗಿ ಹೋಯಿತು. ಅವನು ಮಾತುಮಾತಿಗೆ 'ಸತ್ತು ಹೋಗಲಿ—ಸುಟ್ಟುಬಿಡಿ' ಎಂದು ಹೇಳುತ್ತ ಸಿಟ್ಟನ್ನು ಕಾರುತ್ತಿದ್ದನು. ಕೋಟಿಚೆನ್ನಯರನ್ನು ಸಿಕ್ಕಿದ್ದಲ್ಲಿ ಅವರನ್ನು ಹಿಡಿದು ಕೊಂದು ಹಾಕುವುದಕ್ಕೆ ಅವನ ಆಳುಗಳು ಹೋದರು. ಹೋದ ಆಳುಗಳು ಬೈದ್ಯನ ಮನೆಯನ್ನು ಸುಟ್ಟುಬಿಟ್ಟರು. ಆದರೆ ಕೋಟಿಚೆನ್ನಯರೂ ಸಾಯಿನ ಬೈದಿತಿಯೂ ಮನೆಯೊಳಗೆ ಇರಲಿಲ್ಲ; ಅವರು ಅಲ್ಲಿಂದ ಮೊದಲೇ ಕಾಲು ತೆಗೆದಿದ್ದರು. ಸಾಯಿನ ಬೈದಿತಿಯ ಗಂಡ ಸಾಯಿನ ಬೈದ್ಯನು ಮಾತ್ರ ಮನೆಯಲ್ಲೇ ಇದ್ದನು. ಆಳುಗಳು ಅವನನ್ನು ಹಿಡಿದು ತಂದು ಬಲ್ಲಾಳನಿಗೆ ಒಪ್ಪಿಸಿದರು. ತಲೆ ತಪ್ಪಿಸಿಕೊಂಡವರು ಎಲ್ಲಿ ಓಡಿರಬೇಕೆಂಬುದನ್ನು ಅವನ ಬಾಯಿಂದ ಹೊರಡಿಸುವುದಕ್ಕೆ ಅವನಿಗೆ ನಾನಾ ಬಗೆಯಾಗಿ ಹಿಂಸೆ ಕೊಟ್ಟರು. ಹೀಗೆ ಚಿತ್ರಹಿಂಸೆ ಪಟ್ಟು ಕುಟುಕು ಜೀವದಲ್ಲಿದ್ದ ಆ ಮುದುಕನ ಸಂಕಟವನ್ನು ಕಂಡು ಬೀಡಿನ ರಾಣಿ "ಆ ಮುದುಕನನ್ನು ಯಾಕೆ ಹಿಂಸಿಸುತ್ತೀರಿ? ಅವನನ್ನು ಬಿಡಿ, ಅವನ ಗೋಳನ್ನು ಕೇಳಲಾರೆ" ಎಂದು ಹೇಳಲು ಅವನ ಬಿಡುಗಡೆಯಾಯಿತು. ಅಂದಿನಿಂದ ಮುದುಕನು

ಮೊದಲಿನಂತೆಯೇ ಬೀಡಿನ ಒಳಗಿನವರಿಗೆ ಬೇಕಾದ ಕಳ್ಳನ್ನು ಒದಗಿಸಿಕೊಡುತ್ತ, ಅವರಲ್ಲಿ ವಿಶ್ವಾಸದಿಂದ ನಡೆದುಕೊಳ್ಳುತ್ತ ಬೀಡಿನ ಕೋಟೆಯ ಹೊರಗೆ ಹೋಗಲಿಕ್ಕೆ ಅಪ್ಪಣೆ ಇಲ್ಲದೆ ಅಲ್ಲಿಯೇ ಇದ್ದನು.

ಪೆರುಮಾಳು ಬಲ್ಲಾಳನ ಮನಸ್ಸು ಕೋಟಿಚೆನ್ನಯರ ಸಂಗತಿಯಿಂದ "ನೀರು ಸೋಕಿದರೆ ಬಿಸಿ, ಗಾಳಿ ಹಾಕಿದರೆ ಉರಿ" ಎಂಬಂತೆ ಹುಣ್ಣು ಹುಣ್ಣಾಗಿ ಹೋಯಿತು. ಗದ್ದಿಗೆಯಲ್ಲಿ ಗಡುವನ್ನು ಇಟ್ಟಿದ್ದು ನೆನಪಿಗೆ ಬರುತ್ತಲೇ ಅವನ ಮುಖವು ಬಾಡುವುದು; ಅವರು ಮರಳಿ ಬರಲಾರರೆಂದು ಯಾರಾದರೂ ಹೇಳಿದರೆ, ಅದು ಅರಳುವುದು. ಬೀಡಿನಲ್ಲಿ ಹುಟ್ಟಿದ ಮಕ್ಕಳು ಬೇಡಿ ತಿನ್ನಬೇಕಾಯಿತೇ ಎಂದು ನೆನೆದು ಅವರು ಎಲ್ಲಿದ್ದರೂ ಸರಿಯೇ ಅವರನ್ನು ಸಂಧಿ ಸಾಮಗಳಿಂದ ಮತ್ತೆ ಕರೆತರಿಸಿಕೊಳ್ಳಬೇಕು ಎಂದು ಒಮ್ಮೆ ಮರುಕದಿಂದ ಹೇಳುವನು. ಮತ್ತೊಮ್ಮೆ 'ದೂರದ ಮಾರಿ ದೂರಕ್ಕಿರಲಿ. ಕಿಚ್ಚಿನ ಕಿಡಿ ಎಂದು ಗೊತ್ತಿದ್ದು ಕಚ್ಚೆಯಲ್ಲಿ ಕಟ್ಟಿ ಕೊಳ್ಳುವುದೇಕೆ?' ಎಂದು ಹಾಗೆ ಸುಮ್ಮನಾಗುವನು. ಈ ಪ್ರಕಾರವಾಗಿ ಹೆದರಿಕೆಯ ಒಂದು ದಂಡಿಯು ಕತ್ತಿನಲ್ಲಿ ಕಟ್ಟಲ್ಪಟ್ಟು ಹಗೆಯ ಹಾದಿಯಲ್ಲಿ ಹಾಯ್ದು ಹಾಯ್ದು ಹೋಗಲರಿಯದ ಹೋರಿಯಂತೆ ಅವನ ಮನಸ್ಸು ಕ್ಷುಬ ವಾಗಿ ಹೋಯಿತು.

ಹೀಗಿರಲು ಕೋಟಿಚೆನ್ನಯರ ಜಾಡು ಹಿಡಿದು ಅವರನ್ನು ಹುಡುಕಲು ಹೋದ ಬಲ್ಲಾಳನ ಬೀಡಿನವರಲ್ಲಿ ಒಬ್ಬನು ಹಳ್ಳಿಗಳನ್ನೆಲ್ಲಾ ಸುತ್ತಾಡಿ, ಅವರು ಪಂಜದ ಊರಲ್ಲಿ ಸೇರಿಕೊಂಡಿದ್ದಾರೆ ಎಂಬುದನ್ನು ಗೊತ್ತು ಮಾಡಿ, ಪಡುಮಲೆಗೆ ಹಿಂದೆರಳಿ, ಅವರ ಸೋವುಸುಳಿವುಗಳನ್ನು ತನ್ನ ಯಜಮಾನನಿಗೆ ತಂದುಕೊಟ್ಟನು. ಮರುದಿನವೇ ಬಲ್ಲಾಳನು ತನ್ನ ಸೇನಬೋವನನು ಚಾವಡಿಗೆ ಕರೆಯಿಸಿದನು.

ಆ ಸೇನಬೋವನು ಮುಂಜಾನೆಯ ಮುಂಬಿಸಿಲಿಗೆ ಹಾಕಿಸಿ ಸಂಜೆಯ ತಂಬಿಸಿಲಿಗೆ ತೆಗೆಯಿಸಿ, ಸರಿಗೊಳಿಸಿದ ತಾಳೆಯ ಗರಿಗಳ ಕಟ್ಟೊಂದನ್ನು ಕೈಯಲ್ಲಿ ಹಿಡಿದುಕೊಂಡು ಬಂದು ಬಲ್ಲಾಳನಿಗೆ ಕೈಮುಗಿದು "ಬುದ್ಧಿ" ಎಂದು ನಿಂತನು. ಬಲ್ಲಾಳನು "ಗುಟ್ಟಿನ ಕೆಲಸವಿದೆ" ಒಳಗಿನ ಕೊಟಡಿಗೆ ಬಾ" ಎಂದು ಹೇಳಿ, ಅವನನ್ನು ಏಕಾಂತದ ಕೋಣೆಗೆ ಕರೆದುಕೊಂಡು ಹೋದನು. ಸೇನಬೋವನು ಕೈಯಲ್ಲಿದ್ದ ಕಟ್ಟಿನಿಂದ ಒಂದು ಓಲೆಯನ್ನು ಈಚೆಗೆ ತೆಗೆದು, ಅದರ ಕಡೆಕುಡಿಗಳನ್ನು ಕತ್ತರಿಸಿ, ನಡುವಿನ ಉಬ್ಬನ್ನು ಸರಿಮಾಡಿ, ಎಣ್ಣೆಯನ್ನೂ ಅರಸಿನವನ್ನೂ ಪೂಸಿ, ಮೇಲೆ ಶ್ರೀಕಾರವನ್ನು ಗೀರಿ, ಬಲ್ಲಾಳನು ಹೇಳಿದ ಒಕ್ಕಣೆಯನ್ನು ಬರೆದು, ಓಲೆಯನ್ನು ಆತನ ಕೈಯಲ್ಲಿ ಕೊಟ್ಟನು. ಬಲ್ಲಾಳನು ಪತ್ರದ ಕೊನೆಯಲ್ಲಿ ಕಂಟದಿಂದ ಗೆರೆ ಗೀರಿ ಬೋವನಿಗೆ ಅದನ್ನು ತಿರುಗಿ ಕೊಟ್ಟು, "ಇದನ್ನು ಪಂಜದ ಬಲ್ಲಾಳರಿಗೆ ಮುಟ್ಟಿಸಬೇಕು" ಎಂದು ಅಪ್ಪಣೆ ಮಾಡಿದನು. ಓಲೆಯನ್ನು ತೆಗೆದುಕೊಂಡು ಇಬ್ಬರು ಓಲೆಕಾರರು ಪಡುಮಲೆಯಿಂದ ಅದೇ ದಿನ ಹೊರಟರು.

ಇತ್ತ ಬಲ್ಲಾಳನು ಓಲೆಯನ್ನು ಬರೆಯಿಸುತ್ತಿದ್ದಾಗ, ಅತ್ತ ಚೆಂದುಗಿಡಿಯು ಮನೆಯ ಚಾವಡಿಯಲ್ಲಿದ್ದು ತನ್ನ ಮನಸ್ಸಿನಲ್ಲಿ "ಏನು ಮಾಡಿದರೂ ಕೋಟಿ ಚೆನ್ನಯರ ಹೆಸರೇ ಮೇಲೆ ಬರುತ್ತದಲ್ಲಾ! ಇವರ ಅದಟುತನದ ವಿಚಾರಗಳನ್ನು ಕೇಳಿ ಊರಲ್ಲಿದ್ದ ಮಕ್ಕಳಿಗೆ ಮದ್ದುಮಾಯಿ ಮಾಡಿದಂತಾಗಿದೆ; ಹೆಂಗಸರಿಗೆ ಮಂಕುಬೂದಿ ಹಾಕಿದಂತಾಗಿದೆ; ಮುದುಕರಿಗೆ ಅರಳು ಮರುಳು ಹಿಡಿದಂತಾಗಿದೆ. ಏನು ಮಾಡಿದರೂ ಈ ಬಿಲ್ಲರ ಕುಟ್ಟಿಗಳ ಹೆಮ್ಮೆ ಹಾರಾಟಗಳನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲವಲ್ಲಾ! ಇವರ ಸುದ್ದಿಯನ್ನು ನಾನು ಕಟ್ಟಿ ಕಟ್ಟಿ ಬಿಗಿದಷ್ಟೂ ಅದು ನನ್ನ ಕೈಮೀರಿ ಬಾಯಿಮಾಡುತ್ತದಲ್ಲಾ! ಎಲ್ಲಿ ಅವರು ನಮ್ಮ ಕೇಮರ ಬಲ್ಲಾಳನ ಎದುರಿಗೆ ಬಿದ್ದು ಅವನನ್ನು ಮರುಳು ಮಾಡಿ, ನನಗೆ ಅಪಾಯವನು ತಂದೊಡ್ಡುವರೋ ಗೊತ್ತಾಗುವುದಿಲ್ಲ! ಸಾಲದ್ದಕ್ಕೆ

ನಮ್ಮ ಬಲ್ಲಾಳನಿಗೆ ಹಿತ್ತಾಳಿಯ ಕಿವಿ; ಕೆಸರು ಕಂಬದ ಮನಸ್ಸು; ಬಂಗಿಕೋರರ ಬುದ್ಧಿ. ಯಾವ ಉಪಾಯವೂ ಹೊಳೆಯುವುದಿಲ್ಲವಲ್ಲಾ!" ಎಂದು ಯೋಚಿಸುತ್ತಿದ್ದಾಗ ಬಲ್ಲಾಳನ ಭಟನು ಬಂದು "ಬುದ್ಧಿ, ಅಟ್ಟ ಅನ್ನದಲ್ಲಿ ಉಟ್ಟ ಉಡಿಗೆಯಲ್ಲಿ ಹೊರಟು ಬರಬೇಕೆಂದು ಅಪ್ಪಣೆಯಾಗಿದೆ" ಎಂದನು. ಚೆಂದುಗಿಡಿಯು ಮರುಮಾತ ನಾಡದೆ ಅಲ್ಲಿಂದ ಎದ್ದು ಕೇಮರನ ಬೀಡಿಗೆ ಹೋದನು.

ಕೇಮರಬಲ್ಲಾಳನು ಒಳಗಿನ ಅರೆಯಲ್ಲಿ ಹಾಸಿಗೆಯ ಮೇಲೆ ಕುಳಿತುಕೊಂಡಿದ್ದನು. ಚೆಂದುಗಿಡಿಯು ಬಂದು ಕೈಮುಗಿದು, ಕೈಕಟ್ಟಿ ನಿಂತನು. ಕೇಮರನು ಅವನಿಗೆ ಕುಳಿತುಕೊಳ್ಳಲು ಹೇಳಿ, ಮುಗುಳುನಗೆಯಿಂದ "ರಹಸ್ಯದ ಕಾರ್ಯ; ರಾಯಸ ಬಂದಿದೆ" ಎಂದನು.

ಚೆಂದುಗಿಡಿಯು "ಬುದ್ಧಿ" ಎಂದು ಗಂಟಲು ಹಿಸುಕಿದಂತೆ ಹೇಳಿ, ಮೊಳಕೈಗಳನ್ನು ಒರಸುತ್ತ "ಬುದ್ಧಿ" ಎಂದು ಸ್ವರ ಎತ್ತಿದನು. ಕೇಮರ ಬಲ್ಲಾಳನು "ನಮ್ಮ ಪಡುಮಲೆ ರಾಜನಿಂದ ಓಲೆ ಉಡುಗೊರೆ ಸಹಿತ ಆಳು ಬಂದಿದೆ. ಭಾರಿ ರಾಯಸ. ಕೋಟಿ ಚೆನ್ನಯರನ್ನು ಕುರಿತು ಬಲ್ಲಾಳರು ಬರೆಸಿದ್ದಾರೆ" ಎಂದು ಹೇಳಿ, ಓಲೆಯನ್ನು ಚೆಂದುಗಿಡಿಯ ಕೈಯಲ್ಲಿ ಕೊಟ್ಟನು.

ಚೆಂದುಗಿಡಿಯ ಎದೆಯು ಬಡೆಯತೊಡಗಿತು. ಅವನು ನಡುಗುವ ಕೈಗಳಲ್ಲಿ ಓಲೆಯನ್ನು ಹಿಡಿದು, ಒಮ್ಮೆ ಓದಿಕೊಂಡನು; ಒಮ್ಮೆ ಒಳಕ್ಕೆ ಸರಿದ ನಾಲಗೆಯನ್ನು ಈಚೆಗೆ ತೆಗೆದನು. ಅವನು ಅದನ್ನು ಇನ್ನೊಮ್ಮೆ ಚೆನ್ನಾಗಿ ಹಿಂದು ಮುಂದು ಮಗುಚಿ ನೋಡಿ, "ಬುದ್ಧಿ, ರಾಯಸದ ಒಕ್ಕಣೆ ಸರಿಯಿದೆ. ಬಾಳೆಯಾಗಿ ಬೆಳೆಸಿದ್ದು ತಾಳೆಯಾಗಿ ತಲೆಯನ್ನು ಜಜ್ಜಿತಲ್ಲಾ" ಎಂದನು.

ಕೇಮರ ಬಲ್ಲಾಳನು "ಓಲೆಯನ್ನು ಓದಬೇಕಾದ್ದಿಲ್ಲ. ಒಟ್ಟೇನು ತಿಳಿಸಿಬಿಡು" ಎಂದು ಹೇಳಿ, ತನ್ನ ಬೆಳ್ಳಿಯ ಕರಡಿಗೆಯೊಳಗಿಂದ ಒಂದು ಬಂಗಿಯ ಉಂಡೆಯನ್ನು ತೆಗೆದು ಮುಕ್ಕಿದನು.

ಚೆಂದುಗಿಡಿಯು ಇನ್ನೊಮ್ಮೆ ಓಲೆಯನ್ನು ಓದಿದಂತೆ ನಟಿಸಿ, "ಬುದ್ಧಿ" ಪಡುಮಲೆಯ ರಾಜ್ಯದಲ್ಲಿ ಬಿಲ್ಲವರಿಗೆ ಹುಟ್ಟಿದ ಕೋಟಿಚೆನ್ನಯರು ಮಲ್ಲಯ ಬುದ್ಧಿವಂತನನ್ನು ಕೊಂದು, ಭಾರಿ ಕೊಲೆಮಾಡಿ, ತಲೆ ಮರೆಸಿಕೊಂಡು ಓಡಿಹೋಗಿದ್ದಾರೆ. ಪಂಜದ ರಾಜ್ಯದಲ್ಲಿ ಕಾಲಿಟ್ಟರೆ ಅವರನ್ನು ಹಿಡಿದು ಕಳುಹಿಸಬೇಕು..."

ಕೇಮರ ಬಲ್ಲಾಳ—"ಇಲ್ಲದಿದ್ದರೆ..."

ಚೆಂದುಗಿಡಿ "ಇಲ್ಲದಿದ್ದರೆ.—ಇಲ್ಲದಿದ್ದರೆ ಅವರನ್ನು ಇಲ್ಲೇ ಕೊಲ್ಲಿಸಬೇಕು" ಎಂದು ನಾಲಗೆ ಕಚ್ಚಿ ಹೇಳಿದನು. ಈ ಕಡೆಯ ಮಾತು ರಾಯಸದಲ್ಲಿ ಇರಲಿಲ್ಲ.

ಕೇಮರ ಬಲ್ಲಾಳ—"ಕಳುಹಿಸದಿದ್ದರೆ ಅವನು ಏನು ಮಾಡುತ್ತಾನಂತೆ?"

ಚೆಂದುಗಿಡಿ—"ಅವರನ್ನು ಹಿಂದಕ್ಕೆ ಕಳುಹಿಸಿಬಿಟ್ಟು, ಇಲ್ಲವೆ ಕೊಂದುಹಾಕಿ, ನಮ್ಮೊಳಗಿನ ಪೂರ್ವ ಸ್ನೇಹವನ್ನು ಬೆಳೆಸುವುದು; ನಮ್ಮ ಪಡುಮಲೆ ಬೀಡಿನ ಮಾನಮರ್ಯಾದೆಗಳನ್ನು ಕಾಪಾಡುವುದು' —ಹೀಗೆ ಸಾಷ್ಟಾಂಗ ನಮಸ್ಕಾರ ಪೂರ್ವಕವಾಗಿ ಬರೆಯಿಸಿರುತ್ತಾರೆ."

ಕೇಮರ ಬಲ್ಲಾಳ—"ಸರಿ. ಬೀಡಿನ ಗೌರವ ನಮಗೂ ಒಂದೇ, ಅವರಿಗೂ ಒಂದೇ. ಹಾಗಾದರೆ ಅವರ ಬೀಡಿನ ಮರ್ಯಾದೆಯನ್ನು ನಾವು ಕಾಯಬೇಕಷ್ಟೆ..."

ಚೆಂದುಗಿಡಿ—"ಬುದ್ಧಿ. ಅಪ್ಪಣೆಯಾದರೆ ನಾನು ಮಾಡುತ್ತೇನೆ"

ಹೀಗೆ ಹೇಳಿ ಚೆಂದುಗಿಡಿಯು ಪಡುಮಲೆಯಿಂದ ಬಂದ ಓಲೆಯ ಒಕ್ಕಣೆಯಂತೆ ನಡಿಸತಕ್ಕ ಉಪಾಯಗಳನ್ನು ಬಲ್ಲಾಳನಿಗೆ ಸೂಚಿಸಿ, ಹೊತ್ತು ಮುಳುಗುವಷ್ಟರೊಳಗೆ ಬೀಡಿನಿಂದ ತನ್ನ ಮನೆಗೆ ಹಿಂದಿರುಗುತ್ತಿದ್ದನು.

ಆ ಹೊತ್ತಿಗೆ ಚೆಂದುಗಿಡಿಯ ಮನೆಯ ದಾರಿ ಹಿಡಿದು ಕೋಟಿಚೆನ್ನಯರೊಡಗೂಡಿ ಈಚೆಗೆ ಬರುತ್ತಿದ್ದ ಪಯ್ಯಬೈದ್ಯನು ಚೆಂದುಗಿಡಿಯನ್ನು ಕಂಡು, "ಅಯ್ಯಾ! ನಾವು ನಿಮ್ಮಲ್ಲಿಗೆ ಹೋಗುತ್ತಿದ್ದೆವು. ನಿಮ್ಮನ್ನು ಬೀಡಿಗೆ ಕರೆಯಿಸಿದ್ದಾರೆಂದು ಕೇಳಿ, ಈ ದಾರಿಯಾಗಿ..."

ಚೆಂದುಗಿಡಿಯು ಅವನನ್ನು ಮಾತು ಮುಗಿಸಲಿಕ್ಕೆ ಬಿಡದೆ, ಅವನ ಕೈಹಿಡಿದು, ಆ ಮೂವರನ್ನೂ ತನ್ನ ಮನೆಗೆ ಕರೆದುಕೊಂಡು ಹೋದನು. ಕೂಡಲೇ ಒಳಗಿನಿಂದ ಹಾಲಿನ ಗಿಂಡಿ, ಸಕ್ಕರೆಯ ತಬಕು, ಕೆಂದಾಳೆ ಸೀಯಾಳ ಇವು ಬಂದು ಉಪಚಾರವಾಯಿತು; ಆದರೆ ಅವನ್ನು ಮಾತ್ರ ಯಾರೂ ಮುಟ್ಟಲಿಲ್ಲ. ತರುವಾಯ ವೀಳ್ಯದ ತಟ್ಟೆ ಬಂತು. ಪಂಜವಳ್ಳಿ ಹಸಿಯೆಲೆ, ಇಬ್ಭಾಗದ ಅಡಕೆಯ ಹೋಳು, ಬೆಣ್ಣೆಯಂಥ ಬಿಳಿಸುಣ್ಣ, ಸೂರತಿ ಹೊಗೆಸೊಪ್ಪು, ಪಯ್ಯನು ಎಲೆಯನ್ನು ಒರಸಿ, ಉಗುರಿಂದ ಕುಡಿಯನ್ನು ಚಿವುಟಿ, ನೆತ್ತಿಗೆ ಸುಣ್ಣ ಇಟ್ಟು ಸವರುತ್ತಿದ್ದಾಗ, ಚೆಂದುಗಿಡಿಯು ಕಂಚಿನ ತಳಿಗೆಯನ್ನು ಅವನ ಪಕ್ಕದಲ್ಲಿ ಮಡಗಿ, "ನೀವು ಬಂದ ಕಾರ್ಯ ಗೊತ್ತಾಯಿತು" ಎಂದು ಮೊದಲು ಮಾಡಿದನು.

ಚೆನ್ನಯ—"ಗೊತ್ತಾಗುವುದಕ್ಕೆ ಆರು ತಿಂಗಳು ಹಿಡಿದರೆ, ಸಲಿಸುವುದಕ್ಕೆ ಎಷ್ಟು ಕಾಲ ಬೇಕಾಗುವುದೋ?"

ಕೋಟಿ—"ಅಯ್ಯಾ, ನಾವು ಬಲ್ಲಾಳರ ಭೇಟಿಯನ್ನು ನಿರೀಕ್ಷಿಸಿ ಬಹಳ ಕಾಲದಿಂದ ಪೆರವರ ಮನೆಯಲ್ಲಿ ಇದ್ದೇವೆ. ಒಮ್ಮೆ ಅವರ ದರುಶನವಾಯಿತೆಂದರೆ, ನಾವು ಇದುವರೆಗೆ ಕಾದುಕೊಂಡಿದ್ದ ಬೇಸರ ಹೋಗಿ ಬಿಡುತ್ತದೆ. ಬಲ್ಲಾಳರನ್ನು ನಿಮ್ಮ ಮೂಲಕವೇ ಕಾಣಬೇಕೆಂದು ನಮ್ಮ ಬಾವಯ್ಯನ ಅಭಿಪ್ರಾಯ."

ಪಯ್ಯಬೈದ್ಯ—"ಏನು ಹೇಳುತ್ತೀ, ಬಾವಾ? ನಮಗೆ ಬೇಕಾದಾಗ ಬಲ್ಲಾಳರು ನೋಡಸಿಗಲಿಕ್ಕೆ ಅವರೇನು ನಾವು ಕಟ್ಟುವ ತಾಳೆಯ ಮರವೋ? ಆಳ ನೋಡಿ ತೊರೆಯನ್ನು ದಾಟಬೇಕು, ವೇಳೆ ನೋಡಿ ದೊರೆಯನ್ನು ಕಾಣಬೇಕು; ಅರಸನ ಚಿತ್ತ, ಬೀಡಿನ ಸಂಗತಿ, ಅಲ್ಲವೆ ಚೆಂದುಗಿಡಿ?"

ಚೆನ್ನಯ—"ಇನ್ನಾದರೂ ಕಾಣುವುದಕ್ಕೆ ಇದೆಯೋ ಇಲ್ಲವೋ?"

ಚೆಂದುಗಿಡಿ—"ಅದಕ್ಕೇನು ಅಡ್ಡಿ?"

ಚೆನ್ನಯ—"ಹಾಗಾದರೆ, ಯಾವಾಗ?"

ಚೆಂದುಗಿಡಿ—"ನಾಳೆ."

ಪಯ್ಯಬೈದ್ಯ—"ನಾಳೆ ಸಂಕ್ರಾಂತಿ, ನಾಳೆ ಬೇಡ—ನಾಡದು ಆಗಬಹುದು."

ಚೆಂದುಗಿಡಿ—"ನಾಡದು ಸೋಮವಾರ—"

ಚೆನ್ನಯ—"ಎಷ್ಟು ಹೊತ್ತಿಗೆ?"

ಚೆಂದುಗಿಡಿ—"ಪಟ್ಟಿಯಿಂದ ಹೋದ ದನ ಹಟ್ಟಿಗೆ ಬರುವುದರೊಳಗೆ."

ಕೋಟಿ—"ಆ ದಿನ ನಿಮಗೆ ಬಿಡುವು ಇದೆಯಷ್ಟೆ."

ಚೆಂದುಗಿಡಿ—"ಅದಕ್ಕೇನು ಅಡ್ಡಿ?"

ಇಷ್ಟಾದ ಮೇಲೆ ಚೆಂದುಗಿಡಿಯ ಮನೆಯಿಂದ ಮೂವರೂ ಹಿಂದೆರಳಿದರು. ದಾರಿಯಲ್ಲಿ ಚೆನ್ನಯನು "ಅಣ್ಣ, ಈ ಚೆಂದುಗಿಡಿಯನ್ನು ನೋಡಿದಾಗ ನಿನಗೆ ಯಾರ ನೆನಪಾಗುತ್ತದೆ?" ಎಂದು ಕೇಳಿದನು.

ಕೋಟಿ—"ಅವನು ಗಿಡುಗನ ಹಾಗೆ ಕಾಣುತ್ತಾನೆ."

ಚೆನ್ನಯ—"ಅವನ ಬಾಯಿ ನೆಗಳೆಯ ಬಾಯಿ, ನನಗೆ ಜೋಯಿಸರು ಹೇಳಿದ ನೆಗಳೆಯ ನೆನಪು ಬರುತ್ತದೆ—ಅಲ್ಲವೆ ಅಣ್ಣ?"

ಅಷ್ಟರಲ್ಲಿ ಮನೆಯು ಹತ್ತಿರವಾಯಿತು; ಮೂವರೂ ಒಳಗೆ ಹೋದರು.

ಸೋಮವಾರ ಸೂರ್ಯೋದಯವಾಯಿತು. ಕೋಟಿಚೆನ್ನಯರು ಹೊತ್ತು ನೆತ್ತಿಗೆ ಬರುವುದರೊಳಗೆ ಮುಂಗೈಗೆ ಮುಟ್ಟುವಂತೆ ಗಂಧವನ್ನು ಹಚ್ಚಿಕೊಂಡು, ಹಣೆ ತುಂಬುವಂತೆ ತುಳಸಿಕಟ್ಟೆಯ ಮೃತ್ತಿಕೆಯಿಂದ ನಾಮವನ್ನು ಎಳೆದುಕೊಂಡು, ತೊಡೆಯಗಲದ ಚಲ್ಲಣವನ್ನು ಉಟ್ಟು, ಬಲು ಉದ್ದದ ಪಟ್ಟೆಯ ದಟ್ಟಿಯನ್ನು ನಡುವಿಗೆ ಬಿಗಿದು, ಗಿಳಿಬಣ್ಣದ ಟೊಪ್ಪಿಗೆಯಿಂದ ತಲೆಯನ್ನು ಮುಚ್ಚಿ, ರಾಮ ಲಕ್ಷ್ಮಣ ಎಂಬ ಎರಡು ಕತ್ತಿಗಳನ್ನು ಕೈಯಲ್ಲಿ ಹಿಡಿದುಕೊಂಡು ಕೇಮರ ಬಲ್ಲಾಳನ ದರ್ಶನಕ್ಕಾಗಿ ಹೊರಟರು.

ಅವರು ದಾರಿಯನ್ನು ಸೇರುವುದರೊಳಗೆ ಪಯ್ಯಬೈದ್ಯನು ಕಲ್ಲೆಡವಿ ಬಿದ್ದು, ಬಿದ್ದರೂ ಬಿದ್ದಂತೆ ತೋರಿಸಿಕೊಳ್ಳದೆ ಮುಂದೆ ಹೋಗುವವರನ್ನು ಕುರಿತು 'ಒಂದು ಗಳಿಗೆ ತಡೆಯಿರಿ. ನನಗೆ ನಿನ್ನೆಯಿಂದ ಅಪಶಕುನಗಳೇ ಕಾಣುತ್ತವೆ. ರಾತ್ರಿಕೆಟ್ಟ ಕನಸು ಬಿತ್ತು. ಕರ್ಪದಲ್ಲಿ ಬಿದ್ದು ಹೊರಳಾಡಿದ ಕಾಡಾನೆಯು ನನ್ನನ್ನು ಸೊಂಡಿಲಲ್ಲಿ ಹಿಡಿದು ನೆಲಕ್ಕೆ ಅಪ್ಪಳಿಸಿ ಬಿಟ್ಟಂತೆ ಕನಸಾಯಿತು. ಎಚ್ಚತ್ತು ಹೊರಬರುವಾಗ ಚೆನ್ನಯನು ನಿದ್ದೆಯಲ್ಲಿ "ಅಣ್ಣಾ, ಕೋಟಿ" ಎಂದು ಕನಿಕರದಿಂದ ಕೂಗಿದ್ದನ್ನು ಕೇಳಿದೆ. ಈಗ ದಾರಿಯಲ್ಲಿ ಕಾಲಿಡುವಾಗ ಕಾಲು ಮುಗ್ಗರಿಸಿತು. ಆದುದರಿಂದ ನೀವು ಈ ಕೆಂದಾಳೆಯ ಪದ್ಮಕಟ್ಟೆಯ ಮೇಲೆ ಕುಳಿತುಕೊಂಡು ಅಪಶಕುನವನ್ನು ಕಳೆಯಲೇಬೇಕು" ಎಂದನು. ಹೀಗೆ ದುಶ್ಶಕುನಗಳನ್ನು ನಿವಾರಿಸಿಕೊಂಡು ಅವನು ಬೀಡನ್ನು ಮುಟ್ಟುವಾಗ ಹೊತ್ತು ಇಳಿಯಲಿಕ್ಕಾಯಿತು. ಆ ಇಳಿಹೊತ್ತಿನಲ್ಲಿ ಚೆಂದುಗಿಡಿಯ ಬೆನ್ನುಹಿಡಿದು, ರಾಜಾಂಗಣವನ್ನು ದಾಟಿ ಬರುತ್ತಿದ್ದ ಆ ವೀರಕುಮಾರರ ಬಳಿ ನಗುವಿನ, ನಗುಮೊಗದ, ಮೊಗಸಿರಿಯನು, ಸಿರಿಸಿಂಗಾರವನ್ನು, ನೋಡುವುದಕ್ಕೆ ನೂರು ಕಣ್ಣು, ಬಣ್ಣಿಸುವುದಕ್ಕೆ ನೂರು ನಾಲಗೆ ಇದ್ದರೂ ಸಾಲದು.

ಅವರು ಚಾವಡಿಯ ಮೇಲೆ ಬರುವಷ್ಟರಲ್ಲಿ ಚೆಂದುಗಿಡಿಯು ಒಳಕ್ಕೆ ಹೋಗಿ ಒಂದು ನಿಮಿಷದಲ್ಲಿಯೇ ಹೊರಕ್ಕೆ ಬಂದು, "ಬೈದ್ಯರೇ, ನಿಮ್ಮ ಕಾರ್ಯವು ರಹಸ್ಯದಿದ್ದರೆ, ನಿಮ್ಮಿಬ್ಬರಿಗೆ ಮಾತ್ರ ಒಳಗೆ ಅಪ್ಪಣೆಯಾಗಿದೆ" ಎಂದು ಮೆತ್ತಗೆ ಹೇಳಿದನು.

ಅದಕ್ಕೆ ಕೋಟಿಯು "ಯಾವ ಗುಟ್ಟಾದರೂ ಬೀಡಿನಲ್ಲಿ ನಿಮ್ಮ ಕಿವಿಯ ಹೊರಗಲ್ಲವಷ್ಟೆ" ಎಂದನು.

ಚೆಂದುಗಿಡಿಯು "ಬಲ್ಲಾಳರ ಅಪ್ಪಣೆಯಂತೆ ನಡೆಯಬೇಕಾದದ್ದು ನನ್ನ ಕೆಲಸ. ಬಲ್ಲಾಳರಿಗೆ ಬೆಳಗ್ಗಿನಿಂದ ಮೈಯಲ್ಲಿ ಕೊಂಚ ಸರಿಯಿಲ್ಲವಂತೆ ಅದಕ್ಕೆ ನೀವಿಬ್ಬರೇ ಅವರನ್ನು ಹೋಗಿ ಕಾಣುವುದು ಮೇಲೆಂದು ನನಗೆ ತೋರುತ್ತದೆ. ಅದೇ—ಹೊಸದಾಗಿ ಕಟ್ಟಿಸಿದ ಮೇಲ್ಮಾಳಿಗೆ; ಅವರು ಅಲ್ಲಿಯೇ ಓಲಗವಾಗಿದ್ದಾರೆ. ನೀವು ಒಳಕ್ಕೆ ಹೋಗಿ; ನಾವು ಇಲ್ಲಿಯೇ ಕಾವಲು ಇದ್ದೇವೆ" ಎಂದು ಅವರಿಬ್ಬರನ್ನು ಒಡಂಬಡಿಸಿದನು.

ಕೋಟಿಚೆನ್ನಯರು ಒಳಕ್ಕೆ ಹೋಗಿ, ಮಾಳಿಗೆಯ ಬೆಡಗು ಗೋಡೆಯ ಒತ್ತಿನಲ್ಲಿದ್ದ ಗದ್ದಿಗೆಯನ್ನು ಸಮೀಪಿಸುವಷ್ಟರಲ್ಲಿ ಅದರ ಮೇಲೆ ಅರೆ ಒರಗಿದ್ದವನೊಬ್ಬನು ಮೈಯಲುಗಿಸಿ, "ಬನ್ನಿ, ಇಲ್ಲೇ ಕುಳಿತುಕೊಳ್ಳ ಬಹುದು" ಎಂದು ಹೇಳಿ, ಹೂವಿನ ಚಾಪೆ ಹಾಸಿದ್ದ ಹಲಗೆಯನ್ನು ತೋರಿಸಿ, "ಹಸೆ ಇದೆ, ಕುಳಿತುಕೊಳ್ಳಿ; ಇದು ನಾವು ಕಟ್ಟಿಸಿದ ಹೊಸ ಮಾಳಿಗೆ—ಹೇಗಿದೆ?" ಎಂದು ತಾನೇ ಮಾತನ್ನು ಪ್ರಾರಂಭಿಸಿದನು.

ಅದಕ್ಕೆ ಚೆನ್ನಯನು "ಬುದ್ಧಿ, ಕೇಳಬೇಕೆ? ಮಾಳಿಗೆ ಚೆನ್ನಾಗಿದೆ. ಬಳ್ಳಿಯಷ್ಟು ಬಾವು ಇಲ್ಲ, ಮೊಗ್ಗೆ ಯಷ್ಟು ಮೊನೆ ಇಲ್ಲ" ಎಂದನು.

ಕೋಟಿಚೆನ್ನಯರ ಕಣ್ಣುಗಳು ಗದ್ದಿಗೆಯ ಮೇಲೆಯೇ ಇದ್ದಾಗ, ಅವರ ಕಿವಿಯಲ್ಲಿ ಬಾಗಿಲಿನವನು ಬಾಗಿಲು ಮುಚ್ಚಿದ ಸದ್ದು ಬಿತ್ತು; ಕೀಲಿನವನು ಕೀಲು ಹಾಕಿದ ಶಬ್ದವು ಕೇಳಿಸಿತು. ಅವರಿಗೆ ತಾವು ಸೆರೆ ಬಿದ್ದೆವೆಂದು ಗೊತ್ತಾಯಿತು. ಕೋಟಿಯು "ತಮ್ಮಾ, ಹಾಲೆಂದು ಬಾಯಿಗೆ ಮುಟ್ಟಿಸುವಾಗ ಅದು ಕಳ್ಳಿನ ಹಾಲಾಯಿತಲ್ಲಾ! ದಿಂಬು ಎಂದು ಒರಗುವಷ್ಟರಲ್ಲಿ ಅದು ಮುಳ್ಳಿನ ಹಾಸಾಯಿತಲ್ಲಾ! ಹಾಸಿಗೆ ಎಂದು ನಂಬಿದ್ದು ಅಂಬು ಆಯಿತಲ್ಲಾ!" ಎಂದು ಕನಲಿದನು. ಗದ್ದಿಗೆಯ ಮೇಲೆ ಕುಳಿತವನು ಅವರನ್ನು ನೋಡಿ ನಕ್ಕನು. ಚೆನ್ನಯನು ಅವನನ್ನು ದೃಷ್ಟಿಸುತ್ತಾ "ಅಣ್ಣಾ! ಇವನು ಬಲ್ಲಾಳನಲ್ಲ. ನಿಜವಾಗಿಯೂ ಬಲ್ಲಾಳನಲ್ಲ. ನೀನು ಹೇಳಿದ್ದು ಸರಿಯೆ. ಬಲ್ಲಾಳನಿಗೆ ಗಿಳಿ ಮೂಗು, ಕುಡಿತೆ ಕಿವಿ, ಜಳ್ಳು ಹೊಟ್ಟೆ, ಅಂಡೆ ಕಾಲು ಎಂದು ಹೇಳುವುದನ್ನು ಕೇಳಿದ್ದೇನೆ. ಇವನ ಮೈಕಟ್ಟು ಗರಡಿಯಲ್ಲಿ ಆಟವಾಡಿದ ದೇಹದಂತಿದೆ. ಇವನು ಬಲ್ಲಾಳನಿಗೆ ಹುಟ್ಟಿದ......"

ಅಷ್ಟರಲ್ಲಿ ಗದ್ದಿಗೆಯ ಮೇಲಿದ್ದವನು ಚಿರ್ರನೆ ಚೀರಿ, ಕತ್ತಿಯನು ಜಳಪಿಸುತ್ತ, ಕೆಳಕ್ಕೆ ಇಳಿದು ಮುಂದೆ ಬರುತ್ತಿದ್ದನು.

ಚೆನ್ನಯನ ಕಣ್ಣು ಅರಳಿತು, ಹಲ್ಲು ಕಡಿಯಿತು, ಸೊಳ್ಳೆ ತೆರೆಯಿತು. ಬಿಸಿಯುಸಿರು ಬುಸ್ಸೆಂದು ಹೊರಟಿತು. ಮೈಕೂದಲು ಜುಮ್ಮೆಂದು ಎದ್ದು ನಿಂತಿತು.

ಅದನ್ನು ಕಂಡು ಕೋಟಿಯು ಅವನ ಕೈ ಹಿಡಿದು "ಚೆನ್ನಯ ತಾಳು, ದುಡುಕಬೇಡ" ಎಂದು ಹೇಳಿ, ಕತ್ತಿ ಹಿರಿದು ತನ್ನ ಮುಂದೆ ನಿಂತವನನ್ನು ಗುರುತಿಸಿ, "ತಮ್ಮಾ, ಇವನು ಬಲ್ಲಾಳನಲ್ಲ, ಬಲ್ಲಾಳನ ವೇಷದಲ್ಲಿ ಕುಳಿತಿದ್ದ ಅವನ ಬೀಡಿನ ಕೊಟ್ವಾರಿ" ಎಂದು ಹೇಳಿ ಎದ್ದು ನಿಂತನು.

ಆದರೆ ಗದ್ದಿಗೆಯಿಂದ ಇಳಿದ ಕೊಟ್ವಾರಿಯು ಕೋಟಿಚೆನ್ನಯರನ್ನು ಎದುರಿಸದೆ, ಬಡಗು ಗೋಡೆ ಯಲ್ಲಿದ್ದ ಬಾಗಿಲನ್ನು ಸರ್ರನೆ ತೆರೆದು, ಅದನ್ನು ದಾಟಿ, ತನ್ನ ಬೆನ್ನು ಹಿಂದೆಯೇ ಅದನ್ನು ಕೀಲಿಸಿ ಹೊರಕ್ಕೆ ಹೋದನು. ಕೂಡಲೇ ನಗಾರಿ ಬಡಿದಂತೆ ಡಬ ಡಬ ಡಬ ಶಬ್ದವಾಯಿತು.

"ಪಡುಮಲೆಯಿಂದ ಬಂದವರನ್ನು ಸಾಂಗವಾಗಿ ಕಂಡದ್ದಾಯಿತು. ಇನ್ನು ಇವರು ನಮ್ಮ ಬೀಡಿನಲ್ಲಿ ಯಾರ ತೊಂದರೆಯೂ ಇಲ್ಲದೆ ಬೇಕಾದಷ್ಟು ಕಾಲ ಸುಖವಾಗಿ ಇರಬಹುದು" ಎಂಬ ಮಾತುಗಳು ಆಚೆಯಿಂದ ಕೇಳಿಬಂದವು; ಧ್ವನಿಯು ಚೆಂದುಗಿಡಿಯ ದನಿ.

ಇಕ್ಕೆಡೆಯ ಬಾಗಿಲುಗಳೂ ಮುಚ್ಚಿಬಿಟ್ಟಿದ್ದ ಮೇಲ್ಮಾಳಿಗೆಯಲ್ಲಿ ಕೋಟಿಚೆನ್ನಯರು ಚಾಪೆಯೊಳಗೆ ಹಿಡಿದಿದ್ದ ಹಾವಿನಂತೆ ಬುಸುಗುಟ್ಟುತ್ತ "ಅಯ್ಯೋ! ವಿಧಿಯೇ! ಇದು ಪಡುಮಲೆಯುವರ ಹಗೆಯೋ? ಕೇಮರನ ಮೋಸವೋ? ನಮ್ಮ ಗ್ರಹಚಾರವೋ? ಮಳೆಗಾಲದಲ್ಲಿ ಮೋಡದ ಮೇಲೆ ಮೋಡವು ಕವಿಯುವಂತೆ ನಮ್ಮ ಮೇಲೆ ಆಪತ್ತಿನ ಮೇಲೆ ಆಪತ್ತು ಬರುತ್ತಿದೆಯಲ್ಲಾ! ನಮಗೆ ಸಾಯುವ ಕಾಲವು ಬಂತೇ? ಇದ್ದಾಗ ನಾವು ಓಲಗದ ಬಂಟರು; ಸತ್ತರೆ ವೈಕುಂಠದ ನಂಟರು. ನಾವು ಒಟ್ಟಿಗೆ ಹುಟ್ಟಿದೆವು. ಒಟ್ಟಿಗೆ ಬೆಳೆದೆವು; ಇನ್ನು ಒಟ್ಟಿಗೆ ಏಕೆ ಸಾಯಬಾರದು?" ಎಂದು ನಾನಾ ಪ್ರಕಾರವಾಗಿ ಮರುಗುತ್ತಿದ್ದರು.

ನಡುಇರುಳು ದಾಟಿ ಹೋಗಿ, ಚಂದ್ರನು ಮುಳುಗುವುದಕ್ಕಾದರೂ ಇಬ್ಬರೂ 'ಮುಂದೇನು ಗತಿ?' ಎಂದು ತಮ್ಮೊಳಗೇ ವಿಚಾರಿಸುತ್ತ, ಚೆಂದುಗಿಡಿಯ ಮೋಸವನ್ನು ನೆನೆಸುತ್ತಾ ಕಣ್ಣಿಗೆ ನಿದ್ದೆ ಬಾರದೆ ಕುಳಿತು ಕೊಂಡಿದ್ದರು. ಅಷ್ಟೊತ್ತಿಗೆ ಅಸ್ತಕ್ಕೆ ಹೋಗುವ ಚಂದ್ರನು ಆ ಮಾಳಿಗೆಯ ಒಂದು ಸಣ್ಣ ಕಿಟಿಕಿಯೊಳಗಿನಿಂದ ಇವರಿಬ್ಬರನ್ನೂ ಇಣುಕಿ ನೋಡಿ, ಕೆಳಕ್ಕೆ ಇಳಿದನು. ಚೆನ್ನಯನು ಕಿಟಿಕಿಯನ್ನು ನೋಡಿ, "ಅಣ್ಣಾ, ನನ್ನನ್ನು ಒಂದು ನಿಮಿಷ ನಿನ್ನ ಹೆಗಲಮೇಲೆ ಹೊತ್ತುಕೊಂಡರೆ, ನಾವು ಇಲ್ಲಿಂದ ತಪ್ಪಿಸಿಕೊಳ್ಳಬಹುದು" ಎಂದನು.

ಕೋಟಿಯು ಮೊಣಕಾಲೂರಿ, ತಮ್ಮನನ್ನು ಹೆಗಲಮೇಲೆ ಹತ್ತಿಸಿ ಎದ್ದುನಿಂತನು. ಹಾಗೆ ನಿಲ್ಲಲು, ಚೆನ್ನಯನ ಕೈಗಳಿಗೆ ಆ ಚಿಕ್ಕ ಕಿಟಿಕಿಯು ಎಟುಕಿತು. ಕೂಡಲೇ ಅವನು ಅದನ್ನು ಬಲವಾಗಿ ನೂಕಿ ಅಗಲಿಸ ಲಿಕ್ಕೆ ಯತ್ನಿಸಿದನು. ಕಿಟಿಕಿಯು ಸ್ವಲ್ಪ ಅಲುಗಾಡಿದಂತೆ ತೋರಿತು. ಚೌಕಟ್ಟನ್ನು ಹಿಡಿದು ಎರಡೂ ಕೈಗಳಿಂದ ಜಗ್ಗಿಸತೊಡಗಿದನು. ಕ್ರಮೇಣ ಚೌಕಟ್ಟು ಸಡಿಲಾಗುತ್ತಾ, ಕೊನೆಗೆ ಗೋಡೆಯಿಂದ ಎದ್ದು ಬಂದಿತು. ಚೆನ್ನಯನು ಅದನ್ನು ಸದ್ದಿಲ್ಲದೆ ಹೊರಕ್ಕೆ ಎಳೆದು, ಮೆಲ್ಲನೆ ಕೆಳಗಿಳಿಸಿದನು. ಕಿಟಿಕಿ ಇದ್ದೆಡೆಯಲ್ಲಿ ಗೋಡೆಯೊಳಗೆ ಸಾಕಷ್ಟು ದೊಡ್ಡ ಕಂಡಿ ಬಿಟ್ಟುಕೊಂಡಿತು. ತರುವಾಯ ಅಣ್ಣತಮ್ಮಂದಿರು ತಮ್ಮ ನಡುವಿಗೆ ಬಿಗಿದುಕೊಂಡಿದ್ದ ದಟ್ಟಿ ಗಳನ್ನು ಬಿಚ್ಚಿ, ಅವೆರಡನ್ನೂ ಉದ್ದದ ಒಂದೇ ದಟ್ಟಿಯಾಗುವಂತೆ ಗಂಟಿಕ್ಕಿ, ಅದನ್ನು ಇಕ್ಕೆಡೆಗಳಿಂದ ಚೆನ್ನಾಗಿ ಎಳೆದು ನೋಡಿದರು. ಈ ಉದ್ದದ ದಟ್ಟಿಯ ಒಂದು ತುದಿಯನ್ನು ಚೆನ್ನಯನು ಕೈಯಲ್ಲಿ ತೆಗೆದುಕೊಂಡನು. ದಟ್ಟಿಯ ಬಹುಭಾಗವನ್ನು ಕೋಟಿಯು ನೆರಿಗೆನೆರಿಗೆಯಾಗಿ ಕಟ್ಟಿಕೊಂಡನು. ಈಗ ತಮ್ಮನು ಅಣ್ಣನ ಹೆಗಲನ್ನು ಮತ್ತೊಮ್ಮೆ ಏರಿ, ಗೋಡೆಯಲ್ಲಿದ್ದ ಆ ಸಂದಿನಿಂದ ಮೈಯನ್ನು ತೂರಿಸಿಕೊಂಡು, ದಟ್ಟಿಯ ತುದಿಯನ್ನು ಕೈಯಲ್ಲಿ ತೆಗೆದುಕೊಂಡು ಹೊರಕ್ಕೆ ಬಂದನು. ಒಳಗಿನಿಂದ ಕೋಟಿಯು ದಟ್ಟಿಯ ಭಾಗವನ್ನು ಬಿಡುವಷ್ಟಕ್ಕೆ ಚೆನ್ನಯನು ತನ್ನ ಕಾಲುಗಳನ್ನು ಒಂದೊಂದಾಗಿ ಗೋಡೆಗೆ ಆನಿಸಿಕೊಂಡು ಆ ದಟ್ಟಿ ಹಿಡಿದು ಮಿಾಟುತ್ತಾ ಮಿಾಟುತ್ತಾ ಕೆಳಕ್ಕೆ ಇಳಿದನು. ಆಗ ಚೆನ್ನಯನು ಅದನ್ನು ಕೆಳಗಿನಿಂದ ಎಳೆಯುವಷ್ಟಕ್ಕೆ ಒಳಗಿದ್ದ ಕೋಟಿಯು ಅದನ್ನು ಸೆಳೆದು ಸೆಳೆದು ಗೋಡೆಯನ್ನು ಹತ್ತುತ್ತ ಕಿಟಿಕಿಯ ಕನ್ನವನ್ನು ಮುಚ್ಚಿದನು; ಅನಂತರ ಆ ದಟ್ಟಿಯ ತುದಿಯನ್ನು ಮಾಳಿಗೆಯ ಮಾಡಿನ ಮರದ ಅಡ್ಡಕ್ಕೆ ಕಟ್ಟಿ, ಅದನ್ನು ಇಳೀಬಿಟ್ಟು, ಅದರ ಆಧಾರದಿಂದ ಮೆಲ್ಲನೆ ಕೆಳಕ್ಕೆ ಬಂದು ತಮ್ಮನನ್ನು ಸೇರಿಕೊಂಡನು. ಇಷ್ಟರಲ್ಲಿ ಚಂದ್ರನು ಮುಳುಗಿ ಕತ್ತಲು ಇನ್ನೂ ಕಪ್ಪಾದಂತೆ ಕಾಣಿಸಿತು. ಗುಂಡಿಯೊಳಗಿಂದ ತಪ್ಪಿಸಿಕೊಂಡು ಕತ್ತಲಿನ ಕಾಡೊಳಗೆ ನುಗ್ಗಿ

ಕೊಳ್ಳುವ ಸೊಕ್ಕಾನೆಗಳಂತೆ ಅವರಿಬ್ಬರು ಆ ಕಾಳ್ಗತ್ತಲಲ್ಲಿ ಅಲ್ಲಿ ಬಿದ್ದು ಇಲ್ಲಿ ಬಿದ್ದು ಬೆಳಕು ಹರಿಯುವಷ್ಟರೊಳಗೆ ಪಂಜದಿಂದ ಮಾಯವಾದರು.

ಮರುದಿನ ಬೆಳಗ್ಗೆ ಕೋಟಿಚೆನ್ನಯರ ಪಲಾಯನದ ಸಮಾಚಾರವು ಚೆಂದುಗಿಡಿಗೆ ಗೊತ್ತಾಯಿತು. ಅವನು ಅದನ್ನು ಕೇಮರ ಬಲ್ಲಾಳನ ಕಿವಿಗೆ ಹಾಕದೆ ಅವರಿಬ್ಬರೂ ಸೆರೆಯಲ್ಲಿಯೇ ಇದ್ದಾರೆ ಎಂಬಂತೆ ಸುದ್ದಿಯನ್ನು ಅರಹಿದನು. ತನ್ನ ಮೈದ್ಯೆ ಆಳುಗಳನ್ನು ಗುಟ್ಟಾಗಿ ಕಳುಹಿಸಿ ಮನೆಮನೆಗಳಲ್ಲಿ ಹುಡುಕಿಸಿದನು. ಆದರೆ ತಪ್ಪಿಸಿಕೊಂಡು ಹೋದ ಕೋಟಿಚೆನ್ನಯರು ತಪ್ಪಿಯೇ ಹೋದರು. ಪಂಜದ ಜನಗಳಿಗೆ ಗೊತ್ತಾಗಲೇ ಇಲ್ಲ.

ಮೂರನೆಯ ಭಾಗ

ಎಣ್ಮೂರಲ್ಲಿ

ಪಂಜವನ್ನು ಬಿಟ್ಟ ಕೋಟಿಚೆನ್ನಯರು ಎಣ್ಮೂರು ಸೀಮೆಯ ದಾರಿ ಹಿಡಿದರು. ಮುಂಚಿನ ಕಾಲದಲ್ಲಿ ಪಂಜದಿಂದ ಎಣ್ಮೂರಿಗೆ ಹೋಗುವವರು ಬಳಸು ದಾರಿಯನ್ನು ಹಿಡಿಯಬೇಕಾಗಿತ್ತು. ಈಗ ಇರುವ ದಾರಿಯುದ್ದಕ್ಕೆಲ್ಲಾ ಆ ಕಾಲದಲ್ಲಿ ದಟ್ಟಡವಿ ಬೆಳೆದು ಹುಲಿಗಳು ಹೊಂಚುಹಾಕುವ ಕುರುಚುಕಾಡಿನಂತೆಯೂ, ಆನೆಗಳು ಅಲೆಯುವ ಆಟದ ಬೈಲಿನಂತೆಯೂ ಇತ್ತು. ಸುಮಾರು ಎರಡು ಮೈಲು ಅಗಲಕ್ಕೆ ಮರಗಳಿಂದ ಕಿಕ್ಕಿರಿದಿದ್ದ ಈ ಅಡವಿಯನ್ನು ಹಗಲು ಹೊತ್ತಿನಲ್ಲಿ ಕೂಡ ದಾಟುವುದಕ್ಕೆ ಜನರು ಹೆದರುತ್ತಿದ್ದರು. ಈ ಕಾಡೇ ಪಂಜ ಸೀಮೆಗೂ ಎಣ್ಮೂರು ಸೀಮೆಗೂ ಗಡಿಯಾಗಿದ್ದ ತುಪ್ಪೆಕಲ್ಲಿನ ಕಾಡು; ಈ ಸೀಮೆಗಳ ಮೇಲೆ ಬಲ್ಲಾಳರಿಗೆ ವಾದವಿವಾದಗಳು ಆಗಾಗ ಬರುತ್ತಿದ್ದುವು. ಅಡವಿಯ ಮೂಡುಗಡೆಯಲ್ಲಿ ಈಗ ಪಾಳುಬಿದ್ದಿರುವ ಅಯ್ಯನೂರ ಬೈಲಿಗಾಗಿ ಇಬ್ಬರೂ ಹೊಡೆದಾಡುತ್ತಿದ್ದರು. ತಲೆತಪ್ಪಿಸಿಕೊಂಡ ಕೋಟಿಚೆನ್ನಯರು ಈ ಬೈಲಿನ ಹತ್ತಿರದ ಅಡವಿಯಲ್ಲಿ ಅವಿತು, ಕೆಲವು ದಿನಗಳ ತನಕ ತಮ್ಮ ಪ್ರಾಣವನ್ನು ಕಾಪಾಡಿಕೊಂಡಿದ್ದರು.

ಪಡುಮಲೆಯ ಕೋಟಿಚೆನ್ನಯರ ಸಮಾಚಾರವು ಇದಕ್ಕಿಂತ ಮೊದಲೇ ಎಣ್ಮೂರಲ್ಲಿ ಹಬ್ಬಿತ್ತು. ಅವರು ಪೆರುಮಾಲ್ ಬಲ್ಲಾಳನ ಗದ್ದಿಗೆಯಲ್ಲಿ ಗಡು ಇಡುವುದಕ್ಕೆ ಮುಂಚಿತವಾಗಿಯೇ ಅದರ ಸಾಕುತಾಯಿ ಸಾಯಿನ ಬೈದಿತಿಯು ಪಡುಮಲೆಗೆ ಬೆನ್ನುಹಾಕಿ ಎಣ್ಮೂರಿಗೆ ಹೊರಟುಬಂದು, ತನ್ನ ದೂರದ ಸಂಬಂಧಿಕರೊಬ್ಬರಲ್ಲಿ ಉಳಿದುಕೊಂಡಿದ್ದಳು. ಕೋಟಿಚೆನ್ನಯರ ಪ್ರತಾಪವನ್ನು ಇವಳ ಬಾಯಿಂದ ಕೇಳಿ ನೆಂಟರಿಷ್ಟರೂ ಜಾತಿಮತಸ್ಥರೂ ಬಹಳ ಹೆಚ್ಚಳಪಡುತ್ತಿದ್ದರು. ಅವರಿಬ್ಬರ ಮೇಲಿದ್ದ ಈ ಹೆಚ್ಚಳವು ಆ ವೀರರ ಶೌರ್ಯ ಸಾಹಸಗಳ ಹೊಗಳಿಕೆಯು ಹರಡಿದ ಹಾಗೆಲ್ಲ ಭಯಭರಿತ ಭಕ್ತಿಯಾಯಿತು. 'ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟಲಿಕ್ಕಿಲ್ಲ' ಎಂಬಂತಿದ್ದ ವೀರರಿಬ್ಬರನ್ನು ಎಣ್ಮೂರಿನ ಬಿಲ್ಲವರು ಕ್ರಮೇಣ ತಮ್ಮವರೆಂಬ ವಿಶ್ವಾಸದಿಂದ ಭಾವಿಸತೊಡಗಿದರು. ಹೀಗೆ ಕೋಟಿಚೆನ್ನಯರ ಮಾತು ಎಣ್ಮೂರಲ್ಲಿ ಜಾತಿಪ್ರಸಂಗವಾಯಿತು. ಕೇಮರ ಬಲ್ಲಾಳನು ಅವರನ್ನು ಮೋಸದಿಂದ ಹಿಡಿದು ಸೆರೆಯಲ್ಲಿ ಇಟ್ಟಿದ್ದಾನೆಂಬ ಸುದ್ದಿಯಿಂದ ಬಿಲ್ಲರ ಉಡಿಯಲ್ಲಿ ಬೆಂಕಿಯ ಕಿಡಿ ಬಿದ್ದಂತಾಗಿ, ಅವರೆಲ್ಲರೂ ನಿಂತಲ್ಲಿ ನಿಲ್ಲದೆ ಎಣ್ಮೂರು ಬಲ್ಲಾಳನಿದ್ದಲ್ಲಿಗೆ ಹೋಗಿ, ಕೋಟಿ ಚೆನ್ನಯರನ್ನು ಅವರ ತಲೆ ಹೂಬಾಡದಂತೆ ನೋಡಿಕೊಂಡು ಅವರನ್ನು ಕೂಡಲೇ ಕಳುಹಿಸಿಕೊಡಲು ಕೇಮರ ಬಲ್ಲಾಳನಿಗೆ ಪತ್ರಬರೆಯಬೇಕೆಂಬುದಾಗಿಯೂ, ಅತನು ಅದಕ್ಕೆ ಒಪ್ಪದಿದ್ದರೆ ಆತನ ಸೀಮೆಯನ್ನು ಒಳನುಗ್ಗಿ ಕೋಟಿಚೆನ್ನಯರನ್ನು ಬಿಡಿಸಿಕೊಂಡು ಎಣ್ಮೂರಿಗೆ ತರುವಂತೆ ತಮಗೆ ಅಪ್ಪಣೆ ಕೊಡಿಸಬೇಕೆಂಬುದಾಗಿಯೂ ಅರಿಕೆ ಮಾಡಿಕೊಂಡರು. ಎಣ್ಮೂರು ಬಲ್ಲಾಳನು ಬಿಲ್ಲರ ಬಿನ್ನಹವನ್ನು ಕಿವಿಗೊಟ್ಟು, ಕೇಳಿ, ತನ್ನ ಕಡೆಯ ಕಿನ್ನಿ ಚೆನ್ನಯನೆಂಬುವನನ್ನು ಕರೆದು, "ಕೋಟಿಚೆನ್ನಯರನ್ನು ಸಂಧಿ ಮಧ್ಯಸ್ಥಿಕೆಯಿಂದ ಕರೆದುಕೊಂಡು ಬರುವಂತೆ ಪ್ರಯತ್ನಿಸು" ಎಂದು ಅಪ್ಪಣೆಮಾಡಿ ಅವನನ್ನು ಒಂದಾನೊಂದು ದಿನ ಪಂಜಕ್ಕೆ ಕಳುಹಿಸಿದನು.

ಆ ದಿನ ಮಧ್ಯಾಹ್ನ ಕೋಟಿಚೆನ್ನಯರು ತಾವು ಅಡಗಿಕೊಂಡಿದ್ದ ತುಪ್ಪೆಕಲ್ಲು ಅಡವಿಯಿಂದ ಹೊರ ಬಿದ್ದು ಮುಂದಿನ ದಾರಿಯನ್ನು ಹುಡುಕಿಕೊಂಡು ಅಲೆಯುತ್ತಿರಲು, ಚೆನ್ನಯನು ತಟ್ಟನೆ ನಿಂತುಕೊಂಡು, "ಅಣ್ಣಾ ಇದೋ ಗಡಿಕಲ್ಲು; ಪಂಜ ಹಿಂದಕ್ಕಾಯಿತು, ಇದು ಎಣ್ಮೂರು" ಎಂದನು.

ಆಗ ಕೋಟಿಯು "ನನಗೆ ಬರಹ ಇಲ್ಲ. ಮೊದಲು ಹುಟ್ಟಿ ನೆಟ್ಟಗೆ ಬೆಳೆಯಲಿಕ್ಕೆ ನಾನಾದೆ: ಬುದ್ಧಿ ಕಲಿಯಲಿಕ್ಕೆ ನೀನಾದೆ. ಕಲ್ಲು ಬರಹ ಓದು" ಎಂದನು.

ಚೆನ್ನಯನು ಮೊಳಕಾಲೂರಿ, ಗಡಿಕಲ್ಲಿನ ಬರಹವನ್ನು ಓದಿ ಹೇಳಿದನು.

ಕೋಟಿಯು "ಹೌದು, ಚೆನ್ನಯ—ನೀನು ಓದಿದಂತೆ ಎಲ್ಲವೂ ಈಗ ನಡೆಯುತ್ತಲಿದೆ. ಮುಂಚಿನ ಕಾಲದಲ್ಲಿ ಎಣ್ಮೂರು ಬಲವಾಗಿತ್ತು; ಪಂಜದ ಹಣಕಾಸೆಲ್ಲಾ ಎಣ್ಮೂರಿಗೆ ಹೋಗುತ್ತಿತ್ತು. ಈಗ ಎಣ್ಮೂರು ಪಂಜದವರು ಜಗಿದುಬಿಟ್ಟ ಕಬ್ಬಿನ ಸಿಪ್ಪೆಯಂತಾಗಿದೆ. ಇಲ್ಲದಿದ್ದರೆ ಕಾಡಿನ ಆಚೆಗೆ ನೆಟ್ಟಿದ್ದ ಈ ಗಡಿಕಲ್ಲು ಈಚೆಗೆ ಬಂದು ಬೀಳುತ್ತಿತ್ತೇ?" ಎಂದನು.

ಅದಕ್ಕೆ ಚೆನ್ನಯನು "ಅದು ಮೊದಲಿದ್ದಲ್ಲೇ ಏಕೆ ಇರಬಾರದು?" ಎಂದು ಕೇಳಿದನು. ಆದರೆ ಅವನು ಕೋಟಿಯ ಪ್ರತ್ಯುತ್ತರವನ್ನು ನಿರೀಕ್ಷಿಸಲಿಲ್ಲ. ಅದರ ಬದಲಾಗಿ, ನಾಲ್ವರು ಹೊರಲಾರದಷ್ಟು ತೂಕವಾದ ಆ ಗಡಿಕಲ್ಲನ್ನು ತನ್ನ ಎರಡೂ ಕೈಗಳಿಂದ ಅಲ್ಲಾಡಿಸಿ, ಅದಕ್ಕೆ ಬೆನ್ನುಕೊಟ್ಟು, ಎತ್ತಿ ಒಯ್ಯತೊಡಗಿದನು.

ಅಷ್ಟರಲ್ಲಿ ಎಣ್ಮೂರಿಂದ ಪಂಜಕ್ಕಾಗಿ ನಾಲ್ಕುಮಂದಿ ಆಳುಗಳೊಡನೆ ಅದೇ ದಾರಿಯಲ್ಲಿ ಹೋಗು ತ್ತಿದ್ದ ಕಿನ್ನಿಚೆನ್ನಯನು ಚೆನ್ನಯನು ಮಾಡುತ್ತಿದ್ದ ಕೆಲಸವನ್ನು ಕಂಡು, ಅವರಿಬ್ಬರನ್ನು ಎವೆಯಿಕ್ಕದೆ ನೋಡುತ್ತ ಅಲ್ಲಿಯೇ ತಡೆದನು. ಅವನ ಆಳುಗಳೂ ಅವನ ಹಿಂದೆಯೇ ನಿಂತರು.

ಕೋಟಿಯು ಗಡಿಯ ಕಲ್ಲನ್ನು ಹೊತ್ತುಕೊಂಡು ಹೋಗುವ ಚೆನ್ನಯನೊಡನೆ "ತಮ್ಮಾ, ಅಳುಕ ಬೇಡ, ತುಳುಕಬೇಡ" ಎಂದು ಸೂಚಿಸಿದನು.

ಕೋಟಿಯನ್ನು ಕುರಿತು ಕಿನ್ನಿಚೆನ್ನಯನು "ಈತನು ನಿನ್ನ ತಮ್ಮನೋ? ಈ ಗಡಿಕಲ್ಲನ್ನು ಅವನು ಏತಕ್ಕೆ ಕಿತ್ತುಬಿಟ್ಟನು?" ಎಂದು ಕೇಳಿದನು.

ಆ ಮಾತಿಗೆ ಕೋಟಿಯು ಆ ಕಾಡಿನ ಆಚೆಕಡೆಯ ಗಡಿಯನ್ನು ಕೈಸನ್ನೆಯಿಂದ ತೋರಿಸಿ, "ಅಯ್ಯಾ, ಈ ಗಡಿಕಲ್ಲು ನಿಲ್ಲತಕ್ಕ ಸ್ಥಳವು ಕಾಡಿನ ಆಚೆಗಿದೆ. ನಾವು ಕಣ್ಣಾರೆ ಕಂಡಿದ್ದೇವೆ. ಪಂಜಕ್ಕೆ ಬಲಬರುತ್ತಲೇ ಅಲ್ಲಿದ್ದ ಕಲ್ಲು ಇಲ್ಲಿಗೆ ಹಾರಬೇಕೆ?" ಎಂದನು.

ಇಷ್ಟರೊಳಗೆ ಚೆನ್ನಯನು ಕಲ್ಲನ್ನು ಮೊದಲಿದ್ದಲ್ಲಿ ನಿಲ್ಲಿಸಿ ಜಾಗ್ರತೆಯಾಗಿ ಬಂದು, "ಈ ಕಲ್ಲು ಎಣ್ಮೂರಿನ ಜಾಗವನ್ನು ಯಾಕೆ ಎತ್ತಿಕೊಳ್ಳಬೇಕು? ಮುಂಚಿನ ರೀತಿ ರಿವಾಜು ಈಗಲೂ ನಡೆಯಲಿ" ಎಂದು ಮುಗಿಸಿದನು.

ಅವರಿಬ್ಬರ ನಿಲುವು ಚೆಲುವುಗಳಿಂದ ಬೆರಗಾಗಿ, ಅವರ ನಡೆನುಡಿಗಳಿಂದ ಮರುಳಾಗಿ, ಮಾತನಾಡು ವುದಕ್ಕೆ ನಾಲಗೆ ಬಾರದೆ ದುರದುರನೆ ಅವರ ಮುಖವನ್ನೇ ಒಂದೇ ಸಮನಾಗಿ ನೋಡುತ್ತಿದ್ದ ಕಿನ್ನಿಚೆನ್ನಯನು ಅರೆಗಳಿಗೆಯ ಮೇಲೆ ಸ್ವಲ್ಪ ಧೈರ್ಯಗೊಂಡು, "ಬುದ್ಧೀ, ತಮ್ಮನ್ನು ನೋಡಿದರೆ ತಾವು ಯಾರೋ

ಮೇಲಿನ ಲೋಕದಿಂದ ಕೆಳಗಿನ ಲೋಕಕ್ಕೆ ಬಂದವರ ಹಾಗೆ ಕಾಣುತ್ತದೆ; ಆದರೆ ತಾವು ಯಾರು ಎಂದು ತಮ್ಮೊಂದಿಗೆ ಕೇಳುವುದಕ್ಕೆ ನಾಲಗೆಯು ಹೆದರಿ ತರತರಿಸುತ್ತದೆ—ನಿಜವಾಗಿಯೂ ತಾವು ಯಾರು ಎಂದು ಅಪ್ಪಣೆಯಾಗಬೇಕು" ಎಂದು ಕೈಮುಗಿದು ಕೇಳಿದನು.

ಚೆನ್ನಯನು ಕತ್ತಿಯ ಹಿಡಿಗೆ ಕೈಹಾಕಿದನು. ಕೋಟಿಯು "ಅಯ್ಯಾ, ಕಳ್ಳುಕುಡಿದು ಮೈಹಾಳು ಮಾಡಬಾರದು; ಸುಳ್ಳು ನುಡಿದು ಬಾಯಿ ಹೊಲಸು ಮಾಡಬಾರದು; ನೋಡಯ್ಯಾ, ನಾವಿಬ್ಬರು ಅಣ್ಣ ತಮ್ಮಂದಿರು, ಅವಳಿಜವಳಿ: ನಾನು ಕೋಟಿ—ಅಣ್ಣ, ಇವನು ಚೆನ್ನಯ—ನನ್ನ ತಮ್ಮ" ಎಂದು ಗಂಭೀರತೆಯಿಂದ ನುಡಿದನು.

ಇದನ್ನು ಕೇಳಿದ ಆ ಐವರೂ ಒಡನೆಯೇ ಹಿಂದಕ್ಕೆ ಸರಿದು, ಬಾಯಲ್ಲಿ ಮಾತು ಹೊರಡದೆ ಅಲ್ಲಿಯೇ ಕೈಕಟ್ಟಿ ನಿಂತುಕೊಂಡರು. ಅನಂತರ ಕಿನ್ನಿಚೆನ್ನಯನು "ಬುದ್ಧೀ, ಹುಡುಕಿದರೆ ದೊರೆಯದ ಮದ್ದುಬಳ್ಳಿ ಕಾಲಿಗೆ ತೊಡರಿದಂತಾಯಿತು; ಕಣ್ಣಿಗೆ ಕಾಣದ ಚಿನ್ನದ ಕೊಪ್ಪರಿಗೆ ಕೈಯಲ್ಲಿ ಬಂದು ಕುಳಿತಂತಾಯಿತು; ತಮ್ಮಿಬ್ಬರನ್ನು ಹುಡುಕಿಬರಬೇಕೆಂದು ಹೊರಟಿದ್ದ ನಮಗೆ ಇಲ್ಲಿಯೇ ತಮ್ಮ ದರ್ಶನವಾಯಿತು" ಎಂದು ಬಹಳ ವಿನಯದಿಂದ ಹೇಳಿಕೊಂಡನು.

ಕೋಟಿಯು "ನೀವು ಯಾರು?" ಎಂದು ವಿಚಾರಿಸಿದನು.

ಕಿನ್ನಿಚೆನ್ನಯ:—"ಬುದ್ಧೀ, ತಮಗೆ ಕೇಮರ ಬಲ್ಲಾಳನಲ್ಲಿ ಆದ ಮರೆ ಮೋಸವನ್ನು ಕೇಳಿ, ತಮ್ಮನ್ನು ಸಂಧಿ ಮಧ್ಯಸ್ಥಿಕೆಯಿಂದ ಕರೆದುಕೊಂಡು ಬರಲು ಎಣ್ಮೂರು ಬಲ್ಲಾಳನಿಂದ ಆಜ್ಞಾಪಿಸಲ್ಪಟ್ಟ ಜನಗಳು ನಾವು. ತಮ್ಮ ಸಮಾಚಾರವನ್ನು ಮೊದಲೇ ಕೇಳಿದ್ದೇವೆ."

ಕೋಟಿ:—"ನಮ್ಮ ಸುದ್ದಿಯನ್ನು ಯಾರು ಹೇಳಿದರು?"

ಕಿನ್ನಿಚೆನ್ನಯ:—"ತಮ್ಮ ಸಾಕುತಾಯಿ ಸಾಯಿನ ಬೈದಿತಿ."

ಕೋಟಿ:—"ಅದು ಹೇಗೆ? ಅವಳು ಪಡುಮಲೆಯಲ್ಲಿ ಇದ್ದಾಳೆ. ಅವಳಿಂದ ಗೊತ್ತಾಗಲು ಸಾಧ್ಯವಿಲ್ಲವಲ್ಲ?"

ಕಿನ್ನಿಚೆನ್ನಯ:—"ಸಾಯಿನ ಬೈದಿತಿಯು ಎಣ್ಮೂರನ್ನು ಸೇರಿಕೊಂಡು ಬಹುಕಾಲವಾಯಿತು. ಅವಳು ನಿಮ್ಮನ್ನು ಒಂದು ತಡವೆ ಕಣ್ಣುತುಂಬ ನೋಡಬೇಕೆಂದು ಹಂಬಲಿಸುತ್ತಿದ್ದಾಳೆ, ಬುದ್ಧಿ."

ಕೋಟಿ:—"ಅವಳು ಎಲ್ಲಿದ್ದಾಳೆ?"

ಕಿನ್ನಿಚೆನ್ನಯ:—"ಅಯ್ಯನೂರು ಬೈಲಿನ ತಿಮ್ಮಣ್ಣ ಬೈದ್ಯನಲ್ಲಿ."

ಕೋಟಿ:—"ಅವಳು ಆರೋಗ್ಯವಾಗಿರುವಳೋ?"

ಕಿನ್ನಿಚೆನ್ನಯ:—"ಮೂರು ದಿವಸಗಳ ಹಿಂದೆ ಅವಳ ಜೀವದಾಸೆ ಬಿಟ್ಟು ಬಾಯಿಗೆ ಹಾಲೆರೆದಿದ್ದರು, ನಿನ್ನೆ ಮೊನ್ನಿನ ಸ್ಥಿತಿ ನನಗೆ ಗೊತ್ತಿಲ್ಲ, ಬುದ್ಧಿ."

ಇಷ್ಟು ಮಾತುಕತೆಯಾದನಂತರ ಕೋಟಿಚೆನ್ನಯರು ಅಲ್ಲಿ ಬಂದವರ ಜತೆಯಲ್ಲಿ ಹೊರಟುಬಂದು, ಸಂಜೆಗೆ ಮುಂಚಿತವಾಗಿ ಎಣ್ಮೂರನ್ನು ಮುಟ್ಟಿ, ತಿಮ್ಮಣ್ಣ ಬೈದ್ಯನ ಮನೆಯೊಳಕ್ಕೆ ಹೋದರು.

ಆ ಮನೆಯ ಚಾವಡಿಯ ಮೇಲೆ ಒಂದು ಹರಳೆಣ್ಣೆಯ ದೀಪವು ಮಿಣಮಿಣನೆ ಉರಿಯುತ್ತಲಿತ್ತು. ಅಲ್ಲಿಯೇ ಒಂದು ಕೋಣೆಯೊಳಗೆ ಸುಮಾರು ಅರವತ್ತು ವರ್ಷ ವಯಸ್ಸು ಮೀರಿದ ಹೆಂಗಸೊಬ್ಬಳು ಒಂದು ಚಾಪೆಯ ಮೇಲೆ ಮಲಗಿದ್ದಳು. ಅವಳ ಮೈ ಜ್ವರದಿಂದ ಬೆಂದು, ಕೆಮ್ಮಿನಿಂದ ಜಜ್ಜಿಹೋಗಿ, ಗರಿಯಂತೆ ಹಗುರವಾಗಿತ್ತು. ಕಿನ್ನಿಚೆನ್ನಯನು ಆ ಚಾಪೆಯ ಹತ್ತಿರ ಬಂದು ಕುಳಿತುಕೊಂಡು, "ಅಮ್ಮಾ, ಈ ಹೊತ್ತು ಹೇಗಿದೆ? ನಿನ್ನ ಮಕ್ಕಳು ಕೋಟಿಚೆನ್ನಯರು ಬಂದಿದ್ದಾರೆ, ನೋಡು" ಎಂದು ಮೆತ್ತಗೆ ಹೇಳಿದನು.

ಆ ಎರಡು ಹೆಸರುಗಳನ್ನು ಕೇಳುತ್ತಲೇ ಅವಳ ಮುಚ್ಚಿದ ಕಣ್ಣು ಕೊಂಚ ತೆರೆಯಿತು. ಬಿಗಿದಿದ್ದ ತುಟಿ ಬಿರಿಯಿತು. "ಓ ನನ್ನ ಬಾಲ" ಎಂಬ ಮಾತುಗಳು ಬಾಯಿಂದ ಹೊರಟವು.

ಆಗ ಕೋಟಿಯು ಮುದುಕಿಯ ತಲೆಯನ್ನು ತನ್ನ ಎಡತೊಡೆಯ ಮೇಲೆ ಇಟ್ಟುಕೊಂಡು ಕುಳಿತನು; ಚೆನ್ನಯನು ಅವಳ ಕಾಲುಗಳನ್ನು ಹಿಡಿದು ಒತ್ತತೊಡಗಿದನು.

ಚೆನ್ನಯನು "ಅಮ್ಮಾ, ಸಾಯಿನ ಬೈದ್ಯರು ಎಲ್ಲಿದ್ದಾರೆ?" ಎಂದು ಕೇಳಿದನು.

ಅದಕ್ಕೆ ಕೋಟಿಯು "ಮಾತನಾಡಿಸಬೇಡ: ಮಾತಾಡಿದರೆ ದಣುವಾಗುತ್ತದೆ" ಎಂದು ತಮ್ಮನಿಗೆ ಸೂಚಿಸಿದನು.

ಸಾಯಿನ ಬೈದಿತಿಯು ಬಹಳ ಆಯಾಸದಿಂದ "ಮಕ್ಕಳೇ! ನನ್ನ ಕಡೆಗಾಲಕ್ಕೆ ಬಂದು ನನಗೆ ಒದಗಿದಿರಿ. ಜಯಸಿರಿ ನಿಮ್ಮ ಭುಜದಲ್ಲಿ ನೆಲಸಲಿ! ನಿಮ್ಮ ಹೆಸರು ನಮ್ಮ ರಾಜ್ಯದಲ್ಲಿ ಉಳಿಯಲಿ!" ಎಂದು ಹೇಳಿ ಬಾಯಿ ತೆರೆದಳು.

ಅಲ್ಲಿ ಇದ್ದವರೆಲ್ಲರು ಅವಳ ಬಾಯಿಗೆ ಒಂದೊಂದು ತಟಕು ಹಾಲು ಎರೆದರು. ಕೊನೆಗೆ ಕೋಟಿ ಚೆನ್ನಯರು ತುಳಸಿ ದಳವನ್ನೂ ಗಂಗೋದಕವನ್ನೂ ಅವಳ ಬಾಯಿಗೆ ಇಟ್ಟು, ಅವಳ ಕಾಲುಗಳ ಮೇಲೆ ತಮ್ಮ ತಲೆಗಳನ್ನು ಇಟ್ಟು ಕಣ್ಣೀರುಗಳಿಂದ ಒಂದು ನಿಮಿಷ ಅವಳ ಕಾಲು ತೊಳೆದರು. ಬೈದಿತಿಯು ಲೋಕ ಯಾತ್ರೆಯನ್ನು ಮುಗಿಸಿದಳು. ಅನಂತರ ಜಾತಿವಿಧಿಗೆ ಅನುಸಾರವಾಗಿ ನಡೆಯತಕ್ಕ ಸಾವುಸೂತಕಗಳು ನಡೆದುವು.

ಇದಾದ ಕೆಲವು ದಿವಸಗಳ ತರುವಾಯ ಕಿನ್ನಿಚೆನ್ನಯನು ಒಂದು ದಿನ ಎಣ್ಮೂರು ಬಲ್ಲಾಳನ ಓಲಗಕ್ಕೆ ಹೋದನು. ಬಲ್ಲಾಳನು ಅವನನ್ನು ಕಂಡು "ಬಾ, ಇಲ್ಲೇ ಮಣೆ ಇದೆ. ನಿನ್ನನ್ನು ಕಾಣದೆ ಬಹಳ ಕಾಲವಾಯಿತು, ಅಲ್ಲವೇ? ಕೊಟ್ಟ ಕೆಲಸ ಏನಾಯಿತು?" ಎಂದು ಕೇಳಿದನು.

ಅದಕ್ಕೆ ಕಿನ್ನಿಚೆನ್ನಯನು "ಹೌದು, ಬುದ್ಧಿ. ಕೋಟಿಚೆನ್ನಯರನ್ನು ಕರಕೊಂಡು ಬಂದಿದ್ದೇನೆ. ಆದರೆ ಅವರ ಸಾಕುತಾಯಿಯು ತೀರಿಹೋದುದರಿಂದ, ಅವರನ್ನು ತಮ್ಮ ದರ್ಶನಕ್ಕೆ ಕರೆದುಕೊಂಡು ಬರಲು ಇದುವರೆಗೆ ಸಾಧ್ಯವಾಗಲಿಲ್ಲ" ಎಂದನು.

ಬಲ್ಲಾಳನು ಕಿನ್ನಿಚೆನ್ನಯನ ಮಾತನ್ನು ಕೇಳಿ, ಆಶ್ಚರ್ಯಪಟ್ಟನು. ಸಂತೋಷದಿಂದಲೂ ಕುತೂಹಲ ದಿಂದಲೂ ಪ್ರಶ್ನೆಯ ಮೇಲೆ ಪ್ರಶ್ನೆ ಸುರಿಸಿದನು. "ಓಹೋ? ಹಾಗೋ? ಯಾವಾಗ ಬಂದಿರಿ? ಕೋಟಿ ಚೆನ್ನಯರು ನಿನಗೆ ಎಲ್ಲಿ ನೋಡಸಿಕ್ಕಿದರು? ಅವರನ್ನು ಹೇಗೆ ಬಿಡುಗಡೆ ಮಾಡಿಸಿಕೊಂಡೆ? ಕೇಮರನು ಅವರನ್ನು ಏಕೆ ಸೆರೆಯಲ್ಲಿ ಹಾಕಿದನಂತೆ?" ವಿಂದು ಕೇಳುತ್ತಾ ಹೋದನು.

ಕಿನ್ನಿಚೆನ್ನಯನು ನಡೆದ ಸಂಗತಿಯನ್ನು ಬಲ್ಲಾಳನಿಗೆ ವಿವರಿಸಿ ಹೇಳಿದನು. ಬಲ್ಲಾಳನು "ಅವರು ಹೇಗಿದ್ದಾರೆ?" ಎಂಬ ಪ್ರಶ್ನೆಗೆ "ನಾನು ಏನು ಅನ್ನಲಿ, ಬುದ್ಧಿ? ಕಣ್ಣಿಗೆ ಚೆಲುವರು; ಜನರಿಗೆ ಮರುಳರು; ಅಂಥವರು ಜನಿಸಿದವರಲ್ಲಿ ಇಲ್ಲ, ಇನ್ನು ಜನಿಸಲಿಕ್ಕಿಲ್ಲ. ಅವರಿದ್ದ ರಾಜ್ಯದಲ್ಲಿ ಒಂದು ಊರು ಆಳಿಸಬಹುದು, ಒಂದು ಊರು ಉಳಿಸಬಹುದು" ಎನ್ನುತ್ತಾ ಅವರನ್ನು ಕೊಂಡಾಡಿದನು.

"ಹಾಗಾದರೆ ಅವರನ್ನು ನಾಳೆ ನಡುಹಗಲ ಓಲಗಕ್ಕೆ ಕರೆದುಕೊಂಡು ಬಾ" ಎಂದು ಹೇಳಿ, ಬಲ್ಲಾಳನು ಒಳಕ್ಕೆ ಹೋದನು.

ಕಿನ್ನಿಚೆನ್ನಯನು ಬೀಡಿನಿಂದ ಇಳಿದು ಕೋಟಿಚೆನ್ನಯರಿದ್ದಲ್ಲಿಗೆ ಹೋಗಿ, ಮರುದಿನ ಬಲ್ಲಾಳರ ಓಲಗಕ್ಕೆ ಹೋಗುವುದಾಗಿ ನಿಶ್ಚಯ ಮಾಡಿದನು.

ಎಣ್ಮೂರಿನ ದೇವಬಲ್ಲಾಳನು ಪಡುಮಲೆಯ ಪೆರುಮಾಳು ಬಲ್ಲಾಳನಷ್ಟು ರಣಶೂರನೂ ಅಲ್ಲ, ಪಂಜದ ಕೇಮರ ಬಲ್ಲಾಳನಷ್ಟು ರಣಭೀರುವೂ ಅಲ್ಲ. ಆತನು ಪೆರುಮಾಳನಿಗಿಂತ ಸಾಧುವಾಗಿದ್ದನು. ಕೇಮರನಿಗಿಂತ ಬುದ್ಧಿವಂತನಾಗಿದ್ದನು. ಈ ಮೂವರಲ್ಲಿ ಎಲ್ಲರಿಗಿಂತ ಹೆಚ್ಚಿನ ಧರ್ಮಬುದ್ಧಿಯು ಅವನಲ್ಲಿತ್ತು. ಆತನು ಅಧರ್ಮ, ದಾರಿದ್ರ್ಯ, ರೋಗ, ಅಂತಃಕಲಹ ಇವು ರಾಜ್ಯದ ತಿರುಳನ್ನು ತಿನ್ನುವ ಹುಳುಗಳೆಂದು ಆಗಾಗ ಹೇಳುತ್ತಿದ್ದನು. ಆತನ ಹೆಸರು ತುಳುದೇಶದ ಚೌಟ ಬಂಗರು ಮನೆತನಗಳಲ್ಲಿ ಮಾತ್ರವಲ್ಲದೆ, ಇಕ್ಕೇರಿಯ ಅರಮನೆಯವರೆಗೆ ಹಬ್ಬಿಹರಡಿತ್ತು. ಎಂದಿನಿಂದ ಇಕ್ಕೇರಿಯವರು ಇವನ ಹೆಸರನ್ನು ಕೊಂಡಾಡ ತೊಡಗಿದರೋ ಅಂದಿನಿಂದ ನೆರೆಕರೆಯ ಬಲ್ಲಾಳರು ಇವನನ್ನು ಹಳಿದು ಹೀಯಾಳಿಸಿ, ಹಗೆಮಾಡತೊಡಗಿದರು. ಹೀಗೆ ಹಗೆಮಾಡಿ ಇವನಿಗೆ ಕೇಡು ಬಗೆದವರಲ್ಲಿ ಕೇಮರ ಬಲ್ಲಾಳನೇ ಮೊದಲನೆಯವನು.

ಕೇಮರ ಬಲ್ಲಾಳನಿಗೆ ದೇವಬಲ್ಲಾಳನಲ್ಲಿದ್ದ ಹೊಟ್ಟೆಯಕಿಚ್ಚು ಆ ಚೆಂದುಗಿಡಿಯ ದುರಾಲೋಚನೆಯ ಗಾಳಿಯಿಂದ ಭುಗ್ಗನೆ ಹೊತ್ತಿತು. ಅವನು ತನಗೆ ಪಂಜದ ಪಟ್ಟವಾದ ಕೆಲವು ವರ್ಷಗಳಲ್ಲಿಯೇ ದೇವ ಬಲ್ಲಾಳನ ಸೀಮೆಯ ಎಲ್ಲೆಯಲ್ಲಿದ್ದ ಜನಗಳನ್ನು ಕಾಡತೊಡಗಿದನು. ಕೇಮರ ಬಲ್ಲಾಳನ ಉದ್ದಟತನದ ಮುಂದೆ ದೇವಬಲ್ಲಾಳನ ಸಂಧಿಸಾಮಗಳು ನಡೆಯಲಿಲ್ಲ. ಬರುಬರುತ್ತಾ ದೇವಬಲ್ಲಾಳನ ಸೀಮೆಯು ಮುಂಜಾನೆಯ ನೆರಳಂತೆ ಗಿಡ್ಡವಾಗುತ್ತ ಹೋಯಿತು. ತನ್ನ ಕೈಯಿಂದ ಅನ್ಯಾಯವಾಗಿ ಕಿತ್ತುಕೊಂಡ ತನ್ನ ಸೀಮೆಯ ಭಾಗವನ್ನು ಇತರರ ಸಹಾಯದಿಂದಾದರೂ ಮರಳಿ ಪಡೆಯಬೇಕೆಂದು ದೇವಬಲ್ಲಾಳನು ಸಮಯ ಕಾಯುತ್ತಿದ್ದನು. ಆ ಅಪ್ರತಿಮ ವೀರರಾದ ಕೋಟಿಚೆನ್ನಯರ ಭುಜಬಲದಿಂದ ತನ್ನ ರಾಜ್ಯವು ಮರಳಿ ತಲೆಯೆತ್ತುವಂತೆ ಮಾಡಬೇಕೆಂದು ಬಗೆದು ಅವರನ್ನು ಆದರದಿಂದ ಓಲಗದಲ್ಲಿ ಕಾಣುವುದಕ್ಕೆ ಎಲ್ಲವನ್ನೂ ಅಣಿ ಮಾಡಿದನು.

ಮರುದಿನ ಮಧ್ಯಾಹ್ನ ಎಣ್ಮೂರಿನ ಕಿನ್ನಿಚೆನ್ನಯನನ್ನು ಮುಂದಿಟ್ಟುಕೊಂಡು ಕೋಟಿಚೆನ್ನಯರು ತಾಯಿಯ ಸಂಗಾತದ ಮಕ್ಕಳಂತೆಯೂ, ಹೇಟೆಯ ಮಗ್ಗುಲಲ್ಲಿನ ಕೋಳಿಮರಿಗಳಂತೆಯೂ, ಸೂಜಿಯ ಹಿಂದುಗಡೆಯ ನೂಲೆಳೆಗಳಂತೆಯೂ ಬೀಡಿಗೆ ಹೋದರು. ಎಣ್ಮೂರು ಬಲ್ಲಾಳನು ಅವರನ್ನು ಸಾದರ ಸಂಭ್ರಮದಿಂದ ಕಂಡು, ಓಲಗಶಾಲೆಗೆ ಕರೆದುಕೊಂಡು ಬಂದು ಯೋಗಕ್ಷೇಮವನ್ನು ವಿಚಾರಿಸಿ, ಅವರ ಹಿಂದಿನ ಸಮಾಚಾರವನ್ನು ಕೇಳಿ, ತನ್ನ ರಾಜ್ಯದಲ್ಲಿ ಅವರು ಸಹಸ್ರಕಾಲ ಸುಖವಾಗಿ ಇರಬೇಕೆಂಬುದಾಗಿ ಸೂಚಿಸಿದನು.

ಆಗ ಕಿನ್ನಿಚೆನ್ನಯನು "ಬುದ್ಧಿ, ನಮಗೆ ಬೇಕಾದವರು ಬೀಡಿನಿಂದ ದೂರವಾಗಿ ಇರಬಾರದಷ್ಟೆ. ಇಂಥ ಜಾಗವನ್ನೇ ಇವರಿಗೆ ಕೊಡಿಸಬೇಕೆಂಬುದಕ್ಕೆ ನನಗೆ ಅಪ್ಪಣೆಯಾಗಲಿ" ಎಂದು ವಿಜ್ಞಾಪಿಸಿಕೊಂಡನು.

ದೇವಬಲ್ಲಾಳನು "ಬಂಟರೆ, ನಿಮಗೆ ನಮ್ಮ ರಾಜ್ಯದಲ್ಲಿ ಯಾವ ಸ್ಥಳಬೇಕು? ಬಿಲ್ಲರ ನಟ್ಟಿಲ್ಲು ಆದೀತೇ?" ಎಂದು ಕೇಳಿದನು.

ಕೋಟಿ:—"ಬುದ್ಧಿ, ಅದನ್ನು ಕೊಟ್ಟರೆ ಜಾತಿಗೆ ಜಾತಿ ಹಗೆ ಎಂಬಂತೆ ನಮ್ಮವರ ವಿರೋಧವೇ ನಮಗೆ ಬರಬಹುದು."

ದೇವಬಲ್ಲಾಳ:—"ಒಕ್ಕಲಿಗನ ಗುತ್ತು ಬಾಳಿಕೆ ಕೊಟ್ಟರೆ—"

ಕೋಟಿ:—"ನಾಯಿ ಬೆಕ್ಕಿನ ವೈರದಂತೆ."

ದೇವಬಲ್ಲಾಳ:—"ಬ್ರಾಹ್ಮಣರ ಬೆರಂಪಳ್ಳಿ ಕೊಡುತ್ತೇನೆ, ಆಗದೋ?"

ಕೋಟಿ:—"ಅದಾಗಬಹುದು. ಆದರೆ ಅದನ್ನು ತೆಗೆದುಕೊಂಡರೆ ನಾಗರಹಾವನ್ನೂ ಕನ್ನಡಿಹಾವನ್ನೂ ಒಂದೇ ಬಿಲದಲ್ಲಿ ಇಟ್ಟಂತಾದೀತು."

ದೇವಬಲ್ಲಾಳ:—"ಹಾಗಾದರೆ, ನೀವೇ ಒಂದನ್ನು ಆಯ್ದುಕೊಳ್ಳಿ."

ಕೂಡಲೇ ಚೆನ್ನಯನು "ಅಣ್ಣಾ, ಪಡುಮಲೆಯ ಜೋಯಿಸರು ಹೇಳಿದ್ದು ನನಗೆ ನೆನಪಿದೆ. ಆ ಅಯ್ಯನೂರು ಬೈಲು ಇಲ್ಲೇ ಅಲ್ಲವೇ?" ಎಂದನು.

ಕೋಟಿಯು ಆ ಮಾತನ್ನು ಕೇಳಿ "ಬುದ್ಧಿ, ಅಯ್ಯನೂರು ಗುತ್ತನ್ನು ಕರುಣಿಸಿರಿ" ಎಂದನು.

ಅದಕ್ಕೆ ದೇವಬಲ್ಲಾಳನು "ಅದು ಒಕ್ಕಲಿಲ್ಲದ ಗುತ್ತು. ಅಷ್ಟೇ ಅಲ್ಲ, ಆ ಗುತ್ತು ತನ್ನ ಸೀಮೆಗೆ ಸೇರಿದ್ದೆಂದು ಪಂಜದ ಕೇಮರ ಬಲ್ಲಾಳನು ಸುಳ್ಳುಸಾಧನೆ ಮಾಡಿ, ನಮ್ಮ ಹಳೆಯ ಗಡಿಕಲ್ಲುಗಳನ್ನು ಕಿತ್ತು ಹಾಕಿಸಿ, ಗುತ್ತಿನಲ್ಲಿ ಹೊಗೆ ಏಳುವುದಕ್ಕೆ ಬಿಡುವುದಿಲ್ಲ. ಇದು ನನಗೆ ಗೊತ್ತಿದ್ದು, ನಿಮ್ಮನ್ನು ಮೊದಲೇ ಜಗಳದ ಮಣೆಯ ಮೇಲೆ ಏತಕ್ಕೆ ಕೂರಿಸಬೇಕು?" ಎಂದು ಆಕ್ಷೇಪ ಹೇಳಿದನು.

ಗಡಿಕಲ್ಲುಗಳ ಮಾತು ಬರುತ್ತಲೇ ಕೋಟಿಚೆನ್ನಯರು ಒಬ್ಬನು ಮತ್ತೊಬ್ಬನ ಮುಖವನ್ನು ನೋಡಿದರು. ಚೆನ್ನಯನು "ಬುದ್ಧಿ, ನಾವು ನಿಮ್ಮ ರಾಜ್ಯದಲ್ಲಿ ಕಾಲಿಡುವಾಗಲೇ ಆ ಜಗಳದ ಮಣೆಯನ್ನು ಮೆಟ್ಟಿ ಬಂದಿದ್ದೇವೆ. ನಾನು ಆ ಗಡಿಕಲ್ಲನ್ನು ಮುಂಚಿನ ಸ್ಥಳದಲ್ಲಿ ಹೊತ್ತು ಹಾಕಿ, ನಿಮ್ಮ ರಾಜ್ಯಕ್ಕೆ ಐವತ್ತು ಮಾರು ಜಾಗವನ್ನು ಕೂಡಿಸಿದ್ದೇನೆ. ಅಯ್ಯನೂರು ಗುತ್ತನ್ನು ನಮಗೆ ದಯಪಾಲಿಸಿ ಬಿಡಿ. ಜಗಳಕ್ಕೆ ಬರುವವರು ಬರಲಿ, ನಾವು ನೋಡಿಕೊಳ್ಳುತ್ತೇವೆ" ಎಂದನು.

ದೇವಬಲ್ಲಾಳನು "ಹಾಗಾದರೆ ಇನ್ನು ಜಗಳ ತಪ್ಪದು" ಎಂದನು.

ಕೋಟಿ "ಜಗವು ಇರುವಷ್ಟು ಕಾಲ ಜಗಳವು ಇದೆ, ಬುದ್ಧಿ" ಎಂದನು.

ದೇವಬಲ್ಲಾಳನು "ಆ ಗುತ್ತು ನಿಮಗೆ ಮೆಚ್ಚಿಗೆಯಾಗಿದ್ದರೆ ನನ್ನ ಅಡ್ಡಿ ಇಲ್ಲ" ಅದನ್ನು ನೀವು ಸಹಸ್ರ ಕಾಲಾವಧಿ ಅನುಭವಿಸಿಕೊಂಡು ಬಂದು ಬೀಡಿನ ಮರ್ಯಾದೆಯನ್ನು ಕಾಪಾಡುವಂಥವರಾಗಬೇಕು" ಎಂದು ಹೇಳಿ, ಕೈವೀಳ್ಯವನ್ನು ಕೊಟ್ಟನು.

ಅದನ್ನು ಸ್ವೀಕರಿಸಿ ಕೋಟಿಚೆನ್ನಯರು ಎಣ್ಮೂರು ಬಲ್ಲಾಳನ ಕೈ ಸೇರಿದ್ದ ಅಯ್ಯನೂರು ಗುತ್ತನ್ನು ಮಾಡಿಕೊಂಡು ಅಲ್ಲಿ ಸುಖವಾಗಿದ್ದರು.

ಚೆಂದುಗಿಡಿಯೂ ಕೇಮರನೂ ಕೋಟಿಚೆನ್ನಯರನ್ನು ಹಿಡಿಯಲಿಕ್ಕೆ ಮಾಡಿದ ಮೋಸ, ಅವರು ಸೆರೆಯಿಂದ ತಪ್ಪಿಸಿಕೊಳ್ಳಲು ಮಾಡಿದ ಉಪಾಯ, ಅವರನ್ನು ಎಣ್ಮೂರಿನವರು ಪ್ರೀತಿಯಿಂದ ಗೌರವಿಸಿದ ಸಂಗತಿ, ಅಲ್ಲಿ ಅವರಿಗೆ ದೊರೆತ ಆಶ್ರಯ, ಅವರ ಸಹಾಯದಿಂದ ಎಣ್ಮೂರು ಬಲ್ಲಾಳನು ತನ್ನ ರಾಜ್ಯ ವಿಸ್ತಾರಕ್ಕಾಗಿ ಮಾಡುತ್ತಿರುವ ಹಂಚಿಕೆ ಇವುಗಳ ಸುದ್ದಿಯು ಪಂಜಸೀಮೆಯಲ್ಲಿಯೂ ಪಡುಮಲೆ ಸೀಮೆಯಲ್ಲಿಯೂ ಹಬ್ಬುವುದಕ್ಕೆ ಬಹುಕಾಲ ಹಿಡಿಯಲಿಲ್ಲ. ಒಬ್ಬ ಬಲ್ಲಾಳನು ಸಿಟ್ಟಿನಿಂದ ತನ್ನ ಊರಲ್ಲಿದ್ದ ಕಿನ್ನಿದಾರುವನ್ನೂ ಅವಳ ಗಂಡನನ್ನೂ ಬಹಳವಾಗಿ ಕಾಡಿದನು; ಇನ್ನೊಬ್ಬ ಬಲ್ಲಾಳನು ತನ್ನ ಬೀಡಿನಲ್ಲಿದ್ದ ಮುದುಕ ಸಾಯಿನ ಬೈದ್ಯನನ್ನು ಹಿಂಸೆ ಮಾಡಿದನು. ಇಬ್ಬರ ಕೋಪವು ಇಷ್ಟರಲ್ಲೇ ಮುಗಿಯಲಿಲ್ಲ. ಅವರು ಕೋಟಿ ಚೆನ್ನಯರನ್ನು ಕಂಡಲ್ಲಿ ಹಿಡಿದು ಕಡಿದು ಹಾಕಬೇಕೆಂಬುದಾಗಿ ಅಪ್ಪಣೆಕೊಟ್ಟು, ಆಗಾಗ ತಮ್ಮ ಕಡೆಯ ಜನಗಳನ್ನು ಎಣ್ಮೂರಿಗೆ ಗುಟ್ಟಿನಿಂದ ಕಳುಹಿಸಿದರು; ವಿಷದ ಹಾಲಿನಿಂದ ಅವರನ್ನು ಕೊಲ್ಲಬೇಕೆಂದು ಗೊಲ್ಲರ ಮೂಲಕವಾಗಿ ದುರಾಲೋಚನೆ ನಡೆಸಿದರು; ಅವರ ಬಿತ್ತ ಉಳಿಯದಂತೆ ಮಾಡಬೇಕೆಂದು ಕಣಿಯರಿಂದ ಬಗೆ ಬಗೆಯ ಮದ್ದುಮಾಟಗಳನ್ನು ಮಾಡಿಸಿದರು. ಏನು ಮಾಡಿದರೂ ಕೋಟಿಚೆನ್ನಯರ ತಲೆಯ ಕೂದಲು ಒಂದು ಸಹ ಅದುರಿಸಲು ಸಾಧ್ಯವಾಗಲಿಲ್ಲ.

ಜೋಡು ಹುಲಿಗಳ ಬಾಯಿಯಿಂದ ತಪ್ಪಿಸಿಕೊಂಡು ಸುರಕ್ಷಿತವಾದ ಹಸುರು ಹುಲ್ಲುಗಾವಲಿಗೆ ಹೋಗಿ, ಕುಣಿದು ಮೇಯುವ ಹುಲ್ಲೆಯ ಮರಿಗಳನ್ನು ಕಂಡು ಆರ್ಭಟಿಸುವ ದುಷ್ಟ ವ್ಯಾಘ್ರಗಳಂತೆ ಆ ಇಬ್ಬರು ಬಲ್ಲಾಳರು ಕೋಟಿ ಚೆನ್ನಯರನ್ನು ಹುಟ್ಟಡಗಿಸಬೇಕೆಂದು ಮನಸ್ಸಿನಲ್ಲಿ ದೃಢ ಮಾಡಿಕೊಂಡರು. ಈ ಮಧ್ಯದಲ್ಲಿ ಚೆನ್ನಯನು ಗಡಿಕಲ್ಲನ್ನು ಒಂದು ಕಡೆಯಿಂದ ಕಿತ್ತು ಇನ್ನೊಂದು ಕಡೆಯಲ್ಲಿ ನೆಟ್ಟದ್ದು, ಅಯ್ಯನೂರು ಗುತ್ತನ್ನು ವಿಸ್ತರಿಸಿದ್ದು, ಅವರಿಬ್ಬರು ಪಂಜಸೀಮೆಗೆ ಸೇರಿದ್ದ ಬಂಟಮಲೆಯಲ್ಲಿ ಹೇಳದೆ ಕೇಳದೆ ಆಗಾಗ ಬೇಟೆಯಾಡಿದ್ದು, ಎಲ್ಲರ ಹೃದಯದಲ್ಲಿಯೂ ಅವರಿಂದ ಒಂದು ಬಗೆಯ ಭೀತಿ ಹುಟ್ಟಿದ್ದು—ಇವನ್ನು ಕೇಳಿ, ಪಡುಮಲೆಯ ಪೆರುಮಾಳನೂ ಪಂಜದ ಕೇಮರನೂ ಇನ್ನು ಯುದ್ಧ ಮಾಡದೆ ತೀರದೆಂದು ನಿಶ್ಚಯಿಸಿದರು. ಈ ಆಲೋಚನೆಯಿಂದ ಜನಗಳನ್ನು ಕೂಡಿಸುತ್ತ, ಮುಸ್ತೈದೆಯನ್ನು ಒದಗಿಸುತ್ತ, ತಕ್ಕ ವೇಳೆಯನ್ನು ಎದುರು ನೋಡುತ್ತ ಇದ್ದರು.

ಬೇಡುವ ಬಡವನು ಕೊಡುಗೈಯಾಗಿರುವ ದೊರೆಗೆ ಬೇಕಾದವನಾಗುತ್ತಲೇ ಚಾಡಿಯ ಬಾಯಿ ತುರಿಸಹತ್ತುತ್ತದೆ. ಕೋಟಿಚೆನ್ನಯರು ಎಣ್ಮೂರು ಬಲ್ಲಾಳನ ಪ್ರೀತಿಗೆ ಪಾತ್ರರಾಗಿ ಅವನ ಬೀಡಿನಲ್ಲಿ ಪ್ರಬಲರಾದುದನ್ನು ಕಂಡು ಚಾಡಿಗಾರರು ಬಲ್ಲಾಳನನ್ನು ಅವರ ಮೇಲೆ ತಿರುಗಿಸುವುದಕ್ಕೆ ತೊಡಗಿದರು. 'ಅರಸರ ಕಿವಿಗೆ ತರಲೆ ಹಾಳು, ಬಾಗಿಲ ಕಿವಿಗೆ ಒರಲೆ ಹಾಳು' ಎಂಬ ಗಾದೆಗೆ ಸರಿಯಾಗಿ, ಬಲ್ಲಾಳನು ಆ ಚಾಡಿಗಾರರ ಮಾತಿಗೆ ಕಿವಿಗೊಡಹತ್ತಿದನು. ಅವನು ಕಿವಿಗೊಟ್ಟ ಹಾಗೆಲ್ಲಾ ಚಾಡಿ ಹೆಚ್ಚುತ್ತ ಹೋಯಿತು.

ಆ ಚಾಡಿಗಾರರಲ್ಲಿ ಒಬ್ಬನು ಒಂದು ದಿನ ಬಲ್ಲಾಳನ ಹತ್ತಿರ ಯಾರೂ ಇಲ್ಲದ್ದನ್ನು ಕಂಡು, "ಬುದ್ಧಿ ಮನೆಯಲ್ಲಿ ಬೇಸರವೆಂದು ಇಲ್ಲಿ ಬಂದೆ. ಇಲ್ಲಿಯೂ ನಮ್ಮ ಹೊಸ ಬಂಟರು ಹೇಳುವಂತೆ ಬೇಸರಿಕೆ" ಎಂದನು.

ಆಗ ಎಣ್ಮೂರು ಬಲ್ಲಾಳನು ಕಿವಿಗಳನ್ನು ಚೆನ್ನಾಗಿ ತೆರೆದು "ಹೊಸ ಬಂಟರು ಏನೆನ್ನುತ್ತಾರೆ?" ಎಂದು ಕೇಳಿದನು.

"ನಮ್ಮ ಸೀಮೆಗೆ ಹೊಸಬರಾದವರಿಗೆ ಇಲ್ಲಿ ಬೇಸರವಾಗುವುದೇನೋ ಸಹಜ" ಎಂದು ಚಾರನು ಮೇಲಿನ ಮೇಲೆ ಹೇಳಿದನು.

"ನೀನು ಅಳುಕಬೇಡ. ಎಲ್ಲವನ್ನೂ ಬಿಚ್ಚಿ ಹೇಳು" ಎಂದು ಬಲ್ಲಾಳನು ಹುಬ್ಬೆತ್ತಿ ಕೇಳಿದನು.

ಚಾಡಿಗಾರ—"ಬುದ್ಧಿ, ಇದು ಬಡ ರಾಜ್ಯವಂತೆ, ನೀವು ಬಡ ಬಲ್ಲಾಳರಂತೆ. ಹೀಗೆ ಹೊಸಬಂಟರು ಕಲೆ ತೋರಿ ಕುಲ ದೂಷಿಸುತ್ತಾರೆ, ಬುದ್ಧಿ."

ಬಲ್ಲಾಳನು ಇನ್ನು ಹೆಚ್ಚು ಕೇಳುವುದಕ್ಕೆ ಮನಸ್ಸಿಲ್ಲದೆ ಕೋಟಿಚೆನ್ನಯರನ್ನು ಕರೆತರಿಸಿ, ಚಾಡಿಗಾರನ ಇದಿರಿನಲ್ಲಿ ಅವರನ್ನು ವಿಚಾರಿಸಿದನು.

ಆಗ ಚೆನ್ನಯನು ಕೈ ಮುಗಿದು, "ಬುದ್ಧಿ, ಇದು ಯಾವುದೂ ನನ್ನ ಅಣ್ಣನಿಗೆ ಗೊತ್ತಿಲ್ಲ. ಮಾತಾಡಿದ್ದು ನಾನು. ನಾನು ನಿಮ್ಮ ಕುಲವನ್ನು ಜರೆಯಲಿಲ್ಲ. ಇದನ್ನು ಖಂಡಿತವಾಗಿ ಹೇಳುತ್ತೇನೆ. ತಾವು ಕೇಳಂವುದಾದರೆ ನನ್ನ ಮಾತುಗಳನ್ನು ನಾನೇ ಹೇಳಿ ಬಿಡುತ್ತೇನೆ ಬುದ್ಧಿ. ಮೊನ್ನೆ ಸರಪಣಿ ಕಳಚಿಬಿಟ್ಟು ಜನಗಳನ್ನು ಚದುರಿಸುತ್ತಿದ್ದ ಅರಮನೆಯ ಸೊಕ್ಕಾನೆಯನ್ನು ನಾವಿಬ್ಬರೂ ಹಿಡಿದು, ತಂದು ಲಾಯದಲ್ಲಿ ಕಟ್ಟಿದೆವಷ್ಟೆ. ಆ ದಿನ ನಮಗೆ ಹಿಡಿಯಲಾರದಷ್ಟು ಸಂತೋಷವಾಯಿತು. ಇಂಥ ಸಾಹಸವಿದ್ದರೆ ಉಂಡ ಅನ್ನ ನಮಗೆ ಅರಗುತ್ತದೆ. ನಾವು ಈ ರಾಜ್ಯಕ್ಕೆ ಬಂದು ಎರಡು ಮೂರು ವರ್ಷಗಳಾದರೂ, ಬಡವರಾದ ನಮ್ಮಿಂದ ಯಾವ ತರದ ಪೌರುಷವೂ ಬೀಡಿಗೆ ಆಗಲಿಲ್ಲ. ಹಂದಿಯ ನವಿರು, ಹುಲಿಯ ಉಗುರು, ಆನೆಯ ದಂತ ಇವನ್ನು ತಂದು ಕಾಣಿಕೆ ಕೊಡೋಣವೆಂದರೆ, ತುಪ್ಪೆಕಲ್ಲಿನ ಕಾಡಿನಲ್ಲಿ ಕಾಲಿಡಲು ನಮಗೆ ಅಪ್ಪಣೆ ಇಲ್ಲ; ಕೊಳುಗುಳಕ್ಕೆ ಹೋಗಿ ಹಗೆಗಳನ್ನು ಚೆಂಡಾಡಿ ಅವರ ತಲೆಗಳನ್ನು ನಿಮ್ಮ ಪಾದಕ್ಕೆ ಒಪ್ಪಿಸೋಣವೆಂದರೆ, ನಮಗೆ ರಣವೀಳ್ಯವನ್ನು ಕೊಟ್ಟಿಲ್ಲ. ಹೀಗೆ ನಮಗೆ ಇಲ್ಲಿ ಉಂಡ ಉಣಿಸು ಕುತ್ತವಾಗಿದೆ. ಕುಡಿದ ನೀರು ಪಿತ್ತವಾಗಿದೆ. ಉಟ್ಟ ಬಟ್ಟೆ ಕೊಳೆಯಾಗಲಿಲ್ಲ. ಹಿಡಿದ ಕತ್ತಿ ಮಾಸಲಿಲ್ಲ. ಈ ಮಾತು ದೂಷಣೆಯಾದರೆ ಈ ಕತ್ತಿ ಇದೆ, ನನ್ನ ಕೊರಳೂ ಇದೆ" ಎಂದು ಹೇಳಿ ಬಲ್ಲಾಳನ ಮುಂದುಗಡೆ ಕತ್ತಿ ಇಟ್ಟು ಕತ್ತನ್ನು ಬಾಗಿಸಿ ನಿಂತನು.

ದೇವಬಲ್ಲಾಳನು ಚೆನ್ನಯನ ವಚನಗಳನ್ನು ಕೇಳಿ, ಸುಮ್ಮನಾಗಿ "ಹೌದು ಬಂಟರೇ, ನಮ್ಮ ರಾಜ್ಯದಲ್ಲಿ ಬೇಟೆಗೀಟೆ, ಆಯುನ ಅರಾಟ ಇರಬೇಕು. ಇವುಗಳ ಮೂಲಕ ಜನಗಳಲ್ಲಿ ಮೈಬಲವು ಬರುತ್ತದೆ; ಸಂಘಶಕ್ತಿಯು ಬೆಳೆಯುತ್ತದೆ. ಆದರೆ ತುಪ್ಪೆಕಲ್ಲು ಕಾಡಿನಲ್ಲಿ ಬೇಟೆಯಾಡಿದರೆ ನಾವು ಪಂಜದವರನ್ನು ಕೊಳುಗುಳಕ್ಕೆ ಕೂಗಿ ಕರೆದಂತಾಗುವುದು. ಅದಕ್ಕಾಗಿಯೇ ಹಿಂದುಮುಂದು ನೋಡುತ್ತಲಿದ್ದೇವೆ, ಬಂಟರೇ" ಎಂದನು.

ಆಗ ಚೆನ್ನಯನು "ಬುದ್ಧಿ, ಕಾಡುಮೃಗಗಳ ಬಾಧೆಯಿಂದ ಜನಗಳನ್ನು ತಪ್ಪಿಸುವುದು ನಮ್ಮ ಕಾರ್ಯ. ಆ ಕಾರ್ಯಸಾಧನೆಯಲ್ಲಿ ಯಾವ ತೊಂದರೆ ಬಂದರೂ ಹಿಮ್ಮೆಟ್ಟಲಾಗದು" ಎಂದನು.

"ಹಾಗಾದರೆ ತುಪ್ಪೆಕಲ್ಲಡವಿಯ ಬೇಟೆ ಆಗಲಿ" ಎಂದು ಬಲ್ಲಾಳನು ಅಪ್ಪಣೆ ಕೊಡಿಸಿ. "ಚೆನ್ನಯ. ಈ ಚಾಡಿಗಾರನನ್ನು ಏನು ಮಾಡಬೇಕು? ಇವನಿಗೆ ತಕ್ಕ ಶಿಕ್ಷೆ ಯಾವುದು?" ಎಂದು ಕೇಳಿದನು.

ಆಗ ಚೆನ್ನಯನು "ಬುದ್ಧಿ, ಅವನಲ್ಲಿ ನನ್ನ ಕತ್ತಿ ನೆನೆಯುವಷ್ಟು ರಕ್ತವಿಲ್ಲ, ಕೊತ್ತಿ ತಿನ್ನುವಷ್ಟು ಮಾಂಸ ವಿಲ್ಲ, ಅವನನ್ನು ಬಿಟ್ಟುಬಿಡಿ" ಎಂದನು.

ಮೇಲಿನ ಸಂಭಾಷಣೆಯಾದ ಕೆಲವು ದಿನಗಳಲ್ಲಿಯೇ ಓಲೆಗಳನ್ನು ಬರಿಸಿ ಬೇಟೆಗೆ ಬೇಕಾದ ಸನ್ನಾಹ ಕ್ಕಾಗಿ ಕಡಲ ಬಳಿಯ ಬೊಕ್ಕಪಟ್ಟಣದಿಂದ ಬಗೆಬಗೆಯ ಬಲೆಗಳನ್ನು ತರಿಸಿದ್ದಾಯಿತು; ಗಟ್ಟದ ಮೇಲಿಂದ ನಾನಾ ಜಾತಿಯ ಬೇಟೆನಾಯಿಗಳನ್ನು ಒದಗಿಸಿಕೊಂಡದ್ದಾಯಿತು. ತರುವಾಯ ಒಂದು ದಿನ ಬೆಳಗ್ಗೆ ಜನಗಳ ಗುಂಪೊಂದು ಬಿಲ್ಲುಬಾಣಗಳನ್ನೂ ಕತ್ತಿಕೋವಿಗಳನ್ನೂ ಕೊಂಬುಕಹಳೆಗಳನ್ನೂ ಹಿಡಿದುಕೊಂಡು, ನಾಯಿಗಳ ಸಮೇತ ತುಪ್ಪೇಕಲ್ಲು ಕಾಡನ್ನು ನುಗ್ಗಿತು.

ಆ ಬೇಟೆಗಾರರು ಬಹಳ ಹೊತ್ತಿನ ತನಕ ಕಾಡು ಎಬ್ಬಿದರೂ ಬೂದು ಕಣ್ಣಿನ ಮೊಲ, ಪಜ್ಜೆಕಾಲಿನ ಜಿಂಕೆ, ಕೊಬ್ಬಿದ ಹಂದಿ, ಕುಟುರುವ ಕುಡುಮುಲು ಹಕ್ಕಿ—ಯಾವುದೊಂದೂ ಏಳಲಿಲ್ಲ. ತರುವಾಯ ಅವರು ಬಲ್ಲೆ ಇದ್ದಲ್ಲಿ ಕಲ್ಲು, ಕಂಡಿ ಇದ್ದಲ್ಲಿ ಜನ, ಮೈದಾನ ಇದ್ದಲ್ಲಿ ನಾಯಿ ಹೀಗೆ ಮೇಳಯಿಸಿಕೊಂಡು ಕಾಡಿಗೆ ಮುತ್ತಿಗೆ ಹಾಕಿದರು. ಸುಮಾರು ಎರಡು ತಾಸುಗಳ ವರೆಗೆ ಸುಮ್ಮನೆ ಕಾದು ನಿಂತರು. ಯಾವುದೊಂದಾ ದರೂ ನೆಲದ ಮೇಲೆ ಓಡಿದಂತೆ, ಇಲ್ಲವೆ ಮರದ ಮೇಲೆ ಹತ್ತಿದಂತೆ, ಇಲ್ಲವೆ ಆಕಾಶದಲ್ಲಿ ಹಾರಿದಂತೆ ತೋರಲಿಲ್ಲ. ಅನಂತರ ಒಂದು ಕಡೆಯಲ್ಲಿ ನೆಲಹಿಡಿದು ಎಳೆಯ ವರೆಗೆ ಎಬ್ಬುವಾಗ ಆಳುದ್ದ ಕಪ್ಪು ತೋರಿತು. "ಆನೆಗೆ ಕಿರಿದು, ಕುದುರೆಗೆ ಹಿರಿದು" ಎಂದು ಒಬ್ಬನು ಮರಗಳ ಹಿಂದಿನಿಂದ ಮತ್ತೊಬ್ಬನಿಗೆ ಕೈಸನ್ನೆ ಮಾಡಿದನು. ಒಡನೆ ಅದು ದಡಕ್ಕೆಂದು ಎದ್ದು, ಡುರುಕ್ಕೆಂದು ಕೂಗಿ, ಮುಸುಡು ಆಡಿಸಿದ್ದನ್ನು ಕಂಡು ಚೆನ್ನಯನು "ಇದಿರಿಗೆ ಬಂದದ್ದು ಎಂಥಾದ್ದು, ಕೋಟಿ?" ಎಂದು ಕೇಳಿದನು.

ಅಷ್ಟರಲ್ಲಿ ಆ ಕಾಡು ಹಂದಿಯು ನವಿರುಗಳನ್ನು ನಿಗುರಿಸಿ, ಮಳೆಗಾಲದ ಗುಡುಗಿನಂತೆ ಮೊರೆಯುತ್ತ, ಮಿಂಚಿನಂತೆ ತನ್ನ ಕೋರೆ ಹಲ್ಲುಗಳನ್ನು ಜಳಪಿಸುತ್ತ, ಗಾಳಿಯ ವೇಗದಿಂದ ಕೋಟಿಗೆ ಎದುರಾಗಿ ಬರುತ್ತಿತ್ತು. "ಓಡೋಣವೇ ಬಂಟರ ಮಾನದ ಮೇಲೆ ಬರುತ್ತದೆ, ನಿಲ್ಲೋಣವೇ ಪ್ರಾಣದ ಮೇಲೆ ಬರುತ್ತದೆ"—ಈ ಪ್ರಕಾರವಾಗಿ ಕೋಟಿಯ ಮನಸ್ಸು ತೂಗುತ್ತಲಿತ್ತು. ಅರೆನಿಮಿಷದಲ್ಲಿ ಅವನ ಬಲಗೈ ಬಾಣವು ಎಡಗೈಯ ಬಿಲ್ಲನ್ನು ಬಿಟ್ಟು ಹಾರಿ, ಹಂದಿಯ ಮುಖದಲ್ಲಿ ಮುರುಟಿಕೊಂಡು ಬೆನ್ನಲ್ಲಿ ಹೊರಟಿತು. ಹಂದಿಯ ಒರಳಾಟವು ನಾಕಲೋಕಕ್ಕೆ ಮುಟ್ಟಿತು; ಹೊರಳಾಟವು ನಾಗಲೋಕಕ್ಕೆ ಹೋಯಿತು. "ಹಂದಿಯನ್ನು ಅಣ್ಣನು ಕೊಂದನೋ, ಅಣ್ಣನನ್ನು ಹಂದಿ ಕೊಂದಿತೋ" ಎಂಬ ಸಂದೇಹದಿಂದ ಚೆನ್ನಯನು ಮುಂದೋಡಿ ಬಂದು ಕೇಳಿದನು. ಕೋಟಿಯು ತನ್ನ ಕೈಬೆರಳಿಂದ ತೋರಿಸಿದನು. ಹುಲ್ಲು ಎಲೆಗಳ ರಾಶಿಯ ಮೇಲೆ ಆನೆಮರಿಯಂತೆ ಭಯಂಕರ ವಾಗಿ ಬಿದ್ದಿದ್ದ ದೊಡ್ಡ ಕಾಡುಹಂದಿಯನ್ನು ಚೆನ್ನಯನು ತನ್ನ ಎಡಗಾಲಿಂದ ಮೆಟ್ಟಿದನು. ಕೂಡಲೇ ಆ ಹಂದಿಯು ಮುಚ್ಚಿದ್ದ ಕಣ್ಣನ್ನು ಅರೆತೆರೆದು, ಬಾಲವನ್ನು ಪಿಟ್ಟನೆ ಅಲುಗಿಸಿ, ಮೈ ಕೊಡಹಿ, ಅರೆನಿಮಿಷದಲ್ಲಿ ಎದ್ದೋಡಿತು. ಚೆನ್ನಯನು ಅದನ್ನು ಬೆನ್ನಟ್ಟಿಕೊಂಡು ಹೋದನು. ಅವನ ಹಿಂದುಗಡೆ ಉಳಿದವರೆಲ್ಲರೂ ಓಡತೊಡಗಿದರು.

ಹಂದಿಯು ಓಡುತ್ತ ಓಡುತ್ತ, ತುಪ್ಪೆಕಲ್ಲ ಮಲೆಯನ್ನು ದಾಟಿ, ಪಂಜಸೀಮೆಯ ಅಡ್ಡಕ್ಕೆ ಹೋಗಿ, ಫಕ್ಕನೆ ತಿರುಗಿ. ಚೆನ್ನಯನಿಗೆ ಇದಿರಾಗಿ ಬಂತು. ಚೆನ್ನಯನು ತನ್ನ ಉರವಣೆಯನ್ನು ನಿಲ್ಲಿಸಿ, ಕಣ್ಣುಮುಚ್ಚು ವಷ್ಟರಲ್ಲಿ ತನ್ನ ಎರಡು ಕತ್ತಿಗಳನ್ನೂ ಮುಂದಕ್ಕೆ ಹಿಡಿದು, ಹಂದಿಗೆ ಎದುರಾಗಿ ನಿಂತನು. ಹಾಯ್ದುಬರುವ

ಹಂದಿಯ ಎರಡು ಪಕ್ಕಗಳು ಚೆನ್ನಯನು ಒತ್ತಿಹಿಡಿದಂಥ ಕತ್ತಿಗಳಿಂದ ಸಿಳ್ಳನೆ ಸೀಳಲ್ಪಟ್ಟು, ಆ ಹಂದಿಯು ಮುಂದುವರಿಸಲಾರದೆ ಅವನ ಕೈಬಳಿಯಲ್ಲಿಯೇ ರಕ್ತದ ಹೊನಲಿನಲ್ಲಿ ಹೊರಳಾಡಿ ಪ್ರಾಣಬಿಟ್ಟಿತು. ಹಂದಿಯ ತಿವಿತದಿಂದ ಮಾಂಸವೂ ರಕ್ತವೂ ಹೋಗಿ, ಚೆನ್ನಯನ ಬರೇ ಎಲುಬುಗಳು ಮಾತ್ರ ಅವನ ಕೈಗಳಿಂದ ತೂಗುತ್ತಿದ್ದವು.

ಹಂದಿಯು ಪ್ರಾಣಬಿಟ್ಟ ಹೊತ್ತಿಗೆ ಸರಿಯಾಗಿ ಪಂಜದ ಸೀಮೆಯವರು ಅಲ್ಲಿಗೆ ಬಂದು ಮುಟ್ಟಿದರು. ಬೇಟೆಗಾರರ ಬೆಳಗಿನ ಕೋಲಾಹಲವನ್ನು ಕೇಳಿ ಚೆಂದುಗಿಡಿಯು ಅವರನ್ನು ಮೊದಲೇ ಕಳುಹಿಸಿದ್ದರೂ ಎಣ್ಮೂರಿನವರು ಯಾವ ಕಾಡನ್ನು, ಯಾವ ಕುಂಜವನ್ನು ಎಬ್ಬುತ್ತಾರೆಂದು ತಿಳಿಯದೆ, ಅವರು ಸುತ್ತಾಡಿ ಸುತ್ತಾಡಿ ಕಟ್ಟಕಡೆಗೆ ಇಲ್ಲಿಗೆ ಬಂದು ಕೂಡಿದರು.

ಅವರ ಕಡೆಯ ಮುಖ್ಯಸ್ಥನೊಬ್ಬನು "ಈ ಹಂದಿ ನಮ್ಮ ಸೀಮೆಯಲ್ಲಿ ಬಿದ್ದಿದೆ. ನಮ್ಮ ಗಡಿಯಲ್ಲಿದ್ದುದನ್ನು ನಾವು ಕೊಡಲಿಕ್ಕಿಲ್ಲ. ಹಂದಿಯ ತಲೆಬಾಲಗಳನ್ನು ಕೊಟ್ಟುಹೋಗು. ಇಲ್ಲದಿದ್ದರೆ ನಾವು ಹಂದಿಯನ್ನು ಒಯ್ಯುತ್ತೇವೆ" ಎಂದು ಹೇಳಿ, ಗಟ್ಟಿಯಾದ ಬೀಳುಗಳನ್ನು ತರಿಸಿ, ಹಂದಿಯ ಸೊಂಟಕ್ಕೆ ಸಿಕ್ಕಿಸಿ, ತನ್ನ ಕಡೆಯ ಆಳುಗಳಿಂದ ಅದನ್ನು ಎಳೆಯಿಸಿದನು.

ಗಾಯಗಳಿಂದ ಬಹಳ ಗಾಸಿಗೊಂಡಿದ್ದ ಚೆನ್ನಯನು ಎದ್ದುನಿಂತು, "ಅಣ್ಣಾ! ಏನು ನೋಡುತ್ತೀರಿ? ಈಗ ಈ ಹಂದಿಗೆ ಗೆಲವು ಹೇಳುತ್ತೀರೋ? ಇಲ್ಲವೆ ಪಂಜದ ಮುನ್ನೂರು ಆಳಿಗೆ ಇದಿರಾಗುತ್ತೀರೋ?" ಎಂದು ಕೇಳಿದನು.

ಕೋಟಿಯು "ಚೆನ್ನಯ, ಮುಂದರಿಸಬೇಡ. ನಾನು ಒಮ್ಮೆ ಒಡಂಬಡಿಸುತ್ತೇನೆ" ಎಂದು ಹೇಳಿ, "ನಾವು ಕೊಂದ ಹಂದಿ ನಮ್ಮದಲ್ಲವೇ?" ಎಂದು ಪಂಜದವರ ಹತ್ತಿರ ನ್ಯಾಯಕ್ಕೆ ಹೊರಟನು.

ಅಷ್ಟರಲ್ಲಿ ಪಂಜದವರು ಬೀಳುಹಾಕಿ ಹಂದಿಯನ್ನು ಎಳೆದುಕೊಂಡು ಹೋಗಲು ಸಿದ್ಧವಾಗಿದ್ದುದನ್ನು ಕಂಡು ಚೆನ್ನಯನು ತನ್ನ ನಡುವಿಗಿದ್ದ ಬೆಳ್ಳಿಯ ಜೋಡೆಳೆಯ ಉಡುದಾರವನ್ನು ಈಚೆಗೆ ತೆಗೆದು, ಹಂದಿಯ ಎರಡು ದಾಡೆಗಳಲ್ಲಿ ಸಿಕ್ಕಿಸಿ, ಅದನ್ನು ಒಬ್ಬನೇ ಹಿಂದಕ್ಕೆ ಸೆಳೆದು, ಪಂಜಕ್ಕೂ ಎಣ್ಮೂರಿಗೂ ನಡುವೆ ಇರುವ ಮಂಜಳಪಾದೆ ಎಂಬ ಸ್ಥಳಕ್ಕೆ ಸರಸರನೆ ಒಯ್ದುತಂದನು. ಅನಂತರ ಇಕ್ಕೆಡೆಯವರಿಗೆ ಹೊಯ್‌ಕಯ್ ಆಯಿತು. ಕೋಟಿಚೆನ್ನಯರು ಆ ಮುನ್ನೂರು ಆಳುಗಳಲ್ಲಿ ಹಲವರನ್ನು ಸುಗ್ಗಿಬೆಳೆಯ ಹುಲ್ಲು ಸೂಡಿಗಳನ್ನು ಗಾಳಿಯು ಮಗುಚುವಂತೆ ಅಡ್ಡಹಾಕಿದರು. ಅಳಿದುಳಿದವರು ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು, ಬೆನ್ನುಕೊಟ್ಟು ಓಡಿದರು.

ತರುವಾಯ ಹಂದಿಯನ್ನು ಸೀಳಿದ್ದಾಯಿತು; ಎಣ್ಮೂರು ಬಲ್ಲಾಳನ ಅಪ್ಪಣೆ ಪ್ರಕಾರ ಎಲ್ಲರಿಗೂ ಮಾಂಸವನ್ನು ಹಂಚಿದ್ದಾಯಿತು; ಕೋಟಿಚೆನ್ನಯರು ಬೇಟೆಯ ಆಯಾಸವನ್ನು ಎಣ್ಣೆಯ ಸ್ನಾನದಿಂದ ಕಳೆದದ್ದಾಯಿತು. ಒಂದು ವಾರದೊಳಗೆ ಅವರ ಮೈಗಾಯಗಳೆಲ್ಲ ವಾಸಿಯಾಗಿ ಅವರ ಭುಜಗಳು ಮತ್ತೆ ಕುದುರುವುದಕ್ಕೆ ತೊಡಗಿದುವು.

ಇತ್ತ ಎಣ್ಮೂರಿನ ಮೇಲೆ ದಂಡೆತ್ತಿ ಹೋಗಬೇಕೆಂದು ಹವಣಿಸುತ್ತಿದ್ದ ಪೆರುಮಾಳು ಬಲ್ಲಾಳನಿಗೂ ಚೆಂದುಗಿಡಿಗೂ ಈ ಬೇಟೆಯಿಂದ ಒಂದು ನೆಪವು ದೊರೆಯಿತು. ಪೆರುಮಾಳು ಎಣ್ಮೂರನ್ನು ಕಾವೇರಿ

ಸಂಕ್ರಮಣದೊಳಗೇನೇ ಪುಡಿಪುಡಿ ಮಾಡಬೇಕೆಂದು ಇದ್ದನು. ಆದರೆ ಪಂಜದಲ್ಲಿ ಕೊಳುಗುಳಕ್ಕೆ ಬೇಕಾದ ಸಾಮಗ್ರಿಗಳು ಒದಗದೆ ಇದ್ದುದರಿಂದಲೋ ಅಥವಾ ಕೇಮರ ಬಲ್ಲಾಳನ ಬುದ್ಧಿಯು ಕೆಸರುಗದ್ದೆಯ ಕಂಬ ದಂತೆ ಇದ್ದುದರಿಂದಲೋ ಇಲ್ಲವೆ ಇನ್ನು ಯಾವ ಕಾರಣದಿಂದಲೋ ತುಲಾ ಸಂಕ್ರಾಂತಿಯು ಕಳೆದರೂ ಯುದ್ಧದ ಸಿದ್ಧತೆ ಆಗಲಿಲ್ಲ. ಅದಕ್ಕಾಗಿ ಪೆರುಮಾಳು ಬಲ್ಲಾಳನು ಇರುಳಲ್ಲಿ ನಿದ್ದೆಯಿಂದ ಎದ್ದೆದ್ದು ಕನವರಿಸು ತ್ತಿದ್ದನು. ಆತನು ಪಂಜದ ಮುನ್ನೂರು ಆಳುಗಳ ಮೋರೆಗೆ ಮಸಿಯಾದ ವಾರ್ತೆಯನ್ನು ಕೇಳಿ, ಅದಕ್ಕೆ ತಕ್ಕುದಾದ ಮುಯ್ಯನ್ನು ಎಣ್ಮೂರು ಬಲ್ಲಾಳನಿಗೆ ಮಾಡಬೇಕೆಂದು ಚೆಂದುಗಿಡಿಗೆ ಸೂಚಿಸಿದನು. ಹೀಗೆ ಪೆರುಮಾಳು ಬಲ್ಲಾಳನು ಕೊಟ್ಟ ಧೈರ್ಯದಿಂದ ಉಬ್ಬಿ ಚೆಂದುಗಿಡಿಯು ಪರಿಹಾಸ್ಯಕರವಾದ ಒಂದು ಬಗೆಯ ಒಕ್ಕಣೆಯ ಓಲೆಯನ್ನು ಎಣ್ಮೂರಿಗೆ ಕಳುಹಿಸಿದನು.

ತುಲಾ ಸಂಕ್ರಾಂತಿಯು ಕಳೆದ ಏಳನೆಯ ದಿನ ಈ ಪತ್ರವು ಎಣ್ಮೂರಿಗೆ ಬಂದು ಮುಟ್ಟಿತು. ದೇವ ಬಲ್ಲಾಳನು ಬೀಡಿನಲ್ಲಿ ಓಲಗವಾಗಿದ್ದನು. ಎಡದ ಮೈಯಲ್ಲಿ ಕಿನ್ನಿಚೆನ್ನಯ, ಬಲದ ಮೈಯಲ್ಲಿ ಕೋಟಿ ಚೆನ್ನಯ, ಮುಂದುಗಡೆಯಲ್ಲಿ ಹದಿನೆಂಟು ಪೇಟೆಯ ಮನ್ನೆಯರು, ಹಿಂದುಗಡೆಯಲ್ಲಿ ಚಾಮರ ಬೀಸುವ ಕನ್ನೆಯರು, ಹೀಗೆ ಸಕಲ ವಿಲಾಸವೈಭವಗಳ ಒಡ್ಡೋಲಗದಲ್ಲಿ ಒಪ್ಪುತ್ತಿರುವ ಎಣ್ಮೂರು ದೇವಬಲ್ಲಾಳನ ಸಮುಕ್ಷದಲ್ಲಿ ಪಂಜದ ಹರಿಹಾರನು ತಂದಿದ್ದ ಓಲೆಯನ್ನು ಬೀಡಿನ ಸೇನಬೋವನು ಓದಿದನು.

ಅದೆಂತೆಂದರೆ—

ಶ್ರೀಮತ್ತು ಪಂಜ ಬೀಡಿನ ಬಲ್ಲಾಳ ಪಟ್ಟದಲ್ಲಿ ಅಭಿಷಿಕ್ತರಾದ ಪಂಜ ಸಂಸ್ಥಾನದ ಶ್ರೀ ಕೇಮರ ಬಲ್ಲಾಳರು ಎಣ್ಮೂರು ಬೀಡಿನ ದೇವಬಲ್ಲಾಳರಿಗೆ ಬರೆಯಿಸಿದ ಪತ್ರವೇನೆಂದರೆ—ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನಶಕ ವರ್ಷ ೧೭೦೭ನೆಯ ಶ್ರೀಮುಖ ಸಂವತ್ಸರದ ತುಲಾಮಾಸ ದಿನ ೨೫ರ ವರೆಗೆ ಉಭಯ ಕುಶಲೋಪರಿ. ತರುವಾಯ ನಮ್ಮ ನಿಮ್ಮ ಉಭಯ ರಾಜ್ಯಗಳನ್ನು ವಿಂಗಡಿಸಲಿಕ್ಕಾಗಿ ಪ್ರಾಕಾರಭ್ಯ ಹಾಕಿದ್ದ ಗಡಿಕಲ್ಲುಗಳನ್ನು ನಿಮ್ಮ ಕಡೆಯ ದುರ್ಮನುಷ್ಯರು ಕಿತ್ತು ಹಾಕಿ ನಮ್ಮ ಸಂಸ್ಥಾನದ ಸರಹದ್ದುಗಳನ್ನು ಬೇರ್ಪಡಿಸಿದ್ದಾರೆಂಬುದಾಗಿಯೂ, ನಮ್ಮ ಅಪ್ಪಣೆ ಯಿಲ್ಲದೆ ನಮ್ಮ ಸಂಸ್ಥಾನಕ್ಕೆ ಸೇರಿದ್ದ ಬೈಲುಭೂಮಿಯನ್ನು ಬಲಕಾಯಿಸಿದ್ದಾರೆಂಬುದಾಗಿಯೂ, ಇತ್ತಲಾಗೆ ನಮ್ಮ ಕಾಡನ್ನು ಒಳನುಗ್ಗಿ ನಮ್ಮೊಡನೆ ಹೇಳದೆ ಕೇಳದೆ ಹಂದಿಯನ್ನು ಬೇಟೆಯಾಡಿ ನಮ್ಮ ಕಡೆಯವರ ಮಾತನ್ನು ಮೀರಿ ಅದನ್ನು ಎಳೆದುಕೊಂಡು ಹೋಗಿದ್ದಾರೆಂಬು ದಾಗಿಯೂ ನಮ್ಮ ಚಿತ್ತಕ್ಕೆ ಬಂದುದರಿಂದ, ಈ ವಿವಾದಾಂಶಗಳು ಸರಿಯಾಗಿ ಇತ್ಯರ್ಥವಾಗುವುದಕ್ಕೆ ಮುಂಚಿತವಾಗಿ ನಮ್ಮ ಕಾಡಿನಲ್ಲಿ ಕೊಂದಿದ್ದ ಹಂದಿಯ ತಲೆಬಾಲಗಳನ್ನು ಈ ಓಲೆ ತರುವವರ ಕೈಯಲ್ಲಿ ನಮ್ಮ ಸಮಾಧಾನಕ್ಕಾಗಿ ಕೂಡಲೇ ಕಳುಹಿಸಿ ಕೊಡತಕ್ಕದ್ದು. ಅವನ್ನು ಕಳುಹಿಸದ ಕಾಲಕ್ಕೆ ಆ ಹಂದಿಯನ್ನು ಕೊಂದವರನ್ನು ನಮಗೆ ಒಪ್ಪಿಸಿಕೊಡತಕ್ಕದ್ದು. ಅದು ಆಗದಿದ್ದರೆ ನೀವು ಗಂಡುಗಲಿಗಳಂತೆ ಕೊಳುಗುಳಕ್ಕೆ ಜನಗಳನ್ನು ಕೂಡಿಕೊಂಡು ಬರತಕ್ಕದ್ದು. ಹಾಗೆ ಕಾಳಗಕ್ಕೆ ಬರಲು ಆಗದಿದ್ದರೆ ಬಲ್ಲಾಳರಾದ ನೀವು ಸೀರೆಯುಟ್ಟು, ರವಕೆ ತೊಟ್ಟು, ಬೀಡಿನ ಚಾವಡಿಯಲ್ಲಿ ತಲೆಬಾಗಿ ನಿಂತುಕೊಂಡಿದ್ದಲ್ಲಿ ಬಲ್ಲಾಳರಾದ ನಾವು ದಿಬ್ಬಣ ಸಮೇತ ಹೆಣ್ಣುಕೇಳಲು ಬರುವಂಥವರಿದ್ದೇವೆ.

ಹೀಗೆ ಸೇನಬೋವನು ಓದಿದ ಪತ್ರವನ್ನು ಕೇಳಿ ದೇವಬಲ್ಲಾಳನ ಬಾಯಿ ನೀರು ಆರಿಹೋಯಿತು. ಎರಡು ನಿಮಿಷಗಳ ವರೆಗೆ ಓಲಗದಲ್ಲಿ ಸದ್ದುಗಲುಗು ಇಲ್ಲದೆ ಮೌನವು ಕವಿಯಿತು.

"ಕಿನ್ನಿಚೆನ್ನಯ, ಓಲೆಯ ಒಕ್ಕಣೆ ಕಿವಿಯಲ್ಲಿ ಬಿತ್ತಷ್ಟೆ. ಇದಕ್ಕೆ ಏನು ಹೇಳುತ್ತಿ?" ಎಂದು ದೇವ ಬಲ್ಲಾಳನು ಕಿನ್ನಿಚೆನ್ನಯನ ಕಡೆಗೆ ಮೋರೆ ತಿರುಗಿಸಿ, "ಈ ಕೋಟಿಚೆನ್ನಯರ ಸಂಗತಿ ಬಿಸಿಹಾಲಿನ ಗುಟುಕಿನಂತೆ ಒಳಗೆ ತೆಗೆದುಕೊಳ್ಳಲಿಕ್ಕೂ ಇಲ್ಲ, ಹೊರಗೆ ಉಗುಳಲಿಕ್ಕೂ ಇಲ್ಲ ಎಂಬಂತಾಗಿದೆ. ಏನು ಮಾಡೋಣ?" ಎಂದು ಕೇಳಿದನು.

ಕಿನ್ನಿಚೆನ್ನಯನು ಎದ್ದು 'ಬುದ್ಧಿ' ಎಂದು ದೈನ್ಯದಿಂದ ನುಡಿದು, ಸುಮ್ಮನಾದನು.

ಆಗ ಕೋಟಿಯು "ಬುದ್ಧಿ. ಬೀಡಿನವರನ್ನು ಹುರಿಗೊಳಿಸತಕ್ಕ ತಾವೇ ಹೀಗೆ ಕಳವಳಿಸಿದರೆ ಮಾಡುವು ದೇನು? ಬೆಂಕಿಗೆ ಚಳಿ ಹಿಡಿದರೆ, ನೀರಿಗೆ ಬಾಯಿ ಆರಿದರೆ, ಗಾಳಿಗೆ ಮೈ ಬೆವರಿದರೆ ನಿವಾರಿಸತಕ್ಕವರು ಯಾರು? ಇಂಥ ಪ್ರಸಂಗದಲ್ಲಿ ತಮ್ಮಂಥವರು ಸಾವಧಾನವಾಗಿ ವರ್ತಿಸಬೇಕಾಗಿದೆ" ಎಂದನು.

ಆಗ ಚೆನ್ನಯನು "ಬುದ್ಧಿ, ನನ್ನಿಂದ ತಮಗಾಗಲಿ ತಮ್ಮ ರಾಜ್ಯಕ್ಕಾಗಲಿ ಅಪಾಯವು ಬರುವಂತಿದ್ದರೆ, ನಾನು ಈಗಲೇ ಹೊರಟೆ. ನನಗೆ ಅಪ್ಪಣೆ" ಎಂದು ಕೈಮುಗಿದು ನಿಂತುಕೊಂಡನು.

ದೇವಬಲ್ಲಾಳನು ಆ ಬಂಟರ ದೆಸೆಯಿಂದ ತನ್ನ ರಾಜ್ಯಕ್ಕೆ ಆಪತ್ತು ಒದಗುತ್ತದೆಂದು ತನ್ನ ಮನಸ್ಸಿ ನಲ್ಲಿಯೇ ನೆನೆಸಿ. ಅದನ್ನು ಬಾಯಿಬಿಟ್ಟು ಹೇಳಲಾರದೆ, ಉಸ್ಸೆಂದು ಒಮ್ಮೆ ಉಸಿರುಬಿಟ್ಟನು.

ಅದನ್ನು ಕಂಡು ಕೋಟಿಯು "ಬುದ್ಧಿ! ತಾವು ಚಿಂತೆ ಬಿಡಬೇಕು. ಇನ್ನು ನಮಗೆ ರಣವೀಳ್ಯವನ್ನು ಕೊಟ್ಟು ಕಳುಹಿಸಿದ್ದಲ್ಲಿ ನಾವು ಹಗೆಗಳನ್ನು ಎದುರ್ಗೊಂಡು ರಣರಂಗದಲ್ಲಿ ಅವರ ತಲೆಗಳನ್ನು ಚೆಂಡಾಡಿ, ಇಲ್ಲವೆ ನಮ್ಮ ಮೈರಕ್ತವನ್ನು ಚೆಲ್ಲಾಡಿ, ತಮ್ಮ ಋಣವನ್ನು ತೀರಿಸಬೇಕೆಂದು ಇದ್ದೇವೆ" ಎಂದು ಗಟ್ಟಿಯಾಗಿ ಹೇಳಿದನು.

ಹುರಿದುಂಬಿಸತಕ್ಕ ಈ ಮಾತುಗಳ ಗಾಳಿಯು ಬೀಸುತ್ತಲೇ ಅಲ್ಲಿದ್ದವರ ಗರ್ವೋದ್ರೇಕದಿಂದಲೂ ಭುಜಗಳ ಚಪ್ಪಾಳೆಯಿಂದಲೂ ಆಸ್ಥಾನವು ಕದಡಿದಂತಾಯಿತು. "ಸಿಟ್ಟೆಬ್ಬಿಸುವ ಓಲೆ!" 'ಸುಡುಗಾಡು ಓಲೆ!', 'ಸೊಕ್ಕಿನ ಓಲೆ!' ಎಂಬ ಬಿರುನುಡಿಗಳು ಬಾಯಿಂದ ಬಾಯಿಗೆ ಹಾರಿದುವು. ಒಬ್ಬಿಬ್ಬರು ಆ ಒಲೆಕಾರನ ಮೇಲೆ ಕೈ ಮಾಡುವುದಕ್ಕೆ ಹೋದರು. ಕೋಟಿಯು ಬೇಡಬೇಡವೆಂದು ಎಷ್ಟು ತಡೆದರೂ, ಬೀಡಿನ ಮಂಜು ಪೆರ್ಗಡೆ ಎಂಬವನು ಆ ಓಲೆಯ ಕಡೆಕುಡಿ ಕತ್ತರಿಸಿ, ಅದನ್ನು ಓಲೆಕಾರನ ಕೊರಳಿಗೆ ಕಟ್ಟಿ, ಅವನನ್ನು ಬೈದು ಭಂಗಿಸಿ ಚಾವಡಿಯಿಂದ ಹೊರಕ್ಕೆ ದಬ್ಬಿ, ಅವಮಾನ ಮಾಡಿ ಕಳುಹಿಸಿಬಿಟ್ಟನು.

ಹೀಗೆ ಮೋರೆಗೆ ಮಂಗಳಾರತಿಯಾಗಿ ಪಂಜಕ್ಕೆ ಹಿಂದೆರಳಿದ ತನ್ನ ಕಡೆಯ ಹರಿಕಾರನನ್ನು ಕಂಡು ಚೆಂದುಗಿಡಿಯು ಅತ್ಯಂತ ಕೋಪಾಟೋಪದಿಂದ ಕೇಮರಬಲ್ಲಾಳನ ಬಳಿಗೆ ಹೋಗಿ, ಎಣ್ಮೂರಿನ ಮೇಲೆ ದಾಳಿಪರಿದು ಹೊರಡುವುದಕ್ಕೆ ಎಲ್ಲವೂ ಸಿದ್ಧವಾಗಿರಬೇಕೆಂದು ಅಪ್ಪಣೆಕೊಡಿಸಿ, ತಾನು ಸ್ವತಃ ಪಡುಮಲೆಗೆ ಬೇಗನೆ ಹೋಗಿ, ತೂಕಡಿಸುತ್ತಲಿದ್ದ ಪೆರುಮಾಳು ಬಲ್ಲಾಳನನ್ನು ಎಚ್ಚರಿಸಿ, ಸೇನಾಸಮೇತನಾಗಿ ಪಂಜದವರ ಪಕ್ಷವನ್ನು ಸೇರಿಕೊಳ್ಳುವಂತೆ ಆತನ ಸಹಾಯವನ್ನು ಅಪೇಕ್ಷಿಸಿದನು.

ತುಲಾಮಾಸವು ಕಳೆದು ವೃಶ್ಚಿಕ ಮಾಸವು ತಲೆದೋರಿ ಹತ್ತುದಿನಗಳು ದಾಟಿಹೋದುವು.ಗದ್ದೆಗಳಲ್ಲಿದ್ದ ಬೆಳೆ ಒಕ್ಕಲಿಗನ ಅಂಗಳದಲ್ಲಿ ಮೊದಲೇ ಬೆಚ್ಚಗೆ ಸೇರಿಕೊಂಡಿತ್ತು. ನೀರಿದ್ದ ಕಡೆಗಳಲ್ಲಿ ಸುಗ್ಗಿಯ ಬೆಳೆಯು ಒಂದೂವರೆ ಗೇಣು ಮೇಲೆ ಬಂದಿತ್ತು. ಹಿಂಗಾರು ಮಳೆಯು ಬಾರದೆ ಆಕಾಶವು ತಿಳಿಯಾಗಿತ್ತು. ಮಳೆಗಾಲ ದಲ್ಲಿ ಉಡುಗಿ ಹೋಗಿದ್ದ ಕ್ರಿಯಾಕಲಾಪಗಳು ಈ ಮೊದಲೇ ಸರಾಗವಾಗಿ ನಡೆಯತೊಡಗಿದ್ದುವು. ಬೆಟ್ಟದ ತೊರೆಗಳಲ್ಲಿ ನೀರು ಕಡಿಮೆಯಾದುದರಿಂದ, ಹೋರಾಟದ ಎತ್ತುಗಳು ಗಟ್ಟದ ಸರಕನ್ನು ತುಳುನಾಡಿಗೆ ಹೊತ್ತುಕೊಂಡು ಬರುವುದಕ್ಕೆ ಪ್ರಾರಂಭವಾಗಿತ್ತು. ತುಳುನಾಡಿನ ಅತ್ಯಂತ ಪ್ರಸಿದ್ಧವಾದ ಸುಬ್ರಹ್ಮಣ್ಯ ಜಾತ್ರೆಯು ಸಮೀಪಿಸಿತ್ತು.

ಜಾತ್ರೆಗೆ ನಾಲ್ಕು ದಿವಸ ಮುಂಚಿತವಾಗಿ ಪೆರುಮಾಳು ಬಲ್ಲಾಳನು ಮಂದಿಮಾರ್ಬಲದೊಡನೆ ಪಡುಮಲೆಯಿಂದ ತೆರಳಿ, ಪೆರ್ಲಂಪಾಡಿಯ ಮಾರ್ಗವಾಗಿ ಹೋಗಿ ಎರುಕಡಪಿನ ಹತ್ತಿರ ಬಂದು ಇಳಿದನು. ಪಂಜದ ಕೇಮರ ಬಲ್ಲಾಳನ ಜನಗಳು ಸಾಮಾನುಸರಂಜಾಮನ್ನು ಶೇಖರಿಸಿಕೊಂಡು ಕಡವಿನ ಆಚೆಗೆ ಇದ್ದರು; ಕೇಮರನ ಇನ್ನೊಂದು ದಂಡು ಎಣ್ಮೂರಿನ ಸರಹದ್ದಿನ ಕಂಡಿಕಣಿವೆಗಳನ್ನು ಕಟ್ಟಿ, ರಸ್ತುಮುಸ್ತೈದೆಗಳು ಎಣ್ಮೂರಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟಿತ್ತು. ಈ ಸೈನ್ಯವು ಕಳ್ಳದಾರಿಯಾಗಿ ಬಂದು ತನ್ನ ರಾಜ್ಯದ ಗಡಿಗಳಲ್ಲಿ ಬಲಕಾಯಿಸಿ ನಿಂತಿದ್ದ ಸುದ್ದಿಯು ಜಾತ್ರೆಯ ಮುಂಚಿನ ದಿವಸ ಎಣ್ಮೂರಿನ ದೇವಬಲ್ಲಾಳನಿಗೆ ಗೊತ್ತಾಗಿ ಅವನು 500 ಮಂದಿಯನ್ನು ಎಣ್ಮೂರು ದೇವಸ್ಥಾನದ ಮುಂದುಗಡೆಯ ಬೈಲಿನಲ್ಲಿ ನಿಲ್ಲಿಸಿ, ಜಗಳ ಮಾಡುವುದಕ್ಕೆ ಸಿದ್ಧವಾದನು.

ಯುದ್ಧದ ಸಿದ್ಧತೆಯನ್ನು ಕಂಡು ಕೇಳಿದ ಜನಗಳು ತಮ್ಮ ಬದುಕು ಬಾಳನ್ನೂ ದನಕರುವನ್ನೂ ದೂರಕ್ಕೆ ಸಾಗಿಸಲು ಪ್ರಯತ್ನಿಸಿದರು; ಚಿನ್ನ ಬೆಳ್ಳಿ ಇದ್ದವರು ಅದನ್ನು ನೆಲಮರೆ ಮಾಡಿಕೊಂಡು ತಮ್ಮ ಮನೆಗಳನ್ನು ಕಾದುಕೊಂಡಿದ್ದರು; ಮರ್ದಾಳ ಸೀಮೆಯ ರೈತರು ಲೂಟಿಯ ಭಯದಿಂದ ತಮ್ಮ ಹೆಂಡತಿ ಮಕ್ಕಳು ಆದಿಯಾಗಿ ಸರ್ವಸ್ವವನ್ನೂ ಕೊಕ್ಕಡದ ಮಾರ್ಗವಾಗಿ ಸಾಗಿಸಿಬಿಟ್ಟರು.

ಮಾರ್ಗಶಿರ ಶುದ್ಧ ಷಷ್ಠಿಯ ದಿನ ಸೂರ್ಯೋದಯಕ್ಕೆ ಸರಿಯಾಗಿ ದೇವಬಲ್ಲಾಳನು ಕೋಟಿಚೆನ್ನಯರಿಗೆ ತೊಡವು ತಾಂಬೂಲವನ್ನು ಕೊಟ್ಟು ತನ್ನ ಸೈನ್ಯಕ್ಕೆ ಅವರನ್ನು ಮುಖಂಡರನ್ನಾಗಿ ಮಾಡಿ, ಅವರ ಆಜ್ಞಾನುಸಾರವಾಗಿ ನಡೆಯುವುದಕ್ಕೆ ಅನುವಾದನು. ಕೋಟಿ ಚೆನ್ನಯರು ಸೈನ್ಯದ ಜನದಲ್ಲಿ ಬೀಡಿನ ಪಹರೆಗೂ, ಎಣ್ಮೂರಿನ ಚೌಸುತ್ತಿನ ಕಾವಲಿಗೂ, ಬಲ್ಲಾಳನ ಚಾಕರಿಗೂ ಬೇಕಾದಷ್ಟು ಮಂದಿಯನ್ನು ವಿಂಗಡಿಸಿ, ಉಳಿದ ಅರೆವಾಸಿ ಮಂದಿಯನ್ನು ತಮ್ಮ ಸಂಗಡ ಕೂಡಿಕೊಂಡು, ಎಣ್ಮೂರು ದೇವಸ್ಥಾನದ ದಾರಿಯನ್ನು ಹಿಡಿದರು.

ಹೊತ್ತು ಎರಡು ಮಾರು ಏರುವಷ್ಟರಲ್ಲಿ ಇತ್ತಂಡದವರೂ ಎದುರು ಬೀಳಲು, ಜಗಳಕ್ಕೆ ಪ್ರಾರಂಭವಾಯಿತು. ಇಕ್ಕೆಡೆಯವರು ಎಸೆದ ಬಾಣಗಳಿಂದ ಅನೇಕರು ಮಡಿದುಬಿದ್ದರು. ಮೂರುಮುಕ್ಕಾಲು ಗಳಿಗೆಯಲ್ಲಿ ಪಂಜದ ಕೇಮರ ಬಲ್ಲಾಳನು ಏರಿದ್ದ ಕುದುರೆಯ ಕಣ್ಣಿಗೆ ಬಾಣವು ತಗುಲಿ, ಬಲ್ಲಾಳನು ಕುದುರೆಯಿಂದ ಕೆಳಕ್ಕೆ ಬಿದ್ದು, ಯುದ್ಧರಂಗದಿಂದ ಓಡಿಹೋದನು. ಎಣ್ಮೂರಿನ ಕಡೆ ಯುದ್ಧ ಮಾಡುತ್ತಿದ್ದ ಮಂಜುಹೆಗ್ಗಡೆ ಎಂಬ ವೀರನು ಏಟು ತಗುಲಿ ಅಲ್ಲಿಯೇ ಮಡಿದುದನ್ನು ಕಂಡು ಎಣ್ಮೂರಿನವರು ಹಿಮ್ಮೆಟ್ಟಿ ಪಲಾಯನದ ಮಾರ್ಗವನ್ನು ನೋಡುತ್ತಿದ್ದರು. ಆ ಹೊತ್ತಿಗೆ ಸರಿಯಾಗಿ ಪೆರುಮಾಳು ಬಲ್ಲಾಳನೂ ಚೆಂದುಗಿಡಿಯೂ ತಮ್ಮ ತಮ್ಮ ಕುದುರೆಗಳನ್ನು ದೌಡಾಯಿಸಿಕೊಂಡು ಮುಂದೊತ್ತಿ ಬರಲು, ಎಣ್ಮೂರಿನವರು ಕಾಲಿಗೆ ಬುದ್ಧಿ ಹೇಳತೊಡಗಿದರು.

ಎಣ್ಮೂರಿನ ಜನಗಳು ನಿಂದು ನಿತ್ತರಿಸಲಾರದೆ ಹಿಂದೆಗೆದು ಓಡಿಹೋಗುವುದನ್ನು ಕೋಟಿಚೆನ್ನಯರು ಕಂಡು ತಮ್ಮ ಕತ್ತಿಯನ್ನು ಜಳಪಿಸುತ್ತ, ಇದಿರಿಸಿಕೊಂಡು ಬಂದವರನ್ನು ತಮ್ಮ ಖಡ್ಗಕ್ಕೆ ಆಹುತಿಯನ್ನಾಗಿ ಮಾಡುತ್ತ, ಓಡಿಹೋಗುವವರನ್ನು ಮುಖ ತಿರುಹಿ ಯುದ್ಧ ಮಾಡಬೇಕೆಂದು ಹುರಿಗೊಳಿಸುತ್ತ, ಬಾಕಿಮಾರು ಗದ್ದೆಗೆ ಬಂದರು. ಅಷ್ಟರಲ್ಲಿ ಶತ್ರು ಸೈನ್ಯದ 200 ಮಂದಿ ಅವರನ್ನು ಮುಸುಕಿ ಮುತ್ತಿದರು.

ತಮ್ಮನ್ನು ಬಳಸಿಕೊಂಡು ಬರುತ್ತಿದ್ದ ಹಗೆಯವರನ್ನು ಕಂಡು ಕೋಟಿಚೆನ್ನಯರು ಬೆನ್ನಿಗೆ ಬೆನ್ನು ಕೊಟ್ಟು ನಿಂತು, ಸುತ್ತಮುತ್ತಲಿಂದ ಬರುತ್ತಿದ್ದ ಏಟುಗಳನ್ನು ಒಂದು ಗಳಿಗೆಯವರೆಗೆ ತಪ್ಪಿಸಿಕೊಂಡರು. ತರುವಾಯ ಅವರಿಬ್ಬರೂ ಕಬ್ಬಿನ ತೋಟಕ್ಕೆ ಬಿದ್ದ ಮರಿಯಾನೆಗಳಂತೆಯೂ, ಕುರಿ ಹಿಂಡನ್ನು ನುಗ್ಗಿದ ಹುಲಿ ಮರಿಗಳಂತೆಯೂ ಶತ್ರುಗಳನ್ನು ಕೈಗೆ ಸಿಕ್ಕಂತೆ ಕೊಲ್ಲುತ್ತ ರಣಭಯಂಕರವಾಗಿ ಯುದ್ಧ ಮಾಡುತ್ತಿದ್ದಾಗ ಒಂದು ಚಿತ್ರಬಾಣವು ಕೋಟಿಯ ಮರ್ಮಸ್ಥಾನಕ್ಕೆ ತಗಲಿ ಅವನನ್ನು ಕಲ್ಲುಗೊಂಬೆಯಂತೆ ಮಾಡಿಬಿಟ್ಟಿತು.

ಅದನ್ನು ಕಂಡು ಚೆನ್ನಯನು "ಅಣ್ಣಾ! ಕಾಲು ತಿರುಗಿಸಿ, ಕಾಲು ತಿರುಗಿಸಿ" ಎಂದು ಚೀರಿದನು.

ಕೋಟಿ "ತಮ್ಮಾ, ತಲೆಗೆ ಏರಿದೆ ಚಿತ್ರಬಾಣ; ಎದೆಯನ್ನು ಸೀಳಿದೆ ಶಿಳೀಮುಖ; ಕಣ್ಣಿಗೆ ಬೀಸಿದೆ ಅರಸಿನ ಹುಡಿ" ಎಂದು ಹೇಳಿ, ಕೂಡಲೇ "ತಮ್ಮಾ, ನೀನು ಯಾವಾಗಲೂ ಹಿಂದುಮುಂದು ನೋಡುವುದಿಲ್ಲ, ಅಕೋ! ನಿನ್ನ ಬೆನ್ನು ಹಿಂದೆ" ಎಂದು ಕೈಸನ್ನೆ ಮಾಡಿದನು.

ಆ ಹೊತ್ತಿಗೆ ಸರಿಯಾಗಿ ಚೆಂದುಗಿಡಿಯು ಚೆನ್ನಯನ ಬೆನ್ನ ಹಿಂದೆ ಕಳ್ಳಹೆಜ್ಜೆಯಿಂದ ನುಸುಳಿಕೊಂಡು ತನ್ನ ಕತ್ತಿಯನ್ನು ಆತನ ಕೊರಳಿಗೆ ಇಟ್ಟಿದ್ದನು..

ತಕ್ಷಣವೇ ಚೆನ್ನಯನು ಮೋರೆಯನ್ನು ತಿರುಗಿಸಿ, ಇದ್ದಲ್ಲಿಂದ ಪುಟ ನೆಗೆದು, "ಅಣ್ಣಾ! ಇದು ನೆಗಳೆ; ಹರಿದುಬಂದು ಕಚ್ಚುವ ಸ್ವಭಾವದ್ದು. ಕಣ್ಣಿಂದ ಕಾಣಲಿಕ್ಕಿಲ್ಲ, ಕೈಯಿಂದ ಮುಟ್ಟಲಿಕ್ಕಿಲ್ಲ ಎಂಬಂತೆ ಹಿಂದುಗಡೆ ಯಿಂದ ಬಂದಿದೆ" ಎಂದು ಹೇಳಿ, ತುಂಟ ಕುದುರೆಯಂತೆ ಕಾಲಿನಿಂದ ಒದೆದುಬಿಟ್ಟನು. ಆ ಏಟು ಸಿಡಿಲಿನಂತೆ ಚೆಂದುಗಿಡಿಯ ಕಪಾಲಕ್ಕೆ ತಾಗಿ ಅವನು ಅಲ್ಲಿಯೇ ಕಾಯಬಿಟ್ಟು ಸಂದನು.

ಚೆಂದುಗಿಡಿಯು ಸತ್ತದ್ದೇ ತಡ, ಅವನ ಸೈನಿಕರು ಕೊಳುಗುಳವನ್ನು ಬಿಟ್ಟು ಓಡತೊಡಗಿದರು. ಹೊತ್ತು ನೆತ್ತಿಗೆ ಬರುವಷ್ಟರಲ್ಲಿ ಯುದ್ಧವು ಮುಗಿದಿತ್ತು. ಯುದ್ಧದ ಜಯಧ್ವನಿಯು ಎಣ್ಮೂರು ಬೀಡಿಗೆ ಮುಟ್ಟಿತು. ಆಗ ದೇವಬಲ್ಲಾಳನು ಆ ವೀರರನ್ನು ಮಹಾಸಂಭ್ರಮದಿಂದ ಕಾಣುವುದಕ್ಕಾಗಿ ಪಟ್ಟದ ಜೋಡಿ ಕುದುರೆಗಳನ್ನೂ ಎರಡು ಪಲ್ಲಕ್ಕಿಗಳನ್ನೂ ಸಿಂಗರಿಸಿಕೊಂಡು ಕಾಲ್ನಡೆಯಾಗಿ ಹೋದನು; ದೇವಸ್ಥಾನದ ಮುಂದುಗಡೆಯ ಬಾಕಿಮಾರು ಗದ್ದೆಯಲ್ಲಿ ಗಾಯಗೊಂಡು ಬಿದ್ದಿದ್ದ ಕೋಟಿ, ಅವನ ಕಡೆಗಾಲದ ಸೇವೆ ಮಾಡುತ್ತಲಿದ್ದ ಚೆನ್ನಯ, ಇವರಿಬ್ಬರ ಹಿಂದುಗಡೆಯಲ್ಲಿ ಪಶ್ಚಾತ್ತಾಪದ ಮುಖಮುದ್ರೆಯಿಂದ ಮಾತಿಲ್ಲದೆ ನಿಂತಿದ್ದ ಪೆರುಮಾಳು ಬಲ್ಲಾಳ—ಈ ಮೂವರನ್ನು ಕಂಡನು. ಉಭಯ ಪಕ್ಷದ ಅನೇಕ ಸೈನಿಕರು ರಣರಂಗದಲ್ಲಿ ಮಡಿದು ಬಿದ್ದಿದ್ದರು. ಉಳಿದವರು ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಓಡಿ ಹೋಗಿದ್ದರು.

ದೇವಬಲ್ಲಾಳನು ಕೋಟಿಚೆನ್ನಯರನ್ನು ಕಂಡು, ಅವರ ಕಾಲಿಗೆ ಅಡ್ಡಬಿದ್ದು ನಮಸ್ಕರಿಸಿ, "ನನ್ನನ್ನೂ ನನ್ನ ಬೀಡನ್ನೂ ಕಾಪಾಡಿದ ಬಂಟರು ತಾವು. ತಮ್ಮ ಅಡಿಯಾಳಾದ ನನ್ನನ್ನು ಕಾಯಬೇಕು. ನನ್ನ ಹಣೆ ಯನ್ನು ಕಡಿದು ತಮಗೆ ಮಣೆಯನ್ನಾಗಿ ಇಟ್ಟರೂ ತಮ್ಮ ಉಪಕಾರವನ್ನು ತೀರಿಸಲಾರೆನು. ಇನ್ನು ತಾವು ಈ ರಣಭೂಮಿಯನ್ನು ಬಿಟ್ಟು, ಈ ಪಲ್ಲಕ್ಕಿಗಳಲ್ಲಿ ಓಲಗವಾಗಿ, ಬೀಡಿನ ಚಾವಡಿಗೆ ದಯೆಮಾಡಿಸಿ, ನನ್ನ ರಾಜ್ಯವನ್ನೆಲ್ಲಾ ಉದ್ಧರಿಸಬೇಕು" ಎಂದು ಭಕ್ತಿಪೂರ್ವಕವಾಗಿ ಬೇಡಿಕೊಂಡನು.

ಅಷ್ಟರಲ್ಲಿ ಪೆರುಮಾಳು ಬಲ್ಲಾಳನು ಮುಂದಕ್ಕೆ ಬಂದು ತನ್ನ ಕೈಗಳನ್ನು ಹಣೆಯ ಮೇಲೆ ಇಟ್ಟು ಕೊಂಡು, "ನಾನು ಸಾಕಿದ ಮರಿಗಳ ಮೇಲೆ ಕೈ ಮಾಡಿದ ಪಾಪಿ ನಾನು. ಈ ಪಾಪಕ್ಕೆ ಇದೇ ಪ್ರಾಯಶ್ಚಿತ್ತ"

ಎಂದು ಹೇಳಿ, ತನ್ನ ಕೈಯಲ್ಲಿದ್ದ ಸುರಗಿಯನ್ನು ತನ್ನ ಹೊಟ್ಟೆಯೊಳಗೆ ಸುಚ್ಚಿಕೊಳ್ಳಹೋಗಲು, ಕೋಟಿಯು "ಬೇಡ ಬುದ್ಧಿ—ಕೈ ತಡೆಯಿರಿ" ಎಂದು ಸಂಜ್ಞೆ ಮಾಡಿದನು. ಅಷ್ಟರಲ್ಲಿಯೇ ಚೆನ್ನಯನು ಎದ್ದು ಪೆರುಮಾಳು ಬಲ್ಲಾಳನ ಕೈಯಲ್ಲಿದ್ದ ಸುರಗಿಯನ್ನು ಕಸಕೊಂಡನು.

ಇತ್ತ ಕೋಟಿಯು ಮೈರಕ್ತದ ಪ್ರವಾಹದಲ್ಲಿ ಆತನ ಪ್ರಾಣವು ತೇಕುಮುಳುಗುತ್ತಲಿತ್ತು. ಅವನು ತಮ್ಮನೊಡನೆ "ಚೆನ್ನಯ್ಯ, ನನ್ನ ಹೊತ್ತು ಬಂದಿದೆ; ನನ್ನನ್ನು ಈ ಶಿವಾಲಯದ ಇದಿರಾಗಿ ಮಲಗಿಸಿಬಿಡು" ಎಂದು ಹೇಳಿ ಆಕಾಶದ ಕಡೆಗೆ ದೃಷ್ಟಿಯನ್ನು ತಿರುಗಿಸಿ, "ಚೆನ್ನಯ, ಈ ದಿನ ಸುಬ್ರಹ್ಮಣ್ಯ ಜಾತ್ರೆ. ದೇವರು ರಥಾರೋಹಣವಾಗಿದ್ದಾರೆ. ಗರುಡಪಕ್ಷಿಯು ತನ್ನ ರೆಕ್ಕೆಗಳನ್ನು ಬಿಚ್ಚಿ ಮಂಡಲಾಕಾರವಾಗಿ ರಥದ ಮೇಲೆಯೇ ಆಕಾಶದಲ್ಲಿ ಸುತ್ತುವಂತೆ ಈಗ ಕಾಯಬಿಟ್ಟು ಕೈಲಾಸಕ್ಕೆ ಹೋಗಲು ನನ್ನ ಆತ್ಮವು ಹಾರೈಸುತ್ತಲಿದೆ. ಆದರೆ ನನಗೆ ಸ್ವರ್ಗಕ್ಕೆ ನೀರು ಬಿಡುವ ಮುಂಚೆ ದೇವಸ್ಥಾನದಲ್ಲಿ ಪೂಜೆಯಾಗಲಿ" ಎಂಬ ಮಾತುಗಳನ್ನು ಮೆಲ್ಲನೆ ಉಸಿರೆಳೆದು ಹೇಳಿದನು.

ಸೂರ್ಯನು ಅಸ್ತಕ್ಕೆ ಹೋದನು. ದೇವಸ್ಥಾನದಲ್ಲಿ ಘಂಟಾನಾದವು ಕೇಳಿಸಿತು. ಪೂಜೆಗೆ ಪ್ರಾರಂಭ ವಾಯಿತು. ಮುಂಚಿನ ಕಾಲದಲ್ಲಿ ಎಂಥ ಭಯಂಕರ ಯುದ್ಧವು ನಡೆಯುತ್ತಲಿದ್ದರೂ ದೇವಸ್ಥಾನದ ಪೂಜಾ ವಿಧಿಗಳಿಗೆ ಇತ್ತಂಡದವರಿಂದಲೂ ಅಡ್ಡಿಯಾಗುತ್ತಿರಲಿಲ್ಲ.

ಪೂಜೆಯಾಗಿ ದೇವಸ್ಥಾನದ ಬ್ರಾಹ್ಮಣನು ಹೊರಕ್ಕೆ ತೆಗೆದುಕೊಂಡು ಬಂದ ಆರತಿಯನ್ನೂ ತೀರ್ಥ ವನ್ನೂ ಕೋಟಿಯು ಸ್ವೀಕರಿಸಿ ದೇವಬಲ್ಲಾಳನನ್ನು ಹತ್ತಿರಕ್ಕೆ ಕರೆದು "ಬುದ್ಧಿ, ಇನ್ನು ಮುಂದೆ ಸಹಸ್ರಾವಧಿ ಕಾಲ ಈ ಮಹಾಲಿಂಗೇಶ್ವರನ ಪೂಜೆಯು ಪಡುಮಲೆಯಲ್ಲಿ ಅರವಟ್ಟಿಗೆ ಇಟ್ಟಿರುವ ಆ ಬ್ರಾಹ್ಮಣರ ಕೈಯಿಂದ ನಡೆಯಿಸಬೇಕು" ಎಂದು ಅಭಯವನ್ನು ತೆಗೆದುಕೊಂಡು, "ಬಾಯಿಗೆ ತೀರ್ಥವನು ಹೊಯ್ದು ಬಿಡಿ" ಎಂದು ಸೂಚಿಸಿ ಬಾಯ್ದೆರೆದನು.

ದೇವಬಲ್ಲಾಳನೂ ಪೆರುಮಾಳು ಬಲ್ಲಾಳನೂ ಆತನ ಒಂದೊಂದು ಪಕ್ಕದಲ್ಲಿ ಕುಳಿತುಕೊಂಡು ಒಂದಿಷ್ಟು ಕೆಂದಾಳೆ ನೀರನ್ನು ಆತನ ಬಾಯಿಗೆ ಹೊಯ್ದರು. ಕೋಟಿಯು ಆ ಇಬ್ಬರು ಬಲ್ಲಾಳರ ಕೈಗಳನ್ನು ತನ್ನ ಕೈಗಳಿಂದ ಜೋಡಿಸಿ ಬಿಗಿಹಿಡಿದು, "ಮುಂದೆ ನೀವು ಕೈಗೂಡಿ ಬದುಕುವುದು ಒಳ್ಳೆಯದು" ಎಂದು ಹೇಳಿ, ಕಣ್ಣು ಮುಚ್ಚಿದನು: ಮುಚ್ಚಿದ ಕಣ್ಣು ಮತ್ತೆ ತೆರೆಯಲೇ ಇಲ್ಲ.

ಕೋಟಿಯು ಪರಂಧಾಮಕ್ಕೆ ಹೋಗುವುದನ್ನು ಕಂಡು ಚೆನ್ನಯನು "ಅಣ್ಣಾ! ನಿಮ್ಮನ್ನು ಬಿಟ್ಟು ನಾನೇತಕ್ಕೆ ಬಾಳಲಿ? ಹುಟ್ಟುವಾಗ ಒಟ್ಟಿಗೆ ಹುಟ್ಟಿದವರು ಹೋಗುವಾಗ ಒಟ್ಟಿಗೆ ಹೋಗಬೇಕಷ್ಟೆ. ಅಣ್ಣಾ, ನಾನು ನಿಮ್ಮ ಬೆನ್ನ ಹಿಂದೆಯೇ ಬಂದೆ" ಎಂದು ಹೇಳಿ, ಆ ದೇವಸ್ಥಾನದ ಮುಂದುಗಡೆಯಲ್ಲಿದ್ದ ಬಾವಿಯ ಬಾಯಿಕಲ್ಲಿಗೆ ತನ್ನ ತಲೆಯನ್ನು ತಾಟಾಡಿಸಿದನು. ಚೇದುಗಿಡಿಯ ಕತ್ತಿಯ ತಿವಿತದಿಂದ ಮೊದಲೇ ರಕ್ತ ಹೋಗಿ ಜರ್ಝರಿತವಾದ ಆತನ ತಲೆಯ ಓಡಿನಿಂದ ಬಿಳಿ ಮೆದುಳಿನ ಮಾಲೆಯೊಂದು ಹೊರಬಿದ್ದು, ದೇವಸ್ಥಾನದ ಬಲಿಪೀಠದಲ್ಲಿ ಇಟ್ಟಿದ್ದ ಮಲ್ಲಿಗೆಯ ಸರದಂತೆ ಕಲ್ಲಿನ ಮೇಲೆ ಬಿತ್ತು; ಅದರೊಂದಿಗೆ ಆತನ ಆತ್ಮವು ಮೇಲಕ್ಕೇರಿತು. ಕೂಡಲೇ ಆ ಶಿವಾಲಯದ ಒಳಗೆ ಉರಿಯುತ್ತಲಿದ್ದ ದೀಪಗಳೆಲ್ಲಾ ತಮ್ಮಷ್ಟಕ್ಕೆ ಆರಿ ಹೋದುವು; ಒಂದು ಗಳಿಗೆಯ ತನಕ ಗುಡುಗು ಮಿಂಚುಗಳು ತೋರಿದುವು; ಒನಕೆಯ ಧಾರೆಯಲ್ಲಿ ಮಳೆ ಹೊಯ್ದು ತಟ್ಟನೆ ತಾನಾಗಿ ನಿಂತು ಹೋಯಿತು.

ದೇವಬಲ್ಲಾಳನು "ಹಾ! ಹಾ! ವಿಧಿಯೇ ಇಂದಿಗೆ ನನ್ನ ರಾಜ್ಯದಲ್ಲಿದ್ದು ನನ್ನನ್ನು ಕಾಪಾಡಿದ ಆನೆಗಳೇ ಬಿದ್ದುಹೋದುವಲ್ಲಾ!" ಎಂದು ಮಮ್ಮಲ ಮರುಗಿದನು. ಆ ಎರಡು ಶವಗಳನ್ನು ಅಲಂಕರಿಸಿ, ತಾನು ತಂದಿದ್ದ ಪಲ್ಲಕ್ಕಿಗಳಲ್ಲಿ ಇರಿಸಿ, ಮಹಾಸಂಭ್ರಮದಿಂದ ಮೆರವಣಿಗೆ ಮಾಡಿಸಿ, ಬೀಡಿಗೆ ಕೊಂಡುಬಂದನು. ಮರುದಿನ ಹದಿನೆಂಟು ಪೇಟೆಯವರೂ ಒಂದುಗೂಡಿ ಜಾತಿವಿಧಿಗೆ ಅನುಸಾರವಾಗಿ ಶವಸಂಸ್ಕಾರವನ್ನು ನಡಿಸಿದರು.

ಯಾವ ಹೊತ್ತಿಗೆ ಕೋಟಿಯ ಆತ್ಮವು ಕಾಯವನ್ನು ಬಿಟ್ಟು ಹೋಯಿತೋ ಆ ವೇಳೆಗೆ ಸರಿಯಾಗಿ ಪಡುಮಲೆಯ ಬೀಡಿಗೆ ಬೆಂಕಿ ಬಿದ್ದು ಅದು ಸುಟ್ಟು ಬೂದಿಯಾಯಿತು. ವಿಚಾರ ಮಾಡಿದಲ್ಲಿ ಬೀಡಿನವರಿಗೆ ಬಹಳ ನಚ್ಚುಮೆಚ್ಚಿನವನಾಗಿ ನಡೆಯುತ್ತಿದ್ದ ಮುದುಕ ಸಾಯಿನ ಬೈದ್ಯನು ಬೀಡಿನೊಳಗೆ ಯಾರೂ ಇಲ್ಲದ್ದನ್ನು ಕಂಡು, ಪೂರ್ವದ್ವೇಷವನ್ನು ತೀರಿಸುವುದಕ್ಕಾಗಿ ಬೀಡಿಗೆ ಕಿಚ್ಚು ಹಾಕಿದನೆಂತಲೂ, ಬೆಂಕಿ ಹತ್ತಿದ ತರುವಾಯ ಬೀಡಿನಿಂದ ಬೇರೆಯವರ ಕಣ್ಮರೆಯಾಗಿ ತಪ್ಪಿಸಿಕೊಳ್ಳಲಾರದೆ ಆ ಬೆಂಕಿಯಲ್ಲಿಯೇ ಆತನು ಬಿದ್ದು ಹತನಾದ ನೆಂತಲೂ ಗೊತ್ತಾಯಿತು.

ಎಣ್ಮೂರು ದೇವಬಲ್ಲಾಳನು ಕೋಟಿಚೆನ್ನಯರನ್ನು ಸುಟ್ಟು ಶುದ್ಧ ಮಾಡಿಸಿದ ಸ್ಥಳಗಳಲ್ಲಿ ಅವರ ಸಮಾಧಿಗಳನ್ನು ಕಟ್ಟಿಸಿ, ಗರಡಿಗಳನ್ನು ಏರ್ಪಡಿಸಿದನು. ಆ ದೇವಸ್ಥಾನದ ನಿತ್ಯಾರ್ಚನೆಗೆ ಅಂದು ಕೋಟಿ ಚೆನ್ನಯರಿಗೆ ಕವಡೆ ಇಟ್ಟು ನಿಮಿತ್ತ ಹೇಳಿದ ಬ್ರಾಹ್ಮಣನನ್ನು ಕರೆತರಿಸಿ, ಅವನಿಗೆ ಉಂಬಳಿಯನ್ನು ಕೊಟ್ಟು, ಕೋಟಿಯ ಮಾತನ್ನು ನಡೆಸಿದನು. ಪೆರುಮಾಳು ಬಲ್ಲಾಳನು ಪಡುಮಲೆಗೆ ಹಿಂದೆರಳಿ ಹೋಗಿ ಅಲ್ಲಿ ಹೊಸ ಬೀಡನ್ನು ಕಟ್ಟಿಸಿ, ಕೋಟಿಚೆನ್ನಯರ ಕಂಬುಳದ ಗದ್ದೆಯ ಬಳಿಯಲ್ಲಿಯೇ ಅವರ ಗುಡಿಗಳನ್ನು ಅಂದವಾಗಿ ಮಾಡಿಸಿ, ಅಲ್ಲಿ ಅವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿ ತಾನು ಬದುಕಿರುವಷ್ಟು ಕಾಲ ದಿನಕ್ಕೆ ಮೂರು ಸಲ ಆ ಮೂರ್ತಿಗಳ ದರ್ಶನಕ್ಕೆ ಹೋಗಿಬರುತ್ತಿದ್ದನು.

ಕಾಲಗತಿಯಿಂದ ತುಳುನಾಡಿನಲ್ಲಿ ಬಲ್ಲಾಳರ ಸಂಸ್ಥಾನಗಳು ಆ ಮನೆತನದವರ ಕೈಬಿಟ್ಟುಹೋದರೂ, ಅವರ ಬೀಡುಗಳು ಪಾಳುಬಿದ್ದು ಮಣ್ಣುಗುಪ್ಪೆಯಾಗಿದ್ದರೂ, ನಾಲ್ಕು ಶತಮಾನಗಳ ಹಿಂದೆ ತುಳುನಾಡಿನಲ್ಲಿ ಬಿಲ್ಲರ ಪ್ರಭಾವವು ಹೇಗೆ ಇದ್ದಿತೆಂಬುದಕ್ಕೆ ಅನೇಕ ಗ್ರಾಮುಗಳಲ್ಲಿ ಕೋಟಿಚೆನ್ನಯರಿಗಾಗಿ ಕಟ್ಟಿಸಿದ ಗರಡಿಗಳು ಈಗ ಸಾಕ್ಷಿ ಗುಡ್ಡೆಗಳಾಗಿವೆ. ಕಾಡಿ ಕಾಡಿ ಅಳಿದವರ ಹೆಸರು ಅಳಿಯಿತು; ನಾಡಿನ ಹಿತಕ್ಕಾಗಿ ಕಾದಾಡಿ ಕಾಯ ಬಿಟ್ಟು ಕೈಲಾಸಕ್ಕೆ ಸಂದವರ ಹೆಸರು ಉಳಿಯಿತು.

ಈ ಕಥೆಯಲ್ಲಿ ಪ್ರಯೋಗಿಸಲ್ಪಟ್ಟ ಕೆಲವು ಕನ್ನಡ ಪದಗಳ ಪಟ್ಟಿ

ಅಗೆ—ಮೊಳಿಕೆ, ಸಸಿ
ಅಜಲ—ಮನೆತನದ ಹೆಸರು
ಅಡ್ಕ—ಅಡಕವಾಗಿರುವ ಸ್ಥಳ
ಅನಿಲಜೆ—ಸ್ಥಳ ವಿಶೇಷ
ಆಯನ—ಜಾತ್ರೆ
ಆರಾಟ—ಅವಭೃತ ಸ್ನಾನ
ಆಸರು—ಬಾಯಾರಿಕೆ
ಇಕ್ಕೇರಿ—ರಾಜಮನೆತನದ ಹೆಸರು
ಏಣೆಲ ಬೆಳೆ—ಮುಂಗಾರು ಮಳೆಯ ನೀರಿನಿಂದ ಬೆಳೆಯುವ ಬೆಳೆ.
ಎಣ್ಮೂರು—ಸ್ಥಳ ವಿಶೇಷ
ಎಬ್ಬು—ಅಟ್ಟು, ಹೊರಡಿಸು
ಎರುಕಡಪು—ಸ್ಥಳ ವಿಶೇಷ
ಏರಜೆ—ಸ್ಥಳವಿಶೇಷ
ಓರಲೆ—ಗೆದ್ದಲು
ಕಡಪು—ನೀರು ದಾಟುವ ಸ್ಥಳ
ಕಣಿಹೇಳು—ಆಗಲಿಕ್ಕಿರುವುದನ್ನು ಮುಂದಾಗಿ ಹೇಳು, ನಿಮಿತ್ತ ಹೇಳು.
ಕಂಬುಳ—ಪಂತಕ್ಕಾಗಿ ಕೋಣಗಳನ್ನು ಓಡಿಸುವುದಕ್ಕೆ ಪ್ರತ್ಯೇಕವಾಗಿ ಏರ್ಪಡಿಸಿದ ಹೊಲ.
ಕಳ—ಆಟಕ್ಕಾಗಿ ಇಲ್ಲವೆ ಅಗೆಗಾಗಿ ಏರ್ಪಡಿಸಿದ ಸ್ಥಳ.
ಕಳೆತೋರು—ಹುಳುಕು ತೆಗೆದು ದೂಷಿಸು
ಕಲ್ಲಾಳ—ಹೊಲೆಯ
ಕುಟ್ಟಿ—ಮಗು
ಕೆಮ್ಮಲಜೆ—ಸ್ಥಳವಿಶೇಷ
ಕೊಕ್ಕಡ—ಸ್ಥಳವಿಶೇಷ
ಗಡು ಇಡು—ಅವಧಿ ಹೇಳಿ ಶಪಥ ಕಟ್ಟು
ಗರಡಿ—ಹಳೆಯ ದೆವ್ವಕ್ಕಾಗಿ ಕಟ್ಟಿದ ಗುಡಿ
ಗುಜ್ಜು—ಗಿಡ
ಗುತ್ತು—ಸರಕಾರದ ಕಂದಾಯವನ್ನು ವಹಿಸಿಕೊಂಡವರ ಮನೆ.
ಗುರಿಕಾರ—ಗುತ್ತಿಗೆಯವನ ಕೈಕೆಳಗಿನ ಒಬ್ಬ ಅಧಿಕಾರಿ; ಮುಖಂಡ. ಮನುಷ್ಯ.
ಚಟ್ಟೆಕಟ್ಟು—ಚೌಕಟ್ಟನ್ನು ಮಾಡು
ತಡಮೆ—ದನಕರುಗಳು ಒಳಬಾರದಂತೆ ಅಡ್ಡವಾಗಿ ಇರಿಸಿದ ಚದರಿನ ಚೌಕಟ್ಟು
ತರಲೆ—ಚಾಡಿಮಾತು
ನಟ್ಟಿಲ—ಬಿಲ್ಲವರಿರುವ ಸ್ಥಳವಿಶೇಷ
ಪಡುಮಲೆ—ಸ್ಥಳವಿಶೇಷ
ಪಂಚವಳ್ಳಿ—ವೀಳ್ಯಜಾತಿ
ಪಂಜ—ಸ್ಥಳವಿಶೇಷ
ಪಾಲೆ—ಸಣ್ಣ ತೋಡನ್ನೋ ಬಚ್ಚಲನ್ನೋ ದಾಟಲಿಕ್ಕಾಗಿ ಅಡ್ಡಹಾಕಿದ ಮರ
ಪುರುಡು—ಸೂತಕ
ಪೂಕರೆ—ಗದ್ದೆ ಬಿತ್ತಿದ ತರುವಾಯ ಅದರ ಮಧ್ಯದಲ್ಲಿ ಒಂದು ಬಾಳೆಯ ಗಿಡವನ್ನು ತಂದು ಅಲಂಕರಿಸಿ ಪಡುವ ಸಂಭ್ರಮ.
ಪೆರ್ಲಂಪಾಡಿ—ಸ್ಥಳವಿಶೇಷ
ಬಂಗರು—ಒಂದು ಮನೆತನದ ಹೆಸರು
ಬಂಟ—ವೀರ; (ಜಾತಿವಿಶೇಷ)
ಬಲಕಾಯಿಸು—ಸೈನ್ಯವನ್ನು ಇಟ್ಟು ಗಟ್ಟಿ ಮಾಡು.
ಬಲ್ಲೆ—ಪೊದೆಪೊದರು
ಬಲ್ಲಾಳ—ಅರಸನ ಕೈಕೆಳಗಿನ ಅಧಿಕಾರಿ
ಬಾಕಿಮಾರು—ಗುತ್ತಿನ ಮನೆಯ ಮುಂದುಗಡೆ ಗದ್ದೆ.

ಬಾಳಿಕೆ—ಗ್ರಾಮ ಮರ್ಯಾದೆಯಲ್ಲಿ ಗುತ್ತಿನವನ ಮನೆಗೆ ಎರಡನೆಯ ಮನೆ.
ಬಿಲ್ಲ—ಜಾತಿವಿಶೇಷ
ಬೀಡು—ಬಲ್ಲಾಳನ ಮನೆಯ ಹೆಸರು
ಬೆಟ್ಟು—ಒಂದೇ ಬೆಳೆ ಬೆಳೆಯುವ ಭೂಮಿ.
ಬೆರಂಪಳ್ಳಿ—ಬ್ರಾಹ್ಮಣನ ಮನೆಯ ಹೆಸರು
ಬೆಳ್ಳಾರೆ—ಸ್ಥಳವಿಶೇಷ
ಬೆಳ್ಳಿಮೂಡು—ಶುಕ್ರೋದಯವಾಗು
ಬೈದ್ಯ—(ಜಾತಿವಿಶೇಷ) ವೈದ್ಯ.
ಬೈಲು—ಎರಡು ಬೆಳೆ ಬೆಳೆಯುವ ಭೂಮಿ
ಮರ್ದಾಳ—ಸ್ಥಳವಿಶೇಷ
ಮೊಸಲು ಕಟ್ಟು—ಹರಕೆ ಕಟ್ಟು
ಮೂಡುವಳ್ಳಿ—ವೀಳ್ಯಜಾತಿ
ಮುಸ್ತೈದೆ—ಸಿದ್ಧತೆ
ಸರಳೆಮ್ಮೆ—ಹಾಲುಕೊಡುವ ಎಮ್ಮೆ
ಸೀಯಾಳ—ಎಳನೀರು
ಸುಬ್ರಹ್ಮಣ್ಯ—ಸ್ಥಳವಿಶೇಷ
ಹೊಡೆ—ಗುಡ್ಡದ ಇಳಿಜಾರು.

ಜೀವನ ಚರಿತ್ರ

ಹೊಸಕನ್ನಡ ಸ್ವತಂತ್ರವಾಗಿ ಕಣ್ತೆರೆದು ಲೋಕವನ್ನು ನೋಡಬೇಕು, ತನಗೆ ಕಾಣುವ ಲೋಕ ಜೀವನವನ್ನು ಚಿತ್ರಿಸಬೇಕು ಎಂದು ತೊಡಗಿದ ಕಾಲದಲ್ಲಿ ಪಂಜೆಯುವರು ಕನ್ನಡಕ್ಕೆ ತಮ್ಮ ಜೀವನವನ್ನು ಮುಡಿಪುಮಾಡಿಕೊಂಡರು. ಪಂಜೆಯುವರು ಇಂಗ್ಲಿಷ್ ಸಾಹಿತ್ಯವನ್ನು ಪ್ರೀತಿಯಿಂದ ಓದಿದ್ದವರು. ಯುರೋಪಿನ ಇತರ ಭಾಷಾ ಸಾಹಿತ್ಯಗಳ ಸಂಪರ್ಕ ಇಂಗ್ಲಿಷಿನಿಂದ ಅವರಿಗೆ ಉಂಟಾಗಿತ್ತು. ಬೇಸೆಲ್ ಮಿಷನ್ ಪ್ರೆಸ್ಸಿನ ಜರ್ಮನ್ ಮೇಧಾವಿಗಳ ಸಂಪರ್ಕವಿತ್ತು. ಶಬ್ದಮಣಿದರ್ಪಣದ ಒಂದು ಆವೃತ್ತಿಯನ್ನು ಹೊಸದಾಗಿ ಅಚ್ಚುಮಾಡಿದ ಸಂದರ್ಭದಲ್ಲಿ ಸೂತ್ರಗಳಿಗೆ ಇಂಗ್ಲಿಷಿನ ಸಂಕ್ಷಿಪ್ತ ಸಾರಸೂಚಿಕೆಗಳನ್ನೂ ಟಿಪ್ಪಣಿಗಳನ್ನೂ ಬರೆಯುವುದರಲ್ಲಿ ನೆರವಾದವರು. ಹಾಗೆಯೇ ಅವರು ಪಠ್ಯಪುಸ್ತಕಗಳನ್ನು ತಯಾರಿಸುವುದರಲ್ಲಿಯೂ ಮಕ್ಕಳಿಗೆ ಪ್ರಿಯವಾಗಬಲ್ಲ ಗೀತೆಗಳನ್ನೂ ಪದ್ಯಗಳನ್ನೂ ಇತರ ಪಾಠಗಳನ್ನೂ ಭಾಷಾಂತರವಾಗಿಯೊ ಸ್ವಂತವಾಗಿಯೊ ರೂಪಿಸಿದರು. ಅವರ ಭಾವಮೈದುನರಾದ ಬೆನಗಲ್ ರಾಮರಾಯರ—**'ಸುವಾಸಿನಿ'** ಪತ್ರಿಕೆಗೆ ಇವರೇ ಜೀವನಾಡಿ. ಅಲ್ಲಿಯ ಸಂಪಾದನೆಯ ಕೆಲಸವೆಲ್ಲ ಬಹುಮಟ್ಟಿಗೆ ಇವರದೇ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡದ ಪುನರುಜ್ಜೀವನ ಆಗುತ್ತಿದ್ದ ಕಾಲದಲ್ಲಿ ಅವರ ಜೊತೆಗಾರರಾಗಿ ಉಲ್ಲಾಳ ಮಂಗೇಶರಾಯರು, ಉಗ್ರಾಣ ಮಂಗೇಶರಾಯರು, ಕೃಷ್ಣಸೂಕ್ತಿಯ ಸಂಪಾದಕ ರಾಜಗೋಪಾಲಕೃಷ್ಣ ರಾಯರೂ ಈ ಕಾರ್ಯದಲ್ಲಿ ದುಡಿದಿದ್ದರು. ಮಂಗಳೂರಲ್ಲಿಯೇ ಎಂ. ಎನ್. ಕಾಮತರು ಹುರುಳಿ ಭೀಮರಾಯರು, ಮಂಜೇಶ್ವರದ ಗೋವಿಂದ ಪೈಗಳು, ಪುತ್ತೂರಿನ ಮಂ. ಅನಂತರಾಯರು ಮುಂತಾದವರು ಸ್ವತಂತ್ರವಾಗಿಯೂ ಇತರ ಪತ್ರಿಕೆಗಳ ಮೂಲಕವಾಗಿಯೂ ಕನ್ನಡಕ್ಕೆ ಬಗೆಬಗೆಯ ಸಾಹಿತ್ಯ ಸೇವೆ ಸಲ್ಲಿಸಿದರು. ಪಂಜೆಯುವರು ಈ ಎಲ್ಲರಿಗೂ ಹಿರಿಯರು, ಪ್ರಿಯರು. ಆ ಉತ್ಸಾಹ, ನಗೆ, ಶ್ರದ್ಧೆ, ಆ ಕಲ್ಪನಾಸಾಹಸ, ನುಗ್ಗಿ ಒಲಿಸುವ ಒಂದು ಸಹಜ ಸಜ್ಜನತೆ ಮತ್ತು ಚಾಕಚಕ್ಯ ಉಳ್ಳ ಅವರಂಥವರನ್ನು ನಾನು ಬೇರೆಲ್ಲಿಯೂ ಕಂಡಿಲ್ಲ.

ನಾವು ಕಾಲೇಜಿನಲ್ಲಿ ಓದುತ್ತಿದ್ದಾಗಲೇ 'ಕವಿಶಿಷ್ಯ' ಎಂಬ ಹೆಸರಲ್ಲಿ ಮಂಗಳೂರಿನ ಪಾಠ ಪುಸ್ತಕಗಳಲ್ಲಿಯೂ ಅವರೇ ಭಾಗಸ್ಥರಾಗಿ ನಡೆಸುತ್ತಿದ್ದ ಬಾಲಸಾಹಿತ್ಯ ಮಂಡಲದ ಪ್ರಕಟನೆಗಳಲ್ಲಿಯೂ ಪದ್ಯಗಳನ್ನು ಓದಿದ್ದುಂಟು. ಅವರ ಕೋಟಿ–ಚೆನ್ನಯ, ದೊಂಬರ ಚೆನ್ನ, ನಮ್ಮನ್ನು ಮುಗ್ಧಗೊಳಿಸಿದ್ದವು. ನನ್ನ ಗುರುಗಳಾದ ಶ್ರೀಯವರಿಗೂ ಅವರಿಗೂ ತುಂಬ ಪ್ರೀತಿಯ ಸ್ನೇಹ ಬಾಂಧವ್ಯ. ಮದರಾಸ್ ವಿಶ್ವವಿದ್ಯಾನಿಲಯದ ಕನ್ನಡ ವ್ಯಾಸಂಗದ ಸಲಹಾಸಮಿತಿಗಳಲ್ಲಿ ಪರೀಕ್ಷಕ ಮಂಡಲಿಗಳಲ್ಲಿ ಇವರೆಲ್ಲ ಸೇರುತ್ತಿದ್ದರು. ಶ್ರೀಯವರನ್ನು ಕಂಡರೆ ಪಂಜೆಯುವರಿಗೆ ತುಂಬ ಮೆಚ್ಚು; ಗೌರವ. ಇವರಿಗೂ ಪಂಜೆಯುವರನ್ನು ಕಂಡರೆ ಅದೇ ಪ್ರೀತಿ, ವಿಶ್ವಾಸ. ನನಗೆ ಅವರ ಸಂಪರ್ಕ ದೊರೆತುದು ಬೆಂಗಳೂರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘವು ಮುದ್ದಣನ ಉತ್ಸವವನ್ನು ನೆರವೇರಿಸಿದಾಗ. ಆ ಮುಖ, ಆ ಮಾತು, ಆ ಸರಸಜೀವನವಿಲಾಸ ಒಂದು ನಿಮಿಷದಲ್ಲಿ ಯಾರೊಡನೆಯೂ ಸಖ್ಯ ಬೆಳಸಬಲ್ಲ ರೀತಿ ನಮಗೆ ಬಹುದೊಡ್ಡ ವ್ಯಕ್ತಿಯೊಂದನ್ನು ಕಾಣುವ ಅವಕಾಶವನ್ನು ತಂದುಕೊಟ್ಟಿತು. ಮಂಗಳೂರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಅವರೂ ಅವರ ಮಿತ್ರರೂ ಅಲ್ಲಿಗೆ ಹೋಗಿದ್ದ ನಮ್ಮೆಲ್ಲರನ್ನೂ ತುಂಬ ಅಕ್ಕರೆಯಿಂದ ಬರಮಾಡಿಕೊಂಡು ಮೂರು ನಾಲ್ಕು ದಿನ ಒಂದು ಸಂತೋಷದ ಆವರಣವನ್ನು ಕಲ್ಪಿಸಿಕೊಟ್ಟರು. ಹೈಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ಉಲ್ಲಾಳರ ಆತಿಥ್ಯ ವ್ಯವಸ್ಥೆಯಲ್ಲಿ ವಸತಿ ಊಟೋಪಚಾರಗಳ ಕ್ರಮ ನಡೆದಿತ್ತು.

ಸಾಹಿತ್ಯಕವಾದ ಎಲ್ಲ ಕಾರ್ಯಗಳಲ್ಲಿಯೂ—ಊಟ ವಿಶ್ರಾಂತಿಗಳ ಕಾಲವನ್ನು ಬಿಟ್ಟು—ನಮಗೆ ಅಲ್ಲಿನವರೆಲ್ಲರ ಸಾಹಚರ್ಯ ಇತ್ತು.

ಯಾವುದೋ ಕಾರಣದಿಂದ ಮೈಸೂರಿನ ಸಾಹಿತಿ ವರ್ಗಕ್ಕೂ ಮಂಗಳೂರಿನ ಕಡೆಯವರಿಗೂ ನಡುವೆ ಕೆಲಕಾಲ ಸೌಮನಸ್ಯವಿರಲಿಲ್ಲ. ಮಂಗಳೂರು ಸಮ್ಮೇಳನದಲ್ಲಿ ನಿವಾರಿತವಾಗಿ ಆ ಸಮ್ಮೇಳನ ಎಲ್ಲವನ್ನೂ ಸವಿಗೊಳಿಸಿತ್ತು. ಮದರಾಸ್ ಪ್ರಾಂತ್ಯದಲ್ಲಿ ಜಿಲ್ಲಾ ವಿದ್ಯಾಇಲಾಖೆಯ ಅಧಿಕಾರಿಗಳಾಗಿದ್ದ ತಾತಾ ಅವರು ಅಧ್ಯಕ್ಷರು. ಅವರ ಹಿಂದೆ ನಿಂತು ಎಲ್ಲವನ್ನೂ ನಡೆಸಿದವರು ಉಡುಪಿಯ ರಾಜಗೋಪಾಲಕೃಷ್ಣರಾಯರು.

ಪಶ್ಚಿಮ ಘಟ್ಟಗಳು ಅಡಿಯಾದ್ದರಿಂದಲೂ ದಕ್ಷಿಣ ಕನ್ನಡ ಮದರಾಸ್ ಅಧಿಪತ್ಯಕ್ಕೆ ಸೇರಿದ್ದರಿಂದಲೂ, ಮೈಸೂರಿಗೂ ಮಂಗಳೂರಿಗೂ ಸಂಪರ್ಕವಿಲ್ಲದಿದ್ದ ಕಾಲ ಅದು. ಇಂಥದನ್ನು ಒಂದು ತೂಕದಲ್ಲಿ ತೂಗಿ ಹೊಸ ಸೌಮನಸ್ಯವನ್ನು ಸ್ಥಾಪಿಸಿದವರಲ್ಲಿ ಮುಖ್ಯರು ಪಂಜೆಯವರು. ಕಾರ್ಯಕ್ರಮಗಳ ಒಂದಂಗವಾಗಿ ಸಮ್ಮೇಳನದಲ್ಲಿ ಸುಗ್ರೀವ ಸಖ್ಯವನ್ನು ಕುರಿತ ತಾಳಮದ್ದಲೆ ಪ್ರಸಂಗ ಏರ್ಪಡಿಸಿದ್ದರು. ಈ ಯಕ್ಷಗಾನ ಪ್ರಸಂಗ ದಕ್ಷಿಣ ಕನ್ನಡ ಜಿಲ್ಲೆಗೇ ವಿಶಿಷ್ಟತೆ ತಂದುಕೊಟ್ಟ ಕಲಾಪ್ರಕಾರ. ಉತ್ತಮರೂ ನುರಿತ ವಿದ್ವಾಂಸರೂ ಕಲೆಗಾರರೂ ಆ ಪ್ರಸಂಗದಲ್ಲಿ ಭಾಗವಹಿಸಿದ್ದರು. ಅದರ ರಚನೆ, ರೀತಿ, ವಿಧಾನ ಕುರಿತು—ಸಭೆಯನ್ನು ಶಾಂತಿಯನ್ನು ಕೆಡಿಸದೆ—ಮೆಲ್ಲಗೆ ಒಂದೆರಡು ಮಾತುಗಳಲ್ಲಿ ಸಂಕ್ಷಿಪ್ತ ವಿವರಗಳನ್ನು ನಮಗೆ ಕೊಡುತ್ತ ಚಂಡೆ, ಮದ್ದಳೆ, ಭಾಗವತ, ಆತನಕೈ—ಜಾಗಟೆ ನುಡಿತ, ಆತನು ಬಳಸುತ್ತಿದ್ದ ರಾಗತಾಳಗಳ ವಿಶೇಷ, ಸಂಭಾಷಣೆ ಬೆಳಸುತ್ತ ಕಥಾಕಾರ್ಯವನ್ನು ನಿರ್ವಹಿಸುತ್ತಿದ್ದ ಅರ್ಥಗಾರರ ವಿಧಾನ ಇವನ್ನೆಲ್ಲ ತುಂಬಾ ಪ್ರೀತಿಯಿಂದ ನಮಗೆ ವಿವರಿಸಿ ಕಡೆಯಲ್ಲಿ ಮುಕ್ತಾಯ ಭಾಷಣ ಮಾಡಿದವರು ಪಂಜೆಯವರು.

ಆಮೇಲೆ ಎಷ್ಟೋ ಸಲ ನಾನವರನ್ನು ನೋಡಿದ್ದೇನೆ. ಅವರ ಮನೆಯಲ್ಲಿ ಉಳಿದುಕೊಂಡು ಅವರ ಆತಿಥ್ಯ ಪಡೆದಿದ್ದೇನೆ. ಅವರ ಸಂಸಾರ ಎಷ್ಟು ಸುಖಸೌಕರ್ಯ, ನಯ ಶಿಸ್ತು ಸವಿ ಪ್ರೀತಿಗಳ ನೆಲೆಯಾಗಿತ್ತು ಎಂಬುದನ್ನು ಅನುಭವಿಸಿದ್ದೇನೆ. ಹೆಣ್ಣುಮಕ್ಕಳು, ಗಂಡುಮಕ್ಕಳು ಶ್ರೀಮತಿಯವರು ಅವರ ಮನೆಯ ನಯವಿನಯಗಳ ಉತ್ತಮ ಫಲಗಳು. ಪ್ರತೀಕಗಳು. ಮೂವರು ಗಂಡುಮಕ್ಕಳಲ್ಲಿ ಕಡೆಯವರಾದ ರಾಮರಾಯರು ಈಚೆಗೆ ಬಸ್ ಆಕಸ್ಮಿಕದಲ್ಲಿ ತೀರಿಕೊಂಡು ಅವರ ಮನೆಯವರಿಗೆ ಹೇಗೆಯೋ ನನಗೂ ಅದೇ ಬಗೆಯ ವ್ಯಥೆಯನ್ನುಂಟುಮಾಡಿದ್ದಾರೆ. ಅವರು ಯಾರನ್ನು ಕಂಡರೂ ನನಗೆ ಒಂದಲ್ಲ ಒಂದು ರೀತಿ ಪಂಜೆಯವರ ಜೀವಲಕ್ಷಣ ಕಾಣುತ್ತದೆ. "Sweetness and Light"—ಸವಿ—ಬೆಳಕು ಎಂಬ ಮಾತಿದೆ ಇಂಗ್ಲಿಷಿನಲ್ಲಿ. ಒಂದು ಬಾಳ ಹದವನ್ನು ಸೂಚಿಸುವ ಆ ಲಕ್ಷಣಗಳು ಪಂಜೆಯವರವು.

ಒಂದೇ ಒಂದು ಸಂದರ್ಭದಲ್ಲಿ ಖಂಡಿತವಾಗಿ ಒಂದು ಮಾತನ್ನು ನನಗೆ ನುಡಿದರು. ಅವರ ಪದ್ಯಗಳನ್ನೆಲ್ಲ ಒಂದು ಕಡೆ ಏಕೆ ಅಚ್ಚುಮಾಡಿಸಿ ಪ್ರಕಟಿಸಬಾರದು ಎಂದಿದ್ದೆ. ಆಗ ಮಾತ್ರ ಮೃದುವಾಗಿ ಯಾದರೂ ಗಂಭೀರವಾಗಿ, ನಿರ್ಣಾಯಕವಾಗಿ 'ಆ ಒಂದು ಮಾತು ಬಿಡಿ' ಎಂದರು. ಇದರಿಂದಾಗಿ ಈವರೆಗೂ ಅವರು ತೀರಿಕೊಂಡು 30 ವರ್ಷಗಳ ಕಾಲದವರೆಗೂ ಒಂದು ಕಡೆ ಅವರ ಪದ್ಯಗಳಿಗೆ ಅಚ್ಚಾಗಿ ಪ್ರಕಟಗೊಳ್ಳುವ ಅವಕಾಶ ದೊರೆತಿರಲಿಲ್ಲ. ಅವರ ನೂರನೆಯ ಜನ್ಮೋತ್ಸವ ನೆರವೇರಲಿರುವ ಈ ವರ್ಷವಾದರೂ ಅವು ಹೊರಗೆ ಬರುವಂತಾದುದು ರಾಮರಾಯರ ಒಂದು ಕಲಾಸೇವೆಯ ಮತ್ತು ಪಿತೃಭಕ್ತಿಯ ಪುಣ್ಯದಿಂದ. ಅವರ ಇತರ ಮಕ್ಕಳೂ ಇದಕ್ಕೆ ತಮ್ಮ ನೆರವನ್ನು ದೊರಕಿಸಿದ್ದರೆ, ಚೆದರಿ ಕಾಣೆಯಾಗಿದ್ದ ಪದ್ಯಗಳನ್ನೆಲ್ಲ—

ಒಂದು ಕಡೆ ಈಗ ದೊರೆಯುವಂತಾಗಿದೆ. ಕಳೆದ ಶತಮಾನದ ಕಡೆಯ ಭಾಗದ ಇವುಗಳಲ್ಲಿ ಈ ಶತಮಾನದ ಮೊದಲ 30–40 ವರ್ಷಗಳ ಮಾತು, ಶೈಲಿ ರೀತಿ, ಪ್ರಕಾರಗಳ ಮಾದರಿಗಳಿವೆ. ದಕ್ಷಿಣ ಕನ್ನಡದ ಗಾಯಮಾನವಿದೆ. ಪದ್ಯಗಳ ರಚನೆಯನ್ನು ನೋಡಿದರೆ ಸರಳತೆ, ಶಬ್ದಾರ್ಥ ಸೌಂದರ್ಯ, ಭಾವ, ಕಾಂತಿ, "ಭಾಷೆಯ ಬಳಕೆಯಲ್ಲಿ ಸುಭಗತೆ, ಕಲ್ಪನಾವಿಲಾಸ, ಮುಂತಾದವನ್ನೂ ಹೊಮ್ಮಿಸುತ್ತದೆ. ಅಚ್ಚ ಭಾವಗೀತೆಗಳ ಜೊತೆಗೆ ದೇಶಪ್ರೇಮ ಪ್ರಕಾಶಗೊಳ್ಳುತ್ತದೆ." ಮಾರ್ಮಿಕವಾಗಿ ಕೆಲವು; ಸ್ಫುಟವಾಗಿ ಕೆಲವು, ಸಾಮಾಜಿಕ ಅಸಮತೆ, ಅನ್ಯಾಯ, ನಮ್ಮ ನಾಡಿನ ವೀರಪುರುಷರ ಕಥೆ, ಆದರ್ಶಜೀವನ, ಸ್ಫೂರ್ತಿಯುತ—ವಾಗಿ ರೂಪಿತವಾಗಿವೆ. 'ದೊಂಬರ ಚೆನ್ನಿ' ಪದವೊ ಅಥವಾ ಇನ್ನಾವ ಆಟವಿನೋದವೊ ಎಲ್ಲ ವಯಸ್ಸಿನ ಮಕ್ಕಳನ್ನೂ ಹೇಗೆ ರಂಜಿಸುತ್ತದೆ ಎಂಬುದನ್ನು ಕಾಣಬಹುದು. ಕೊಡಗಿನ ವೀರಗೀತೆಯೆನ್ನಬಹುದಾದ 'ಹುತ್ತರಿ ಹಾಡನ್ನು ಕೊಂಕಣಿ ಮಾತಾಡುವ ಸಾರಸ್ವತ ಬ್ರಾಹ್ಮಣ ಕನ್ನಡ ಭಾಷೆಯಲ್ಲಿ ಕೊಡಗರ ಜೀವನದ ಮುಡಿಯಾಗಬಲ್ಲ ಕೃತಿಯನ್ನು ರಚಿಸಿದರೆಂಬುದು ಹೊಸ ಕನ್ನಡದ ಒಂದು ಪವಾಡ. ಅದಕ್ಕೆ ಸರಿತೂಗುವ ಹಾಡನ್ನು ರಚನಾ ಸಾಮರ್ಥ್ಯವನ್ನು ಹಾರ್ದತೆ ಕಾವುಗಳನ್ನು ನಾವು ಬೇರೆಲ್ಲಿಯೂ ಕಾಣೆವು. 'ನಾಗರಹಾವಿನ' ಪದ್ಯಗಳ ಪ್ರತಿಯೊಂದರ ಕೊನೆಗೂ ಹಾವಾಡಿಗನ ಪುಂಗಿ ಬಾಜನೆಯ ನಾದ ವಿಲಾಸದ ರಮಣೀಯತೆ ಇದೆ. ಇನ್ನು "ತೆಂಕಣ ಗಾಳಿಯಾಟದ" ಸೊಗಸು ಏಕೈಕ; ಅನ್ಯಾದೃಶ. ಅದರ ಶುದ್ಧ ಕಾವ್ಯ ಸಂಪತ್ತು ಅಚ್ಚಳಿಯದ ಸೌಭಾಗ್ಯ ಸೌಂದರ್ಯ ಲಯಗಾನವುಳ್ಳದ್ದು. ಕನ್ನಡದಲ್ಲಿ ಅದರ ಸಮಕ್ಕೆ ಬರುವ ಪದ್ಯಗಳು ಅಪರೂಪ. ಇವನ್ನೆಲ್ಲ ಈ ಸಂಕಲನದಲ್ಲಿ ಕಾಣಬಹುದು.

ಸ್ವಂತವಾಗಿ ನನ್ನ ಬಾಳಿಗೆ ಒಂದು ಸಂತೋಷವನ್ನೂ ಒಂದು ದೊಡ್ಡ ಜೀವದ ರೀತಿಯ ಕಲ್ಪನೆಯನ್ನೂ ಒದಗಿಸಿ ಮರೆಯಲಾಗದ ಒಂದು ಸತ್ವವನ್ನು ದಾನಮಾಡಿದ ಜೀವ ಅವರದು. ಅವರ ಬಂಧುಗಳಾದ ಧಾರವಾಡದ ಕೃಷ್ಣಾಬಾಯಿ ಪಂಜೀಕರ್ ಕಾರವಾರದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ದಯಮಾಡಿಸಿದ್ದವರು—"ಕೊಂಕಣಿ ಇಂಗ್ಲಿಷ್ ಮರಾಠಿಯಲ್ಲಿ ಮುಳುಗಿಹೋಗಿದ್ದ ನಮ್ಮನ್ನು ಮೇಲೆತ್ತಿ ನಮಗೆ ಕನ್ನಡದ ಹುಚ್ಚು ಹಿಡಿಸಿದ್ದಾರೆ ಪಂಜೆಯವರು" ಎಂದುದು ಅಕ್ಷರಶಃ ನಿಜ. ಮಕ್ಕಳಂತೆ ಅವರ ಮನಸ್ಸು. (ಅದರ ಹಾರಾಟದಂತೆ ಅವರ ಕಲ್ಪನೆಯ ಹಾರಾಟ—ಹಕ್ಕಿಯಂತೆ ಹಗುರ.) ಭೂಮಿಯ ಮೇಲೆ ಸುಳಿದರೂ ಆಕಾಶ ವಿಹಾರಿ ಆ ಚೇತನ. ಯಾವುದನ್ನು ಕಲಿಸಬೇಕೆಂದರೂ ಅವರದೇ ಆದ ಸರಸತೆ ಸುಲಭ ರೀತಿ ಇರುತ್ತಿತ್ತು. ಮಕ್ಕಳ ಮನಸ್ಸನ್ನು ರಮಿಸುವ ಗಾರುಡಿಯಂತೂ ಅತಿಶಯವಾದದ್ದು. ಬಾಳಲ್ಲಿ ಅವರು ಏನು ಕಷ್ಟಪಟ್ಟು, ಹೇಗೆ ಅದನ್ನು ಕುದುರಿಸಿಕೊಂಡು ಜೀವನವನ್ನು ಹದಮಾಡಿಕೊಂಡರೋ ನಮಗೆ ಕಾಣದ್ದು. ಸಮಸ್ತ ಕಾರ್ಪಣ್ಯಗಳನ್ನೂ ಹೊರಚೆಲ್ಲಿ ಸವಿನಗೆ, ನಯ, ಸೌಹಾರ್ದಗಳ ಮೂರ್ತಿಯಾಗಿದ್ದ ಅವರಿಗೆ ಎರಡು ಮಾತಿನ ಕಾಣಿಕೆ ಅರ್ಪಿಸುವ ಈ ಅವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ರಾಮರಾಯರ ತರುವಾಯ ಅವರ ಮನೆಯವರೆಲ್ಲರಿಗೂ ಇದನ್ನು ಪ್ರಕಟಿಸುತ್ತಿರುವ ಓರಿಯೆಂಟ್ ಲಾಂಗ್‌ಮನ್ ಸಂಸ್ಥೆಯ ಅಧ್ಯಕ್ಷರಿಗೂ ನನ್ನ ವಂದನೆಗಳು.

ತಾ. 14–11–1973

ಬೆಂಗಳೂರು.

ವಿ. ಸೀತಾರಾಮಯ್ಯ

ORIENT LONGMAN LTD

PANJE MANGESH RAO'S WORKS

Volume No. 3

SHORT NOVELS AND STORIES

Cover Design: CHANDRU NAIR from a painting by VRINDA PADUKONE